"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

# ಕರ್ನಾಟಕ ವಿಧಾನ ಪರಿಷತ್ತು

## ನೂರ ನಲವತ್ತನಾಲ್ಕನೆಯ ಅಧಿವೇಶನ

23ನೇ ಸೆಪ್ಟೆಂಬರ್ 2021
ಗುರುವಾರ

**ವಿಷಯಾನುಕ್ರಮಣಿಕೆ (Index)**


1. **ಪ್ರಕಟಣೆಗಳು**

2. **ಪ್ರಶ್ನೋತ್ತರಗಳು**

**ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು**

**1436– ಸಣ್ಣ ನೀರಾವರಿ ಇಲಾಖೆಯಿಂದ ಬಳಕೆಯಾದ ಅನುದಾನ ಕುರಿತು**
- ಶ್ರೀಎಸ್..ಎಲ್.ಭೋಜೇಗೌಡ
- ಶ್ರೀ ಜೆ.ಸಿ.ಮಾಧುಸ್ವಾಮಿ(ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಮತ್ತು ಸಣ್ಣ ನೀರಾವರಿ ಸಚಿವರು)

**1421– ರಾಜ್ಯದಲ್ಲಿ ಈವರೆಗೂ ನೋಂದಣಿ ಆಗಿರುವ ಕಾರ್ಮಿಕರ ಸಂಖ್ಯೆ ಕುರಿತು**
- ಶ್ರೀ ಆರ್.ಪ್ರಸನ್ನಕುಮಾರ್
- ಶ್ರೀ ಅರಬೈಲ್ ಶಿವರಾಂ ಹೆಬ್ಬಾರ್(ಕಾರ್ಮಿಕ ಸಚಿವರು)

**1350- ಖಜಾನೆಗೆ ಕಟ್ಟಬೇಕಾದ ಪೊಲೀಸ್ ಇಲಾಖೆಯ ಹಣವನ್ನು ದುರ್ಬಳಕೆ ಮಾಡಿರುವ ಬಗ್ಗೆ**
- ಶ್ರೀ ಸುನೀಲ್ ಸುಬ್ರಮಣಿ ಎಂ.ಪಿ.
- ಶ್ರೀ ಅರಗ ಜ್ಞಾನೇಂದ್ರ(ಗೃಹ ಸಚಿವರು)

**1302- ಕಟ್ಟಡ ಕಾರ್ಮಿಕರ ಕಲ್ಯಾಣ ನಿಧಿಯ ಬಗ್ಗೆ**
- ಶ್ರೀ ಎಂ.ನಾರಾಯಣಸ್ವಾಮಿ (ವಿರೋಧಪಕ್ಷದ ಮುಖ್ಯ ಸಚೇತಕರು) ಶ್ರೀ ಪ್ರಕಾಶ್ ಕೆ.ರಾಥೋಡ್ ರವರ ಪರವಾಗಿ
- ಶ್ರೀ ಅರಬೈಲ್ ಶಿವರಾಂ ಹೆಬ್ಬಾರ್(ಕಾರ್ಮಿಕ ಸಚಿವರು)

**1309– ಕೆ.ಎಸ್.ಆರ್.ಪಿ. ಘಟಕದ ಕ್ಯಾಂಟೀನ್‌ನಲ್ಲಿ ನಡೆದ ಅವ್ಯವಹಾರದ ಬಗ್ಗೆ.**
- ಶ್ರೀ ಅಡಗೂರ್ ಹೆಚ್.ವಿಶ್ವನಾಥ್
- ಶ್ರೀ ಅರಗ ಜ್ಞಾನೇಂದ್ರ(ಗೃಹ ಸಚಿವರು)


"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**1352- ಪೊಲೀಸ್ ಇಲಾಖೆಯ ನಿವೃತ್ತ ಲಿಪಿಕ ವರ್ಗದ ಸಿಬ್ಬಂದಿಗೆ ಆರೋಗ್ಯ ಭಾಗ್ಯ ಯೋಜನೆ ವಿಸ್ತರಿಸುವ ಬಗ್ಗೆ**

- ಶ್ರೀ ಅ.ದೇವೇಗೌಡ
- ಶ್ರೀ ಅರಗ ಜ್ಞಾನೇಂದ್ರ(ಗೃಹ ಸಚಿವರು)

**1445+1408- ಅಲ್ಪಸಂಖ್ಯಾತರ ಅಭಿವೃದ್ಧಿಗಾಗಿ ಬಿಡುಗಡೆಗೊಳಿಸಲಾದ ಅನುದಾನ ಕುರಿತು**

- ಶ್ರೀ ಬಿ.ಎಂ.ಫಾರೂಖ್
- ಶ್ರೀ ನಸೀರ್ ಅಹ್ಮದ್
- ಶ್ರೀ ಜೆ.ಸಿ.ಮಾಧುಸ್ವಾಮಿ(ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಮತ್ತು ಸಣ್ಣ ನೀರಾವರಿ ಸಚಿವರು, ಮುಖ್ಯಮಂತ್ರಿಗಳ ಪರವಾಗಿ)

**1417- ಮೀಸಲಾತಿ ಬದಲಾವಣೆಗೆ ಇರುವ ನಿಯಮಾವಳಿಗಳ ಕುರಿತು**

- ಶ್ರೀ ಅರುಣ ಶಹಾಪುರ
- ಶ್ರೀ ಜೆ.ಸಿ.ಮಾಧುಸ್ವಾಮಿ(ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಮತ್ತು ಸಣ್ಣ ನೀರಾವರಿ ಸಚಿವರು, ಮುಖ್ಯಮಂತ್ರಿಗಳ ಪರವಾಗಿ)

**1443- ಪ್ರಚಾರದ ಫಲಕಗಳ ಜಾಹೀರಾತಿನ ಬಗ್ಗೆ**

- ಶ್ರೀ ಮೋಹನ್ ಕುಮಾರ್ ಕೊಂಡಜ್ಜಿ
- ಶ್ರೀ ಜೆ.ಸಿ.ಮಾಧುಸ್ವಾಮಿ(ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಮತ್ತು ಸಣ್ಣ ನೀರಾವರಿ ಸಚಿವರು, ಮುಖ್ಯಮಂತ್ರಿಗಳ ಪರವಾಗಿ)

**115- ಬೆಂಗಳೂರು-ಮೈಸೂರು ರಸ್ತೆಯ ಕೆಂಗೇರಿ ಬಳಿ ವೃಷಭಾವತಿ ನದಿ ತಡೆಗೋಡೆ ಕುಸಿತದ ಕುರಿತು**

- ಶ್ರೀ ಯು.ಬಿ.ವೆಂಕಟೇಶ್
- ಶ್ರೀ ಜೆ.ಸಿ.ಮಾಧುಸ್ವಾಮಿ(ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಮತ್ತು ಸಣ್ಣ ನೀರಾವರಿ ಸಚಿವರು, ಮುಖ್ಯಮಂತ್ರಿಗಳ ಪರವಾಗಿ)

ತಡೆಹಿಡಿಯಲಾದ ಪ್ರಶ್ನೆಗಳು

**598- ಬಿ.ಬಿ.ಎಂ.ಪಿ. ವ್ಯಾಪ್ತಿಯಲ್ಲಿರುವ ಡಾಂಬರೀಕರಿಸಿದ ರಸ್ತೆಗಳ ಸ್ಥಿತಿಗತಿ ಕುರಿತು**

- ಶ್ರೀ ಪಿ.ಆರ್.ರಮೇಶ್
- ಶ್ರೀ ಜೆ.ಸಿ.ಮಾಧುಸ್ವಾಮಿ(ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಮತ್ತು ಸಣ್ಣ ನೀರಾವರಿ ಸಚಿವರು, ಮುಖ್ಯಮಂತ್ರಿಗಳ ಪರವಾಗಿ)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**022- ಬೆಂಗಳೂರಿನ ಹನುಮಂತನಗರದಲ್ಲಿರುವ ರಾಜೀವ್‌ಗಾಂಧಿ ಕ್ರೀಡಾಂಗಣದ ಮೂಲಸೌಕರ್ಯ ಕುರಿತು**

- ಶ್ರೀ ಯು.ಬಿ.ವೆಂಕಟೇಶ್
- ಶ್ರೀ ಜೆ.ಸಿ.ಮಾಧುಸ್ವಾಮಿ(ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಮತ್ತು ಸಣ್ಣ ನೀರಾವರಿ ಸಚಿವರು, ಮುಖ್ಯಮಂತ್ರಿಗಳ ಪರವಾಗಿ)

**820- ಆರೋಗ್ಯ ಸಂಜೀವಿನಿ ಸೌಲಭ್ಯವನ್ನು ನಿವೃತ್ತ ನೌಕರರಿಗೆ ವಿಸ್ತರಿಸುವ ಬಗ್ಗೆ**

- ಶ್ರೀ ಅ.ದೇವೇಗೌಡ
- ಶ್ರೀ ಜೆ.ಸಿ.ಮಾಧುಸ್ವಾಮಿ(ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಮತ್ತು ಸಣ್ಣ ನೀರಾವರಿ ಸಚಿವರು, ಮುಖ್ಯಮಂತ್ರಿಗಳ ಪರವಾಗಿ)

ದಿನಾಂಕ 23-9-2021ರ ಚುಕ್ಕೆ ಗುರುತಿನ ಪ್ರಶ್ನೆ

**1451- ಅಪ್ರಾಪ್ತ ಹೆಣ್ಣುಮಕ್ಕಳ ಮೇಲೆ ಅತ್ಯಾಚಾರದ ಬಗ್ಗೆ**

- ಶ್ರೀ ಮಾನೆ ಶ್ರೀನಿವಾಸ್
- ಶ್ರೀ ಅರಗ ಜ್ಞಾನೇಂದ್ರ(ಗೃಹ ಸಚಿವರು)

ತಡೆಹಿಡಿಯಲಾದ ಪ್ರಶ್ನೆ

**986- ಗೌರವ ಡಾಕ್ಟರೇಟ್ ಪದವಿಯ ದುರ್ಬಳಕೆ ಕುರಿತು**

- ಡಾ.ತೇಜಸ್ವಿನಿಗೌಡ
- ಡಾ:ಸಿ.ಎಸ್.ಅಶ್ವಥ ನಾರಾಯಣ (ಉನ್ನತ ಶಿಕ್ಷಣ, ಐಟಿ ಬಿಟಿ, ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು)

**ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.**

**3. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು**

**ಅ) ರಾಜ್ಯದಲ್ಲಿ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಲು ಅವಶ್ಯವಿರುವ ಮೂಲಭೂತ ಸೌಕರ್ಯಗಳಿಲ್ಲದಿರುವುದರ ಜೊತೆಗೆ ಅವಶ್ಯಕ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆ ಇದ್ದರೂ ವಿಶ್ವವಿದ್ಯಾಲಯವನ್ನು ಸ್ಥಾಪಿಸಲು ಮಾನ್ಯತೆಯನ್ನು ನೀಡಿರುವ ಬಗ್ಗೆ.**

- ಶ್ರೀ ಎಂ. ನಾರಾಯಣಸ್ವಾಮಿ(ವಿರೋಧಪಕ್ಷದ ಮುಖ್ಯ ಸಚೇತಕರು)
- ಡಾ:ಸಿ.ಎಸ್.ಅಶ್ವಥ ನಾರಾಯಣ (ಉನ್ನತ ಶಿಕ್ಷಣ, ಐಟಿ ಬಿಟಿ, ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು)

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಆ) ಧಾರವಾಡದಲ್ಲಿರುವ ಕಾನೂನು ವಿಶ್ವವಿದ್ಯಾಲಯಕ್ಕೆ ಸರ್ ಸಿದ್ದಪ್ಪ ಕಂಬಳಿ ವಿಶ್ವವಿದ್ಯಾಲಯ ಎಂದು ನಾಮಕರಣ ಮಾಡುವ ಬಗ್ಗೆ.**

- ಶ್ರೀ ಬಿ.ಕೆ.ಹರಿಪ್ರಸಾದ್
- ಶ್ರೀ ಜೆ.ಸಿ.ಮಾಧುಸ್ವಾಮಿ(ಸಣ್ಣ ನೀರಾವರಿ, ಕಾನೂನು, ಸಂಸದೀಯ ವ್ಯವಹಾರಗಳ ಸಚಿವರು)
- ಶ್ರೀ ಬಸವರಾಜ ಬೊಮ್ಮಾಯಿ(ಮುಖ್ಯಮಂತ್ರಿಗಳು)

**ಇ) ಬೆಂಗಳೂರು ನಗರದಲ್ಲಿರುವ ಅಪಾರ್ಟ್‌ಮೆಂಟ್‌ಗಳಲ್ಲಿ ಬೆಂಕಿ ಸುರಕ್ಷತೆಗಳನ್ನು ಅಳವಡಿಸದೆ ಇರುವ ಬಗ್ಗೆ**

- ಶ್ರೀ ಯು.ಬಿ.ವೆಂಕಟೇಶ್
- ಶ್ರೀ ಕೆ.ಹರೀಶ್‌ಕುಮಾರ್
- ಶ್ರೀ ಅರಗ ಜ್ಞಾನೇಂದ್ರ(ಗೃಹ ಸಚಿವರು)

**ಈ) ಸರ್ಕಾರಿ ಪಾಲಿಟೆಕ್ನಿಕ್ ಮತ್ತು ಇಂಜಿನೀಯರಿಂಗ್ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರಿಗೆ ವೇತನ ಪರಿಷ್ಕರಣೆ ಮಾಡುವ ಬಗ್ಗೆ ಹಾಗೂ ಸಿ.ಎ.ಎಸ್. ಅಡಿಯಲ್ಲಿ ಸ್ಥಾನಪನ್ನ ಬಡ್ತಿ ನೀಡುವ ಬಗ್ಗೆ.**

- ಶ್ರೀ ಮರಿತಿಬ್ಬೇಗೌಡ
- ಡಾ:ಸಿ.ಎಸ್.ಅಶ್ವಥ ನಾರಾಯಣ (ಉನ್ನತ ಶಿಕ್ಷಣ, ಐಟಿ ಬಿಟಿ, ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು)

**ಉ) ಬೈಲಹೊಂಗಲ ತಾಲ್ಲೂಕಿನ ನಾಗನೂರು ಗ್ರಾಮ ಪಂಚಾಯಿತಿ ಸದಸ್ಯರನ್ನು ಅಲ್ಲಿನ ಪಿಡಿಓ ಅವರು ಅವಾಚ್ಯ ಶಬ್ದಗಳಿಂದ ನಿಂದಿಸಿ ಹಲ್ಲೆ ನಡೆಸಿದ್ದು ಘಟನೆಯ ಬಗ್ಗೆ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಬಗ್ಗೆ ಹಾಗೂ ಶ್ರೀ ವಿಜಯಸಿಂಗ್ ಅವರು ಪ್ರಸ್ತಾಪಿಸಿರುವ ಬೈಲಹೊಂಗಲ ತಾಲ್ಲೂಕಿನ ನಾಗನೂರು ಗ್ರಾಮ ಪಂಚಾಯಿತಿ ಸದಸ್ಯರಿಗೆ ಸಿಇಓ ನೋಟಿಸ್ ಜಾರಿ ಮಾಡಿರುವ ಬಗ್ಗೆ**

- ಶ್ರೀ ಕೆ.ಸಿ.ಕೊಂಡಯ್ಯ
- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**ಊ) ಜಾನುವಾರುಗಳ ಆರೋಗ್ಯಕ್ಕೆ ಲಸಿಕೆಗಳ ಪೂರೈಕೆಯನ್ನು ಕೇಂದ್ರ ಸರ್ಕಾರದವರು ಸ್ಥಗಿತಗೊಳಿಸಿರುವ ಬಗ್ಗೆ.**

- ಶ್ರೀ ಕೆ.ಎ.ತಿಪ್ಪೇಸ್ವಾಮಿ
- ಶ್ರೀ ಜೆ.ಸಿ.ಮಾಧುಸ್ವಾಮಿ(ಸಣ್ಣ ನೀರಾವರಿ, ಕಾನೂನು, ಸಂಸದೀಯ ವ್ಯವಹಾರಗಳ ಸಚಿವರು)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಋ) ಕೊರೋನ ವಾರಿಯರ್ಸ್‌ಗಳಿಗೆ ವೇತನ & ಪ್ರೋತ್ಸಾಹ ಧನ ನೀಡದಿರುವ ಬಗ್ಗೆ**

- ಶ್ರೀ ಎಸ್.ನಾಗರಾಜು(ಸಂದೇಶ್ ನಾಗರಾಜು)
- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**ಎ) ಸುಳ್ಯ ತಾಲ್ಲೂಕಿನ ಮಂಡೆಕೋಲು ಗ್ರಾಮದ ಕನ್ಯಾನ, ಪೆರಾಜೆ, ಕಲ್ಲಡ್ಕ ಗ್ರಾಮದ ಎಸ್‌ಸಿ/ಎಸ್‌ಟಿ ಕಾಲೋನಿ ರಸ್ತೆ ಅಭಿವೃದ್ಧಿ ಕುರಿತು**

- ಶ್ರೀ ಮುನಿರಾಜುಗೌಡ.ಪಿ.ಎಂ.(ತುಳಸಿ)
- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**ಏ) ಕೋಲಾರದಲ್ಲಿರುವ ಸರ್ಕಾರಿ ಬಾಲಕರ ಕಾಲೇಜಿಗೆ ಮೂಲಸೌಲಭ್ಯ ಒದಗಿಸುವ ಬಗ್ಗೆ**

- ಶ್ರೀ ಗೋವಿಂದರಾಜು
- ಡಾ:ಸಿ.ಎಸ್.ಅಶ್ವಥ ನಾರಾಯಣ (ಉನ್ನತ ಶಿಕ್ಷಣ, ಐಟಿ ಬಿಟಿ, ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು)

**ಐ) ಹಂಪಿ ಕನ್ನಡ ವಿಶ್ವವಿದ್ಯಾಲಯದಲ್ಲಿ ಸ್ಥಳೀಯ 17 ಬೋಧಕ ಹುದ್ದೆಗಳ ನೇಮಕಾತಿ ಪ್ರಕ್ರಿಯೆ ಬಗ್ಗೆ**

- ಶ್ರೀ ಶಶಿಲ್ ಜಿ.ನಮೋಶಿ
- ಡಾ:ಸಿ.ಎಸ್.ಅಶ್ವಥ ನಾರಾಯಣ (ಉನ್ನತ ಶಿಕ್ಷಣ, ಐಟಿ ಬಿಟಿ, ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು)

**ಒ) ದಟ್ಟ ಮಲೆನಾಡು ಪ್ರದೇಶಗಳಲ್ಲಿ ವಾಸವಾಗಿರುವ ವಿದ್ಯಾರ್ಥಿಗಳು ಮತ್ತು ನೌಕರರ ಉಪಯೋಗಕ್ಕೆ ಬ್ರಾಡ್‌ಬ್ಯಾಂಡ್ ಸೌಲಭ್ಯ ಒದಗಿಸುವ ಬಗ್ಗೆ.**

- ಶ್ರೀ ಆರ್.ಪ್ರಸನ್ನಕುಮಾರ್
- ಡಾ:ಸಿ.ಎಸ್.ಅಶ್ವಥ ನಾರಾಯಣ (ಉನ್ನತ ಶಿಕ್ಷಣ, ಐಟಿ ಬಿಟಿ, ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು)

**ಓ) ಕುಣಬಿ ಜನಾಂಗವನ್ನು ಪರಿಶಿಷ್ಟ ಜನಾಂಗಕ್ಕೆ ಸೇರಿಸುವ ಬಗ್ಗೆ .**

- ಶ್ರೀ ಘೋಟ್ನೆಕರ ಶ್ರೀಕಾಂತ ಲಕ್ಷ್ಮಣ
- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**4. ಸಭೆಯ ಮುಂದಿಡಲಾದ ಕಾಗದ ಪತ್ರಗಳು**

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**5. ಕಾರ್ಯದರ್ಶಿಯವರ ವರದಿ**

**6. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳಿಗೆ ಸಂಬಂಧಿಸಿದಂತೆ ಸಚಿವರ ಹೇಳಿಕೆಗಳು**

**ಅ) ಸೈಬರ್ ಅಪರಾಧಗಳ ಪೈಕಿ ಬೆಂಗಳೂರು ನಗರದಲ್ಲಿ ಕಳೆದ ಮೂರು ವರ್ಷಗಳಲ್ಲಿನ ಸೈಬರ್ ಅಪರಾಧಗಳ ಅಂಕಿ-ಸಂಖ್ಯೆ ಕುರಿತು.**

- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು, ಗೃಹ ಸಚಿವರ ಪರವಾಗಿ)

**ಆ) ಗದಗ ಜಿಲ್ಲೆಯ ಮುಂಡರಗಿ ತಾಲ್ಲೂಕಿನಲ್ಲಿ ಜಿಂಕೆ ಹಾವಳಿಯಿಂದ ಅನ್ನದಾತ ತತ್ತರಿಸುತ್ತಿರುವ ಕುರಿತು.**

- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು, ಅರಣ್ಯ, ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರ ಪರವಾಗಿ)

**ಇ) ವಿಜಯವಾಣಿ ದಿನ ಪತ್ರಿಕೆಯ ಸುದ್ದಿ "ಪುಟ್ಬಾಲ್ ಮೈದಾನ ಗುಂಡಿಮಯ" ಎಂಬ ಶೀರ್ಷಿಕೆ ಕುರಿತು.**

- ಶ್ರೀ ಕೋಟ ಶ್ರೀನಿವಾಸ ಪೂಜಾರಿ( ಸಭಾನಾಯಕರು, ರೇಷ್ಮೆ, ಯುವ ಸಬಲೀಕರಣ ಮತ್ತು ಕ್ರೀಡಾಸಚಿವರ ಪರವಾಗಿ

**07. ವರದಿಯನ್ನೊಪ್ಪಿಸುವುದು**

**08. ಅರ್ಜಿಗಳನ್ನೊಪ್ಪಿಸುವುದು**

**09. ನಿಯಮ 330ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಮೇಲಿನ ಚರ್ಚೆ**

**ಅ) ಡಾ||ಕೆ.ಶಿವರಾಮ ಕಾರಂತ ಬಡಾವಣೆ ನಿರ್ಮಾಣಕ್ಕಾಗಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಸ್ವಾಧೀನ ಪಡಿಸಿಕೊಳ್ಳಲಾಗಿರುವ 3546 ಎಕರೆ 12 ಗುಂಟೆ ಜಮೀನಿಗೆ ಭೂಸ್ವಾಧೀನ ಕಾಯ್ದೆಯಡಿ ರೈತರುಗಳು ಸಲ್ಲಿಸಿರುವ ಆಕ್ಷೇಪಣೆಗಳಿಗೆ ಉತ್ತರವನ್ನು ನೀಡದೆ ಐತೀರ್ಪು ಮಾಡಲು ಉದ್ದೇಶಿಸಿರುವುದರಿಂದ ರೈತರಿಗೆ ಅನ್ಯಾಯವಾಗುತ್ತಿರುವ ಬಗ್ಗೆ.**

- ಶ್ರೀ ಎಂ.ನಾರಾಯಣಸ್ವಾಮಿ(ವಿರೋಧ ಪಕ್ಷದ ಮುಖ್ಯ ಸಚೇತಕರು)
- ಶ್ರೀ ಬಸವರಾಜ ಬೊಮ್ಮಾಯಿ(ಮುಖ್ಯಮಂತ್ರಿಗಳು)
- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)
- ಶ್ರೀ ಎಸ್.ಆರ್. ಪಾಟೀಲ್(ವಿರೋಧ ಪಕ್ಷದ ನಾಯಕರು)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಆ) ಸರ್. ಎಂ. ವಿಶ್ವೇಶ್ವರಯ್ಯ 2ನೇ ಹಂತದ ಬಡಾವಣೆ ರಚನೆಗಾಗಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಬೆಂಗಳೂರು ಉತ್ತರ ತಾಲ್ಲೂಕಿನ ಯಶವಂತಪುರ ಹೋಬಳಿಯ ಉಲ್ಲಾಳ ಗ್ರಾಮದಲ್ಲಿ ವಶಪಡಿಸಿಕೊಂಡಿರುವ ಜಮೀನುಗಳ ಭೂ ಮಾಲೀಕರಿಗೆ ಪರಿಹಾರ ನೀಡದಿರುವ ವಿಷಯದ ಕುರಿತು.**

- ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ)
- ಶ್ರೀ ಜೆ.ಸಿ.ಮಾಧುಸ್ವಾಮಿ (ಸಣ್ಣ ನೀರಾವರಿ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು, ಮುಖ್ಯಮಂತ್ರಿಗಳ ಪರವಾಗಿ)
- ಶ್ರೀ ಎಸ್.ಎಲ್.ಭೋಜೇಗೌಡ

**ಇ) 2011ರ ಗೆಜೆಟೆಡ್ ಪ್ರೊಬೇಷನರ್ಸ್ 362 ಹುದ್ದೆಗಳ ನೇಮಕಾತಿಯ ವಿಳಂಬ ನೀತಿಗೆ ಕಾರಣವಾದ ಸಾಂವಿಧಾನಿಕ ಬಿಕ್ಕಟ್ಟಿನಿಂದ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಕಳೆದ 10 ವರ್ಷಗಳಿಂದ ಹಲವಾರು ಹುದ್ದೆಗಳು ಖಾಲಿ ಇರುವ ಪ್ರಯುಕ್ತ ಸಾರ್ವಜನಿಕರಿಗೆ ಹಾಗೂ ಸರ್ಕಾರದ ಆಡಳಿತಕ್ಕೆ ಧಕ್ಕೆ ಉಂಟಾಗಿರುವ ಹಿನ್ನೆಲೆಯಲ್ಲಿ ಸರ್ಕಾರದ ಮಟ್ಟದಲ್ಲಿ ಕೈಗೊಂಡ ಕ್ರಮಗಳು ಹಾಗೂ ನಿರ್ಧಾರಗಳ ಬಗ್ಗೆ ಹಾಗೂ ಈ ವಿಷಯದಲ್ಲಿ ಗೌರವಾನ್ವಿತ ರಾಷ್ಟ್ರಪತಿಗಳ ಕಚೇರಿಯ ಆದೇಶಗಳು ಮತ್ತು ಗೌರವಾನ್ವಿತ ರಾಜ್ಯಪಾಲರ ನಿರ್ದೇಶನಗಳ ಬಗ್ಗೆ.**

- ಶ್ರೀ ಪಿ.ಆರ್. ರಮೇಶ್
- ಶ್ರೀ ಜೆ.ಸಿ.ಮಾಧುಸ್ವಾಮಿ (ಸಣ್ಣ ನೀರಾವರಿ, ಕಾನೂನು, ಸಂಸದೀಯ ವ್ಯವಹಾರ ಸಚಿವರು)
- ಶ್ರೀ ಎಸ್.ರುದ್ರೇಗೌಡ
- ಶ್ರೀ ಎನ್.ರವಿಕುಮಾರ್
- ಶ್ರೀ ಎಸ್.ಆರ್.ಪಾಟೀಲ್(ವಿರೋಧಪಕ್ಷದ ನಾಯಕರು)

**10. ಶಾಸನ ರಚನೆ**

**ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ**

**ಅ) ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ವಿಧೇಯಕ, 2021**

- ಶ್ರೀ ಎಸ್.ಟಿ. ಸೋಮಶೇಖರ್ (ಸಹಕಾರ ಸಚಿವರು)
- ಶ್ರೀ ಎಸ್.ಆರ್. ಪಾಟೀಲ್ (ವಿರೋಧ ಪಕ್ಷದ ನಾಯಕರು)
- ಶ್ರೀ ಜೆ.ಸಿ.ಮಾಧುಸ್ವಾಮಿ (ಸಣ್ಣ ನೀರಾವರಿ, ಕಾನೂನು, ಸಂಸದೀಯ ವ್ಯವಹಾರ ಸಚಿವರು)
- ಶ್ರೀ ಯು.ಬಿ. ವೆಂಕಟೇಶ್
- ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ)
- ಶ್ರೀ ಎಸ್.ಎಲ್. ಭೋಜೇಗೌಡ
- ಶ್ರೀ ಎಸ್.ರವಿ
- ಶ್ರೀ ಕೆ.ಸಿ.ಕೊಂಡಯ್ಯ

**(ವಿಧೇಯಕ ಅಂಗೀಕರಿಸಲ್ಪಟ್ಟಿತು)**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**11. ನಿಯಮ 330ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಮೇಲಿನ ಮುಂದುವರೆದ ಚರ್ಚೆ**

**ಈ) ಉತ್ತರ ಕರ್ನಾಟಕ ಭಾಗದ ಅನೇಕ ಖಾಸಗಿ ಸಕ್ಕರೆ ಕಾರ್ಖಾನೆಗಳು ನಷ್ಟ ಅನುಭವಿಸುತ್ತಿದ್ದು, ಸದರಿ ಸಕ್ಕರೆ ಕಾರ್ಖಾನೆಗಳಿಗೆ ಆರ್ಥಿಕ ನೆರವು ನೀಡಿದಂತಹ ಸಹಕಾರಿ ಬ್ಯಾಂಕ್‌ಗಳು ಸಹ ದುಸ್ಥಿತಿಗೆ ಬಂದಿರುವುದರಿಂದ ಕಬ್ಬು ಬೆಳೆಗಾರರ ಪರಿಸ್ಥಿತಿ ದುಸ್ತರವಾಗಿದ್ದು, ಕಬ್ಬು ಬೆಳೆಗಾರರ ಹಾಗೂ ಸಹಕಾರಿ ಬ್ಯಾಂಕ್‌ಗಳನ್ನು ಸುಸ್ಥಿತಿಗೆ ತರುವ ಸಂಬಂಧವಾಗಿ ಸೂಕ್ತ ಮಾರ್ಗೋಪಾಯಗಳನ್ನು ಕಂಡುಕೊಳ್ಳುವ ಕುರಿತು.**

- ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು)
- ಡಾ. ವೈ.ಎ. ನಾರಾಯಣಸ್ವಾಮಿ
- ಶ್ರೀ ನಿರಾಣಿ ಹಣಮಂತ್ ರುದ್ರಪ್ಪ
- ಶ್ರೀ ಆರ್.ಬಿ.ತಿಮ್ಮಾಪೂರ
- ಶ್ರೀ ಬಸವರಾಜ ಪಾಟೀಲ್ ಇಟಗಿ
- ಶ್ರೀ ಎಸ್.ಟಿ.ಸೋಮಶೇಖರ್(ಸಹಕಾರ ಸಚಿವರು)

**ಉ) ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯು "ನೆರೆ-ಹೊರೆಯಲ್ಲಿ ಸಮಾನ ಶಿಕ್ಷಣ ನೀತಿ"ಎಂಬ ಸಂವಿಧಾನದ ಆಶಯಗಳಿಗೆ ವಿರುದ್ಧವಾಗಿರುವ ಬಗ್ಗೆ.**

- ಶ್ರೀ ಬಿ.ಕೆ.ಹರಿಪ್ರಸಾದ್
- ಡಾ: ಸಿ.ಎಸ್.ಅಶ್ವಥನಾರಾಯಣ(ಉನ್ನತ ಶಿಕ್ಷಣ, ಐಟಿ & ಬಿಟಿ, ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು)
- ಶ್ರೀ ಮರಿತಿಬ್ಬೇಗೌಡ(ಶಿಕ್ಷಕರ ಕ್ಷೇತ್ರ)
- ಶ್ರೀ ನಸೀರ್ ಅಹ್ಮದ್
- ಶ್ರೀ ಕೆ.ಟಿ.ಶ್ರೀಕಂಠೇಗೌಡ

**(ಚರ್ಚೆ ಮುಂದುವರೆದಿದೆ)**

**12. ಪ್ರಕಟಣೆ**

**13. ಕಾರ್ಯದರ್ಶಿಯವರ ವರದಿ**

**14. ನಿಯಮ 330ರ ಮೇರೆಗೆ ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯು "ನೆರೆ-ಹೊರೆಯಲ್ಲಿ ಸಮಾನ ಶಿಕ್ಷಣ ನೀತಿ"ಎಂಬ ಸಂವಿಧಾನದ ಆಶಯಗಳಿಗೆ ವಿರುದ್ಧವಾಗಿರುವ ಬಗ್ಗೆ ಮುಂದುವರೆದ ಚರ್ಚೆ.**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

- ಡಾ: ಸಿ.ಎಸ್.ಅಶ್ವಥನಾರಾಯಣ(ಉನ್ನತ ಶಿಕ್ಷಣ, ಐಟಿ & ಬಿಟಿ, ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು)
- ಶ್ರೀ ಬಸವರಾಜ ಬೊಮ್ಮಾಯಿ(ಮುಖ್ಯಮಂತ್ರಿಗಳು)

**15. ವಿತ್ತೀಯ ಕಾರ್ಯಕಲಾಪ**

"2021-22ನೇ ಸಾಲಿನ ಪೂರಕ ಅಂದಾಜುಗಳನ್ನೊಪ್ಪಿಸುವುದು"

**16. ಶಾಸನ ರಚನೆ**

**ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ**

**ಆ) ಕರ್ನಾಟಕ ಧನ ವಿನಿಯೋಗ (ಸಂಖ್ಯೆ:3) ವಿಧೇಯಕ, 2021**

- ಶ್ರೀ ಬಸವರಾಜ ಬೊಮ್ಮಾಯಿ(ಮುಖ್ಯಮಂತ್ರಿಗಳು)
- ಶ್ರೀ ಕೆ.ಎ. ತಿಪ್ಪೇಸ್ವಾಮಿ
- ಶ್ರೀ ಪಿ.ಆರ್. ರಮೇಶ್
- ಶ್ರೀ ಕೆ.ಟಿ. ಶ್ರೀಕಂಠೇಗೌಡ

**(ವಿಧೇಯಕ ಅಂಗೀಕರಿಸಲ್ಪಟ್ಟಿತು)**

**ಇ) ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ತಿದ್ದುಪಡಿ) ವಿಧೇಯಕ, 2021**

- ಶ್ರೀ ಜೆ.ಸಿ.ಮಾಧುಸ್ವಾಮಿ (ಸಣ್ಣ ನೀರಾವರಿ, ಕಾನೂನು, ಸಂಸದೀಯ ವ್ಯವಹಾರ ಸಚಿವರು, ಮುಖ್ಯಮಂತ್ರಿಯವರ ಪರವಾಗಿ)
- ಶ್ರೀ ಕೆ.ಎ. ತಿಪ್ಪೇಸ್ವಾಮಿ

**(ವಿಧೇಯಕ ಅಂಗೀಕರಿಸಲ್ಪಟ್ಟಿತು)**

**ಈ) ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ತಿದ್ದುಪಡಿ) ವಿಧೇಯಕ,2021**

- ಶ್ರೀ ಜೆ.ಸಿ.ಮಾಧುಸ್ವಾಮಿ (ಸಣ್ಣ ನೀರಾವರಿ, ಕಾನೂನು, ಸಂಸದೀಯ ವ್ಯವಹಾರ ಸಚಿವರು, ಮುಖ್ಯಮಂತ್ರಿಯವರ ಪರವಾಗಿ)
- ಶ್ರೀ ಎನ್.ಅಪ್ಪಾಜಿಗೌಡ
- ಶ್ರೀ ಯು.ಬಿ.ವೆಂಕಟೇಶ್
- ಶ್ರೀ ಪಿ.ಆರ್.ರಮೇಶ್
- ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)
- ಶ್ರೀ ಕೆ.ಸಿ.ಕೊಂಡಯ್ಯ
- ಶ್ರೀ ಕೆ.ಎ.ತಿಪ್ಪೇಸ್ವಾಮಿ

**(ವಿಧೇಯಕ ಅಂಗೀಕರಿಸಲ್ಪಟ್ಟಿತು)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಉ) ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ತಿದ್ದುಪಡಿ) ವಿಧೇಯಕ, 2020**

- ಶ್ರೀ ಜೆ.ಸಿ.ಮಾಧುಸ್ವಾಮಿ (ಸಣ್ಣ ನೀರಾವರಿ, ಕಾನೂನು, ಸಂಸದೀಯ ವ್ಯವಹಾರ ಸಚಿವರು, ಮುಖ್ಯಮಂತ್ರಿಯವರ ಪರವಾಗಿ)
- ಶ್ರೀ ಎಸ್.ಆರ್. ಪಾಟೀಲ್ (ವಿರೋಧ ಪಕ್ಷದ ನಾಯಕರು)

**(ವಿಧೇಯಕ ಅಂಗೀಕರಿಸಲ್ಪಟ್ಟಿತು)**

**ಊ) ಕರ್ನಾಟಕ ಪೌರಸಭೆಗಳು ಮತ್ತು ಕೆಲವು ಇತರ ಕಾನೂನು (2ನೇ ತಿದ್ದುಪಡಿ) ವಿಧೇಯಕ, 2021**

- ಶ್ರೀ ಎನ್. ನಾಗರಾಜು (ಎಂಟಿಬಿ) (ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ವಲಯ ಕೈಗಾರಿಕೆ ಸಚಿವರು)
- ಶ್ರೀ ಕೆ.ಎ.ತಿಪ್ಪೇಸ್ವಾಮಿ
- ಶ್ರೀ ಜೆ.ಸಿ.ಮಾಧುಸ್ವಾಮಿ (ಸಣ್ಣ ನೀರಾವರಿ, ಕಾನೂನು, ಸಂಸದೀಯ ವ್ಯವಹಾರ ಸಚಿವರು)

**(ವಿಧೇಯಕ ಅಂಗೀಕರಿಸಲ್ಪಟ್ಟಿತು)**

**ಋ) ಕರ್ನಾಟಕ ಖಾದಿ ಮತ್ತು ಗ್ರಾಮೋದ್ಯೋಗಗಳ (ತಿದ್ದುಪಡಿ) ವಿಧೇಯಕ, 2021**

- ಶ್ರೀ ಎನ್. ನಾಗರಾಜು (ಎಂಟಿಬಿ) (ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ವಲಯ ಕೈಗಾರಿಕೆ ಸಚಿವರು)
- ಶ್ರೀ ಜೆ.ಸಿ.ಮಾಧುಸ್ವಾಮಿ (ಸಣ್ಣ ನೀರಾವರಿ, ಕಾನೂನು, ಸಂಸದೀಯ ವ್ಯವಹಾರ ಸಚಿವರು)
- ಶ್ರೀ ಎಸ್.ಆರ್. ಪಾಟೀಲ್ (ವಿರೋಧ ಪಕ್ಷದ ನಾಯಕರು)

**(ವಿಧೇಯಕ ಅಂಗೀಕರಿಸಲ್ಪಟ್ಟಿತು)**

**ಎ) ಕರ್ನಾಟಕ ಪೊಲೀಸು (ತಿದ್ದುಪಡಿ) ವಿಧೇಯಕ, 2021**

- ಶ್ರೀ ಆರಗ ಜ್ಞಾನೇಂದ್ರ(ಗೃಹ ಸಚಿವರು)
- ಶ್ರೀ ಎಸ್.ಆರ್. ಪಾಟೀಲ್ (ವಿರೋಧ ಪಕ್ಷದ ನಾಯಕರು)
- ಶ್ರೀಮತಿ ಭಾರತಿ ಶೆಟ್ಟಿ
- ಶ್ರೀ ಎಂ.ನಾರಾಯಣಸ್ವಾಮಿ(ವಿರೋಧ ಪಕ್ಷದ ಮುಖ್ಯ ಸಚೇತಕರು)
- ಶ್ರೀ ಪುಟ್ಟಣ್ಣ
- ಶ್ರೀ ನಸೀರ್ ಅಹ್ಮದ್
- ಶ್ರೀ ಜೆ.ಸಿ.ಮಾಧುಸ್ವಾಮಿ (ಸಣ್ಣ ನೀರಾವರಿ, ಕಾನೂನು ಮತ್ತು ಸಂಸದೀಯ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವ್ಯವಹಾರಗಳ ಸಚಿವರು)
- ಶ್ರೀ ಎನ್.ಅಪ್ಪಾಜಿಗೌಡ
- ಶ್ರೀ ಎಸ್.ಎಲ್.ಭೋಜೇಗೌಡ
- ಡಾ: ತೇಜಸ್ವಿನಿಗೌಡ
- ಶ್ರೀ ಕೆ.ಟಿ.ಶ್ರೀಕಂಠೇಗೌಡ
- ಶ್ರೀ ಯು.ಬಿ.ವೆಂಕಟೇಶ್
- ಶ್ರೀ ಲಕ್ಷ್ಮಣ ಸಂಗಪ್ಪ ಸವದಿ
- ಶ್ರೀ ಎನ್.ರವಿಕುಮಾರ್
- ಶ್ರೀ ಪಿ.ಆರ್.ರಮೇಶ್
- ಶ್ರೀ ಹೆಚ್.ಎಂ. ರಮೇಶ್‌ಗೌಡ
- ಶ್ರೀ ಮಾನೆ ಶ್ರೀನಿವಾಸ್
- ಶ್ರೀ ಮರಿತಿಬ್ಬೇಗೌಡ
- ಶ್ರೀ ಕೆ.ಸಿ.ಕೊಂಡಯ್ಯ

**(ವಿಧೇಯಕ ಅಂಗೀಕರಿಸಲ್ಪಟ್ಟಿತು)**

**17. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯಲ್ಲಿ ಕುಡಿಯುವ ನೀರು ಮತ್ತು ನೈರ್ಮಲ್ಯ ಕಾರ್ಯಕ್ರಮಕ್ಕೆ ಬಿಡುಗಡೆಯಾದ ಹಣವನ್ನು ಅವ್ಯವಹಾರ ಮಾಡಿರುವ ಸಂಬಂಧ ಪರಿಶೀಲನಾ ಸಮಿತಿಯ ಕಾಲಾವಧಿ ವಿಸ್ತರಣೆ**

**18. ಪ್ರಕಟಣೆ**

**19. ಶಾಸನ ರಚನೆ**

**ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ**

**ಎ) ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ಶಿಕ್ಷಕರ ವರ್ಗಾವಣೆ ನಿಯಂತ್ರಣ) (ತಿದ್ದುಪಡಿ) ವಿಧೇಯಕ, 2021**

- ಶ್ರೀ ಬಿ.ಸಿ.ನಾಗೇಶ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು)
- ಶ್ರೀ ಕೆ.ಟಿ.ಶ್ರೀಕಂಠೇಗೌಡ
- ಶ್ರೀ ಮರಿತಿಬ್ಬೇಗೌಡ
- ಶ್ರೀ ಎಸ್.ಎಲ್.ಭೋಜೇಗೌಡ
- ಶ್ರೀ ಶಶೀಲ್ ಜಿ.ನಮೋಶಿ
- ಶ್ರೀ ಅರುಣ ಶಹಾಪುರ
- ಶ್ರೀ ಜೆ.ಸಿ.ಮಾಧುಸ್ವಾಮಿ (ಸಣ್ಣ ನೀರಾವರಿ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)
- ಶ್ರೀ ಪುಟ್ಟಣ್ಣ
- ಡಾ: ವೈ.ಎ. ನಾರಾಯಣಸ್ವಾಮಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

“ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

- ಶ್ರೀ ಲಹರ್ ಸಿಂಗ್ ಸಿರೋಯಾ
- ಡಾ: ತೇಜಸ್ವಿನಿಗೌಡ
- ಶ್ರೀ ನಿರಾಣಿ ಹಣಮಂತ್ ರುದ್ರಪ್ಪ

**(ವಿಧೇಯಕ ಅಂಗೀಕರಿಸಲ್ಪಟ್ಟಿತು)**

**20. ಹೊಸ ರಾಷ್ಟ್ರೀಯ ಶಿಕ್ಷಣ ನೀತಿ ಕುರಿತಂತೆ ನಿಯಮ 330ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಮೇಲಿನ ಚರ್ಚೆಗೆ ಸಚಿವರಿಂದ ಉತ್ತರ ಹಾಗೂ ಮುಂದುವರೆದ ಚರ್ಚೆ**

- ಡಾ: ಸಿ.ಎಸ್.ಅಶ್ವಥನಾರಾಯಣ(ಉನ್ನತ ಶಿಕ್ಷಣ, ಐಟಿ & ಬಿಟಿ, ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು)
- ಶ್ರೀ ಬಿ.ಕೆ. ಹರಿಪ್ರಸಾದ್
- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)
- ಶ್ರೀ ಆರ್.ಬಿ.ತಿಮ್ಮಾಪೂರ
- ಶ್ರೀ ಮರಿತಿಬ್ಬೇಗೌಡ
- ಶ್ರೀ ಯು.ಬಿ.ವೆಂಕಟೇಶ್
- ಶ್ರೀ ಕೆ.ಟಿ.ಶ್ರೀಕಂಠೇಗೌಡ

<><><>

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(928) 23.09.2021, 10.40, ಟಿಸಿಹೆಚ್-ಎಕೆ

**ಕರ್ನಾಟಕ ವಿಧಾನ ಪರಿಷತ್ತು**

**ಗುರು**ವಾರ**, 23**ನೇ **ಸೆಪ್ಟೆಂಬರ್ 2021**

ಸದನವು **ಬೆಂಗಳೂರಿನ** ವಿಧಾನಸೌಧ **ದಲ್ಲಿ**ರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ ಪೂರ್ವಾಹ್ನ **10** ಗಂಟೆ **40** ನಿಮಿಷಕ್ಕೆ ಸಮಾವೇಶಗೊಂಡಿತು.

ಸಭಾಪತಿ (ಶ್ರೀ **ಬಸವರಾಜ ಶಿವಲಿಂಗಪ್ಪ ಹೊರಟ್ಟಿ**) ಯವರು ಪೀಠದಲ್ಲಿ ಉಪಸ್ಥಿತ**ರಾದರು**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**01. ಪ್ರಕಟಣೆ**

**ಸಭಾಪತಿಯವರು:-** ಮಾನ್ಯ ಸಭಾಧ್ಯಕ್ಷರವರಿಂದ ಈ ಮುಂದಿನ ಸಂದೇಶ ಬಂದಿರುತ್ತದೆ.

ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ 104ನೇ ನಿಯಮದ ಮೇರೆಗೆ ವಿಧಾನಸಭೆಯು ದಿನಾಂಕ 22.09.2021 ರಂದು ಈ ಕೆಳಕಂಡ ವಿಧೇಯಕಗಳನ್ನು ಅಂಗೀಕರಿಸಿರುತ್ತದೆಂದು ಹಾಗೂ ಸದರಿ ವಿಧೇಯಕಗಳಿಗೆ ವಿಧಾನ ಪರಿಷತ್ತಿನ ಸಹಮತಿ ನೀಡಬೇಕೆಂದು ಕೋರಿತ್ತಾರೆ.

01.ಕರ್ನಾಟಕ ಖಾದಿ ಮತ್ತು ಗ್ರಾಮೋದ್ಯೋಗಗಳ (ತಿದ್ದುಪಡಿ) ವಿಧೇಯಕ, 2021
02. ಕರ್ನಾಟಕ ಪೌರಸಭೆಗಳು ಮತ್ತು ಕೆಲವು ಇತರ ಕಾನೂನು (ಎರಡನೇ ತಿದ್ದುಪಡಿ) ವಿಧೇಯಕ, 2021
03. ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ಶಿಕ್ಷಕರ ವರ್ಗಾವಣೆ ನಿಯಂತ್ರಣ) (ತಿದ್ದುಪಡಿ) ವಿದೇಯಕ, 2021

ಈ ವಿಧೇಯಕಗಳಿಗೆ ಸದನದ ಒಪ್ಪಿಗೆ ಇದೆ ಎಂದು ನಾನು ಭಾವಿಸಿದ್ದೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**02. ಪ್ರಶ್ನೋತ್ತರಗಳು:**

**ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು.**

**ಪ್ರಶ್ನೆ ಸಂಖ್ಯೆ.1436**

**(ಉತ್ತರ ಲಗತ್ತಿಸಿದೆ)**

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರ ಒದಗಿಸಿದ್ದಾರೆ. ಆದರೆ ಮಾನ್ಯ ಮಾಧುಸ್ವಾಮಿಯವರಿಗೆ ಎಲ್ಲಾ ವಿಚಾರಗಳು ಗೊತ್ತಿದೆ ಮೊನ್ನೆದಿವಸ ನಮ್ಮ ಹಿರಿಯ ಸದಸ್ಯರುಗಳೆಲ್ಲಾ ಕೆರೆಗಳ ಕುರಿತು ಮಾತನಾಡತಕ್ಕಂಥ ಸಂದರ್ಭದಲ್ಲಿ ನಮ್ಮ ಕೈಯಲ್ಲಿ ಇದುವರೆಗೂ ಒಂದು ಕರೆಯನ್ನು ಕಟ್ಟುವುದಕ್ಕೆ ಆಗಲಿಲ್ಲ, ಆದರೆ ಕಟ್ಟಿರತಕ್ಕಂಥ ಕೆರೆಯಲ್ಲಿ ಹೂಳು ಎತ್ತುವ ಕೆಲಸವನ್ನು ಪ್ರಾಮಾಣಿಕವಾಗಿ ಮಾಡಿಲ್ಲವೆಂದು ನಾವೆಲ್ಲರೂ ಒಪ್ಪಿಕೊಳ್ಳಬೇಕಾಗುತ್ತದೆ. ಸರ್ಕಾರ ಹಣ ಬಿಡುಗಡೆ ಮಾಡಿದೆ. ಅದರಲ್ಲಿ ಎರಡು ಮಾತಿಲ್ಲ. ಹಣವನ್ನು ಚೆನ್ನಾಗಿಯೇ ಕೊಟ್ಟಿದ್ದಾರೆ. ಆದರೆ ಆಗಿರತಕ್ಕಂಥ result ಬಹಳ ನೋವು ತಂದಿದೆ. ಮಾನ್ಯ ಸಚಿವರು ಒಮ್ಮೆ ನೋಡಬೇಕು. ನಾನು ಈಗಲೂ ಅದರ photograph ನ್ನು ತರಿಸಿದ್ದೇನೆ. ಅದಕ್ಕೆ ಸರ್ಕಾರ ಕೋಟ್ಯಂತರ ರೂಪಾಯಿಗಳು ಖರ್ಚು ಮಾಡಿದೆ. ಇತ್ತೀಚೆಗೆ ಮಳೆ ಹಾನಿಯಿಂದ ದುರಸ್ತಿ ಮಾಡಲು ರೂ.7 ಕೋಟಿಗಳನ್ನು ಕೊಟ್ಟಿದ್ದಾರೆ. ಆ ರೂ.7 ಕೋಟಿಗಳನ್ನು ನೀರಿನಲ್ಲಿ ಹಾಕಿ ಹೋಮ ಮಾಡಿದಂತಾಗಿದೆ. ಯಥಾಸ್ಥಿತಿ ಇದೆ, ಬೇರೆ ಏನೂ ಸುಧಾರಣೆ ಆಗಿಲ್ಲ. ಕೆರೆ ಬಂಡ್ ಕಾಮಗಾರಿಯನ್ನು ಅವರು ಯಾವ ಕೆಲಸಗಾರಿಗೆ ಕೊಡುತ್ತಾರೋ ನಮಗೆ ಗೊತ್ತಿಲ್ಲ. ಅವರ ಇಂಜಿನಿಯರ್‌ಗಳು ಏನು ಕೆಲಸ ಮಾಡುತ್ತಾರೋ ಗೊತ್ತಿಲ್ಲ. ನಿಮಗೆ ಫಂಡ್ ಬರುತ್ತದೆ. ಪಾಪ, ಮಾನ್ಯ ಸಚಿವರು ಹಣವನ್ನು ಒಂದುಗೂಡಿಸಿ ಕೆರೆಗಳು ಅಭಿವೃದ್ಧಿಯಾಗಲಿ, ರೈತರಿಗೆ ಒಳ್ಳೆಯದಾಗಿಲಿ ಎಂದು ಕೊಡುತ್ತಾರೆ. ಅಲ್ಲಿ ನನ್ನನ್ನೂ ಸೇರಿಕೊಂಡು ರಾಜಕಾರಣ ಮಾಡುವುದಕ್ಕೋಸ್ಕರ ಕೆರೆಯ ಹೂಳೆತ್ತುವುದಕ್ಕೆ ಕಾರ್ಯಕರ್ತರು ಮತ್ತು ಬೇರೆಯವರಿಗೆಲ್ಲಾ ಕೊಟ್ಟುಕೊಂಡು ಕೆಲಸ ಮಾಡಿಸಿದರೆ, ಅದು ನಿಜವಾಗಿಯೂ ಒಳ್ಳೆಯ ಕಾಮಗಾರಿ ಆಗುತ್ತದೆಯೇ ಎಂದು ಮಾನ್ಯ ಸಚಿವರೇ ಒಬ್ಬ ರೈತರಾಗಿ ಯೋಚನೆ ಮಾಡಬೇಕು. ದಯಮಾಡಿ ನಾನು ಹೇಳುವುದೇನೆಂದರೆ, ಅವರಿಗೆ ಕೊಟ್ಟಿರತಕ್ಕಂಥ ಹಣ ಸದ್ವಿನಿಯೋಗ ಆಗಿದೆಯೇ ಎನ್ನುವುದನ್ನು ಮಾನ್ಯ ಸಚಿವರು ಅವರ ಇಲಾಖೆಯ ಇಂಜಿನಿಯರ್‌ಗಳು ಹಾಗೂ ಅಧಿಕಾರಿ ವರ್ಗದವರನ್ನು ಕರೆದು ಮಾತನಾಡಬೇಕು. ಅದರ ಬಗ್ಗೆ ಅವರಿಗೆ ತೃಪ್ತಿಯಾದರೆ, ನನಗೂ ಕೂಡ ತೃಪ್ತಿಯಾದಂತೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾನೇ ಆ ಸ್ಪಾಟ್‌ಗೆ ಹೋಗುತ್ತೇನೆ. ನಾನು ಮಾನ್ಯ ಸದಸ್ಯರಾದ ಭೋಜೇಗೌಡರವರನ್ನೂ ಜೊತೆಗೆ ಕರೆದುಕೊಂಡು ಹೋಗಿ inspect ಮಾಡಿ ಅಂತಹ ಅವ್ಯವಹಾರಗಳು ಹಾಗೂ ಅಸಮರ್ಪಕವಾದ ಕೆಲಸಗಳು ಆಗಿದ್ದರೆ, ಅವರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳುತ್ತೇನೆ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಆಗಬಹುದು. ಧನ್ಯವಾದಗಳು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ.1421**

**(ಉತ್ತರ ಲಗತ್ತಿಸಿದೆ)**

**ಶ್ರೀ ಆರ್.ಪ್ರಸನ್ನಕುಮಾರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಕೋವಿಡ್-19 ಸಂಕಷ್ಟದಲ್ಲಿ ಕಟ್ಟಡ ಕಾರ್ಮಿಕರು ಮತ್ತು ಅಸಂಘಟಿತ ಕಾರ್ಮಿಕರಿಗೆ ಸರ್ಕಾರದಿಂದ ಯಾವ ರೀತಿ ಸಹಾಯ ಮಾಡಿದ್ದಾರೆ; ಅವರಿಗೆ ಫುಡ್ ಕಿಟ್ ಕೊಟ್ಟಿದ್ದಾರೆಯೇ ಎನ್ನುವುದರ ಬಗ್ಗೆ ನಾನು ಪ್ರಶ್ನೆ ಕೇಳಿದ್ದೆನು. ಅದಕ್ಕೆ ಉತ್ತರ ಕೊಟ್ಟಿದ್ದಾರೆ. ದಿನಾಂಕ 31.08.2021ರ ಅಂತ್ಯಕ್ಕೆ ಮಂಡಳಿಯಲ್ಲಿ ಸೆಸ್ ರೂಪದಲ್ಲಿ ರೂ.7709.06 ಕೋಟಿ ಮೊತ್ತವನ್ನು ಸಂಗ್ರಹಿಸಿದ್ದಾರೆ. ಅದರಲ್ಲಿ ರೂ.2,608.00 ಕೋಟಿ ಮೊತ್ತವನ್ನು ಖರ್ಚು ಮಾಡಲಾಗಿದೆ ಎಂದು ಹೇಳಿದ್ದಾರೆ. ಈ ರೂ.2,608.00 ಕೋಟಿಗಳು ಖರ್ಚು ಮಾಡಿರುವುದರಲ್ಲಿ ಈ ಪೂರ್ತಿ ಹಣ ಕಾರ್ಮಿಕರಿಗೆ ಹೋಗಿದೆಯೋ ಅಥವಾ ಬೇರೆಯದ್ದಕ್ಕೆ ಏನಾದರೂ ಖರ್ಚು ಮಾಡಿದ್ದಾರೆಯೇ? ಏಕೆಂದರೆ ಮಾನ್ಯ ಸಚಿವರು ಕಳೆದ ವರ್ಷ ಮೊದಲು ಕೊಟ್ಟಂಥ ಪ್ಯಾಕೇಜ್‌ನಲ್ಲಿ ರೂ.5,000/-ಗಳ ನೆರವನ್ನು ಕೊಟ್ಟಿದ್ದಾರೆ. ಈ ಬಾರಿ ರೂ.2,000/-ಗಳ ನೆರವನ್ನು ಕೊಟ್ಟಿದ್ದಾರೆ. ಫುಡ್ ಕಿಟ್‌ನ್ನು ಕೂಡ ಕೊಟ್ಟಿದ್ದಾರೆ. ರೂ.2,608.00 ಕೋಟಿಗಳನ್ನು ಇದಕ್ಕೆ ಮಾತ್ರ ಖರ್ಚು ಮಾಡಿದಂತೆ ಕಾಣುವುದಿಲ್ಲ. ಆದ್ದರಿಂದ ಅದರ ವಿವರವನ್ನು ಕೊಡಬೇಕೆಂದು ಮಾನ್ಯ ಸಚಿವರನ್ನು ತಮ್ಮ ಮೂಲಕ ಕೇಳುತ್ತಿದ್ದೇನೆ.

**ಶ್ರೀ ಅರಬೈಲ್ ಶಿವರಾಮ ಹೆಬ್ಬಾರ್:-** ಮಾನ್ಯ ಸಭಾಪತಿಯವರೇ, ಇಡೀ ದೇಶದಲ್ಲೇ ಕೋವಿಡ್-19 ಬಂದಂಥ ಸಂದರ್ಭದಲ್ಲಿ ಅತ್ಯಂತ ಹೆಚ್ಚು ಪರಿಹಾರ ಕೊಟ್ಟಂಥ ರಾಜ್ಯವೆಂದರೆ ಅದು ಕರ್ನಾಟಕ. ಮೊದಲನೇ ಅವಧಿಯಲ್ಲಿ ರೂ.5,000/-ಗಳ ನೆರವನ್ನು ಕೊಟ್ಟಿದ್ದೇವೆ. ಎರಡನೇ ಬಾರಿಗೆ ಕೋವಿಡ್-19 ಬಂದಂಥ ಸಂದರ್ಭದಲ್ಲಿ ರೂ.3,000/-ಗಳ ನೆರವನ್ನು ಕೊಟ್ಟಿದ್ದೇವೆ. ಮೊದಲನೆಯ ಬಾರಿಗೆ ರೂ. 997 ಕೋಟಿಗಳನ್ನು ಕೊಟ್ಟಿದ್ದೇವೆ. ಎರಡನೇ ಬಾರಿಗೆ ರೂ. 754 ಕೋಟಿಗಳನ್ನು ಕೊಟ್ಟಿದ್ದೇವೆ. ಮತ್ತೆ ರೂ.24 ಲಕ್ಷಗಳ ಫುಡ್ ಕಿಟ್‌ಗಳನ್ನು ಕೊಟ್ಟಿದ್ದೇವೆ. ಒಟ್ಟಾರೆಯಾಗಿ ಈ ಎಲ್ಲಾ ಹಣ ಇದೊಂದು ಉದ್ದೇಶಕ್ಕೆ ಖರ್ಚಾಗಿಲ್ಲ. ದೊಡ್ಡ ಪ್ರಮಾಣದಲ್ಲಿ ಹಣ ಖರ್ಚಾಗಿದೆ. ನಾವು Direct Benefit Scheme ನಲ್ಲಿ ರೂ.18 ಕೋಟಿಗಳನ್ನು ಕೊಟ್ಟಿದ್ದೇವೆ. ಅದು ಅವರ ಖಾತೆಗೆ ನೇರವಾಗಿ ಹಣ ಜಮಾ ಆಗಿರುತ್ತದೆ. ಆ ಕಾರಣಕ್ಕಾಗಿ ಅತ್ಯಂತ ಹೆಚ್ಚು ಹಣವನ್ನು ಕೊಟ್ಟಿದ್ದೇವೆ. ಈ ವಿಚಾರದಲ್ಲಿ ಮೊದಲನೆಯ ಸ್ಥಾನದಲ್ಲಿ ನಮ್ಮ ರಾಜ್ಯವಿದ್ದರೆ, ಎರಡನೇ ಸ್ಥಾನದಲ್ಲಿ ಉತ್ತರ ಪ್ರದೇಶ ಇದೆ. ನಮಗಿಂತಲೂ ಹೆಚ್ಚು ಕೋವಿಡ್-19 ಇದ್ದಂಥ ಉತ್ತರ ಪ್ರದೇಶದಲ್ಲಿ ಮೊದಲನೇ ಬಾರಿಗೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರೂ.1,000/-ಗಳ ನೆರವನ್ನು ಕೊಟ್ಟರು. ಎರಡನೇ ಬಾರಿಗೆ ರೂ.2,000/-ಗಳ ನೆರವನ್ನು ಕೊಟ್ಟರು. ಆದರೆ ನಾವು ಮೊದಲನೇ ಬಾರಿಗೆ ರೂ.5,000/-ಗಳ ನೆರವನ್ನು ಕೊಟ್ಟಿದ್ದೇವೆ. ಎರಡನೇ ಬಾರಿಗೆ ರೂ.3,000/-ಗಳ ನೆರವನ್ನು ಕೊಟ್ಟಿದ್ದೇವೆ. ಹಾಗಾಗಿ ದೇಶದಲ್ಲೇ ಅತ್ಯಂತ ಹೆಚ್ಚು benefit scheme ನ್ನು ಕೊಟ್ಟಿರುವುದು, ಅವರ ಖಾತೆಗೆ ನೇರವಾಗಿ ಹಣವನ್ನು ಜಮಾ ಮಾಡಿರುವುದು ನಮ್ಮ ಕರ್ನಾಟಕ.

**ಶ್ರೀ ಆರ್.ಪ್ರಸನ್ನಕುಮಾರ್:-** ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿ ಏನು ನೋಂದಾಯಿತ ಕಾರ್ಮಿಕರಿದ್ದಾರೆ, ಅವರಿಗೆ ಮತ್ತೆ ಪ್ರತಿ ವರ್ಷ ನೋಂದಾಯಿಸಬೇಕಿದೆ. ಪ್ರತಿ ವರ್ಷ ನೋಂದಾಯಿಸುವ ಬಗ್ಗೆ ಕಾರ್ಮಿಕರಿಗೆ ಮಾಹಿತಿಗಳನ್ನು ಕೊಟ್ಟು, ಅವರಿಗೆ ಸರಿಯಾದ ರೀತಿಯಲ್ಲಿ ಪ್ರತಿ ವರ್ಷ ರಿನೀವಲ್ ಮಾಡುವುದಕ್ಕೆ ಹೇಳಬೇಕು. ಏಕೆಂದರೆ ಬಹಳಷ್ಟು ಜನ ಕಾರ್ಮಿಕರಿಗೆ ರಿನೀವಲ್ ಆಗದೇ ಅವರಿಗೆ ಫುಡ್ ಕಿಟ್ ಮತ್ತು ಹಣ ಬಂದಿಲ್ಲ. ಆದ್ದರಿಂದ ದಯಮಾಡಿ ಮಾನ್ಯ ಸಚಿವರು ಅದಕ್ಕೆ ಹೆಚ್ಚಿನ ಒತ್ತನ್ನು ಕೊಡಬೇಕೆಂದು ನಾನು ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯಿಸುತ್ತೇನೆ.

**ಶ್ರೀ ಅರಬೈಲ್ ಶಿವರಾಮ ಹೆಬ್ಬಾರ್:-** ಮಾನ್ಯ ಸಭಾಪತಿಯವರೇ, ನಾನು ನಮ್ಮ ಇಲಾಖೆಯಿಂದ ಕಳೆದ ಒಂದು ತಿಂಗಳ ಹಿಂದೆ ಅಂದರೆ, ಆಗಸ್ಟ 16 ನೇ ತಾರೀಖಿನಂದು ಘೋಷಣೆ ಮಾಡಿದ್ದೇನೆ. ನಾವು ಕಾರ್ಮಿಕ ಅದಾಲತ್ ಎಂದು ಮಾಡಿದ್ದೇವೆ. ಯಾರೆಲ್ಲಾ ಕಾರ್ಮಿಕರು ರಿನೀವಲ್ ಮಾಡಿಕೊಂಡಿಲ್ಲ, ಕೆಲವು ತೊಂದರೆಗಳಾಗಿ ಕೆಲವರಿಗೆ ಹಣ ಬರತಕ್ಕಂಥದ್ದು ನಿಂತು ಹೋಗಿತ್ತು. ಕೇವಲ ಇದೊಂದು ಕಾರಣಕ್ಕೆ ಅಲ್ಲ. ಅನೇಕ ಜನ ಮದುವೆ ಮಾಡಿಕೊಂಡವರಿಗೆ ಹಣ ಬಂದಿರಲಿಲ್ಲ. ಅನೇಕ ಜನರಿಗೆ ವಿದ್ಯಾರ್ಥಿ ವೇತನ ಬಂದಿರಲಿಲ್ಲ. ಮಾನ್ಯ ಸಭಾಪತಿಯವರೇ, ಒಟ್ಟು 3,54,000 ಪ್ರಕರಣಗಳು ನಮ್ಮ ಇಲಾಖೆಯಲ್ಲಿ ಪೆಂಡಿಂಗ್ ಇತ್ತು. ನಾವು ಒಂದು ತಿಂಗಳು ಕಾರ್ಮಿಕ ಅದಾಲತ್ ಮಾಡಿ 2,49,000 ಪ್ರಕರಣಗಳನ್ನು ಇತ್ಯರ್ಥಗೊಳಿಸಿ, ರೂ. 92 ಕೋಟಿಗಳನ್ನು ನಿನ್ನೆಯವರೆಗೆ ಅವರ ಖಾತೆಗೆ ಜಮಾ ಮಾಡಿದ್ದೇವೆ. ಇನ್ನೂ ಸುಮಾರು 40,000 ಪ್ರಕರಣಗಳು ಬಾಕಿ ಇದೆ. ಅವರಿಗೂ ಕೂಡ ನಾವು 10 ದಿವಸಗಳ ಅವಧಿ ಕೊಟ್ಟಿದ್ದೇವೆ. ಆ 40,000 ಪ್ರಕರಣಗಳು ಕೂಡ ಇತ್ಯರ್ಥಗೊಳ್ಳುತ್ತದೆ. ಐದಾರು ಸಾವಿರ ಪ್ರಕರಣಗಳು ಮಾತ್ರ ಕೋರ್ಟ್‌ನಲ್ಲಿದೆ. ಅದು ಬಿಟ್ಟರೆ ಒಂದು ತಿಂಗಳಿನಲ್ಲಿ 2,48,000 ಪ್ರಕರಣಗಳನ್ನು ಆ ಕಾರ್ಮಿಕ ಅದಾಲತ್‌ನಲ್ಲಿ ಮುಗಿಸಿ, ರೂ. 91 ಕೋಟಿಗಳಷ್ಟು ಹಣವನ್ನು ಅವರ ಖಾತೆಗೆ ಜಮಾ ಮಾಡಿದ್ದೇವೆ. ಮಾನ್ಯ ಸದಸ್ಯರು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಮಗೆ ಸಲಹೆ ಕೊಟ್ಟಿದ್ದಾರೆ, ಕೆಲವರಿಗೆ ರಿನೀವಲ್ ಮಾಡಲು ತೊಂದರೆಯಾಗಿದೆ ಎಂದು ಹೇಳುತ್ತಿದ್ದಾರೆ. ಅವರಿಗೆ ರಿನೀವಲ್ ಅಗದಿದ್ದರೂ ಕೂಡ ಹಣವನ್ನು ಕೊಡತಕ್ಕಂಥ ಕೆಲಸ ಮಾಡಿದ್ದೇವೆ. ಒಂದು ಬಾರಿಗೆ ಎಲ್ಲವನ್ನೂ ಮುಗಿಸಿದ್ದೇವೆ. ಇನ್ನು ಮುಂದೆ ಆನ್‌ಲೈನ್‌ನಲ್ಲೇ ಮಾಡತಕ್ಕಂಥ ಪದ್ಧತಿಯನ್ನು ಜಾರಿಗೆ ತಂದಿದ್ದೇವೆ. ಆನ್‌ಲೈನ್‌ನಲ್ಲೇ ಮಕ್ಕಳ ವಿದ್ಯಾಭ್ಯಾಸಕ್ಕೆ ಅರ್ಜಿಯನ್ನು ಸಲ್ಲಿಸತಕ್ಕಂಥ ಪದ್ಧತಿಯನ್ನು ಸಹ ಜಾರಿಗೆ ತಂದಿದ್ದೇವೆ. ಪ್ರತಿಯೊಂದಕ್ಕೂ ಆನ್‌ಲೈನ್ ವ್ಯವಸ್ಥೆಯನ್ನು ತಂದಿದ್ದೇವೆ. ಅದನ್ನು ಎಲ್ಲರು ಬಳಸಿಕೊಳ್ಳಬೇಕೆಂದು ನಾನು ವಿನಂತಿ ಮಾಡುತ್ತೇನೆ.

**ಸಭಾಪತಿಯವರು:-** ಮುಂದಿನ ಕೆಲವು ಪ್ರಶ್ನೆಗಳಿಗೆ ಸನ್ಮಾನ್ಯ ಮುಖ್ಯಮಂತ್ರಿಯವರು ಉತ್ತರಿಸಬೇಕಾಗಿರುವುದರಿಂದ ಅವರು ಈ ಸದನಕ್ಕೆ ಬರುತ್ತಾರೆ. ಹಾಗಾಗಿ, ಅವರು ಉತ್ತರಿಸಬೇಕಾದ ಪ್ರಶ್ನೆಗಳನ್ನು ನಂತರ ತೆಗೆದುಕೊಳ್ಳಲಾಗುತ್ತದೆ. ಆದ್ದರಿಂದ ಮಾನ್ಯ ಸದಸ್ಯರು ತಮ್ಮ ಪ್ರಶ್ನೆಗಳನ್ನು ಅವರು ಬಂದ ನಂತರ ಕೇಳಬಹುದಾಗಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ.1350**

**(ಉತ್ತರ ಲಗತ್ತಿಸಿದೆ)**

**ಶ್ರೀ ಎಂ.ಪಿ.ಸುನೀಲ್ ಸುಬ್ರಮಣಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಕೊಡಗು ಜಿಲ್ಲೆಯಲ್ಲಿ ಪೊಲೀಸ್ ಅಧಿಕಾರಿಗಳು ಕೋವಿಡ್-19 ಬಂದಂಥ ಸಂದರ್ಭದಲ್ಲಿ ತುಂಬಾ ಒಳ್ಳೆಯ ಕೆಲಸಗಳನ್ನು ಮಾಡಿದ್ದಾರೆ. ಆದರೆ ನಾಗರಿಕ ಸಮಾಜವನ್ನು ರಕ್ಷಣೆ ಮಾಡುವಂಥ ಕೆಲಸವನ್ನು ಪೊಲೀಸ್‌ನವರು ಮಾಡುತ್ತಾರೆ. ಅವರೇ ಅವರ ಖಜಾನೆಯಲ್ಲಿಟ್ಟಿದ್ದ ದುಡ್ಡನ್ನು ದರೋಡೆ ಮಾಡಿದರೆ, ಪೊಲೀಸ್ ಇಲಾಖೆಯ ಗೌರವಕ್ಕೆ ಕಳಂಕ ಬರುತ್ತದೆ. ಅದಕ್ಕಾಗಿ ಈಗಾಗಲೇ ಅವರನ್ನು ಅಮಾನತ್ತಿನಲ್ಲಿಟ್ಟಿದ್ದಾರೆ. ಅವರನ್ನು ವಜಾ ಮಾಡಬೇಕೆಂದು ನಾನು ಮಾನ್ಯ ಗೃಹ ಸಚಿವರಿಗೆ ಕೇಳಿಕೊಳ್ಳುತ್ತೇನೆ. ಇದರ ಜೊತೆಗೆ ಅಷ್ಟೊಂದು ದೊಡ್ಡ ಮೊತ್ತವನ್ನು ಅವರ ಹತ್ತಿರ ಏಕೆ ಇಟ್ಟುಕೊಳ್ಳುತ್ತಾರೆ ಎನ್ನುವುದು ನನ್ನ ಪ್ರಶ್ನೆ. ಏಕೆಂದರೆ ಪತ್ರಿಕೆಯಲ್ಲಿ ವರದಿಯಾಗಿರುವುದು ಸುಮಾರು ರೂ.16,96,000/-. ಆದರೆ, ಅಧಿಕಾರಿಗಳು ಹೇಳಿಕೆ ಕೊಟ್ಟಿರುವುದು ರೂ.8,40,000/-ಲಕ್ಷಗಳು ಎಂದು. ಒಬ್ಬರು ಅಧಿಕಾರಿ ವಿಜಯವಾಣಿ ದಿನ ಪತ್ರಿಕೆಯಲ್ಲಿ ಇಂತಹ ದುರುಪಯೋಗವಾಗಿಲ್ಲವೆಂದು ಹೇಳಿಯನ್ನು ಕೊಟ್ಟಿದ್ದಾರೆ. ಅದು ಸರಿಯಾದ ಕ್ರಮ ಅಲ್ಲ. ಏಕೆಂದರೆ, ಕಳ್ಳತನವಾಗಿದೆ. ಸಿಕ್ಕಿಬಿದ್ದಿದ್ದಾರೆ, ಅಮಾನತ್ತುಗೊಂಡಿದ್ದಾರೆ. ಮತ್ತೆ ಈ ವಿಚಾರ ಪತ್ರಿಕೆಗೆ ತಲುಪಿಲ್ಲ ಎನ್ನತಕ್ಕಂಥ ಮಾತ್ತನ್ನು ಹೇಳಿದ್ದಾರೆ.

**(ಮುಂದು...)**

**(929)23.9.2021/10.50/ಎಂ.ಎಂ-ಆರ್.ಎನ್**

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಎಂ.ಪಿ. ಸುನಿಲ್ ಸುಬ್ರಮಣಿ [ಮುಂದು]:-**

ಏಕೆಂದರೆ, ಕೊಡಗಿನಲ್ಲಿ ಆರ್ಮಿಯವರಿಗೆ ಒಳ್ಳೆಯ ಗೌರವ ಕೊಡುತ್ತಾರೆ. ನಾಗರಿಕ ಸಮಾಜವನ್ನು ರಕ್ಷಣೆ ಮಾಡುವ ಪೊಲೀಸರಿಗೆ ಒಳ್ಳೆಯ ಬೆಲೆಯನ್ನು ಕೊಡುತ್ತಾರೆ. ಇವತ್ತು ಪೊಲೀಸರನ್ನು ಕಳ್ಳರಂತೆ ನೋಡುವ ಪರಿಸ್ಥಿತಿ ಬಂದಿದೆ. ಈಗ ಹೊಸದಾಗಿ ಗೃಹಸಚಿವರು ನೇಮಕವಾಗಿದ್ದಾರೆ, ಅವರು ಶಿಸ್ತಿನ ಸಿಪಾಯಿಯೂ ಆಗಿದ್ದಾರೆ. ಅವರು ಒಳ್ಳೆಯ ಕ್ರಮವನ್ನು ತೆಗೆದುಕೊಳ್ಳಬೇಕು, ಪೊಲೀಸ್ ಇಲಾಖೆಗೆ ಒಳ್ಳೆಯ ಹೆಸರು ಬರುವ ಹಾಗೆ ಕೆಲಸ ಮಾಡಬೇಕೆಂದು ತಮ್ಮ ಮೂಲಕ ಮನವಿ ಮಾಡಿಕೊಳ್ಳುತ್ತೇನೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಅರಗ ಜ್ಞಾನೇಂದ್ರ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳಿರುವಂತಹ ವಿಷಯವನ್ನು ಗಮನದಲ್ಲಿಟ್ಟುಕೊಂಡಿದ್ದೇವೆ. ಅವರ ಮೇಲೆ Department Enquiry ಆಗಿದೆ. ಅಮಾನತ್ತಿನಲ್ಲಿ ಇಟ್ಟಿದ್ದೇವೆ. Department Enquiry ನಲ್ಲಿ ಸಾಬೀತಾದ ನಂತರ ಏನು ಕಾನೂನಿನ ಕ್ರಮ ಜರುಗಿಸಬೇಕೋ ಅದನ್ನು ಖಂಡಿತವಾಗಿಯೂ ಜರುಗಿಸುತ್ತೇವೆ ಮತ್ತು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕೆಂದು ಈಗಾಗಲೇ ಅಧಿಕಾರಿಗಳಿಗೆ ಸೂಚಿಸಿದ್ದೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಚುಕ್ಕೆ ಪ್ರಶ್ನೆ ಸಂಖ್ಯೆ: 1302**

**(ಉತ್ತರವನ್ನು ಲಗತ್ತಿಸಿದೆ)**

**ಶ್ರೀ ಎಂ. ನಾರಾಯಣಸ್ವಾಮಿ (ವಿರೋಧ ಪಕ್ಷದ ಮುಖ್ಯ ಸಚೇತಕರು) (ಶ್ರೀ ಪ್ರಕಾಶ್ ಕೆ. ರಾಥೋಡ್ ಪರವಾಗಿ)**:- ಮಾನ್ಯ ಸಭಾಪತಿಯವರೇ, ಪ್ರಶ್ನೆ ಏನೆಂದರೆ, ಕಟ್ಟಡ ಹಾಗೂ ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣಕ್ಕಾಗಿ ಮೀಸಲಿಟ್ಟಿರುವ ಕಾರ್ಮಿಕ ಕಲ್ಯಾಣ ನಿಧಿಯ ಹಣವನ್ನು ಲಸಿಕೆ ಕಾರ್ಯಕ್ರಮಕ್ಕೆ ಉಪಯೋಗಿಸಲಾಗಿದೆಯೇ ಎನ್ನುವುದಕ್ಕೆ ಮಾನ್ಯ ಸಚಿವರು ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ವತಿಯಿಂದ ಕಟ್ಟಡ ಹಾಗೂ ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣಕ್ಕಾಗಿ ಮೀಸಲಿಟ್ಟಿರುವ ಕಾರ್ಮಿಕ ಕಲ್ಯಾಣ ನಿಧಿಯಿಂದ ಯಾವುದೇ ಹಣವನ್ನು ಕಾರ್ಮಿಕರಿಗೆ ಲಸಿಕೆ ನೀಡಲು ಉಪಯೋಗಿಸಿಕೊಂಡಿರುವುದಿಲ್ಲ ಎಂದು ಉತ್ತರವನ್ನು ಕೊಟ್ಟಿದ್ದಾರೆ. ಆದರೆ ದಿನಾಂಕ: 05-9-2021ರ 'ಪ್ರಜಾವಾಣಿ' ಪತ್ರಿಕೆಯಲ್ಲಿ ಮಾನ್ಯ ಸಚಿವರೇ ಹೇಳಿಕೆ ಕೊಟ್ಟಿದ್ದಾರೆ. "ಖಾಸಗಿ ಆಸ್ಪತ್ರೆಗಳ ಮೂಲಕ ಕಾರ್ಮಿಕರಿಗೆ ಲಸಿಕೆ ಕೊಡಿಸಲು ವಿನಿಯೋಗಿಸುತ್ತಿರುವುದು ಸಣ್ಣ ಮೊತ್ತ" ಎಂದು ಕಾರ್ಮಿಕ ಸಚಿವರಾದ ಶಿವರಾಮ್ ಹೆಬ್ಬಾರ್‌ರವರು ಸ್ಪಷ್ಟಪಡಿಸಿದ್ದಾರೆ. ಸರ್ಕಾರಿ ಕೋಟಾದಲ್ಲಿ 1.5 ಲಕ್ಷ ಕಾರ್ಮಿಕರಷ್ಟೇ ಲಸಿಕೆ ಪಡೆದಿದ್ದಾರೆ. ಸರ್ಕಾರಿ ಕೋಟಾದಲ್ಲಿ ಎಲ್ಲರಿಗೂ ಲಸಿಕೆ ನೀಡುವುದು ತಡವಾಗಬಹುದು. ಕಾರ್ಮಿಕರಿಗೆ ಲಸಿಕೆ ಕೊಡಿಸಲು ಕಾರ್ಮಿಕ ಇಲಾಖೆ ಮುಂದಾಗಬೇಕೆಂದು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಹೇಳಿವೆ ಎಂದು, ಸರ್ಕಾರಿ ಕೋಟಕ್ಕೆ ಹೆಚ್ಚಿನ ಲಸಿಕೆ ಲಭ್ಯವಾದರೆ ಖಾಸಗಿ ಆಸ್ಪತ್ರೆಗಳಿಗೆ ಲಸಿಕೆ ಕೊಡಬೇಕೆಂದು ಇಲಾಖೆಯಿಂದ ಏನು ಹೇಳಿದ್ದೇವೆ ಆಮೇಲೆ ಕಡಿಮೆ ಮಾಡುತ್ತೇವೆ ಎಂಬ ಹೇಳಿಕೆಯನ್ನು ತಾವೇ ಪತ್ರಿಕೆಗಳಿಗೆ ಬಿಡುಗಡೆ ಮಾಡಿದ್ದೀರಿ. ಪತ್ರಿಕೆಯವರು ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣಕ್ಕೆ ಮೀಸಲಿಟ್ಟಿರುವ ಕಾರ್ಮಿಕ ಕಲ್ಯಾಣ ನಿಧಿ ಮೇಲೆ ಸದಾ ಕಣ್ಣಿಟ್ಟಿರುವ ಕಾರ್ಮಿಕ ಇಲಾಖೆ ಕೋವಿಡ್-19 ಲಸಿಕೆ ಕೊಡಿಸುವ ನೆಪದಲ್ಲಿ 700 ಕೋಟಿಯಷ್ಟು ಮೊತ್ತದ ಹಣವನ್ನು ಕರಗಿಸಲು ಮುಂದಾಗಿದೆ. ಇಲ್ಲಿ ಮಾನ್ಯ ಸಚಿವರೇ ಹೇಳಿಕೊಂಡು ಹೋಗುತ್ತಾರೆ. ಶ್ರೀ ಅಕ್ರಂ ಪಾಷ, ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಕಟ್ಟಡ ಮತ್ತು ಇತರ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ ಇವರು ಹೇಳುತ್ತಾರೆ, 'ಖಾಸಗಿ ಆಸ್ಪತ್ರೆಗಳ ಮೂಲಕ ಕಾರ್ಮಿಕರಿಗೆ ಲಸಿಕೆ ಕೊಡಿಸಲು ಮುಖ್ಯ ಕಾರ್ಯದರ್ಶಿಯವರಿಂದ ನಿರ್ದೇಶನ ಬಂದಿತ್ತು', ಈಗ ಸರ್ಕಾರದಿಂದಲೇ ಉಚಿತವಾಗಿ ಕೊಡುವುದಾಗಿ ತಿಳಿಸಿದ್ದಾರೆ ಎಂದು ಹೇಳಿದ್ದಾರೆ. ಖಾಸಗಿ ಆಸ್ಪತ್ರೆ ಮತ್ತು ನರ್ಸಿಂಗ್ ಹೋಮ್

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಧ್ಯಕ್ಷರು ಶ್ರೀ ಹೆಚ್.ಎಂ. ಪ್ರಸನ್ನ ರವರು ಕೂಡ ಹೇಳಿಕೆ ಮಾಡಿದ್ದಾರೆ, ಕಾರ್ಮಿಕರಿಗೆ ಲಸಿಕೆ ನೀಡಲು ಖಾಸಗಿ ಆಸ್ಪತ್ರೆಗಳಿಗೆ ಕಾರ್ಯಾದೇಶ ನೀಡಿದೆ. ಈಗ ಬೇರೆ ಮಾಹಿತಿ ಸಿಗುತ್ತಿದೆ. ಇಲಾಖೆ ಯಾವ ರೀತಿ ಮುಂದುವರೆಯುತ್ತದೆಂದು ಕಾಯುತ್ತಿದ್ದೇವೆ ಎಂದು ಹೇಳುತ್ತಾರೆ. ಮಾನ್ಯ ಸಚಿವರೇ ಸ್ಟೇಟ್‌ಮೆಂಟ್ ಮಾಡಿದ್ದಾರೆ, 'ಸರ್ಕಾರದಿಂದ ಲಸಿಕೆ ಕೊಡುವುದು ತಡವಾಗುತ್ತಿದೆ, ಇಷ್ಟೊಂದು ಜನರಿಗೆ ಕೊಡುವುದಕ್ಕಾಗುವುದಿಲ್ಲ, ಸುಮಾರು 15 ಲಕ್ಷ ಜನರು ಕಾರ್ಮಿಕರಿದ್ದಾರೆ ಇದುವರೆಗೂ ಕೇವಲ 1.5 ಲಕ್ಷ ಜನರಿಗೆ ಮಾತ್ರ ಲಸಿಕೆ ಕೊಡುವುದಕ್ಕಾಗಿದೆ, ಅದಕ್ಕೋಸ್ಕರ ಸ್ವಲ್ಪ ಹಣವನ್ನು ಉಪಯೋಗಿಸಿ ಕಾರ್ಮಿಕರಿಗೆ ಖಾಸಗಿ ಆಸ್ಪತ್ರೆಗಳಲ್ಲಿ ಲಸಿಕೆ ಕೊಡುವ ವ್ಯವಸ್ಥೆ ಮಾಡಿದ್ದೇವೆ ಎಂದು ಹೇಳಿಕೆ ಮಾಡಿದ್ದಾರೆ. ದಯಮಾಡಿ ಇದಕ್ಕೆ ಉತ್ತರ ಕೊಡಬೇಕೆಂದು ಕೋರುತ್ತೇನೆ.

**ಶ್ರೀ ಅರಬೈಲ್ ಶಿವರಾಮ ಹೆಬ್ಬಾರ್:-** ಮಾನ್ಯ ಸಭಾಪತಿಯವರೇ, ನಾನು ಮಾನ್ಯ ಸದಸ್ಯರು ಏನು ಪ್ರಶ್ನೆ ಕೇಳಿದ್ದಾರೆ, ಪ್ರಜಾವಾಣಿ ಪತ್ರಿಕೆಯಲ್ಲಿ ನನ್ನ ಹೇಳಿಕೆ ಪ್ರಕಟವಾಗಿದ್ದು ಸತ್ಯ. ನಾನು ಹೇಳಿಕೆ ಕೊಟ್ಟಿರುವುದೂ ಸತ್ಯ. ಆದರೆ ಕಳೆದ ಅನೇಕ ದಿವಸಗಳಿಂದ vaccination ಅಭಿಯಾನ ಏನು ದೇಶದಲ್ಲಿ ಆರಂಭವಾಯಿತು 27 ಲಕ್ಷ ಕಾರ್ಮಿಕರ ಪೈಕಿ ಕೇವಲ 01 ಲಕ್ಷದ 70 ಸಾವಿರ ಜನರಿಗೆ ಮಾತ್ರ ಲಸಿಕೆಯಾಗಿತ್ತು. ಹಾಗಾಗಿ ರಾಜ್ಯದ ಮುಖ್ಯ ಕಾರ್ಯದರ್ಶಿಗಳು ಬಹಳ ಕಡಿಮೆ ಪ್ರಮಾಣದಲ್ಲಿ ಲಸಿಕೆ ಇರುವಂತಹ ಹಿನ್ನೆಲೆಯಲ್ಲಿ ಕಾರ್ಮಿಕ ಸಂಘಟನೆಗಳು ಹೋಗಿ ಅವರನ್ನು ಭೇಟಿಯಾದಾಗ ಇಂತಹ ಕಠಿಣ ಕಾಲದಲ್ಲಿ ಕಾರ್ಮಿಕ ಸಂಘಟನೆ ಅದನ್ನು ಕಾರ್ಮಿಕ ಇಲಾಖೆ ಉಪಯೋಗಿಸಿಕೊಳ್ಳಬೇಕು, ಯಾವ ಕಾರಣಕ್ಕೂ ಕೂಡ ಕಾರ್ಮಿಕರಿಗೆ ತೊಂದರೆಯಾಗದಂತೆ ಲಸಿಕೆಯನ್ನು ಕೊಡಿಸಬೇಕೆಂದು ಲಿಖಿತವಾಗಿ ಬಂತು. ಅದಕ್ಕೆ ಬೆಲೆಯನ್ನು ನಾವು ನಿಗದಿ ಮಾಡುವಂತಹ ಪ್ರಶ್ನೆಯೇ ಇರಲಿಲ್ಲ. ಕಾರಣ ಕೇಂದ್ರ ಸರ್ಕಾರ ಇಡೀ ದೇಶದಲ್ಲಿ 'ಕೋವಿಶೀಲ್ಡ್'ಗೆ ರೂ. 600/-, ರೂ. 30/- ಜಿ.ಎಸ್.ಟಿ., ರೂ. 150/- ಸೇವಾ ಶುಲ್ಕ. 'ಕೋವ್ಯಾಕ್ಸಿನ್'ಗೆ ರೂ. 1200/- ಮತ್ತು ಜಿ.ಎಸ್.ಟಿ ಇದು ಕೇಂದ್ರ ಸರ್ಕಾರ ನಿಗದಿ ಮಾಡಿದ್ದು. ಆ ಕಾರಣಕ್ಕಾಗಿ ಖಾಸಗಿ ಆಸ್ಪತ್ರೆ ಪ್ರತಿನಿಧಿಗಳನ್ನು ಕರೆದು ಮಾತನಾಡಿರುವುದು ಸತ್ಯ. ಅಷ್ಟೊತ್ತಿಗಾಗಲೇ ಮಾನ್ಯ ಮುಖ್ಯಮಂತ್ರಿಯವರು ಈ ವಿಚಾರದಲ್ಲಿ ವಿಷಯ ಗೊತ್ತಾದಾಗ ನನ್ನನ್ನು ಕರೆಸಿ ಕೇಂದ್ರ ಸರ್ಕಾರದ ಜೊತೆ ಮಾತುಕತೆ ನಡೆದಿದೆ, ಬಹಳ ದೊಡ್ಡ ಪ್ರಮಾಣದಲ್ಲಿ vaccine ಬರುತ್ತಿದೆ, ಹಾಗಾಗಿ ಯಾರೂ ಹಣವನ್ನು ಕೊಟ್ಟು ಖರೀದಿ ಮಾಡುವ ಅವಶ್ಯಕತೆ ಕಾಣುತ್ತಿಲ್ಲವೆಂದು ಸೂಚನೆ ಕೊಟ್ಟರು. ಆಮೇಲೆ ನಾವೇನು ಆದೇಶ ಕೊಟ್ಟಿದ್ದೆವು, ಸುಮಾರು 15 ರಿಂದ 26 ಕೋಟಿ ಆದೇಶ ಕೊಟ್ಟಿದ್ದೆವು, ಆ ಆದೇಶವನ್ನು ಹಿಂಪಡೆದುಕೊಂಡಿದ್ದೇವೆ. ನಮ್ಮ ಇಲಾಖೆಯಿಂದ ಒಂದು

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ರೂಪಾಯಿಯನ್ನೂ ಕೂಡ vaccination ಗೆ ಖರ್ಚು ಮಾಡಿಲ್ಲ. ಯಾವುದೇ ಲಸಿಕೆ ಕೂಡ ತೆಗೆದುಕೊಂಡಿಲ್ಲ. ಮೊನ್ನೆ ದಿವಸ ಒಂದೇ ದಿನಕ್ಕೆ ನಮ್ಮ ಇಲಾಖೆ 2,76,000 vaccination ಅನ್ನು ಸರ್ಕಾರದ ಮಟ್ಟದಲ್ಲಿ ಪಡೆದಿದ್ದಾರೆ. ನಮ್ಮ ಮೂಲಭೂತ ಉದ್ದೇಶವೇನೆಂದರೆ, ತೊಂದರೆಯಾದಂತಹ ಕಾಲದಲ್ಲಿ vaccine ಅನ್ನು ಕೊಡದೇ ಹೋದರೆ, ಕೊಟ್ಟರೆ ಈ ರೀತಿ ಮಾತನಾಡುತ್ತಾರೆ. ಒಂದು ವೇಳೆ ಏನಾದರೂ ತೊಂದರೆಯಾದರೆ ಹಣವಿತ್ತು ಆದರೂ ಏತಕ್ಕೆ ಲಸಿಕೆ ಕೊಟ್ಟಿಲ್ಲ ಎನ್ನುವ ಮಾತನ್ನು ಹೇಳುತ್ತಾರೆ. ಏನೇ ಇರಲಿ ಕಾರ್ಮಿಕ ಇಲಾಖೆ ಒಂದು ನಯಾ ಪೈಸೆಯನ್ನೂ vaccination ಗೆ ಬಳಸಿಲ್ಲ, ಸರ್ಕಾರದಿಂದಲೇ ಲಸಿಕೆ ಕೊಡುವ ಕೆಲಸ ಮಾಡಿದ್ದೇವೆ.

**ಶ್ರೀ ಎಂ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಹೇಳಿದ್ದಾರೆ, ನಾವು 700 ಕೋಟಿ ರೂಪಾಯಿ ಎಂದು ಬಂದಿರುವುದು ಸುಳ್ಳು, ಸ್ವಲ್ಪ ಹಣವನ್ನು ಮಾತ್ರ ಖರ್ಚು ಮಾಡಿದ್ದೇವೆಂದು ಸಚಿವರೇ ಹೇಳಿದ್ದಾರೆ. ಈಗ ಅವರು ಒಂದು ರೂಪಾಯಿಯನ್ನೂ ಕೂಡ ಇದರಿಂದ ತೆಗೆದುಕೊಂಡಿಲ್ಲ ಎಂದು ಹೇಳುತ್ತಿದ್ದಾರೆ ಹಾಗಾದರೆ ಸಂತೋಷ ಅದನ್ನು ಸ್ವಾಗತ ಮಾಡುತ್ತೇನೆ.

**ಶ್ರೀ ಅರಬೈಲ್ ಶಿವರಾಮ ಹೆಬ್ಬಾರ್**:- ಮಾನ್ಯ ಸಭಾಪತಿಯವರೇ, ನಾನು ಹೇಳಿದ್ದೇನೆ, ಒಂದು ರೂಪಾಯಿಯನ್ನೂ ಕೂಡ ಖರ್ಚು ಮಾಡಿಲ್ಲ ಎನ್ನುವುದು ಸತ್ಯ. ಇವತ್ತಿನವರೆಗೂ ಐದು ರೂಪಾಯಿಯನ್ನೂ ನಾವು ಲಸಿಕೆಗೆ ಖರ್ಚು ಮಾಡಿಲ್ಲ, ಪಾರದರ್ಶಕವಾಗಿಯೇ ಕೆಲಸ ಮಾಡಿದ್ದೇವೆ. ಕಾರ್ಮಿಕ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ಹಣವನ್ನು ಸದ್ಬಳಕೆ ಮಾಡಬೇಕೆಂದು ಈ ಕೆಲಸಕ್ಕೆ ಕೈ ಹಾಕಿಲ್ಲ. ಹಾಕುವಂತಹ ಅವಶ್ಯಕತೆ ಈಗಿಲ್ಲ. ಕಾರಣ ಬಹಳ ದೊಡ್ಡ ಪ್ರಮಾಣದಲ್ಲಿ ಲಸಿಕೆ ಬರುತ್ತಿದೆ, ಮುಖ್ಯಮಂತ್ರಿಯವರು ಕೂಡ ನಮಗೆ ಆ ಹಣವನ್ನು ಬಳಕೆ ಮಾಡುವುದು ಬೇಡ, ಖರ್ಚು ಮಾಡಲು ನಾವು ಬೇಕಾದಷ್ಟು ಹಣವನ್ನು ಕೊಡುತ್ತಿದ್ದೇವೆ, ಬೇಕಷ್ಟು ಲಸಿಕೆಗಳು ಬರುತ್ತಿದೆ ಎಂದು ಸೂಚನೆ ಕೊಟ್ಟಿದ್ದಾರೆ, ಆ ಕಾರಣಕ್ಕಾಗ ಹಣವನ್ನು ಬಳಕೆ ಮಾಡುವ ಪ್ರಶ್ನೆಯೇ ಉದ್ಭವಿಸುವುದಿಲ್ಲ.

**ಶ್ರೀ ಎಂ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಸರ್ಕಾರದ ವತಿಯಿಂದ ಬೇಕಾದಷ್ಟು ಲಸಿಕೆ ಬರುತ್ತಿದೆ ಎಂದರು. ಆದರೆ ಇವತ್ತು ಕೂಡ ಜನರಿಗೆ ಲಸಿಕೆ ಸಿಗುತ್ತಿಲ್ಲ.

**ಸಭಾಪತಿಯವರು**:- ಮಾನ್ಯ ನಾರಾಯಣಸ್ವಾಮಿಯವರೇ, ಸಾಕು.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ: 1309**

**(ಉತ್ತರವನ್ನು ಲಗತ್ತಿಸಿದೆ)**

**ಶ್ರೀ ಅಡಗೂರ್ ಹೆಚ್. ವಿಶ್ವನಾಥ್**:- ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರ ಒದಗಿಸಿದ್ದಾರೆ. ರಾಜ್ಯದ ಯಾವ ಗೃಹ ಇಲಾಖೆ ನಾಡಿನ, ಸರ್ಕಾರದ, ಸಮಾಜದ ಆಸ್ತಿಪಾಸ್ತಿಗಳನ್ನು, ಮಾನ ಮರ್ಯಾದೆಗಳನ್ನು ಕಾಪಾಡಬೇಕಾದ ಇಲಾಖೆ ತನ್ನ ಇಲಾಖೆಯಲ್ಲಿಯೇ ಸರ್ಕಾರದ ಹಣವನ್ನು ದುರುಪಯೋಗ ಮತ್ತು ಲೂಟಿ ಮಾಡುವಂತಹದ್ದು ಎಷ್ಟರಮಟ್ಟಿಗೆ ಇದನ್ನು ಒಪ್ಪಿಕೊಳ್ಳಬಹುದು ಎಂದು ಕೇಳುತ್ತೇನೆ. ಮಾನ್ಯ ಗೃಹ ಮಂತ್ರಿಗಳು ಬಹಳ ಒಳ್ಳೆಯವರು. ಹಿಂದೆ ಇದ್ದವರೂ ಒಳ್ಳೆಯವರೇ, ಯಾವುದೇ ಗೃಹ ಮಂತ್ರಿಗಳು ಕೂಡ ಇಲಾಖೆಯಲ್ಲಿ ಕ್ರೈಮ್ಸ್ ಬಗ್ಗೆ, ಅತ್ಯಾಚಾರದ ಬಗ್ಗೆ, ಟ್ರಾಫಿಕ್ ಬಗ್ಗೆ ಎಲ್ಲವನ್ನೂ ನೋಡುತ್ತಿರುತ್ತಾರೆ. ತನ್ನದೇ ಇಲಾಖೆಯಲ್ಲಿ ನಡೆಯುವಂತಹ ದುರುಪಯೋಗವಾಗಲೀ ಅಥವಾ ಆಂತರಿಕ ಲೆಕ್ಕ ಪರಿಶೋಧಕರು ಕೊಟ್ಟಂತಹ ವರದಿಯನ್ನು ಯಾರೂ ಓದುವುದಿಲ್ಲ. ಕೋಟ್ಯಂತರ ರೂಪಾಯಿ ಲೂಟಿಯಾಗಿದೆ. ಮೈಸೂರಿನಲ್ಲಿ ಒಬ್ಬನನ್ನು ಹೆಲ್ಮೆಟ್ ಹಾಕಿಲ್ಲವೆಂದು ಓಡಿಸಿಕೊಂಡು ಹೋದರು ಆತ ಸತ್ತು ಹೋಗಿಬಿಟ್ಟ. ನಾವು ಕೂಡ ಪೊಲೀಸರ ಜೊತೆ ಮಾತನಾಡಿ ಆಯಿತು, ಬಾಯಿಗೆ ಬಂದಂತೆ ಬೈದಿದ್ದಾಯಿತು. ಆ ಹಣವೆಲ್ಲಿ? ಪೊಲೀಸರು ದಂಡ ವಸೂಲಿ ಹಣವನ್ನು ಕಟ್ಟುತ್ತಿಲ್ಲ. ಮೈಸೂರಿನಲ್ಲಿ ಒಂದು ಪೊಲೀಸ್ ಭವನ ಎಂದು ಇದೆ. ಅದರ ಅಧ್ಯಕ್ಷರು ಯಾರೆಂದರೆ, ಹಿಂದೆ ಇದ್ದಂತಹ ಐ.ಜಿ., ಕೆಂಪಯ್ಯನವರು. ವರ್ಷಕ್ಕೆ ಎರಡು ಕೋಟಿ ರೂಪಾಯಿಗಳಿಗೂ ಮೀರಿ ಹಣ ಸಂಗ್ರಹವಾಗುತ್ತಿದೆ. ಇಲ್ಲಿಯತನಕ ಯಾವ ಹಣವನ್ನೂ ಯಾರೂ ಕಟ್ಟಿಲ್ಲ.

(ಮುಂದು)

(930) 23-09-2021/ 11-00/ ಕೆಹೆಚ್-ಆರ್ಎನ್

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಅಡಗೂರು ಹೆಚ್.ವಿಶ್ವನಾಥ್ (ಮುಂದು):-**

ಒಂದಲ್ಲ, I can give you many examples of looting by the department. ಇದನ್ನು ಯಾರು ಕೇಳುವವರು ಇದ್ದಾರೆ? ಏಕೆಂದರೆ, ಮಾನ್ಯ ಗೃಹ ಸಚಿವರು ಎಂದರೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ದೇವರಂತಹವರು ಎಂದು ತೃಪ್ತಿಪಟ್ಟುಕೊಂಡು ನಾವು ಹೋಗಿಬಿಡುತ್ತೇವೆ. ಮಾನ್ಯ ಸಚಿವರಾದ ಅರಗ ಜ್ಞಾನೇಂದ್ರರವರು ಹೊಸಬರು ಮತ್ತುಒಳ್ಳೆಯವರು. ಹಾಗಾಗಿ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಇದರ ಬಗ್ಗೆ ರಿವ್ಯೂ ಮಾಡಿ. ಬಹುಶಃ ಆಂತರಿಕ ಲೆಕ್ಕ ಪರಿಶೋಧನೆಯ ರಿವ್ಯೂ ಅನ್ನು ಯಾವ ಗೃಹ ಸಚಿವರು ಕೂಡ ಇಲ್ಲಿಯವರೆಗೂ ಮಾಡಿಲ್ಲ. ಕೇವಲ Law & Order review ಮಾಡುತ್ತಾರೆ ಅಷ್ಟೇ. ಇದು ಸರ್ಕಾರದ ದುಡ್ಡು. It is the Tax Payers' money, how it is looting from the own department. Can we tolerate it? No. ಆದ್ದರಿಂದ, ನಾನು ಮಾನ್ಯ ಸಚಿವರಲ್ಲಿ ವಿನಂತಿ ಮಾಡುತ್ತಿದ್ದೇನೆ. ಕೆ.ಎಸ್.ಆರ್.ಪಿ., ಬೆಂಗಳೂರು ಘಟಕದಲ್ಲಿ ನಡೆಸುತ್ತಿರುವ ಕ್ಯಾಂಟೀನ್‌ಗಳಲ್ಲಿ ತಕ್ಷಣಕ್ಕೆ ಒಂದು ಶೌಚಾಲಯವನ್ನು ಕಟ್ಟುವುದಕ್ಕೆ ಎಷ್ಟಾಗುತ್ತದೆ? ಒಂದೊಂದು ಶೌಚಾಲಯಕ್ಕೆ 25 ಲಕ್ಷ ರೂಪಾಯಿಗಳ ಹಾಗೆ ಅಲ್ಲಿ 10 ಶೌಚಾಲಯಗಳನ್ನು ಕಟ್ಟಿದ್ದಾರೆ. ಇದು ಯಾರ ದುಡ್ಡು. ಇದೇ ರೀತಿ ಆಗಿ ಹೋದರೆ ಹೇಗೆ? ನಾವು ಎಲ್ಲಾ ಇಲಾಖೆಯಲ್ಲಿಯೂ ಲೂಟಿಯಾಗುತ್ತದೆ ಎಂದರೆ, ಈ ಇಲಾಖೆಯಲ್ಲಿಯೂ ಲೂಟಿಯಾಗುತ್ತದೆ ಎಂದರೆ ಹೇಗೆ? 'ಬೇಲಿಯೇ ಹೊಲವನ್ನು ಮೇಯ್ದಂಗೆ ಆಯ್ತು' ಎಂಬ ಗಾದೆಯಂತೆ ಆಯಿತು. ಆದ್ದರಿಂದ, ದಯಮಾಡಿ ಮಾನ್ಯ ಗೃಹ ಸಚಿವರಾದ ಅರಗ ಜ್ಞಾನೇಂದ್ರರವರಲ್ಲಿ ವಿನಂತಿ ಮಾಡುವುದೇನೆಂದರೆ, ತಾವು ಒಂದು ದಿವಸ ಬಿಡುವು ಮಾಡಿಕೊಂಡು, ಆಂತರಿಕ ಲೆಕ್ಕ ಪರಿಶೋಧನೆಯಲ್ಲಿ ಆಗಿರುವಂತಹ ಸಮಸ್ಯೆಗಳ ಬಗ್ಗೆ ಪರಿಶೀಲಿಸಬೇಕು. ಮಾನ್ಯ ಸಚಿವರು ಸಹ ಈಗಾಗಲೇ ಅದರ ಬಗ್ಗೆ ಹೇಳಿರುವುದರಿಂದ, ಅದರ ಪ್ರಕಾರ ಅವರು ಕ್ರಮ ತೆಗೆದುಕೊಳ್ಳಬೇಕೆಂದು ವಿನಂತಿ ಮಾಡುತ್ತೇನೆ.

**ಶ್ರೀ ಆರಗ ಜ್ಞಾನೇಂದ್ರ:-** ಮಾನ್ಯ ಸಭಾಪತಿಯವರೇ, ಮಾನ್ಯ ಹಿರಿಯ ಸದಸ್ಯರಾದ ಅಡಗೂರು ಹೆಚ್.ವಿಶ್ವನಾಥ್‌ರವರು ತುಂಬಾ ಒಳ್ಳೆಯ ಪ್ರಶ್ನೆ ಕೇಳಿದ್ದಾರೆ. ಅವರು ಪ್ರಶ್ನೆ ಕೇಳಿದ್ದಾರೆ ಎನ್ನುವುದಕ್ಕಿಂತ ನನ್ನ ಕಣ್ಣನ್ನು ಒಂದು ರೀತಿಯಲ್ಲಿ ತೆರೆಸಿದ್ದಾರೆ ಎಂದು ನಾನು ಅಭಿಮಾನದಿಂದ ಹೇಳುತ್ತೇನೆ. ಮಾನ್ಯ ಸದಸ್ಯರು ಹೇಳಿದ ಹಾಗೆ ಬೇರೆ ಬೇರೆ ಕ್ರೈಮ್‌ಗಳ ಬಗ್ಗೆಯೇ ರಿವ್ಯೂ ಮಾಡುತ್ತಿರುತ್ತೇವೆ. ಆಂತರಿಕ ಲೆಕ್ಕಾಚಾರದ ಬಗ್ಗೆ ಹೆಚ್ಚು ಯೋಚನೆ ಮಾಡುವುದೇ ಇಲ್ಲ. ಖಂಡಿತವಾಗಿಯೂ ಮಾನ್ಯ ಸದಸ್ಯರು ಹೇಳಿದ ಹಾಗೆ ಇದರಲ್ಲಿ 27,55,650/- ರೂಪಾಯಿಗಳು ದುರುಪಯೋಗವಾಗಿದೆ ಎನ್ನುವುದನ್ನು ಈಗಾಗಲೇ ಆಂತರಿಕ ಲೆಕ್ಕ ಪರಿಶೋಧನೆಯಲ್ಲಿ ತೋರಿಸಿಕೊಟ್ಟಿದ್ದಾರೆ. ನಾನು ಅಧಿಕಾರಿಗಳಿಗೆ ಹೇಳಿದ್ದೇನೆ. ಇವರನ್ನು pending enquiry, suspend ಮಾಡಬೇಕು. ಇವರ ಮೇಲೆ ಕ್ರಿಮಿನಲ್ ಕೇಸ್ ಹಾಕಬೇಕು. ಇದನ್ನು ಬಿಡುವ ಪ್ರಶ್ನೆಯೇ ಇಲ್ಲ. ಮಾನ್ಯ ಸದಸ್ಯರು ಒಂದು ಮಾತು ಹೇಳಿದರು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಯಾರಾದರೂ ಕ್ರೈಮ್ ಮಾಡಿದರೆ ಎಳೆದುಕೊಂಡು ಬಂದು ಶಿಕ್ಷೆ ಕೊಡಿಸಬೇಕಾದ ನಾನೇ, ಇಲ್ಲಿ ಕ್ರೈಮ್ ಮಾಡಿಕೊಳ್ಳುತ್ತಾ ಕುಳಿತುಕೊಂಡರೆ, ಇಲ್ಲಿ ಲೂಟಿ ಹೊಡೆಯುತ್ತಾ ಕುಳಿತುಕೊಂಡರೆ ಅರ್ಥವೇ ಇಲ್ಲ. ಇಲಾಖೆಯನ್ನು ಸರಿ ಮಾಡುವಂತಹ ಪ್ರಯತ್ನ ಪ್ರಾಮಾಣಿಕವಾಗಿ ಮಾಡುತ್ತೇನೆ ಎನ್ನುವ ವಿಚಾರವನ್ನು ಮಾನ್ಯ ಸದಸ್ಯರಿಗೆ ತಿಳಿಸುತ್ತಿದ್ದೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ: 1352**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಅ.ದೇವೇಗೌಡ:-** ಮಾನ್ಯ ಸಭಾಪತಿಯವರೇ, ಪೊಲೀಸ್ ಇಲಾಖೆಯ ನಿವೃತ್ತ ಲಿಪಿಕ ವರ್ಗದ ಸಿಬ್ಬಂದಿಯವರಿಗೆ "ಆರೋಗ್ಯ ಭಾಗ್ಯ ಯೋಜನೆ"ಯ ಸೌಲಭ್ಯವನ್ನು ನೀಡಬೇಕೆಂದು ಸರ್ಕಾರ ದಿನಾಂಕ:20-09-2021 ರಂದು ಹೊರಡಿಸಿರುವ ಆದೇಶವನ್ನು ಕಳುಹಿಸಿದ್ದಾರೆ. ಮಾನ್ಯ ಸಚಿವರು ಇಷ್ಟು ಬೇಗನೆ ಕ್ರಮ ಕೈಗೊಂಡಿರುವುದರಿಂದ ನಾನು ಅವರಿಗೆ ಹೃತ್ಪೂರ್ವಕ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಅದೇ ರೀತಿ "ಸರ್ಕಾರಿ ಆರೋಗ್ಯ ಸಂಜೀವಿನಿ ಯೋಜನೆ" ಅಡಿ ನಗದು ರಹಿತ ಚಿಕಿತ್ಸೆ ನೀಡುವ ಬಗ್ಗೆ ನಿವೃತ್ತ ನೌಕರರಿಗೂ "ಸರ್ಕಾರಿ ಆರೋಗ್ಯ ಸಂಜೀವಿನಿ ಯೋಜನೆ" ಸೌಲಭ್ಯ ಒದಗಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ ಎಂದು ನಾನು ಮಾನ್ಯ ಸಚಿವರಲ್ಲಿ ಪ್ರಶ್ನೆಯನ್ನು ಕೇಳಿದ್ದೆ. ಅದಕ್ಕೆ ಸನ್ಮಾನ್ಯ ಮುಖ್ಯಮಂತ್ರಿಯವರು ರಾಜ್ಯದ ನಿವೃತ್ತ ಸರ್ಕಾರಿ ನೌಕರರಿಗೆ ನಗದು ರಹಿತ ನೈತಿಕ ಚಿಕಿತ್ಸಾ ಸೌಲಭ್ಯವನ್ನು ಒದಗಿಸುವ ಕುರಿತಾದ ಪ್ರಸ್ತಾವನೆಯನ್ನು ಸರ್ಕಾರ ಪರಿಶೀಲಿಸುತ್ತದೆ ಎಂದು ಹೇಳಿದ್ದಾರೆ. ಮಾನ್ಯ ಗೃಹ ಸಚಿವರಿಗೆ ಮತ್ತು ಮಾನ್ಯ ಮುಖ್ಯಮಂತ್ರಿಯವರಿಗೆ ನಾನು ನಿವೃತ್ತ ನೌಕರರ ಪರವಾಗಿ ಅಭಿನಂದನೆಯನ್ನು ಸಲ್ಲಿಸುತ್ತೇನೆ.

**ಶ್ರೀ ಆರಗ ಜ್ಞಾನೇಂದ್ರ:-** ಮಾನ್ಯ ಸಭಾಪತಿಯವರೇ, ಇದಕ್ಕೆ ಸಂಬಂಧಿಸಿದಂತೆ, ಈಗಾಗಲೇ ಆದೇಶವನ್ನು ಮಾಡಿ ಆದೇಶದ ಪ್ರತಿಯನ್ನು ಕೊಟ್ಟಿದ್ದೇವೆ. ಧನ್ಯವಾದಗಳು.

**ಪ್ರಶ್ನೆ ಸಂಖ್ಯೆ: 1389**

**ಸಭಾಪತಿಯವರು:-** ಮಾನ್ಯ ಸದಸ್ಯರಾದ ಎಂ.ನಾರಾಯಣಸ್ವಾಮಿಯವರೇ, ತಮ್ಮ ಪ್ರಶ್ನೆ ವರ್ಗಾವಣೆಯಾಗಿದೆ.

**ಶ್ರೀ ಎಂ.ನಾರಾಯಣಸ್ವಾಮಿ (ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಈ ಪ್ರಶ್ನೆ ಯಾವ ಇಲಾಖೆಗೆ ವರ್ಗಾವಣೆಯಾಗಿದೆ? ಈ ಪ್ರಶ್ನೆಯನ್ನು ನಾನು ಒಂದೇ ಇಲಾಖೆಯ ಮೇಲೆ ಕೇಳಿದ್ದೇನೆ. ಗೃಹ ಇಲಾಖೆಗೆ ಸಂಬಂಧಿಸಿದಂತೆ ಮಾತ್ರ ಈ ಪ್ರಶ್ನೆಯನ್ನು ಕೇಳಿದ್ದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ಮಾನ್ಯ ಸದಸ್ಯರಾದ ಎಂ.ನಾರಾಯಣಸ್ವಾಮಿಯವರೇ, ವರ್ಗಾವಣೆ ಮಾಡಿದ್ದೇವೆ ಎಂದು ಹೇಳಿದ್ದಾರೆ ಅಷ್ಟೇ.

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಈ ಪ್ರಶ್ನೆ ಏಕೆ ವರ್ಗಾವಣೆ ಮಾಡಿದ್ದಾರೆ ಮತ್ತು ಯಾವ ಇಲಾಖೆಗೆ ವರ್ಗಾವಣೆಯಾಗಿದೆ?

**ಸಭಾಪತಿಯವರು:-** ಈ ಪ್ರಶ್ನೆಯನ್ನು ಡಿ.ಪಿ.ಎ.ಆರ್., ಇಲಾಖೆಗೆ ವರ್ಗಾವಣೆ ಮಾಡಿದ್ದಾರೆ.

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಇದು ಡಿ.ಪಿ.ಎ.ಆರ್., ಇಲಾಖೆಗೆ ಸಂಬಂಧವೇ ಇಲ್ಲ.

**ಸಭಾಪತಿಯವರು:-** ಮಾನ್ಯ ಸದಸ್ಯರಾದ ಎಂ.ನಾರಾಯಣಸ್ವಾಮಿಯವರೇ, ಇದನ್ನೆಲ್ಲಾ ತಾವು ಕೇಳಬಾರದು.

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾನು ಎ.ಸಿ.ಬಿ., ಮತ್ತು ಲೋಕಾಯುಕ್ತದಲ್ಲಿ ಪ್ರಕರಣಗಳು ದಾಖಲಾಗಿವೆ ಎಂಬ ಬಗ್ಗೆ ಪ್ರಶ್ನೆಯನ್ನು ಕೇಳಿದ್ದೇನೆ.

**ಸಭಾಪತಿಯವರು:-** ಮಾನ್ಯ ಸದಸ್ಯರಾದ ಎಂ.ನಾರಾಯಣಸ್ವಾಮಿಯವರೇ, ಕೇಳಬಾರದು. ಇದೆಲ್ಲಾ ಹೇಳಿದ ಮೇಲೆ ಮುಗಿಯಿತು.

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾಳೆ ಅಧಿವೇಶನ ಮುಗಿಯುತ್ತದೆ.

**ಸಭಾಪತಿಯವರು:-** ಮಾನ್ಯ ಎಂ.ನಾರಾಯಣಸ್ವಾಮಿಯವರೇ, ತಾವು ಏಕೆ, ಏನು ಎಂದು ಕೇಳಬಾರದು. ಈ ಪ್ರಶ್ನೆ ಡಿ.ಪಿ.ಎ.ಆರ್.,ಗೆ ವರ್ಗಾವಣೆಯಾಗಿದೆ. ಅಲ್ಲಿಂದ ಉತ್ತರ ಬಂದ ಕೂಡಲೇ ಉತ್ತರ ಕೊಡುತ್ತಾರೆ.

**ಪ್ರಶ್ನೆ ಸಂಖ್ಯೆ: 1451**

**ಸಭಾಪತಿಯವರು:-** ಮಾನ್ಯ ಸದಸ್ಯರಾದ ಶ್ರೀ ಮಾನೆ ಶ್ರೀನಿವಾಸ್‌ರವರು ಗೈರು ಹಾಜರಾಗಿದ್ದಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ: 1439**

**ಸಭಾಪತಿಯವರು:-** ಮಾನ್ಯ ಸದಸ್ಯರಾದ ಶ್ರೀ ರಘುನಾಥ ರಾವ್ ಮಲ್ಕಾಪೂರೆರವರೇ, ತಮ್ಮ ಪ್ರಶ್ನೆಗೆ ಮಾನ್ಯ ಸಚಿವರು ಸಮಯಾವಕಾಶ ಕೇಳಿದ್ದಾರೆ.

**ಪ್ರಶ್ನೆ ಸಂಖ್ಯೆ: 1312**

**ಸಭಾಪತಿಯವರು:-** ಮಾನ್ಯ ಸದಸ್ಯರಾದ ಶ್ರೀ ಎನ್.ರವಿಕುಮಾರ್‌ರವರೇ, ತಮ್ಮ ಪ್ರಶ್ನೆಗೆ ಮಾನ್ಯ ಮುಖ್ಯಮಂತ್ರಿಗಳು ಕಾಲಾವಕಾಶ ಕೇಳಿದ್ದಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ: 1445 ಮತ್ತು 1408**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಬಿ.ಎಂ.ಫಾರುಖ್:-** ಮಾನ್ಯ ಸಭಾಪತಿಯವರೇ, ಸರ್ಕಾರದವರಿಗೆ ಈ ಅಲ್ಪಸಂಖ್ಯಾತರ ಮೇಲೆ ಏಕೆ ಇಷ್ಟೊಂದು ದ್ವೇಷ ಎಂದು ಕೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಪ್ರಧಾನ ಮಂತ್ರಿಗಳಾದ ಶ್ರೀ ನರೇಂದ್ರ ಮೋದಿಯವರ ಸರ್ಕಾರದಲ್ಲಿ 15 ಅಂಶಗಳ ಒಂದು ಕಾರ್ಯಕ್ರಮ ಇದೆ. ಆ ಕಾರ್ಯಕ್ರಮಕ್ಕೆ ಇದುವರೆಗೂ ಎಷ್ಟು ಬಾರಿ ಜಿಲ್ಲಾಧಿಕಾರಿ ಮತ್ತು ಜಿಲ್ಲಾಡಳಿತದ ಸಭೆಗೆ ಕರೆದಿದ್ದಾರೆ. ಈ ಕಾರ್ಯಕ್ರಮದಲ್ಲಿ ಅಲ್ಪಸಂಖ್ಯಾತರ ಅಭಿವೃದ್ಧಿಗಾಗಿ ಮೇಲ್ಮನೆ ಮತ್ತು ಕೆಳಮನೆ ಸೇರಿ ಒಟ್ಟಾರೆ ಸುಮಾರು 300 ಜನ ಮಾನ್ಯ ಶಾಸಕರುಗಳು ಇದ್ದೇವೆ. ಅದರಲ್ಲಿ ಬಹುಶಃ 7 ಶಾಸಕರು ವಿಧಾನಸಭೆಯಲ್ಲಿ ಇದ್ದಾರೆ. ಈ ಸದನದಲ್ಲಿ 3 ಜನ ಶಾಸಕರು ಇದ್ದಾರೆ. Out of 300, we have some 10 members. ಮಾನ್ಯ ನಸೀರ್ ಅಹ್ಮದ್‌ರವರು ಕೂಡ ಇಲ್ಲೇ ಇದ್ದಾರೆ. ಮಾನ್ಯ ಸದಸ್ಯರೇ ತಮ್ಮನ್ನು 15 ಅಂಶಗಳ ಒಂದು ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ಇದುವರೆಗೂ ಸಭೆಗೆ ಕರೆದಿದ್ದಾರೆಯೇ? ನಾನು ಎಂ.ಎಲ್.ಸಿ., ಆಗಿ ಮೂರು ವರ್ಷಗಳಾಯಿತು. ನನ್ನನ್ನು ಯಾವ ಸಭೆಗೂ ಕರೆದಿಲ್ಲ. ನಾನು ಕೇಳುವುದೇನೆಂದರೆ, KMDC (Karnataka Minority Development Corporation) ಯಲ್ಲಿಯೂ ಕೂಡ 390.00 ಕೋಟಿ ರೂಪಾಯಿಗಳು ಇದ್ದಂತಹ ಬಜೆಟ್ ಅನ್ನು ಕಳೆದ ಎರಡು ವರ್ಷಗಳಿಂದ 50 ಕೋಟಿ ರೂಪಾಯಿಗಳಿಗೆ ತಂದು ನಿಲ್ಲಿಸಿದ್ದಾರೆ. ಅದೇ ರೀತಿ ಕೇಂದ್ರ ಸರ್ಕಾರದ ಅನುದಾನದಲ್ಲಿಯೂ ಕೂಡ 2016-17ನೇ ಸಾಲಿನಲ್ಲಿ 114132.56 ಲಕ್ಷ ರೂಪಾಯಿಗಳು ಬಿಡುಗಡೆ ಮಾಡಿರುವ ಅನುದಾನವಾಗಿದ್ದು, ಅದನ್ನು 2020-21ನೇ ಸಾಲಿನಲ್ಲಿ 75185.26 ಲಕ್ಷ ರೂಪಾಯಿಗಳಿಗೆ ತಂದು ನಿಲ್ಲಿಸಿದ್ದಾರೆ. ಏಕೆಂದರೆ, ಸರ್ಕಾರ ಎಂದರೆ, ಎಲ್ಲಾ ಪ್ರಜೆಗಳನ್ನು ಯಾವುದೇ ಜಾತಿ, ಮತ, ಭೇದವಿಲ್ಲದೇ ಸಮಾನವಾಗಿ ನೋಡಬೇಕು. ಮಾನ್ಯ ಸಚಿವರು 11 ಕಾರ್ಪೋರೇಷನ್‌ಗಳಲ್ಲಿ ಸ್ಲಂ ಇದೆ ಎಂದು ಹೇಳಿದ್ದಾರೆ. ಈ 11 ಕಾರ್ಪೋರೇಷನ್‌ಗಳಲ್ಲಿ ಎಷ್ಟು ಸ್ಲಂ ಗಳು ಇವೆ. ಈ ಸ್ಲಂ ಗಳಲ್ಲಿ ಎಷ್ಟು ಮುಸ್ಲಿಂಮರು ಇದ್ದಾರೆ, ಎಷ್ಟು ದಲಿತರು ಇದ್ದಾರೆ, ಸಾಮಾನ್ಯವಾಗಿ ಸ್ಲಂ ನಲ್ಲಿ ಬಡವರು ಎಂದರೆ ಮುಸ್ಲಿಂಮರು, ದಲಿತರು, ಕ್ರಿಶ್ಚಿಯನ್ನರು ಇದ್ದಾರೆ. ಇದರ ಬಗ್ಗೆ ಮಾನ್ಯ ಸಚಿವರಿಗೆ ಅಂಕಿ-ಅಂಶಗಳು ಗೊತ್ತಿದೆಯೇ, ಅವರು ಏಕೆ ಇನ್ನು ಸ್ಲಂ ನಲ್ಲಿಯೇ ಉಳಿದಿದ್ದಾರೆ. ಅವರು ಏನು ಶ್ರೀಮಂತರಾಗಿದ್ದಾರೆಯೇ, ಇಷ್ಟೆಲ್ಲಾ ಬಂಡವಾಳವನ್ನು ಬಜೆಟ್‌ನಲ್ಲಿ ಮಾಡುತ್ತೇವೆ ಎಂದು ಹೇಳಿದ್ದಾರೆ. ಮಾನ್ಯ ಸಚಿವರಾದ ಜೆ.ಸಿ.ಮಾಧುಸ್ವಾಮಿಯವರು ಇದಕ್ಕೆ ಕೊಟ್ಟ ಹಣ ಇನ್ನು ಖರ್ಚಾಗಿಲ್ಲ ಎನ್ನುವ ಒಂದು ಮಾತನ್ನು ಹೇಳಿದರು. ಮತ್ತೆ ಅಧಿಕಾರಿಗಳಿಗೆ ಏಕೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಂಬಳವನ್ನು ಕೊಡುತ್ತೀರಾ; ಅಂತಹ ಅಧಿಕಾರಿಗಳನ್ನು ಏಕೆ ಇಟ್ಟಿದ್ದೀರಾ? ಒಂದು ರೀತಿಯಲ್ಲಿ ತಾರತಮ್ಯವಾಗಿದೆ. 'ಮಲತಾಯಿ ಧೋರಣೆ' ಎಂದು ಹೇಳುತ್ತಾರೆಯಲ್ಲವೇ, ಈ ಅಂಕಿ-ಅಂಶಗಳ ಪ್ರಕಾರ ಸರ್ಕಾರ 15 ಅಂಶಗಳ ಕಾರ್ಯಕ್ರಮದಲ್ಲಿ ಅಲ್ಪಸಂಖ್ಯಾತರ ಇಲಾಖೆಗೆ ಪ್ರತ್ಯೇಕವಾಗಿ ಒಬ್ಬ ಸಚಿವರು ಇಲ್ಲ. ಹಜ್, ವಕ್ಫ್ ಬಗ್ಗೆ ಅರ್ಥವಾಗಬೇಕಾದರೆ ಪ್ರತ್ಯೇಕವಾಗಿ ಒಬ್ಬ ಮಾನ್ಯ ಸಚಿವರು ಇರಬೇಕಾಗಿತ್ತು. ಮಾನ್ಯ ಕೆ.ಎಸ್.ಈಶ್ವರಪ್ಪನವರ ಒಂದು ಭಾಷಣದ ಬಗ್ಗೆ ಪತ್ರಿಕೆಯಲ್ಲಿ ನೋಡಿದೆ. ನಮ್ಮ ಬಿ.ಜೆ.ಪಿ., ಪಕ್ಷದಲ್ಲಿ ಇರುವಂತಹ ಮುಸ್ಲಿಂಮರೆಲ್ಲಾ ದೇಶಭಕ್ತರು ಎಂದು ಹೇಳಿದ್ದಾರೆ. ತಮ್ಮ ಸರ್ಕಾರದಲ್ಲಿ ಒಬ್ಬರನ್ನು ಸಚಿವರನ್ನಾಗಿ ಮಾಡಿ. ಅವರ ಪಕ್ಷದಲ್ಲಿ ದೇಶಭಕ್ತರು ಇದ್ದಾರೆಯಲ್ಲವೇ, ಅವರನ್ನೇ ಸಚಿವರನ್ನಾಗಿ ಮಾಡಲಿ. ತಮ್ಮ ಪಕ್ಷದಲ್ಲಿಯೇ ಮಾಡಿ. ಕಾಂಗ್ರೆಸ್ ಅಥವಾ ಜೆ.ಡಿ(ಎಸ್), ಪಕ್ಷದಲ್ಲಿರುವವರನ್ನು ಸಚಿವರನ್ನಾಗಿ ಮಾಡಬೇಡಿ. ನಮ್ಮಲ್ಲಿ ಒಬ್ಬ ಉನ್ನತ ಅಧಿಕಾರಿ ಇದ್ದರು, ಶ್ರೀ ಅಬ್ದುಲ್ ಅಜೀಂ ಎಂಬ ನಿವೃತ್ತ ಅಧಿಕಾರಿ ಇದ್ದರು. ಅವರನ್ನೇ ಮಾಡಿ. ಎಲ್ಲದಕ್ಕೂ ಒಂದು ಪರಿಹಾರ ಸಿಗಬೇಕಲ್ಲವೇ, ತಾವು comprehensive ಆಗಿ ಒಂದು ಸ್ಕೀಮ್ ಮಾಡಬೇಕು. ಈ ರೀತಿಯ ಪರಿಸ್ಥಿತಿ ಇದ್ದರೆ ಅವರ ಶಿಕ್ಷಣ ಏನಾಗುತ್ತದೆ? ಮಾನ್ಯ ಮುಖ್ಯಮಂತ್ರಿಯವರೇ, ಈ ಇಲಾಖೆಗೆ ಸಚಿವರಾಗಿದ್ದಾರೆ. ಶಿಗ್ಗಾಂವ ಮತಕ್ಷೇತ್ರವಾಗಿದೆ. ಅವರ ಮತಕ್ಷೇತ್ರದಲ್ಲಿ 60 ಸಾವಿರ ಮುಸ್ಲಿಂಮರು ಇದ್ದಾರೆ. ಅವರ ಹೊಸ ಶಾಲೆಗಳು, ಆರೋಗ್ಯ ಮತ್ತು ಶಿಕ್ಷಣದ ಬಗ್ಗೆ ಬಜೆಟ್ ಅನ್ನು ನೋಡಿದ್ದೇವೆ. ಒಂದು ಉರ್ದು ಶಾಲೆಯಲ್ಲಿ ಇವತ್ತಿನ ದಿವಸ ಒಂದು ಕನ್ನಡ ಶಿಕ್ಷಕ ಇಲ್ಲ. ತಮ್ಮ ಸರ್ಕಾರದಲ್ಲಿ ಉರ್ದು ಶಾಲೆಗೆ ಕನ್ನಡ ಶಿಕ್ಷಕನನ್ನು ನೇಮಿಸಿ, ಕನ್ನಡಕ್ಕೆ ಉತ್ತೇಜನ ಕೊಡಬಾರದೇ ಎಂದು ಕೇಳುತ್ತಿದ್ದೇನೆ.

(ಮುಂದು)

**931) 11:10 ಎಸ್‌ಪಿಆರ್-ವಿಕೆ 23/09/2021**

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಬಿ.ಎಂ.ಫಾರೂಖ್(ಮುಂದು):-**

ನಾನು ಹೇಳುವುದೇನೆಂದರೆ, ಇದರಲ್ಲಿ ಬೌದ್ಧ, ಸಿಖ್, ಜೈನ್ ಜನಾಂಗದವರನ್ನು ಸರ್ಕಾರವು ನೇಮಿಸಲಿ, ಮುಸ್ಲಿಮರನ್ನು ನೇಮಿಸುವುದು ಬೇಡ; ಮಂತ್ರಿಗಳನ್ನು ಮಾಡಿ. ಅಲ್ಲಿ ಬಹಳಷ್ಟು ಕೆಲಸಗಳಾಗುತ್ತಿವೆ ; ಇನ್ನೂ ಸಾಕಷ್ಟು ಕೆಲಸಗಳು ಬಾಕಿ ಇವೆ. ಅಲ್ಲಿನ ಜನರು ಬಹಳಷ್ಟು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. It is totally an apathy. ಇದಕ್ಕೆ ಏನಾದರೂ ಪರಿಹಾರವನ್ನು ನೀಡಬೇಕಲ್ಲವೇ?

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ನಸೀರ್ ಅಹ್ಮದ್:-** ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:-** ನಾನು ಅವಕಾಶವನ್ನು ನೀಡುವುದಿಲ್ಲ. ಸಚಿವರೇ ಉತ್ತರಿಸಿ.

**ಶ್ರೀ ಜೆ.ಸಿ.ಮಾಧುಸ್ವಾಮಿ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)(ಮುಖ್ಯಮಂತ್ರಿಗಳ ಪರವಾಗಿ):-** ಮಾನ್ಯ ಸಭಾಪತಿಯವರೇ, ಸದಸ್ಯರು ಕೇಳಿರುವ ಪ್ರಶ್ನೆಗೆ ಸರ್ಕಾರವು ಉತ್ತರಿಸಿದೆ. ಪ್ರಸ್ತುತ ವಿಷಯದ ಬಗ್ಗೆ ಈ ಹಿಂದೆಯೂ ಸಹ ಪ್ರಸ್ತಾಪಿಸಿ, ಚರ್ಚಿಸಲಾಗಿದೆ. 2020-21 ನೇ ಸಾಲಿಗೆ ಅನುದಾನವನ್ನು ಕಡಿತಗೊಳಿಸಿರುವುದು ನಿಜ. ಆದರೆ, ಕೇವಲ ಇದೊಂದೆ ನಿಗಮಕ್ಕೆ ಅಲ್ಲ. ಎಲ್ಲಾ ಕ್ಷೇತ್ರಗಳಲ್ಲಿಯೂ ಸಹ ಅನುದಾನವನ್ನು ಕಡಿತಗೊಳಿಸಬೇಕಾದ ಪರಿಸ್ಥಿತಿಯು ರಾಜ್ಯ ಸರ್ಕಾರಕ್ಕೆ ಬಂದಿತು. ಹೀಗಾಗಿ pro rata ಎಲ್ಲಾ ಕ್ಷೇತ್ರಗಳಲ್ಲಿ ಅನುದಾನವನ್ನು ಕಡಿತಗೊಳಿಸಲಾಗಿದೆ. ಕೇವಲ ಅಲ್ಪಸಂಖ್ಯಾತರಿಗೆ ಮಾತ್ರವೇ ತಾರತಮ್ಯ ಮಾಡುತ್ತಿದ್ದೇವೆ ಎನ್ನುವ ಭಾವನೆಯನ್ನು ಸದಸ್ಯರು ಇಟ್ಟುಕೊಳ್ಳಬಾರದು. ಮಂಡಳಿಯಲ್ಲಿ ಯಾರು ಯಾರು ಇದ್ದಾರೆ ಎನ್ನುವ ಮಾಹಿತಿಯನ್ನು ನೀಡಲಾಗಿದೆ. ಕಾಲಕಾಲಕ್ಕೆ ಮಂಡಳಿಯ ಸಭೆಗಳನ್ನು ನಡೆಸಲು ನಾವು ಹೇಳುತ್ತೇವೆ. ಖಾಲಿಯಿರುವ ಹುದ್ದೆಗಳು ಭರ್ತಿಯಾಗಿಲ್ಲವೆಂಬ ಬಗ್ಗೆ ಸದಸ್ಯರು ಪ್ರಶ್ನೆಯನ್ನು ಕೇಳಿದ್ದಾರೆ. ಆದಷ್ಟು ಶೀಘ್ರದಲ್ಲಿ ಖಾಲಿಯಿರುವ ಹುದ್ದೆಗಳನ್ನು ಭರ್ತಿಮಾಡುವ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು. ರಾಜ್ಯದ ಹಣಕಾಸಿನ ವ್ಯವಸ್ಥೆಯು ಸ್ವಲ್ಪ ಮಟ್ಟಿಗೆ ಅಭಿವೃದ್ಧಿಯಾದರೆ, ನಿಗಮಗಳಿಗೆ ಇನ್ನೂ ಹೆಚ್ಚಿನ ಶಕ್ತಿಯನ್ನು ನೀಡಲು ಸರ್ಕಾರವು ಪ್ರಯತ್ನಿಸುತ್ತದೆ.

**ಶ್ರೀ ನಸೀರ್ ಅಹ್ಮದ್:-** ಮಾನ್ಯ ಸಭಾಪತಿಯವರೇ, ...

**ಸಭಾಪತಿಯವರು:-** ನಾನು ನಿಮಗೆ ಅವಕಾಶವನ್ನು ನೀಡುವುದಿಲ್ಲ. ಶ್ರೀ ಫಾರೂಖ್ ರವರೇ ನಿಮ್ಮ ಪ್ರಶ್ನೆಯನ್ನು ಕೇಳಿ.

**ಶ್ರೀ ನಸೀರ್ ಅಹ್ಮದ್:-** ಮಾನ್ಯ ಸಭಾಪತಿಯವರೇ, ನಾವು ಒಟ್ಟಿಗೆ ಪ್ರಶ್ನೆಯನ್ನು ಕೇಳಿದ್ದೇವೆ. ನಮ್ಮನ್ನು ಏಕೆ ಈ ರೀತಿಯಾಗಿ ನೋಡುತ್ತೀರಿ?

**ಸಭಾಪತಿಯವರು:-** ಇಬ್ಬರೂ ಸದಸ್ಯರು ಒಂದೇ ಪ್ರಶ್ನೆ ಕೇಳಿರುವುದನ್ನು ನಾನು ನೋಡಿರಲಿಲ್ಲ. ನೀವು ಮುಂದುವರೆಸಿ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ನಸೀರ್ ಅಹ್ಮದ್:-** ಮಾನ್ಯ ಸಭಾಪತಿಯವರೇ, ನಮ್ಮ ಪ್ರಶ್ನೆಗೆ ಸರ್ಕಾರವು ಲಿಖಿತ ಉತ್ತರ ನೀಡಿದೆ. ಎಲ್ಲಾ ಇಲಾಖೆಗಳಿಗೆ ಅನುದಾನ ಕಡಿತಗೊಳಿಸಿರುವುದು ನಿಜ; ಆದರೆ ಎಷ್ಟು ಕಡಿತಗೊಳಿಸಲಾಗಿದೆ ಎನ್ನುವುದನ್ನು ಸಚಿವರು ನೋಡಬೇಕು. ಈ ಹಿಂದೆ 3,500 ಕೋಟಿ ರೂಪಾಯಿಗಳ ಆಯವ್ಯಯ ಇತ್ತು. ಆದರೆ ಇವತ್ತಿನ ದಿವಸ ಕೇವಲ 900+ ಕೋಟಿ ರೂಪಾಯಿಗಳಿಗೆ ಮಾಡಲಾಗಿದ್ದು, ಆ ಪೈಕಿ ಕೇವಲ 600 ಕೋಟಿ ರೂಪಾಯಿಗಳು ಮಾತ್ರವೇ ಬಿಡುಗಡೆಯಾಗಿದೆ. ರಾಜ್ಯದಲ್ಲಿ ಸುಮಾರು ಶೇಕಡಾ 14-15 ರಷ್ಟು ಜನಸಂಖ್ಯೆ ಹೊಂದಿರುವ ಸಮಾಜ ಇದಾಗಿದ್ದು, ಸರ್ಕಾರವು ಸಾಕಷ್ಟು ಕಾರ್ಯಕ್ರಮಗಳನ್ನು ಇದಕ್ಕೆ ನೀಡಿದೆ. ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ, ಅಲ್ಪಸಂಖ್ಯಾತರ ನಿರ್ದೇಶನಾಲಯ ಇವುಗಳು ಕಾರ್ಯನಿರ್ವಹಿಸುತ್ತಿವೆ. ಸಾಚಾರ ಸಮಿತಿಯ ವರದಿ ಬಂದ ಮೇಲೆ, ಸಾಮಾಜಿಕ ಹಾಗೂ ಆರ್ಥಿಕವಾಗಿ ಭಾರಿ ಹಿಂದುಳಿದ ಸಮಾಜ ಇದಾಗಿದೆ. ಈ ಸಮಾಜಕ್ಕೆ ಸ್ವಲ್ಪ ಅವಕಾಶವನ್ನು ಮಾಡಿಕೊಡಬೇಕೆಂಬ ಕಾರಣದಿಂದ ಈ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಇವತ್ತಿನ ದಿವಸ 'ಅರಿವು' ಎಂಬ ಕಾರ್ಯಕ್ರಮದಡಿ ಸಿ.ಇ.ಟಿ. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ವಿದ್ಯಾರ್ಥಿಗಳು ಹಾಲಿ ಎಂ.ಬಿ.ಬಿ.ಎಸ್./ಇಂಜನಿಯರಿಂಗ್ ಕಾಲೇಜುಗಳಲ್ಲಿ ಓದುತ್ತಿದ್ದಾರೆ. ಅವರುಗಳ ಮೊದಲನೇ ವರ್ಷದ ಕೋರ್ಸಿಗೆ ದಾಖಲಾದಾಗ ಅವರ ಮೊದಲನೇ ವರ್ಷದ ಶುಲ್ಕವನ್ನು ಸರ್ಕಾರವು ಭರಿಸಿರುತ್ತದೆ. ಆದರೆ 2-3 ನೇ ವರ್ಷಗಳ ಶುಲ್ಕವಿಲ್ಲದೇ, ವಿದ್ಯಾರ್ಥಿಗಳು ಒದ್ದಾಡುತ್ತಿದ್ದಾರೆ. ಇಂತಹ ಸಮಸ್ಯೆಗಳೂ ಸಹ ಇವೆ. ನಮಗಿರುವ ಹಕ್ಕು ಮತ್ತು ನ್ಯಾಯಗಳನ್ನು ನೀಡುವಂತೆ ಕೇಳುತ್ತಿದ್ದೇವೆ. ಶ್ರೀ ಫಾರೂಖ್‌ರವರು ಪ್ರಸ್ತಾಪಿಸಿದಂತೆ, ಈ ಬಗ್ಗೆ ಸಭೆಯೊಂದನ್ನು ಕರೆದು, ಅಲ್ಲಿ ಕಾರ್ಯಗತಗೊಂಡಿರುವ ಮತ್ತು ಕಾರ್ಯಗತಗೊಳ್ಳದಿರುವ ವ್ಯವಸ್ಥೆಗಳ ಬಗ್ಗೆ ಚರ್ಚಿಸಿ. ಅಲ್ಪಸಂಖ್ಯಾತರ ಇಲಾಖೆಗೆ ಸಂಬಂಧಿಸಿದ ಸಚಿವರಿಗೆ ತಿಳಿಸಿ, ಈ ಬಗ್ಗೆ ಪ್ರತ್ಯೇಕವಾದ ಸಭೆಯನ್ನು ಇಲಾಖಾಧಿಕಾರಿಗಳೊಂದಿಗೆ ನಿಗದಿಪಡಿಸಿ. ಯೋಜನೆಯ ಯಾವ ವ್ಯವಸ್ಥೆಗಳು ಅನುಷ್ಠಾನಗೊಂಡಿವೆ ಮತ್ತು ಯಾವುದು ಅನುಷ್ಠಾನಗೊಂಡಿಲ್ಲ ಎನ್ನುವುದರ ಬಗ್ಗೆ ಚರ್ಚೆಗಳಾಗಲಿ. ಯಾವ ಯಾವ ಇಲಾಖೆಯ ಯಾವ ಯಾವ ಯೋಜನೆಗಳಿಗೆ ಎಷ್ಟೆಷ್ಟು ಅನುದಾನ ನೀಡಲಾಗಿದೆ ಎನ್ನುವುದರ ಬಗ್ಗೆ ಸರ್ಕಾರವು ಪರಾಮರ್ಶಿಸಬೇಕು. ಆಗ ವಾಸ್ತವಾಂಶಗಳು ತಿಳಿಯುತ್ತವೆ. ಇವತ್ತಿನ ದಿವಸ ಅಲ್ಪಸಂಖ್ಯಾತರ ಇಲಾಖೆಯಲ್ಲಿ ಸಿಬ್ಬಂದಿಗಳ ಕೊರತೆ ಇದೆ. ಹೀಗಾಗಿ ಸರ್ಕಾರವು ಸಿಬ್ಬಂದಿಗಳನ್ನು ಹೊರ ಗುತ್ತಿಗೆ ಆಧಾರದ ಮೇಲೆ ನಿಯೋಜಿಸುತ್ತದೆ. ಸದರಿ ಇಲಾಖೆಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮಧ್ಯವರ್ತಿಗಳಿದ್ದು, ಅವರುಗಳ ಮುಖೇನ ಎಲ್ಲಾ ಯೋಜನೆಗಳು ಅನುಷ್ಠಾನಗೊಳ್ಳುತ್ತಿದ್ದು, ಇದು ಬಹಳ

"ಅನುಮೋದನೆಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಗಂಭೀರ ಸಮಸ್ಯೆಯಾಗಿದೆ. ಮಾನ್ಯ ಮುಖ್ಯಮಂತ್ರಿಗಳು ಸದನಕ್ಕೆ ಬರಬೇಕಾಗಿತ್ತು. ಅವರ ಪರವಾಗಿ ಶ್ರೀ ಜೆ.ಸಿ.ಮಾಧುಸ್ವಾಮಿರವರು ಉತ್ತರಿಸಿದ್ದಾರೆ. ಒಂದು ವೇಳೆ ಮುಖ್ಯಮಂತ್ರಿಗಳೇ ಸದನಕ್ಕೆ ಬಂದಿದ್ದರೆ, ಕೆಲವು ಪ್ರಶ್ನೆಗಳನ್ನು ಕೇಳಬಹುದಾಗಿತ್ತು. ಈ ವಿಚಾರದ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳಿಗೆ ತಿಳಿಸಿದಾಗ, ಅವರು ಸಭೆಯೊಂದನ್ನು ನಿಗದಿಪಡಿಸುತ್ತಾರೆ. ಸುಮಾರು ಶೇಕಡಾ 15-16 ರಷ್ಟು ಜನಂಖ್ಯೆಯನ್ನು ಹೊಂದಿರುವ ಈ ಸಮಾಜಕ್ಕೆ ಸಮಸ್ಯೆಯಾಗಿರುವುದರಿಂದ ದಯಮಾಡಿ ಮುಖ್ಯಮಂತ್ರಿಗಳು ಗಮನ ವಹಿಸಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

**ಶ್ರೀ ಬಿ.ಎಂ.ಫಾರೂಖ್:-** ಮಾನ್ಯ ಸಭಾಪತಿಯವರೇ, ಅಲ್ಪಸಂಖ್ಯಾತರ ನಿಗಮಕ್ಕೆ ಎಷ್ಟು ಅನುದಾನ ಕಡಿತಗೊಳಿಸಲಾಗಿದೆ ಎನ್ನುವುದರ ಬಗ್ಗೆ ಮಾಹಿತಿಯನ್ನು ಒದಗಿಸಲಿ. ಶೇಕಡಾ 15 ರಷ್ಟು ಈ ಸಮಾಜದ ಜನಸಂಖ್ಯೆ ಇದೆ ಎಂದು ಶ್ರೀ ನಸೀರ್ ಅಹ್ಮದ್ ರವರು ಪ್ರಸ್ತಾಪಿಸಿದರು. ಸುಮಾರು 70 ಲಕ್ಷದಷ್ಟು ಜನಸಂಖ್ಯೆ ಇದೆಯೆಂದು ಪ್ರಜಾವಾಣಿ ಮತ್ತಿತರೆ ಪತ್ರಿಕೆಗಳಲ್ಲಿ ವರದಿಯಾಗಿರುವುದನ್ನು ನಾನು ನೋಡಿದ್ದೇನು. ಈ ಹಿಂದೆ ಅಸ್ತಿತ್ವದಲ್ಲಿದ್ದ ಶ್ರೀ ಸಿದ್ದರಾಮಯ್ಯನವರ ನೇತೃತ್ವದ ಸರ್ಕಾರವು ಸುಮಾರು 165 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ 2,65,000ಕ್ಕೂ ಸಿಬ್ಬಂದಿಗಳು ಹಗಲು-ರಾತ್ರಿಗಳೆನ್ನದೇ ಸುಮಾರು 2 ವರ್ಷ ಜನಗಣತಿ ಬಗ್ಗೆ ಕಾರ್ಯನಿರ್ವಹಿಸಿ, ಸಮೀಕ್ಷೆಯನ್ನು ಮಾಡಿದ್ದಾರೆ. ಆದರೆ, ಇದುವರೆವಿಗೂ ಸಹ ಸದರಿ ವರದಿಯು ಬಿಡುಗಡೆಗೊಂಡಿರುವುದಿಲ್ಲ. ಈಗಿನ ಸರ್ಕಾರವು ಸದರಿ ವರದಿಯನ್ನು ಸದನದಲ್ಲಿ ಮಂಡಿಸಿದರೆ, ಅದರ ಪರಿಸ್ಥಿತಿ ಏನಾಗಿದೆ ಎನ್ನುವುದರ ಬಗ್ಗೆ ಚರ್ಚೆಯನ್ನು ಮಾಡೋಣ. ಎಷ್ಟೋಂದು ಜನರು ಇಂದಿಗೂ ಸಹ ಕೊಳಗೇರಿ ಪ್ರದೇಶಗಳಲ್ಲಿ ವಾಸಿಸುತ್ತಿದ್ದು, ಅವರುಗಳಿಗೆ ಶಿಕ್ಷಣ ದೊರೆತಿರುವುದಿಲ್ಲ. ಸರ್ಕಾರವು ಅನುದಾನ ಕಡಿತಗೊಳಿಸಿದೆ. ಇವತ್ತಿನ ದಿವಸ ಲಿಂಗಾಯತ ಸಮುದಾಯವು ಅಲ್ಪಸಂಖ್ಯಾತ ಮೀಸಲಾತಿಯನ್ನು ಕೇಳುತ್ತಿದೆ. ಇವರುಗಳಿಗೂ ಸಹ ಅಲ್ಪಸಂಖ್ಯಾತರ ಮೀಸಲಾತಿ ದೊರೆತರೆ, ಆಗ ಪರಿಸ್ಥಿತಿ ಏನಾಗಬಹುದು ಎನ್ನುವುದರ ಬಗ್ಗೆ ನಾನು ಹೇಳುತ್ತಿದ್ದೇನೆ.

**ಶ್ರೀ ಅರುಣ ಶಹಾಪುರ:-** ಮಾನ್ಯ ಸಭಾಪತಿಯವರೇ, ನನ್ನದೊಂದು ಪ್ರಶ್ನೆ ಇದೆ.

**ಸಭಾಪತಿಯವರು:-** ನಾನು ಅವಕಾಶ ನೀಡುವುದಿಲ್ಲ. ಸಚಿವರೇ ಉತ್ತರಿಸಿ. ಶ್ರೀ ಅರುಣ ಶಹಾಪುರರವರೇ ಕುಳಿತುಕೊಳ್ಳಿ. ನಾನು ನಿಮಗೆ ಅವಕಾಶ ನೀಡಿಲ್ಲವಾದ್ದರಿಂದ ನೀವು ಮಧ್ಯದಲ್ಲಿ ಮಾತನಾಡಬೇಡಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ಇಲಾಖೆಗಳಿಗೆ ಕಡಿತಗೊಳಿಸಿರುವ ಅನುದಾನದ ಮಾಹಿತಿಯನ್ನು ಪ್ರಸಕ್ತ ಸಾಲಿನ ಆಯವ್ಯಯದ ಪ್ರಸ್ತಾವನೆಯಲ್ಲಿ ತಿಳಿಸಲಾಗಿದೆ. ಇದಲ್ಲದೇ ಸದಸ್ಯರಿಗೆ ಉತ್ತರಿಸುವಾಗಲೂ ಸಹ ತಿಳಿಸಲಾಗಿದೆ. ಇಲ್ಲಿ ಯಾವುದೇ ಮುಚ್ಚುಮರೆ ಇಲ್ಲ. ಸರ್ಕಾರದ ಆರ್ಥಿಕ ಸ್ಥಿತಿಗತಿಗಳನ್ನು ನೋಡಿಕೊಂಡು ಅನುದಾನಗಳನ್ನು ಬಿಡುಗಡೆ ಮಾಡಲಾಗುತ್ತದೆ. ಅಲ್ಪಸಂಖ್ಯಾತರ ಮಂಡಳಿಯು ಇದೆ. ಇದರ ಬಗ್ಗೆ ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಮುಖ್ಯಮಂತ್ರಿಗಳಿಗೆ ಈ ವಿಷಯದ ಬಗ್ಗೆ ತಿಳಿಸುತ್ತಾ, ಅವರ ಮುಖೇನ ಮಂಡಳಿಯೊಂದಿಗೆ ಶಾಸಕರ ಸಭೆಯನ್ನು ಕರೆಯಲಾಗುವುದು.

**ಸಭಾಪತಿಯವರ:-** ಈ ಬಗ್ಗೆ ಸಭೆಯನ್ನು ನಿಗದಿಪಡಿಸಿ.

**ಶ್ರೀ ಬಿ.ಎಂ.ಫಾರೂಖ್:-** ಮಾನ್ಯ ಸಭಾಪತಿಯವರೇ, 15 ಅಂಶಗಳ ಯೋಜನೆಯ ಬಗ್ಗೆ ಸರಿಯಾಗಿ ಜಿಲ್ಲಾಡಳಿತ ಅಥವಾ ಎಲ್ಲಿಯಾದರೂ ಸಭೆಗಳಾಗಲಿ.

**ಸಭಾಪತಿಯವರು:-** ನಿಮ್ಮನ್ನೆಲ್ಲಾ ಕರೆದು ಸಭೆ ನಡೆಸಿ, ತೀರ್ಮಾನಿಸಲಾಗುವುದು.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ಈ ಬಗ್ಗೆ ಮುಖ್ಯಮಂತ್ರಿಗಳಿಗೆ ತಿಳಿಸಿ, ಸಂಬಂಧಪಟ್ಟ ಮಂತ್ರಿಗಳು ಮತ್ತು ನಿಮ್ಮನ್ನು ಕರೆಸಿ, ಮಾತನಾಡಿಸಲಾಗುವುದು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ: 1417**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಅರುಣ ಶಹಾಪುರ:-** ಮಾನ್ಯ ಸಭಾಪತಿಯವರೇ, ಖಾಲಿ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಇರುವ ನಿಯಮಾವಳಿ ಬಗ್ಗೆ ನಾನು ಪ್ರಶ್ನೆಯನ್ನು ಕೇಳಿದ್ದೇನೆ. ನಮ್ಮಲ್ಲಿ ನೇರ ಮತ್ತು ಸಮತಳ ಎನ್ನುವ ಎರಡು ರೀತಿಯ ಮೀಸಲಾತಿ ವ್ಯವಸ್ಥೆಗಳಿವೆ. ನಾವು ಅದನ್ನು vertical and horizontal reservation ಎಂದು ಹೇಳುತ್ತೇವೆ. ಇದನ್ನು ಮೀಸಲಾತಿ ಮತ್ತು ಒಳಮೀಸಲಾತಿ ಎಂದೂ ಸಹ ಕರೆಯುತ್ತೇವೆ. ಸರ್ಕಾರಿ ವ್ಯವಸ್ಥೆಯಲ್ಲಿ ಈಗಿರುವ ಮೀಸಲಾತಿ ನಿಯಮಾವಳಿಗಳು ಸಮಸ್ಯೆಗಳ ಮಧ್ಯದಲ್ಲಿ ಕಾರ್ಯಸಾಧುವಾಗಿವೆ. ಅನುದಾನಿತ ವ್ಯವಸ್ಥೆಗಳಲ್ಲಿ ಇದು ಬಹಳ ಸಂಕಷ್ಟವನ್ನು ಈಡುಮಾಡಿದೆ. ಮೀಸಲಾತಿ ಎಂದರೆ ಬಹಳ ಜನಕ್ಕೆ ಮೇಲ್ನೋಟಕ್ಕೆ ಕೇವಲ ಎಸ್.ಸಿ. ಮತ್ತು ಎಸ್.ಟಿ. ಎನ್ನುವುದು ಮಾತ್ರವೇ ಕಾಣುತ್ತದೆ. ಆದರೆ ನೈಜವಾಗಿ ನೋಡಿದರೆ, ಅಲ್ಲಿ 3 ಬಿಂದುಗಳ ಮೀಸಲಾತಿ ಎಂದು ಮಾಡಿದ್ದಾರೆ. ಉದಾಹರಣೆಗೆ ಹೇಳುವುದಾದರೆ, ಸಿಂಧಗಿ ತಾಲ್ಲೂಕಿನ ಕಾಲೇಜುವೊಂದರಲ್ಲಿ ಅನುದಾನಿತ ಸಂಸ್ಥೆಗೆ ನೇಮಕಾತಿ ಮಾಡುವ ಸಂದರ್ಭದಲ್ಲಿ ಆಂಗ್ಲ ಬೋಧಕರ ಹುದ್ದೆಗೆ 3ಬಿ, ಗ್ರಾಮೀಣ ಮತ್ತು ಅಂಗವಿಕಲ ಇಂತಹ ಮೂರು ಬಿಂದುಗಳ ಮೀಸಲಾತಿಯನ್ನು ನೀಡಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಆಂಗ್ಲ ಮತ್ತು ಗಣಿತ ವಿಷಯಗಳಿಗೆ ಸಂಬಂಧಿಸಿದಂತೆ, ಅಭ್ಯರ್ಥಿಗಳು ಲಭ್ಯವಾಗುವುದಿಲ್ಲ. ನಮ್ಮ ರಾಜ್ಯದಲ್ಲಿ 10 ಸಾವಿರ ಶಿಕ್ಷಕರ ಹುದ್ದೆಗಳ ನೇಮಕಾತಿ ಪ್ರಕ್ರಿಯೆ ಪ್ರಾರಂಭಿಸಿದರೆ, ಕೇವಲ 2,500 ಅಭ್ಯರ್ಥಿಗಳಿಗೆ ಮಾತ್ರವೇ ಅರ್ಹತೆ ದೊರೆಯುತ್ತಿದೆ. ಅಂದರೆ ಶೇಕಡಾ 25 ರಷ್ಟು ಅರ್ಹ ಅಭ್ಯರ್ಥಿಗಳು ದೊರೆಯುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ 3 ಬಿಂದುಗಳ ಮೀಸಲಾತಿ ಪಾಲಿಸಿ ಎಂದು ಹೇಳಿದರೆ, ಅಡೆತಡೆಗಳಾಗಿ, ಶಿಕ್ಷಕರ ನೇಮಕಾತಿಯಾಗದೇ ಇರುವಂತಹ ಪರಿಸ್ಥಿತಿಯು ನಿರ್ಮಾಣವಾಗಿದೆ. ಇಲ್ಲಿ ತೀರ ಸಮಸ್ಯೆಯಾದಾಗ..., ನಾನು ಎಸ್.ಸಿ. ಮತ್ತು ಎಸ್.ಟಿ. ಮೀಸಲಾತಿಯ ಬಗ್ಗೆ ಮಾತನಾಡುವುದಿಲ್ಲ. ಏಕೆಂದರೆ, ಅವರಿಗೆ ದೊರೆಯಬೇಕಾದ ಮೀಸಲಾತಿಯನ್ನು ಮುಂದೂಡುವುದರಿಂದ ಸಾಮಾಜಿಕ ಒಳಿತಾಗುವುದಿಲ್ಲ ಎನ್ನುವ ಅಭಿಪ್ರಾಯವು ಇದೆ. ಆದ್ದರಿಂದ ಕಡೆಯ ಪಕ್ಷ horizontal ಮೀಸಲಾತಿಗಳಲ್ಲಿ ಅದಲು-ಬದಲು ಬದಲಾವಣೆ ಮಾಡುವುದಕ್ಕೆ ಸರ್ಕಾರವು ಅವಕಾಶ ನೀಡುತ್ತದೆಯೇ ಎಂದು ಕೇಳಲಿಚ್ಛಿಸುತ್ತೇನೆ. ಈ ವಿಷಯಕ್ಕೆ ಸಂಬಂಧಪಟ್ಟಂತೆ ಸಮಿತಿಯೊಂದನ್ನು ನೇಮಿಸಿ, ಈ ರೀತಿ ಕಾರ್ಯಸಾಧುವಾಗಿರುವ ನಿಯಮಾವಳಿಗಳಲ್ಲಿ ತಿದ್ದುಪಡಿ ತರುವುದಕ್ಕೆ ನಾನು ವಿನಂತಿಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಜೆ.ಸಿ.ಮಾಧುಸ್ವಾಮಿ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)(ಮುಖ್ಯಮಂತ್ರಿಗಳ ಪರವಾಗಿ):-** ಮಾನ್ಯ ಸಭಾಪತಿಯವರೇ, ಮೀಸಲಾತಿಯಲ್ಲಿ ಅದಲು-ಬದಲು ಮಾಡಿಕೊಡುತ್ತೇವೆ ಎಂದು ನಾವು ಇಲ್ಲಿ ಹೇಳಿದ ತಕ್ಷಣ ಆ ವರ್ಗದ ಅಭ್ಯರ್ಥಿಗಳ ಅರ್ಜಿಗಳು ಸ್ವೀಕೃತಗೊಳ್ಳದ ಹಾಗೆ ಆಗುತ್ತದೆ. ಹೇಗೋ ಮೀಸಲಾತಿಯಲ್ಲಿ ಅದಲು-ಬದಲುಗಳಾಗುತ್ತದೆ ಎಂದು ಅಭ್ಯರ್ಥಿಗಳು ತಿಳಿದುಕೊಳ್ಳುತ್ತಾರೆ. ಯಾವ ಬಿಂದುಗಳನ್ನು ನಿಗದಿಪಡಿಸಲಾಗಿದೆಯೋ ಹೇಗಾದರೂ ಮಾಡಿ ಅವುಗಳನ್ನು ಆಯಾಯಾ ವರ್ಗದ ಹುದ್ದೆಗಳೇ ಭರ್ತಿಯಾಗಲಿ ಎನ್ನುವ ಅಪೇಕ್ಷೆಯು ಸರ್ಕಾರಕ್ಕೆ ಇರುತ್ತದೆ.

(ಮುಂದು)

**(932) 11.20 23-10-2021 ಸಿಎಸ್/ ವಿಕೆ**

**ಶ್ರೀಜೆ.ಸಿ.ಮಾಧುಸ್ವಾಮಿ(ಮುಂದು):-**

ಮೊದಲೆಲ್ಲಾ ಈ ಕಸರತ್ತನ್ನು ಮಾಡಿದ್ದರಿಂದ 2-3 ಕ್ಯಾಟಗರಿಯವರಿಗೆ ಎಲ್ಲಿಯೂ ಜಾಗ ಸಿಗದ ಹಾಗೆ ಆಗಿತ್ತು. ನೇಮಕಾತಿಗಾಗಿ ಅರ್ಜಿಗಳ ಕರೆದಾಗಲೇ ಕೆಲವೊಂದು ಕ್ಯಾಟಗರಿಯವರನ್ನು ಸಿಗದೇ ಇದ್ದ ವಿಚಾರ ಮಾನ್ಯ ಶಹಾಪೂರ್‌ರವರಿಗೂ ತಿಳಿದಿದೆ. ನಾವು ಸಹ ಸಂಸ್ಥೆಗಳನ್ನು ನಡೆಸಿರುವ ಕಾರಣ ಈ ವಿಚಾರದಲ್ಲಿ ಸ್ವಲ್ಪ ನೇರವಾಗಿ ಇರೋಣ. ಯಾವ ಹುದ್ದೆಗಳು ಯಾವ ಯಾವ ಕ್ಯಾಟಗರಿಯವರಿಗೆ ಮೀಸಲಿವೆ, ಅದು ಅವರಿಗೆ ಸಿಗುವ ಹಾಗೆ ಆಗಲಿ. ಒಂದು ವರ್ಗದವರು ಸಿಗಲಿಲ್ಲ ಎಂದರೆ ಮತ್ತೊಂದು ವರ್ಗಕ್ಕೆ ಕೊಡೋಣ ಎನ್ನುವುದನ್ನು ದುರುಪಯೋಗ ಆಗುತ್ತದೆ ಎನ್ನುವುದು ಸರ್ಕಾರದ ಉದ್ದೇಶ. ಇದರಿಂದ ಏನೂ ತೊಂದರೆ ಆಗುವುದಿಲ್ಲ ಎನ್ನುವುದಾದರೆ, 2-3 ವರ್ಷಗಳಾದರೂ ಒಂದು ಕ್ಯಾಟಗರಿಯಲ್ಲಿ ಅಭ್ಯಥಿಗಳು ಸಿಗದೇ ಹೋದರೆ ಮುಖ್ಯಮಂತ್ರಿಗಳ ಜೊತೆಯಲ್ಲಿ ಚರ್ಚಿಸಿ ಕಮಿಟಿ ಮಾಡಬೇಕೆ ಬೇಡವೇ ಎನ್ನುವುದರ ಬಗ್ಗೆ ನಿರ್ಧಾರ ಮಾಡಲಾಗುವುದು.

**ಶ್ರೀ ಅರುಣಾ ಶಹಾಪೂರ:-** ಮಾನ್ಯ ಸಭಾಪತಿಗಳೇ, ಸರ್ಕಾರದ ಭಾವನೆಗಳನ್ನು ನಾವು ಅರ್ಥ ಮಾಡಿಕೊಂಡು ಸರ್ಕಾರದ ಜೊತೆಯಲ್ಲಿ ನಾವಿದ್ದೇವೆ. ಆಯಾ ವರ್ಗಗಳ ಹುದ್ದೆ ಆಯಾ ವರ್ಗಗಳವರಿಗೆ ಸಿಗಬೇಕೆನ್ನುವ ವಿಚಾರದಲ್ಲಿ ನಮಗೂ ಸಹ ಬದ್ಧತೆ ಇದೆ. ಅದರಲ್ಲಿ ಎರಡು ಮಾತಿಲ್ಲ. ಹಿಂದೆ ಒಂದು ಪದ್ಧತಿ ಇತ್ತು. ಒಂದು ಹುದ್ದೆಗೆ ಒಂದೊಂದು ಅರ್ಜಿಗಳನ್ನು ಕರೆಯುವಾಗಲೂ ಸಹ ಒಂದೂವರೆ ವರ್ಷಗಳ ಅವಧಿ ಇರುವ ಹಾಗೆ 3 ಬಾರಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕರೆದಾಗಲೂ ಯಾರು ಅಭ್ಯರ್ಥಿಗಳು ಸಿಗದಿದ್ದಾಗ interchange ಮಾಡಬಹುದು ಎಂದಾಗಿತ್ತು. ಆ ಬಗ್ಗೆ ಸರ್ಕಾರ ಒಂದು ಪರಿಶೀಲನೆ ಮಾಡಬೇಕೆನ್ನುವುದು ನನ್ನ ಮನವಿ.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಗಳೇ, ಇದರ ಬಗ್ಗೆ ಪರಿಶೀಲಿಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ 1443**
**(ಉತ್ತರವನ್ನು ಒದಗಿಸಲಾಗಿದೆ)**

**ಶ್ರೀ ಮೋಹನ್ ಕುಮಾರ್ ಕೊಂಡಜ್ಜಿ**:- ಮಾನ್ಯ ಸಭಾಪತಿಯವರೆ, ನಾನು ಜಾಹಿತಾತು ಪ್ರಚಾರ ಫಲಕಗಳ ಬಗ್ಗೆ ಪ್ರಶ್ನೆಯನ್ನು ಕೇಳಿದ್ದೇನೆ. ಪ್ರಚಾರ ಫಲಕಗಳ ಬಗ್ಗೆ ಒಳ್ಳೆ ಅಭಿಪ್ರಾಯ ಮತ್ತು ಕೆಟ್ಟಾಭಿಪ್ರಾಯ ಎರಡೂ ಇವೆ. ಹಾಗೆಯೇ ಜಾಹಿರಾತು ಪ್ರಚಾರ ಫಲಕಗಳನ್ನು ಕೊಡುವ ವಿಚಾರದಲ್ಲಿ ಫೇವರಿಸಮ್ ಮಾಡುವುದು ಎಲ್ಲಾ ನಡೆಯುತ್ತಿದೆ. ನಮ್ಮ ರಾಜ್ಯದಲ್ಲಿ ಸರ್ಕಾರದ್ದೇ 800 ಪ್ರಚಾರ ಫಲಕಗಳಿವೆ. ಅದನ್ನು ಬಿಟ್ಟು ಉಳಿದೆಲ್ಲಾ ಜಾಹಿರಾತುಗಳನ್ನು ಖಾಸಗಿಯವರಿಗೆ ನೀಡುವುದು ಸೂಕ್ತವಲ್ಲ ಎನ್ನುವುದು ನನ್ನ ಅಭಿಪ್ರಾಯ. NCA ಪ್ರಕಾರ ಯಾರಿಗಾದರೂ ಕೊಡಬಹುದು. ಯಾರಿಗಾದರೂ ಫೇವರಿಸಮ್ ಮಾಡುವುದನ್ನು ನಾವು ನೀವೆಲ್ಲರೂ ಮಾಡಿರಬಹುದು. ಆದರೆ ಸರ್ಕಾರದ 800 ಫಲಕಗಳನ್ನು ಕೂಡ ಹೊರಗೆ ಕೊಡುವ ಹಾಗೆ ಮಾಡಿ. ಇದರ ಜೊತೆಗೆ ಪ್ರಿಂಟ್ ಮಿಡಿಯಾ ಮತ್ತು ಎಲೆಕ್ಟ್ರಾನಿಕ್ ಮೀಡಿಯಾ ಎರಡು ಇವೆ. ಇವತ್ತು ಪತ್ರಿಕೆಗಳನ್ನು ನಡೆಸುವುದು ಬಹಳ ಕಷ್ಟವಾಗಿದೆ. ಪ್ರಜಾವಾಣಿ ಮತ್ತು ದಿ ಹಿಂದೂ ಪತ್ರಿಕೆಗಳನ್ನು ನಡೆಸುತ್ತಿರುವವರಿಗೆ ಬಹಳ ಕಷ್ಟವಾಗಿದೆ. ಹಾಗಾಗಿ ಖಾಸಗಿಯವರಿಗೂ ಸಹ ಹೆಚ್ಚಿನ ಜಾಹೀರಾತುಗಳನ್ನು ಕೊಡಿ. ಹಾಗೆಯೇ ಜಿಲ್ಲಾ ಮಟ್ಟದಲ್ಲಿರುವ ಪತ್ರಿಕೆಗಳಿಗೂ ಸಹ ಯಾವುದೇ ತಾರತಮ್ಯವನ್ನು ಮಾಡದೇ ಜಾಹೀರಾತುಗಳನ್ನು ಕೊಡಬೇಕೆನ್ನುವುದು ನನ್ನ ಒಂದು ಮನವಿ.

**ಶ್ರೀಜೆ.ಸಿ.ಮಾಧುಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು, ಮುಖ್ಯಮಂತ್ರಿಗಳ ಪರವಾಗಿ):-** ಮಾನ್ಯ ಸಭಾಪತಿಗಳೇ, ಸರ್ಕಾರ ಜಾಹೀರಾತನ್ನು ನೀಡುವಾಗ, number of circulation and area of circulation ಯನ್ನು consider ಮಾಡುತ್ತದೆ. ರಾಜ್ಯ ಮಟ್ಟದಲ್ಲಿ ಪ್ರಸಾರ ಆಗುವ ಮಾಧ್ಯಮಗಳಿಗೆ ಮೊದಲ ಆದ್ಯತೆಯನ್ನು ನೀಡಲಾಗುವುದು. ಜಿಲ್ಲಾಮಟ್ಟದ ಪತ್ರಿಕೆಗಳಿಗೂ ಸಹ ಜಾಹೀರಾತನ್ನು ನೀಡುವುದಕ್ಕೆ ಸರ್ಕಾರಕ್ಕೆ ಕಷ್ಟವಾಗುತ್ತದೆ. ಜಿಲ್ಲಾ ಪಂಚಾಯಿತಿ ಮಟ್ಟದಲ್ಲಿನ ಜಾಹೀರಾತುಗಳನ್ನು ನೀಡಬಹುದೇ ವಿನಃ As a Government State Level circulation ಇಲ್ಲದವರಿಗೆ ಜಾಹೀರಾತನ್ನು ನೀಡುತ್ತೇವೆಂದು ನಾವು ಸದನದಲ್ಲಿ ಭರವಸೆ ನೀಡುವುದಕ್ಕೆ ಹೇಗೆ ಸಾಧ್ಯ? However, you have mentioned it. ನಾನು ಈ ವಿಚಾರದ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಜೊತೆಯಲ್ಲಿ ಮಾತನಾಡುತ್ತೇನೆ. ಏನಾದರೂ ಅವರಿಗೆ ಸಹಾಯ ಮಾಡುವುದಕ್ಕೆ ಅವಕಾಶ ಇದ್ದರೆ ಮಾಡಲಾಗುವುದು. But we cannot make it as a policy. ಆದರೆ ಸದನದಲ್ಲಿ ನಾನು State level circulation ಅನ್ನು divert ಮಾಡಿ ಜಿಲ್ಲಾ ಮಟ್ಟದ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪತ್ರಿಕೆಗಳಿಗೆ ನೀಡುತ್ತೇವೆ ಎನ್ನುವ ಭರವಸೆಯನ್ನು ನೀಡುವುದಕ್ಕೆ ಆಗುವುದಿಲ್ಲ. ತಮ್ಮ ಮನವಿಯನ್ನು ಪರಿಶೀಲನೆ ಮಾಡಲಾಗುವುದು.

**ಶ್ರೀ ಮೋಹನ್ ಕುಮಾರ್ ಕೊಂಡಜ್ಜಿ:-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರಲ್ಲಿ ಹಾಗೂ ಮಾನ್ಯ ಮುಖ್ಯಮಂತ್ರಿಗಳಲ್ಲಿ ನನ್ನ ಮನವಿ ಏನೆಂದರೆ ಎಲ್ಲ ಪಕ್ಷಗಳಲ್ಲಿಯೂ ಕೂಡ ಕೆಲವು Ideological ಪತ್ರಿಕೆಗಳು ಇರುತ್ತವೆ. ಅದು ಆಡಳಿತ ಪಕ್ಷದ ವಿರುದ್ಧ ಇರಬಹುದು, ಅಥವಾ ವಿರೋಧ ಪಕ್ಷಗಳ ವಿರುದ್ಧ ಇರಬಹುದು. ಇವತ್ತು ಜಗತ್ತಿನ ಪರಿಸ್ಥಿತಿ ಏನಾಗಿದೆ ಎಂದರೆ ಇವತ್ತು ನಮ್ಮ ದೇಶದ ಪ್ರಧಾನಮಂತ್ರಿಗಳಾದ ಶ್ರೀಮಾನ್ ಮೋದಿಯವರು ಅಮೇರಿಕಾ ಅಧ್ಯಕ್ಷರಾದ ಜೋ ಬೈಡನ್ ಜೊತೆ ಮಾತನಾಡಬೇಕಾದ ಪರಿಸ್ಥಿತಿ ಬಂದಿದೆ. ಜೊತೆಗೆ ತಾಲಿಬಾನ್ ಅವರ ಜೊತೆಯಲ್ಲಿ ಮಾತನಾಡಬೇಕಾದ ಪರಿಸ್ಥಿತಿ ಈ ದೇಶದಲ್ಲಿರುವವರೆಲ್ಲರಿಗೂ ಸಹ ಬಂದಿದೆ. ಆದ್ದರಿಂದ ಯಾರಲ್ಲಿಯೂ ಸಹ ತಾರತಮ್ಯವನ್ನು ಮಾಡದೇ ಮಾಧ್ಯಮಗಳ ಮಾಲೀಕರು ಯಾರೇ ಅಗಿದ್ದರೂ, ಯಾರ ವಿರುದ್ಧ ಇದ್ದರೂ ಸಹ ಅವರಿಗೂ ಸಹ ಸಮಾನಾಂತರವಾಗಿ ಜಾಹೀರಾತುಗಳನ್ನು ನೀಡುವ ವ್ಯವಸ್ಥೆ ಆಗಬೇಕು. ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ ಬೊಮ್ಮಾಯಿಯವರ ತಂದೆಯವರು Royist ನಾವೆಲ್ಲರೂ ಸಹ ಅದೇ ideology ಯಿಂದ ಬಂದವರು. ಮಾನ್ಯ ಮುಖ್ಯಮಂತ್ರಿಗಳಲ್ಲಿ ನನ್ನ ಮನವಿ ಏನೆಂದರೆ ಈಗ ರಾಜಕಾರಣದಲ್ಲಿ right-wing, left-wing ಇದ್ದೇ ಇರುತ್ತದೆ, ಹಾಗಾಗಿ ಇವತ್ತು ದೊಡ್ಡ ದೊಡ್ಡ ಪತ್ರಿಕೆಗಳನ್ನು ನಡೆಸುವುದೇ ಕಷ್ಟ. ದಯಮಾಡಿ ಸರ್ಕಾರ ಪತ್ರಿಕೆಗಳ ಯಾರ ಪರವಾಗಿದ್ದರೂ ಸಹ ಅವರಿಗೂ ಅವಕಾಶವನ್ನು ನೀಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ಮನವಿಯನ್ನು ಮಾಡಿಕೊಳ್ಳುತ್ತೇನೆ.

**ಶ್ರೀ ಜೆ.ಸಿ.ಮಾಧುಸ್ವಾಮಿ**:- ಮಾನ್ಯಸಭಾಪತಿಯವರೆ, ನಾವು ಮಾಧ್ಯಮ ಮತ್ತು ಪತ್ರಿಕಾರಂಗದ ಮಧ್ಯೆ ಅವರ ಪರ ಇವರ ಪರ ಎಂದು ಸರ್ಕಾರ ನಡೆಸುವವರು ಭಾವಿಸುವುದು ತಪ್ಪು ಎನ್ನುವುದು ಭಾವನೆ. ಆರೋಗ್ಯಕರವಾದ ಟೀಕೆಗಳನ್ನು ಮಾಧ್ಯಮದವರು ಮಾಡದೇ ಹೋದರೆ ಸರ್ಕಾರ ನಡೆಸುವವರಿಗೆ ಸಮಾಜದ ಪೂರ್ಣ ಮಾಹಿತಿ ದೊರೆಯುವುದಿಲ್ಲ ಎಂದು ನಂಬಿರುವವರಲ್ಲಿ ನಾವು ಸಹ ಇದ್ದೇವೆ. ಮಾನ್ಯ ಸದಸ್ಯರಾದ ಮೋಹನ ಕೊಂಡಜ್ಜಿಯವರು ಹೇಳುವಂತಹ ನಮ್ಮನ್ನು ಹೊಗಳುವವರಿಗೆ ಅವಕಾಶ ಕೊಟ್ಟು, ನಮ್ಮನ್ನು ತೆಗಳುವವರಿಗೆ ಕೊಡುವುದು ಬೇಡವೆನ್ನುವ ಸನ್ನಿವೇಶವನ್ನು ನಾವು ಸೃಷ್ಟಿ ಮಾಡಿರುವುದಿಲ್ಲ. ನಾವು ಕೆಲವೊಂದು criteria ಗಳನ್ನು ಇಟ್ಟುಕೊಂಡಿರುತ್ತೇವೆ, ಅದರಲ್ಲಿ fit in ಆದಾಗ ಖಂಡಿತಾ ಜಾಹೀರಾತುಗಳನ್ನು ನೀಡುತ್ತೇವೆ. ಇದರಲ್ಲಿ ಯಾವುದೇ ರಾಜಕಾರಣವನ್ನು ಮಾಡುವುದಿಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು**:-, ಶ್ರೀ ಕೆ.ಹರೀಶ್‌ಕುಮಾರ್‌ರವರ ಪ್ರಶ್ನೆಗೆ ಸಮಯ ಕೇಳಿದ್ದೀರಿ, ನಾಳೆ ಅಧಿವೇಶನದ ಕೊನೆಯ ದಿನ. ಅವರಿಗೆ ಯಾವಾಗ ಉತ್ತರವನ್ನು ಒದಗಿಸಿಕೊಡುತ್ತೀರಿ?

**ಶ್ರೀ ಅರೆಬೈಲ್ ಹೆಬ್ಬಾರ್, ಶಿವರಾಂ**:- ಮಾನ್ಯ ಸಭಾಪತಿಯವರೆ, ನಾಳೆ ಉತ್ತರ ಕೊಡಲು ಸಾಧ್ಯವಾಗದಿದ್ದಲ್ಲಿ, ಮಾನ್ಯ ಸದಸ್ಯರಿಗೇ ಉತ್ತರವನ್ನು ಒದಗಿಸಿಕೊಡಲಾಗುವುದು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ 115**
**ಉತ್ತರವನ್ನು ಲಗತ್ತಿಸಲಾಗುವುದು.**

**ಶ್ರೀ ಯು.ಬಿ.ವೆಂಕಟೇಶ್**:- ಮಾನ್ಯ ಸಭಾಪತಿಗಳೇ, ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಮಾನ್ಯ ಕಾನೂನು ಸಚಿವರು ನನಗೆ ಉತ್ತರಗಳನ್ನು ಒದಗಿಸಿದ್ದಾರೆ. ಬೆಂಗಳೂರು-ಮೈಸೂರು ಹೈವೆಯಲ್ಲಿರುವ ವೃಷಭಾವತಿ ನದಿಗೆ ಒಂದು ಅಡ್ಡ ಗೋಡೆಯನ್ನು ನಿರ್ಮಿಸಲು ಏಕೆ ಇಷ್ಟು ಸಮಯ ಆಗುತ್ತಿದೆ ಎನ್ನುವ ಪ್ರಶ್ನೆಯನ್ನು ನಾನು ಸರ್ಕಾರಕ್ಕೆ ಕೇಳಿದ್ದೇನೆ. ಕಳೆದ 2 ವರ್ಷಗಳಿಂದ ಕೂಡ ಈ ಕೆಲಸ ನಡೆಯುತ್ತಿದೆ. ಬಿಬಿಎಂಪಿಯವರು ಈ ಕೆಲಸಕ್ಕೆ ಏಕೆ ಇಷ್ಟು ನಿಧಾನ ಧೋರಣೆಯನ್ನು ತೋರಿಸುತ್ತಿದ್ದಾರೆ ಎನ್ನುವುದು ನನಗೆ ಗೊತ್ತಿಲ್ಲ. ಅದಕ್ಕೆ ಸಂಬಂಧಪಟ್ಟ ಫೋಟೋಗಳನ್ನು ಸದನದಲ್ಲಿ ತೋರಿಸುತ್ತೇನೆ. ಅಲ್ಲಿನ ಕೆಲಸವೇ ನಿಂತು ಹೋಗಿತ್ತು. ನಾನು ಸದನದಲ್ಲಿ ಪ್ರಶ್ನೆ ಕೇಳಿದ ಮೇಲೆ ನಿನ್ನೆಯ ದಿವಸ centring ಹೊಡೆದಿದ್ದಾರೆ. ಶ್ರೀ ಎಸ್.ಎಂ.ಕೃಷ್ಣರವರು ಮುಖ್ಯಮಂತ್ರಿಯಾಗಿದ್ದ ರ ಕಾಲದಲ್ಲಿ ಪಕ್ಕದಲ್ಲಿರುವ ವಿಕಾಸಸೌಧವನ್ನು 2 ವರ್ಷ 10 ತಿಂಗಳಿನಲ್ಲಿ ಕಟ್ಟಲಾಗಿದೆ. 500 ಮೀಟರಿನ ಒಂದು ತಡೆಗೋಡೆಯನ್ನು 2 ವರ್ಷಗಳಾದರೂ ಕಟ್ಟಿಲ್ಲ ಎಂದರೆ ಹೇಗೆ? ಈ ರಸ್ತೆಯನ್ನು ಸಿಂಗಲ್ ರೋಡ್ ಮಾಡಿ ಬಿಟ್ಟಿರುವುದರಿಂದ ಅಲ್ಲಿ ಸಾಕಷ್ಟು ಅಪಘಾತಗಳು ನಡೆಯುತ್ತಿವೆ. ಏಕೆ ಬಿಬಿಎಂಪಿಯವರು ಇಷ್ಟೊಂದು ನಿರ್ದಾಕ್ಷಿಣ್ಯ ಧೋರಣೆಯನ್ನು ತೋರಿಸುತ್ತಿದ್ದಾರೆ?

ನನ್ನ ಮತ್ತೊಂದು ಮನವಿ ಏನೆಂದರೆ ಮಾನ್ಯ ಬಿ.ಎಸ್. ಯಡಿಯೂರಪ್ಪನವರು ಮುಖ್ಯಮಂತ್ರಿ ಆದಾಗಿನಿಂದಲೂ ಸಹ ನಾನು ಬೆಂಗಳೂರು ನಗರಕ್ಕೆ ಒಬ್ಬರು ಉಸ್ತುವಾರಿ ಸಚಿವರನ್ನು ನೇಮಕ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ. ಏಕೆಂದರೆ ಮಾನ್ಯ ಮುಖ್ಯಮಂತ್ರಿಗಳಿಗೆ ಬೇಕಾದಷ್ಟು ಕೆಲಸ ಮತ್ತು ಹೆಚ್ಚು ಒತ್ತಡಗಳಿರುತ್ತವೆ. ಹೋದ ಅಧಿವೇಶನದಲ್ಲಿ ಮುಖ್ಯಮಂತ್ರಿಗಳು ಯಾವುದೇ ಖಾತೆಯನ್ನು ಇಟ್ಟುಕೊಳ್ಳಬಾರದೆಂದು ಮಾನ್ಯ ಹೆಚ್.ವಿಶ್ವನಾಥ್‌ರವರು ಹೇಳಿದ್ದರು. ಆದರೆ ಅದು ಅವರವರ ವಿವೇಚನೆಗೆ ಬಿಟ್ಟ ವಿಚಾರ. ಆದರೆ ಬೆಂಗಳೂರು ನಗರದ ಉಸ್ತುವಾರಿಯನ್ನು ಯಾರಾದರೂ ನಂಬಿಕಸ್ಥ ಸಚಿವರಿಗೆ ವಹಿಸಿಕೊಡಿ. ಏಕೆಂದರೆ ಬೆಂಗಳೂರು ನಗರದಲ್ಲಿ ಬಹಳಷ್ಟು ತೊಂದರೆಗಳಿವೆ. 500 ಮೀಟರಿನ ತಡೆಗೋಡೆಯನ್ನು 15 ತಿಂಗಳಿಂದಲೂ ಕಟ್ಟಲು ಸಾಧ್ಯವಾಗಿಲ್ಲ ಎಂದರೆ ಇದನ್ನು ಪೂರ್ಣಗೊಳಿಸಲು ಇನ್ನು ಎಷ್ಟು ದಿವಸಗಳು ಬೇಕು, ಇನ್ನು ಎಷ್ಟು ಜನರು ಸಾಯಬೇಕು? ಎಷ್ಟು ವಾಹನಗಳು ಹಾಳಾಗಬೇಕು? ಇದರ ಬಗ್ಗೆ ಹೇಳುವವರು, ಕೇಳುವವರು ಯಾರು ಇಲ್ಲವೇ? ಮೊದಲು ಕಾರ್ಪೊರೇಷನ್ ಇತ್ತು, ಅದಕ್ಕೆ ಚುನಾವಣೆ ನಡೆಯದ ಹಾಗೆ ಮಾಡಿದಿರಿ. ಕಾರ್ಪೊರೇಟರ್‌ಗಳಿದ್ದಿದ್ದರೆ ಜನರು ಅವರಿಗಾದರೂ ಕೆಲಸ ಆಗಲಿಲ್ಲವೆಂದು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೊಡೆಯುತ್ತಿದ್ದರು, ಯಾರು ಬೇಡ ಎಂದು ಕೇಸ್ ಹಾಕಿಸಿಕೊಂಡು ಹೋಗುತ್ತಾರೆ, ಇಲ್ಲಿ ಮಾಧುಸ್ವಾಮಿಯವರು ಚೆನ್ನಾಗಿ ಮಾತನಾಡಿ ಹೋಗುತ್ತಾರೆ. ಆ ಭಾಗದಲ್ಲಿ ಜನಪ್ರತಿನಿಧಿಗಳು ಸಹ ಇಲ್ಲ, ಅಧಿಕಾರಿಗಳು ಏನು ಮಾಡುತ್ತಿದ್ದಾರೆ? ಈ ಕೆಲಸ ನಿಧಾನ ಆಗುತ್ತಿರುವುದಕ್ಕೆ ಅಧಿಕಾರಿಗಳ ಮೇಲೆ ಏನು ಕ್ರಮ ಕೈಗೊಳ್ಳಲಾಗಿದೆ? ಇದರಿಂದ ಇಷ್ಟು ಜನರಿಗೆ ತೊಂದರೆ ಆಗಿದೆ. ಇದರ ಬಗ್ಗೆ ಸಚಿವರು ಉತ್ತರ ಹೇಳಲಿ. ಆನಂತರ ನಾನು ಮಾತನಾಡುತ್ತೇನೆ.

**ಶ್ರೀ ಜೆ.ಸಿ.ಮಾಧುಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು, ಮುಖ್ಯಮಂತ್ರಿಗಳ ಪರವಾಗಿ):-** ಮಾನ್ಯ ಸಭಾಪತಿಯವರೆ, 2020ನೇ ಸಾಲಿನಲ್ಲಿ ವೃಷಭಾವತಿ ನದಿಗೆ ನಿರ್ಮಿಸಿದ್ದ ತಡೆಗೋಡೆ collapse ಆಗಿದೆ. ಅದರ ಬಗ್ಗೆ ಬಿಬಿಎಂಪಿಯವರು ಕ್ರಮ ಕೂಡ ಕೈಗೊಂಡಿದ್ದಾರೆ. ಟೆಂಡರ್ ಕರೆದು ಈಗಾಗಲೇ 210 ಮೀಟರ್‌ನ ಪೈಕಿ 150 ಮೀಟರ್ ಗೋಡೆಯನ್ನು ನಿರ್ಮಿಸಲಾಗಿದೆ.

**ಶ್ರೀ ಯು.ಬಿ.ವೆಂಕಟೇಶ್**:- ಅಲ್ಲಿ ಯಾವುದೇ ಕೆಲಸ ಆಗಿಲ್ಲ.

**ಶ್ರೀ ಜೆ.ಸಿ.ಮಾಧುಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು, ಮುಖ್ಯಮಂತ್ರಿಗಳ ಪರವಾಗಿ):-** ಅಲ್ಲಿ ಕೆಲಸ ಆಗಿಲ್ಲ ಎಂದರೆ ನಮಗೆ ಉತ್ತರ ನೀಡಿದವರ ಮೇಲೆ ಕ್ರಮ ಜರುಗಿಸಲಾಗುವುದು. ಸರ್ಕಾರಕ್ಕೆ ಉತ್ತರ ಕೊಟ್ಟು, ಅಲ್ಲಿ ಕೆಲಸ ಆಗಿಲ್ಲ ಎಂದರೆ, we will certainly take action. ಇನ್ನೂ ೬೦ ಮೀಟರ್ ಉದ್ದದ ತಡೆಗೋಡೆ ಕಟ್ಟುವುದಕ್ಕೆ ಒಂದೇ ಸಮನೇ ಮಳೆ ಆಗಿ, ಒಂದೇ ಸಮನೆ ನೀರು ಹರಿಯುತ್ತಿದ್ದು, ಫೌಂಡೇಶನ್ ಎತ್ತರಿಸಲಿಕ್ಕೆ ಕಷ್ಟ ಆಗುತ್ತಿದೆ. ಹೇಗಾದರೂ ಮಾಡಿ ನಾವು ದಿನಾಂಕ 31-12-2021ರೊಳಗೆ ಈ ಕೆಲಸ ಮುಗಿಸಿಕೊಡುವುದಾಗಿ ಅಧಿಕಾರಿಗಳು ನಮಗೆ ಉತ್ತರ ನೀಡಿದ್ದಾರೆ. ಅದೇ ಉತ್ತರವನ್ನು ನಾನು ಸದನಕ್ಕೆ ನೀಡುತ್ತಿದ್ದೇನೆ. Please allow us, ದಿನಾಂಕ 31-12-2021ರೊಳಗೆ ಈ ಕೆಲಸ ಮುಗಿಸಿ ಕೊಡುತ್ತೇವೆ.

(ಮುಂದು)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(933)/23-9-2021/11-30/ಎಲ್‌ಎಂ/ಬಿಎನ್‌ಎಸ್

**ಶ್ರೀ ಯು.ಬಿ.ವೆಂಕಟೇಶ್**:- ಮಾನ್ಯ ಸಭಾಪತಿಗಳೆ, ಮುಗಿಸಿಕೊಟ್ಟರೆ ಬಹಳ ಒಳ್ಳೆಯದು. ಆದರೆ ಅಲ್ಲಿ ಕೆಲಸ ನಡೆಯುತ್ತಿರುವ ವೇಗವನ್ನು ನೋಡಿದರೆ ಮಾನ್ಯ ಸಚಿವರು ಹೇಳಿದ

ರೀತಿಯಲ್ಲಿ ಕೆಲಸವಾಗುವುದಿಲ್ಲ ಎಂದು ನನಗನ್ನಿಸುತ್ತದೆ. ಮಾನ್ಯ ಸಂದೇಶ ನಾಗರಾಜರವರು ಪ್ರತಿದಿನ ಅದೇ ರಸ್ತೆಯಲ್ಲಿ ಓಡಾಡುತ್ತಾರೆ ಅವರನ್ನೇ ಕೇಳಿ.

**ಶ್ರೀ ಜೆ.ಸಿ.ಮಾಧುಸ್ವಾಮಿ**:- ಮಾನ್ಯ ಸಭಾಪತಿಗಳೆ, ಮಾನ್ಯ ಮುಖ್ಯಮಂತ್ರಿಗಳು ಈ ಸದನದಲ್ಲಿದ್ದಾರೆ. ಅವರು ಇಷ್ಟು ದಿನಗಳಲ್ಲಿ ಮುಗಿಸುತ್ತೇವೆ ಎಂದು ಉತ್ತರವನ್ನು writing ನಲ್ಲಿ ಕೊಟ್ಟಿದ್ದಾರೆ. ಹೀಗಾಗಿ ಸದಸ್ಯರು ವಿಶ್ವಾಸವನ್ನು ಇಡಬೇಕಾಗುತ್ತದೆ.

**ಶ್ರೀ ಯು.ಬಿ.ವೆಂಕಟೇಶ್**:- ಮಾನ್ಯ ಸಭಾಪತಿಗಳೆ, ಹೊಸ ಮುಖ್ಯಮಂತ್ರಿಗಳು ಬಂದಿದ್ದಾರೆ. ಅವರ ಮೇಲೆ ನಾವು ವಿಶ್ವಾಸವಿಡುತ್ತೇವೆ. ಆದರೆ ಜನರಿಗೆ ತೊಂದರೆಯಾಗಬಾರದು ಎನ್ನುವುದು ನಮ್ಮ ಕಳಕಳಿಯ ಮನವಿ. ಅಲ್ಲಿ ಸಿಂಗಲ್ ವೇ ಇದೆ. ಒಂದುವರೆ ವರ್ಷವಾಯಿತು ಇನ್ನು ಕೆಲಸವಾಗುತ್ತಿಲ್ಲ. ಜನರು ದಿನ ಸಾಯುತ್ತಿದ್ದಾರೆ. ಮೈಸೂರು-ಬೆಂಗಳೂರು ಮಧ್ಯೆ ಭಾವನಾತ್ಮಕ ಸಂಬಂಧವನ್ನು ಇಟ್ಟುಕೊಂಡುವರು ಪ್ರತಿದಿನ ಓಡಾಡುವವರು ಇದ್ದಾರೆ. ಆ ಜಂಕ್ಷನ್‌ನಲ್ಲಿ ಬೇಕಾದಷ್ಟು ಸಮಯ ನಿಲ್ಲಬೇಕಾಗುತ್ತದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## <u>ತಡೆ ಹಿಡಿಯಲಾದ ಪ್ರಶ್ನೆಗಳು</u>

### ಪ್ರಶ್ನೆ ಸಂಖ್ಯೆ: 598

### (ಉತ್ತರವನ್ನು ಲಗತ್ತಿಸಲಾಗಿದೆ)

**ಶ್ರೀ ಪಿ.ಆರ್.ರಮೇಶ್**:- ಮಾನ್ಯ ಸಭಾಪತಿಗಳೆ, ಬೆಂಗಳೂರು ನಗರದಲ್ಲಿರುವ ರಸ್ತೆಗಳ ಬಗ್ಗೆ ನಾನು ಪ್ರಶ್ನೆಯನ್ನು ಕೇಳಿದ್ದೇನೆ. ಬೆಂಗಳೂರು ನಗರದ ಸುತ್ತ-ಮುತ್ತ ಇರುವ ರಸ್ತೆಗಳು ಹೇಗೆ ಇವೆ ಎನ್ನುವುದನ್ನು ತಿಳಿದುಕೊಂಡಿರುವಂತಹ ಶಾಸಕರೇ ಹೆಚ್ಚು ಜನ ಈ ಸದನದಲ್ಲಿದ್ದಾರೆ. ಪ್ರತಿದಿನ ಈ ರಸ್ತೆಗಳ ಬಗ್ಗೆ ಪೇಪರ್‌ನಲ್ಲಿ ಸುದ್ದಿ ಬರುತ್ತವೆ. "ಅಧಿಕಾರಿಗಳಿಗೆ ದಂಡೆಯಾದರೆ ಗುಂಡಿಗಳಿಗೆ ಮುಕ್ತಿ' ಎನ್ನುವ ಹೆಡ್ಡಿಂಗ್‌ನಲ್ಲಿ ಇವತ್ತು ಪೇಪರ್‌ನಲ್ಲಿ ಸುದ್ದಿ ಬಂದಿದೆ. ಇನ್ನು ಸಾಕಷ್ಟು ಸುದ್ದಿಗಳು ರಸ್ತೆ ಬಗ್ಗೆ ಬರುತ್ತಿವೆ. ಎಲ್ಲವನ್ನು ನಾನು ಈಗ ತಂದಿರುವುದಿಲ್ಲ. ಪ್ರತಿ ದಿನ ಈ ರೀತಿ ಬೆಂಗಳೂರಿನ ನಾಗರೀಕರಿಗೆ ಆಘಾತವಾಗುತ್ತಿದೆ. ಪ್ರತಿ ದಿನ ಒಬ್ಬೊಬರು ಸಾಯುತ್ತಿದ್ದಾರೆ. ನಿನ್ನೆ ಇಲ್ಲ ಮೊನ್ನೆ ಒಬ್ಬರು ಈ ಗುಂಡಿ ಅಪಘಾತದಿಂದ ಸತ್ತರು. ೮೦೦ ಚದರ ಕಿ.ಮೀ. ರಸ್ತೆ ನಿರ್ಮಾಣ ಮಾಡಲು ಆಡಳಿತಾತ್ಮಕ ಮತ್ತು ತಾಂತ್ರಿಕವಾಗಿ ಒಪ್ಪಿಗೆ ಕೊಟ್ಟಿರುವುದು, ೨೦೧೫-೧೬ರಿಂದ ಇವತ್ತಿನವರೆಗೆ ಖರ್ಚು ಮಾಡಿರುವುದು ಎಷ್ಟು ಎಂದು ಕೇಳಿರುವುದಕ್ಕೆ, ಕೇಂದ್ರ ಸರ್ಕಾರದಿಂದ, ರಾಜ್ಯ ಸರ್ಕಾರದಿಂದ ಮತ್ತು ಪಾಲಿಕೆಯಿಂದ ಒಟ್ಟು ೨೦೦೬೦.೦೨ ಕೋಟಿ ರೂಪಾಯಿಗಳನ್ನು ೫ ವರ್ಷಗಳಲ್ಲಿ ರಸ್ತೆ ನಿರ್ಮಾಣ ಮತ್ತು ನಿರ್ವಹಣೆಗೆ ಖರ್ಚು ಮಾಡಲಾಗಿದೆ ಎಂದು ಹೇಳಿದ್ದಾರೆ. ಬೆಂಗಳೂರು ಮಹಾನಗರದ ವ್ಯಾಪ್ತಿಯಲ್ಲಿರುವ ಎಲ್ಲಾ ರೀತಿಯ ಡಾಂಬರೀಕರಿಸಿದ ರಸ್ತೆಗಳ ಒಟ್ಟು ಉದ್ದವೆಷ್ಟು ಎನ್ನುವುದಕ್ಕೆ ೧೧೨೮೪.೦೫ ಕಿ.ಮೀ. ಎಂದು ಉತ್ತರ ಕೊಟ್ಟಿದ್ದಾರೆ. ಇದರಲ್ಲಿ primary road, secondary road, tertiary road, arterial and sub-arterial roads ಮತ್ತು ಎಲ್ಲಾ ರೀತಿಯ ವಾರ್ಡ್ ರಸ್ತೆಗಳು ಸೇರಿ ಇಷ್ಟು ಕಿ.ಮೀ ಇದೆ. ಈ ಪೈಕಿ ಚಾಲನ ಸೂಕ್ತ arterial and sub-arterial ರಸ್ತೆಗಳ ಒಟ್ಟು ಉದ್ದ ೧೪೪೪.೪೪ ಕಿ.ಮೀ. ಗಳಾಗಿದೆ ಎಂದು ಉತ್ತರ ಕೊಟ್ಟಿದ್ದಾರೆ. IRC (Indian Road Congress) ಪ್ರಕಾರ ೫ ವರ್ಷಗಳ ಕಾಲ ಒಂದು ರಸ್ತೆ ಚೆನ್ನಾಗಿರಬೇಕು. ಇವರು ಹಣ ಖರ್ಚು ಮಾಡಿರುವುದನ್ನು ನೋಡಿದಾಗ ೫ ವರ್ಷದಲ್ಲಿ ೧ ಕಿ.ಮೀ. ಗೆ ಸರಾಸರಿ ಒಂದುವರೆಯಿಂದ ಎರಡು ಕೋಟಿ ರೂಪಾಯಿಗಳು ಖರ್ಚಾಗಿವೆ. ಇವರು ಹಣ ಖರ್ಚು ಮಾಡಿರುವುದನ್ನು ನೋಡಿದರೆ, ಬೆಂಗಳೂರಿನಲ್ಲಿರುವ ಎಲ್ಲಾ ರಸ್ತೆಗಳು ಉತ್ತಮ ಸ್ಥಿತಿಯಲ್ಲಿರಬೇಕಾಗಿತ್ತು. ನನ್ನ ಇನ್ನೊಂದು ಪ್ರಶ್ನೆ, ಮಾನ್ಯ ಮುಖ್ಯಮಂತ್ರಿಗಳು ಗಮನಿಸಬೇಕು, ಡಾಂಬರೀಕರಣದ (ವೈಟ್ ಟಾಂಪಿಗ್ ಮೇಲ್ಸೇತುವೆ, ಸಬ್ ವೇ, ಗ್ರೇಡ್ ಸೆಪರೇಟರ್) ರಸ್ತೆಗಳ ಪೈಕಿ thermal cracks,

potholes, stripping, debonding, bleeding, reveling ಇಲ್ಲದಂತಹ ಅಥವಾ ದುರಸ್ತಿಗೆ ಒಳಪಡದೆ ಇರುವ ಸುಮಾರು ೧ ಕಿ.ಮೀ. ಉದ್ದದ ರಸ್ತೆಯು ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಇದೆಯೇ; ಇದ್ದಲ್ಲಿ, ಈ ರೀತಿಯ ಉತ್ತಮ ರಸ್ತೆಗಳ ಪಟ್ಟಿಯನ್ನು ನೀಡುವುದು ಎಂದು ಕೇಳಿದ್ದೇನೆ. ಅದಕ್ಕೆ ಉತ್ತರದಲ್ಲಿ ಬೆಂಗಳೂರು ನಗರದಲ್ಲಿ ಇಂತಹ ಒಂದು ಕಿ.ಮೀ. ಯಾವುದೇ ರಸ್ತೆ ಇರುವುದಿಲ್ಲ ಎಂಬಂತೆ ಹೇಳಿದ್ದಾರೆ. ಅಲ್ಲದೆ ತಾಂತ್ರಿಕ ತಜ್ಞರ ಸಲಹೆಯಂತೆ ಹೆಚ್ಚಿನ ಅಧ್ಯಯನ ಕೈಗೊಂಡು ವರದಿಯನ್ನು ತಯಾರಿಸಬೇಕಾಗಿರುತ್ತದೆ ಎಂದು ಹೇಳಿದ್ದಾರೆ.

**ಶ್ರೀ ಜೆ.ಸಿ.ಮಾಧುಸ್ವಾಮಿ**:- ಮಾನ್ಯ ಸಭಾಪತಿಗಳೆ, ಇಂತಹ ರಸ್ತೆಗಳು ಒಂದು ಕಿ.ಮೀ. ಇವೆ ಇಲ್ಲ ಎಂದು ಹೇಳಿರುವುದಿಲ್ಲ. ಉತ್ತರದಲ್ಲಿ ಸ್ಪಷ್ಟವಾಗಿ ಹೇಳಿದ್ದೇವೆ. ಕಾಲ-ಕಾಲಕ್ಕೆ ಬೆಂಗಳೂರಿನಲ್ಲಿ services ಹಾಗೂ ಈ ಎಲ್ಲಾ ವ್ಯವಸ್ಥೆಗಳನ್ನು ಮಾಡಬೇಕು ಎನ್ನುವ ಸಂದರ್ಭದಲ್ಲಿ ಒಂದಿಲ್ಲಾ ಒಂದು ಶಿಫಾರಸ್ಸುಗಳು ಬಂದು, ಮಾರ್ಪಾಡುಗಳು ಆಗುತ್ತಿರುವುದರಿಂದ project delay ಆಗಿದೆ. ತಜ್ಞರು, ಸಾರ್ವಜನಿಕರು ಕೊಡುವ ಸಲಹೆಗಳನ್ನು ಗಣನೆಗೆ ತೆಗೆದುಕೊಂಡು ಈ ಯೋಜನೆಗಳನ್ನು ಕೈಗೊಳ್ಳಬೇಕಾಗುತ್ತದೆ. Not only in Bengaluru, ಎಲ್ಲಾ smart cities ನಲ್ಲಿ ಸ್ಥಿತಿಯು ಹೀಗೆ ಇದೆ. ತಜ್ಞರು ಏನೋ ಸಲಹೆ ಕೊಡುತ್ತಾರೆ, ಇನ್ನೊಬ್ಬರು ಇನ್ನೊಂದು ಹೇಳುತ್ತಾರೆ. ಯಾರು ಏನು opinion ಹೇಳಿದರು ನಾವು ಕೇಳಲೇಬೇಕಾಗುತ್ತದೆ. So, we are not able to complete any work in any smart city. ಅದಕ್ಕೆ ನಾವು ಉತ್ತರದಲ್ಲಿ, thermal cracks, potholes, stripping, debonding, bleeding, reveling ಇವೆಲ್ಲವುಗಳಿರದೇ ರಸ್ತೆ ಮಾಡಬೇಕೆಂದರೆ, ಒಂದಿಲ್ಲೊಂದು ಮಾರ್ಪಾಡುಗಳನ್ನು ಮಾಡಲೇಬೇಕಾಗುತ್ತದೆ. ಆದ್ದರಿಂದ correct ಆಗಿ ಉತ್ತರ ಕೊಡಲು ಸ್ವಲ್ಪ ಕಷ್ಟವಾಗುತ್ತದೆ. ಬೆಂಗಳೂರಿನಲ್ಲಿ ಒಂದು ಕಿ.ಮೀ. ಕೂಡಾ ಮಾಡಲು ಆಗುತ್ತಿಲ್ಲ ಎಂದು ಭಾವಿಸಬಾರದು. ಅದಕ್ಕಾಗಿ ಇವೆಲ್ಲವನ್ನು ಸೇರಿಸಿ ನಾವು ಈಗ Consultant ಅನ್ನು ನೇಮಕ ಮಾಡಿದ್ದೇವೆ. ಅವರಿಗೆ ಈಗಾಗಲೇ ಒಂದು ಕೋಟಿ ರೂಪಾಯಿಗಳ remuneration ನನ್ನು ನಿಗದಿಗೊಳಿಸಿದ್ದೇವೆ. ಅವರ ಮೇಲ್ವಿಚಾರಣೆಯಲ್ಲಿ ಇಂಡಿಯನ್ ರೋಡ್ ಕಾಂಗ್ರೆಸ್‌ನ ಶಿಷ್ಟಾಚಾರ ಮತ್ತು ನಿಯಮ ಹಾಗೂ MoRTH (Ministry of Road Transport and Highways) ವಿಶಿಷ್ಟ ವಿವರಣೆಗಳಂತೆ ಅನುಷ್ಠಾನಗೊಳಿಸುತ್ತೇವೆ. ಆದಷ್ಟು ಬೇಗ ಯೋಜನೆಯನ್ನು ಅನುಷ್ಠಾನಗೊಳಿಸುತ್ತೇವೆ ಎಂದು ಹೇಳಿದ್ದೇವೆ. ಅದರ ಪ್ರಕಾರ ನಾವು ಕೆಲಸವನ್ನು ಮಾಡುತ್ತೇವೆ.

"ತಿದ್ದುಪಡಿಯಾಗದ ಪ್ರತಿ; ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಗಳೆ, ಮಾನ್ಯ ಸಚಿವರು ಕೊಟ್ಟಿರುವ ಉತ್ತರ ಸರಿ ಇದೆ ಎಂದು ಹೇಳಿದರು ಸಹ, ಆದರೆ ಸರಿಯಾದ ರೀತಿ-ನಿಯಮಗಳನ್ನು ರೂಪಿಸಿಕೊಳ್ಳದೆ ೨೦೦೬೦.೦೨ ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗುತ್ತಿದೆ. ಮಾಗಡಿ ರಸ್ತೆಯನ್ನು ೫ ತಿಂಗಳ ಹಿಂದೆ asphalting ಮಾಡಿ ಉತ್ತಮ ಸ್ಥಿತಿಗೆ ತಂದರು. ಆದರೆ ೩ ತಿಂಗಳಲ್ಲಿ ರಸ್ತೆಗಳಲ್ಲಿ potholes ಬಿದ್ದಿವೆ. ಅದರ ಬಗ್ಗೆ ನಾನು ಕಮೀಷನರ್‌ರವರಿಗೆ ಪತ್ರವನ್ನು ಬರೆದಿದೆ. ಎರಡು ತಿಂಗಳಿಂದ ಆ pothole ಗಳನ್ನು patch ಮಾಡುತ್ತಲೇ ಇದ್ದಾರೆ. ಎರಡು ತಿಂಗಳಲ್ಲಿ ನಾಲ್ಕು ಬಾರಿ patch ಮಾಡಿರಬಹುದು. ರೋಡ್ ಕಟ್ಟಿಂಗ್ ಬಗ್ಗೆ ಹೇಳಿದರು. ರೋಡ್ ಕಟ್ಟಿಂಗ್ ಆಗಬಹುದು, ಇನ್ನೊಂದು ಏಜೆನ್ಸಿ ಬರಬಹುದು ಅವರು ರಸ್ತೆಯನ್ನು ಅಗೆಯಬಹುದು. ಆದರೆ road cutting ಆಗದೆ ಅಲ್ಲಿ ಹಲವಾರು ರೀತಿಯಲ್ಲಿ, for example, water stagnation ಆಗುತ್ತಿವೆ. ಮಳೆ ಬಂದಾಗ ಮಳೆ ಸರಾಗವಾಗಿ ಹರಿಯಲು ಆಗದೆ ಇರುವುದು, ಸರಿಯಾದ chamber, drainage system ಇಲ್ಲದೇ ಇರುವುದು ಈ ರೀತಿಯ ತಾಂತ್ರಿಕ ತೊಂದರೆ ಇಲ್ಲದಂತಹ ಈ ಸಮಸ್ಯೆಗಳೇ ಕೆಲಸಕ್ಕೆ ಅಡ್ಡಿಯಾಗುತ್ತಿರುವುದಕ್ಕೆ ಮೂಲ ಕಾರಣವಾಗಿದೆ. ಇಂಡಿಯನ್ ರೋಡ್ ಕಾಂಗ್ರೆಸ್‌ನ ಶಿಷ್ಟಾಚಾರ ಮತ್ತು ನಿಯಮ ಹಾಗೂ MoRTH ವಿಶಿಷ್ಟ ವಿವರಣೆಗಳಂತೆ ಅನುಷ್ಠಾನಗೊಳಿಸುತ್ತೇವೆ. ಅದರ ಪ್ರಕಾರ ನಾವು ಕೆಲಸವನ್ನು ಮಾಡುತ್ತೇವೆ ಎಂದು ಸರ್ಕಾರ ಹೇಳಬಹುದು. ಆದರೆ ಇದು ಕೇವಲ ಪೇಪರ್‌ನಲ್ಲಿ ಆಗುತ್ತಿದೆ. ಆದರೆ ತಾವು ಮಾಡುತ್ತಿರುವ ಕೆಲಸದ specification ಅನ್ನು on the ground ನಾವು ಕಾಣುತ್ತಿಲ್ಲ. ಗುತ್ತಿಗೆದಾರರಿಗೆ ಹಣ ಕೊಡಲು ಮಾತ್ರ ಈ ಅಂದಾಜುಗಳನ್ನು ಮಾಡಲಾಗುತ್ತಿದೆ. ವಾಹನ ಸಂಚಾರಕ್ಕೆ ಅಡಚಣೆಯಾಗುತ್ತಿರುವುದು, ಜನರಿಗೆ ತೊಂದರೆಯಾಗುತ್ತಿರುವುದು, ಸಾವು-ನೋವುಗಳು ಜಾಸ್ತಿಯಾಗುತ್ತಿವೆ. ಇದನ್ನು ತಡೆಗಟ್ಟಲು ಯಾವುದಾದರೂ ಒಂದು concrete ರೀತಿಯಲ್ಲಿ ಕೆಲಸ ಮಾಡಲು ಸರ್ಕಾರ ಒಪ್ಪಿಕೊಳ್ಳಬೇಕು.

**ಶ್ರೀ ಬಸವರಾಜ ಎಸ್.ಬೊಮ್ಮಾಯಿ(ಮುಖ್ಯಮಂತ್ರಿಗಳು**:- ಮಾನ್ಯ ಸಭಾಪತಿಗಳೆ, ಗೌರವಾನ್ವಿತ ಸದಸ್ಯರಾದ ಶ್ರೀ ಪಿ.ಆರ್.ರಮೇಶ್‌ರವರು ಬಹಳ ಒಳ್ಳೆಯ ಪ್ರಶ್ನೆಯನ್ನು ಕೇಳಿದ್ದಾರೆ. ಇದು ಸಾರ್ವಜನಿಕರ ಮನಸ್ಸಿನಲ್ಲಿ ಕಾಡುತ್ತಿರುವಂತಹ ಪ್ರಶ್ನೆಯಾಗಿದೆ. ಇದರಲ್ಲಿ ಎರಡು ಅಂಶಗಳು ಇವೆ. ಒಂದು ಬೇರೆ-ಬೇರೆ ಕಾರಣದಿಂದ total works complete ಮಾಡಲು ತಡವಾಗಿದೆ. ಎರಡನೆಯದು ಗುಣಮಟ್ಟದ ಬಗ್ಗೆ.

(**ಮುಂದು**)

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(934)23-09-2021(11-40)bsd-bns

**ಶ್ರೀ ಬಸವರಾಜ ಬೊಮ್ಮಾಯಿ (ಮುಂದು):**

ಮಾನ್ಯ ಸದಸ್ಯರು ಬಹಳ technical ಆಗಿ ಪ್ರಶ್ನೆಯನ್ನು ಕೇಳಿದ್ದಾರೆ. Thermal cracks, potholes, stripping, debonding, bleeding, raveling ಇವುಗಳು ಇಲ್ಲದೇ ಇರುವ ಒಂದು ರಸ್ತೆ ಇಡೀ ಭಾರತ ದೇಶದಲ್ಲಿಯೇ ಇಲ್ಲ, ಇವುಗಳಲ್ಲಿ ಯಾವುದಾದರೊಂದರಲ್ಲಿ ಸಿಕ್ಕಿಹಾಕಿಕೊಳ್ಳಬೇಕಾಗುತ್ತದೆ. The member has asked a very intelligent question. ಸಂಪೂರ್ಣ ಡಾಂಬರೀಕರಣದ ರಸ್ತೆ ವಿವರ ಕೊಡಬಹುದು. ಆದರೆ thermal cracks ಅಥವಾ ಯಾವುದೋ ಒಂದು ಸಣ್ಣ potholes ಆಗಿರುತ್ತದೆ, potholes ಸರಿ ಮಾಡಬಹುದು, ಆದರೆ stripping ಇವೆಲ್ಲಾ ಇರುತ್ತದೆ. I agree that ಬೆಂಗಳೂರಿನ ರಸ್ತೆಗಳ ಬಗ್ಗೆ ಹಲವಾರು ಬಾರಿ ಚರ್ಚೆಯಾಗುತ್ತದೆ, ಯಾವುದೇ ವ್ಯವಸ್ಥೆ ಅಥವಾ ಸರ್ಕಾರಗಳು ಇದ್ದರೂ ಬೆಂಗಳೂರಿನ ರಸ್ತೆಗಳ ಬಗ್ಗೆ ಜನ ಪ್ರತಿನಿಧಿಗಳು ಬಹಳಷ್ಟು criticism ಅನ್ನು ತೆಗೆದುಕೊಳ್ಳುತ್ತಿದ್ದೇವೆ. ಅವರು ಸರಿಯಾಗಿ ಮಾಡಬೇಕೆಂದೂ ಸಹ ಹೇಳಿದರು. ಮಾನ್ಯ ಸದಸ್ಯರ ಪ್ರಶ್ನೆ ಬಂದ ನಂತರ ನಾನು ಒಂದು ಯೋಚನೆಯನ್ನು ಮಾಡಿದ್ದು, complete ಆಗಿ arterial, sub arterial and main roads within the wards, ಇವುಗಳ ಬಗ್ಗೆ ಸಂಪೂರ್ಣವಾಗಿ ಒಂದು road maintenance audit ಮಾಡಬೇಕೆಂದು ಮಾಡಿದ್ದೇನೆ. Road maintenance audit ಅನ್ನೇ ಮಾಡಬೇಕು. ಅಂದರೆ ಯಾವಾಗ ಪ್ರಾರಂಭವಾಯಿತು; ಎಷ್ಟು estimate ಇತ್ತು; ಯಾವಾಗ complete ಆಯಿತು; ಎಷ್ಟು ವರ್ಷ ಅವರು maintenance ಮಾಡಬೇಕಾಗಿತ್ತು; ಆ maintenance ಸಮಯದಲ್ಲಿ ಎಷ್ಟು ಸಾರಿ repair ಆಗಿದೆ; pothole ಗಳು ಎಷ್ಟು ಸಾರಿ fill up ಆಗಿದೆ; ಇದಕ್ಕೆ ಕಾರಣ ಯಾರು; ಯಾವ agency ಕೆಲಸ ಮಾಡಿದೆ, ಯಾವ contractor ಗಳು ಕೆಲಸ ಮಾಡಿದ್ದಾರೆ; ಇದಕ್ಕೆ ಸಂಬಂಧಪಟ್ಟ ಉಸ್ತುವಾರಿ engineer ಗಳು ಯಾರು; I will fix the responsibility on the officers. Not only this, ಈಗ ಮಾನ್ಯ ಸದಸ್ಯರು ಮಾಗಡಿ ರಸ್ತೆ ಸೇರಿದಂತೆ ಒಂದೆರಡು ವಿಚಾರಗಳ ಬಗ್ಗೆ ಹೇಳಿದರು, ಇದರ ಬಗ್ಗೆ ಖಂಡಿತ ನಾನು ತನಿಖೆ ಮಾಡಿಸುತ್ತೇನೆ. ಯಾರೇ ಇದ್ದರೂ ತಪ್ಪಿತಸ್ಥ ಅಧಿಕಾರಿಗಳ ಮೇಲೆ ಕ್ರಮ ಜರುಗಿಸುತ್ತೇನೆ.

**ಸಭಾಪತಿಯವರುಃ**- ಶ್ರೀ ಆಯನೂರು ಮಂಜುನಾಥ ರವರು ಇಲ್ಲ.

**ಶ್ರೀ ಪಿ.ಆರ್. ರಮೇಶ್**:- ಮಾನ್ಯ ಸಭಾಪತಿಯವರೇ, road history ಯನ್ನು maintain ಮಾಡಿದರೆ ಪ್ರತಿಯೊಂದು ಹಂತದಲ್ಲಿಯೂ ಮಾಹಿತಿ ಸಿಗುತ್ತದೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಸವರಾಜ ಬೊಮ್ಮಾಯಿಃ-** ಹೆಸರು ಮಾತ್ರ ಬೇರೆಯಾಗಿದ್ದು, ಅದನ್ನೇ ನಾನು road audit ಎಂದು ಹೇಳಿದ್ದೇನೆ. Road history ಎಂದರೂ ಅದೇ ಅರ್ಥವನ್ನು ಕೊಡುವುದರಿಂದ ಇವೆರಡು ಒಂದೇ ಆಗಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆಃ 22**

**(ಉತ್ತರವನ್ನು ಲಗತ್ತಿಸಿದೆ)**

**ಶ್ರೀ ಯು.ಬಿ. ವೆಂಕಟೇಶ್**:- ಮಾನ್ಯ ಸಭಾಪತಿಯವರೇ, ಉತ್ತರವನ್ನು ಒದಗಿಸಿದ್ದು, ರಾಜೀವ್ ಗಾಂಧಿ stadium ಅನ್ನು ಬಸವನಗುಡಿ ಪ್ರದೇಶದಲ್ಲಿ ೨೦೦೪ ನೇ ಇಸವಿಯಲ್ಲಿ ಶ್ರೀಯುತ ಎಸ್.ಎಂ. ಕೃಷ್ಣರವರ ಕಾಲದಲ್ಲಿ ನಿರ್ಮಾಣ ಮಾಡಲಾಯಿತು. ಅದಾದ ಮೇಲೆ ಅಲ್ಲಿ ಒಂದು ಸಾರಿ international event ನಡೆಯಿತು. ಅಲ್ಲಿಂದ ಇಲ್ಲಿಯವರೆಗೂ ಹಾಳು ಬಿದ್ದ garden ಆಗಿದೆ. ಮೊದಲಿನ ಮೂರ್ನಾಲ್ಕು ವರ್ಷ Corporation ನವರಿಗೂ ಮತ್ತು contractor ಗೂ ಗಲಾಟೆ ಆಗಿ ಬಾಗಿಲು ಹಾಕಿದ್ದರು. ಅದಾದ ಮೇಲೆ ಮೂರು ವರ್ಷ University ಗೆ ಕೊಡುತ್ತಾರೆ. ಹಂಪಿಯನ್ನು ಕೊಳ್ಳೆ ಹೊಡೆದಂತೆ ಅಲ್ಲಿರುವ instruments, ಇನ್ನೊಂದು-ಮತ್ತೊಂದು ಎಲ್ಲವೂ ಹೋಗುತ್ತದೆ. ೧೫ ವರ್ಷಗಳಿಂದ ಜನ ಪ್ರತಿನಿಧಿಗಳು ಆ ಕಡೆ ತಲೆ ಹಾಕುವುದಿಲ್ಲ. ಇವತ್ತು ಅಲ್ಲಿ ಆಜುಬಾಜಿನ ಜನರು ಭಯಭೀತರಾಗಿದ್ದಾರೆ. ಏಕೆಂದರೆ ಅಷ್ಟು ಅನೈತಿಕ ಚಟುವಟಿಕೆಗಳು ಅಲ್ಲಿ ನಡೆಯುತ್ತಿವೆ. ಕೆಲವೇ ಮಕ್ಕಳು exercise ಮಾಡಲು ಅಲ್ಲಿಗೆ ಹೋಗುತ್ತಾರೆ. ಅಲ್ಲಿ current ಇಲ್ಲ, ನೀರು ಇಲ್ಲ, ಶೌಚಾಲಯ ಇಲ್ಲ. ಒಬ್ಬ international level player ಹಾಗೂ ಒಬ್ಬ national level player ಒಬ್ಬರು ಸ್ವಂತ ದುಡ್ಡಿನಿಂದ ಸಣ್ಣ toilet ವ್ಯವಸ್ಥೆ ಮಾಡಿಕೊಂಡು ಆಟ ಆಡುವ ವ್ಯವಸ್ಥೆ ನಡೆಯುತ್ತಿದೆ. ಈಗ ನನ್ನ ಪ್ರಶ್ನೆಯ ಉತ್ತರದಲ್ಲಿ ರೂ. ೩ ಕೋಟಿಗಳಿಗೆ tender ಕರೆದಿದ್ದೇವೆ ಎಂದು ಹೇಳಿದ್ದಾರೆ. ಮಾನ್ಯ ಸಭಾಪತಿಯವರೇ, ಇದನ್ನು Corporation ನವರು maintain ಮಾಡುವುದಕ್ಕೆ ಆಗುವುದಿಲ್ಲ. ಆದ್ದರಿಂದ ದಯವಿಟ್ಟು ಯಾವುದಾದರೊಂದು sports body ಗೆ ವಹಿಸಬೇಕು. ಅವರು Youth Services Department ಗಾದರೂ ಕೊಡಲಿ, Olympics Association ಗಾದರೂ ಕೊಡಲಿ, ಆದರೆ ಯಾವುದಾದರೂ ಒಂದಕ್ಕೆ ಕೊಡಬೇಕು. Corporation ನಿಂದ shooting ಮಾಡಲು ಬಾಡಿಗೆ ಕೊಡುತ್ತಿದ್ದಾರೆ. ಈ ರೀತಿ ಎಲ್ಲಾದರೂ ಕೇಳಿದ್ದೀರಾ? ಸುಮಾರು ೧೫ ದಿನಗಳ ಕಾಲ shooting ಗೆ ಬಾಡಿಗೆ ಕೊಡುವುದು ನಡೆಯುತ್ತಿದೆ. ಅಲ್ಲಿ sports body ಗೆ ಬೇಕಾಗಿರುವ ಅನುಕೂಲತೆಗಳೇನೂ ಇಲ್ಲ. ಸಾಯಂಕಾಲ ಆದರೆ ಏನಾಗುತ್ತಿದೆ ಎಂಬ ವಿಚಾರಗಳನ್ನು ನಾನು ಇಲ್ಲಿ ಹೇಳಬಾರದು, ಅಂತಹ ಕಾರ್ಯಕ್ರಮಗಳು ನಡೆಯುತ್ತಿವೆ. ದಯವಿಟ್ಟು ಮಾನ್ಯ ಮುಖ್ಯಮಂತ್ರಿಗಳು sprots body ಹಾಗೂ ಸಂಬಂಧಪಟ್ಟವರನ್ನೆಲ್ಲಾ ಅವರನ್ನು ಕರೆದು Youth Services Department ಅಥವಾ Olympics Association ಇವರಲ್ಲಿ ಯಾರೊಬ್ಬರಿಗಾದರೂ ವಹಿಸಿ ಕೊಡಬೇಕು. ಅಲ್ಲಿ ಬಿಬಿಎಂಪಿ ಯಿಂದ ಒಬ್ಬ security ಇದ್ದಾರೆ. ಅಲ್ಲಿ ಅನೈತಿಕ ಚಟುವಟಿಕೆಗಳು ನಡೆಯುತ್ತಿವೆ. ಅಲ್ಲಿ ಇವತ್ತಿನ ಪರಿಸ್ಥಿತಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಯಾವರೀತಿ ಇದೆ ಎಂಬ ದಾಖಲೆಗಳನ್ನು ಮಾನ್ಯ ಮುಖ್ಯಮಂತ್ರಿಗಳಿಗೆ ಮಾನ್ಯ ಸಭಾಪತಿಯವರ ಮೂಲಕ ತಲುಪಿಸುತ್ತೇನೆ. ಅವರು tender ಕರೆದು ೨೦% ಕೆಲಸ ಆಗಿದೆ ಎಂದು ಹೇಳುತ್ತಿದ್ದಾರೆ, ನಾನು ಅಲ್ಲಿನ ನಿವಾಸಿಯಾಗಿದ್ದು ೧೦% ಕೆಲಸವೂ ಆಗಿಲ್ಲ. ಈ ದಾಖಲೆಗಳನ್ನು ಕೊಡುತ್ತೇನೆ. ದಯವಿಟ್ಟು ಸರ್ಕಾರವು Corporation ನಿಂದ ತೆಗೆದು ಒಂದು sports body ಗೆ ಕೊಡಬೇಕು, ಅಲ್ಲಿರುವ ಜನರಿಗೆ ಭಯಭೀತಿಯನ್ನು ಹೋಗಲಾಡಿಸಬೇಕು. ಕೇಂದ್ರ ಅಥವಾ ರಾಜ್ಯ ಸರ್ಕಾರಗಳಲ್ಲಿ sports ಗೆ ಬಹಳ ಮುತುವರ್ಜಿ ವಹಿಸಿದ್ದಾರೆ ಎಂದು ಹೇಳುತ್ತಿದ್ದಾರೆ. ಇಂತಹ ೧೭ ಎಕರೆಯ ಒಳ್ಳೆಯ stadium ಇದೆ. ಆದರೆ ಬಹಳ ಅನ್ಯಾಯವಾಗುತ್ತಿದೆ. ಸರ್ಕಾರಕ್ಕೆ ಏಕೆ ಇಷ್ಟು ಅಸಡ್ಡೆ ಎಂದು ನನಗೆ ಗೊತ್ತಾಗುತ್ತಿಲ್ಲ. ಮಾನ್ಯ ಮುಖ್ಯಮಂತ್ರಿಯವರು ದಯವಿಟ್ಟು ಮನಸ್ಸು ಮಾಡಿ ಬೇರೆಯವರಿಗೆ ಕೊಡುವ ಮೂಲಕ ಎಲ್ಲಾ ಮಕ್ಕಳಿಗೂ ಒಳ್ಳೆಯದಾಗಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಜೆ.ಸಿ. ಮಾಧುಸ್ವಾಮಿ (ಸಣ್ಣ ನೀರಾವರಿ, ಕಾನೂನು, ಸಂಸದೀಯ ವ್ಯವಹಾರಗಳ ಸಚಿವರು) (ಮುಖ್ಯಮಂತ್ರಿಯವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಬೇರೆ Authority ಗಳಿಗಿಂತ ಬಿಬಿಎಂಪಿ ಬಹಳ economically sound ಆಗಿರುತ್ತದೆ ಎಂದು ಕೆಲವನ್ನು ಬಿಬಿಎಂಪಿ ಗೆ handover ಮಾಡುತ್ತಿರುತ್ತೇವೆ. ಅವರ budget, income ನಿಂದ ಅವರಿಗೆ ಕೆಲಸ ಮಾಡುವುದಕ್ಕೆ ಸುಲಭವಾಗುತ್ತದೆಂದು ಮಾಡುತ್ತೇವೆ. ತಾವು ಬಿಬಿಎಂಪಿ ರವರು neglect ಮಾಡಿರುವ ಬಗ್ಗೆ ನನ್ನ ಜೊತೆ ಮಾತನಾಡಿದ್ದೀರಿ, ಅವರು ಏನೂ ಮಾಡದೇ ಈಗ ಒಂದೈದು ಕೋಟಿ ರೂಪಾಯಿಗಳನ್ನು ತೋರಿಸಿ, ಅದರಲ್ಲಿ ೨೦% expenditure ಮಾಡಿದ್ದೇವೆ ಎಂದು false information feed ಮಾಡಿದ್ದಾರೆ ಎಂದು ಹೇಳಿದ್ದೀರಿ. ಈ ವಿಚಾರ ಸತ್ಯವಾಗಿದ್ದರೆ ಈ ಉತ್ತರವನ್ನು ಸಿದ್ಧಪಡಿಸಿ ಕೊಟ್ಟಿರುವವರ ಮೇಲೆ action ತೆಗೆದುಕೊಳ್ಳುತ್ತೇನೆ. ಬಿಬಿಎಂಪಿ ಗೆ ಕೊಟ್ಟಿರುವುದನ್ನು ವಾಪಸ್ಸು ತೆಗೆದುಕೊಂಡು ಬೇರೆ ಬೇರೆ Authority ಗಳಿಗೆ transfer ಮಾಡುವುದು ಸ್ವಲ್ಪ ಕಷ್ಟವಾಗುತ್ತದೆ. ಆ ಬಗ್ಗೆ ಮಾಡುವುದಾದರೆ ಮಾನ್ಯ ಮುಖ್ಯಮಂತ್ರಿಯವರು ಮುಂದಿನ ದಿನಗಳಲ್ಲಿ ತೀರ್ಮಾನ ತೆಗೆದುಕೊಳ್ಳುತ್ತಾರೆ.

**ಶ್ರೀ ಯು.ಬಿ. ವೆಂಕಟೇಶ್**:- ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಹೇಳಿದ್ದು ಸರಿ. ಆದರೆ ನಾನು ಹೇಳುತ್ತಿರುವುದು ಏನಾದರೂ ಸುಳ್ಳಾದರೆ ನನ್ನ ಸದಸ್ಯತ್ವಕ್ಕೆ ರಾಜೀನಾಮೆ ಕೊಡುತ್ತೇನೆ. ನಾನು ಸುಳ್ಳು ಹೇಳುವುದಕ್ಕೆ ಇಲ್ಲಿಗೆ ಬಂದಿಲ್ಲ.

“ತಿದ್ದುಪಡಿಯಾಗದ ಪ್ರತಿ; ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಶ್ರೀ ಜೆ.ಸಿ. ಮಾಧುಸ್ವಾಮಿಃ**- ಅವರು ಸುಳ್ಳು ಹೇಳಿದರು ಎಂದು ನಾನು ಹೇಳಿಲ್ಲ. ಅಧಿಕಾರಿಗಳು ತಪ್ಪು ಉತ್ತರ ಕೊಟ್ಟಿದ್ದರೆ ಕ್ರಮ ತೆಗೆದುಕೊಳ್ಳುತ್ತೇನೆ ಎಂದು ಹೇಳಿದೆ.

ಶ್ರೀ ಯು.ಬಿ. ವೆಂಕಟೇಶ್:- ಅಲ್ಲಿ ಒಬ್ಬನೇ ಕಾವಲುಗಾರ ಇದ್ದಾನೆ. ಅವರು ಬಿಬಿಎಂಪಿ ರವರನ್ನೇ ಕೇಳಲಿ. ೧೭ ಎಕರೆಯ ಒಂದು stadium ಗೆ ಎಷ್ಟು ಜನ ಇರಬೇಕು? Light, ನೀರು, toilet ಗಳಿಲ್ಲ, ನಾವು ಸುಳ್ಳು ಹೇಳುವುದಕ್ಕೆ ಬಂದಿಲ್ಲ. ಅವರು ಯಾವಾಗ ಬಂದರೂ ಆ ಸ್ಥಳಕ್ಕೆ ಕರೆದುಕೊಂಡು ಹೋಗುತ್ತೇನೆ. ನಾನು ಹೇಳಿರುವುದು ಸುಳ್ಳಾದರೆ ನಾನು ಅವರಿಗೆ ರಾಜೀನಾಮೆ ಬರೆದುಕೊಡುತ್ತೇನೆ.

**ಸಭಾಪತಿಯವರುಃ**- ಮಾನ್ಯ ಸದಸ್ಯರು ಹೇಳಿದಂತೆ ಬಿಡಿಸಿಕೊಡುವುದು ಒಳ್ಳೆಯದು.

**ಶ್ರೀ ಜೆ.ಸಿ. ಮಾಧುಸ್ವಾಮಿಃ**- ಮಾನ್ಯ ಮುಖ್ಯಮಂತ್ರಿಯವರ ಜೊತೆ ಆನಂತರ ಮಾತನಾಡಿ, ಯಾವುದಾದರೂ Authority ಅಥವಾ ಮತ್ತೊಂದಕ್ಕೆ ಕೊಟ್ಟರೆ ಒಳ್ಳೆಯದಾಗುತ್ತದೆ ಎನ್ನುವುದಾದರೆ ಬಿಬಿಎಂಪಿ ರವರ ಜೊತೆ ಮಾತನಾಡಿ ಒಂದು ತೀರ್ಮಾನ ತೆಗೆದುಕೊಳ್ಳುತ್ತೇನೆ.

**ಶ್ರೀ ಯು.ಬಿ. ವೆಂಕಟೇಶ್**:- ದಯವಿಟ್ಟು ಮಾಡಬೇಕು. ಇದು ನನ್ನ request. ಏಕೆಂದರೆ ಮಾನ್ಯ ಮುಖ್ಯಮಂತ್ರಿಗಳಿಗೆ ಕ್ರೀಡೆ ಬಗ್ಗೆ ಬಹಳ ಆಸಕ್ತಿ ಇದೆ.

**ಶ್ರೀ ಜೆ.ಸಿ. ಮಾಧುಸ್ವಾಮಿಃ**- ಬೆಂಗಳೂರಿನಲ್ಲಿ ಅಂತಹ ಜಾಗಗಳಿರುವುದು ಬಹಳ ಕಡಿಮೆ. ಅದನ್ನು ಚೆನ್ನಾಗಿ ನೋಡಿಕೊಳ್ಳಬೇಕಾಗಿರುವುದು ನಮ್ಮ ಕರ್ತವ್ಯ. ಅವರ ಕೈಯಲ್ಲಿ ಆಗುವುದಿಲ್ಲ ಎನ್ನುವುದಾದರೆ Government will take over and develop it.

**ಶ್ರೀ ಯು.ಬಿ. ವೆಂಕಟೇಶ್**:- ಇದಕ್ಕೆ private party ಬೇಡ. ಸರ್ಕಾರವೇ ಮಾಡಬಹುದು. Youth Services Department ಅಥವಾ Olympics Association ಗೆ ಕೊಡಬಹುದು.

**Sri J.C.MADHUSWAMY**:- We will take decision sir.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆಃ 820**

**(ಉತ್ತರವನ್ನು ಲಗತ್ತಿಸಿದೆ)**

**ಶ್ರೀ ಅ. ದೇವೇಗೌಡಃ-** ಮಾನ್ಯ ಸಭಾಪತಿಯವರೇ, ರಾಜ್ಯದ ನಿವೃತ್ತ ನೌಕರರಿಗೆ ನಗದುರಹಿತ ಚಿಕಿತ್ಸೆ ನೀಡುವ ಸೌಲಭ್ಯ ಕುರಿತಾದ ಪ್ರಸ್ತಾವನೆಯನ್ನು ಸರ್ಕಾರ ಪರಿಶೀಲಿಸುತ್ತದೆ ಎಂದು ಹೇಳಿದ್ದಾರೆ. ದಯಮಾಡಿ ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ಕೇಂದ್ರ ಸರ್ಕಾರದ ನಿವೃತ್ತ ನೌಕರರು ಹಾಗೂ ರೈಲ್ವೆ ನೌಕರರಿಗೆ ವೈದ್ಯಕೀಯ ಸೌಲಭ್ಯಗಳನ್ನು ಒದಗಿಸುತ್ತಿದ್ದಾರೆ. ಸರ್ಕಾರವು ಆರೋಗ್ಯ ಸಂಜೀವಿನಿ ಸೌಲಭ್ಯ ಒದಗಿಸಲು ಕ್ರಮ ಕೈಗೊಳ್ಳಲು ಕೋರುತ್ತೇನೆ.

**ಶ್ರೀ ಜೆ.ಸಿ. ಮಾಧುಸ್ವಾಮಿ (ಸಣ್ಣ ನೀರಾವರಿ, ಕಾನೂನು, ಸಂಸದೀಯ ವ್ಯವಹಾರಗಳ ಸಚಿವರು) (ಮುಖ್ಯಮಂತ್ರಿಯವರ ಪರವಾಗಿ):-** ಮಾನ್ಯ ಸಭಾಪತಿಯವರೇ, ನಾನು ಆಗಲೇ it is under the scrutiny of Government ಎಂದು ಹೇಳಿದ್ದೇನೆ. ಸರ್ಕಾರ ಇದರ ಬಗ್ಗೆ ಆಲೋಚನೆ ಮಾಡಿ ಕ್ರಮ ಜರುಗಿಸುತ್ತದೆ. ಏಕೆಂದರೆ much financial incurrence ಆದರೆ ಒಂದೇ ಸಾರಿ accounts ನಲ್ಲಿ ಹೇಳುವುದಕ್ಕೆ ಆಗುವುದಿಲ್ಲ. ಇದರ ಬಗ್ಗೆ ಕುಳಿತು ಚರ್ಚೆ ಮಾಡುವುದಕ್ಕೆ ತಯಾರಾಗಿದ್ದೇವೆ, ಇದನ್ನು ಪರಿಶೀಲನೆ ಮಾಡುತ್ತೇನೆ.

ಸಭಾಪತಿಯವರುಃ- ಡಾ|| ತೇಜಸ್ವಿನಿ ಗೌಡ ಪ್ರಶ್ನೆ ಸಂಖ್ಯೆ: 986. ಗೈರು ಹಾಜರಾಗಿದ್ದಾರೆ. ನಂತರ ಶ್ರೀ ಎಸ್.ಎಲ್. ಭೋಜೇಗೌಡರ ಪ್ರಶ್ನೆಗೆ ಸಮಯ ಕೇಳಿದ್ದಾರೆ.

**ಶ್ರೀ ಎಸ್.ಎಲ್. ಭೋಜೇಗೌಡಃ-** ಮಾನ್ಯ ಸಭಾಪತಿಯವರೇ, ನಾನು ಮೂರನೇ ಬಾರಿ ಪ್ರಶ್ನೆ ಕೇಳಿದ್ದೇನೆ.

ಸಭಾಪತಿಯವರುಃ- ಬಹಳ details ಕೇಳಿದ್ದೀರಿ.

**ಶ್ರೀ ಎಸ್.ಎಲ್. ಭೋಜೇಗೌಡಃ-** ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿ ಇದ್ದಾರೆ. ಮೊನ್ನೆ ಉಡುಪಿ ಸಭೆಯಲ್ಲಿ ಆರೋಗ್ಯ ಸಚಿವರೂ ಇರುವ ಸಂದರ್ಭದಲ್ಲಿ ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಅರ್ಜಿ ಕೊಟ್ಟಿದ್ದೇನೆ. ಮಾನ್ಯ ಕೋಟ ಶ್ರೀನಿವಾಸ ಪೂಜಾರಿ ರವರು ಇದ್ದರು. ಆ ಅರ್ಜಿಗೆ ಮಾನ್ಯತೆಯನ್ನು ತೋರಿಸಿದ್ದಾರೆ.

ಸಭಾಪತಿಯವರುಃ- ಬೇಗ ಉತ್ತರ ಒದಗಿಸಲು ಹೇಳುತ್ತೇನೆ.

**ಶ್ರೀ ಎಸ್.ಎಲ್. ಭೋಜೇಗೌಡಃ-** ಮೂರನೆ ಬಾರಿ ಪ್ರಶ್ನೆ ಬಂದರೂ ಉತ್ತರ ಸಿಗಲಿಲ್ಲ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರುಃ-** ಹೌದು, ನಾನು ಏನು ಮಾಡಲಿ ಹೇಳಿ. ಸರ್ಕಾರ ಉತ್ತರ ಕೊಡದಿದ್ದರೆ ನಾನೇನು ಮಾಡುವುದಕ್ಕೆ ಆಗುತ್ತದೆ. ಸಮಯ ಕೇಳಿದ್ದಾರೆ. ಬೇಗ ಕೊಡುತ್ತಾರೆ.

(ಮುಂದು)

(935)/23.09.2021/11.50/ಹೆಚ್‌ವಿ:ಜಿಆರ್

(ಸಭಾಪತಿಯವರ ಉಪಸ್ಥಿತಿ)

**ಸಭಾಪತಿಯವರು:-** ಮಾನ್ಯ ಎಸ್.ಎಲ್.ಬೋಜೇಗೌಡರ ತಡೆಹಿಡಿಯಲಾದ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ13(222)ಗೆ ಸರ್ಕಾರ ಕಾಲಾವಕಾಶವನ್ನು ಕೇಳಿದೆ. ಸವಿಸ್ತಾರವಾಗಿ ಉತ್ತರವನ್ನು ಒದಗಿಸಬೇಕಾಗಿರುವುದರಿಂದ ಸಮಯಾವಕಾಶವನ್ನು ಕೇಳಿದ್ದಾರೆ.

**ಶ್ರೀ ಎಸ್.ಎಲ್.ಭೋಜೇಗೌಡ:-** ಸನ್ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆಗೆ ಇದು ಮೂರನೆಯ ಬಾರಿ ಕಾಲಾವಕಾಶವನ್ನು ಕೇಳುತ್ತಿರುವುದು. ಮೊನ್ನೆ ನಡೆದಂತಹ ಉಡುಪಿ ಸಭೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳು, ಮಾನ್ಯ ಆರೋಗ್ಯ ಸಚಿವರು ಮತ್ತು ಮಾನ್ಯ ಸಭಾನಾಯಕರು ಮೂರು ಜನರು ಉಪಸ್ಥಿತರಿದ್ದಾಗ ನಾನು ಅರ್ಜಿಯನ್ನು ಕೊಟ್ಟಿದ್ದೆ.

**ಸಭಾಪತಿಯವರು:-** ಬೇಗನೇ ಉತ್ತರವನ್ನು ಒದಗಿಸುವಂತೆ ಸರ್ಕಾರಕ್ಕೆ ತಿಳಿಸಲಾಗುತ್ತದೆ. ತಡೆಹಿಡಿಯಲಾದ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 92(1050) ಅನ್ನು ಕೇಳಿರುವ ಮಾನ್ಯ ಸದಸ್ಯರಾದ ಶ್ರೀ ಕೆ.ಸಿ.ಕೊಂಡಯ್ಯನವರು ಸದನದಲ್ಲಿ ಉಪಸ್ಥಿತರಿಲ್ಲ. ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

**ಡಾ||ತೇಜಸ್ವಿನಿಗೌಡ:-** ಸನ್ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆ ಬರಲಿಲ್ಲ.

**ಸಭಾಪತಿಯವರು:-** ತಮ್ಮ ಹೆಸರನ್ನು ಕರೆದೆ ಆದರೆ, ತಾವು ಉತ್ತರಿಸಲಿಲ್ಲ.

**ಶ್ರೀ ಮಾನೆ ಶ್ರೀನಿವಾಸ್:-** ಸನ್ಮಾನ್ಯ ಸಭಾಪತಿಯವರೇ, ನನ್ನ ಹೆಸರನ್ನು ಸಹ ಕರೆದಿಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ನಾನು ನಿಮ್ಮ ಹೆಸರನ್ನು ಕರೆದಾಗ, ತಾವು ತಮ್ಮ ಸ್ಥಾನದಲ್ಲಿ ಇರಲಿಲ್ಲ.

**ಶ್ರೀ ಮಾನೆ ಶ್ರೀನಿವಾಸ್:-** ಸನ್ಮಾನ್ಯ ಸಭಾಪತಿಯವರೇ, ಮೂರನೆ ಪ್ರಶ್ನೆಯನ್ನು ತೆಗೆದುಕೊಂಡಾಗಲೇ ನಾನು ಬಂದು ಕುಳಿತುಕೊಂಡಿದ್ದೆ. ಮತ್ತೊಮ್ಮೆ ಪ್ರಶ್ನೆಯನ್ನು ಕೇಳುವುದಕ್ಕೆ ಅವಕಾಶವನ್ನು ನೀಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತಿದ್ದೇನೆ. ಬಹಳ ಪ್ರಮುಖವಾಗಿರುವ ಪ್ರಶ್ನೆಯಾಗಿದೆ.

**ಡಾ||ತೇಜಸ್ವಿನಿಗೌಡ:-** ಸನ್ಮಾನ್ಯ ಸಭಾಪತಿಯವರೇ, ನನಗೂ ಒಂದು ಅವಕಾಶವನ್ನು ಕೊಡಬೇಕೆಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ.

**ಸಭಾಪತಿಯವರು:-** ಆಯಿತು ಪ್ರಶ್ನೆ ಕೇಳಿ. ಬೇಗ ಬಂದು ಸದನದೊಳಗೆ ಕುಳಿತುಕೊಳ್ಳಬೇಕು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:1451**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಮಾನೆ ಶ್ರೀನಿವಾಸ್:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಗೃಹ ಸಚಿವರು ಅತ್ಯಾಚಾರಕ್ಕೆ ಒಳಗಾದ ಹೆಣ್ಣುಮಕ್ಕಳಿಗೆ ಸರ್ಕಾರದಿಂದ ನೀಡಲಾಗುವ ಪರಿಹಾರಗಳು ಮತ್ತು ಮಹಿಳೆಯರ ಸುರಕ್ಷತೆಗಾಗಿ ಕೈಗೊಂಡಿರುವ ಕ್ರಮಗಳ ಬಗ್ಗೆ ಉತ್ತರವನ್ನು ಒದಗಿಸಿದ್ದಾರೆ. ಇದರ ಜೊತೆಗೆ ಅತ್ಯಾಚಾರ ಪ್ರಕರಣಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಯಾವಯಾವ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ ಎನ್ನುವುದರ ಬಗ್ಗೆ ಒಂದು ದೊಡ್ಡ ಪಟ್ಟಿಯನ್ನೇ ಕೊಟ್ಟಿದ್ದಾರೆ. ಮಾನ್ಯ ಸಚಿವರು ಕೊಟ್ಟಿರುವ ಉತ್ತರದಲ್ಲಿ 'ದಿನದ 24 ಗಂಟೆಯೂ ಮಹಿಳೆಯರ ಮತ್ತು ಮಕ್ಕಳ ಸುರಕ್ಷತೆಗಾಗಿ 'ಪಿಂಕ್ ಹೊಯ್ಸಳ ಮತ್ತು 112 ಗಸ್ತುವಾಹನ ಗಸ್ತು ಕಾರ್ಯ ನಿರ್ವಹಿಸುತ್ತವೆ' ಎನ್ನುವ ಉತ್ತರವನ್ನು ಕೊಟ್ಟಿದ್ದಾರೆ. ಮುಂದುವರೆದು, 'ಮಹಿಳೆಯರು ಓಡಾಡುವ ಸ್ಥಳಗಳ ಬಳಿ, ಬಸ್ ನಿಲ್ದಾಣದಲ್ಲಿ, ಶಾಲಾ ಕಾಲೇಜುಗಳ ಬಳಿ ಸಿಬ್ಬಂದಿಗಳನ್ನು ಪಾಯಿಂಟ್ ಕರ್ತವ್ಯಕ್ಕೆ ನೇಮಕ ಮಾಡಲಾಗುತ್ತಿದ್ದು, ಸದರಿ ಸ್ಥಳಗಳ ಬಳಿ ಹೊಯ್ಸಳ ಹಾಗೂ ಚೀತಾ ವಾಹನಗಳನ್ನು ಗಸ್ತು ಮಾಡಿ ಇಂತಹ ಕೃತ್ಯಗಳು ನಡೆಯದಂತೆ ಸೂಕ್ತ ಮುನ್ನೆಚ್ಚರಿಕೆಯನ್ನು ಕೈಗೊಳ್ಳಲಾಗಿದೆ' ಎಂದು ಹೇಳಿದ್ದಾರೆ.

ಸನ್ಮಾನ್ಯ ಸಭಾಪತಿಯವರೇ, ನಾವು ಓಡಾಡುವ ಸ್ಥಳಗಳಲ್ಲಿ ಎಲ್ಲಿಯೂ 24 ಗಂಟೆಗಳ ಕಾಲ ಈ ಗಸ್ತು ವಾಹನಗಳನ್ನು ನೋಡಿಲ್ಲ. ಇದನ್ನು ಈ ಸದನದಲ್ಲಿರುವ ಎಲ್ಲ ಸದಸ್ಯರು ಒಪ್ಪುತ್ತಾರೆಂದು ನಾನು ಭಾವಿಸುತ್ತೇನೆ. ಯಾವಯಾವ ತಾಲ್ಲೂಕುಗಳಿಗೆ ಪಿಂಕ್ ಹೊಯ್ಸಳವನ್ನು ನೀಡಲಾಗಿದೆ? ಮತ್ತು ಯಾವಯಾವ ತಾಲ್ಲೂಕುಗಳಲ್ಲಿ ಗಸ್ತು ವಾಹನಗಳು ಗಸ್ತು ಕಾರ್ಯವನ್ನು ನಿರ್ವಹಿಸುತ್ತಿವೆ ಎನ್ನುವುದು ನನ್ನ ಪ್ರಶ್ನೆಯಾಗಿದೆ. ಇದನ್ನು ಕೂಲಂಕಷವಾಗಿ ಪರಿಶೀಲನೆ ಮಾಡಿದರೆ, ಮುನ್ನೆಚ್ಚರಿಕಾ ಕ್ರಮವಾಗಿ ಕಾಗದದ ಮೇಲೆ ಮಾತ್ರ ಇರುವಂತಹ ಕ್ರಮಗಳಾಗಿವೆಯೇ ಹೊರತು ಕಾರ್ಯರೂಪಕ್ಕೆ ಬಂದಿಲ್ಲವೆನ್ನುವ ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ. ವಾಸ್ತವವಾಗಿ ಯಾವುದೇ ರೀತಿಯ ಗಸ್ತುವಾಹನಗಳು ಇಲ್ಲ, ಯಾವುದೇ ಸುರಕ್ಷತಾ ಮತ್ತು ಮುನ್ನೆಚ್ಚರಿಕೆಯ ಕ್ರಮಗಳನ್ನು ಇಲಾಖೆಯ ವತಿಯಿಂದ ತೆಗೆದುಕೊಂಡಿಲ್ಲ. ಸಚಿವರು ಕೊಟ್ಟಿರುವಂತಹ ಉತ್ತರ ತಪ್ಪಾಗಿದೆ. ಅದನ್ನು ಸರಿಪಡಿಸುವುದಕ್ಕೆ ಕ್ರಮಗಳನ್ನು ತೆಗೆದುಕೊಳ್ಳಬೇಕಾಗಿದೆ. ಎಲ್ಲರ ಕಣ್ಣಿಗೆ ಕಾಣುವಂತೆ ಗಸ್ತು ವಾಹನಗಳು ಸಂಚರಿಸಿದರೆ, ಬಹುಶಃ ಮಹಿಳೆಯವರಿಗೆ ರಕ್ಷಣೆ ದೊರೆಯಬಹುದು.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸನ್ಮಾನ್ಯ ಸಭಾಪತಿಯವರೇ, ಇತ್ತೀಚೆಗೆ ಬಹಳಷ್ಟು ಅನುಮಾನಾಸ್ಪದ ಸಾವುಗಳ ಪ್ರಕರಣಗಳು ಕಂಡು ಬರುತ್ತಿವೆ. ಕಳೆದ ತಿಂಗಳಿನಲ್ಲಿ ಬೆಳಗಾವಿ ಜಿಲ್ಲೆಯ ಶಿಗ್ಗಾಂವ್‌ನಲ್ಲಿಯೂ ಸಹ ಒಬ್ಬ ಮಹಿಳೆಯ ಅನುಮಾನಾಸ್ಪದ ಸಾವು ಕಂಡು ಬಂದಿದೆ. ಇಂತಹ ಪ್ರಕರಣಗಳನ್ನು ತಡೆಯುವುದರ ಜೊತೆಗೆ ಆರೋಪಿಗಳನ್ನು ಕಂಡುಹಿಡಿದು ಅವರಿಗೆ ಫಾಸ್ಟ್ ಟ್ರಾಕ್ ಕೋರ್ಟ್‌ಗಳ ಮೂಲಕ ತೀವ್ರಗತಿಯಲ್ಲಿ ಶಿಕ್ಷೆ ವಿಧಿಸುವುದಕ್ಕೆ ಸರ್ಕಾರ ಯಾವ ರೀತಿಯ ಕ್ರಮವನ್ನು ಕೈಗೊಳ್ಳುತ್ತದೆ ಎನ್ನುವುದರ ಬಗ್ಗೆ ಮಾನ್ಯ ಗೃಹ ಸಚಿವರು ಸ್ಪಷ್ಟಪಡಿಸಬೇಕಾಗಿದೆ.

**ಶ್ರೀ ಆರಗ ಜ್ಞಾನೇಂದ್ರ:-** ಸನ್ಮಾನ್ಯ ಸಭಾಪತಿಯವರೇ, ಮಹಿಳೆಯರು ಮತ್ತು ಮಕ್ಕಳ ಮೇಲೆ ನಡೆಯುವಂತಹ ದೌರ್ಜನ್ಯವನ್ನು ತಡೆಯುವುದಕ್ಕೆ ಸರ್ಕಾರ ವಿಶೇಷ ಆಸಕ್ತಿಯನ್ನು ವಹಿಸಿ ಪೊಲೀಸ್ ಇಲಾಖೆಗೆ ನಿರ್ದೇಶನವನ್ನು ನೀಡಲಾಗಿದೆ. ಮಾನ್ಯ ಸದಸ್ಯರು ಹೇಳಿದಂತೆ 112 ಗಸ್ತು ವಾಹನ ಹೆಚ್ಚು ಕಡಿಮೆ ಒಂದು ಪೊಲೀಸ್‌ಠಾಣೆಗೆ ಒಂದರಂತೆ ಇದೆ. ಅವಶ್ಯಕತೆ ಕಂಡುಬಂದಲ್ಲಿ 112ಗೆ ಫೋನ್ ಮಾಡಿದರೆ ಅದು ಬೆಂಗಳೂರಿಗೆ ಲಿಂಕ್ ಆಗುತ್ತದೆ. ಇಲ್ಲಿಂದ ಆ ವಾಹನಕ್ಕೆ ಸೂಚನೆ ತಲುಪಿದ ಸುಮಾರು ಅರ್ಧ ಗಂಟೆಯೊಳಗಾಗಿ ಪ್ರಕರಣ ನಡೆದ ಸ್ಥಳಕ್ಕೆ ತಲುಪುವಂತಹ ವ್ಯವಸ್ಥೆಯನ್ನು ಮಾಡಿದ್ದೇವೆ. ಬೆಂಗಳೂರು ನಗರದೊಳಗೆ ಕೇವಲ 9 ರಿಂದ 10 ನಿಮಿಷಕ್ಕೆ ಹೋಗಿ ತಲುಪುತ್ತದೆ. ಆ ರೀತಿಯಲ್ಲಿ ಗಸ್ತು ವಾಹನಗಳನ್ನು ಏರ್ಪಾಡು ಮಾಡಲಾಗಿದೆ. 24x7 ಈ ವಾಹನದಲ್ಲಿ ಸಿಬ್ಬಂದಿಗಳು ಇರುತ್ತಾರೆ. ಸಿಬ್ಬಂದಿಯ ಕೊರತೆ ಕಂಡುಬಂದರೆ, ಇನ್ನಷ್ಟು ಸಿಬ್ಬಂದಿಯನ್ನು ಕರೆಯಿಸಿಕೊಳ್ಳುವಂತಹ ವ್ಯವಸ್ಥೆ ಇದೆ. ಮೊದಲು ಪೊಲೀಸ್ ಠಾಣೆಗೆ ಬಂದು ಅರ್ಜಿಯನ್ನು ಬರೆದು ಕೊಟ್ಟು ದೂರನ್ನು ದಾಖಲಿಸಬೇಕಾಗಿತ್ತು. ಈಗ ಆ ರೀತಿ ಇಲ್ಲ, 112ಗೆ ಫೋನ್ ಮಾಡಿದರೆ ತಕ್ಷಣವೇ ಪ್ರಕರಣ ನಡೆದ ಸ್ಥಳಕ್ಕೆ ಪೊಲೀಸ್‌ನವರು ಧಾವಿಸಿ ಬರುತ್ತಾರೆ. ಇಂತಹ ಪ್ರಕರಣಗಳು ನಡೆದಂತಹ ಸಂದರ್ಭದಲ್ಲಿ ಪೊಲೀಸಿನವರು ತ್ವರಿತವಾಗಿ ಪತ್ತೆ ಹಚ್ಚುವಂತಹ ಕೆಲಸವನ್ನು ಮಾಡುತ್ತಾರೆ. ಮೈಸೂರಿನ ಪ್ರಕರಣವನ್ನು ನೋಡಿದರೆ ನಮಗೆ ಅದು ಗೊತ್ತಾಗುತ್ತದೆ. ಯಾವುದಾದರೊಂದು ಸಾಕ್ಷಿ ಸಿಕ್ಕದರೂ ಸಾಕು ಆರೋಪಿಗಳ ಹೆಡೆಮುರಿ ಕಟ್ಟಿ ಪೊಲೀಸ್‌ಠಾಣೆಗೆ ತರುವಂತಹ ಕೆಲಸವನ್ನು ಮಾಡುತ್ತೇವೆ. ಈ ವಿಚಾರವಾಗಿ ಯಾವುದೇ ಕಾರಣಕ್ಕೂ ಉದಾಸೀನತೆಯನ್ನು ತೋರುವುದಿಲ್ಲ. ಅದೇ ರೀತಿಯಲ್ಲಿ ಕೋರ್ಟ್‌ನಲ್ಲಿ ದೋಷ ನಿರ್ಣಯ ಮಾಡುವುದಕ್ಕೆ ವಿಶೇಷವಾಗಿರುವಂತಹ ಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಪ್ರಕರಣ ದಾಖಲಾದ 60 ದಿನಗಳೊಳಗಾಗಿ ಚಾರ್ಜ್‌ಶೀಟ್ ಅನ್ನು ದಾಖಲು

“ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಮಾಡಬೇಕಾಗುತ್ತದೆ. ಸಾಧ್ಯವಾದರೆ, ಫಾಸ್ಟ್ ಟ್ರಾಕ್ ಕೋರ್ಟ್‌ಗೆ ವರ್ಗಾಯಿಸುವಂತಹ ಕ್ರಮವನ್ನು ಸಹ ತೆಗೆದುಕೊಳ್ಳಲಾಗುತ್ತದೆ. ಸಾಕ್ಷಿಗಳನ್ನು ನಮ್ಮ ಪೊಲೀಸಿನವರೇ ಕರೆದುಕೊಂಡು ಬಂದು ಜವಾಬ್ದಾರಿಯಿಂದ ಸಾಕ್ಷಿಯನ್ನು ಹೇಳಿಸುವಂತಹ ಕೆಲಸವನ್ನು ಮಾಡಿಸಬೇಕಾಗಿದೆ. ಈ ರೀತಿ ಮಹಿಳಾ ಮತ್ತು ಮಕ್ಕಳ ಮೇಲೆ ಆಗಿರುವ ದೌರ್ಜನ್ಯವನ್ನು ತಡೆಗಟ್ಟುವುದಕ್ಕೆ ಸರ್ಕಾರ ಗಂಭೀರವಾದ ಕ್ರಮವನ್ನು ತೆಗೆದುಕೊಂಡಿದೆ. ಯಾವಯಾವ ಸುರಕ್ಷತಾ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ ಎನ್ನುವುದರ ಮಾಹಿತಿಯನ್ನು ಮಾನ್ಯ ಸದಸ್ಯರಿಗೆ ನೀಡಲಾಗಿದೆ. ಪ್ರತಿಯೊಂದು ಜಿಲ್ಲೆಯಲ್ಲಿಯೂ ಮಹಿಳಾ ಪೊಲೀಸ್ ಠಾಣೆಗಳನ್ನು ಸ್ಥಾಪನೆ ಮಾಡಲಾಗಿದೆ. ಈ ಠಾಣೆಗಳಿಗೆ ಮಹಿಳಾ ಪೊಲೀಸ್ ಸಿಬ್ಬಂದಿಗಳನ್ನು ನಿಯುಕ್ತಿಗೊಳಿಸುವ ಕೆಲಸವನ್ನು ಮಾಡಲಾಗಿದೆ. ಮಹಿಳೆಯವರು ಮತ್ತು ಮಕ್ಕಳು ಸೇರುವ ಕಡೆಗಳಲ್ಲಿ ಸಮವಸ್ತ್ರಧಾರಿ ಪೊಲೀಸರು ಅಥವಾ ಸಿವಿಲ್ ಡ್ರೆಸ್‌ನಲ್ಲಿರುವ ಪೊಲೀಸರು ಗಸ್ತು ತಿರುಗುತ್ತಿರುತ್ತಾರೆ. ಕಾಲೇಜು ವಿದ್ಯಾರ್ಥಿನಿಯರ ಕ್ಯಾಂಪಸ್ ಹತ್ತಿರ ಕಣ್ಗಾವಲು ಇಡಲಾಗಿದೆ. ಎಲ್ಲಾ ಪೊಲೀಸ್ ಠಾಣೆಗಳಲ್ಲಿ ಹೆಲ್ಪ್ ಡೆಸ್ಕ್‌ಗಳನ್ನು ತೆರೆಯಲಾಗಿದೆ. ಮಹಿಳೆಯವರು ಇದರ ಉಪಯೋಗವನ್ನು ಪಡೆದುಕೊಳ್ಳುತ್ತಿದ್ದಾರೆ. ಮಾನ್ಯ ಸದಸ್ಯರು ಬೇರೆ ಯಾವುದಾದರು ಸಲಹೆಸೂಚನೆಗಳನ್ನು ನೀಡಿದರೆ ಅವುಗಳನ್ನು ಸಹ ಅಳವಡಿಸಿಕೊಳ್ಳುತ್ತೇವೆ.

**ಶ್ರೀ ಮಾನೆ ಶ್ರೀನಿವಾಸ್:-** ಸನ್ಮಾನ್ಯ ಸಭಾಪತಿಯವರೇ, 'ಪಿಂಕ್ ಹೊಯ್ಸಳ' ಮತ್ತು ಗಸ್ತು ವಾಹನಗಳನ್ನು ಯಾವಯಾವ ತಾಲ್ಲೂಕುಗಳಿಗೆ ಎಷ್ಟೆಷ್ಟು ವಾಹನಗಳನ್ನು ನೀಡಲಾಗಿದೆ ಎನ್ನುವುದು ನನ್ನ ಪ್ರಶ್ನೆಯಾಗಿದೆ. ನಾನಂತೂ ಈ ವಾಹನಗಳನ್ನು ಎಲ್ಲಿಯೂ ನೋಡಿಲ್ಲ. ಬೆಂಗಳೂರಿನಲ್ಲಿ ಈ ದಿನ ಒಂದು ಅತ್ಯಾಚಾರ ಪ್ರಕರಣ ನಡೆದಿದೆ. ಘಟನೆ ನಡೆದ ಮೇಲೆ ತೆಗೆದುಕೊಳ್ಳುವ ಕ್ರಮಗಳ ಬಗ್ಗೆ ಮಾನ್ಯ ಸಚಿವರು ಬಹಳ ವಿಸ್ತಾರವಾಗಿ ಹೇಳಿದ್ದಾರೆ. ಇಂತಹ ಘಟನೆಗಳು ನಡೆಯದಂತೆ ತಡೆಗಟ್ಟುವುದಕ್ಕೆ ತೆಗೆದುಕೊಂಡಿರುವ ಕ್ರಮಗಳು ಎಷ್ಟರ ಮಟ್ಟಿಗೆ ಕಾರ್ಯರೂಪಕ್ಕೆ ಬರುತ್ತಿದೆ ಎನ್ನುವುದು ನನ್ನ ಪ್ರಶ್ನೆಯಾಗಿದೆ.

**ಶ್ರೀ ಆರಗ ಜ್ಞಾನೇಂದ್ರ :-** ಸನ್ಮಾನ್ಯ ಸಭಾಪತಿಯವರೇ, ಪಿಂಕ್ ಹೊಯ್ಸಳ ಬೆಂಗಳೂರು ನಗರಕ್ಕೆ ಮಾತ್ರ ಸೀಮಿತವಾಗಿರುತ್ತದೆ. 112 ಗಸ್ತು ವಾಹನ ಪ್ರತಿ ಪೊಲೀಸ್‌ಠಾಣೆಗೊಂದು ಇರುತ್ತದೆ. ಈ ಸಂಖ್ಯೆಗೆ ಕರೆ ಬಂದರೆ, ಕರೆ ಬಂದ 30-40 ನಿಮಿಷಗಳೊಳಗಾಗಿ ಘಟನೆ ನಡೆದ ಸ್ಥಳಕ್ಕೆ ಹೋಗುವಂತಹ ವ್ಯವಸ್ಥೆ ಇದೆ. ಮಾನ್ಯ ಸದಸ್ಯರು ಊರಿಗೆ ಹೋಗುವಂತಹ ಸಂದರ್ಭದಲ್ಲಿ ಗಮನಿಸಬಹುದು.

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಮಾನೆ ಶ್ರೀನಿವಾಸ್:-** ಸನ್ಮಾನ್ಯ ಸಭಾಪತಿಯವರೆ, ಇಂತಹ ಪ್ರಕರಣಗಳನ್ನು ತಡೆಗಟ್ಟುವುದಕ್ಕೆ ಪಿಂಕ್ ಹೊಯ್ಸಳ, ಗಸ್ತು ವಾಹನ, ಚೆನ್ನಮ್ಮ ಪಡೆ ಮತ್ತು ಚೀತಾ ಮುಂತಾದವುಗಳನ್ನು ನಾವು ಗ್ರಾಮೀಣ ಮಟ್ಟದಲ್ಲಿ ಅಥವಾ ತಾಲ್ಲೂಕು ಮಟ್ಟದಲ್ಲಿ ಎಲ್ಲಿಯೂ ನೋಡಿಲ್ಲ. ಮುಂದಾದರೂ ಈ ವ್ಯವಸ್ಥೆಯನ್ನು ಒದಗಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

**ಶ್ರೀ ಆರಗ ಜ್ಞಾನೇಂದ್ರ:-** ಸನ್ಮಾನ್ಯ ಸಭಾಪತಿಯವರೇ, ಅವರ ಸಲಹೆಗಳನ್ನು ತೆಗೆದುಕೊಂಡು ಕ್ರಮ ಜರುಗಿಸಲಾಗುತ್ತದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ತಡೆಹಿಡಿಯಲಾದ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:986**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಡಾ||ತೇಜಸ್ವಿನಿಗೌಡ:-** ಸನ್ಮಾನ್ಯ ಸಭಾಪತಿಯವರೇ, ಅಕಾಡೆಮಿಕ್ ಡಾಕ್ಟರೇಟ್, ಗೌರವ ಡಾಕ್ಟರೇಟ್ ಮತ್ತು ಇತ್ತೀಚಿನ ದಿನಗಳಲ್ಲಿ ದೊಡ್ಡ ಸಮಸ್ಯೆಯಾಗಿರುವ ನಕಲಿ ಡಾಕ್ಟರೇಟ್‌ಗಳ ಬಗ್ಗೆ ಕ್ರಮವನ್ನು ಕೈಗೊಂಡು ಅಕಾಡೆಮಿಕ್ ಡಾಕ್ಟರೇಟ್‌ಗಳ ಮತ್ತು ಗೌರವ ಡಾಕ್ಟರೇಟ್‌ಗಳ ಪಾವಿತ್ರತೆಯನ್ನು ಎತ್ತಿಹಿಡಿಯುವ ಕಾಳಜಿಯಿಂದ ನಾನು ಈ ಪ್ರಶ್ನೆಯನ್ನು ಮಾನ್ಯ ಸಚಿವರಲ್ಲಿ ಕೇಳಿದ್ದೆ. ರಾಜ್ಯದಲ್ಲಿ ಈವರೆಗೆ ಎಷ್ಟು ಜನರಿಗೆ ಗೌರವ ಡಾಕ್ಟರೇಟ್ ಪದವಿಯನ್ನು ಪ್ರಧಾನ ಮಾಡಲಾಗಿದೆ ಎನ್ನುವ ಪ್ರಶ್ನೆಗೆ 'ರಾಜ್ಯದ ಸಾರ್ವಜನಿಕ ವಿಶ್ವವಿದ್ಯಾಲಯಗಳಲ್ಲಿ ಒಟ್ಟು 1856 ಜನರಿಗೆ ಹಾಗೂ ಖಾಸಗಿ ವಿಶ್ವವಿದ್ಯಾಲಯಗಳಲ್ಲಿ ಒಟ್ಟು 23 ಜನರಿಗೆ ಈವರೆಗೆ ಗೌರವ ಡಾಕ್ಟರೇಟ್ ಪದವಿಯನ್ನು ಪ್ರಧಾನ ಮಾಡಲಾಗಿದೆ' ಎನ್ನುವ ಉತ್ತರವನ್ನು ನೀಡಿದ್ದಾರೆ.

ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಉನ್ನತ ಶಿಕ್ಷಣ ಸಚಿವರು ನೂತನ ಶಿಕ್ಷಣ ನೀತಿಯನ್ನು ಜಾರಿಗೊಳಿಸುವ ನಿಟ್ಟಿನಲ್ಲಿ ಬಹಳ ಉತ್ಸಾಹದಿಂದ ಮತ್ತು ಪರಿಶ್ರಮದಿಂದ ಕೆಲಸವನ್ನು ಮಾಡುತ್ತಿದ್ದಾರೆ. ಒಬ್ಬ ಅಧಿಕೃತ ಡಾಕ್ಟರೇಟ್ ಪದವಿಯನ್ನು ಪಡೆದಿರುವ ಒಬ್ಬ ಸದಸ್ಯರು ಈ ಪ್ರಶ್ನೆಯನ್ನು ಕೇಳಿದಾಗ, 1859 ಜನರ ಹೆಸರನ್ನು ಕೊಡಬೇಕೆನ್ನುವ ಸೌಜನ್ಯವೂ ಸರ್ಕಾರಕ್ಕೆ ಇಲ್ಲದಂತಾಗಿದೆ. ಗೌರವ ಡಾಕ್ಟರೇಟ್ ಪದವಿಯ ಪರಿಗಣನೆಗೆ ಇರುವ ಮಾನದಂಡಗಳೇನು ಎನ್ನುವ ಪ್ರಶ್ನೆಯನ್ನು ಕೇಳಿದ್ದೇನೆ. ಕೊನೆ ಗಳಿಗೆಯಲ್ಲಿ ಹೆಸರುಗಳನ್ನು ಸೇರಿಸುವುದರ ಬಗ್ಗೆ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಆಕ್ಟ್ 29ರ ಪ್ರಕರಣ 69ರಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. ರಾಜಭವನ ಕೂಡ ಈ ಬಗ್ಗೆ ಚಿಂತೆಯನ್ನು ವ್ಯಕ್ತಪಡಿಸಿದೆ. ಪ್ರಕರಣ 69(1)ರಲ್ಲಿ;

> " ಸಿಂಡಿಕೇಟಿನ ಮೂರನೇ ಎರಡರಷ್ಟಕ್ಕೆ ಕಡಿಮೆ ಇಲ್ಲದ ಸದಸ್ಯರು , ಯಾವೊಬ್ಬ ವ್ಯಕ್ತಿಗೆ , ಅವನ ಶ್ರೇಷ್ಠ ಸಾಧನೆ ಮತ್ತು ಸ್ಥಾನಮಾನದ ಕಾರಣದಿಂದಾಗಿ ಅವರ ಅಭಿಪ್ರಾಯದಲ್ಲಿ ಅಂಥ ಗೌರವ ಪದವಿ ಅಥವಾ ಇತರ ವಿದ್ಯಾವಿಷಯಕ ಪ್ರಶಸ್ತಿಯನ್ನು ಸ್ವೀಕರಿಸಲು ಯೋಗ್ಯ ಮತ್ತು ಸರಿಯಾದ ವ್ಯಕ್ತಿ ಎಂಬ ಆಧಾರದ ಮೇಲೆ ಗೌರವ ಪದವಿ ಅಥವಾ ವಿದ್ಯಾವಿಷಯಕ ಪ್ರಶಸ್ತಿಯನ್ನು ಪ್ರಧಾನ ಮಾಡಬೇಕೆಂದು ಶಿಫಾರಸ್ಸು ಮಾಡಿದರೆ ಸಿಂಡಿಕೇಟ್ ಸಂಬಂಧಪಟ್ಟ ವ್ಯಕ್ತಿಗೆ ಅದನ್ನು ಪ್ರಧಾನ ಮಾಡಲು ಕುಲಾಧಿಪತಿಯವರ ಅನುಮೋದನೆಗಾಗಿ ಶಿಫಾರಸ್ಸು ಮಾಡಬಹುದು.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪ್ರಕರಣ 69(2)ರಲ್ಲಿ;

> ಗೌರವ ಪದವಿಯನ್ನು ಅಥವಾ ಪ್ರಶಸ್ತಿಯನ್ನು ವಿಶೇಷ ಸಂದರ್ಭಗಳಲ್ಲಿ ಮಾತ್ರ ಪ್ರಧಾನ ಮಾಡತಕ್ಕದ್ದು, ಅದನ್ನು ಕೇವಲ ಒಂದು ವಾಡಿಕೆಯ ಕ್ರಮವಾಗಿ ಪ್ರಧಾನ ಮಾಡತಕ್ಕದ್ದಲ್ಲ. ಸಾಹಿತ್ಯ, ತತ್ವಜ್ಞಾನ, ಕಲೆ, ಸಂಗೀತ, ವರ್ಣಚಿತ್ರಕಲೆ ಅಥವಾ ಕಲೆ, ವಿಜ್ಞಾನ ಅಥವಾ ತಂತ್ರಜ್ಞಾನದ ವ್ಯಾಸಂಗ ವಿಭಾಗಗಳಿಗೆ ವಹಿಸಿಕೊಡಲಾಗಿರುವ ಯಾವುದೇ ಇತರೆ ವಿಷಯದಲ್ಲಿ ಮುನ್ನಡೆಗಾಗಿ ಗಣನೀಯ ಕೊಡುಗೆ ನೀಡಿದ ಅಥವಾ ಶಿಕ್ಷಣ ಧ್ಯೇಯಗಳಿಗಾಗಿ ವಿಶಿಷ್ಟ ಸೇವೆ ಸಲ್ಲಿಸಿದ ವ್ಯಕ್ತಿಗಳನ್ನು ಅಂಥ ಗೌರವ ಪದವಿಗಳ ನೀಡಿಕೆಯ ಉದ್ದೇಶಕ್ಕಾಗಿ ಗುರುತಿಸತಕ್ಕದ್ದು ಎಂದು ಇದೆ.

(ಮುಂದುವರಿದಿದೆ)

(936)23-09-2021(12-00)pk(bsd)-gr

**ಡಾ|| ತೇಜಸ್ವಿನಿಗೌಡ (ಮುಂದು):**

ಗೌರವ ಪದವಿ ಅಥವಾ ಪ್ರಶಸ್ತಿಯನ್ನು ವಿಶೇಷ ಸಂದರ್ಭಗಳಲ್ಲಿ ಮಾತ್ರ ಪ್ರದಾನ ಮಾಡತಕ್ಕದ್ದು, ಅದನ್ನು ಕೇವಲ ಒಂದು ವಾಡಿಕೆಯ ಕ್ರಮವಾಗಿ ಪ್ರದಾನ ಮಾಡತಕ್ಕದ್ದಲ್ಲ. ಅಂದರೆ habitual ಆಗಿ ಮಾಡತಕ್ಕದ್ದಲ್ಲ. ಸಾಹಿತ್ಯ, ತತ್ವಜ್ಞಾನ, ಕಲೆ, ಸಂಗೀತ, ವರ್ಣಚಿತ್ರಕಲೆ ಎಂದು ಹೇಳಿದ್ದಾರೆ. ಈ ಕ್ಷೇತ್ರಗಳಲ್ಲಿ ಕೊಡುಗೆಯನ್ನು ಕೊಟ್ಟಂತಹವರಿಗೆ ಕೊಡಬೇಕೆಂದು ನಿರ್ದೇಶನ ಇರುವಾಗ, ತಮಗೆ ಆಶ್ಚರ್ಯವಾಗಬಹುದು. ಇದರ ಬಗ್ಗೆಯೇ ಒಂದು ತನಿಖೆ ಅಥವಾ Doctorate ಮಾಡಬೇಕಾಗಿದೆ. ಯಾವ ಯಾವ Universities ಗಳೆಂದು ಎರಡು ಉಲ್ಲೇಖ ಮಾಡುತ್ತೇನೆ. ಸಮಯಾವಕಾಶವನ್ನು ಜಾಸ್ತಿ ತೆಗೆದುಕೊಳ್ಳುವುದಿಲ್ಲ. ೧೯೪೯ರಲ್ಲಿ ಸ್ಥಾಪನೆಯಾದ ಪ್ರತಿಷ್ಠಿತ ಕರ್ನಾಟಕ ವಿಶ್ವವಿದ್ಯಾಲಯವು ೧೦೮ ಗೌರವ Doctorate ಗಳನ್ನು ಕೊಟ್ಟಿದೆ. ೧೯೯೧ ರಲ್ಲಿ ಸ್ಥಾಪನೆಯಾದ ಕನ್ನಡ ವಿಶ್ವವಿದ್ಯಾಲಯವು ೧೧೪೧ Doctorate ಗಳನ್ನು ಕೊಟ್ಟಿದೆ. ಈ Doctorate ಗಳು ಏನು? ಅವರು ಯಾವ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ್ದಾರೆ? ಮಾನ್ಯ ಮುಖ್ಯಮಂತ್ರಿಯವರು, ಮಾನ್ಯ ಉನ್ನತ ಶಿಕ್ಷಣ ಸಚಿವರು ಹಾಗೂ ತಾವು ಇರುವಾಗ ಉಲ್ಲೇಖ ಮಾಡುತ್ತೇನೆ. ಏಕೆಂದರೆ ಕೆಲವು ಕ್ಷೇತ್ರಗಳಲ್ಲಿ ತಾವುಗಳು ಪರಿಣಿತಿ ಪಡೆದಿದ್ದು, ಮಾನ್ಯ ಮುಖ್ಯಮಂತ್ರಿಯವರು ನೀರಾವರಿ ಕ್ಷೇತ್ರದಲ್ಲಿ he is very passionate about it. ಅವರೆಲ್ಲಾ ಯಾವ ಕ್ಷೇತ್ರಗಳಲ್ಲಿ ಪರಿಣಿತಿ ಹೊಂದಿದ್ದಾರೆ? ಈ ರೀತಿ Doctorate

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪಡೆದರೆ ಕೆಲವು ಸವಲತ್ತುಗಳು ಸಿಗುತ್ತವೆ. ಹೊರದೇಶಗಳಿಂದ ಬರುವ Doctorate ಗಳನ್ನು ತಿಳಿದುಕೊಳ್ಳಲು ಯಾವ ಮಾನದಂಡವೂ ಇಲ್ಲ. ವಿದೇಶಾಂಗ ಸಚಿವಾಲಯದಲ್ಲಿ ಮಾಹಿತಿ ಸಿಗುತ್ತದೆಯೇ? ನಮ್ಮ Universities ಗಳಲ್ಲಿ ಮತ್ತು ಸಚಿವಾಲಯದಲ್ಲಿ ಮಾಹಿತಿ ಇಲ್ಲ ಎಂದರೆ ಸಮಾಜದಲ್ಲಿ ದುರ್ಬಳಕೆ ಮಾಡಿಕೊಳ್ಳುತ್ತಾರೆ ಮತ್ತು ದುಷ್ಪರಿಣಾಮ ಬೀರುತ್ತದೆ. ಆದ್ದರಿಂದ ಸರ್ಕಾರದ ಈ ತಾತ್ಸಾರ ಮನೋಭಾವನೆ ಸರಿಯಲ್ಲ, ತಾವು ನಮ್ಮ ನೆರವಿಗೆ ಬಂದು ಸರ್ಕಾರಕ್ಕೆ ಹೇಳಬೇಕಾಗುತ್ತದೆ, ಸಂಬಂಧಪಟ್ಟ ಅಧಿಕಾರಿಗಳಿಗೆ ಹೇಳಬೇಕಾಗುತ್ತದೆ. ಕನ್ನಡ ವಿಶ್ವವಿದ್ಯಾಲಯ ಯಾವ ಮಹೋನ್ನತ ಕೊಡುಗೆ ಕೊಟ್ಟರೆಂದು ಅವರಿಗೆ ಆ ಪದವಿಗಳನ್ನು ಕೊಟ್ಟಿದೆ. ಅವರ ಕೊಡುಗೆಯನ್ನು ತಿಳಿದುಕೊಂಡು ನಾನು ಕಲಿಯಬೇಕಾಗಿದೆ. ಆ ಕಾರಣದಿಂದ ಈ ಉತ್ತರ ಸರಿಯಾಗಿಲ್ಲ, ಮಾನ್ಯ ಮಂತ್ರಿಗಳು ಉತ್ತರವನ್ನು ಕೊಡಬೇಕೆಂದು ಕೋರುತ್ತೇನೆ.

**ಡಾ|| ಸಿ.ಎಸ್. ಅಶ್ವಥನಾರಾಯಣಃ-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆಯಲ್ಲಿ ಎಷ್ಟು ಜನರಿಗೆ ಗೌರವ Doctorate ಕೊಡಲಾಗಿದೆ ಎಂದು ಕೇಳಿರುವುದರಿಂದ ಆ ಸಂಖ್ಯೆಯನ್ನು ಕೊಡಲಾಗಿದೆ.

**ಡಾ|| ತೇಜಸ್ವಿನಿಗೌಡಃ-** ಸಂಪೂರ್ಣ ಮಾಹಿತಿಯನ್ನು ಒದಗಿಸಬೇಕು ಎಂದು ಕೇಳಿದ್ದೇನೆ, ಅದು print ಆಗಿದೆ.

**ಡಾ|| ಸಿ.ಎಸ್. ಅಶ್ವಥನಾರಾಯಣಃ-** ಅವರು ಯಾವ ಯಾವ ವ್ಯಕ್ತಿಗಳಿಗೆ Doctorate ನೀಡಲಾಗಿದೆ ಎಂದು ಕೇಳಿದ್ದಾರೆ, ಖಂಡಿತ ಆ ಮಾಹಿತಿಯನ್ನು ಒದಗಿಸುತ್ತೇನೆ. ಮುಖ್ಯವಾಗಿ ಬಹಳಷ್ಟು ವ್ಯವಸ್ಥಿತವಾದ procedural process ಇದೆ. University ಯಲ್ಲಿ ಚರ್ಚೆಯನ್ನು ಮಾಡಿ, ಪರಿಶೀಲನಾ ಸಮಿತಿಗೆ ಸಲ್ಲಿಸಿ, ೪೫ ದಿನಗಳ ಮುಂಚೆ .... ಮೊದಲು ಗೌರವಾನ್ವಿತ ರಾಜ್ಯಪಾಲರಿಗೆ ತಡವಾಗಿ submit ಆಗುತ್ತಿತ್ತು ಎನ್ನುವ ಪ್ರಶ್ನೆ ಇತ್ತು. ೨೦೧೬ ರಲ್ಲಿ ಒಂದು ಸೂಚನೆಯನ್ನು ಕೊಡುತ್ತಾರೆ. Syndicate ನಲ್ಲಿ ಚರ್ಚೆಯಾಗಿರುವ ಹೆಸರುಗಳನ್ನು shortlist ಮಾಡುತ್ತಾರೆ, ಅದು ೩ ಜನರೋ ಅಥವಾ ಎಷ್ಟು ಜನರನ್ನು shortlist ಮಾಡಿದಂತಹ ವ್ಯಕ್ತಿಗಳನ್ನು Governor ಸ್ವತಃ ಒಂದು ಪರಿಶೀಲನಾ ಸಮಿತಿಯನ್ನು ರಚನೆ ಮಾಡುತ್ತಾರೆ. ಆ ಪರಿಶೀಲನಾ ಸಮಿತಿಗೆ ೪೫ ದಿನಗಳ ಮುಂಚೆ submit ಮಾಡಿ, Governor ಕಡೆಯಿಂದ shortlist ಆಗಿರುವವರು, ಇನ್ನೊಂದು ಕಡೆ retired ಕಾರ್ಯದರ್ಶಿಗಳು ಹಾಗೂ University ಕಡೆಯಿಂದ ಆಯ್ಕೆ ಮಾಡಿರುವವರನ್ನು ಸೇರಿದಂತೆ ಆ ಪರಿಶೀಲನಾ ಸಮಿತಿಯಲ್ಲಿ ಸಾಕಷ್ಟು ಚರ್ಚೆ ಮಾಡಿ ಹೆಸರುಗಳನ್ನು ನಿರ್ಧಾರ

ಮಾಡುತ್ತಾರೆ. ಕೆಲವು University ಗಳು ಎಷ್ಟೋ ಸಂದರ್ಭಗಳಲ್ಲಿ ಕೊಟ್ಟಿಲ್ಲ, ಇದರ ಬಗ್ಗೆ ಸಾಕಷ್ಟು ಸಮಾಲೋಚನೆ ಮಾಡುವುದು ನಡೆಯುತ್ತದೆ. ಕಳೆದ ಬಾರಿ ಮಾನ್ಯ ಸದಸ್ಯರು ಉಲ್ಲೇಖ ಮಾಡಿದ್ದರು. ಆಗ ಸರ್ಕಾರದಲ್ಲಿ ಒಂದು ಆಜ್ಞೆಯನ್ನು ತಂದು, ಯಾವುದೇ ನಕಲಿ ಅಥವಾ duplicate ಇರಬಹುದು, ಇಂತಹ Doctorate ಅಥವಾ ಪದವಿ ಕೊಡುವವರ ಮೇಲೆ ತಕ್ಷಣ F.I.R., ದಾಖಲು ಮಾಡಬೇಕೆಂದು ದಿನಾಂಕ ೨೬-೦೨-೨೦೨೧ರಲ್ಲಿ ಮಾಡಿದ್ದೇವೆ. ಇವರ ಸಲಹೆ ತೆಗೆದುಕೊಂಡು ಮಾಡಿದ್ದೇವೆ. ಈ ರೀತಿ ಎಲ್ಲಾ ಕಡೆ ಕ್ರಮ ವಹಿಸುವ ಕೆಲಸ ಆಗುತ್ತಿದೆ. ಆದಷ್ಟು ಪಾರದರ್ಶಕವಾಗಿ ಉತ್ತಮ ಹಾಗು ಯೋಗ್ಯರಾದವರಿಗೆ ಸಿಗುವುದು ಆಗುತ್ತಿದೆ. ಮಾನ್ಯ ಸದಸ್ಯರು ಕೇಳಿರುವ ಹೆಸರುಗಳನ್ನು ಒದಗಿಸುತ್ತೇನೆ.

**ಡಾ|| ತೇಜಸ್ವಿನಿಗೌಡಃ-** ಮಾನ್ಯ ಸಚಿವರ ಸ್ಪಂದನೆಯನ್ನು ನಾನು ಸ್ವಾಗತಿಸುತ್ತೇನೆ ಮತ್ತು appreciate ಮಾಡುತ್ತೇನೆ. ನನ್ನ ಕಾಳಜಿ ಏನೆಂದರೆ, ಪರಂಪರಾನುಗತ ಮೈಸೂರು ವಿಶ್ವವಿದ್ಯಾಲಯ ಡಾ|| ರಾಜ್‌ಕುಮಾರ್‌ರವರಿಗೆ ಏಕೆ ಕೊಟ್ಟಿದ್ದಾರೆಂದು ಪುಟ್ಟ ಮಗು ಸಹ ಹೇಳುತ್ತದೆ. ನಟಸಾರ್ವಭೌಮ ಡಾ|| ರಾಜ್‌ಕುಮಾರ್‌ರವರಿಗೆ Doctorate ಕೊಡಲಾಗಿದೆ. ಯಾರು ಯಾರೋ ಕಂಡ ಕಂಡವರೆಲ್ಲಾ Doctor, Doctor ಎಂದಾಗಿರುತ್ತಾರೆ. Doctorಗಳೇ Doctor ಎಂದು ಹೇಳಿಕೊಳ್ಳುವಂತಿಲ್ಲ. ಮಾನ್ಯ ಸಭಾಪತಿಯವರಾದ ತಮಗೂ ೩ ಬಾರಿ Doctorate ಕೊಟ್ಟರೂ ತಾವು ತೆಗೆದುಕೊಳ್ಳಲಿಲ್ಲ. ರಾಹುಲ್ ದ್ರಾವಿಡ್ ರವರಿಗೆ Doctorate ಕೊಟ್ಟಾಗ ' ನನಗೆ ಏಕೆ Doctorate? ನಮ್ಮ ಅಮ್ಮ ಕಷ್ಟಪಟ್ಟು ೭ ವರ್ಷ ಓದಿ Doctorate ತೆಗೆದುಕೊಂಡಿದ್ದಾರೆ, ಕ್ರಿಕೇಟ್‌ನಲ್ಲಿ ದೇವರು ಎಂದು ಕರೆಯುತ್ತಾರೆ, ಅಷ್ಟು ನನಗೆ ಸಾಕು' ಎಂದು ಹೇಳಿದರು.

**ಶ್ರೀ ಪುಟ್ಟಣ್ಣಃ-** ಮಾನ್ಯ ಸಭಾಪತಿಯವರೇ, Indiaದಲ್ಲೇ ಅವರು eligible ಇದ್ದಾರೆ.

**ಸಭಾಪತಿಯವರುಃ-** ನಾನು ಒಪ್ಪಲಿಲ್ಲ.

**ಶ್ರೀ ಮಾನೆ ಶ್ರೀನಿವಾಸಃ-** ಸಮಾಜ ಸೇವೆ ಹೆಸರಿನಲ್ಲಿ Doctorate ಪಡೆಯುವ ಪರಿಪಾಠ ಪ್ರಾರಂಭವಾಗಿದೆ. ದುಡ್ಡು ಕೊಡುವುದು, Doctorate ತೆಗೆದುಕೊಳ್ಳುವುದು. ಅವರನ್ನೆಲ್ಲಾ ತೆಗೆದು ಹಾಕಬೇಕು.

**ಸಭಾಪತಿಯವರುಃ-** ತಮ್ಮನ್ನು ಮಾತನಾಡಲು ಯಾರು ಕರೆದರು? ಆ ರೀತಿ ಎದ್ದು ಮಾತನಾಡುವುದೇ?

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಪುಟ್ಟಣ್ಣ:-** ಮಾನ್ಯ ಪುಟ್ಟಣ್ಣನವರು ಹೇಳಿದಂತಹ ಅಂಶ ಉಲ್ಲೇಖ ಇದೆ. ಅನೇಕ ಮಹನೀಯರ photoಗಳನ್ನು ಸುಮ್ಮನೆ ಹಾಕಿಕೊಂಡಿಲ್ಲ. ಪರಿಣಿತಿ ಸಾಧಿಸಿ Doctorate ಪಡೆದವರು. ವಿಶೇಷ ಕೊಡುಗೆ ಕೊಟ್ಟವರು. ಡಾ|| ಗಂಗೂಬಾಯಿ ಹಾನಗಲ್ ರವರಿಗೆ Doctorate ಪದವಿ ಏಕೆ ಕೊಟ್ಟರು ಎಂದು ಯಾರಾದರೂ ಕೇಳುತ್ತಾರೆಯೆ?. ೩೦ ವರ್ಷಗಳಲ್ಲಿ ೧೧೨೪ Doctorate ಕೊಟ್ಟಿದ್ದಾರೆ. ನಾನು ಈಗ ಅದರ ಬಗ್ಗೆ ಒಂದು ಪಿಹೆಚ್‌ಡಿ ಮಾಡಿ Doctorate ಪದವಿ ತೆಗೆದುಕೊಳ್ಳಬೇಕಾಗಿದೆ. ದಯಮಾಡಿ ಇದಕ್ಕೆ ಕಡಿವಾಣ ಹಾಕಬೇಕು, ಇದರ ಬಗ್ಗೆ ತನಿಖೆ ಮಾಡಿಸಬೇಕೆಂದು ಮಾನ್ಯ ಉನ್ನತ ಶಿಕ್ಷಣ ಸಚಿವರಲ್ಲಿ ಕೇಳುತ್ತೇನೆ. I am very curious to know the names of these persons, who have got the Doctorate. ನಮ್ಮ ಕಲೆಯನ್ನು ಶ್ರೀಮಂತ ಮಾಡಿಬಿಟ್ಟಿದ್ದಾರೆ.

**ಡಾ|| ಸಿ.ಎಸ್. ಅಶ್ವಥನಾರಾಯಣ:-** ಆ ಹೆಸರುಗಳನ್ನು ಕೊಡುವ ಕೆಲಸ ಆಗುತ್ತದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಆ) ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ೨೩ನೇ ಸೆಪ್ಟೆಂಬರ್ ೨೦೨೧ನೇ ಸಮೂಹ ೪ ರ ಲಿಖಿತ ಮೂಲಕ ಉತ್ತರಿಸುವ ಒಟ್ಟು ೧೫೨ ಪ್ರಶ್ನೆಗಳ ಪೈಕಿ ೫೬ ಪ್ರಶ್ನೆಗಳಿಗೆ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**ಸಭಾಪತಿಯವರುಃ-** ಮಂಡಿಸಲಾಯಿತು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**3. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು**

**ಅ) ರಾಜ್ಯದಲ್ಲಿ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಲು ಅವಶ್ಯವಿರುವ ಮೂಲಭೂತ ಸೌಕರ್ಯಗಳಿಲ್ಲದಿರುವುದರ ಜೊತೆಗೆಅವಶ್ಯಕ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆ ಇದ್ದರೂ ವಿಶ್ವವಿದ್ಯಾಲಯವನ್ನು ಸ್ಥಾಪಿಸಲು ಮಾನ್ಯತೆಯನ್ನು ನೀಡಿರುವ ಬಗ್ಗೆ.**

.......

**ಶ್ರೀ ಎಂ. ನಾರಾಯಣಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಲು ಬೇಕಾಗಿರುವ ಮೂಲಭೂತ ಸೌಕರ್ಯಗಳಿಲ್ಲದೇ ಹಾಗೂ ಅವಶ್ಯಕ ವಿದ್ಯಾರ್ಥಿಗಳ ಸಂಖ್ಯೆಗಳು ಕಡಿಮೆಯಿದ್ದರೂ ಸಹ, ವಿಶ್ವವಿದ್ಯಾಲಯವನ್ನು ಸ್ಥಾಪಿಸಲು ಮಾನ್ಯತೆಯನ್ನು ನೀಡಿರುವ ವಿಚಾರವು ಸಾರ್ವಜನಿಕವಾಗಿ ಪ್ರಾಮುಖ್ಯತೆ ಹೊಂದಿರುವ ವಿಷಯವಾಗಿದ್ದು, ಸದರಿ ವಿಚಾರವನ್ನು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಲು ಅನುಮತಿ ನೀಡಿದ್ದಕ್ಕಾಗಿ ವಂದನೆಗಳನ್ನು ತಿಳಿಸುತ್ತೇನೆ.

ಸರ್ಕಾರದ ನೀತಿ ನಿಯಮಗಳಂತೆ ವಿಶ್ವವಿದ್ಯಾಲಯಕ್ಕೆ ಮಾನ್ಯತೆಯನ್ನು ನೀಡಬೇಕಾದರೆ ಸುಮಾರು ೧೨ ಎಕರೆ ಜಾಗ ಹಾಗೂ ವಿದ್ಯಾರ್ಥಿಗಳ ಸಂಖ್ಯೆ ೩೫೦೦ ಇರಬೇಕು. ನಿನ್ನೆ ಅದರ ಬಗ್ಗೆ Bill ತರಬೇಕೆಂದರೆ ಹೇಳಿದರು. ನಾನು ಇಲ್ಲಿ ಸ್ವಲ್ಪ correction ಕೂಡ ಮಾಡಿಕೊಳ್ಳುತ್ತೇನೆ. Bengaluru Corporation limits ಒಳಗೆ ಬಂದಾಗ ಕಡ್ಡಾಯವಾಗಿ ೨೫ ಎಕರೆ ಇರಬೇಕು ಎಂದು ಮಾನ್ಯ ಸಚಿವರು Bills pass ಮಾಡಬೇಕೆಂದರೆ ಹೇಳಿದ್ದರು. ೨೫ ಎಕರೆ ಜಾಗ ೩೫೦೦ ವಿದ್ಯಾರ್ಥಿಗಳ ಸಂಖ್ಯೆ ಇರಬೇಕೆಂದು ಕಾನೂನು ಹೇಳುತ್ತದೆ. ಆದರೆ ನೃಪತುಂಗ ವಿಶ್ವವಿದ್ಯಾಲಯದಲ್ಲಿ ಲಭ್ಯವಿರುವ ದಾಖಲೆಗಳ ಪ್ರಕಾರ ಕೇವಲ ೧೦ ಎಕರೆ ವಿಸ್ತೀರ್ಣವಿದೆ. ವಿದ್ಯಾರ್ಥಿಗಳ ಸಂಖ್ಯೆ ಸುಮಾರು ೨೦೦೦ ಮಾತ್ರ ಇರುತ್ತದೆ. ಕಾನೂನು ಪ್ರಕಾರ ಮೂಲ ಸೌಲಭ್ಯ ಹಾಗೂ ಇನ್ನಿತರೆ ಅಂಶಗಳ ಕೊರತೆಯಿದ್ದರೂ ಸಹ ಈ ವಿಶ್ವವಿದ್ಯಾಲಯಕ್ಕೆ ಮಾನ್ಯತೆ ನೀಡಿರುವುದು ಎಷ್ಟು ಸಮಂಜಸವಾಗಿದೆ?

೨೦೨೧ರಲ್ಲಿ ಪ್ರಥಮ ವರ್ಷ B.Sc., ಪ್ರವೇಶಾವಕಾಶವನ್ನು ಬಯಸುವ ವಿದ್ಯಾರ್ಥಿಗಳಿಗೆ ಏಕಾಏಕಿ ಶುಲ್ಕವನ್ನು ಜಾಸ್ತಿ ಮಾಡಿರುತ್ತಾರೆ. ಈಗಾಗಲೇ ಮಾರಣಾಂತಿಕ ಕೊರೋನಾ ರೋಗದಿಂದ ತತ್ತರಿಸಿ ಹೋಗಿರುವ ಸಮಯದಲ್ಲಿ ಬಡ ವಿದ್ಯಾರ್ಥಿಗಳ ಪೋಷಕರು lockdown ಸಮಯದಲ್ಲಿ ಕೆಲಸವನ್ನು ಕಳೆದುಕೊಂಡಿರುವ ಈ ಹೊತ್ತಿನಲ್ಲಿ ಹೆಚ್ಚಿನ ಶುಲ್ಕದಿಂದ ವಿದ್ಯಾರ್ಥಿಗಳನ್ನು ಹಾಗೂ ಪೋಷಕರನ್ನು ಚಿಂತೆಗೀಡು ಮಾಡಿದೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹಾಗೂ ಈ ವಿಶ್ವವಿದ್ಯಾಲಯಗಳು ಕನ್ನಡ ನಾಡಿನ ಎಲ್ಲಾ ಸರ್ಕಾರಿ ಸವಲತ್ತುಗಳನ್ನು ಬಳಸಿಕೊಂಡು ಸ್ಥಳೀಯ ಭಾಷೆ ಕನ್ನಡಕ್ಕೆ ಮೊದಲ ಆದ್ಯತೆಯನ್ನು ನೀಡದೇ, ಎಲ್ಲಾ ವ್ಯವಹಾರಗಳನ್ನು ಆಂಗ್ಲ ಭಾಷೆಯಲ್ಲಿಯೇ ಮುದ್ರಿಸಿ ವ್ಯವಹರಿಸುತ್ತಿರುವುದು ಖಂಡನೀಯವಾಗಿರುವ ವಿಷಯವಾಗಿದೆ. ಆದ್ದರಿಂದ ಪ್ರವೇಶ ಶುಲ್ಕ ಹಾಗೂ ಇನ್ನಿತರೆ ಶುಲ್ಕವನ್ನು ಕಡಿತಗೊಳಿಸುವ ಹಾಗೂ ವಿಶ್ವವಿದ್ಯಾಲಯದಲ್ಲಿ ಕನ್ನಡಕ್ಕೆ ಪ್ರಾಮುಖ್ಯತೆ ನೀಡುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಲು ಮನವಿ ಮಾಡುತ್ತೇನೆ, ಜೊತೆಗೆ ಇದು ಸರ್ಕಾರಿ ವಿಜ್ಞಾನ College. ಒಂದು ಕಾಲದಲ್ಲಿ ಕಲಾ College ಮತ್ತು ವಿಜ್ಞಾನ College ಗಳು ಜಂಟಿಯಾಗಿದ್ದವು. ಇದನ್ನು 'G.A.S., College' ಎಂದು ಕರೆಯುತ್ತಿದ್ದೆವು. ಆದರೆ ಈಗ ಕಲಾ College ಅನ್ನು ಅಲ್ಲಿಂದ ಒಕ್ಕಲೆಬ್ಬಿಸಿದ್ದಾರೆ. ವಿಜ್ಞಾನ College ಮತ್ತು ಕಲಾ College ಗಳೆರಡು ಸೇರಿದರೂ ಕೂಡ ಕೇವಲ ೧೦ ಎಕರೆ ಜಾಗ ಬರುತ್ತಿದೆ.

**ಸಭಾಪತಿಯವರು:-** ತಾವು ಓದಿ, ಭಾಷಣ ಮಾಡಬೇಡಿ.

**ಶ್ರೀ ಎಂ. ನಾರಾಯಣಸ್ವಾಮಿ:-** ಆದ್ದರಿಂದ ಇಲ್ಲಿ ನೃಪತುಂಗ ವಿಶ್ವವಿದ್ಯಾಲಯವನ್ನು ಮಾಡುವುದಕ್ಕೆ ಹೊರಟಿರುವುದು ಎಷ್ಟು ಸಮಂಜಸ ಎಂದು ಮನವಿ ಮಾಡುತ್ತೇನೆ. ಈ ಬಗ್ಗೆ ಸರ್ಕಾರವನ್ನು ಒತ್ತಾಯ ಮಾಡಬಯಸುತ್ತೇನೆ.

(ಮುಂದು)

(937) 23-9-2021 12.10 DS-MD

**ಡಾ:ಸಿ.ಎಸ್.ಅಶ್ವಥ ನಾರಾಯಣ(ಉನ್ನತ ಶಿಕ್ಷಣ, ಐಟಿ-ಬಿಟಿ, ವಿಜ್ಞಾನ ಹಾಗೂ ತಂತ್ರಜ್ಞಾನ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರ ಗಮನಕ್ಕೆ ತರುವುದೇನೆಂದರೆ, ನೃಪತುಂಗ ಸೈನ್ಸ್ ಕಾಲೇಜು ಇಡೀ ದಕ್ಷಿಣ ಭಾರತದಲ್ಲೇ ನಂಬರ್ ಒನ್ ಸೈನ್ಸ್ ಕಾಲೇಜು. RUSA (Rashtriya Uchchatar Shiksha Abhiyan) ಅಡಿಯಲ್ಲಿ ಪ್ರತಿಷ್ಠಿತವಾದಂತಹ ಸಂಸ್ಥೆ ಎಂದು ಗುರುತಿಸಿ ಅದಕ್ಕೆ ಮಾನ್ಯತೆ ಮತ್ತು autonomy ಕೊಟ್ಟು ವಿಶ್ವವಿದ್ಯಾಲಯ ಆಗಬೇಕೆಂದು ಇಡೀ ಕರ್ನಾಟಕದಲ್ಲಿ ಮೂರು ಸ್ಥಂಸ್ಥೆಗಳು ಆಯ್ಕೆಯಾಗುತ್ತದೆ. ನೃಪತುಂಗ, ಮಹಾರಾಣಿ ಮತ್ತು ಮಂಡ್ಯ ಕಾಲೇಜು. RUSA ದಲ್ಲಿ ಇದಕ್ಕೆ eligibility ಬರುವಂಥದ್ದು ಆಗುತ್ತದೆ. ಹಾಗಾಗಿ ಅದಕ್ಕೆ university status ಅನ್ನು ಕೊಟ್ಟು ಹಲವಾರು ಕಾರ್ಯಕ್ರಮಗಳು ಈಗ ಪ್ರಾರಂಭವಾಗಿರುವಂಥದ್ದಲ್ಲ. ಇದು ಹತ್ತು ವರ್ಷಗಳಿಂದ ಪ್ರಾರಂಭವಾಗಿರುವಂತಹ ಪ್ರಕ್ರಿಯೆ ಇವತ್ತು ಯಶಸ್ವಿಯಾಗಿರುವಂಥದ್ದು ಇದೆ. ಅಲ್ಲಿರುವಂತಹ GAS (Government Arts and Science) College ಕಾಲೇಜನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಒಕ್ಕಲೆಬ್ಬಿಸುವಂತಹ ಪ್ರಶ್ನೆ ಇಲ್ಲ. ಇನ್ನು ಬೇಕಾದರೆ ವಿಲೀನಗೊಳಿಸುವಂಥದ್ದು ಮಾಡಬಹುದು. ಸೈನ್ಸ್ ಕಾಲೇಜು ಮತ್ತು Arts College ನ್ನು ಇವತ್ತು multi-disciplinary concept way forward, ಹಾಗಾಗಿ ಯಾರನ್ನು ಒಕ್ಕಲೆಬ್ಬಿಸುವಂತಹ ಪ್ರಶ್ನೆ ಇಲ್ಲ. ಅಲ್ಲಿರುವಂತಹ ಸಂಸ್ಥೆಗಳನ್ನು ಒಟ್ಟಿಗೆ ತೆಗೆದುಕೊಂಡು ಬೆಳೆಸುವಂಥದ್ದಾಗುತ್ತದೆ. ಕಲಾ ವಿಭಾಗದವರು ಸೈನ್ಸ್‌ನ್ನು ಕಲಿಯುವುದಕ್ಕೆ ಅವಕಾಶ ಮಾಡಿಕೊಡಬಹುದು. ಸೈನ್ಸ್‌ನವರು ಕಲಾ ವಿಭಾಗದಲ್ಲಿ ಓದಬಹುದು. ಒಟ್ಟಾರೆ ಸಮಗ್ರವಾಗಿ ಆ ಸಂಸ್ಥೆಯನ್ನು ಇನ್ನು ಉತ್ತಮಗೊಳಿಸುವುದಕ್ಕೆ ಎಲ್ಲಾ ಪ್ರಯತ್ನಗಳನ್ನು ಮಾಡುವಂಥದ್ದಾಗುತ್ತದೆ. ಕನ್ನಡದ ಬಗ್ಗೆ ಹೇಳಬೇಕೆಂದರೆ, ಕನ್ನಡಕ್ಕೆ ಮೊದಲ ಆದ್ಯತೆ. ಇದುವರೆಗೂ ಉನ್ನತ ಶಿಕ್ಷಣದಲ್ಲಿ ಕನ್ನಡ ಕಡ್ಡಾಯ ಇರಲಿಲ್ಲ. ಇದುವರೆವಿಗೂ ಎರಡು ವರ್ಷ ಭಾಷೆ ಕಲಿಯುವುದಕ್ಕೆ ಮಾತ್ರ ಅವಕಾಶ ಇತ್ತು. ಯಾವ ಭಾಷೆ ಬೇಕಾದರೂ ಕಲಿಯಬಹುದಾಗಿತ್ತು. ಈ ವರ್ಷದಿಂದ ಒಂದು ಭಾಷೆ ಕನ್ನಡವನ್ನು ಕಡ್ಡಾಯವಾಗಿ ಕಲಿಯಬೇಕೆಂದು ಮಾಡಿರುವ ಮೊದಲನೇ ರಾಜ್ಯ ಎಂದರೆ ಕರ್ನಾಟಕ ರಾಜ್ಯ. ಈ ರೀತಿ ಎಲ್ಲವನ್ನು ಗಮನದಲ್ಲಿಟ್ಟುಕೊಂಡು ನಮ್ಮ ಸರ್ಕಾರಿ ಸಂಸ್ಥೆಗಳಿಗೆ ಮಾಡುವಂಥಾಗಿದೆ ಮತ್ತು ವಿಶ್ವವಿದ್ಯಾಲಯವಾಗಿರುವ ಕಾರಣ ಕೆಲವೊಂದು ಗುಣಮಟ್ಟವನ್ನು ಹೆಚ್ಚಿಸುವುದಕ್ಕೆ revenue generation ನಲ್ಲಿ ವಿದ್ಯಾರ್ಥಿಗಳಿಗೆ ಶುಲ್ಕವನ್ನು ಹೆಚ್ಚಿಸುವಂಥದ್ದು ಆಗುತ್ತದೆ. ಸರ್ಕಾರದಿಂದಲೂ ಹೆಚ್ಚಿನ ಸಹಾಯ ಕೊಡುವಂಥದ್ದಾಗುತ್ತದೆ. ಈ ಎಲ್ಲಾ ರೀತಿಯ ಸಹಕಾರಗಳನ್ನು ಕೊಟ್ಟು ಇಡೀ ದಕ್ಷಿಣ ಭಾರತದಲ್ಲೇ ನಂಬರ್ ಒನ್ ಕಾಲೇಜು ಎಂದರೆ ಸೈನ್ಸ್ ಕಾಲೇಜು.

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ತಪ್ಪು ಮಾಹಿತಿಯನ್ನು ಕೊಡುತ್ತಿದ್ದಾರೆ. ಅದನ್ನು ತಿದ್ದುವುದಕ್ಕೋಸ್ಕರ ಹೇಳುತ್ತಿದ್ದೇನೆ.

**ಸಭಾಪತಿಯವರು:-** ಶೂನ್ಯ ವೇಳೆಯಲ್ಲಿ ಚರ್ಚೆ ಇಲ್ಲ. ಈಗ ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ಆಮೇಲೆ ನೀವು ಸಚಿವರನ್ನು ಕೇಳಿಕೊಳ್ಳಿ.

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ವಿಜ್ಞಾನ ಕಾಲೇಜಿನಲ್ಲಿರುವಂಥವರು ಕಲಾ ಕಾಲೇಜಿನಲ್ಲೂ ಕಲಿಯಬಹುದ ಎಂದು ಮಾನ್ಯ ಸಚಿವರು ಹೇಳುತ್ತಿದ್ದಾರೆ. ನನ್ನ ಪ್ರಶ್ನೆ ಏನೆಂದರೆ, ಕಲಾ ಕಾಲೇಜನ್ನು ಅಲ್ಲಿಂದ ಒಕ್ಕಲೆಬ್ಬಿಸುತ್ತಾರೆಯೋ ಇಲ್ಲವೋ ಎಂಬುದನ್ನು ಕೇಳುತ್ತಿದ್ದೇನೆ.

**ಸಭಾಪತಿಯವರು:-** ಈಗ ಇದರ ಬಗ್ಗೆ ಚರ್ಚೆ ಇಲ್ಲ. ಆಮೇಲೆ ಸಚಿವರನ್ನು ಕೇಳಿಕೊಳ್ಳಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆ) ವಿಷಯ: ಧಾರವಾಡದಲ್ಲಿರುವ ಕಾನೂನು ವಿಶ್ವವಿದ್ಯಾಲಯಕ್ಕೆ
ಸರ್ ಸಿದ್ದಪ್ಪ ಕಂಬಳಿ ವಿಶ್ವವಿದ್ಯಾಲಯ ಎಂದು
ನಾಮಕರಣ ಮಾಡುವ ಬಗ್ಗೆ.

--------

**ಶ್ರೀ ಬಿ.ಕೆ.ಹರಿಪ್ರಸಾದ್(ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಹುಬ್ಬಳ್ಳಿ-ಧಾರವಾಡ ಮಹಾನಗರ ಸಭೆಯ ವ್ಯಾಪ್ತಿಯಲ್ಲಿ ಸ್ಥಾಪಿಸಲಾದ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯಕ್ಕೆ ಪ್ರಾತಃಸ್ಮರಣೀಯರಾದ “ಸರ್ ಸಿದ್ದಪ್ಪ ಕಂಬಳಿ” ಕಾನೂನು ವಿಶ್ವವಿದ್ಯಾನಿಲಯ ನಾಮಕರಣ ಮಾಡುವ ವಿಚಾರದ ಬಗ್ಗೆ ಮಾನ್ಯ ಸಚಿವರ ಗಮನಕ್ಕೆ ತರುತ್ತಿದ್ದೇನೆ.

ಹುಬ್ಬಳ್ಳಿ-ಧಾರವಾಡ ಮಹಾನಗರ ವ್ಯಾಪ್ತಿಯಲ್ಲಿ ಸ್ಥಾಪಿಸಲಾದ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾನಿಲಯಕ್ಕೆ ಪ್ರಥಮ Rank ನಲ್ಲಿ ಪಾಸಾದ, ಹುಬ್ಬಳ್ಳಿ ನಗರಸಭೆಯ ಪ್ರಥಮ ಅಧಿಕಾರೇತರ ಸದಸ್ಯರು ಹಾಗೂ ಧಾರವಾಡ ಜಿಲ್ಲಾ ಬೋರ್ಡ್‌ನ ಅಧ್ಯಕ್ಷರು ಕ್ರಿ.ಶ.೧೯೨೧ ರಿಂದ ೧೯೪೬ ರವರೆಗೆ ಸತತ ೨೫ ವರ್ಷ ಆಗಿನ ಕಾಲದ ಮುಂಬೈ ಪ್ರಾಂತ್ಯದ ಶಾಸನ ಸಭೆಯ ಸದಸ್ಯರಾಗಿ ೦೭ ಖಾತೆಗಳ ಸಚಿವರಾಗಿ ಜವಾಬ್ದಾರಿ ನಿರ್ವಹಿಸಿರುವ ಹಾಗೂ ಹಿಂದುಳಿದ ವರ್ಗಗಳ ಅಭಿವೃದ್ಧಿಗೆ ಶ್ರಮಿಸಿದ ಶ್ರೇಯಸ್ಸು ಧೀಮಂತ ನಾಯಕರಾದ, ಪ್ರಾತಃಸ್ಮರಣೀಯರಾದ “ಸರ್ ಸಿದ್ದಪ್ಪ ಕಂಬಳಿ” ರವರಿಗೆ ಸಲ್ಲುತ್ತದೆ.

“ಸರ್ ಸಿದ್ದಪ್ಪ ಕಂಬಳಿ” ಕಾನೂನು ವಿಶ್ವವಿದ್ಯಾನಿಲಯ ನಾಮಕರಣ ಮಾಡುವುದು ಉತ್ತರ ಕರ್ನಾಟಕ ಭಾಗದ ಮಹದಾಸೆಯಾಗಿರುತ್ತದೆ. ಈ ಬಗ್ಗೆ ಹಿಂದಿನ ಸರ್ಕಾರಕ್ಕೆ ಹಲವು ಬುದ್ಧಿ ಜೀವಿಗಳು, ಚಿಂತಕರು, ಸಾಹಿತಿಗಳು ಹಾಗೂ ಹೋರಾಟಗಾರರು ಒಕ್ಕೋರೂಲಿನಿಂದ ಮನವಿ ಸಲ್ಲಿಸಿದ್ದರೂ ಸಹ, ಈ ಬಗ್ಗೆ ಯಾವುದೇ ಕ್ರಮ ಕೈಗೊಂಡಿರುವುದಿಲ್ಲವೆಂಬ ವಿಷಯವು ದುರಾದೃಷ್ಟಕರವಾಗಿರುವ ವಿಚಾರವನ್ನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ.

**ಶ್ರೀ ಜೆ.ಸಿ.ಮಾಧುಸ್ವಾಮಿ(ಸಣ್ಣ ನೀರಾವರಿ, ಕಾನೂನು, ಸಂಸದೀಯ ವ್ಯವಹಾರಗಳ ಸಚಿವರು):-** ಮಾನ್ಯ ಸಭಾಪತಿಯವರೇ, “ಸರ್ ಸಿದ್ದಪ್ಪ ಕಂಬಳಿ” ಯವರ ಬಗ್ಗೆ ಎರಡು ಮಾತಿಲ್ಲ. ಸರ್ ಸಿದ್ದಪ್ಪ ಕಂಬಳಿಯವರ ಹೆಸರು ಕಾನೂನು ವಿಶ್ವವಿದ್ಯಾನಿಲಯಕ್ಕೆ ಇಡಿ ಎಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ನಮಗಿರುವ ಮಾಹಿತಿ ಪ್ರಕಾರ ಡಾ:ಬಿ.ಆರ್. ಅಂಬೇಡ್ಕರ್, ಶ್ರೀ ಬಸವೇಶ್ವರ ಮತ್ತು ಸರ್ ಸಿದ್ದಪ್ಪ ಕಂಬಳಿಯವರ ಹೆಸರು ಇಡಬೇಕೆಂದು ಕಾನೂನು ವಿಶ್ವವಿದ್ಯಾನಿಲಯವನ್ನು ಆರಂಭ ಮಾಡುವಾಗ ಬಹಳ

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಚರ್ಚೆಯಾಗಿ ಜಿಜ್ಞಾಸೆಗಳಾಗಿ ಯಾರ ಹೆಸರು ಬೇಡ, ಅದಕ್ಕೆ ಕರ್ನಾಟಕ ಕಾನೂನು ವಿಶ್ವವಿದ್ಯಾನಿಲಯ ಎಂದು ಹೆಸರು ಇಡಬೇಕೆಂದು ಅಂತಿಮವಾಗಿತ್ತು ಎನ್ನುವ ಮಾಹಿತಿಯನ್ನು ನನಗೆ ಕೊಟ್ಟಿದ್ದಾರೆ. ಅದರ ಮೇಲೆ ಹುಬ್ಬಳ್ಳಿಯವರೇ ಸನ್ಮಾನ್ಯ ಮುಖ್ಯಮಂತ್ರಿಗಳಾಗಿರುವುದರಿಂದ ಅವರು ಇದರ ಬಗ್ಗೆ ನಿರ್ಧಾರ ತೆಗೆದುಕೊಂಡು ಪೂರಕವಾದ ಉತ್ತರ ಹೇಳಲಿ ಎಂದು ನಾನು ಬಯಸುತ್ತೇನೆ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಹಿಂದುಳಿದ ವರ್ಗಗಳ ಅಭಿವೃದ್ಧಿಗಾಗಿ ಇವರ ಕೊಡುಗೆ ಅಪಾರವಾಗಿದೆ. ತಾವು ಕೂಡ ಆ ಪ್ರಾಂತ್ಯದಲ್ಲಿದ್ದೀರಿ. ಮಾನ್ಯ ಮುಖ್ಯಮಂತ್ರಿಗಳು ಅದೇ ಪ್ರಾಂತ್ಯದವರಾಗಿದ್ದಾರೆ.

**ಶ್ರೀ ಬಸವರಾಜ ಬೊಮ್ಮಾಯಿ(ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೇ, ಕರ್ನಾಟಕ ಕಾನೂನು ವಿಶ್ವವಿದ್ಯಾನಿಲಯಕ್ಕೆ ಸರ್ ಸಿದ್ದಪ್ಪ ಕಂಬಳಿಯವರ ಹೆಸರು ಇಡಬೇಕೆನ್ನುವ ಪ್ರಸ್ತಾವನೆಯನ್ನು ಮಾನ್ಯ ಬಿ.ಕೆ.ಹರಿಪ್ರಸಾದ್‌ರವರು ತಂದಿರುವುದು ಬಹಳ ಸಂತೋಷವಾಗಿದೆ. ಸರ್ ಸಿದ್ದಪ್ಪ ಕಂಬಳಿಯವರ ಬಗ್ಗೆ ತಮಗೂ ಕೂಡ ಗೊತ್ತಿದೆ. ಆ ಭಾಗದ ಅತ್ಯಂತ ಹಿರಿಯ ನಾಯಕರು ಮತ್ತು ಮೊರಾರ್ಜಿ ದೇಸಾಯಿಯವರ ಸರ್ಕಾರದಲ್ಲಿ ೭ ಖಾತೆಗಳನ್ನು ಹೊಂದಿದ್ದಂತಹ ಬಹಳ ದೊಡ್ಡ ರಾಜಕೀಯ ನಾಯಕರು. ಮೊರಾರ್ಜಿ ದೇಸಾಯಿಯವರ ಸರ್ಕಾರದಲ್ಲಿ ಅವರು ಮಂತ್ರಿಗಳಾಗಿದ್ದರು. ಅಷ್ಟೇ ಅಲ್ಲ, ಡಾ:ಬಿ.ಆರ್.ಅಂಬೇಡ್ಕರವರ ಜೊತೆಯಲ್ಲಿ ನಿಕಟವಾದ ಸಂಬಂಧ, ಸಂಪರ್ಕವನ್ನು ಹೊಂದಿದ್ದರು ಎನ್ನುವುದು ತಮಗೆಲ್ಲಾ ಗೊತ್ತಿದೆ. ಈ ಹಿನ್ನೆಲೆಯಲ್ಲಿ ಹಲವಾರು ಸಲಹೆಗಳು ಬಂದಿತ್ತು ಎಂದು ಮಾನ್ಯ ಸಚಿವರು ಈಗಾಗಲೇ ಹೇಳಿದ್ದಾರೆ. ನಾನು ಈ ಬಗ್ಗೆ ಕೂಡಲೇ ಕಾನೂನು ಸಚಿವರ ಜೊತೆ ಮತ್ತು ವೈಸ್ ಛಾನ್ಸಲರ್‌ರವರ ಜೊತೆಯಲ್ಲಿ ಮಾತನಾಡುತ್ತೇನೆ. ಇದು ಸಿಂಡಿಕೇಟ್‌ನಲ್ಲಿ ಆಗಬೇಕು. ಇದನ್ನು ಸರ್ಕಾರ ಮಾಡುವುದಕ್ಕಿಂತ ವಿಶ್ವವಿದ್ಯಾನಿಲಯದಿಂದ ಪ್ರಪೋಸಲ್ ಬಂದಾಗ ಸರ್ಕಾರ ಒಪ್ಪಿಕೊಳ್ಳಬೇಕಾಗುತ್ತದೆ. ಖಂಡಿತವಾಗಿಯೂ ಸರ್ ಸಿದ್ದಪ್ಪ ಕಂಬಳಿ ಬಗ್ಗೆ ನನಗೆ ಬಹಳಷ್ಟು ಅಭಿಮಾನವಿದೆ. ಅವರು ನಮ್ಮ ಕುಟುಂಬಕ್ಕೂ ಬಹಳ ಹತ್ತಿರ ಇರುವಂಥವರು. ಹೀಗಾಗಿ ಮಾನ್ಯ ಸದಸ್ಯರು ಪ್ರಸ್ತಾಪಿಸಿರುವ ವಿಚಾರವನ್ನು ಅತ್ಯಂತ ಸಕರಾತ್ಮವಾಗಿ ತೆಗೆದುಕೊಳ್ಳುತ್ತೇವೆ. ನಮ್ಮ ಮೇಲೆ ವಿಶ್ವಾಸ ಇಡಿ. ಈ ಪ್ರಕ್ರಿಯೆಗೆ ನಾವು ಸಣ್ಣ ಚರ್ಚೆ ಮಾಡಿ ತೀರ್ಮಾನ ತೆಗೆದುಕೊಳ್ಳುತ್ತೇವೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇ) ವಿಷಯ: ಬೆಂಗಳೂರು ನಗರದಲ್ಲಿರುವ ಅಪಾರ್ಟ್‌ಮೆಂಟ್‌ಗಳಲ್ಲಿ
ಬೆಂಕಿ ಸುರಕ್ಷತೆಗಳನ್ನು ಅಳವಡಿಸದೆ ಇರುವ ಬಗ್ಗೆ.

-------

**ಶ್ರೀ ಯು.ಬಿ.ವೆಂಕಟೇಶ್(ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ತಾವು ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ಬೆಂಗಳೂರು ಮಹಾನಗರವು ಐ.ಟಿ./ಬಿ.ಟಿ. ಸ್ಪರ್ಶದಿಂದ ದಿನೇ ದಿನೇ ಅಭಿವೃದ್ಧಿಯಾಗುತ್ತಾ ತನ್ನ ವಿಸ್ತೀರ್ಣವನ್ನು ವಿಸ್ತರಿಸಿಕೊಂಡು ಹೊಸ ಗಗನಚುಂಬಿ ಕಟ್ಟಡಗಳು ತಲೆ ಏಳುತ್ತಿವೆ. ಆದರೆ, ಈ ಕಟ್ಟಡಗಳಲ್ಲಿ ಎಷ್ಟರ ಮಟ್ಟಿಗೆ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂಬುದು ಯಕ್ಷ ಪ್ರಶ್ನೆಯಾಗಿದೆ.

ಈ ಬಗ್ಗೆ ಮಾಹಿತಿಯನ್ನು ಕೆದಕಲು ಹೋದರೆ ಆಶ್ಚರ್ಯವಾಗುವುದಂತು ಸತ್ಯ. ಏಕೆಂದರೆ, ಅಗ್ನಿ ಸುರಕ್ಷತೆಯ ನಿಯಮಗಳನ್ನು ಗಾಳಿಗೆ ತೂರಿ ಅನುಮತಿ ಪಡೆದಿದ್ದಕ್ಕಿಂತಲೂ ಹೆಚ್ಚು ಮಹಡಿಗಳನ್ನು ಕಟ್ಟುವ ಮಾಲೀಕರು ಯಾವುದೇ ಅಗ್ನಿ ಸುರಕ್ಷತಾ ಕ್ರಮಗಳನ್ನು ಕೂಡ ಅನುಸರಿಸುತ್ತಿಲ್ಲವೆಂಬುದಕ್ಕೆ ದೇವರಚಿಕ್ಕನಹಳ್ಳಿಯ ಆಶ್ರಿತ್ ಅಪಾರ್ಟ್‌ಮೆಂಟ್‌ನಲ್ಲಿ ಸಿಲಿಂಡರ್ ಸ್ಫೋಟ ದುರಂತವೇ ಸಾಕ್ಷಿ.

ಬಹುತೇಕ ಬೆಂಗಳೂರು ನಗರದಲ್ಲಿ ನಿರ್ಮಾಣವಾಗಿರುವ/ ನಿರ್ಮಾಣವಾಗುತ್ತಿರುವ ಅಪಾರ್ಟ್‌ಮೆಂಟ್‌ಗಳಲ್ಲಿ ಬೆಂಕಿ ಸುರಕ್ಷತಾ ನಿಯಮಗಳನ್ನು ಅಳವಡಿಸಿ ಕೊಂಡಿರುವುದಿಲ್ಲವೆಂಬುದಕ್ಕೆ ಸಾಕ್ಷಿಯಾಗಿದೆ. ಈ ಹಿಂದೆ ೨೦೧೦ ರಲ್ಲಿ ಬೆಂಗಳೂರಿನಲ್ಲಿ ನಡೆದ ಕಾರ್ಲ್‌ಟನ್ ಟವರ್ ದುರಂತ ನಡೆದು ೧೧ ವರ್ಷಕ್ಕೆ ಸರಿಯಾಗಿ ಬೆಂಗಳೂರಿನಲ್ಲಿ ಮತ್ತೊಂದು ದೊಡ್ಡ ಬೆಂಕಿ ದುರಂತವಾಗಿದೆ.

ಈ ಹಿನ್ನೆಲೆಯಲ್ಲಿ ಕರ್ನಾಟಕ ಉಚ್ಚ ನ್ಯಾಯಾಲಯವು ರಿಟ್ ಪಿಟಿಷನ್ ಸಂಖ್ಯೆ:೩೮೦೭೩/೨೦೧೦ ರಲ್ಲಿ ದಿನಾಂಕ:೦೬-೦೬-೨೦೨೧ರ ಮಧ್ಯಂತರ ಆದೇಶದಲ್ಲಿ ಸೂಚಿಸಿದ್ದರನ್ವಯ ಅಗ್ನಿಶಾಮಕ ಮತ್ತು ತುರ್ತು ಸೇವೆ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಜಂಟಿಯಾಗಿ ಕಾರ್ಯಸೂಚಿಯನ್ನು ಸರ್ಕಾರಕ್ಕೆ ಸಲ್ಲಿಸಿದ್ದರ ಹಿನ್ನೆಲೆಯಲ್ಲಿ ಕರ್ನಾಟಕ ಸರ್ಕಾರದ ಗೃಹ ಇಲಾಖೆಯು ಅಧಿಸೂಚನೆ ದಿನಾಂಕ:೦೭-೦೭-೨೦೧೧ ರಲ್ಲಿ ಫೈರ್ ಸರ್ವೀಸ್ ಆಕ್ಟ್ ೧೯೬೪ ಸೆಕ್ಷನ್ ೧೩ ರಲ್ಲಿ ಸಾರ್ವಜನಿಕ ಪ್ರಮುಖ ಸ್ಥಳಗಳಲ್ಲಿ ೧೫ ಮೀಟರ್‌ಗಿಂತ ಎತ್ತರ ಕಟ್ಟಡ ನಿರ್ಮಾಣ ಮಾಡುವ ಸಂದರ್ಭದಲ್ಲಿ ಸಾರ್ವಜನಿಕ ಆಸ್ತಿ ಹಾಗೂ ಪ್ರಾಣ ಉಳಿಸುವ ಹಿನ್ನೆಲೆಯಲ್ಲಿ ಎತ್ತರ ಕಟ್ಟಡ ನಿರ್ಮಾಣ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಲು ನಿರ್ಬಂಧಿಸಿದೆ. ಆದಾಗ್ಯೂ, ಸದರಿ ಆದೇಶವನ್ನು ಗಾಳಿಗೆ ತೂರಿ ಎತ್ತರ ಕಟ್ಟಡ ನಿರ್ಮಾಣ ಮಾಡುತ್ತಿರುವುದು ಇಂತಹ ಅವಘಡಗಳಿಗೆ ಕಾರಣವಾಗಿದೆ.

ಬಿಬಿಎಂಪಿ ವ್ಯಾಪ್ತಿಯಲ್ಲಿ ಸುಮಾರು ೧೩,೨೧೪ ಕಟ್ಟಡಗಳಲ್ಲಿ ಬೆಂಕಿ ಸುರಕ್ಷತೆಗಳಿಲ್ಲ. ಕರ್ನಾಟಕದ ೧೪ ಸಾವಿರಕ್ಕೂ ಹೆಚ್ಚು ಕಟ್ಟಡಗಳಲ್ಲಿ ಬೆಂಕಿ ಸುರಕ್ಷತಾ ನಿಯಮಗಳನ್ನು ಉಲ್ಲಂಘನೆ ಮಾಡಲಾಗಿದೆ. ಇಂತಹ ೧೩ ಸಾವಿರಕ್ಕೂ ಹೆಚ್ಚು ಕಟ್ಟಡಗಳು ಬೆಂಗಳೂರಿನಲ್ಲೇ ಇವೆ ಎಂಬುದು ಆತಂಕಕಾರಿ ಸಂಗತಿ. ರಾಜ್ಯದ ೧೪,೦೦೦ಕ್ಕೂ ಹೆಚ್ಚು ಕಟ್ಟಡಗಳ ನಿರ್ಮಾಣದ ವೇಳೆ ಅಗ್ನಿ ಸೇವೆಗಳ ಇಲಾಖೆಯಿಂದ ಯಾವುದೇ ಕ್ಲಿಯರೆನ್ಸ್ ಪಡೆದುಕೊಂಡಿಲ್ಲ. ಆದರೆ ಬೆಂಗಳೂರಿನ ೨,೦೦೦ ಕ್ಕೂ ಹೆಚ್ಚು ಕಟ್ಟಡಗಳು ನಿರ್ಮಾಣದ ವೇಳೆ ಕ್ಲಿಯರೆನ್ಸ್ ಪಡೆದಿದ್ದರೂ ನಂತರ ಆ ನಿಯಮಗಳನ್ನು ಉಲ್ಲಂಘನೆ ಮಾಡಿವೆ. ಈ ಬಗ್ಗೆ ಸರ್ಕಾರವು ಕೂಡಲೇ ನಿರ್ಮಾಣವಾಗುತ್ತಿರುವ/ನಿರ್ಮಾಣವಾಗಿರುವ ಕಟ್ಟಡಗಳಲ್ಲಿ ಯಾವ ರೀತಿ ಅಗ್ನಿ ದುರಂತವನ್ನು ನಿಯಂತ್ರಿಸಲು ಕ್ರಮ ಕೈಗೊಳ್ಳಲಾಗಿದೆ? ಇವೆಲ್ಲ ನೋಡಿದರೆ ಈ ವಿಧಾನಸೌಧದ ಕಟ್ಟಡದಲ್ಲಿಯೂ ಅಗ್ನಿ ದುರಂತ ತಡೆಯುವ ಉನ್ನತ ತಂತ್ರಜ್ಞಾನ ಅಳವಡಿಸಲಾಗಿಲ್ಲವೆಂಬ ಮಾಹಿತಿ ಇದ್ದು, ಈ ಕುರಿತು ಸರ್ಕಾರ ಏನು ಕ್ರಮ ಕೈಗೊಳ್ಳಲಿದೆ ಎಂಬ ಬಗ್ಗೆ ಮಾನ್ಯ ಗೃಹ ಸಚಿವರನ್ನು ಒತ್ತಾಯಿಸುತ್ತೇನೆ.

**ಶ್ರೀ ಕೆ.ಹರೀಶ್ ಕುಮಾರ್(ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಬೊಮ್ಮನಹಳ್ಳಿ ಸಮೀಪದ ದೇವರಚಿಕ್ಕನಹಳ್ಳಿಯಲ್ಲಿ ದಿನಾಂಕ:೨೧.೦೯.೨೦೨೧ರ ಮಂಗಳವಾರ ಸಂಭವಿಸಿದ ಅಗ್ನಿ ಅನಾಹುತ ಅಪಾರ್ಟ್‌ಮೆಂಟ್ ಸೇರಿ ಬಹುಮಹಡಿ ಕಟ್ಟಡಗಳ ಸುರಕ್ಷತೆ ನಿಟ್ಟಿನಲ್ಲಿ ಎಚ್ಚರಿಕೆ ಗಂಟೆಯಾಗಿದೆ. ಇದರಿಂದಾಗಿ ಪ್ರಾಣಹಾನಿ ಕೂಡ ಸಂಭವಿಸಿದ್ದು, ನಿಜಕ್ಕೂ ಇದು ದುರಂತವೇ ಸರಿ. ೨೦೧೦ರ ಕಾರ್ಲಟನ್ ಟವರ್ ದುರಂತದ ನಂತರ ಮತ್ತೊಂದು ದೊಡ್ಡ ಅನಾಹುತ ಸಂಭವಿಸಿರುವುದನ್ನು ಗಮನಿಸಿದರೆ ಪಾಲಿಕೆ ಅಧಿಕಾರಿಗಳು ಎಚ್ಚೆತ್ತಿಲ್ಲ ಎಂಬುದಾಗಿ ಸ್ಪಷ್ಟವಾಗಿ ತಿಳಿದು ಬರುತ್ತದೆ. ೧೧ ವರ್ಷಗಳು ಕಳೆದರೂ ಸಹ ಕಟ್ಟಡಗಳಲ್ಲಿ ಅಗ್ನಿ ಸುರಕ್ಷತಾ ಕ್ರಮ ಪಾಲನೆಯಾಗದಿರುವುದು ಸ್ಪಷ್ಟವಾಗಿ ತಿಳಿದು ಬರುತ್ತದೆ. ಅಪಾರ್ಟ್‌ಮೆಂಟ್‌ನಲ್ಲಿ ನಿವಾಸಿಗಳ ವಾಸಕ್ಕೆ ಫ್ಲ್ಯಾಟ್ ಬಿಟ್ಟುಕೊಡುವ ಮುನ್ನ ನಿಯಮದ ಪ್ರಕಾರ ಡೆವಲಪರ್‌ಗಳು ಕಟ್ಟಡಕ್ಕೆ ಪಾಲಿಕೆಯಿಂದ ಸ್ವಾಧೀನ ಪ್ರಮಾಣಪತ್ರ ಪಡೆದಿರುವುದು ನಿಯಮವಾಗಿದೆ. ಆದರೆ ಬಹುತೇಕ ಡೆವಲಪರ್‌ಗಳು ಓಸಿ ಇಲ್ಲದೆಯೇ ಫ್ಲ್ಯಾಟ್‌ಗಳನ್ನು ಹಸ್ತಾಂತರಿಸುವುದರಿಂದ ಅಗ್ನಿಶಾಮಕದಳದಿಂದ ಪರಿಶೀಲನೆಯೂ ನಡೆಯುತ್ತಿಲ್ಲ. ಈ ರೀತಿಯ ನಿಯಮ ಉಲ್ಲಂಘನೆಗಳಿಂದಲೇ ಈ ರೀತಿಯ ದುರಂತಗಳು ಸಂಭವಿಸುತ್ತಿದೆ ಎನ್ನುವುದರಲ್ಲಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಯಾವುದೇ ಅನುಮಾನವಿಲ್ಲ. ಬಹುಮಹಡಿ ಕಟ್ಟಡಗಳಲ್ಲಿ ಪಾಲಿಸಬೇಕಾದ ನಿಯಮಗಳಾದ ರಸ್ತೆಗೂ ಬಹುಮಹಡಿ ಕಟ್ಟಡಕ್ಕೂ ೧೨ ಮೀಟರ್ ಅಂತರವಿರಬೇಕು. ಅಗ್ನಿ ಸುರಕ್ಷತೆ ಬಗ್ಗೆ ಸಿಬ್ಬಂದಿಗೆ ಆಗಾಗ ಪ್ರಾತ್ಯಕ್ಷಿಕೆ ನೀಡಬೇಕು, ಕಟ್ಟಡದ ಸುತ್ತ ಅಗ್ನಿಶಾಮಕ ವಾಹನ ಸಂಚಾರಿಸುವಷ್ಟು ಜಾಗವಿರಬೇಕು, ಹೀಗೆ ಹಲವಾರು ನಿಯಮಗಳನ್ನು ಇಂದು ಹಲವು ಅಪಾರ್ಟ್‌ಮೆಂಟ್‌ಗಳು ಗಾಳಿಗೆ ತೂರುತ್ತಿದ್ದು, ಇದರಿಂದಾಗಿ ಜನರ ಸಾವು ನೋವಿಗೆ ಕಾರಣವಾಗಿದೆ. ಮುಂದೆ ಈ ರೀತಿಯ ಘಟನೆಗಳು ಸಂಭವಿಸದ ಹಾಗೆ ಮತ್ತು ಬಹುಮಹಡಿ ಕಟ್ಟಡಗಳಲ್ಲಿ ತೆಗೆದುಕೊಳ್ಳಬೇಕಾದ ಸುರಕ್ಷತೆ ಕ್ರಮಗಳ ಬಗ್ಗೆ ಮಾನ್ಯ ಗೃಹ ಸಚಿವರ ಗಮನಕ್ಕೆ ತರುತಿದ್ದೇನೆ.

(ಮುಂದು)

938/23-09-2021/12-20/bkp-md

(ಸಭಾಪತಿಯವರು ಪೀಠದಲ್ಲಿದ್ದರು)

**ಶ್ರೀ ಅರಗ ಜ್ಞಾನೇಂದ್ರ(ಗೃಹ ಸಚಿವರು):-** ಮಾನ್ಯ ಸಭಾಪತಿಯವರೆ, ಈ ಕಟ್ಟಡದಲ್ಲಿ ನಡೆದ ಅಗ್ನಿ ದುರಂತದ ಬಗ್ಗೆ ಮತ್ತು ಇನ್ನಿತರ ಕಟ್ಟಡಗಳ ಅಸುರಕ್ಷತೆಯ ಬಗ್ಗೆ ಮಾನ್ಯ ಸದಸ್ಯರು ಶೂನ್ಯವೇಳೆಯಲ್ಲಿ ಪ್ರಶ್ನೆಯನ್ನು ಕೇಳಿದ್ದಾರೆ. ಈ ಕಟ್ಟಡದ ಬಗ್ಗೆ ವಿಶೇಷವಾಗಿ ಎಸ್‌ಎಫ್‌ಎಲ್ ಅಧಿಕಾರಿಗಳು ಮತ್ತು ಅಗ್ನಿಶಾಮಕ ಅಧಿಕಾರಿಗಳು, ಮತ್ತು ಪೊಲೀಸ್ ಜಂಟಿಯಾಗಿ ತಪಾಸಣೆ ಮಾಡುತ್ತಿದ್ದಾರೆ. ಸಿಲೆಂಡರ್ ಸ್ಫೋಟವಾಗಲಿಲ್ಲವೆನ್ನುವ ಮಾಹಿತಿ ನನಗಂತೂ ಬಂದಿದೆ. ಉಳಿದದ್ದು, ಇದು ಯಾವ ಕಾರಣಕ್ಕೆ ಆಯಿತು ಎನ್ನುವುದರ ಬಗ್ಗೆ ವಿಶೇಷವಾದಂತಹ ತನಿಖೆ ನಡೆಯುತ್ತಿದೆ. ಆ ವರದಿಯನ್ನು ತರಿಸಿ ನಿಮಗೆ ಕೊಡುವಂತಹ ಕೆಲಸ ಮಾಡುತ್ತೇನೆ. ಮತ್ತೆ ಅಗ್ನಿಶಾಮಕ ವಾಹನಗಳು ಅಲ್ಲಿಗೆ ಹೋಗಿ ತಲುಪಲಿಕ್ಕೆ ಬೇಕಾದಂತಹ ರಸ್ತೆ ಮತ್ತು ಒಳಗಡೆ ಅಗ್ನಿಶಾಮಕ ಯಂತ್ರಗಳು ತಿರುಗಾಡಲಿಕ್ಕೆ ಬೇಕಾಗಿರುವಂತಹ space -ಇವುಗಳಿಗೆ ಜಾಗ ಬಿಡಬೇಕಾಗುತ್ತದೆ. ಇವುಗಳು ಎಲ್ಲಿ ಉಲ್ಲಂಘನೆಯಾಗಿದೆ ನೋಡಿ, ಕಟ್ಟಡಗಳ ಮಾಲೀಕರ ಮೇಲೆ ಕ್ರಮವನ್ನು ಜರುಗಿಸುವ ಬಗ್ಗೆಯೂ ಸಹ ಯೋಚನೆ ಮಾಡಲಾಗುತ್ತಿದೆ. ಇದನ್ನು ಪರಿಶೀಲಿಸಿ, ವಿವರವಾದ ವರದಿಯನ್ನು ತರಿಸಿ, ತಮಗೆ ಕೊಡುತ್ತೇನೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಸಭಾಪತಿಯವರು:** ಈಗ ಮರಿತಿಬ್ಬೇಗೌಡರು ಪ್ರಾರಂಭ ಮಾಡಬೇಕು. ನಾನು ತಮ್ಮನ್ನು ಈಗಾಗಲೇ ಕರೆದಿದ್ದೆ. ನೀವು ಆಗ ಇರಲಿಲ್ಲ. ನೀವು ಸಮಯಕ್ಕೆ ಸರಿಯಾಗಿ ಸದನಕ್ಕೆ ಬರಬೇಕು.

**ಶ್ರೀ ಮರಿತಿಬ್ಬೇಗೌಡ:** - ಮಾನ್ಯ ಸಭಾಪತಿಯವರೇ, ಆಗಬಹುದು. ಕ್ಷಮೆ ಇರಲಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಈ) ವಿಷಯ: ಸರ್ಕಾರಿ ಪಾಲಿಟೆಕ್ನಿಕ್ ಮತ್ತು ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರಿಗೆ ವೇತನ ಪರಿಷ್ಕರಣೆ ಮಾಡುವ ಬಗ್ಗೆ ಹಾಗೂ ಸಿ.ಎ.ಎಸ್. ಅಡಿಯಲ್ಲಿ ಸ್ಥಾನಪನ್ನ ಬಡ್ತಿ ನೀಡುವ ಬಗ್ಗೆ.**

------

**ಶ್ರೀ ಮರಿತಿಬ್ಬೇಗೌಡ:** - ಮಾನ್ಯ ಸಭಾಪತಿಯವರೇ, ಅವಕಾಶ ಕೊಟ್ಟಿದ್ದಕ್ಕೆ ತಮಗೆ ಧನ್ಯವಾದಗಳು.

ಸರ್ಕಾರಿ ಪಾಲಿಟೆಕ್ನಿಕ್ ಮತ್ತು ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರಿಗೆ ನೀಡಲಾಗುತ್ತಿರುವ ಗೌರವಧನವು ಪ್ರಸ್ತುತ ಬೆಲೆ ಏರಿಕೆಯ ದಿನಗಳಲ್ಲಿ ಕುಟುಂಬ ನಿರ್ವಹಣೆ, ಮಕ್ಕಳ ವಿದ್ಯಾಭ್ಯಾಸ, ಪಾಲನೆ ಪೋಷಣೆಗೆ ಏನೇನೂ ಸಾಲದಾಗಿದೆ. ಸದರಿ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ಇತರೆ ಸಿಬ್ಬಂದಿಗಳಿಗೆ ಎ.ಐ.ಸಿ.ಟಿ.ಇ. 6 ಮತ್ತು 7ನೇ ವೇತನ ಶ್ರೇಣಿಯಂತೆ ವೇತನವನ್ನು ಪಾವತಿಸಲಾಗುತ್ತಿದೆ. ಆದರೆ ಅತಿಥಿ ಉಪನ್ಯಾಸಕರಿಗೆ ಯಾವುದೇ ರೀತಿಯ ಗೌರವಧನವನ್ನು ಹೆಚ್ಚಿಸಲಾಗಿರುವುದಿಲ್ಲ ಮತ್ತು ಸಕಾಲಕ್ಕೆ ವೇತನ ಪಾವತಿಸುತ್ತಿಲ್ಲ. ಇದರಿಂದ ತುಂಬಾ ತೊಂದರೆಪಡುತ್ತಿದ್ದಾರೆ. ಕೋವಿಡ್-19ರ ಸಂದಿಗ್ಧ ಪರಿಸ್ಥಿತಿಯಲ್ಲಿಯೂ ಉತ್ತಮವಾಗಿ ಸೇವೆ ಸಲ್ಲಿಸಿದ್ದಾರೆ. ಇವರಿಗೆ ವೇತನ ಪರಿಷ್ಕರಣೆ ಮಾಡಿ, ಸಕಾಲದಲ್ಲಿ ವೇತನ ಪಾವತಿಸುವಂತೆ ಒತ್ತಾಯಿಸುತ್ತೇನೆ.

ಮುಂದುವರೆದು, ಸರ್ಕಾರಿ / ಅನುದಾನಿತ ಪಾಲಿಟೆಕ್ನಿಕ್ ಮತ್ತು ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಉಪನ್ಯಾಸಕರುಗಳಿಗೆ ದೀರ್ಘಕಾಲದಿಂದ ಸಿ.ಎ.ಎಸ್. ಅಡಿಯಲ್ಲಿ ಸ್ಥಾನಪನ್ನ ಬಡ್ತಿ ನೀಡಿರುವುದಿಲ್ಲ. ಎ.ಐ.ಸಿ.ಟಿ.ಇ. ನಿಯಮಾವಳಿ ಪ್ರಕಾರ ಸ್ಥಾನಪನ್ನ ಬಡ್ತಿಗೆ ವಿದ್ಯಾರ್ಹತೆ ಹೊಂದಿದ್ದರೂ ಸಹ 12 ವರ್ಷಗಳಿಂದ ಬಡ್ತಿ ನೀಡದೇ ಇರುವುದರಿಂದ ಬೋಧಕರು ತುಂಬಾ ಮಾನಸಿಕ ಒತ್ತಡಕ್ಕೊಳಗಾಗಿದ್ದಾರೆ. ಆರ್ಥಿಕ ನಷ್ಟ ಉಂಟಾಗಿದೆ. ಈ ಸಂಬಂಧ ಕೂಡಲೇ ನಿಯಮಾನುಸಾರ ಬಡ್ತಿ ನೀಡಿ, ಎ.ಜಿ.ಪಿ. ಬದಲಾವಣೆ ಮಾಡುವಂತೆ ಮಾನ್ಯ ಉನ್ನತ ಶಿಕ್ಷಣ, ಐ.ಟಿ. ಅಂಡ್ ಬಿ.ಟಿ. ವಿಜ್ಞಾನ ಮತ್ತು ತಂತ್ರಜ್ಞಾನ ಮತ್ತು ಕೌಶಲ್ಯಾಭಿವೃದ್ಧಿ ಸಚಿವರನ್ನು ಒತ್ತಾಯಿಸುತ್ತೇನೆ.

**ಡಾ||ಸಿ.ಎಸ್. ಅಶ್ವಥ ನಾರಾಯಣ( ಉನ್ನತ ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಯವರೆ, ಅತಿಥಿ ಉಪನ್ಯಾಸಕರ ವಿಚಾರದಲ್ಲಿ ಸರ್ಕಾರ ಗಂಭೀರವಾಗಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪರಿಶೀಲನೆ ಮಾಡುವಂತಹದ್ದಾಗುತ್ತದೆ. ಎರಡನೆಯದಾಗಿ, ಯಾರೆಲ್ಲಾ ಮುಂಬಡ್ತಿಗೆ ಅರ್ಹರಿದ್ದಾರೆ, ಅವರುಗಳಿಗೆ ನಿಯಮಾವಳಿ ಪ್ರಕಾರವಾಗಿ ಸೂಕ್ತವಾದ ಕ್ರಮವನ್ನು ವಹಿಸುತ್ತೇವೆ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಅಪತಿಯವರೆ, 12 ವರ್ಷಗಳಿಂದ ಕೊಟ್ಟಿಲ್ಲ. ಇವರುಗಳು ಸರ್ಕಾರಿ ಕಾಲೇಜುಗಳಲ್ಲಿ ಕೆಲಸ ಮಾಡತ್ತಿದ್ದಾರೆ. ದಯವಿಟ್ಟು ಈ ಕೆಲಸವನ್ನು ಮಾಡಿಕೊಡಬೇಕು.

**ಸಭಾಪತಿಯವರು:** ಮಾನ್ಯ ಸಚಿವರು ಇದಕ್ಕೆ ಲಿಖಿತ ಉತ್ತರವನ್ನು ಕೊಡಿ.

**ಉ): ವಿಷಯ:ಬೈಲಹೊಂಗಲ ತಾಲ್ಲೂಕಿನ ನಾಗನೂರು ಗ್ರಾಮ ಪಂಚಾಯಿತಿ ಸದಸ್ಯರನ್ನು ಅಲ್ಲಿನ ಪಿಡಿಓ ಅವರು ಅವಾಚ್ಯ ಶಬ್ಧಗಳಿಂದ ನಿಂದಿಸಿ ಹಲ್ಲೆ ನಡೆಸಿದ್ದು ಘಟನೆಯ ಬಗ್ಗೆ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಬಗ್ಗೆ ಹಾಗೂ ಶ್ರೀ ವಿಜಯಸಿಂಗ್ ಅವರು ಪ್ರಸ್ತಾಪಿಸಿರುವ ಬೈಲಹೊಂಗಲ ತಾಲ್ಲೂಕಿನ ನಾಗನೂರು ಗ್ರಾಮ ಪಂಚಾಯಿತಿ ಸದಸ್ಯರಿಗೆ ಸಿಇಓ ನೋಟಿಸ್ ಜಾರಿ ಮಾಡಿರುವ ಬಗ್ಗೆ**

---------

**ಶ್ರೀ ಕೆ.ಸಿ.ಕೊಂಡಯ್ಯ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಅವಕಾಶ ಕೊಟ್ಟ ತಮಗೆ ಧನ್ಯವಾದಗಳು.

ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನ ನಾಗನೂರು ಗ್ರಾಮಪಂಚಾಯಿತಿ ಸದಸ್ಯರಾದ ಶ್ರೀ ಬಸವರಾಜ ರಾಮಪ್ಪ ಹುಣಕಲ ರವರು ದಿನಾಂಕ:16-09-2021ರಂದು ಗ್ರಾಮ ಪಂಚಾಯಿತಿ ಕಛೇರಿಯಲ್ಲಿ ಗ್ರಾಮಸ್ಥರ ಆಸ್ತಿಗೆ ಸಂಬಂಧಿಸಿದ ದಾಖಲೆಗಳ ಬಗ್ಗೆ ವಿಚಾರಿಸುವ ಸಂದರ್ಭದಲ್ಲಿ ಅಲ್ಲಿನ ಗ್ರಾಮಪಂಚಾಯಿತಿ ಅಭಿವೃದ್ಧಿ ಅಧಿಕಾರಿ (PDO) ಇವರನ್ನು **"ಹೋಪ್ ಲೆಸ್"** ಎಂದು ಅವಾಚ್ಯ ಶಬ್ಧಗಳಿಂದ ನಿಂದಿಸಿ ಕಪಾಳ ಮೋಕ್ಷ ಮಾಡಿರುವ ದುರ್ಘಟನೆ ನಡೆದಿರುವುದು ಪ್ರಜಾಪ್ರಭುತ್ವ ವ್ಯವಸ್ಥೆಗೆ ಕಳಂಕ ತರುವಂತಹದ್ದಾಗಿದೆ.

**"ಜನಪ್ರತಿನಿಧಿ ಒಬ್ಬ ವ್ಯಕ್ತಿಯಲ್ಲ, ಅವನು ಒಂದು ಜನಸಮೂಹ"** ಎನ್ನುವ ಪರಿಕಲ್ಪನೆಯೊಂದಿಗೆ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಕಾರ್ಯನಿರ್ವಹಿಸುವ ಸಂದರ್ಭದಲ್ಲಿ ಇಂತಹ ಘಟನೆ ನಡೆದಿರುವುದು ದುರದೃಷ್ಟಕರ ಸಂಗತಿಯಾಗಿದೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಘಟನೆ ಸಂಬಂಧ ನೇಸರಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದ್ದು ಹಲ್ಲೆ ಮಾಡಿದ ಅಧಿಕಾರಿಯೂ ಪ್ರತಿದೂರು ದಾಖಲಿಸಿರುತ್ತಾರೆ. ದಿನಾಂಕ:18-09-2021ರ ವಿಜಯ ಕರ್ನಾಟಕ ದಿನಪತ್ರಿಕೆಯಲ್ಲಿ ಪ್ರಕಟವಾದ ವರದಿ ಹಿನ್ನೆಲೆಯಲ್ಲಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು ತಪ್ಪಿತಸ್ಥ PDO ಅಧಿಕಾರಿ ಮೇಲೆ ಕ್ರಮ ಕೈಗೊಳ್ಳದೆ, ನಿಂದನೆ ಮತ್ತು ಹಲ್ಲೆಗೊಳಗಾದ ಶ್ರೀ ಬಸವರಾಜ ರಾಮಪ್ಪ ಹುಣಕಲ ಅವರಿಗೇ ತಮ್ಮ ಅಧಿಕಾರ ವ್ಯಾಪ್ತಿ ಮೀರಿ ದಿನಾಂಕ ನಮೂದಿಸದೆ ಕಾರಣ ಕೇಳಿ ನಟೀಸ್ ನೀಡಿರುವುದು ವಿಪರ್ಯಾಸವೇ ಸರಿ.

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆ 1993ರ ಪ್ರಕರಣ 110-ಎ ಅನ್ವಯ ಪ್ರತಿಯೊಬ್ಬ ಸದಸ್ಯನ ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ವಿವರಿಸಿದ್ದರೂ, ಒಬ್ಬ ಗ್ರಾಮ ಪಂಚಾಯಿತಿ ಸದಸ್ಯನನ್ನೇ ಅಪರಾಧಿಯನ್ನಾಗಿಸುವ ಷಡ್ಯಂತ್ರ ನಡೆದಿರುವುದು ಪಂಚಾಯಿತಿ ವ್ಯವಸ್ಥೆಗೆ ಮಾರಕವಾಗಿರುತ್ತದೆ.

ತಮ್ಮ ದುರ್ವರ್ತನೆ ಹಾಗೂ ದರ್ಪದ ನಡವಳಿಕೆ ತೋರಿ ಅವಾಚ್ಯ ಶಬ್ದಗಳಿಂದ ನಿಂದಿಸಿ, ಕಪಾಳಮೋಕ್ಷ ಮಾಡಿದ ನಾಗನೂರು PDO ಅಧಿಕಾರಿಯನ್ನು ಕೂಡಲೇ ಸೇವೆಯಿಂದ ಅಮಾನತ್ತುಗೊಳಿಸಿ, ನಿಯಮಾನುಸಾರ ಕ್ರಮ ಕೈಗೊಳ್ಳಬೇಕು ಹಾಗೂ ಈ ವಿಚಾರದಲ್ಲಿ ಪ್ರಕರಣವನ್ನು ದಾರಿತಪ್ಪಿಸುವ ರೀತಿಯಲ್ಲಿ ನೋಟೀಸ್ ನೀಡಿರುವ ಮುಖ್ಯ ಕಾರ್ಯನಿರ್ವಹಣಾಧಿಕಾರಿಗೆ ಎಚ್ಚರಿಕೆ ನೋಟೀಸ್ ನೀಡಬೇಕೆಂದು ಶೂನ್ಯವೇಳೆಯಲ್ಲಿ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರನ್ನು ಒತ್ತಾಯಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)** ಮಾನ್ಯಸಭಾಪತಿಯವರೆ, ಮಾನ್ಯ ಸದಸ್ಯರಾದ ಶ್ರೀ ಕೆ.ಸಿ. ಕೊಂಡಯ್ಯನವರು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿರುವ ವಿಚಾರಕ್ಕೆ ಸಂಬಂಧಪಟ್ಟಂತೆ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಿಂದ ಉತ್ತರವನ್ನು ಒದಗಿಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಊ) **ವಿಷಯ:** ಜಾನುವಾರುಗಳ ಆರೋಗ್ಯಕ್ಕೆ ಲಸಿಕೆಗಳ ಪೂರೈಕೆಯನ್ನು ಕೇಂದ್ರ ಸರ್ಕಾರದವರು ಸ್ಥಗಿತಗೊಳಿಸಿರುವ ಬಗ್ಗೆ.

----- -- --

**ಶ್ರೀ ಕೆ.ಎ.ತಿಪ್ಪೇಸ್ವಾಮಿ(ನಾಮ ನಿರ್ದೇಶನ ಹೊಂದಿದವರು):** ಮಾನ್ಯಸಭಾಪತಿಯವರೆ, ಅವಕಾಶ ಕೊಟ್ಟ ತಮಗೆ ಧನ್ಯವಾದಗಳು.

ರಾಜ್ಯದಲ್ಲಿ ಕಳೆದ ಒಂದು ವರ್ಷದಿಂದ ರಾಸುಗಳಿಗೆ ಆರೋಗ್ಯ ರಕ್ಷಣಾ ಲಸಿಕೆಗಳ ಪೂರೈಕೆಯನ್ನು ಕೇಂದ್ರ ಸರ್ಕಾರ ಸ್ಥಗಿತಗೊಳಿಸಿದೆ. ಇದರಿಂದ ಕಳೆದ ಒಂದು ವರ್ಷದಿಂದ ಸರ್ಕಾರದಿಂದ ಕಾಲುಬಾಯಿ ಲಸಿಕೆ ಕಾರ್ಯಕ್ರಮ ನಡೆದಿಲ್ಲ. ರಾಜ್ಯಾದ್ಯಂತ ನೂರಾರು ರಾಸುಗಳು ಕಾಲುಬಾಯಿ ಜ್ವರಕ್ಕೆ ತುತ್ತಾಗಿ ಪ್ರಾಣ ಕಳೆದುಕೊಳ್ಳುತ್ತಿವೆ. ರೈತಾಪಿ ಜನರು ಸಂಕಷ್ಟ ಅನುಭವಿಸುವಂತಾಗಿದೆ ಎಂದು ವರದಿಯಾಗಿದೆ.

ಕಳೆದ ಕೆಲವು ವಾರಗಳಿಂದ ಜಾನುವಾರುಗಳನ್ನು ತೀವ್ರವಾಗಿ ಬಾಧಿಸುತ್ತಿರುವ ಕಾಲುಬಾಯಿ ಜ್ವರವನ್ನು ಹತೋಟಿಗೆ ತರುವಲ್ಲಿ ಸರ್ಕಾರ ವಿಫಲವಾಗಿದೆ. ಮಂಡ್ಯದಲ್ಲಿ 29, ತುಮಕೂರು, ಹಾಸನ, ಚಿತ್ರದುರ್ಗ ಜಿಲ್ಲೆಗಳಲ್ಲಿ ತಲಾ 20ಕ್ಕಿಂತ ಹೆಚ್ಚು ರಾಸುಗಳು ಸವೀಗೀಡಾಗಿವೆ. ಕಾಲುಬಾಯಿ ಜ್ವರ ಕಂಡುಬರುವ ಗ್ರಾಮಗಳಲ್ಲಿ ಮಾತ್ರ ಲಸಿಕೆ ಹಾಕಲಾಗುತ್ತಿದೆ.

ಪಿಕಾರ್ನೊ ವೈರಸ್ ನಿಂದ ಬರುವ ಕಾಲುಬಾಯಿ ಜ್ವರವು ಸಾಂಕ್ರಾಮಿಕ ರೋಗವಾಗಿದ್ದು, ಸೋಂಕಿಗೆ ತುತ್ತಾದ ಜಾನುವಾರುಗಳ ಗೊರಸು ಹಾಗೂ ಬಾಯಿಯ ಭಾಗದಲ್ಲಿ ಹುಣ್ಣು ಕಾಣಿಸಿಕೊಳ್ಳುತ್ತದೆ. ಬಾಯಿಯಲ್ಲಿರುವ ಚಿಕ್ಕ ನೀರ್ಗುಳ್ಳೆಗಳು ಒಡೆದು ಜಾನುವಾರುಗಳು ಜೊಲ್ಲು ಸುರಿಸುತ್ತವೆ. ಗೊರಸು ಭಾಗದಲ್ಲಿ ಹುಣ್ಣು ಹೆಚ್ಚಾದರೆ ಜಾನುವಾರುಗಳು ಕುಂಟಲು ಆರಂಭಿಸುತ್ತವೆ. 106 ರಿಂದ 108 ಫ್ಯಾರನ್ ಹೀಟ್ ಜ್ವರ ಬರುತ್ತದೆ. ಈ ಸೋಂಕು ಬಂದ ಜಾನುವಾರಿನಿಂದ ಮತ್ತೊಂದು ಜಾನುವಾರಿಗೆ ಗಾಳಿ, ನೀರು, ಮೇವಿನ ಮೂಲಕ ರೋಗ ಹರಡುತ್ತದೆ.

ಈ ಕಾಲುಬಾಯಿ ರೋಗ ನಿಯಂತ್ರಣಕ್ಕಾಗಿ ವರ್ಷಕ್ಕೆ ಎರಡು ಬಾರಿ ಎಲ್ಲ ಜಾನುವಾರು ಮತ್ತು ಹಂದಿಗಳಿಗೆ ಕಡ್ಡಾಯವಾಗಿ ಲಸಿಕೆ ಹಾಕಲಾಗುತ್ತಿತ್ತು. ಒಂದೂವರೆ ವರ್ಷದ ಹಿಂದೆ ಕೇಂದ್ರ ಸರ್ಕಾರವು ಎಫ್ಎಂಡಿಸಿಪಿ ಬದಲಿಗೆ ರಾಷ್ಟ್ರೀಯ ಪ್ರಾಣಿ ರೋಗ ನಿಯಂತ್ರಣ ಕಾರ್ಯಕ್ರಮ (ಎನ್ಎಡಿಸಿಪಿ) ಜಾರಿಗೊಳಿಸಿತ್ತು. ಮೊದಲ ಹಂತದ ಕಾರ್ಯಕ್ರಮವನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆರಂಭಿಸಲಾಗಿತ್ತಾದರೂ, ಪೂರೈಕೆಯಾಗಿದ್ದ ಲಸಿಕೆ ಗುಣಮಟ್ಟದಿಂದ ಕೂಡಿಲ್ಲವೆಂದು ಸರಕಾರವೇ ಲಸಿಕೆಗಳನ್ನು ನಾಶಪಡಿಸುವಂತೆ ಸೂಚಿಸಿದ್ದರಿಂದ ಲಸಿಕೆಗಳನ್ನು ಜಿಲ್ಲಾಮಟ್ಟದಲ್ಲೇ ನಾಶಪಡಿಸಲಾಗಿತ್ತು. ರಾಜ್ಯಾದ್ಯಂತ ಜಾನುವಾರುಗಳಲ್ಲಿ ಕಾಲುಬಾಯಿ ಜ್ವರ ಹೆಚ್ಚಾಗಿರುವ ಹಿನ್ನೆಲೆಯಲ್ಲಿ, ಜಿಲ್ಲಾ ಪಂಚಾಯಿತಿ ಅನುದಾನದಲ್ಲೇ ಲಸಿಕೆ ಖರೀದಿಸಿ ರೋಗ ಕಂಡುಬಂದ ಕಡೆಗಳಲ್ಲಿ ಲಸಿಕೆ ಹಾಕುವ ಕಾರ್ಯ ನಡೆಸಲಾಗುತ್ತಿದೆ. ಕೆಲ ರಾಸುಗಳ ಸಾಕಾಣಿಕೆದಾರರು ಖಾಸಗಿಯಿಂದ ಲಸಿಕೆ ಖರೀದಿಸುತ್ತಿದ್ದು, ಪ್ರತಿ ಲಸಿಕೆಗೂ 300 ರಿಂದ 800 ರೂ.ವರೆಗೂ ನೀಡುತ್ತಿದ್ದಾರೆ.

ಇದೆಲ್ಲವನ್ನೂ ಸರ್ಕಾರ ತತ್‌ಕ್ಷಣವೇ ಗಂಭೀರವಾಗಿ ಪರಿಗಣಿಸಿ ರಾಜ್ಯಾದ್ಯಂತ ಎಲ್ಲಾ ರಾಸುಗಳಿಗೂ “ಆರೋಗ್ಯ ರಕ್ಷಣಾ ಲಸಿಕೆ”ಯನ್ನು ನೀಡುವ ಕ್ರಮ ಕೈಗೊಂಡು ಸಾವಿನ ದವಡೆಗೆ ಸಿಲುಕುತ್ತಿರುವ ರಾಸುಗಳನ್ನು ಉಳಿಸುವ ಕ್ರಮಗಳನ್ನು ಕೈಗೊಳ್ಳುವುದೇ ಎಂಬುದರ ಬಗ್ಗೆ “ಶೂನ್ಯವೇಳೆ”ಯಲ್ಲಿ ಈ ವಿಷಯವನ್ನು ಪ್ರಸ್ತಾಪಿಸುತ್ತಿದ್ದೇನೆ.

**ಶ್ರೀಜೆ.ಸಿ. ಮಾಧುಸ್ವಾಮಿ( ಸಣ್ಣ ನೀರಾವರಿ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):-** ಮಾನ್ಯ ಸಭಾಪತಿಯವರೆ, Foot-and-*mouth disease* ಮಾನ್ಯ ಸದಸ್ಯರು ಹೇಳಿದ ಹಾಗೆ ಬಹಳ ಬೇಗ ರಾಸುಗಳಲ್ಲಿ ಹಬ್ಬುವಂತಹ ಕಾಯಿಲೆ ಎಂದು ಸರ್ಕಾರಕ್ಕೆ ಗೊತ್ತಿದೆ. ಅನೇಕ ವರ್ಷಗಳಿಂದ ಇದನ್ನು prevent ಮಾಡಲಿಕ್ಕೆ ನಾವು ಲಸಿಕೆಗಳನ್ನು ಮಾಡಿಕೊಂಡು ಬರುತ್ತಿದ್ದೇವೆ. ಇದನ್ನು ರಾಜ್ಯ ಸರ್ಕಾರವೂ ಮಾಡುತ್ತದೆ ಮತ್ತು Karnataka Milk Federation ನಲ್ಲಿ ಅವರ ವ್ಯಾಪ್ತಿಯಲ್ಲಿ ಬರುವ ರಾಸುಗಳಿಗೆ ಮಾಡಿಕೊಂಡು ಬರುತ್ತಿದ್ದಾರೆ. ಮತ್ತೆ ಈ ರೋಗ ಒಂದು ಸೀಸನ್‌ನಲ್ಲಿ ಜಾಸ್ತಿಯಾಗುತ್ತದೆ. ಕುರಿಗಳು ಹೊರಗಡೆ ಮೆಯ್ಯುವುದಕ್ಕೆ ಹೋಗುವಂತಹ ಕಾಲ ಮತ್ತು ರಾಸುಗಳು ಮಳೆಗಾಲ ನಿಂತ ಮೇಲೆ ಹೆಚಾಗುವಂತಹ ಕಾಯಿಲೆ ಇದಾಗಿದ್ದು, ನಾವು ಈ ವರ್ಷ ಅಕಸ್ಮಾತ್ ಆಗಿ ಲಸಿಕೆಯನ್ನು ಕೊಡಲಿಕ್ಕೆ ಆಗಲಿಲ್ಲವೆನ್ನುವುದನ್ನು ಶ್ರೀಯುತ ತಿಪ್ಪೇಸ್ವಾಮಿಯವರ ಗಮನಕ್ಕೆ ತರುತ್ತೇನೆ. ಇದು ನನಗೆ ಚೆನ್ನಾಗಿ ಗೊತ್ತು.

ಆದ್ದರಿಂದ, ನಮ್ಮ ರಾಜ್ಯ ಸರ್ಕಾರ ಮತ್ತು ಕೆಎಂಎಫ್ ನವರು ಏನು ಕಾರ್ಯಕ್ರಮ ಮಾಡಬಹುದಾಗಿತ್ತು. ಇದರ ಪೂರ್ಣ ಜವಾಬ್ದಾರಿಯನ್ನು ಲಿಸಿಕೆ ಸರಬರಾಜು ಮಾಡಲಿಕ್ಕೆ ಕೇಂದ್ರ ಸರ್ಕಾರವೇ ಮುಂದೆ ಬಂದಿರುವುದರಿಂದ ನಾವು ಕೇಂದ್ರ ಸರ್ಕಾರದಿಂದ ಲಸಿಕೆ ಸರಬರಾಜು ಆಗುತ್ತದೆ ಎಂದು ಕಾಯುತ್ತಿದ್ದೇವೆ. ನಮ್ಮ ದೃಷ್ಟಿಯಲ್ಲಿ ಅಕ್ಟೋಬರ್ ಮತ್ತು

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ನವೆಂಬರ್ ತಿಂಗಳಿನಲ್ಲಿ ವ್ಯಾಪಕವಾಗಿ ಈ ಲಸಿಕೆಯನ್ನು ಹಾಕುವಂತಹ ಕೆಲಸವನ್ನು ನಾವು ಮಾಡುತ್ತೇವೆ.

**ಮುಂದು ...**

**(939) 23.09.2021 12.30 ಎಸ್‌ವಿ-ಎಕೆ (ಸಭಾಪತಿಯವರ ಉಪಸ್ಥಿತಿ)**

**ಶ್ರೀ ಜೆ.ಸಿ.ಮಾಧುಸ್ವಾಮಿ (ಮುಂದು):-**

ನಮ್ಮ ದೃಷ್ಟಿಯಲ್ಲಿ ಅಕ್ಟೋಬರ್, ನವೆಂಬರ್ ತಿಂಗಳಿನಲ್ಲಿ ನಾವು ವ್ಯಾಪಕವಾಗಿ ಈ vaccination ಅನ್ನು ಮಾಡುತ್ತೇವೆ. ನಾನು ಕೆ.ಎಂ.ಎಫ್. ಅಧ್ಯಕ್ಷನಾಗಿದ್ದವನಾದ್ದರಿಂದ ನನಗೆ ಸ್ವಲ್ಪ ಅನುಭವವಿದೆ. ಇದು ಮಾಡಲೇಬೇಕಾದುದು. ಏಕೆಂದರೆ, ಇದರಲ್ಲಿ ರಾಸು ಸಾಯುವುದಿಲ್ಲ. ಪೂಚೆ ರೋಗ ಎಂದು ಬಂದು neither this side nor that side ಎಂಬಂತಾಗುತ್ತದೆ. ರಾಸು ಜೀವಂತವಾಗಿರುತ್ತದೆ. ಮೈ ಬೆಳೆಯುತ್ತದೆ, ಕೂದಲು ಬೆಳೆಯುತ್ತದೆ, ಹಾಲು ಕೊಡುವುದಿಲ್ಲ, ಗರ್ಭ ಧರಿಸುವುದಿಲ್ಲ. ಇದು ರೈತರಿಗೆ ಬಹಳ ಶಾಪಗ್ರಸ್ತವಾದುದು ಎಂದು ಸರ್ಕಾರಕ್ಕೆ ತಿಳಿದಿದ್ದು, ನಾವು ಇದನ್ನು ಗಂಭೀರವಾಗಿ ತೆಗೆದುಕೊಂಡಿದ್ದೇವೆ. ನಮ್ಮ ಸಮಸ್ಯೆಯೇನೆಂದರೆ ಈ ಲಸಿಕೆಯನ್ನು ಇಡೀ ರಾಷ್ಟ್ರದಲ್ಲಿ ಜಾನುವಾರುಗಳಿಗೆ ನೀಡಲಾಗುತ್ತಿದೆ. ಕುರಿಗಳು, ಇತರ ಜಾನುವಾರುಗಳು ಒಂದು ರಾಜ್ಯದಿಂದ ಮತ್ತೊಂದು ರಾಜ್ಯಕ್ಕೆ ಓಡಾಡುವುದರಿಂದ ಒಂದೇ ರಾಜ್ಯಕ್ಕೆ ಇದನ್ನು ನಿರ್ಬಂಧಿಸಲಾಗುವುದಿಲ್ಲ ಎನ್ನುವ ಒಳ್ಳೆಯ ತೀರ್ಮಾನವನ್ನು ಕೇಂದ್ರ ಸರ್ಕಾರವು ತೆಗೆದುಕೊಂಡಿದೆ. ಇದು ನವೆಂಬರ್-ಡಿಸೆಂಬರ್ ಒಳಗೆ ಮಾಡಬೇಕಾಗಿರುವ ಕಾರ್ಯಕ್ರಮ. ಈ ವರ್ಷದಲ್ಲಿ ಖಂಡಿತವಾಗಿ ರಾಜ್ಯದಲ್ಲಿರುವ ಎಲ್ಲಾ ರಾಸುಗಳಿಗೆ ಲಸಿಕಾ ಕಾರ್ಯಕ್ರಮವನ್ನು ಸಂಪೂರ್ಣವಾಗಿ ನಡೆಸಲಾಗುವುದು.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## (ಖ) ವಿಷಯ:- ಕೊರೋನ ವಾರಿಯರ್ಸ್‌ಗಳಿಗೆ ವೇತನ & ಪ್ರೋತ್ಸಾಹ ಧನ ನೀಡದಿರುವ ಬಗ್ಗೆ

***

**ಶ್ರೀ ಎಸ್.ನಾಗರಾಜು (ಸಂದೇಶ್ ನಾಗರಾಜು) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕೋವಿಡ್ ಪರಿಸ್ಥಿತಿಯಲ್ಲಿ ಸರ್ಕಾರಿ ಕಿರಿಯ ವೈದ್ಯರ ಸೇವೆ ಬಹಳ ಮುಖ್ಯವಾದುದು. ಕೊರೋನ ವಾರಿಯರ್ಸ್ ಆಗಿ ದಿನದ 24 ಗಂಟೆ ಸೇವೆ ಸಲ್ಲಿಸುತ್ತಿರುವ ಕಿರಿಯ ವೈದ್ಯರಿಗೆ, ಜೀವನ ನಿರ್ವಹಣೆಗೆ ಸಕಾಲಕ್ಕೆ ವೇತನ, ಪ್ರೋತ್ಸಾಹ ಭತ್ಯೆ ನೀಡುವುದೂ ಸೇರಿದಂತೆ ಅಗತ್ಯ ಸೌಲಭ್ಯಗಳನ್ನು ಕಲ್ಪಿಸಿಕೊಡುವುದು ಸರ್ಕಾರದ ಆದ್ಯ ಕರ್ತವ್ಯವಾಗಿದೆ.

ಮೈಸೂರು ವೈದ್ಯಕೀಯ ಕಾಲೇಜು ಹಾಗೂ ಸಂಶೋಧನಾ ಸಂಸ್ಥೆಯ 126 ವೈದ್ಯಕೀಯ ಪದವೀಧರರು ಕೋವಿಡ್ ಪರಿಸ್ಥಿತಿಯಲ್ಲಿ ಹಗಲಿರುಳೂ ರೋಗಿಗಳ ಸೇವೆ ಸಲ್ಲಿಸಿಕೊಂಡು ಬರುತ್ತಾ ಕೊರೋನಾ ನಿಯಂತ್ರಣಕ್ಕೆ ಉಪಯುಕ್ತ ಸೇವೆ ಸಲ್ಲಿಸಿದ್ದಾರೆ. ಇವರಿಗೆ ಕಳೆದ ಮೂರು ತಿಂಗಳಿನಿಂದ ಮಾಸಿಕ ನಿಗದಿತ ವೇತನ ಹಾಗೂ ವಿಶೇಷ ಪ್ರೋತ್ಸಾಹ ಧನವನ್ನು ನೀಡಿರುವುದಿಲ್ಲ. ಇದರಿಂದ ಇವರ ಜೀವನ ನಿರ್ವಹಣೆಗೆ, ಹೆಚ್ಚಿನ ವಿದ್ಯಾಭ್ಯಾಸಕ್ಕೆ ತೊಂದರೆಯಾಗಿದೆ. ಎಂ.ಬಿ.ಬಿ.ಎಸ್. ಪದವೀಧರರಾಗಿ, ಸರ್ಕಾರದ ನಿಯಮಗಳ, ಸರ್ಕಾರ ಹೊರಡಿಸಿರುವ ಅಧಿಸೂಚನೆ ಪ್ರಕಾರ ಸರ್ಕಾರಿ ಆಸ್ಪತ್ರೆಯಲ್ಲಿ ಕಿರಿಯ ವೈದ್ಯರಾಗಿ ನೇಮಕಗೊಂಡು ಸೇವೆ ಸಲ್ಲಿಸುತ್ತಿರುವ, ಕೊರೋನಾ ಪರಿಸ್ಥಿತಿಯಲ್ಲಿ ತಮ್ಮ ಜೀವವನ್ನೇ ಪಣಕ್ಕಿಟ್ಟು ದುಡಿಯುತ್ತಿರುವ ವೈದ್ಯರ ಬಗ್ಗೆ ಸರ್ಕಾರ ವೇತನ ನೀಡದಿರುವುದು ಅತ್ಯಂತ ವಿಷಾದಕರ. ಇವರು ತಮ್ಮ ಖರ್ಚಿಗಾಗಿ ಇನ್ನೂ ತಮ್ಮ ಪೋಷಕರ ಮೇಲೆ ಅವಲಂಬಿತರಾಗಿರುವ ಪರಿಸ್ಥಿತಿ ಒದಗಿದ್ದು, ಅವಮಾನಕರ ಪರಿಸ್ಥಿತಿಯಲ್ಲಿದ್ದಾರೆ.

ಈ ಬಗ್ಗೆ ಎಲ್ಲಾ ಕಿರಿಯ ವೈದ್ಯರು ಭಾನುವಾರ ಪ್ರತಿಭಟನೆ ಮಾಡಿ ಮನವಿ ಸಲ್ಲಿಸಿ ತಮ್ಮ ಗೋಳನ್ನು ತೋಡಿಕೊಂಡಿದ್ದಾರೆ. ಈ ಕೂಡಲೇ ವೈದ್ಯಕೀಯ ಶಿಕ್ಷಣ ಇಲಾಖೆ, ಮೈಸೂರು ವೈದ್ಯಕೀಯ ಕಾಲೇಜು ಹಾಗೂ ಸಂಶೋಧನಾ ಸಂಸ್ಥೆಯ ನಡುವೆ ಮತ್ತು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗಳು ಈ ಬಗ್ಗೆ ಮಧ್ಯ ಪ್ರವೇಶಿಸಿ ಕೂಡಲೇ ಈ ವೈದ್ಯರಿಗೆ ಮೂರು ತಿಂಗಳ ವೇತನ ಮತ್ತು ಪ್ರೋತ್ಸಾಹ ಧನವನ್ನು ಬಿಡುಗಡೆ ಮಾಡಬೇಕೆಂದು ಹಾಗೂ ಅವರು ನೆಮ್ಮದಿಯಿಂದ, ಉತ್ಸಾಹದಿಂದ, ನಿಷ್ಠೆಯಿಂದ ಸೇವೆ ಸಲ್ಲಿಸಲು ಅವಕಾಶ ಮಾಡಿಕೊಡಬೇಕೆಂದು ಈ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸಂದೇಶ್ ನಾಗರಾಜು ಅವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ಈ ವಿಷಯಕ್ಕೆ ಸಂಬಂಧಪಟ್ಟಂತೆ ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು.

**ಎ) ವಿಷಯ:- ಸುಳ್ಯ ತಾಲ್ಲೂಕಿನ ಮಂಡೆಕೋಲು ಗ್ರಾಮದ ಕನ್ಯಾನ, ಪೆರಾಜೆ, ಕಲ್ಲಡ್ಕ ಗ್ರಾಮದ ಎಸ್‌ಸಿ/ಎಸ್‌ಟಿ ಕಾಲೋನಿ ರಸ್ತೆ ಅಭಿವೃದ್ಧಿ ಕುರಿತು**

***

**ಶ್ರೀ ಮುನಿರಾಜು ಗೌಡ ಪಿ.ಎಂ. (ತುಳಸಿ) (ವಿಧಾನ ಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ದಕ್ಷಿಣ ಕನ್ನಡ ಜಿಲ್ಲೆ ಸುಳ್ಯ ತಾಲ್ಲೂಕು ಮಂಡೆಕೋಲು ಗ್ರಾಮದ ಕನ್ಯಾನ-ಪೆರಾಜೆ, ಕಲ್ಲಡ್ಕ-ಅಕ್ಕಪ್ಪಾಡಿಯ 200ಕ್ಕೂ ಹೆಚ್ಚು ಎಸ್.ಸಿ. ಹಾಗೂ ಎಸ್.ಟಿ. ಕುಟುಂಬಗಳು ವಾಸ ಮಾಡುವ ಕಾಲೋನಿಯನ್ನು ಸಂಪರ್ಕಿಸುವ ರಸ್ತೆಯು ಅಭಿವೃದ್ಧಿಯನ್ನು ಹೊಂದಿರುವುದಿಲ್ಲ. ಈ ಕಾಲೋನಿಗಳನ್ನು ಸಂಪರ್ಕಿಸಲು ಕಚ್ಚಾರಸ್ತೆಯನ್ನು ಹೊಂದಿದ್ದು, ಮಳೆಗಾಲದ ಸಂದರ್ಭದಲ್ಲಿ ಸುಮಾರು ಮೂರು ತಿಂಗಳ ಅವಧಿಯವರೆಗೆ ಈ ಕಚ್ಚಾ ರಸ್ತೆಯಲ್ಲಿ ಯಾವುದೇ ವಾಹನಗಳ ಸಂಚಾರವನ್ನು ಮಾಡಲು ಸಾಧ್ಯವಾಗುವುದಿಲ್ಲ. ಅಲ್ಲದೆ ಈ ಹಳ್ಳಿಯು ಯಾವುದೇ ಸಾರ್ವಜನಿಕ ಸಂಪರ್ಕ ಸಾರಿಗೆ ವ್ಯವಸ್ಥೆಯನ್ನು ಕೂಡ ಹೊಂದಿರುವುದಿಲ್ಲ. ಈ ಭಾಗದ ವಿದ್ಯಾರ್ಥಿಗಳು ಶಿಕ್ಷಣವನ್ನು ಪಡೆಯಲು ಸುಮಾರು 5 ಕಿಲೋ ಮೀಟರ್‌ಗೂ ಹೆಚ್ಚು ಕಾಲ್ನಡಿಗೆಯಲ್ಲಿ ಬಂದು ಅಲ್ಲಿಂದ ಬಸ್ಸುಗಳ ಮೂಲಕ ಶಾಲಾ ಕಾಲೇಜುಗಳಿಗೆ ತೆರಳಬೇಕಾದ ಅನಿವಾರ್ಯತೆಯಲ್ಲಿ ವಿದ್ಯಾಭ್ಯಾಸ ಮಾಡಬೇಕಾಗಿರುವುದಲ್ಲದೆ, ತುರ್ತು ವೈದ್ಯಕೀಯ ಚಿಕಿತ್ಸೆಯನ್ನು ಕೂಡ ಪಡೆಯಲು ಸಾಧ್ಯವಾಗುತ್ತಿಲ್ಲ. ಈ ಕುರಿತು ಈ ಊರಿನ ಗ್ರಾಮಸ್ಥರು ಹಲವಾರು ಬಾರಿ ರಸ್ತೆ ಹಾಗೂ ಸಾರ್ವಜನಿಕ ಸಂಪರ್ಕ ಸಾರಿಗೆಯ ವ್ಯವಸ್ಥೆಗಾಗಿ ಸರ್ಕಾರಕ್ಕೆ ಮನವಿಯನ್ನು ಸಲ್ಲಿಸಿದ್ದು, ಸುಮಾರು 5 ವರ್ಷಗಳ ಹಿಂದೆ ಮಾನ್ಯ ಪ್ರಧಾನ ಮಂತ್ರಿಯವರ ವೆಬ್ ಪೋರ್ಟಲ್‌ನಲ್ಲಿ ಮನವಿಯನ್ನು ಮಾಡಿದಾಗ ಜಿಲ್ಲಾ ಪಂಚಾಯತ್ ಮೂಲಕ ರಸ್ತೆ ಕಾಂಕ್ರೀಟೀಕರಣಕ್ಕೆ ಸರ್ವೆ ನಡೆಯಿತೇ ವಿನಃ ರಸ್ತೆಗಳು ಕಚ್ಚಾ ರಸ್ತೆಯಾಗಿಯೇ ಉಳಿದುಕೊಂಡಿದೆ. ಆದ್ದರಿಂದ ಈ ಕಾಲೋನಿಗಳನ್ನು ಸಂಪರ್ಕಿಸುವ ರಸ್ತೆಗಳನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಾಂಕ್ರೀಟೀಕರಣಗೊಳಿಸಿ ಈ ಹಳ್ಳಿಗಳಿಗೆ ಸಾರ್ವಜನಿಕ ಸಂಪರ್ಕ ಸಾರಿಗೆಯ ವ್ಯವಸ್ಥೆ ಕಲ್ಪಿಸಿಕೊಡಬೇಕೆಂದು ಶೂನ್ಯ ವೇಳೆಯಲ್ಲಿ ಒತ್ತಾಯಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಮುನಿರಾಜು ಗೌಡ ಅವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಸಂಬಂಧಿಸಿದಂತೆ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಿಂದ ಉತ್ತರವನ್ನು ಕೊಡಿಸುತ್ತೇವೆ.

**ಏ)ವಿಷಯ: ಕೋಲಾರದಲ್ಲಿರುವ ಸರ್ಕಾರಿ ಬಾಲಕರ ಕಾಲೇಜಿಗೆ ಮೂಲಸೌಲಭ್ಯ ಒದಗಿಸುವ ಬಗ್ಗೆ**

***

**ಶ್ರೀ ಗೋವಿಂದರಾಜು (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕೋಲಾರ ಜಿಲ್ಲೆ, ರಾಜ್ಯದ ಅತಿ ಹಿಂದುಳಿದ ಜಿಲ್ಲೆಗಳಲ್ಲೊಂದು. ಇಲ್ಲಿ ಅತಿ ಹೆಚ್ಚಿನ ಸಂಖ್ಯೆಯಲ್ಲಿ ರೈತರು ವಾಸ ಮಾಡುತ್ತಿದ್ದಾರೆ. ಈ ರೈತರ ಮಕ್ಕಳ ಉನ್ನತ ವ್ಯಾಸಂಗಕ್ಕಾಗಿ ಕೋಲಾರ ನಗರ ಭಾಗದಲ್ಲಿರುವ ಸರ್ಕಾರಿ ಬಾಲಕರ ಕಾಲೇಜು ಇದ್ದು, ಇಲ್ಲಿ ವಿದ್ಯಾಭ್ಯಾಸ ಮಾಡಿದ ವಿದ್ಯಾರ್ಥಿಗಳು ಐ.ಎ.ಎಸ್., ಕೆ.ಎ.ಎಸ್. ಅಧಿಕಾರಿಗಳು, ವೈದ್ಯರು, ವಕೀಲರಾಗಿ ರಾಜ್ಯ, ದೇಶ ಹಾಗೂ ವಿದೇಶಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಈ ವಿಷಯ ನಿಜಕ್ಕೂ ಜಿಲ್ಲೆಯ ಸೌಭಾಗ್ಯವೆಂದು ಭಾವಿಸುತ್ತೇವೆ.

ಅಂದು 1948ರಲ್ಲಿ ಮಹಾರಾಜರಾದ ಶ್ರೀ ಕೃಷ್ಣರಾಜ ಒಡೆಯರ್‌ರವರು ಇಲ್ಲಿನ ಮಕ್ಕಳ ಉನ್ನತ ಶಿಕ್ಷಣಕ್ಕಾಗಿ, ದೂರದೃಷ್ಟಿಯನ್ನು ಹೊಂದಿ ಸರ್ಕಾರಿ ಬಾಲಕರ ಕಾಲೇಜನ್ನು ಪ್ರಾರಂಭಿಸಿದರು. ಇಂದು ಈ ಕಾಲೇಜಿಗೆ ಪೀಠೋಪಕರಣ, ಉತ್ತಮವಾದ ಸ್ವಚ್ಛತೆಯುಳ್ಳ ಕೊಠಡಿಗಳು, ಉಪನ್ಯಾಸಕರು ಹಾಗೂ ಇನ್ನಿತರ ಮೂಲಭೂತ ಸೌಲಭ್ಯಗಳು ಇಲ್ಲದೆ ತುಂಬಾ ಹೀನಾಯ ಪರಿಸ್ಥಿತಿಯಲ್ಲಿ ಕಾಲೇಜು ನಡೆಯುತ್ತಿದೆ. ಸುಮಾರು 75 ವರ್ಷಗಳ ಇತಿಹಾಸವಿರುವ ಈ ಕಾಲೇಜಿಗೆ ಕನಿಷ್ಠ ಸೌಲಭ್ಯಗಳಿಲ್ಲದೆ, ಸುಣ್ಣ ಬಣ್ಣವಿಲ್ಲದೆ, ಕಾಂಪೌಂಡ್ ಇಲ್ಲದೆ ಉಪನ್ಯಾಸಕರಿಲ್ಲದೆ, ವಿದ್ಯಾರ್ಥಿಗಳ ಹಾಜರಾತಿ ಸಹ ಇಲ್ಲದಾಗಿದೆ. ಈ ರಾಜ್ಯಕ್ಕೆ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಐ.ಎ.ಎಸ್., ಕೆ.ಎ.ಎಸ್. ಅಧಿಕಾರಿಗಳನ್ನು ಕೊಡುಗೆಯಾಗಿ ನೀಡಿದ ಕೋಲಾರದ ಈ ಸರ್ಕಾರಿ ಬಾಲಕರ ಕಾಲೇಜನ್ನು ಉನ್ನತೀಕರಿಸಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮೇಲ್ದರ್ಜೆಗೇರಿಸಬೇಕಾಗಿರುವ ಕಾರ್ಯವು ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಶೀಘ್ರವಾಗಿ ಆಗಬೇಕಾಗಿರುವುದರಿಂದ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಸರ್ಕಾರದಿಂದ ಹೆಚ್ಚಿನ ಅನುದಾನವನ್ನು ಮಂಜೂರು ಮಾಡಿ, 1980ರವರೆಗೆ ಯಾವ ವೈಭವದಿಂದ ಈ ವಿದ್ಯಾಲಯ ವಿಜೃಂಭಿಸುತ್ತಿತ್ತೊ ಆ ಗತ ವೈಭವವನ್ನು ಮರುಕಳಿಸುವಂತೆ ಮಾಡಬೇಕಾಗಿರುವುದು ಸರ್ಕಾರದ ಜವಾಬ್ದಾರಿಯಾಗಿರುವುದರಿಂದ ಈ ವಿಷಯವನ್ನು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಲು ಅನುಮತಿಯನ್ನು ನೀಡಿದ್ದಕ್ಕಾಗಿ ತಮಗೆ ವಂದಿಸುತ್ತೇನೆ.

**ಡಾ:ಸಿ.ಎನ್.ಅಶ್ವತ್ಥನಾರಾಯಣ (ಉನ್ನತ ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಯವರೇ, ನಮ್ಮ ಕೋಲಾರ ಜಿಲ್ಲೆಯ First Grade College ಗೆ ಬೇಕಾಗಿರುವ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗುವುದು. ಮಾನ್ಯ ಸದಸ್ಯರ ಭಾವನೆಯಂತೆ ಗತಕಾಲದ ವೈಭವವನ್ನು ತರುವಂತೆ ಮಾಡಿ ಕೋಲಾರದ ಪ್ರಥಮ ದರ್ಜೆ ಕಾಲೇಜಿಗೆ ಬೇಕಾಗಿರುವ ಎಲ್ಲಾ ಸೌಲಭ್ಯಗಳನ್ನು ಒದಗಿಸಲಾಗುತ್ತದೆ. ಕಾಲೇಜಿಗೆ ಉತ್ತಮವಾದ ವ್ಯವಸ್ಥೆಯನ್ನು ಮಾಡಿಕೊಡಲಾಗುವುದು ಎನ್ನುವ ವಿಶ್ವಾಸವನ್ನು ವ್ಯಕ್ತಪಡಿಸುತ್ತೇನೆ.

**ಐ) ವಿಷಯ:- ಹಂಪಿ ಕನ್ನಡ ವಿಶ್ವವಿದ್ಯಾಲಯದಲ್ಲಿ ಸ್ಥಳೀಯ 17 ಬೋಧಕ ಹುದ್ದೆಗಳ ನೇಮಕಾತಿ ಪ್ರಕ್ರಿಯೆ ಬಗ್ಗೆ**

***

**ಶ್ರೀ ಶಶೀಲ್ ಜಿ.ನಮೋಶಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು.

ಕನ್ನಡ ವಿಶ್ವವಿದ್ಯಾಲಯ, ಹಂಪಿಯಲ್ಲಿ 17 ಬೋಧಕ ಹುದ್ದೆಗಳನ್ನು ತುಂಬಿಕೊಳ್ಳಲು ಕೆಲವು ದಿನಗಳ ಹಿಂದೆ ಪತ್ರಿಕಾ ಪ್ರಕಟಣೆಯನ್ನು ಹೊರಡಿಸಲಾಗಿತ್ತು. ಆದರೆ ಈ ನೇಮಕಾತಿ ಪ್ರಕ್ರಿಯೆಯು ಸರ್ಕಾರದ ನಿಯಮಾವಳಿಗಳನ್ನು ಗಾಳಿಗೆ ತೂರಿ ಹುದ್ದೆ ತುಂಬಿಕೊಳ್ಳಲು ಮುಂದಾಗಿರುವುದು ಸರಿಯಾದ ಕ್ರಮವಾಗಿರುವುದಿಲ್ಲ. ಏಕೆಂದರೆ ಕಾರ್ಯಕಾರಿ ಸಮಿತಿ ಸಭೆಯ ನಿರ್ಣಯದ ಪ್ರಕಾರ ಜುಲೈ 2020ರ ಒಳಗಾಗಿ ನೇಮಕಾತಿ ಪ್ರಕ್ರಿಯೆಯನ್ನು ಕೈಗೊಳ್ಳಲು ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಗಿತ್ತು. ಈ 17 ಹುದ್ದೆಗಳನ್ನು ತುಂಬಿಕೊಳ್ಳಲು ಸರಿಯಾದ ನಿಯಮಾವಳಿಗಳನ್ನು ಪಾಲಿಸಿರುವುದಿಲ್ಲ. ರೋಸ್ಟರ್ ಪದ್ಧತಿಯಂತೆ ಮೀಸಲಾತಿಯನ್ನು ಸರಿಯಾದ ನಿಯಮದಲ್ಲಿ ಪಾಲಿಸಿರುವುದಿಲ್ಲ. ಇದು ಸರಿಯಾದ ಕ್ರಮವಾಗಿರುವುದಿಲ್ಲ. 371 ಜೆ ಅಡಿಯಲ್ಲಿ ಒಂದು ಹುದ್ದೆಯನ್ನೂ ನೀಡಿರುವುದಿಲ್ಲ. ಈ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹಿನ್ನೆಲೆಯಲ್ಲಿ ಇನ್ನೂ ಹಲವಾರು ನಿಯಮಾವಳಿಗಳನ್ನು ಪಾಲಿಸದೇ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಮುಂದಾಗಿರುವುದು ಅನುಮಾನಕ್ಕೆ ಎಡೆ ಮಾಡಿಕೊಟ್ಟಂತಾಗಿದೆ ಹಾಗೂ ಕುಲಪತಿಗಳ ಅಧಿಕಾರಾವಧಿ 6 ತಿಂಳು ಉಳಿದಿರುವಾಗ ಯಾವುದೇ ಪ್ರಮುಖ ನಿರ್ಧಾರಗಳನ್ನು ತೆಗೆದುಕೊಳ್ಳುವಂತಿಲ್ಲ ಎಂಬ ರಾಜ್ಯಪಾಲರ ಆದೇಶವಿದ್ದರೂ ಸಹ ಹಾಗೂ ಸರ್ಕಾರದಿಂದ ಅನುಮತಿ ಪಡೆಯದೆ ಇಷ್ಟು ತರಾತುರಿಯಲ್ಲಿ ಕುಲಸಚಿವರು ಹುದ್ದೆ ಭರ್ತಿ ಮಾಡಲು ಮುಂದಾಗಿರುವುದು ಸರಿಯಾದ ಕ್ರಮವಲ್ಲ. ಆದ್ದರಿಂದ ಈ ಎಲ್ಲಾ ಕಾರಣಗಳಿಂದ ಈಗ ಹೊರಡಿಸಿರುವ ಅಧಿಸೂಚನೆಯನ್ನು ರದ್ದುಪಡಿಸುವಂತೆ ಕುಲಪತಿಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ ಇವರಿಗೆ ಸೂಕ್ತ ನಿರ್ದೇಶನ ನೀಡುವಂತೆ ಮಾನ್ಯ ಉನ್ನತ ಶಿಕ್ಷಣ ಸಚಿವರನ್ನು ಈ ಮೂಲಕ ಒತ್ತಾಯಿಸುತ್ತೇನೆ.

**ಡಾ:ಸಿ.ಎನ್.ಅಶ್ವತ್ಥನಾರಾಯಣ (ಉನ್ನತ ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ವರದಿಯನ್ನು ತರಿಸಿಕೊಂಡು ಯಾವುದೇ ರೀತಿಯಾದಂತಹ ನಿಯಮ ಉಲ್ಲಂಘನೆಯಾಗಿದ್ದರೆ ತಕ್ಷಣ ಕ್ರಮವನ್ನು ವಹಿಸಲಾಗುತ್ತದೆ.

**(...ಮುಂದು)**

(940) 23.09.2021 12.40 KG AK (ಸಭಾಪತಿಯವರ ಉಪಸ್ಥಿತಿ)

**ಒ)ವಿಷಯ:-ದಟ್ಟ ಮಲೆನಾಡು ಪ್ರದೇಶಗಳಲ್ಲಿ ವಾಸವಾಗಿರುವ ವಿದ್ಯಾರ್ಥಿಗಳು ಮತ್ತು ನೌಕರರ ಉಪಯೋಗಕ್ಕೆ ಬ್ರಾಡ್‌ಬ್ಯಾಂಡ್ ಸೌಲಭ್ಯ ಒದಗಿಸುವ ಬಗ್ಗೆ.**

\- - -

**ಶ್ರೀ ಆರ್.ಪ್ರಸನ್ನಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನನಗೆ ಶೂನ್ಯವೇಳೆಯಲ್ಲಿ ವಿಷಯವನ್ನು ಪ್ರಸ್ತಾಪ ಮಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನು ಸಲ್ಲಿಸುತ್ತೇನೆ. ರಾಜ್ಯದಲ್ಲಿ ಪ್ರಸ್ತುತ ಕೋವಿಡ್ -19 ಪರಿಣಾಮವಾಗಿ ತಂತ್ರಜ್ಞಾನ ಆಧಾರಿತ ಶಿಕ್ಷಣವನ್ನು ನೀಡಲಾಗುತ್ತಿದೆ ಆದರೆ, ಡಿಜಿಟಲ್ ಕಲಿಕೆಗೆ ಸೂಕ್ತವಾದ ಮೂಲ ಭೂತವಾದ ತಂತ್ರಜ್ಞಾನವನ್ನು ಗ್ರಾಮೀಣ ಭಾಗಗಳಲ್ಲಿ ಅಳವಡಿಸಲು ಕ್ರಮಕೈಗೊಳ್ಳದೇ ಇರುವುದರಿಂದ, ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಇ-ಕಲಿಕೆಯು ಅಸಾಧ್ಯವಾಗಿರುವ ವಿಚಾರವನ್ನು ಸದನದಲ್ಲಿ ಶೂನ್ಯವೇಳೆಯ ಅಡಿಯಲ್ಲಿ ಪ್ರಸ್ತಾಪಿಸಲು ಅನುಮತಿ ಕೋರುತ್ತಿದ್ದೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನ್ಯ ಸಭಾಪತಿಯವರೇ, ಡಿಜಿಟಲ್ ಕಲಿಕೆಗೆ ಎಲ್ಲಾ ವಿದ್ಯಾರ್ಥಿಗಳ ಬಳಿ ಅಗತ್ಯ ಕಂಪ್ಯೂಟರ್ ಟ್ಯಾಬ್ ಇತ್ಯಾದಿ ಎಲೆಕ್ಟ್ರಾನಿಕ್ ಗ್ಯಾಜೆಟ್‌ಗಳ ಕೊರತೆ ಮುಖ್ಯವಾಗಿ ಗ್ರಾಮೀಣ ಭಾಗದ ಮಲೆನಾಡು ಸೇರಿದಂತೆ, ಘಟ್ಟ ಪ್ರದೇಶಗಳಲ್ಲಿ ಇಂಟರ್‌ನೆಟ್ ಹಾಗೂ ಬ್ರಾಡ್ ಬ್ಯಾಂಡ್ ಸಮಸ್ಯೆ ಸಾಮಾನ್ಯವಾಗಿದೆ. ಅನುದಾನದ ಕೊರತೆಯಿಂದಾಗಿ ಡಿಜಿಟಲ್ ಕಲಿಕೆಗೆ ಒತ್ತು ನೀಡುವ ಸಲುವಾಗಿ ರಾಜ್ಯ ಸರ್ಕಾರ ಜಾರಿಗೆ ತಂದಿರುವ "**ಸ್ಮಾರ್ಟ್ ಕ್ಲಾಸ್** " ಯೋಜನೆ ಮಂದಗತಿಯಲ್ಲಿ ಸಾಗುತ್ತಿರುವುದು ಕಂಡುಬಂದಿದೆ. ಯು.ಜಿ.ಸಿ., ಈಗಾಗಲೇ ಪದವಿ ಹಂತದಲ್ಲಿ ಆನ್‌ಲೈನ್ ಶಿಕ್ಷಣಕ್ಕೆ ಒತ್ತು ನೀಡಿದೆ. 2021-22ನೇ ಸಾಲಿನಲ್ಲಿ ಪದವಿ ತರಗತಿಗಳಿಗೆ ಶೇ 60% ರಷ್ಟು ಭೌತಿಕ ತರಗತಿ ಉಳಿದ ಶೇ 40% ರಷ್ಟು ಆನ್‌ಲೈನ್ ತರಗತಿಗಳನ್ನು ನಡೆಸುವಂತೆ ಆದೇಶಿಸಿದೆ. ಆದ್ದರಿಂದ, ಪದವಿ ಕಾಲೇಜುಗಳು ವಿದ್ಯಾರ್ಥಿಗಳಿಗೆ ಆನ್‌ಲೈನ್ ಮತ್ತು ಆಫ್‌ಲೈನ್ ಎರಡೂ ಬಗೆಯ ತರಗತಿಗಳಿಗೆ ಒತ್ತು ನೀಡಿದೆ. ಇದರ ಜೊತೆಗೆ ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ರಾಜ್ಯದ ಹಲವು ವಿಶ್ವವಿದ್ಯಾಲಯಗಳಿಗೆ ಆನ್‌ಲೈನ್ ಕೋರ್ಸ್‌ಗಳನ್ನು ನಡೆಸಲು ಯು.ಜಿ.ಸಿ ಅನುಮತಿ ನೀಡಿದೆ.

ಡಿಜಿಟಲ್ ಕಲಿಕೆಯಲ್ಲಿ ಯಶಸ್ವಿಯಾಗಬೇಕಾದರೆ, ಪ್ರಮುಖವಾಗಿ ಗುಣಮಟ್ಟದ ಇಂಟರ್ನೆಟ್ ಮತ್ತು ಬ್ರಾಡ್‌ಬ್ಯಾಂಡ್ ಅಗತ್ಯವಿದೆ. ಆದರೆ, ಗ್ರಾಮೀಣ ಪ್ರದೇಶ, ಮಲೆನಾಡು ಹಾಗೂ ಘಟ್ಟ ಪ್ರದೇಶಗಳಲ್ಲಿ ಇಂಟರ್ನೆಟ್ ಸಮಸ್ಯೆ ಸಾಮಾನ್ಯವಾಗಿದ್ದು, ವಿದ್ಯಾರ್ಥಿಗಳು ಆನ್‌ಲೈನ್ ತರಗತಿಗಳಲ್ಲಿ ಪಾಲ್ಗೊಳ್ಳಲು ಗುಡ್ಡ, ಬೆಟ್ಟ, ಮನೆ ಮತ್ತು ಮರಗಳನ್ನೇರಿ ಕುಳಿತುಕೊಳ್ಳುವ ಪರಿಸ್ಥಿತಿಯಿದೆ. ಈ ಅವ್ಯವಸ್ಥೆಯನ್ನು ಸರಿಪಡಿಸದೇ, ಡಿಜಿಟಲ್ ಕಲಿಕೆ ಅಸಾಧ್ಯವೆಂಬಂತಾಗಿದೆ.

ಮಲೆನಾಡು ಪ್ರದೇಶವಾದ ಸಾಗರ ತಾಲ್ಲೂಕಿನ ಕರೂರು ಬಾರಂಗಿ ಹೋಬಳಿಯ ಅತ್ಯಂತ ಘಟ್ಟ ಮಲೆನಾಡಿನ ಪ್ರದೇಶಗಳಲ್ಲಿ ವಾಸಿಸುತ್ತಿರುವ, ವಿದ್ಯಾರ್ಥಿಗಳಿಗೆ ಜನಸಾಮಾನ್ಯರಿಗೆ ಹಾಗೂ Work from Home ನಡೆಸುತ್ತಿರುವ ವಿದ್ಯಾವಂತರಿಗೆ ಹಾಗೂ ಇತರರಿಗೆ ಸರ್ಕಾರಿ ಉದ್ಯೋಗಿಗಳಿಗೆ ಮೊಬೈಲ್ ನೆಟ್‌ವರ್ಕ್ ಇಲ್ಲದೇ, ಅತ್ಯಂತ ತೊಂದರೆಯಾಗಿದೆ. ಆದ್ದರಿಂದ, ಗುಡ್ಡಗಾಡು ಪ್ರದೇಶಗಳಿಂದ ಕೂಡಿದ ತುಮರಿ, ಕುದನೂರು, ಎಸ್.ಎಸ್.ದೋಗ್, ಚಿನ್ನಗೊಂಡ, ಬಾನಕುಳಿ, ಅಲಂಗೂಡು, ತುಲವಾಟ ಗ್ರಾಮ ಪಂಚಾಯಿತಿಗಳಿಗೆ ಹೆಚ್ಚಿನ ಸಾಮರ್ಥ್ಯವಿರುವ ಬ್ರಾಡ್‌ಬ್ಯಾಂಡ್ ನೆಟ್‌ವರ್ಕ್‌ನ್ನು ಅಳವಡಿಸಲು ಮತ್ತು ಹೆಚ್ಚಿನ ಮೊಬೈಲ್ ಟವರ್‌ಗಳನ್ನು ಸ್ಥಾಪನೆ ಮಾಡಿ ಗ್ರಾಮೀಣ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಭಾಗದ ವಿದಾರ್ಥಿಗಳಿಗೆ ಇ-ಕಲಿಗೆ ಹಾಗೂ ಇನ್ನಿತರೆ ತಂತ್ರಜ್ಞಾನ ಆಧಾರಿತ ಸೇವೆಗಳಿಗೆ ಅನುಕೂಲ ಮಾಡಿಕೊಡುವ ಸಲುವಾಗಿ ಈ ಸದನದ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ

**ಡಾ||ಸಿ.ಎಸ್.ಅಶ್ವಥ ನಾರಾಯಣ (ಉನ್ನತ ಶಿಕ್ಷಣ, ಐಟಿ-ಬಿಟಿ, ವಿಜ್ಞಾನ ಹಾಗೂ ತಂತ್ರಜ್ಞಾನ ಮತ್ತು ಕೌಶಲ್ಯಾಭಿವೃದ್ಧಿ ಸಚಿವರು):-** ಮಾನ್ಯ ಸಭಾಪತಿಯವರೇ, ಈಗಾಗಲೇ digital infrastructure ಅನ್ನು ಹೆಚ್ಚಿಸುವುದಕ್ಕೆ ಸನ್ಮಾನ್ಯ ಮುಖ್ಯಮಂತ್ರಿಯವರು ಬಹಳಷ್ಟು ಕ್ರಮವನ್ನು ವಹಿಸುವಂಥದ್ದು ಆಗುತ್ತಿದೆ. ಎಲ್ಲಾ ಕಾರಣಕ್ಕೂ, Covid-19 ನ ಸೋಂಕಿನ ಹಿನ್ನೆಲೆಯಲ್ಲಿ, ಇವತ್ತು ದೊಡ್ಡ ನಗರಕ್ಕಿಂತಲೂ ಜನರು ಚಿಕ್ಕ ಚಿಕ್ಕ ನಗರಗಳಿಗೆ ಮತ್ತು ಗ್ರಾಮಗಳಿಗೆ ವಲಸೆ ಹೋಗುತ್ತಿದ್ದಾರೆ. ಇದನ್ನು ಒದಗಿಸುವ ಮೂಲಕ ವ್ಯಾಪಕವಾಗಿ ಇನ್ನೂ ಉತ್ತಮವಾಗಿ ಕಲಿಕೆಗಾಗಲಿ, ಆರೋಗ್ಯಕ್ಕಾಗಲಿ ಅಥವಾ ಸರ್ಕಾರದ ಎಲ್ಲಾ ವ್ಯವಹಾರಗಳಿಗೂ ಮತ್ತು e-commerce ಗೆ ಎಲ್ಲದಕ್ಕೂ ಅವಶ್ಯಕತೆ ಇದೆ. ಇದಕ್ಕೆ ಆದ್ಯತೆಯನ್ನು ಸರ್ಕಾರದಲ್ಲಿ ಕೊಡುತ್ತಿದ್ದೇವೆ. ಅದು internet ಗಾಗಲಿ ಅಥವಾ broadband ಗಾಗಲಿ ಎರಡು ಆದ್ಯತೆಯನ್ನು ಕೊಟ್ಟು digital infrastructure ಅನ್ನು ಹೆಚ್ಚಿಸುವಂತಹ ಎಲ್ಲಾ ಪ್ರಯತ್ನಗಳು ಆಗುತ್ತಿವೆ. ಅದೇ ದಾರಿಯಲ್ಲಿ Telecom Policy ಅನ್ನು ತಂದಿದ್ದೇವೆ. Single Window Policy ಅನ್ನು ತಂದಿದ್ದೇವೆ. ಮೊದಲು many windows ಇತ್ತು. ಈಗ Single Window ಮಾಡಿದ್ದೇವೆ. ಮೊದಲು ಎಲ್ಲಾ ಹಂತದಲ್ಲಿಯೂ ಅನುಮತಿಗಳನ್ನು ತೆಗೆದುಕೊಳ್ಳುವುದು ಸಮಸ್ಯೆಯಾಗುತ್ತಿತ್ತು. ಈಗ ಬಹಳಷ್ಟು ಕ್ರಮಗಳನ್ನು ವಹಿಸಿ ಸರಳವಾಗಿ ಮತ್ತು ಸುಲಭವಾಗಿ broadband ಮತ್ತು internet ಒದಗಿಸುವುದಕ್ಕೆ ಬೇಕಾದಂತಹ infrastructure develop ಮಾಡುವುದಕ್ಕೆ ಪೂರಕವಾಗಿ ನಮ್ಮ ಕರ್ನಾಟಕದಲ್ಲಿ Telecom Policy ಅನ್ನು ತರಲಾಗಿದೆ. ಅದರ ಜೊತೆಯಲ್ಲಿಯೇ digital infrastructure ಗೆ ಮಾನ್ಯ ಮುಖ್ಯಮಂತ್ರಿಯವರೇ ಖುದ್ದಾಗಿ ಆಸಕ್ತಿಯನ್ನು ವಹಿಸಿ ಇದಕ್ಕೆ ಆದ್ಯತೆಯನ್ನು ಕೊಟ್ಟು ಇದರ ವ್ಯವಸ್ಥೆಗಾಗಿ ಎಲ್ಲಾ ಗ್ರಾಮಗಳಲ್ಲಿಯೂ infrastructure ಹೆಚ್ಚಿಸಬೇಕೆಂದು ಪ್ರಯತ್ನವಾಗುತ್ತಿದೆ. ನಮ್ಮ ಸರ್ಕಾರಿ ಸಂಸ್ಥೆಗಳಲ್ಲಿ ಆಯಯಾ ಕಾಲೇಜುಗಳಲ್ಲಿಯೇ Wi-Fi facility ಗಳನ್ನು ಕೊಡುವಂಥದ್ದು ಆಗಿದೆ. ನಾವು ಮಾಡುತ್ತಿರುವಂತಹ facility ನಲ್ಲಿ offline ನಲ್ಲಿಯೂ ಕೆಲಸ ಮಾಡಬಹುದು. Online ನಲ್ಲಿಯೂ ಮಾಡಬಹುದು. ಕಾಲೇಜಿಗೆ ಬಂದ ತಕ್ಷಣ, Online facility, Wi-Fi facility ಕಾಲೇಜುಗಳಲ್ಲಿ ಇದೆ. Offline ನಲ್ಲಿ ಮನೆಯಲ್ಲಿಯೂ ಕಲಿಯುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೇವೆ. ಮಾನ್ಯ ಸದಸ್ಯರು ಬಹಳ ಒಳ್ಳೆಯ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಈ ಎಲ್ಲಾ ವಿಚಾರಗಳ ಬಗ್ಗೆ ಕ್ರಮವಹಿಸಿದ್ದೇವೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಓ) ವಿಷಯ:-ಕುಣಬಿ ಜನಾಂಗವನ್ನು ಪರಿಶಿಷ್ಟ ಜನಾಂಗಕ್ಕೆ ಸೇರಿಸುವ ಬಗ್ಗೆ.**

- - -

**ಶ್ರೀ ಘೋಟ್ನೇಕರ ಶ್ರೀಕಾಂತ ಲಕ್ಷ್ಮಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಉತ್ತರ ಕನ್ನಡ ಜಿಲ್ಲೆಯ ದಟ್ಟ ಕಾಡುಗಳಲ್ಲಿ ವಾಸಿಸುವ ಕುಣಬಿ ಜನಾಂಗ ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ಆರ್ಥಿಕವಾಗಿ ಮತ್ತು ರಾಜಕೀಯವಾಗಿ ಅತ್ಯಂತ ಹಿಂದುಳಿದವಾಗಿರುತ್ತಾರೆ. ತನ್ನದೇ ಆದ ಸಂಸ್ಕೃತಿ ಹೊಂದಿದವರಾಗಿದ್ದು, ಬುಡಕಟ್ಟು ಸಂಸ್ಕೃತಿಯ ಎಲ್ಲಾ ಗುಣ ಲಕ್ಷಣಗಳನ್ನು ಹೊಂದಿರುತ್ತಾರೆ. ಕಳೆದ ಹಲವಾರು ವರ್ಷಗಳಿಂದ ಕುಣಬಿ ಸಮಾಜವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಲು ಒತ್ತಾಯಿಸುತ್ತಾ ಬಂದರೂ ಸಹ, ಯಾವುದೇ ಪ್ರಯೋಜನವಾಗಿಲ್ಲ. ಕುಣಬಿ ಜನಾಂಗವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಬೇಕು. ಬುಡಕಟ್ಟು ಸಂಸ್ಕೃತಿ, ಆಹಾರ ವಿಚಾರ, ಕಾಡಿನ ಕಿರು ಉತ್ಪನ್ನ, ಕುಂಬ್ರಿ, ಜಮೀನು ಅಕ್ರಮ ಸಕ್ರಮ ಮುಂತಾದುವುಗಳಿಗೆ ಪರಿಹಾರ ಕಂಡುಕೊಳ್ಳಲು ಕುಣಬಿ ಜನರು ಮೇಲಿಂದ ಮೇಲೆ ಪ್ರತಿಭಟನೆ ಮಾಡುತ್ತಿರುತ್ತಾರೆ. ಆದ್ದರಿಂದ, ಈ ಜನಾಂಗದವರನ್ನು ಆದಷ್ಟು ಹೆಚ್ಚಿನ ಪ್ರಾಶಸ್ತ್ಯದ ಮೇರೆಗೆ ಪರಿಶಿಷ್ಟ ಪಂಗಡಕ್ಕೆ ಸೇರಿಸಲು ಕೇಂದ್ರ ಸರ್ಕಾರಕ್ಕೆ ವರದಿ ಮಾಡಲು ಸಾರ್ಜನಿಕರ ಹಿತದೃಷ್ಟಿಯಿಂದ ಈ ವಿಷಯವನ್ನು ಶೂನ್ಯ ವೇಳೆಯಲ್ಲಿ ಮಾನ್ಯ ಸಮಾಜ ಕಲ್ಯಾಣ ಸಚಿವರ ಮುಖಾಂತರ ಸರ್ಕಾರಕ್ಕೆ ವಿನಂತಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿರುವಂತಹ ಪ್ರಶ್ನೆಗೆ ಸಂಬಂಧಪಟ್ಟಂತೆ ,ಉತ್ತರ ಕನ್ನಡ ಜಿಲ್ಲೆಯ ದಟ್ಟಕಾಡುಗಳಲ್ಲಿ ವಾಸ ಮಾಡುತ್ತಿರುವ ಕುಣಬಿ ಜನಾಂಗದವರು ಆರ್ಥಿಕವಾಗಿ ಮತ್ತು ಶೈಕ್ಷಣಿಕವಾಗಿ ತುಂಬಾ ಹಿಂದುಳಿದಿದ್ದು ಹೌದು. ಅವರನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಬೇಕು ಎನ್ನುವ ಪ್ರಸ್ತಾವ ಸರ್ಕಾರದ ಮುಂದಿದೆ. ಅದನ್ನು ಪರಿಶೀಲನೆ ಮಾಡಿ ಉತ್ತರವನ್ನು ಒದಗಿಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**04.ಸಭೆಯ ಮುಂದಿಡಲಾದ ಕಾಗದ ಪತ್ರಗಳು**

**ಶ್ರೀ ಬಸವರಾಜ ಬೊಮ್ಮಾಯಿ (ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೇ, ಭಾರತ ಸಂವಿಧಾನದ 151 (2)ನೇ ಅನುಚ್ಛೇದದ ಮೇರೆಗೆ, ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕ ಪರಿಶೋಧಕರು ನೀಡಿರುವ ಅನುಪಾಲನಾ ಲೆಕ್ಕಪರಿಶೋಧನಾ ವರದಿಯನ್ನು (2021ನೇ ವರ್ಷದ ವರದಿ ಸಂಖ್ಯೆ-3) ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

**(ಮೂರನೇ ಪಟ್ಟಿ)**

**ಶ್ರೀ ಬಸವರಾಜ ಬೊಮ್ಮಾಯಿ (ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೇ,

**I. <u>ರಾಜ್ಯ ಹಣಕಾಸು ಸಂಸ್ಥೆಗಳ ಅಧಿನಿಯಮ, 1961ರ ಪರಿಚ್ಛೇದ 37 (7) ಮತ್ತು 38 (3) ರ ಪ್ರಕಾರ</u>:-**

1. ಕರ್ನಾಟಕ ರಾಜ್ಯಹಣಕಾಸು ಸಂಸ್ಥೆಯ 2020-21ನೇ ಸಾಲಿನ ವಾರ್ಷಿಕ ವರದಿ ಹಾಗೂ 2019-20ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

(2) **ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನೆ ಕಾಯ್ದೆ 1961ರ ಕಲಂ 68-ಸಿ ಮತ್ತು ಡಿ (4)ರನ್ವಯ**

1. ಶಿರಾ ಯೋಜನಾ ಪ್ರಾಧಿಕಾರದ 2019-20ನೇ ಸಾಲಿನ ಲೆಕ್ಕಪರಿಶೋಧನಾ ವರದಿ.
2. ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರದ 2020-21ನೇ ಸಾಲಿನ ವಾರ್ಷಿಕ ವರದಿ.
3. ಕನಕಪುರ ಯೋಜನಾ ಪ್ರಾಧಿಕಾರದ 2020-21ನೇ ಸಾಲಿನ ವಾರ್ಷಿಕ ವರದಿ.
4. ನೆಲಮಂಗಲ ಯೋಜನಾ ಪ್ರಾಧಿಕಾರದ 2020-21ನೇ ಸಾಲಿನ ವಾರ್ಷಿಕ ವರದಿಯನ್ನು ಮಂಡಿಸುತ್ತಿದ್ದೇನೆ.

**II. ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು) (ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ,

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(1) **ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ಪ್ರಕರಣ 300ರ ಉಪ ಪ್ರಕರಣ (5) ರನ್ವಯ:-**

1. ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತ್‌ನ 2020-21 ನೇ ಸಾಲಿನ ವಾರ್ಷಿಕ ಆಡಳಿತ ವರದಿ.
2. ಶಿವಮೊಗ್ಗ ಜಿಲ್ಲಾ ಪಂಚಾಯತ್‌ನ 2020-21ನೇ ಸಾಲಿನ ವಾರ್ಷಿಕ ವರದಿ.
3. ಕೊಡಗು (ಮಡಿಕೇರಿ) ಜಿಲ್ಲಾ ಪಂಚಾಯತ್‌ನ 2020-21ನೇ ಸಾಲಿನ ವಾರ್ಷಿಕ ವರದಿ.
4. ಕೋಲಾರ ಜಿಲ್ಲಾ ಪಂಚಾಯತ್‌ನ 2020-21ನೇ ಸಾಲಿನ ವಾರ್ಷಿಕ ವರದಿ.
5. ದಕ್ಷಿಣ ಕನ್ನಡ (ಮಂಗಳೂರು) ಜಿಲ್ಲಾ ಪಂಚಾಯತ್‌ನ 2020-21ನೇ ಸಾಲಿನ ವಾರ್ಷಿಕ ವರದಿ.
6. ಹಾವೇರಿ ಜಿಲ್ಲಾ ಪಂಚಾಯತ್‌ನ 2020-21ನೇ ಸಾಲಿನ ವಾರ್ಷಿಕ ವರದಿ.
7. ಹಾಸನ ಜಿಲ್ಲಾ ಪಂಚಾಯತ್‌ನ 2020-21 ಸಾಲಿನ ವಾರ್ಷಿಕ ವರದಿಯನ್ನು ಮಂಡಿಸುತ್ತಿದ್ದೇನೆ.

(2) **ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993 ಅನುಚ್ಛೇಧ 262 (3) ರಂತೆ :**

1. ಚಿಕ್ಕಮಗಳೂರು ಜಿಲ್ಲಾ ಪಂಚಾಯತ್‌ನ 2018-2019ನೇ ಸಾಲಿನ ಲೆಕ್ಕ ಪರಿಶೋಧನಾ ವರದಿ.
2. ಬಾಗಲಕೋಟೆ ಜಿಲ್ಲಾ ಪಂಚಾಯತ್‌ನ 2019-20ನೇ ಸಾಲಿನ ಲೆಕ್ಕ ಪರಿಶೋಧಾನ ವರದಿ.
3. ಬಳ್ಳಾರಿ ಜಿಲ್ಲಾ ಪಂಚಾಯತ್‌ನ 2017-2018 ಮತ್ತು 2018-2019ನೇ ಸಾಲಿನ ಲೆಕ್ಕ ಪರಿಶೋಧನಾ ವರದಿ.
4. ಹಾಸನ ಜಿಲ್ಲಾ ಪಂಚಾಯತ್‌ನ 2018-2019ನೇ ಸಾಲಿನ ಲೆಕ್ಕ ಪರಿಶೋಧನಾ ವರದಿ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

5. ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತಿಯ 2018-2019ನೇ ಸಾಲಿನ ಲೆಕ್ಕ ತಪಾಸಣಾ ವರದಿ (ಲೆಕ್ಕ ಪರಿಶೋಧನಾ ವರದಿ).

6. ಧಾರವಾಡ ಜಿಲ್ಲಾ ಪಂಚಾಯತ್‌ನ 2018-2019ನೇ ಸಾಲಿನ್ ಲೆಕ್ಕ ಪರಿಶೋಧನಾ ವರದಿ

7. ತುಮಕೂರು ಜಿಲ್ಲಾ ಪಂಚಾಯತ್‌ನ 2018-19ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯನ್ನು ಮಂಡಿಸುತ್ತಿದ್ದೇನೆ.

**III ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು) (ಮಾನ್ಯ ಸಾರಿಗೆ, ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ,

1. ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಕಲಬುರಗಿ ಇವರ 2019-20ನೇ ಸಾಲಿನ ವಾರ್ಷಿಕ ವರದಿ.

2. ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ ಇದರ 2019-20ನೇ ಸಾಲಿನ ವಾರ್ಷಿಕ ವರದಿಯನ್ನು ಮಂಡಿಸುತ್ತಿದ್ದೇನೆ.

**IV. ಡಾ|| ಅಶ್ವತ್ಥ ನಾರಾಯಣ ಸಿ.ಎನ್ (ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ ಸಚಿವರು):-** ಮಾನ್ಯ ಸಭಾಪತಿಯರೇ,

**ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000, ಪ್ರಕರಣ 47(4) ಮತ್ತು 50(2)ರನ್ವಯ**

1, ಮಂಗಳೂರು ವಿಶ್ವವಿದ್ಯಾಲಯದ 2019-20ನೇ ಸಾಲಿನ ವಾರ್ಷಿಕ ವರದಿ.

2. ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ 2016-17ನೇ ಸಾಲಿನ ಅನುಸರಣಾ (ಲೆಕ್ಕ ಪರಿಶೋಧನಾ) ವರದಿಯನ್ನು ಮಂಡಿಸುತ್ತಿದ್ದೇನೆ.

**V. ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು) (ಕಾರ್ಮಿಕ ಇಲಾಖೆ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ,

**ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ ನಿಯಮ 1968ರನುಸಾರ:**

ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿಯ 2019-20ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯನ್ನು ಮಂಡಿಸುತ್ತಿದ್ದೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**VI. ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು) (ಮಾನ್ಯ ಕೃಷಿ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ,

**ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳ ಅಧಿನಿಯಮ, 2009ರ ಕಲಂ 40 (3) ರಂತೆ.**

ಧಾರವಾಡ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ 2017-2018ನೇ ಸಾಲಿನ ಅನುಸರಣಾ (ಲೆಕ್ಕ ಪರಿಶೋಧನಾ) ವರದಿಯನ್ನು ಮಂಡಿಸುತ್ತಿದ್ದೇನೆ.

**VII. ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು) (ನಗರಾಭಿವೃದ್ಧಿ ಸಚಿವರ ಪರವಾಗಿ**):- ಮಾನ್ಯ ಸಭಾಪತಿಯವರೇ,

**(1) ಕರ್ನಾ1ಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ 1987 ರ ಕಲಂ 49 ಮತ್ತು 48 (5) ರನ್ವಯ.**

1. ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರದ 2019-20 ಮತ್ತು 2020-21ನೇ ಸಾಲಿನ ವಾರ್ಷಿಕ ವರದಿ.

2. ಗದಗ-ಬೆಟಗೇರಿ ನಗರಾಭಿವೃದ್ಧಿ ಪ್ರಾಧಿಕಾರದ 2019-20ನೇ ಸಾಲಿನ ವಾರ್ಷಿಕ ವರದಿ.

3. ಶಿವಮೊಗ್ಗ-ಭದ್ರಾವತಿ ನಗರಾಭಿವೃದ್ಧಿ ಪ್ರಾಧಿಕಾರದ 2019-20 ಮತ್ತು 2020-21ನೇ ಸಾಲಿನ ವಾರ್ಷಿಕ ವರದಿಗಳು ಹಾಗೂ 2018-19ನೇ ಸಾಲಿನ ಲೆಕ್ಕ ಪರಿಶೋಧನಾ ವರದಿ.

**(2) ಕರ್ನಾಟಕ ಪುರಸಭೆಗಳ ಅಧಿನಿಯಮ 1964ರ ಕಲಂ 295 (6) ತಿದ್ದುಪಡಿಯಂತೆ ಹಾಗೂ ಕರ್ನಾಟಕ ಮಹಾನಗರ ಪಾಲಿಕೆಗಳ ಅಧಿನಿಯಮ 1976ರ ಕಲಂ 150 (2) (ಬಿ) ತಿದ್ದುಪಡಿಯಂತೆ.**

ನಗರ ಸ್ಥಳೀಯ ಸಂಸ್ಥೆಗಳ ಮತ್ತು ಮಹಾನಗರ ಪಾಲಿಕೆಗಳ 2009-10 ರಿಂದ 2013-14ನೇ ಸಾಲಿನವರೆಗಿನ ವಾರ್ಷಿಕ ಕ್ರೋಢಿಕೃತ ಲೆಕ್ಕ ಪರಿಶೋಧನಾ ವರದಿಗಳನ್ನು ಮಂಡಿಸುತ್ತಿದ್ದೇನೆ.

**ಸಭಾಪತಿಯವರು:-** ಮಂಡಿಸಲಾಯಿತು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**5. ಕಾರ್ಯದರ್ಶಿಯವರ ವರದಿ**

**ಕಾರ್ಯದರ್ಶಿ, ಕವಿಪ**:- ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ ಈ ಕೆಳಕಂಡ ವಿಧೇಯಕಗಳನ್ನು ಸಭೆಯ ಮುಂದಿಡುತ್ತಿದ್ದೇನೆ.

ಅ) ಕರ್ನಾಟಕ ಪೌರಸಭೆಗಳು ಮತ್ತು ಕೆಲವು ಇತರ ಕಾನೂನು (ಎರಡನೇ ತಿದ್ದುಪಡಿ) ವಿಧೇಯಕ, 2021.

ಆ) ಕರ್ನಾಟಕ ಖಾದಿ ಮತ್ತು ಗ್ರಾಮೋದ್ಯೋಗಗಳ (ತಿದ್ದುಪಡಿ) ವಿಧೇಯಕ, 2021.

ಇ) ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ಶಿಕ್ಷಕರ ವರ್ಗಾವಣೆ ನಿಯಂತ್ರಣ) (ತಿದ್ದುಪಡಿ) ವಿಧೇಯಕ, 2021

**ಸಭಾಪತಿಯವರು:-** ಮಂಡಿಸಲಾಯಿತು.

**6. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳಿಗೆ ಸಂಬಂಧಿಸಿದಂತೆ ಸಚಿವರ ಹೇಳಿಕೆಗಳು**

**ಅ)ವಿಷಯ:-** ಸೈಬರ್ ಅಪರಾಧಗಳ ಪೈಕಿ ಬೆಂಗಳೂರು ನಗರದಲ್ಲಿ ಕಳೆದ ಮೂರು ವರ್ಷಗಳಲ್ಲಿನ ಸೈಬರ್ ಅಪರಾಧಗಳ ಅಂಕಿ-ಸಂಖ್ಯೆ ಕುರಿತು.

\- - -

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು) (ಗೃಹ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ದಿನಾಂಕ 16.09.2021 ರಂದು ಮಾನ್ಯ ಸದಸ್ಯರಾದ ಎಸ್.ರುದ್ರೇಗೌಡ ರವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದ ವಿಷಯಕ್ಕೆ ಸಂಬಂಧಿಸಿದ ಉತ್ತರವನ್ನು ಮಂಡಿಸುತ್ತಿದ್ದೇನೆ.

**(ಉತ್ತರವನ್ನು ಲಗತ್ತಿಸಲಾಗಿದೆ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಆ)** ಗದನ ಜಿಲ್ಲೆಯ ಮುಂಡರಗಿ ತಾಲ್ಲೂಕಿನಲ್ಲಿ ಜಿಂಕೆ, ಹಾವಳಿಯಿಂದ ಅನ್ನದಾತ ತತ್ತರಿಸುತ್ತೀರುವ ಕುರಿತು.

----

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು) (ಅರಣ್ಯ, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ದಿನಾಂಕ 20.09.2021 ರಂದು ಮಾನ್ಯ ಸದಸ್ಯರಾದ ಎಸ್.ವ್ಹಿ.ಸಂಕನೂರರವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದ ವಿಷಯಕ್ಕೆ ಸಂಬಂಧಿಸಿದ ಉತ್ತರವನ್ನು ಮಂಡಿಸುತ್ತಿದ್ದೇನೆ.

**(ಉತ್ತರವನ್ನು ಲಗತ್ತಿಸಲಾಗಿದೆ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಇ)ವಿಷಯ:-** ವಿಜಯವಾಣಿ ದಿನ ಪತ್ರಿಕೆಯ ಸುದ್ದಿ ಪುಟ್ಬಾಲ್ ಮೈದಾನ ಗುಂಡಿಮಯ ಎಂಬ ಶೀಷಿಕೆ ಕುರಿತು.

---

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು) (ರೇಷ್ಮೆ, ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ದಿನಾಂಕ 21.09.2021 ರಂದು ಮಾನ್ಯ ಸದಸ್ಯರಾದ ಎಂ.ಪಿ.ಸುನೀಲ್ ಸುಬ್ರಮಣಿಯವರು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ ವಿಷಯಕ್ಕೆ ಸಂಬಂಧಿಸಿದ ಉತ್ತರವನ್ನು ಮಂಡಿಸುತ್ತಿದ್ದೇನೆ.

**(ಉತ್ತರವನ್ನು ಲಗತ್ತಿಸಲಾಗಿದೆ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಬಸವರಾಜ ಬೊಮ್ಮಾಯಿ (ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೇ, ಕೆಳಮನೆಯಲಿ Finance Bill ಬರುತ್ತಿದೆ. ಅದಕ್ಕೆ ಇದನ್ನು ಮುಗಿಸಿಕೊಂಡು ಹೋಗುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಯವರು ಈ ರಾಜ್ಯದ ಮುಖ್ಯಮಂತ್ರಿಗಳಾಗಿ ಆಯ್ಕೆಯಾದ ನಂತರ ಪ್ರಥಮ ಬಾರಿಗೆ ಈ ಸದನಕ್ಕೆ ಬಂದಿದ್ದಾರೆ. ಮಾನ್ಯ ಮುಖ್ಯಮಂತ್ರಿಯವರು ಈ ಪೂರ್ವದಲ್ಲಿಯೂ ಇಲಿಗೆ ಬಂದು ಸುಮಾರು 2-3 ನಿಮಿಷಗಳ ಕಾಲ ಇದ್ದು ಹೋಗಿದ್ದರು. ಇಂದು ಬಂದು ಸದನದ ಕಾರ್ಯಾಕಾಲಾಪಗಳಲ್ಲಿ ಅತ್ಯಂತ ಉಲ್ಲಾಸದಿಂದ ಭಾಗವಹಿಸಿ, ಅನೇಕ ಸಲಹೆ ಸೂಚನೆಗಳನ್ನು ಸಹ ನೀಡಿದ್ದಾರೆ. ನಮ್ಮ ರಾಜ್ಯಕ್ಕೆ ನೂತನವಾಗಿ ಆಯ್ಕೆಯಾದ ಶ್ರೀ ಬಸವರಾಜ ಬೊಮ್ಮಾಯಿಯವರಿಗೆ ಹೃದಯಪೂರ್ವಕವಾದ ಧನ್ಯವಾದಗಳನ್ನು ಸಲ್ಲಿಸುತ್ತೇನೆ.

(ಮುಂದು...)

**(941) 23-09-2021 (12.50) ಎಂವಿ-ಆರ್‌ಎನ್**

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಎಸ್.ಆರ್.ಪಾಟೀಲ್ (ಮುಂದು...):-**

ಕರ್ನಾಟಕ ರಾಜ್ಯ ಅವರ ಅಧಿಕಾರದ ಅವಧಿಯಲ್ಲಿ, ಅವರ ಪ್ರಾಮಾಣಿಕತೆ, ನಿಷ್ಠೆ, ಸೇವಾ ಮನೋಭಾವ, ಕರ್ತವ್ಯ ಪ್ರಜ್ಞೆ ಮತ್ತು ಕರ್ತವ್ಯವೇ ದೇವರು ಎನ್ನುವಂತಹ ಕೆಲಸವನ್ನು ಮಾಡಲಿ. ಅವರು ರಾಜ್ಯದ ಮುಖ್ಯಮಂತ್ರಿಗಳಾಗಿ ಕರ್ನಾಟಕ ರಾಜ್ಯವನ್ನು ಇಡೀ ಭಾರತ ದೇಶದಲ್ಲಿ No.1 ರಾಜ್ಯವನ್ನಾಗಿ ಮಾಡುವುದಕ್ಕೆ, ಶ್ರಮಿಸಲಿ ಎಂದು ಅವರಿಗೆ ಶುಭವನ್ನು ಕೋರುತ್ತೇನೆ. ವಿಶೇಷವಾಗಿ ಮಾನ್ಯ ಮುಖ್ಯಮಂತ್ರಿಗಳು ಹಾಗೂ ನಾನು ಒಂದೇ ದಿವಸ ಈ ಸದನಕ್ಕೆ ಪ್ರವೇಶ ಮಾಡಿದ್ದೆವು.ಇವತ್ತು ನನಗೆ ಬಹಳ ಖುಷಿ ಎನಿಸುತ್ತಿದೆ. ಇವತ್ತು ಅವರು ರಾಜ್ಯದ ಮುಖ್ಯಮಂತ್ರಿಗಳಾಗಿ ಆಯ್ಕೆಯಾಗಿದ್ದಾರೆ. ಅವರು ನೆನೆಗುದಿಗೆ ಬಿದ್ದಿರುವಂತಹ ನೀರಾವರಿ ಯೋಜನೆಗಳಿಗೆ ಆದ್ಯತೆ ಕೊಡಬೇಕು. ಕರ್ನಾಟಕ ರಾಜ್ಯದ ನೀರಾವರಿ ಯೋಜನೆಗಳಾದಂತಹ, ಕೃಷ್ಣಾ ಮೇಲ್ದಂಡೆ ಯೋಜನೆಗೆ ಒತ್ತು ಕೊಟ್ಟು, ಇದನ್ನು ಅವರ ಅವಧಿಯಲ್ಲೇ ಮುಗಿಸುವುದಕ್ಕೆ ಪ್ರಯತ್ನ ಮಾಡಬೇಕು. ಅದರ ಜೊತೆಗೆ ದಕ್ಷಣ ಕರ್ನಾಟಕದ ಯೋಜನೆಗಳಾದ ಎತ್ತಿನಹೊಳೆ ಮತ್ತು ಮೇಕೆದಾಟು ಯೋಜನೆಗಳಿಗೆ ಅವರು ಬಹಳವ ಕಂಠಿಯಾದಂತಹ ಧ್ವನಿಯಿಂದ ಹೇಳಿದ್ದಾರೆ. ಅವರ ಅಧಿಕಾರದ ಅವಧಿಯಲ್ಲಿ,

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಪ್ರಮುಖವಾದ ನಾಲ್ಕು ನೀರಾವರಿ ಯೋಜನೆಗಳು ಕಾರ್ಯರೂಪಕ್ಕೆ ಬರುವುದಕ್ಕೆ ಅವರು ಪ್ರಾಮಾಣಿಕವಾಗಿ, ಬದ್ದತೆ, ನಿಷ್ಠೆಯಿಂದ ಕೆಲಸ ಮಾಡುತ್ತಾರೆ ಎಂಬು ವಿಶ್ವಾಸವನ್ನು ವ್ಯಕ್ತಪಡಿಸುತ್ತಾ. ಮಾನ್ಯ ಮುಖ್ಯಮಂತ್ರಿಗಳಿಗೆ ಮತ್ತೊಮ್ಮೆ ಶುಭ ಕೋರುತ್ತೇನೆ. ಅವರ ಅವಧಿಯಲ್ಲಿ ಕರ್ನಾಟಕ ರಾಜ್ಯ ಅತ್ಯುತ್ತಮವಾದಂತಹ ಪ್ರಗತಿಯನ್ನು ಸಾಧಿಸಲಿ ಎಂದು ನನ್ನ ಮಾತನ್ನು ಮುಗಿಸುತ್ತೇನೆ. ನಮಸ್ಕಾರ.

**ಶ್ರೀ ಬಸವರಾಜ ಎಸ್. ಬೊಮ್ಮಾಯಿ (ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೆ, ಮಾನ್ಯ ವಿರೋಧ ಪಕ್ಷದ ನಾಯಕರು ಶುಭವನ್ನು ಕೋರಿದ್ದಾರೆ.

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರು ಸದನದ ಪರವಾಗಿ ತಮಗೆ ಶುಭವನ್ನು ಕೋರಿದ್ದಾರೆ.

**ಶ್ರೀ ಬಸವರಾಜ ಎಸ್. ಬೊಮ್ಮಾಯಿ:-** ಮಾನ್ಯ ಸಭಾಪತಿಯವರೆ, ಅವರು ಸದನದ ಪರವಾಗಿ ಶುಭವನ್ನು ಕೋರಿರುವುದು ಒಂದು ಒಳ್ಳೆಯ ಪದ್ಧತಿ ಎಂಬುದು ನನ್ನ ಭಾವನೆ. ಅದಕ್ಕೆ ಅವರ ಆಶೋತ್ತರಗಳು ಏನಿವೆ, ಅಂದರೆ ನೀರಾವರಿ ಯೋಜನೆಗೆ ಸಂಬಂಧಪಟ್ಟಂತೆ ಕಳಕಳಿ ಏನಿದೆ ಎಂದು ನನಗೆ ಗೊತ್ತಿದೆ. ನಾನು ಮತ್ತು ಮಾನ್ಯ ವಿರೋಧ ಪಕ್ಷದ ನಾಯಕರು ಒಂದೇ ದಿವಸ ಸದನವನ್ನು ಪ್ರವೇಶ ಮಾಡಿದ್ದೇವೆ. ಈ ಸದನದಲ್ಲಿ ಇದಕ್ಕೆ ಒಟ್ಟು ಅಭಿಪ್ರಾಯವಿದೆ ಎಂಬುದು ಸಹ ನನಗೆ ಗೊತ್ತಿದೆ. ಆ ಭಾವನೆಗಳಿಗೆ ಸ್ಪಂದಿಸಿ ಕೆಲಸ ಮಾಡುತ್ತೇನೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

**07. ವರದಿಯನ್ನೊಪ್ಪಿಸುವುದು**

**ಶ್ರೀ ಶ್ರೀನಿವಾಸ್ ವಿ. ಮಾನೆ (ಸದಸ್ಯರು, ಸ್ಥಳೀಯ ಸಂಸ್ಥೆಗಳ ಮತ್ತು ಪಂಚಾಯತ್ ರಾಜ್ ಸಂಸ್ಥೆಗಳ ಸಮಿತಿ)** 2020-21ನೇ ಸಾಲಿನ ಕರ್ನಾಟಕ ವಿಧಾನ ಮಂಡಲದ ಸ್ಥಳೀಯ ಸಂಸ್ಥೆಗಳ ಮತ್ತು ಪಂಚಾಯತ್ ರಾಜ್ ಸಂಸ್ಥೆಗಳ ಸಮಿತಿಯ 34ನೇ ವರದಿಯನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**ಸಭಾಪತಿಯವರು:-** ವರದಿಯನ್ನೊಪ್ಪಿಸಲಾಯಿತು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**08. ಅರ್ಜಿಗಳನ್ನೊಪ್ಪಿಸುವುದು**

**ಶ್ರೀ ಎಂ.ಪಿ.ಸುನೀಲ್ ಸುಬ್ರಮಣಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)** ಮಾನ್ಯ ಸಭಾಪತಿಯವರೇ,

1. ಉದಯ ಅಸೋಸಿಯೇಟ್ಸ್‌ನ ಮಾಲೀಕರಿಂದ ಸುಳ್ಳು ದಾಖಲೆಗಳನ್ನು ಸೃಷ್ಟಿಸಿಕೊಂಡು ಅಕ್ರಮವಾಗಿ ನಿರ್ಮಾಣಗೊಳ್ಳುತ್ತಿರುವ ಮನೆಗಳಿಗೆ ವಿದ್ಯುತ್ ಸಂಪರ್ಕ, ಒಳಚರಂಡಿ ವ್ಯವಸ್ಥೆ ಹಾಗೂ ಇನ್ನಿತರೆ ಸೌಲಭ್ಯಗಳನ್ನು ಒದಗಿಸಲು ಸಹಕಾರ ನೀಡುತ್ತಿರುವ ಅಧಿಕಾರಿಗಳ ವಿರುದ್ಧ ಕ್ರಮಕೈಗೊಳ್ಳುವ ಕುರಿತು.

2. ಬೆಂಗಳೂರಿನ ಗಾಂಧಿನಗರದಲ್ಲಿರುವ 'ಡಿ' ದರ್ಜೆ ನೌಕರರ ಹೌಸ್ ಬಿಲ್ಡಿಂಗ್ ಕೋ-ಆಪರೇಟಿವ್ ಸೊಸೈಟಿ ಲಿಮಿಟೆಡ್‌ನಲ್ಲಿ ನಡೆಯುತ್ತಿರುವ ಭ್ರಷ್ಟಾಚಾರದ ಬಗ್ಗೆ ತನಿಖೆ ನಡೆಸುವ ಕುರಿತು.

ಈ ಎರಡು ಅರ್ಜಿಗಳನ್ನು ಒಪ್ಪಿಸುತ್ತಿದ್ದೇನೆ.

**ಸಭಾಪತಿಯವರು:-** ಅರ್ಜಿಗಳನ್ನೊಪ್ಪಿಸಲಾಯಿತು.

**09. ನಿಯಮ 330ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಮೇಲಿನ ಚರ್ಚೆ**

**ಅ)** ಡಾ||ಕೆ.ಶಿವರಾಮ ಕಾರಂತ ಬಡಾವಣೆ ನಿರ್ಮಾಣಕ್ಕಾಗಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಸ್ವಾಧೀನಪಡಿಸಿಕೊಳ್ಳಲಾಗಿರುವ 3546 ಎಕರೆ 12 ಗುಂಟೆ ಜಮೀನಿಗೆ ಭೂಸ್ವಾಧೀನ ಕಾಯ್ದೆಯಡಿ ರೈತರುಗಳು ಸಲ್ಲಿಸಿರುವ ಆಕ್ಷೇಪಣೆಗಳಿಗೆ ಉತ್ತರವನ್ನು ನೀಡದೆ ಐತೀರ್ಪು ಮಾಡಲು ಉದ್ದೇಶಿಸಿರುವುದರಿಂದ ರೈತರಿಗೆ ಅನ್ಯಾಯವಾಗುತ್ತಿರುವ ಬಗ್ಗೆ.

---

**ಶ್ರೀ ಎಂ.ನಾರಾಯಣಸ್ವಾಮಿ (ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಒಂದು ಗಂಭೀರವಾದಂತಹ ಪ್ರಶ್ನೆಯನ್ನು ನಿಯಮ 330ರ ಅಡಿಯಲ್ಲಿ ಅಧಿವೇಶನ ಪ್ರಾರಂಭವಾದಾಗಿನಿಂದ ಈ ವಿಷಯಕ್ಕೆ ಸಂಬಂಧಪಟ್ಟಂತೆ ಪ್ರಶ್ನೆ ಮಾಡುತ್ತಿದ್ದೆ. ಮಾನ್ಯ ಸಭಾನಾಯಕರು ಇದಕ್ಕೆ ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರವನ್ನು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೊಡಿಸುತ್ತೇನೆಂದು ಹೇಳಿದರು. ಅದು ಮುಂದುವರೆದುಕೊಂಡು ಬಂದು, ಇವತ್ತು ಅದಕ್ಕೆ ಕಾಲ ಕೂಡಿ ಬಂದಿದೆ. ನಾನು ಮಾತನಾಡುವುದಕ್ಕಿಂತ ಮುಂಚೆ ವಿರೋಧ ಪಕ್ಷದ ನಾಯಕರು ಮಾತನಾಡಿದರು. ನಾನು ಹೇಳಬೇಕು ಅಂದುಕೊಂಡಿದ್ದನ್ನು ನನ್ನ ಪರವಾಗಿ ಅವರು ಹೇಳಿದ್ದಾರೆ. ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ವೈಯಕ್ತಿಕವಾಗಿ ಮತ್ತು ಸದನದ ಪರವಾಗಿ ಅವರಿಗೆ ಅಭಿನಂದನೆಗಳನ್ನು ಸಲ್ಲಿಸುವುದರ ಮುಖಾಂತರವಾಗಿ ಮಾನ್ಯ ಮುಖ್ಯಮಂತ್ರಿಗಳ ಬಳಿ ಒಂದು ಮನವಿ ಮಾಡಿಕೊಳ್ಳುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಹೆಚ್ಚು ಸಮಯವನ್ನು ಕೊಟ್ಟು, ಇಲ್ಲಿಗೆ ಬಂದಾಗ, ನಾವು ಎಲ್ಲಾ ಮಾನ್ಯ ಸದಸ್ಯರು ಎಲ್ಲಾ ವಿಷಯಗಳನ್ನು ಬಹಳ ಗಂಭೀರವಾಗಿ ಚರ್ಚೆ ಮಾಡುತ್ತೇವೆ. ಅವರು ಸದನದಲ್ಲಿ ಇದ್ದರೆ ಇನ್ನೂ ಹೆಚ್ಚಿನ ಭೂಷಣ ಬರುತ್ತದೆ. ಅದಕ್ಕೆ ಅವರು ಹೆಚ್ಚಾಗಿ ಮೇಲ್ಮನೆಗೆ ಬರಬೇಕೆಂದು ಮನವಿ ಮಾಡಿಕೊಳ್ಳುತ್ತೇನ.

ನಾನು ಪ್ರಶ್ನೆ ಮಾಡಿರುವಂಥದ್ದು ಏನೆಂದರೆ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ನಿರ್ಮಿಸುವುದಕ್ಕೆ ಹೊರಟಿರುವಂತಹ ಡಾ||ಕೆ.ಶಿವರಾಮ ಕಾರಂತರ ಬಡಾವಣೆಯ ಭೂಸ್ವಾಧೀನಾ, 2008ರಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಯಲಹಂಕ ಹೋಬಳಿ, ಹೆಸರುಘಟ್ಟ ಹೋಬಳಿ ಹಾಗೂ ಯಶವಂತಪುರ ಹೋಬಳಿಯ ಸುಮಾರು 17 ಗ್ರಾಮಗಳಲ್ಲಿ 3,545 ಎಕರೆ 12 ಗುಂಟೆ ಜಮೀನನ್ನು ಸ್ವಾಧೀನಪಡಿಸಿಕೊಳ್ಳುವುದಕ್ಕೆ Preliminary Notification ಅನ್ನು ಹೊರಡಿಸುತ್ತಾರೆ. ಅವರು ಈ Preliminary Notification ಅನ್ನು ಹೊರಡಿಸಿ. ಆ ನಂತರ 2014ರವರೆಗೆ ಬೇರೆ ಯಾವುದೇ ನೋಟಿಫಿಕೇಶನ್ ಅನ್ನು ಹೊರಡಿಸುವುದಕ್ಕೆ ಹೋಗುವುದಿಲ್ಲ. ರೈತರು ತಮ್ಮ ಜಮೀನುಗಳನ್ನು ಬಿ.ಡಿ.ಎ.,ದವರು ಸ್ವಾಧೀನಪಡಿಸಿಕೊಳ್ಳುತ್ತಾರೆಂದು, ಅವರು ತಮ್ಮ ಜಮೀನುಗಳನ್ನು ಅಭಿವೃದ್ಧಿ ಮಾಡುವುದಕ್ಕೂ ಆಗುತ್ತಿಲ್ಲ ಮತ್ತು ಬೇರೆಯವರಿಗೆ ಮಾರಾಟ ಮಾಡುವುದಕ್ಕೂ ಆಗುತ್ತಿಲ್ಲ. ಅದಕ್ಕೆ ರೈತರು ಹೈಕೋರ್ಟ್‌ಗೆ ಒಂದು ಮೇಲ್ಮನವಿಯನ್ನು ಮಾಡಿಕೊಳ್ಳುತ್ತಾರೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಕೇವಲ 4(1) Notification ಅನ್ನು ಹೊರಡಿಸಿದ್ದಾರೆ. ಹಾಗೆಯೇ ಮುಂದುವರೆದು ಈ ಬಡಾವಣೆ ಮಾಡುವುದಕ್ಕೆ ಯಾವುದೇ ರೀತಿಯ 4(1) or 6(1) Notifications ಆಗಲಿ ಅಥವಾ ಬೇರೆ ನೋಟಿಫಿಕೇಶನ್ ಅನ್ನು ಹೊರಡಿಸಿರುವುದಿಲ್ಲ. ಆದುದರಿಂದ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರಿಗೆ ಈ ಜಾಗ ಬೇಕಾಗಿದೆಯೋ ಇಲ್ಲವೋ ಎಂದು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯಕ್ಕೆ ಮನವಿಯನ್ನು ಮಾಡಿಕೊಳ್ಳುತ್ತಾರೆ.

**(ಈ ಹಂತದಲ್ಲಿ ಮಾನ್ಯ ಉಪ ಸಭಾಪತಿಯವರು ಪೀಠವನ್ನು ಅಲಂಕರಿಸಿದರು)**

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೆ, ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ ಎರಡೂ ಕಡೆಯ ವಾದವನ್ನು ಆಲಿಸಿ, ಒಂದು ಆದೇಶವನ್ನು ಹೊರಡಿಸಿ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರಿಗೆ ಈ ಲೇಔಟ್ ಅನ್ನು ಮಾಡುವುದಕ್ಕೆ ಇಷ್ಟ ಇದೆಯೋ ಇಲ್ಲವೋ ಅದಕ್ಕೋಸ್ಕರವಾಗಿ ಇದನ್ನು ಕೈಬಿಡಬೇಕೆಂದು ಹೈಕೋರ್ಟ್ ಆದೇಶ ಹೊರಡಿಸುತ್ತದೆ. ಆ ಆದೇಶ ಮಾಡಿದಂತಹ ಸಂಧರ್ಭದಲ್ಲಿ, ಅಲ್ಲಿನ ಜನರು ಏನು ತಮ್ಮ ಜಮೀನುಗಳನ್ನು ಇಟ್ಟುಕೊಂಡಿದ್ದರು, ಅವರು ಕೆಲವು ಜಮೀನುಗಳನ್ನು ಮಾರಾಟ ಮಾಡುತ್ತಾರೆ. ಕೆಲವು ಡೆವಲಪರ್‌ಗಳು ಬಂದು ಅಲ್ಲಿ ಜಾಗ ತೆಗೆದುಕೊಂಡು, ಅಪಾರ್ಟ್‌ಮೆಂಟ್‌ಗಳನ್ನು ಕಟ್ಟುತ್ತಾರೆ ಮತ್ತು ಲೇಔಟ್‌ಗಳನ್ನು ಸಹ ಮಾಡುತ್ತಾರೆ. ಕೆಲವರು ತಮ್ಮ ಸ್ವಂತ ಮನೆಗಳನ್ನು ಕಟ್ಟಿಕೊಳ್ಳುತ್ತಾರೆ. ಅಲ್ಲಿ ವಸತಿ ಸಂಕೀರ್ಣಗಳನ್ನು ಕಟ್ಟುವುದಕ್ಕೆ, ಅಪಾರ್ಟ್‌ಮೆಂಟ್‌ಗಳನ್ನು ಕಟ್ಟುವುದಕ್ಕೆ ಮತ್ತು ಗ್ರೂಪ್ ಹೌಸಿಂಗ್ ಕಟ್ಟುವುದಕ್ಕೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು, ಎನ್.ಓ.ಸಿ ಕೊಟ್ಟು ಅವುಗಳ ಪ್ಲಾನ್‌ಗಳನ್ನು ಮಂಜೂರು ಮಾಡಿದ್ದಾರೆ. ಆದರೆ, 2014ರಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಇದರ ವಿರುದ್ಧ ಮೇಲ್ಮನವಿಯನ್ನು ಹಾಕಿಕೊಳ್ಳುತ್ತಾರೆ. ನಾವು ನೋಟಿಫಿಕೇಶನ್ ಮಾಡಿರುವುದನ್ನು ಮಾನ್ಯ ಹೈಕೋರ್ಟ್‌ನವರು quash ಮಾಡಿದ್ದಾರೆ. ದಯಮಾಡಿ ಇದಕ್ಕೆ ಅವಕಾಶ ಮಾಡಿಕೊಡಬೇಕೆಂದು ದಿನಾಂಕ 07.09.2018ರಲ್ಲಿ ಮಾನ್ಯ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿಯನ್ನು ಮಾಡಿಕೊಂಡು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಮಾನ್ಯ ಸುಪ್ರೀಂ ಕೋರ್ಟ್‌ಗೆ ತಪ್ಪು ಮಾಹಿತಿಯನ್ನು ನೀಡುತ್ತಾರೆ. ಈ ಮೂರುವರೆ ಸಾವಿರ ಎಕರೆ ಜಾಗದಲ್ಲಿ ಈ ಹನ್ನೊಂದು ವರ್ಷಗಳಲ್ಲಿ ಏನೂ ಅಭಿವೃದ್ಧಿಯಾಗಿಲ್ಲ. ಅವರು Preliminary Notification ಮಾಡಿದಾಗ ಯಾವ ರೀತಿ ಇತ್ತೋ, ಈಗಲೂ ಸಹ ಅದೇ ರೀತಿಯಲ್ಲಿ ಇದೆ. ಆದುದರಿಂದ ಇಲ್ಲಿ ನಾವು ಮುಂದುವರೆಯುವುದಕ್ಕೆ ಅವಕಾಶ ಮಾಡಿಕೊಡಬೇಕು ಮತ್ತು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ ಏನು ತೀರ್ಪು ನೀಡಿದೆ ಅದನ್ನು quash ಮಾಡಿ ನಮಗೆ ಅನುಮತಿ ಕೊಡಬೇಕೆಂದು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಮಾಡಿಕೊಳ್ಳುತ್ತಾರೆ. ಮಾನ್ಯ ಸುಪ್ರೀಂ ಕೋರ್ಟ್‌ನವರು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಹೇಳಿದ ಮಾತನ್ನು ಕೇಳಿ, ಒಂದು ಆರ್ಡರ್ ಮಾಡುತ್ತಾರೆ. ಬೆಂಗಳೂರು ನಗರದಲ್ಲಿ ಯಾರು ನಿವೇಶನರಹಿತರಾಗಿದ್ದಾರೋ, ಅಂತಹರಿಗೆ ನಿವೇಶನ ಕೊಡುವುದಕ್ಕೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಈ ಲೇಔಟ್ ಅನ್ನು ಮಾಡುವುದಕ್ಕೆ ಹೊರಟಿದ್ದಾರೆ. ಆದುದರಿಂದ ಮಾನ್ಯ ಹೈಕೋರ್ಟ್‌ನ ಆರ್ಡರ್ ಅನ್ನು quash ಮಾಡಿ, ನೀವು ಮುಂದುವರೆಯಬಹುದು ಎಂದು, ಮಾನ್ಯ ಸುಪ್ರೀಂ ಕೋರ್ಟ್

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಆರ್ಡರ್ ಮಾಡಿಬಿಡುತ್ತದೆ. ಅವರು ಆ ರೀತಿ ಆರ್ಡರ್ ಮಾಡಿದಾಗ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಒಂದು ಬೋರ್ಡ್ ಮೀಟಿಂಗ್ ಅನ್ನು ಮಾಡುತ್ತಾರೆ. ಆ ಬೋರ್ಡ್ ಮೀಟಿಂಗ್‌ನಲ್ಲಿ ಇಲ್ಲಿ ಭೂಸ್ವಾಧೀನ ಮಾಡುವುದಕ್ಕೆ ಸುಮಾರು 9,482 ಕೋಟಿ ರೂಪಾಯಿಗಳು ಬೇಕಾಗುತ್ತದೆ. ಮತ್ತೆ ಲೇಔಟ್ ಅನ್ನು ಅಭಿವೃದ್ಧಿಪಡಿಸುವುದಕ್ಕೆ ಎಲ್ಲಾ ಸೇರಿ 13,833 ಕೋಟಿ ಖರ್ಚಾಗುತ್ತದೆ ಎಂದು ತೀರ್ಮಾನ ಮಾಡಿ. ಅವರು ಸರ್ಕಾರಕ್ಕೆ ಒಂದು ಮನವಿಯನ್ನು ಕೊಡುತ್ತಾರೆ. ಆಗ ಸರ್ಕಾರ ಇದೆಲ್ಲವನ್ನು ಸಹ ಕೂಲಂಕಷವಾಗಿ ಪರಿಶೀಲನೆ ಮಾಡಿ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರಿಗೆ ಕೆಲವೊಂದು ಷರತ್ತುಗಳನ್ನು ವಿಧಿಸಿ, ಒಂದು ಆರ್ಡರ್ ಮಾಡುತ್ತಾರೆ. ಆ ಷರತ್ತುಗಳು ಏನೆಂದರೆ; ಸರ್ಕಾರದಿಂದ ಯಾವುದೇ ರೀತಿಯ ಹಣಕಾಸಿನ ನೆರವನ್ನು ಆಪೇಕ್ಷಿಸದೆ, ಈ ಯೋಜನೆಯ ಸಂಪೂರ್ಣ ವೆಚ್ಚವನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ತನ್ನ ಸಂಪನ್ಮೂಲಗಳಿಂದ ಕ್ರೋಢೀಕರಣ ಮಾಡಿಕೊಳ್ಳುವುದು. ಪ್ರಸ್ತುತ ಯೋಜನೆಗೆ ಪ್ರಾಧಿಕಾರವು ಪಡೆಯಬಹುದಾದ, ಯಾವುದೇ ಸಾಲಗಳಿಗೆ ಸರ್ಕಾರವು ಖಾತರಿಯನ್ನು ನೀಡುವುದಿಲ್ಲ ಮತ್ತು ಸದರಿ ಸಾಲವನ್ನು ತೀರಿಸುವ ಹೊಣೆ, ಪ್ರಾಧಿಕಾರದ್ದು ಆಗಿರುತ್ತದೆ. ಪ್ರಸ್ತುತ ಯೋಜನೆಗೆ ಸಂಬಂಧಪಟ್ಟಂತೆ, ಪ್ರಾಧಿಕಾರ ಮಾಡಿಕೊಳ್ಳುವ ಯಾವುದೇ ವ್ಯವಹಾರಗಳಿಗೆ ಸರ್ಕಾರ ಭಾಗಿಯಾಗುವುದಿಲ್ಲವೆಂದು. ಅವರು ಕ್ಲಿಯರ್ ಆಗಿ ಹೇಳುತ್ತಾರೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಒಂದು ಸ್ವಾಯತ್ತ ಸಂಸ್ಥೆ. ಅವರು ಲೇಔಟ್ ಮಾಡುವುದಕ್ಕೆ ಏನು ಹದಿಮೂರುವರೆ ಸಾವಿರ ಕೋಟಿ ರೂಪಾಯಿಗಳು ಖರ್ಚಾಗುತ್ತದೋ, ಆ ಖರ್ಚನ್ನು ಪ್ರಾಧಿಕಾರದವರೇ ಕ್ರೋಢೀಕರಣ ಮಾಡಿಕೊಳ್ಳಬೇಕು. ಸರ್ಕಾರದಿಂದ ಒಂದು ನಯಾ ಪೈಸೆಯನ್ನು ಸಹ ಆಪೇಕ್ಷೆ ಮಾಡಬಾರದು. ಪ್ರಾಧಿಕಾರದವರು ಸಾಲವನ್ನು ರಾಷ್ಟ್ರೀಕೃತ ಬ್ಯಾಂಕುಗಳು ಅಥವಾ ಖಾಸಗಿ ಬ್ಯಾಂಕುಗಳಲ್ಲಿ ತೆಗೆದುಕೊಳ್ಳುತ್ತೀರೋ, ಅದಕ್ಕೆ ಸರ್ಕಾರದಿಂದ surety ಕೊಡುವುದಿಲ್ಲ. ಆ ಸಾಲವನ್ನು ತೆಗೆದುಕೊಂಡ ಮೇಲೆ ಆ ಸಾಲವನ್ನು ತೀರಿಸುವ ಜವಾಬ್ದಾರಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರದ್ದು ಆಗಿರುತ್ತದೆಂದು ಹೇಳಿ ಷರತ್ತನ್ನು ಹಾಕುತ್ತಾರೆ.

**(ಮುಂದು...**

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(942) 23.09.2021 01.00 LL-RN

**(ಉಪ ಸಭಾಪತಿಯವರ ಉಪಸ್ಥಿತಿ)**

**ಶ್ರೀ ಎಂ. ನಾರಾಯಣಸ್ವಾಮಿ(ಮುಂದು):-**

ಅದರಲ್ಲಿ ಕೊನೆಯ ಷರತ್ತು ಏನಿದೆಯೆಂದರೆ, "ವಲಯ ನಿಯಮಾವಳಿಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು ಹಾಗೂ ಅಗತ್ಯತೆಗಳನ್ನು ಪೂರೈಸತಕ್ಕದ್ದೆಂದು" ಇದೆ. ಕರ್ನಾಟಕ ರಾಜ್ಯ ಸರ್ಕಾರ ದಿನಾಂಕ:01.11.2018ರಂದು ಅಂದರೆ, ಕರ್ನಾಟಕ ರಾಜ್ಯೋತ್ಸವದ ದಿನ ರಾಜ್ಯ ಪತ್ರ ಹೊರಡಿಸಿದ್ದು, ಅದರಲ್ಲಿ; " Right to Fair Compensation and Transparency in Land Acquisition, Rehabilitation and Resettlement Act 2013" ಎಂದು ಸ್ಪಷ್ಟವಾಗಿ ಹೇಳಿರುತ್ತದೆ.

"2013ರ ಕಾಯ್ದೆ ಪ್ರಕಾರ ಭೂಸ್ವಾಧೀನ ಮಾಡಿಕೊಂಡು ರೈತರಿಗೆ ಏನು ಪರಿಹಾರ ಹಣ ನೀಡಬೇಕಾಗಿದೆ, ಆ ಹಣವನ್ನು ನೀಡಿ" ಎಂದು ಆವೊತ್ತಿನ ಸರ್ಕಾರ ತನ್ನ ರಾಜ್ಯಪತ್ರದಲ್ಲಿ ಆದೇಶ ಹೊರಡಿಸುತ್ತದೆ. ತದನಂತರ, ಬಿ.ಡಿ.ಎ.ರವರು 2013ರ ಆಕ್ಟ್ ಪ್ರಕಾರವಾಗಿ ಭೂಸ್ವಾಧೀನ ಮಾಡಿಕೊಂಡರೆ ಸಾವಿರಾರು ಕೋಟಿ ರೂಪಾಯಿ ಹಣ ಬೇಕಾಗುತ್ತದೆಯೆಂದು ಸುಪ್ರೀಂ ಕೋರ್ಟ್‌ಗೆ ಮತ್ತೊಂದು ಮೇಲ್ಮನವಿ ಮಾಡಿಕೊಳ್ಳುತ್ತಾರೆ. ಅಲ್ಲಿ ಯಾವ ರೀತಿ ಮಾಹಿತಿ ಕೊಟ್ಟಿರುತ್ತಾರೆ ಅದು ಗೊತ್ತಿರುವುದಿಲ್ಲ. ಆದರೆ, ಸುಪ್ರೀಂ ಕೋರ್ಟ್ ಕೊನೆಯದಾಗಿ ಐತೀರ್ಪನ್ನು ಕೊಟ್ಟು, 1894 ಆಕ್ಟ್ ಪ್ರಕಾರ ಭೂಸ್ವಾಧೀನ ಮಾಡಿಕೊಂಡಿರುವುದಕ್ಕೆ ಪರಿಹಾರ ನೀಡಬೇಕೆಂದು ಹೇಳಿರುತ್ತದೆ. ಆ ಭಾಗದಲ್ಲಿ ಈಗಾಗಲೇ ಬೆಟ್ಟಹಳ್ಳಿ ಎನ್ನತಕ್ಕಂತಹ ಗ್ರಾಮ ಬಿ.ಬಿ.ಎಂ.ಪಿ. ಗೆ ಸೇರಿಕೊಂಡಿದೆ. ಅಂದರೆ, 2006ರಲ್ಲಿ ಸೇರಿಕೊಂಡಿರುತ್ತದೆ.

ಬಿ.ಬಿ.ಎಂ.ಪಿ. ವ್ಯಾಪ್ತಿಯಲ್ಲಿ ಇವೊತ್ತಿನ ದಿನ ಜಮೀನಿನ ಬೆಲೆ ಏನಿದೆ ಎಂಬುದು ತಮಗೆಲ್ಲಾ ಗೊತ್ತಿರುತ್ತದೆ. ಏಕೆಂದರೆ, ಬಿ.ಬಿ.ಎಂ.ಪಿ. ವ್ಯಾಪ್ತಿಯ ಜಮೀನು ಸಂಪೂರ್ಣವಾಗಿ ಅಭಿವೃದ್ಧಿ ಆಗಿರುತ್ತದೆ. ಆದರೆ, 1894 ಆಕ್ಟ್ ಪ್ರಕಾರವಾಗಿ ರೈತರ ಜಮೀನನ್ನು ಭೂಸ್ವಾಧೀನ ಮಾಡಿಕೊಂಡರೆ ರೈತರಿಗೆ throw away price ಕೊಡಬೇಕಾಗುತ್ತದೆ. Prime property ಗೆ ಸುಮಾರು 60 ಲಕ್ಷ ರೂಪಾಯಿ ಪ್ರತಿ ಎಕರೆಗೆ ನೀಡುತ್ತಿದ್ದು, ಅದು ಮುಂದೆ 12 ಲಕ್ಷ ರೂಪಾಯಿ ಪ್ರತಿ ಎಕರೆಗೆ ಸಿಗುತ್ತದೆ. ಇವೊತ್ತಿನ ದಿವಸ ಸದರಿ ಜಮೀನು ಕಳ್ಳನಿಗೆ ಕೊಟ್ಟರೂ ಸಹ ಸುಮಾರು 6 ಕೋಟಿ ರೂಪಾಯಿ ಪ್ರತಿ ಎಕರೆಗೆ ಬೆಲೆ ಸಿಗುತ್ತದೆ. ಅಂತಹ ಜಮೀನನ್ನು ರೈತರಿಂದ ಈ ರೀತಿ throw away price ಕೊಟ್ಟು ಭೂಸ್ವಾಧೀನ ಮಾಡಿಕೊಳ್ಳುವುದು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನ್ಯಾಯವೇ ಎನ್ನುವುದನ್ನು ರೈತರು ಇವೊತ್ತಿನ ದಿನ ಹೋರಾಟ ಮಾಡುವ ಮೂಲಕ ಹೇಳುತ್ತಿದ್ದಾರೆ.

ಜೊತೆಗೆ, ಸುಪ್ರೀಂ ಕೋರ್ಟ್ 'ಮುಂದುವರೆಯಿರಿ' ಎಂದು ಏನು ಆದೇಶ ನೀಡಿರುತ್ತದೆ, ಅದರ ಮೇರೆಗೆ ಸರ್ಕಾರ 2018-19ರಲ್ಲಿ 6(1) ನೋಟಿಫಿಕೇಷನ್ ಕೊಡುವುದಕ್ಕೆ ಪ್ರಾರಂಭ ಮಾಡುತ್ತಾರೆ. ಅಲ್ಲದೇ, ಬಿ.ಡಿ.ಎ. ಪ್ರಕಾರ 19(1) ಕೂಡ ಕೊಡುವುದಕ್ಕೆ ಪ್ರಾರಂಭ ಮಾಡುತ್ತಾರೆ. ತದನಂತರ, ಆಕ್ಷೇಪಣೆ ಸಲ್ಲಿಸುವುದಕ್ಕೆ ರೈತರಿಗೆ ಅವಕಾಶ ಕಲ್ಪಿಸುತ್ತಾರೆ. ಅದರಂತೆ, ರೈತರು ಏನಾದರೂ ಆಕ್ಷೇಪಣೆಗಳು ಇದ್ದರೆ ದಯಮಾಡಿ ಮನವಿ ಸಲ್ಲಿಸಿ ಎಂದು ಬಿ.ಡಿ.ಎ.ಯವರು ಅರ್ಜಿಗಳನ್ನು ಆಹ್ವಾನ ಮಾಡುತ್ತಾರೆ. ಅದರಂತೆ, 17 ಹಳ್ಳಿಗಳಲ್ಲಿರುವವರು ಯಾರು ತಮ್ಮ ನಿವೇಶನಗಳನ್ನು, ಮನೆಗಳನ್ನು, ಜಮೀನುಗಳನ್ನು ಕಳೆದುಕೊಳ್ಳುತ್ತಿದ್ದಾರೋ ಅವರಲ್ಲಿ ಸಾವಿರಾರು ಜನ ರೈತರು ಮೇಲ್ಮನವಿ ಸಲ್ಲಿಸುತ್ತಾರೆ. ಆದರೆ, ಇದರಲ್ಲಿ ಬಿ.ಡಿ.ಎ. ಆಗಲಿ ಅಥವಾ ಸರ್ಕಾರ ಆಗಲಿ, ಆ ರೈತರನ್ನು ಕರೆದು ಅವರು ಸಲ್ಲಿಸಿದಂತಹ ಆಕ್ಷೇಪಣೆಗಳಿಗೆ ಸಂಬಂಧಿಸಿದಂತೆ, personal hearing ಕರೆಯುವುದಿಲ್ಲ.

ಆದರೆ, ಸುಪ್ರೀಂ ಕೋರ್ಟ್ ಈ ವಿಷಯದಲ್ಲಿ ಒಂದು ಆದೇಶ ನೀಡಿರುತ್ತದೆ. ಅದನ್ನು, ನಾನು ಇಲ್ಲಿ ಓದುತ್ತೇನೆ. ಅದೇನೆಂದರೆ, "ಸಂಬಂಧಿತ ವ್ಯಕ್ತಿಗಳ ಅಭಿಪ್ರಾಯಗಳನ್ನು ನಿರ್ಲಕ್ಷಿಸಿ, ತುರ್ತು ಅವಶ್ಯಕತೆ ನಿಯಮಡಡಿ ಸರ್ಕಾರ ಬಲಾತ್ಕಾರವಾಗಿ ಭೂಮಿಯನ್ನು ವಶಪಡಿಸಿಕೊಳ್ಳುವಂತಿಲ್ಲ" ಎಂದು ಸುಪ್ರೀಂ ಕೋರ್ಟ್ ಮಹತ್ವದ ತೀರ್ಪು ನೀಡಿರುತ್ತದೆ. ಸದರಿ ಆದೇಶದಲ್ಲಿ ಸಾರ್ವಜನಿಕ ಉದ್ದೇಶಕ್ಕೆಂದು ಪಾಣಿಪತ್ ಜಿಲ್ಲೆಯ ಕೇರಿನಂಗಲ್ ಹಳ್ಳಿಯಲ್ಲಿ ಖಾಸಗಿ ಜಮೀನನ್ನು ವಶಪಡಿಸಿಕೊಳ್ಳುವ ಹರಿಯಾಣ ಸರ್ಕಾರದ ಕ್ರಮಕ್ಕೆ ತಡೆನೀಡಿದ ನ್ಯಾಯಮೂರ್ತಿಗಳಾದ ಶ್ರೀ ಕೆ. ತಕ್ಕರ್ ಮತ್ತು ಶ್ರೀ ಡಿ.ಕೆ. ಜೈನ್ ಅವರನ್ನು ಒಳಗೊಂಡ ಪೀಠ ಮೇಲಿನ ಆದೇಶ ನೀಡಿರುತ್ತದೆ. "ಯಾವುದೇ ಉದ್ದೇಶಕ್ಕೆ ಭೂಮಿ ವಶಪಡಿಸಿಕೊಳ್ಳುವ ಮೊದಲು ಸಂಬಂಧಿತ ವ್ಯಕ್ತಿಗಳಿಗೆ ಆಕ್ಷೇಪಣೆಗಳನ್ನು ಆಹ್ವಾನಿಸಿ, ಅವರ ಅಭಿಪ್ರಾಯಗಳಿಗೆ ಮನ್ನಣೆ ನೀಡಬೇಕಾದುದು ಸರ್ಕಾರದ ಹೊಣೆ" ಎಂದು ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿಗಳು ಆದೇಶ ಮಾಡಿರುತ್ತಾರೆ. ಅದರೆ, ಇಲ್ಲಿ ಯಾವ ಒಬ್ಬ ರೈತರನ್ನು ಕರೆದು ತಮ್ಮ ಆಕ್ಷೇಪಣೆಗಳಿಗೆ, "ನಿನ್ನ ಕಷ್ಟ ಏನು, ಸುಖ ಏನು" ಎಂದು ಬಿ.ಡಿ.ಎ. ಆಗಲಿ ಅಥವಾ ಸರ್ಕಾರ ಆಗಲಿ ಕೇಳಲೇ ಇಲ್ಲ.

ಮುಂದುವರೆದಂತೆ, ಸರ್ಕಾರ ಏನು ಮಾಡುತ್ತದೆಯೆಂದರೆ, 2015ರಲ್ಲಿ 3500 ಎಕರೆ ಜಮೀನನ್ನು ಡಾ: ಶಿವರಾಮ ಕಾರಂತರ ಬಡಾವಣೆಗಾಗಿ ಬೇಕಾಗಿದೆ ಎಂದು, ಅಷ್ಟು ಜಾಗ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಲ್ಲಿ ಲಭ್ಯತೆ ಇದೆಯೇ ಅಥವಾ ಇಲ್ಲವೇ ಎಂಬ ಬಗ್ಗೆ ಸರ್ವೇ ಮಾಡಿ ವರದಿ ನೀಡಲು ಖಾಸಗಿ ಕಂಪನಿಗೆ ಆದೇಶವನ್ನು ಕೊಡುತ್ತದೆ. ಅದರಂತೆ, ಹೆಚ್.ಡಿ.ಎಫ್.ಸಿ. ರಿಯಾಲಿಟಿ ಎಂಬ ಖಾಸಗಿ ಸಂಸ್ಥೆಗೆ ಬಡಾವಣೆ ಬಳಕೆ ಹಾಗೂ ನೈಜ ಭೂಮಿಯನ್ನು ಗುರುತಿಸುವುದಕ್ಕಾಗಿ ಸರ್ಕಾರ ಆದೇಶ ನೀಡುತ್ತದೆ. ಅದರ ಪ್ರಕಾರ ಸದರಿ ಸಂಸ್ಥೆಯು ಸರ್ವೆ ಮಾಡಿ ವರದಿಯನ್ನು ನೀಡಿರುತ್ತದೆ. ಆದರೆ, ಸದರಿ ಜಮೀನಿನಲ್ಲಿ ಬಡಾವಣೆ ಮಾಡುವುದಕ್ಕಾಗಿ ಲಭ್ಯವಿರುವ ಜಾಗ ಕೇವಲ 878 ಎಕರೆ 03 ಗುಂಟೆ ಮಾತ್ರ. ಆದರೆ, ಸರ್ಕಾರ 3500 ಎಕರೆ ಜಮೀನನ್ನು ಭೂಸ್ವಾಧೀನ ಮಾಡಿಕೊಳ್ಳುವುದಕ್ಕೆ ಹೊರಟಿತ್ತು, 'ಆ ಜಾಗದಲ್ಲಿ ಬಡಾವಣೆ ಮಾಡುವುದಕ್ಕೆ ಕೇವಲ 878 ಎಕರೆ ಜಮೀನು ಮಾತ್ರ ಉಳಿದಿದೆ' ಎಂದು ಸರ್ಕಾರವೇ ನೇಮಕ ಮಾಡಿದಂತಹ ಖಾಸಗಿ ಸಂಸ್ಥೆಯು ಸರ್ವೇ ಮಾಡಿ ವರದಿ ನೀಡಿರುತ್ತದೆ.

ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ಆ ಜಾಗದಲ್ಲಿ ನಾನು ಸಂಪೂರ್ಣವಾಗಿ ಓಡಾಡಿ ನೋಡಿಕೊಂಡು ಬಂದಿರುತ್ತೇನೆ. ನಾನು ಆ ಭಾಗದ ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಆಯ್ಕೆಯಾಗಿ ಬಂದಿರುವಂತಹ ಒಬ್ಬ ಶಾಸಕನಾಗಿ, ಆ ಜಾಗ ಇನ್ನೂ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿದೆ, ಆ ವ್ಯಾಪ್ತಿಯಲ್ಲಿ ನನ್ನ ಅನುದಾನವೂ ಸೇರಿದಂತೆ, ಸರ್ಕಾರದ ಅನುದಾನದಲ್ಲಿ ಈಗಾಗಲೇ ರಸ್ತೆ ಮಾಡಿದ್ದೇವೆ, ಚರಂಡಿ ವ್ಯವಸ್ಥೆ ಹಾಗೂ ಕುಡಿಯುವ ನೀರಿನ ವ್ಯವಸ್ಥೆ ಮಾಡಿಕೊಂಡಿರುತ್ತೇವೆ. ಅದಕ್ಕಾಗಿ, ಕೋಟ್ಯಂತರ ರೂಪಾಯಿ ಹಣ ಖರ್ಚು ಮಾಡಲಾಗಿರುತ್ತದೆ. ಮೊನ್ನೆ ಈ ಸದನದಲ್ಲಿ ಬಿ.ಬಿ.ಎಂ.ಪಿ.ಗೆ ಸಂಬಂಧಪಟ್ಟ ಒಂದು ವಿಧೇಯಕ ಬಂದಿರುತ್ತದೆ. ಅದೇನೆಂದರೆ, 198 ವಾರ್ಡುಗಳು ಇರುವುದನ್ನು 243 ವಾರ್ಡ್‌ಗಳಿಗೆ ಮಾಡಬೇಕು ಹಾಗೂ ಈಗಿರತಕ್ಕಂತಹ 880 ಚದರ ಕಿಲೋ ಮೀಟರ್‌ಗಳನ್ನು ಹೆಚ್ಚಿಗೆ ಮಾಡಬೇಕೆಂದು ತಿದ್ದುಪಡಿಗೆ ತರಲಾಗಿದೆ. ಜೊತೆಗೆ, ಈ ವಿಷಯದ ಬಗ್ಗೆ ಸಮಿತಿ ಕೂಡ ರಚನೆ ಮಾಡಲಾಗಿದ್ದು, ಆ ಸಮಿತಿಯಲ್ಲಿ ನಾನು ಕೂಡ ಒಬ್ಬ ಸದಸ್ಯನಾಗಿದ್ದೇನೆ. ಆ ಸಂದರ್ಭದಲ್ಲಿ ನಾನು ಕೆಲವು ವಿಚಾರಗಳನ್ನು ಹೇಳಿರುತ್ತೇನೆ. ಮಾನ್ಯ ಕಾನೂನು ಸಚಿವರು ಸಹ ಈ ಸದನದಲ್ಲಿ ಹಾಜರಿದ್ದಾರೆ. ಕಳೆದ ಬಾರಿ 110 ಹಳ್ಳಿಗಳನ್ನು ಹೊಸದಾಗಿ ಬಿ.ಬಿ.ಎಂ.ಪಿ. ವ್ಯಾಪ್ತಿಗೆ ಸೇರಿಸಿಕೊಂಡಿರುವುದು ಜಾಸ್ತಿಯಾಗಿದೆ. ಇವೊತ್ತಿನವರೆಗೂ ಆ 110 ಹಳ್ಳಿಗಳಿಗೆ ಕುಡಿಯುವ ನೀರು ಮತ್ತು ಒಳಚರಂಡಿ ವ್ಯವಸ್ಥೆ ಕೊಡುವುದಕ್ಕೆ ಸಾಧ್ಯವಾಗಿರುವುದಿಲ್ಲ.

ಆದರೆ, ಈಗಾಗಲೇ ಬಿ.ಬಿ.ಎಂ.ಪಿ. ವ್ಯಾಪ್ತಿಗೆ 243 ವಾರ್ಡ್ ಮಾಡುತ್ತಿರಬೇಕಾದರೆ, ಇನ್ನೂ 9 ಗ್ರಾಮ ಪಂಚಾಯಿತಿಗಳನ್ನು ಬಿ.ಬಿ.ಎಂ.ಪಿ. ವ್ಯಾಪ್ತಿಗೆ ಸೇರಿಸಬೇಕೆಂದು ಯಲಹಂಕ ಕ್ಷೇತ್ರದ ಶಾಸಕರು ಮನವಿಯನ್ನು ಮಾಡಿಕೊಂಡಿರುತ್ತಾರೆ. ಗ್ರಾಮ ಪಂಚಾಯಿತಿಯನ್ನು ಬಿ.ಬಿ.ಎಂ.ಪಿ.ಗೆ ಸೇರಿಸಬೇಕಾದರೆ ಆ ಗ್ರಾಮ ಪಂಚಾಯಿತಿ ಈಗಾಗಲೇ ಎಷ್ಟು ಅಭಿವೃದ್ಧಿ ಆಗಿರಬೇಕೆಂಬ

“ತಿದ್ದುಪಡಿಯಾಗದ ಪ್ರತಿ; ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬಗ್ಗೆ ತಾವೇ ಹೇಳಬೇಕು. ಆದುದರಿಂದ, ಇಂತಹ ಒಂದು ಸಂದರ್ಭದಲ್ಲಿ ತಾವು ಅಲ್ಲಿ ಬಂದು ಸ್ಥಳ ವೀಕ್ಷಣೆ ಮಾಡಬೇಕು. ಅದೇ ಗ್ರಾಮದಲ್ಲಿ ಅಂದರೆ, ರಾಮಗೊಂಡನಹಳ್ಳಿ ಗ್ರಾಮ ಮತ್ತು ಇನ್ನೂ 26 ಗ್ರಾಮಗಳು ಅಲ್ಲಿ ಇರುತ್ತವೆ. ಆ ಗ್ರಾಮಗಳಲ್ಲಿ ತಾತ, ಮುತ್ತಾತ ಮನೆಯನ್ನು ಕಟ್ಟಿ ವಾಸ ಮಾಡಿರತಕ್ಕಂತಹ ಇತಿಹಾಸ ಇರುವಂತಹ ಮನೆಗಳು ಇರುತ್ತವೆ. "ನಾನು ಆ ಮನೆಯಲ್ಲಿ ಹುಟ್ಟಿ ಬೆಳೆದಿದ್ದೇನೆ. ಎಷ್ಟೋ ಜನ ಹೆಣ್ಣುಮಕ್ಕಳಿಗೆ ಮದುವೆಯಾಗಿ ಬೇರೆ ಊರಿಗೆ ಹೋಗಿರುತ್ತಾರೆ" ಎಂಬ ಭಾವನೆ ಇರುತ್ತದೆ. ಅಷ್ಟೇ ಅಲ್ಲದೇ, ಪಾರಂಪರಿಕವಾಗಿ ಮನೆ ಕಟ್ಟಿಕೊಂಡು ಬೆಳೆದಿರತಕ್ಕಂತಹ ಊರು ಅದು. ಅಂತಹ ಮನೆಗಳನ್ನು ವಶಪಡಿಸಿಕೊಳ್ಳುವುದಕ್ಕೆ ಇವೊತ್ತಿನ ದಿನ ಹೊರಟಿದ್ದಾರೆ. ಆ ಮನೆಗಳು ಸುಮಾರು ನೂರಾರು ವರ್ಷಗಳಿಂದ ಹಿರಿಯರು ಬದುಕಿರುವಂತಹ ಮನೆಗಳು. ಅಂತಹ ಮನೆಗಳನ್ನು acquisition ಮಾಡಿಕೊಂಡು ಹೊಡೆದುಹಾಕಿ ಯಾರೋ ಅರ್ಜಿ ಹಾಕತಕ್ಕಂತಹವರಿಗೆ ಸರ್ಕಾರ ಮನೆ ಕೊಡುವುದಕ್ಕೆ ಹೋಗುವುದು ನ್ಯಾಯವೇ? ಆ ಮನೆಗಳಲ್ಲಿ ಯಾರು ಮೊದಲಿನಿಂದಲೂ ವಾಸ ಮಾಡಿಕೊಂಡು ಬರುತ್ತಿದ್ದಾರೆ ಅವರನ್ನು ಅಲ್ಲಿರಲು ಬಿಟ್ಟುಬಿಡಬೇಕು. ಇದರಲ್ಲಿ ಯಾರಿಗೂ ಕೂಡ ಪ್ರತಿಷ್ಠೆ ಇರುವುದಿಲ್ಲ. ಸಾವಿರಾರು ಜನ ಇವೊತ್ತಿನ ದಿನ ಆ ಜಾಗದಲ್ಲಿ ತಾತ, ಮುತ್ತಾತ, ತಂದೆ-ತಾಯಿ ಕಟ್ಟಿರುವಂತಹ ಮನೆಯಲ್ಲಿ ವಾಸ ಮಾಡುತ್ತಿದ್ದಾರೆ ಆ ಮನೆಗಳನ್ನು ಧ್ವಂಸ ಮಾಡಿ, ಬೇರೆಯವರಿಗೆ ನಾವು ನಿವೇಶನ ಕೊಡಬೇಕೇ? ಆದುದರಿಂದ... ಅವರು ವಿರೋಧ ಪಕ್ಷದಲ್ಲಿದ್ದಾಗ ರೈತರ ಪರವಾಗಿ ಹೋರಾಟ ಮಾಡಿ, "ನಾನು ನಿಮ್ಮ ಪರವಾಗಿ ಇದ್ದೇನೆ" ಎಂದು ಸರ್ಕಾರಕ್ಕೆ ಒತ್ತಾಯ ಪೂರ್ವಕವಾಗಿ ಹೇಳಿ, ಹಲವಾರು ಮುಷ್ಕರಗಳನ್ನು ಮಾಡಿಸಿ, ಈ ಬಡಾವಣೆ ಆಗಬಾರದು, ನನ್ನ ಕ್ಷೇತ್ರದ ವ್ಯಾಪ್ತಿಗೆ 14 ಹಳ್ಳಿಗಳು ಬರುತ್ತಿವೆ...

**ಶ್ರೀ ಬಸವರಾಜ ಬೊಮ್ಮಾಯಿ(ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಬಡಾವಣೆಯ ವಿಚಾರವಾಗಿ ಸಂಪೂರ್ಣವಾಗಿ ಮಾತನಾಡಲಿ. ಆದರೆ, ಆ ಮನೆಯ ಸದಸ್ಯರ ವಿಚಾರವನ್ನು ಇಲ್ಲಿ ಮಾತನಾಡುವುದು ಬೇಡ. ಏಕೆಂದರೆ, ಅದರಲ್ಲಿ defend ಮಾಡುವುದಕ್ಕೆ ಆಗುವುದಿಲ್ಲ.

**ಶ್ರೀ ಎಂ. ನಾರಾಯಣಸ್ವಾಮಿ(ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ನಾನು ಈ ಮಾತನ್ನು ಏತಕ್ಕೆ ಹೇಳಿದ್ದೇನೆಂದರೆ, ಆ ದಿನ ಒಂದು ನೀತಿ ಮತ್ತು ಇವೊತ್ತಿನ ದಿನ ಅವರೇ ಬಿ.ಡಿ.ಎ. ಅಧ್ಯಕ್ಷರಾದ ನಂತರ ಈ ರೀತಿ ಎಂದು ಹೇಳುವುದಕೋಸ್ಕರ ನಾನು ಅವರ ಹೆಸರನ್ನು ಹೇಳಿರುತ್ತೇನಷ್ಟೇ. ಮಾನ್ಯ ಮುಖ್ಯಮಂತ್ರಿಯವರೇ, ನಾನು ಅವರ ಹೆಸರನ್ನು ತೆಗೆದುಕೊಳ್ಳುವುದಕ್ಕೆ ಹೋಗುವುದಿಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಉಪ ಸಭಾಪತಿಯವರು:-** ಆಯಿತು. ಆ ಹೆಸರನ್ನು ಬಿಟ್ಟುಬಿಡಿ.

**ಶ್ರೀ ಎಂ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಯಾರು ಜನಪ್ರತಿನಿಧಿಗಳು ಇದ್ದಾರೆ, ಅವರ ಕ್ಷೇತ್ರದಲ್ಲಿ ಆಗುತ್ತಿರುವಂತಹ ಅನ್ಯಾಯದ ಪರವಾಗಿ ಧ್ವನಿ ಎತ್ತಬೇಕಾಗಿತ್ತೋ, ಅವರು ಇವೊತ್ತಿನ ದಿನ ಉಲ್ಟಾ ಹೊಡೆಯುತ್ತಿದ್ದಾರೆ. ಜನರ ಪರವಾಗಿ ಇರುವುದಿಲ್ಲ. ಆ ಜನರು ಸುಮಾರು ನೂರಾರು ದಿನಗಳಿಂದ...

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಆ ಮನೆಯ ಶಾಸಕರು ಬಿ.ಡಿ.ಎ. ಅಧ್ಯಕ್ಷರಾಗಿದ್ದಾರೆ ಎನ್ನುವುದನ್ನು ಈ ಸದನದಲ್ಲಿ ಬಳಸಬಾರದೆಂದು ಮಾನ್ಯ ಮುಖ್ಯಮಂತ್ರಿಗಳು ಮಾನ್ಯ ಸದಸ್ಯರ ಗಮನಕ್ಕೆ ತಂದಿದ್ದಾರೆ.

**ಶ್ರೀ ಎಂ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾನು ಅವರ ಹೆಸರನ್ನು ಹೇಳುವುದಿಲ್ಲ. ನಾನು ಮತ್ತೆ ಆ ಮಾತು ಆಡುವುದಿಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಮತ್ತೆ ಪುನಃ ಅವರ ಹೆಸರು ತೆಗೆಯುವುದಿಲ್ಲ. ಪ್ರಜಾಪ್ರಭುತ್ವದಲ್ಲಿ ಅವರು ಒಬ್ಬ ಶಾಸಕರಾಗಿ ಆಯ್ಕೆಯಾಗಿದ್ದಾರೆ.

**ಶ್ರೀ ಎಂ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾವಾಗಲಿ, ನೀವಾಗಲಿ, ಜನಪ್ರತಿನಿಧಿಯಾದಂತಹವರು ಜನರ ಪರವಾಗಿ ಇರಬೇಕೆಂದು ಹೇಳಿದ್ದೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಅವರು ಜನರ ಪರವಾಗಿದ್ದಾರೆ, ಜನರ ವಿರೋಧವಾಗಿದ್ದಾರೆ ಎಂದು ಹೇಳುವುದು ಯಾವ ನ್ಯಾಯ? ಮಾನ್ಯ ಮುಖ್ಯಮಂತ್ರಿಗಳೇ ಈ ಬಗ್ಗೆ ಈಗಾಗಲೇ ಒಂದು ಬಾರಿ ಹೇಳಿದ್ದಾರೆ.

**ಶ್ರೀ ಎಸ್.ಆರ್. ಪಾಟೀಲ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಈ ಬಗ್ಗೆ ನಾನು ಮಾತನಾಡುವುದಿಲ್ಲವೆಂದು ಮಾನ್ಯ ಎಂ. ನಾರಾಯಣಸ್ವಾಮಿಯವರು ಈಗಾಗಲೇ ಹೇಳಿರುತ್ತಾರೆ.

**(ಗೊಂದಲ)**

**ಶ್ರೀ ಎಂ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾನು ಮುಖ್ಯಮಂತ್ರಿಗಳ ಮಾತಿಗೆ ಗೌರವ ಕೊಟ್ಟಿದ್ದೇನೆ. ಹಾಗಾಗಿ, ನಾನು ಆ ಮನೆಯ ಶಾಸಕರ ಹೆಸರು ಹೇಳುವುದಿಲ್ಲ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ನಾನು ಹೇಳಿದ್ದು, ಅದಲ್ಲ. ಮಾತನಾಡುವುದಿಲ್ಲವೆಂದು ಹೇಳಿದ ಮೇಲೆ ಮತ್ತೆ ಮಾತನಾಡಿದ್ದಾರೆಂದು ಹೇಳಿರುತ್ತೇನೆ. ಅದನ್ನು ತಾವು ಗಮನಿಸಬೇಕು.

**(ಗೊಂದಲ)**

**ಉಪ ಸಭಾಪತಿಯವರು:-** ಮಾನ್ಯ ನಾರಾಯಣಸ್ವಾಮಿಯವರೇ, ಈ ಸದನದಲ್ಲಿ ಇಲ್ಲದೇ ಇರುವವರ ಹೆಸರನ್ನು ಇಲ್ಲಿ ಪ್ರಸ್ತಾಪ ಮಾಡುವುದು ಬೇಡ. ಮಾನ್ಯ ಸಭಾನಾಯಕರೇ ತಾವು ದಯಮಾಡಿ ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಎಂ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾನು ಮುಖ್ಯಮಂತ್ರಿಗಳ ಮಾತಿಗೆ ಗೌರವ ಕೊಟ್ಟು, ಪುನಃ ಆ ಹೆಸರನ್ನು ಪ್ರಸ್ತಾಪ ಮಾಡುವುದಕ್ಕೆ ಹೋಗಲಿಲ್ಲ.

**ಉಪ ಸಭಾಪತಿಯವರು:-** ಆಯಿತು, ತಾವು ಮುಂದುವರೆಸಿ.

**ಶ್ರೀ ಎಂ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ತಾವು ಜನಪ್ರತಿನಿಧಿಗಳು, ನಾನು ಜನಪ್ರತಿನಿಧಿ. ನಮ್ಮನ್ನು ನಂಬಿಕೊಂಡಿರುವಂತಹ ಜನ ಇದ್ದಾರೆ. ಅವರ ಪರವಾಗಿ ಧ್ವನಿ ಎತ್ತಬೇಕೆಂದು ನಾನು ಹೇಳಿದ್ದೇನಷ್ಟೇ. ಬೇರೆ ಯಾವುದನ್ನು ನಾನು ಹೇಳಲಿಲ್ಲ.

(ಮುಂದು...)

(943) 23-09-2021 YL-VK 1.10 (ಉಪ ಸಭಾಪತಿಯವರ ಉಪಸ್ಥಿತಿ)

**ಶ್ರೀ ಎಂ.ನಾರಾಯಣಸ್ವಾಮಿ(ಮುಂದು):-**

ಮಾನ್ಯ ಮುಖ್ಯಮಂತ್ರಿಗಳು ಸಹ ರೈತ ಕುಟುಂಬದಿಂದ ಬಂದವರಾಗಿದ್ದು, ಜನಪರವಾಗಿ ಕಾಳಜಿಯನ್ನು ಇಟ್ಟುಕೊಂಡಿರುವವರಾಗಿದ್ದಾರೆ ಹಾಗೂ ನಾನು ಸಹ ಅವರ ಬಗ್ಗೆ ಅಪಾರವಾಗಿ ತಿಳಿದುಕೊಂಡಿದ್ದೇನೆ, ಅವರೊಂದಿಗೆ ಆತ್ಮೀಯವಾಗಿ ಒಳನಾಟವನ್ನಿಟ್ಟುಕೊಂಡಿದ್ದೇನೆ, ಅವರ ಬಗ್ಗೆ ಬಹಳ ಅಭಿಮಾನ ಇದೆ. ಅವರು ಈ ರಾಜ್ಯದ ಮುಖ್ಯಮಂತ್ರಿಗಳಾಗಿ ಜನರ ನಾಡಿಮಿಡಿತವನ್ನು ಅರ್ಥಮಾಡಿಕೊಂಡು, ಜನರ ಕಷ್ಟದಲ್ಲಿ ಭಾಗಿಯಾಗುತ್ತಾರೆ ಎಂಬ ಭಾವನೆಯಿಂದ ಮನವಿ ಮಾಡಿಕೊಳ್ಳುತ್ತಿದ್ದೇನೆ. ಈ ವಿಷಯಕ್ಕೆ ಸಂಬಂಧಿಸಿದಂತೆ ಬೇರೆ ಸಚಿವರು ಉತ್ತರ ನೀಡುತ್ತಾರೆ ಎಂದು ಹೇಳಿದರೂ ಸಹ ನಾನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನ್ಯ ಮುಖ್ಯಮಂತ್ರಿಗಳೆ ಬರಬೇಕೆಂದು ಏತಕ್ಕಾಗಿ ಒತ್ತಾಯ ಮಾಡಿದ್ದೇನು ಅಂದರೆ, ಅವರು ಮಾನವೀಯತೆಯ ದೃಷ್ಟಿಯಿಂದ ಸಹಾಯ ಮಾಡುತ್ತಾರೆ ಎಂಬ ಒಂದೇ ಕಾರಣದಿಂದಾಗಿ ಇಷ್ಟು ಹೊತ್ತು ನಾನು ಕಾಯ್ದಿರುವುದು.

ಸುಮಾರು 106 ದಿನಗಳಿಂದ ಸಾವಿರಾರು ಜನ ರಾಮಗೊಂಡನಹಳ್ಳಿ ಗ್ರಾಮದಲ್ಲಿ ಟೆಂಟ್ ಹಾಕಿಕೊಂಡು, ಶಾಲೆಗೆ ಹೋಗುವಂಥ ವಿದ್ಯಾರ್ಥಿಗಳು, ಹೆಣ್ಣು ಮಕ್ಕಳು, ರೈತರು ಎಲ್ಲರೂ ಪ್ರತಿಭಟನೆ ಮಾಡುತ್ತಿದ್ದಾರೆ. ನಾನು ಸಹ ಎರಡು ದಿವಸ ಅಲ್ಲಿ ಭಾಗವಹಿಸಿದ್ದೇನು. ಅಲ್ಲಿ ಹಾಲಿನ ಸಹಕಾರ ಸಂಘಗಳಿವೆ, ರೈತರು ಹಾಲನ್ನು ಮಾರಾಟ ಮಾಡುವಂಥ ಹಾಲಿನ ಡೈರಿಗಳೆನಿವೆ, ಅವುಗಳು ಇವತ್ತಿಗೂ ಸಹ ಅಸ್ತಿತ್ವದಲ್ಲಿದ್ದು, ಕೋಟ್ಯಂತರ ರೂಪಾಯಿ ವ್ಯವಹಾರ ಮಾಡಲಾಗುತ್ತಿದೆ. ಅದರಿಂದಲೇ ಜೀವನ ಸಾಗಿಸುತ್ತಿರುವಂಥ ಜನರು ಸಹ ಅಲ್ಲಿದ್ದು, ಇವತ್ತಿನ ದಿವಸ ಅವೆಲ್ಲವೂ ನೆಲಸಮಗೊಂಡಿದ್ದೆ. ಈ ರೀತಿ ಮಾಡಿರುವುದರಿಂದ ಅಲ್ಲಿರುವಂಥ ದನ-ಕರುಗಳು ಎಲ್ಲಿಗೆ ಹೋಗಬೇಕು? ಆ ಜಾಗವನ್ನು ಸ್ವಾಧೀನಪಡಿಸಿಕೊಂಡು, 20X30, 40X60 ಅಳತೆಯ ನಿವೇಶನವನ್ನು ನೀಡಿದರೆ, ಅವರು ದನ-ಕರುಗಳನ್ನು ಎಲ್ಲಿ ಕಟ್ಟಿಕೊಳ್ಳಬೇಕು, ಅವು ಎಲ್ಲಿಗೆ ಹೋಗಬೇಕು ಎನ್ನುವುದು ಪ್ರಶ್ನೆಯಾಗಿ ಉಳಿದಿದೆ. ಮಾನ್ಯ ಮುಖ್ಯಮಂತ್ರಿಗಳು ಕೆಳ ಮನೆಗೆ ಹೋಗಬೇಕಾಗಿರುವುದರಿಂದ ನಾನು ಹೆಚ್ಚಿಗೆ ಮಾತನಾಡಲು ಹೋಗುವುದಿಲ್ಲ. ಏಕೆಂದರೆ, ಬಹಳ ಸುದೀರ್ಘವಾಗಿ ಮಾತನಾಡಬೇಕೆಂದು ಇದ್ದೆ. ಆದರೆ, ಅವರ ಕಷ್ಟವನ್ನು ಅರ್ಥ ಮಾಡಿಕೊಂಡು ಹೆಚ್ಚಿಗೆ ಮಾತನಾಡುವುದಕ್ಕೆ ಹೋಗುವುದಿಲ್ಲ.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾತನಾಡಬೇಕಾಗಿರುವುದನ್ನೆಲ್ಲವನ್ನೂ ಹೇಳಿ, ಹೆಚ್ಚಿಗೆ ಮಾತನಾಡುವುದಕ್ಕೆ ಹೋಗುವುದಿಲ್ಲವೆಂದರೆ, ಅದು ಯಾವ style ಎಂಬುದು ಅರ್ಥವಾಗಲಿಲ್ಲ.

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಒಂದು ಗಂಟೆ ಆ ವಿಚಾರವಾಗಿ ಮಾತನಾಡಬೇಕೆಂದು ಇದ್ದೆ.

**ಉಪ ಸಭಾಪತಿಯವರು:-** ಮಾನ್ಯ ನಾರಾಯಣಸ್ವಾಮಿಯವರೆ, ಆಯಿತು. ಈಗಾಗಲೇ ತಾವು ಮಾತನಾಡಲು ಪ್ರಾರಂಭಿಸಿ 20 ನಿಮಿಷವಾಗಿದೆ, ಬೇಗ ತಮ್ಮ ಮಾತನ್ನು ಮುಗಿಸಿ.

**ಶ್ರೀ ಎಂ.ನಾರಾಯಣಸ್ವಾಮಿ (ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ನಾನು ಕಣ್ಣಾರೆ ಕಂಡ ವಿಚಾರವನ್ನು ಮಾನ್ಯ ಮುಖ್ಯಮಂತ್ರಿಗಳ ಮುಂದೆ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪ್ರಸ್ತಾಪ ಮಾಡಬೇಕೆಂದು ಮಾತನಾಡಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ಸುಮಾರು ವರ್ಷಗಳಿಂದ ನಿರ್ಮಾಣಗೊಂಡಿರುವಂಥ ಮನೆಗಳನ್ನು ನೆಲಸಮಗೊಳಿಸುವುದು ಬೇಡ. ಒಂದು ವೇಳೆ ನೆಲಸಮಗೊಳಿಸಬೇಕೆಂದರೆ, 2013ನೇ ಕಾಯ್ದೆ ಪ್ರಕಾರ ನ್ಯಾಯಯುತವಾಗಿ ರೈತರಿಗೆ ನೀಡಬೇಕಾದಂಥ ಪರಿಹಾರವೇನಿದೆ, ಅದನ್ನು ನೀಡಲು ಒಪ್ಪಿಕೊಂಡರೆ, ನಾಳೆ ನಾನೇ ಖುದ್ದಾಗಿ ಅಲ್ಲಿಗೆ ಹೋಗಿ ನಿಂತುಕೊಂಡು, ಸುಮಾರು 3500 ಹೆಕ್ಟೇರ್ ಭೂಮಿಯನ್ನು ಬಿಡಿಸಿಕೊಡುವುದಕ್ಕೆ ತಯಾರಿದ್ದೇನೆ. ಇಲ್ಲವೆಂದರೆ, ಅರವತ್ತು ಲಕ್ಷ ರೂಪಾಯಿ, ಹನ್ನೊಂದು ಲಕ್ಷ ರೂಪಾಯಿ ನೀಡಿದರೆ ಯಾರು ಆ ಜಾಗವನ್ನು ಬಿಟ್ಟು ಕೊಡಲು ಒಪ್ಪಿಕೊಳ್ಳುತ್ತಾರೆ? ಆ ಗ್ರಾಮಗಳು ಕಾರ್ಪೊರೇಷನ್ ಮತ್ತು ಬಿ.ಬಿ.ಎಂ.ಪಿ. ವ್ಯಾಪ್ತಿಗೆ ಒಳಪಟ್ಟಿರುವುದಾಗಿದೆ. ದಯವಿಟ್ಟು ಮಾನ್ಯ ಮುಖ್ಯಮಂತ್ರಿಗಳು ಒಂದು ದಿನ ಸಮಯ ಮಾಡಿಕೊಂಡು ಬಂದರೆ, ಅವರನ್ನು ನಾನು ಅಲ್ಲಿಗೆ ಕರೆದುಕೊಂಡು ಹೋಗುತ್ತೇನೆ. ಆ ಗ್ರಾಮಗಳಿಗೆ ಮಾನ್ಯ ಮುಖ್ಯಮಂತ್ರಿಗಳೆ ಖುದ್ದಾಗಿ ಭೇಟಿ ನೀಡಿ ವೀಕ್ಷಣೆ ಮಾಡಿದರೆ, ಆ ಗ್ರಾಮಸ್ಥರ ಪರಿಸ್ಥಿತಿ ಗೊತ್ತಾಗುತ್ತದೆ. ಹಾಗಾಗಿ ಕಣ್ಣಾರೆ ನೋಡಿ, ಏನು ತೀರ್ಮಾನ ತೆಗೆದುಕೊಳ್ಳುತ್ತಾರೆ ಆ ತೀರ್ಮಾನವನ್ನು ಮಾನ್ಯ ಮುಖ್ಯಮಂತ್ರಿಗಳು ತೆಗೆದುಕೊಳ್ಳಲು ಬಿಡುತ್ತೇನೆ. ಧನ್ಯವಾದಗಳು.

**ಶ್ರೀ ಬಸವರಾಜ ಬೊಮ್ಮಾಯಿ (ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೇ, ಮಾನ್ಯ ನಾರಾಯಣಸ್ವಾಮಿಯವರು 330ಎ ರಡಿಯಲ್ಲಿ ತಂದಿರುವ ವಿಚಾರವನ್ನು ಸ್ವಾಗತಿಸುತ್ತೇನೆ. ಅವರು ಪ್ರಸ್ತಾಪ ಮಾಡಿದ ವಿಚಾರವೇನಿದೆ, ಅದು ಬಹಳ ವರ್ಷಗಳಿಂದ ನಡೆಯುತ್ತಿರುವುದಾಗಿದೆ. ಇದಕ್ಕೆ ಸಂಬಂಧಿಸಿದಂತೆ ಉಚ್ಚ ನ್ಯಾಯಾಲಯ, ಸರ್ವೋಚ್ಚ ನ್ಯಾಯಾಲಯ ಹಾಗೂ ವಿಭಾಗೀಯ ಪೀಠದಿಂದ ಹೊರಡಿಸಿರುವಂಥ ಆದೇಶಗಳಿದ್ದು, ಅದಕ್ಕೆ ಬಹಳ ದೊಡ್ಡ ಇತಿಹಾಸವೇ ಇದೆ ಮತ್ತು ಕಾನೂನಿನ ನಿರ್ಬಂಧವು ಇದೆ. ಈ ವಿಷಯಕ್ಕೆ ಬರುವ ಮೊದಲು ಎರಡೂ ಮನೆಯ ಸದಸ್ಯರು ಗಮನಿಸಬೇಕಾಗಿರುವುದೇನೆಂದರೆ, ನಗರಿಕರಣವಾಗುವಾಗ ಗ್ರಾಮಗಳ ಜಮೀನನ್ನು ಸ್ವಾಧೀನಪಡಿಸಿಕೊಳ್ಳುವಂಥ ಪ್ರಕ್ರಿಯೆ ನಡೆಯುತ್ತದೆ. ಏಕೆಂದರೆ, ಜನಸಂಖ್ಯೆ ಜಾಸ್ತಿಯಾಗುತ್ತಿರುವುದರಿಂದ ನಗರಿಕರಣವಾಗುತ್ತದೆ. ಗ್ರಾಮಗಳಿಂದಲೂ ಸಾಕಷ್ಟು ಜನರು ವಲಸೆ ಬರುತ್ತಾರೆ. ಆದರೆ, ಅದಕ್ಕೊಂದು ನೀತಿ ಇಲ್ಲದಂತಾಗಿದೆ. ಬೆಂಗಳೂರಿನ ಪ್ಲಾನಿಂಗ್ ಒಂದು ಕಡೆಯಾದರೆ, ಇಡೀ ರಾಜ್ಯದಲ್ಲಿ ನಗರಿಕರಣವಾಗುತ್ತಿರುವಂಥ ಸಂದರ್ಭದಲ್ಲಿ ಅಭಿವೃದ್ಧಿಗಾಗಿ ಅಥವಾ ಇನ್ನಿತರೆ ಉದ್ದೇಶಕ್ಕಾಗಿ ಭೂಮಿಯನ್ನು ತೆಗೆದುಕೊಂಡಾಗ ಯಾವ ನೀತಿಯನ್ನು ನಾವು ಅನುಸರಿಸಬೇಕೆನ್ನುವ ಸ್ಪಷ್ಟತೆ ಇರುವುದಿಲ್ಲ. ಹಲವಾರು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಾನೂನುಗಳು ಮತ್ತು ಜಡ್ಜ್‌ಮೆಂಟ್‌ಗಳಿದ್ದು, ಅದರ ಆಧಾರದ ಮೇಲೆ ಕೆಲವೊಂದು ತೀರ್ಮಾನ ತೆಗೆದುಕೊಳ್ಳಲಾಗುವುದು. ಹಾಗಾಗಿ ನಾವೆಲ್ಲರೂ ಅದರ ಬಗ್ಗೆ ಚಿಂತನೆ ಮಾಡುವುದು ಅವಶ್ಯಕವಾಗಿದೆ ಎನ್ನುವುದು ನನ್ನ ಭಾವನೆ. ಈ ವಿಚಾರಕ್ಕೆ ಸಂಬಂಧಿಸಿದಂತೆ, ನೇರವಾಗಿ ಮಾತನಾಡುವುದಾದರೆ, ಬೆಂಗಳೂರು ಉತ್ತರ, ಸೋಮಶೆಟ್ಟಿಹಳ್ಳಿ, ಲಕ್ಷ್ಮೀಪುರ ಮತ್ತು ಇತರೆ ಹಳ್ಳಿಗಳಲ್ಲಿ ಒಟ್ಟು 3546 ಎಕರೆ 12 ಗುಂಟೆ ಜಮೀನನ್ನು ಶಿವರಾಮ ಕಾರಂತ ಬಡಾವಣೆ ಮಾಡಲು ನನಗೆ ತಿಳಿದಿರುವ ಹಾಗೆ 2003-04ನೇ ಸಾಲಿನಲ್ಲಿ ಅಂದಿನ ಮುಖ್ಯಮಂತ್ರಿಗಳಾದ ಶ್ರೀ ಎಸ್.ಎಂ.ಕೃಷ್ಣರವರು ಕೆಂಪೇಗೌಡ ಮತ್ತು ಶಿವರಾಮ ಕಾರಂತ ಬಡಾವಣೆ ಒಳಗೊಂಡಂತೆ 04 ಬಡಾವಣೆ ಮಾಡಬೇಕೆಂದು ತೀರ್ಮಾನ ಮಾಡಿದ್ದರು. ಆದರೆ, ನಿಜಲಿಂಗಪ್ಪ ಬಡಾವಣೆ ಮತ್ತು ಇನ್ನೊಂದು ಬಡಾವಣೆಯು drop ಆಗಿತ್ತು. ಉತ್ತರ ಮತ್ತು ದಕ್ಷಿಣ ವಲಯಗಳಲ್ಲಿ ಒಟ್ಟು 04 ಬಡಾವಣೆಯನ್ನು ಮಾಡಬೇಕೆಂಬ ಮಹಾತ್ವಕಾಂಕ್ಷೆಯನ್ನಿಟ್ಟುಕೊಂಡಿದ್ದರು. ಬೆಂಗಳೂರು ನಗರದಲ್ಲಿ ವಾಸಿಸುತ್ತಿರುವ ನಿವಾಸಿಗಳಿಗೆ ಬಹಳಷ್ಟು ವರ್ಷಗಳಿಂದ ನಿವೇಶನ ನೀಡಿಲ್ಲ ಎಂಬ ಕಾರಣದಿಂದಾಗಿ ಈ ಯೋಜನೆಯನ್ನು ಇಟ್ಟುಕೊಂಡಿದ್ದರು. ಕೆಂಪೇಗೌಡ ಮತ್ತು ಶಿವರಾಮ ಕಾರಂತ ಬಡಾವಣೆ ನಿರ್ಮಾಣಕ್ಕೆ ಬಹಳಷ್ಟು ಸಮಸ್ಯೆಗಳು ಉದ್ಭವಿಸಿದ್ದಕ್ಕಾಗಿಯೇ ನ್ಯಾಯಾಲಯದ ಮೊರೆ ಹೋಗಿರುವುದು. ಜೊತೆಗೆ ನ್ಯಾಯಾಲಯವು ಹಲವಾರು ತೀರ್ಮಾನಗಳನ್ನು ನೀಡಿದ್ದು, ಕೆಲವು ವಿರೋಧಾಭಾಸ ತೀರ್ಮಾನವನ್ನು ಸಹ ನೀಡಿದೆ. ಅದರಿಂದಾಗಿ ಸರ್ವೋಚ್ಚ ನ್ಯಾಯಾಲಯದ ಮೊರೆ ಹೋದ ಪ್ರಯುಕ್ತ ಅಂತಿಮ ತೀರ್ಮಾನವಾಗಿದೆ. 2008ನೇ ಸಾಲಿನಲ್ಲಿ ಪ್ರಾಥಮಿಕ ಅಧಿಸೂಚನೆಯನ್ನು ಹೊರಡಿಸಲಾಗಿತ್ತು. ಆದಾದ ನಂತರ ಅದನ್ನು ಪ್ರಶ್ನಿಸಿ ಉಚ್ಚ ನ್ಯಾಯಾಲಯದ ಮೊರೆ ಹೋದರು. 2008ನೇ ಸಾಲಿನಲ್ಲಿ ಹೊರಡಿಸಿದಂಥ ಪ್ರಾಥಮಿಕ ಅಧಿಸೂಚನೆಯನ್ನು 2015ನೇ ಸಾಲಿನಲ್ಲಿ ರದ್ದುಪಡಿಸಲಾಗಿತ್ತು. ತದನಂತರ ಬಿ.ಡಿ.ಎ. ನವರು ವಿಭಾಗೀಯ ಪೀಠದ ಮೊರೆ ಹೋದರು. 2017ನೇ ಸಾಲಿನಲ್ಲಿ ವಿಭಾಗೀಯ ಪೀಠವು ಸಹ ಅದನ್ನು ವಜಾಗೊಳಿಸಿತು. 2008ನೇ ಸಾಲಿನಲ್ಲಿ ಹೊರಡಿಸಿದ ಅಧಿಸೂಚನೆಗೆ ಸಂಬಂಧಿಸಿದಂತೆ, 2017ನೇ ಸಾಲಿನವರೆಗೂ ಅಂದರೆ, ಸುಮಾರು 10 ವರ್ಷಗಳು ಅದೇ ವಿಚಾರ ನಡೆಯಿತು. ತದನಂತರ ಅಂತಿಮವಾಗಿ ಸರ್ವೋಚ್ಚ ನ್ಯಾಯಾಲಯದ ಮೊರೆ ಹೋದ ಪ್ರಯುಕ್ತ 2018ನೇ ಸಾಲಿನಲ್ಲಿ ಸರ್ವೋಚ್ಚ ನ್ಯಾಯಾಲಯವು ಅಂತಿಮ ಆದೇಶವನ್ನು ಹೊರಡಿಸಿತು. ಸರ್ವೋಚ್ಚ ನ್ಯಾಯಾಲಯವು ವಿವರಗಳನ್ನೆಲ್ಲಾ ಹೇಳಿ ಕೊನೆಗೆ,

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

> *"....We have discussed this aspect of the matter in our main judgment dated: 03.08.2018. It is also clear that the provisions of the Right to Fair Compensation and Transparency in Land Acquisition, Rehabilitation & Resettlement Act, 2013 are not applicable for the acquisition made under the BDA Act. Final notification has also been issued after the pronouncement of judgment by this Court in Civil Appeal No(s). 7661-7663 of 2018 dated: 03.08.2018. We direct the BDA to proceed with the acquisition of the lands as proposed in the notification...."*

ಎಂದು ತಿಳಿಸಿತು. 2013ರ ಭೂಸ್ವಾಧೀನ ಕಾಯ್ದೆ ಏನಿದೆ, 'Right to Fair Compensation and Transparency in Land Acquisition Rehabilitation & Resettlement Act, 2013..' ಅದಕ್ಕೆ ಅನ್ವಯಿಸುವುದಿಲ್ಲ ಎನ್ನುವುದನ್ನು ಬಹಳ ಸ್ಪಷ್ಟವಾಗಿ ಸರ್ವೋಚ್ಚ ನ್ಯಾಯಾಲಯವು ತಿಳಿಸಿತು. ಹಾಗೆಯೇ ಬಿ.ಡಿ.ಎ. ಯಾವ ರೀತಿ proceed ಆಗಬೇಕೆನ್ನುವ ವಿಚಾರವನ್ನೂ ಸಹ ಸ್ಪಷ್ಟವಾಗಿ ತಿಳಿಸಿದೆ. ಅದರನ್ವಯ ಬಿ.ಡಿ.ಎ. ಸರ್ಕಾರ ದಿನಾಂಕ: 29.10.2018 ರಂದು ಒಂದು ಆದೇಶವನ್ನು ಹೊರಡಿಸಿತು. ಆ ಆದೇಶದ ಪ್ರಕಾರ ಅಭಿವೃದ್ಧಿಪಡಿಸಿದ ನಿವೇಶನಗಳಲ್ಲಿ ಭೂ ಮಾಲೀಕರು ಪರಿಹಾರ ಹಣವನ್ನು ಒಪ್ಪದಿದ್ದ ಪಕ್ಷದಲ್ಲಿ 60:40 (ಶೇ. 60 ರಷ್ಟು ಬಿ.ಡಿ.ಎ. ರವರು ಮತ್ತು ಶೇ.40 ರಷ್ಟು ಭೂಮಾಲೀಕರಿಗೆ) ನಿವೇಶನಗಳನ್ನು ನೀಡುವಂತೆ ಕಾನೂನು ಜಾರಿಗೆ ತರಲಾಗಿದೆ. ಇಲ್ಲದಿದ್ದರೆ 2008ನೇ ಸಾಲಿನ ಆದೇಶದ ಪ್ರಕಾರ ಭೂಸ್ವಾಧೀನಪಡಿಸಿಕೊಂಡರೆ, ಹಣವನ್ನು ನೀಡಬೇಕೆಂಬುದು ಇಂದಿನ ನಿಲುವಾಗಿದೆ. ವಾಸ್ತವಾಂಶವೇನೆಂದರೆ, ಈಗಾಗಲೇ ಮಾನ್ಯ ಸದಸ್ಯರು ತಿಳಿಸಿದಂತೆ ಮನೆಗಳು, ಶಾಪಿಂಗ್ ಕಾಂಪ್ಲೆಕ್ಸ್ ಮತ್ತು ಖಾಲಿ ಜಾಗವು ಇದೆ.

(...ಮುಂದು)

(944) 23.09.2021/1.30/ ಎಸ್‌ಕೆ-ವಿಕೆ

**(ಉಪ ಸಭಾಪತಿಯವರ ಉಪಸ್ಥಿತಿ)**

**ಶ್ರೀ ಬಸವರಾಜ ಬೊಮ್ಮಾಯಿ (ಮುಂದು):-**

ಇದನ್ನು ಯಾವ ರೀತಿ ನಿಭಾಯಿಸಬೇಕೆಂಬುದರ ಕುರಿತು ಮಾನ್ಯ ಸರ್ವೋಚ್ಚ ನ್ಯಾಯಾಲಯವು ಈ ಸಮಿತಿಯಲ್ಲಿ ನ್ಯಾಯಾಧೀಶರಾದ ಶ್ರೀ ಚಂದ್ರಶೇಖರ್, ಶ್ರೀ ಜೈಕಾರ್ ಜೋರಂ ಮತ್ತು ಶ್ರೀ ರಮೇಶ್ (IPS Officer) ಈ ಮೂರು ಜನರ ಸಮ್ಮುಖದಲ್ಲಿ ಸಮಿತಿಯಲ್ಲಿ supervise ಮಾಡುವುದಕ್ಕೆ ನೇಮಿಸಿದ್ದಾರೆ. ಇದು ಬಿ.ಡಿ.ಎ. ಕೈಯಲ್ಲಿ ಇಲ್ಲ. ಈ ಕಮಿಟಿಯಲ್ಲಿಯೇ ನಿರ್ಧಾರವಾಗುತ್ತದೆ. ಯಾವ ಜಮೀನನ್ನು ತೆಗೆದುಕೊಳ್ಳಬೇಕು. ಇದಕ್ಕೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

land acquisition ಅನ್ನು proceed ಮಾಡಿ. ಈ ಮನೆಗಳನ್ನು ಏನು ಮಾಡಬೇಕೆಂಬುದರ ಬಗ್ಗೆ ಅವರೇ ತೀರ್ಮಾನ ಮಾಡುತ್ತಾರೆ. ಅವರು ಹೇಳದೇ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಯಾವುದೇ ಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತಿಲ್ಲ. ಅಲ್ಲಿನ ವಾಸ್ತವಾಂಶವನ್ನು ಒಂದು ರೀತಿಯಲ್ಲಿ ನೋಡಿದಾಗ, ಅಲ್ಲಿ ರೈತರು ಸ್ವಂತ ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಬೇರೆಯವರಿಗೆ ಜಾಗಗಳನ್ನು ಕೊಟ್ಟು, ಅವರು ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಕೆಲವು ನಿರಾಕ್ಷೇಪಣಾ ಪತ್ರವನ್ನು ಕೊಟ್ಟಿದೆ. ಈ ತರಹದ ಗೊಂದಲದ ವಾತಾವರಣವಿದೆ. ಅದನ್ನು ನಿಭಾಯಿಸುವುದಕ್ಕೆ ಸಮಿತಿ ಕೂಡ ಇದೆ. ಇದರ ಬಗ್ಗೆ ನಮ್ಮ ಅಧಿಕಾರಿಗಳು ನನ್ನ ಗಮನಕ್ಕೆ ತಂದರು. ಇದರ ಹೆಚ್ಚಿನ ವಿವರಕ್ಕೆ ಹೋಗಿರಲಿಲ್ಲ. ನನಗೆ ಸಂಪೂರ್ಣವಾದಂತಹ ವಿವರ ಇದೆ ಎಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಇಷ್ಟು ಸ್ಥೂಲವಾಗಿ ನಾನು ತಿಳಿದುಕೊಂಡಿರುವಂತಹದ್ದು. ಸುಮಾರು 3546 ಎಕರೆ ಸಂಪೂರ್ಣವಾಗಿ ಲಭ್ಯವಿಲ್ಲ. ಬಡಾವಣೆಗಳಲ್ಲಿ ಜನರು ತಮ್ಮದೇ ಆದಂತಹ ಮನೆಗಳನ್ನು ಕಟ್ಟಿಕೊಂಡಿರುವಂತಹದ್ದು. ಇಲ್ಲಿ ಹಲವಾರು ಮನೆಗಳಿವೆ. ಕೆಲವು ಖಾಲಿ ಜಾಗವಿದೆ. ಇದು ground reality. ಕೆಲವು ರೈತರು ಅದರಲ್ಲಿ ಮಾರಾಟ ಮಾಡಿ, ಇನ್ನೊಬ್ಬರು ತೆಗೆದುಕೊಂಡಿದ್ದಾರೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ನಿರಾಕ್ಷೇಪಣಾ ಪತ್ರವನ್ನು ಕೊಟ್ಟಿದೆ. ಇದು ground reality. ಮಾನ್ಯ ಸರ್ವೋಚ್ಚ ನ್ಯಾಯಾಲಯವು ನ್ಯಾಯಾಧೀಶರಾದ ಶ್ರೀ ಚಂದ್ರಶೇಖರ್‌ರವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಮಾಡಿದ್ದು, ಇವೆಲ್ಲವನ್ನು ತೆರವುಗೊಳಿಸುವುದಕ್ಕೆ ಮತ್ತೊಂದು ಎಲ್ಲಾ activities ಹಾಗೂ supervise ಮಾಡುವುದಕ್ಕೆ ಸಮಿತಿಯನ್ನು ಮಾಡಿದೆ. ಆದಾದ ನಂತರ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶದ ಪ್ರಕಾರ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಮುಂದುವರೆಯುವಂತಹದ್ದು. ಇದರ ಬಗ್ಗೆ ಸಮಗ್ರವಾಗಿ ಚಿಂತನೆ ಮಾಡಿ, ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶವನ್ನು ನಾವ್ಯಾರು ಮೀರುವುದಕ್ಕೆ ಆಗುವುದಿಲ್ಲ. ಅಷ್ಟೇ ಅಲ್ಲ, ಮಾನ್ಯ ಸರ್ವೋಚ್ಚ ನ್ಯಾಯಾಲಯವು ಒಂದು Supervisory Committee ಯನ್ನು ಮಾಡಿದೆ. ಇನ್ನೊಂದು ಕಡೆ three Districts Judges Committee ಇದೆ. ಬೇರೆ ಬೇರೆ ರೀತಿಯಲ್ಲಿ ಅದರಲ್ಲಿ ಬಹಳಷ್ಟು ಸ್ವರೂಪದ ಒಂದು ಬೆಳವಣಿಗೆ ಆಗುತ್ತಿದೆ. ಮಾನ್ಯ ಸರ್ವೋಚ್ಚ ನ್ಯಾಯಾಲಯ ನೀಡಿರುವಂತಹ ಆದೇಶವನ್ನಿಟ್ಟುಕೊಂಡು, ಇದರ ಬಗ್ಗೆ ನಾನು ವಿಶೇಷವಾದಂತಹ ಒಂದು ಸಭೆಯನ್ನು ಕರೆದು, ಇದನ್ನು ಯಾವ ರೀತಿ ಮಾಡಬೇಕು? ಇದರ ಮೂಲ ಉದ್ದೇಶವೇನೆಂದರೆ, ಜಮೀನನ್ನು ಕಳೆದುಕೊಂಡಂತಹ ರೈತರಿಗೆ ಉತ್ತಮವಾದಂತಹ ಪರಿಹಾರವನ್ನು ಕೊಡಬೇಕು. ಎರಡನೆಯದಾಗಿ, ಕನಿಷ್ಠ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಲಭ್ಯವಿರುವಂತಹ ಜಾಗದಲ್ಲಿ, ನಿವೇಶನವನ್ನು ಮಾಡಿ, ಅದನ್ನು ಬೆಂಗಳೂರು ಜನತೆಗೆ ಕೊಡಬೇಕು. ಅದರಿಂದ ಬರುವಂತಹ ಹಣದಿಂದ ಒಟ್ಟು ಅಭಿವೃದ್ಧಿಯನ್ನು ಮಾಡಬೇಕು. ಸುಮಾರು ಮೂರು ಸಾವಿರ ಅಥವಾ ಎರಡು ಸಾವಿರ ಎಕರೆ ಜಾಗ ಇದೆ ಎಂಬುದರ ಬಗ್ಗೆ ನೋಡಿ, ಅದರ ಅಭಿವೃದ್ಧಿಯನ್ನು ಮಾಡಬೇಕು. ಮಾನ್ಯ ಸರ್ವೋಚ್ಚ ನಾಯಾಲಯವು ನೀಡಿರುವ guidelines ನಲ್ಲಿಯೇ ಇದೆಲ್ಲವನ್ನು ಕೂಡ ಮಾಡಬೇಕಾಗಿದೆ. ಈ ಕಮಿಟಿಯಲ್ಲಿರುವ ಮೂರು ಜನ ಸದಸ್ಯರ confidence ನಲ್ಲಿ ತೆಗೆದುಕೊಂಡು ಮಾಡಬೇಕಾಗುತ್ತದೆ. ಆ ಮೂರು ಜನ ಸದಸ್ಯರನ್ನೊಳಗೊಂಡಂತೆ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಮತ್ತು ನಗರಾಭಿವೃದ್ಧಿ ಪ್ರಾಧಿಕಾರದ ಅಧಿಕಾರಗಳನ್ನು ಮತ್ತು ಆ ಭಾಗದಲ್ಲಿರುವ ಜನ ಪ್ರತಿನಿಧಿಗಳು ಹಾಗೂ ಮಾನ್ಯ ಸದಸ್ಯರನ್ನು ಕರೆದು, ಇದರ ಬಗ್ಗೆ ಒಂದು ಸಭೆಯನ್ನು ಮಾಡಿ, ಇದಕ್ಕೊಂದು ದಾರಿಯನ್ನು ಹುಡುಕೋಣ. ಸಾಮಾನ್ಯವಾಗಿ ಸರ್ಕಾರ ಕಾನೂನಾತ್ಮಕವಾಗಿ ತೆಗೆದುಕೊಳ್ಳಬೇಕಾದ ನಿರ್ಧಾರಕ್ಕಿಂತ, ಸ್ವಲ್ಪ ಜಟಿಲವಾಗಿರುವಂತಹದ್ದು. ಆದ್ದರಿಂದ ಇದೆಲ್ಲವನ್ನೂ ಇಟ್ಟುಕೊಂಡು, ಮಾನ್ಯ ಸರ್ವೋಚ್ಚ ನ್ಯಾಯಾಲಯ ಹಾಕಿರುವ frame work ನಲ್ಲಿ ಒಂದು ಸಭೆಯನ್ನು ಮಾಡಿ, ಇದಕ್ಕೊಂದು ಪರಿಹಾರವನ್ನು ಕೊಡೋಣ.

**ಶ್ರೀ ಎಂ. ನಾರಾಯಣಸ್ವಾಮಿ (ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ನಾನು ನಿಜವಾಗಲೂ ಕೂಡ ಅಪೇಕ್ಷೆ ಪಟ್ಟಿದ್ದೆ. ಆ ಅಪೇಕ್ಷೆಗೆ ತಕ್ಕಂತೆ ಮಾನ್ಯ ಮುಖ್ಯಮಂತ್ರಿಯವರು ಸ್ಪಂದಿಸಿದ್ದಾರೆ. ಅವರಿಗೂ ನಿಜವಾಗಲೂ 'hats off' ಹೇಳುತ್ತೇನೆ. ಅವರು ಮುಂದೆ ಸಭೆ ಮಾಡುವಾಗ, ನಮ್ಮನ್ನು ಕರೆಯುತ್ತೇವೆಂದು ಹೇಳಿದ್ದಾರೆ. ರೈತ ಜನರು ಆಸ್ತಿ-ಪಾಸ್ತಿಗಳನ್ನು ಕಳೆದುಕೊಂಡಿದ್ದಾರೆ. ಅವರನ್ನು ಈ ಸಭೆಗೆ ಕರೆದುಕೊಂಡು ಬರುವುದಕ್ಕೆ ಆಹ್ವಾನ ನೀಡಿದರೆ, ಅವರ ಜೊತೆಯಲ್ಲಿ ಒಂದು ಸಭೆ ಮಾಡಿದರೆ ಒಳ್ಳೆಯದು.

**ಶ್ರೀ ಬಸವರಾಜ ಬೊಮ್ಮಾಯಿ:-** ಆ ರೀತಿ ಮಾಡುವುದಕ್ಕಾಗುವುದಿಲ್ಲ. ಆ ಸಭೆಯಲ್ಲಿ ಹತ್ತು ಜನರು ಇರುವುದಿಲ್ಲ. ಅಲ್ಲಿ ಬಹಳಷ್ಟು ಜನರು ಇರುತ್ತಾರೆ. ನಮ್ಮನ್ನು ಸಭೆಗೆ ಕರೆಯಲಿಲ್ಲ ಎನ್ನುವ ಪ್ರಶ್ನೆ ಬರುತ್ತದೆ. ಬರೀ ಹತ್ತು ಜನರು ಏಕೆ? ಆದ್ದರಿಂದ, ತಾವು ಒಂದು ಕೆಲಸ ಮಾಡಿ. ಆ ಸಭೆಗೆ ಯಾರ ಅವಶ್ಯಕತೆಯಿದೆಯೋ, ಅವರನ್ನು ಕರೆಯುತ್ತೇನೆ. ತಾವು ಹತ್ತು ಜನರನ್ನು ನನಗೆ ಭೇಟಿ ಮಾಡಿಸುವುದಾದರೆ, memorandum ಅನ್ನು ತೆಗೆದುಕೊಂಡು ಪ್ರತ್ಯೇಕವಾಗಿ ಭೇಟಿ ಮಾಡಿಸಿ. ಅವರ ಅಹವಾಲುಗಳನ್ನು ಕೇಳುತ್ತೇನೆ.

**ಶ್ರೀ ಎಂ. ನಾರಾಯಣಸ್ವಾಮಿ:-** ತಮಗೆ ಧನ್ಯವಾದಗಳು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಆ) ವಿಷಯ: ಸರ್. ಎಂ. ವಿಶ್ವೇಶ್ವರಯ್ಯ 2ನೇ ಹಂತ ಬಡಾವಣೆ ರಚನೆಗಾಗಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಬೆಂಗಳೂರು ಉತ್ತರ ತಾಲ್ಲೂಕಿನ ಯಶವಂತಪುರ ಹೋಬಳಿಯ ಉಲ್ಲಾಳ ಗ್ರಾಮದಲ್ಲಿ ವಶಪಡಿಸಿಕೊಂಡಿರುವ ಜಮೀನುಗಳ ಭೂ ಮಾಲೀಕರಿಗೆ ಪರಿಹಾರ ನೀಡದಿರುವ ವಿಷಯದ ಕುರಿತು.**

------

**ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಿಯಮ 330 ರ ಅಡಿಯಲ್ಲಿ ಬಂದಿರುವಂತಹ ಸರ್. ಎಂ. ವಿಶ್ವೇಶ್ವರಯ್ಯ ಮುಂದುವರೆದ ಬಡಾವಣೆಗೆ ದಿನಾಂಕ 14 ನೇ ಡಿಸೆಂಬರ್ 2001 ರಲ್ಲಿ ಅಧಿಸೂಚನೆ 4(1) ಅನ್ನು ಹೊರಡಿಸಿರುತ್ತಾರೆ. ಇದಾದ ನಂತರ ದಿನಾಂಕ 30.10.2002 ರಲ್ಲಿ ಅಧಿಸೂಚನೆ 6(1) ಅನ್ನು ಹೊರಡಿಸಿರುತ್ತಾರೆ. ಇದರಲ್ಲಿ ಬಹಳಷ್ಟು ಭೂ ಮಾಲೀಕರು ಮಾನ್ಯ ನ್ಯಾಯಾಲಯದ ಮೊರೆ ಹೋಗುತ್ತಾರೆ. ಯಾರೂ ಯಾರು ಯಾರು ಈ ತೋಟ, ನರ್ಸರಿ ಇರುವಂತಹವರು, ಅಂತಹವರನ್ನು ಬಿಡಬೇಕು ಎಂದು ಮಾನ್ಯ ನ್ಯಾಯಾಲಯದಿಂದ ಆದೇಶವಾಗುತ್ತದೆ. ಅದರಂತೆ, ಮಾನ್ಯ ನ್ಯಾಯಾಲಯವು ದಿನಾಂಕ 30.09.2004 ರಂದು ತೀರ್ಪನ್ನು ಕೊಟ್ಟು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರಿಗೆ ನಿರ್ದೇಶವನ್ನು ಕೊಡುತ್ತದೆ. ಈ ವಿಷಯಕ್ಕೆ ಸಂಬಂಧಪಟ್ಟಂತೆ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ದಿನಾಂಕ 27.08.2005 ರಂದು ಬೋರ್ಡ್ ಮೀಟಿಂಗ್‌ನ್ನು ಮಾಡುತ್ತಾರೆ. ಮಾನ್ಯ ಉಚ್ಚ ನ್ಯಾಯಾಲಯವು ನೀಡಿರುವ ಆದೇಶದಲ್ಲಿನ ಮಾರ್ಗಸೂಚಿಗಳನ್ನು ಇಟ್ಟುಕೊಂಡು, ಈ ಸರ್ವೆ ನಂಬರ್‌ಗಳಲ್ಲಿ ಈ ತರಹ ಏನು ಬಂದಿರುತ್ತವೆಯೋ, ಅವುಗಳನ್ನೆಲ್ಲಾ ಬಿಡಬೇಕೆಂದು ತೀರ್ಮಾನ ಮಾಡುತ್ತಾರೆ. ಅದರ ಜೊತೆಗೆ ಏನು ಹೇಳುತ್ತಾರೆಂದರೆ, ನಮ್ಮ ರಸ್ತೆಗೆ ಬೇಕಾಗುವಂತಹ ಜಾಗವನ್ನು ಉಳಿಸಿಕೊಳ್ಳುತ್ತೇವೆ, ಅದು ನಮ್ಮ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಬೇಕೆಂದು ಒಂದು ಠರಾವನ್ನು ಪಾಸು ಮಾಡಿಕೊಳ್ಳುತ್ತಾರೆ. ಠರಾವನ್ನು ಪಾಸು ಮಾಡಿಕೊಂಡು, ಈ ಜಮೀನಿನ ಮಾಲೀಕರುಗಳಿಗೆ ಅವರು ಎಲ್ಲದಕ್ಕೂ ನಿರಾಕ್ಷೇಪಣಾ ಪತ್ರವನ್ನು ಕೊಟ್ಟುಬಿಡುತ್ತಾರೆ. ನಿರಾಕ್ಷೇಪಣಾ ಪತ್ರವನ್ನು ಕೊಟ್ಟ ನಂತರ, ಈ ಭೂ ಸ್ವಾಧೀನ ಮಾಡಿದಂತಹ ಹಣವನ್ನು ಬ್ಯಾಂಕ್‌ಗೆ ಹಾಕಿಬಿಡುತ್ತಾರೆ. ಅದನ್ನು ಕೂಡ withdraw ಮಾಡಿಕೊಂಡುಬಿಡುತ್ತಾರೆ. ಅವರಿಗೆ ನಿರಾಕ್ಷೇಪಣಾ ಪತ್ರ ಕೊಟ್ಟುಬಿಡುತ್ತಾರೆ. ಅವರು ಹಾಕಿದಂತಹ ಹಣವನ್ನು ಕೂಡ withdraw ಮಾಡಿಕೊಂಡುಬಿಡುತ್ತಾರೆ. ಮಾನ್ಯ ಉಚ್ಚ ನ್ಯಾಯಾಲಯದ ನಿರ್ದೇಶನದಂತೆ, 48/1 ಗೆಜೆಟ್ ನೋಟಿಫಿಕೇಶನ್ ಮಾಡುವುದಕ್ಕೋಸ್ಕರ ದಿನಾಂಕ 22.06.2006 ರಂದು ಕಡತವನ್ನು ಸರ್ಕಾರಕ್ಕೆ ಕಳುಹಿಸುತ್ತಾರೆ. ಸರ್ಕಾರಕ್ಕೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಳುಹಿಸಿದ ನಂತರ, ಅಲ್ಲಿ ಕಳುಹಿಸುವಾಗ ಏನಾಗುತ್ತದೆ ಎಂದರೆ, ಕೆಲವೊಂದು ಜಮೀನುಗಳ ವಿಸ್ತೀರ್ಣದ ಬಗ್ಗೆ ಖಚಿತತೆ ಇರುವುದಿಲ್ಲ. ಒಂದು ಗುಂಟೆ ಅಥವಾ ನಾಲ್ಕು ಗುಂಟೆ ವ್ಯತ್ಯಾಸವಿರುತ್ತದೆ. ಸರ್ಕಾರ ಖಚಿತತೆಗೋಸ್ಕರ, ಪ್ರಾಧಿಕಾರಿಗಳಿಗೆ ಪತ್ರವನ್ನು ಬರೆಯುತ್ತಾರೆ. ಅವರು ಸುಮಾರು ಹತ್ತಾರು ಪತ್ರಗಳನ್ನು ಬರೆಯುತ್ತಾರೆ. ಇದಕ್ಕೆ ಉತ್ತರವೇ ಬರುವುದಿಲ್ಲ. ಕೊನೆಯದಾಗಿ, ಪ್ರಾಧಿಕಾರದ ಸಭೆಯ ಸಮಿತಿ ಏನೊಂದು ತೀರ್ಮಾನವನ್ನು ತೆಗೆದುಕೊಂಡಿದ್ದರು, ಅದರಂತೆ, ಈ ಸರ್ಕಾರದಿಂದ ಕೆಲವೊಂದು ಸರ್ವೆ ನಂಬರ್‌ಗಳನ್ನು ಬಿಟ್ಟಿದ್ದೇವೆ ಎಂದು ಅಧಿಸೂಚನೆಯನ್ನು ಹೊರಡಿಸುತ್ತಾರೆ. ಆದರೆ , ಶ್ರೀ ವಿ. ಕೃಷ್ಣಮೂರ್ತಿಯವರಿಗೆ ಸೇರಿದ ಜಮೀನಿನ ವಿಸ್ತೀರ್ಣದಲ್ಲಿ 14 ಗುಂಟೆಗಳ ವ್ಯತ್ಯಾಸವಿರುತ್ತದೆ. ಇದನ್ನು ಸರಿಪಡಿಸಿ ಎಂದು ಪ್ರಾಧಿಕಾರಕ್ಕೆ ಪತ್ರವನ್ನು ಬರೆಯುತ್ತಾರೆ. ಪ್ರಾಧಿಕಾರದವರು ಮಾಡಿ ಕಳುಹಿಸುವುದೇ ಇಲ್ಲ. 2010 ರಂದು ಇದ್ದಂತಹ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪನವರು ಇವರಿಗೆಲ್ಲಾ ಪರಹಾರವನ್ನು ಕೊಡಿ ಎಂದು, ಮತ್ತೆ ಅಧಿಸೂಚನೆ ಹೊರಡಿಸುವುದಕ್ಕೆ ಆದೇಶ ಮಾಡುತ್ತಾರೆ. ಆದೇಶ ಮಾಡಿದರೂ ಕೂಡ, ಈ ಒಂದು extent ವ್ಯತ್ಯಾಸವಾಗುತ್ತದೆ ಎಂಬ ಒಂದು ಕಾರಣಕ್ಕೆ ಆದೇಶವನ್ನು ಮಾಡುವುದಿಲ್ಲ. ಬರೀ ಪತ್ರ ವ್ಯವಹಾರವನ್ನೇ ಮಾಡಿಕೊಂಡಿರುತ್ತಾರೆ. ಅದರೆ ಇವರದು ಮಾತ್ರ ಮಾಡಿರುವುದಿಲ್ಲ. ಅವರು 2015 ರಲ್ಲಿ ಮಾನ್ಯ ನ್ಯಾಯಾಲಯದ ಮೊರೆ ಹೋಗುತ್ತಾರೆ. ನೋಡಿ ಸ್ವಾಮಿ, ನಮ್ಮಗೆ 2004 ರಲ್ಲಿ ಸರ್ಕಾರದ ಆದೇಶವಾಗಿದೆ. ನಮಗೆ ನಿರಾಕ್ಷೇಪಣಾ ಪತ್ರವನ್ನು ಕೊಟ್ಟುಬಿಟ್ಟು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಬಿಟ್ಟುಬಿಟ್ಟಿದ್ದಾರೆ. ಆದರೆ ರಸ್ತೆಗೆ ಏನೊಂದು ಜಾಗವನ್ನು ಉಪಯೋಗ ಮಾಡಿಕೊಂಡಿದ್ದಾರೆ, ಆ ಜಾಗಕ್ಕೆ ಪರಿಹಾರದ ಹಣವನ್ನು ಕೊಡುತ್ತಿಲ್ಲ. ಇವತ್ತಿನವರೆಗೂ ನಮ್ಮನ್ನು ಓಡಾಡಿಸುತ್ತಿದ್ದಾರೆ. ಅವರು 2015 ರಿಂದ 2016 ರಲ್ಲಿ ಇಲ್ಲ. ಈ ಕೂಡಲೇ ಅವರಿಗೆ ಪರಿಹಾರವನ್ನು ಕೊಡಬೇಕು. ಇವರಿಗೆ ಏಕೆ ಓಡಾಡಿಸುತ್ತಿದ್ದೀರಾ ನೀವು ಎಂದು ಹೇಳಿ, ಅವರು ತುಂಬಾ ಖಾರವಾಗಿ ಹೇಳುತ್ತಾರೆ. ಇವರು ಆಯಿತು ಎಂದು ಒಪ್ಪಿಕೊಂಡು ಸುಮ್ಮನೆ ಆಗುತ್ತಾರೆ. ಇವರಿಗೆ ಕೊಡಿ ಎಂದು ಆದೇಶವಾಗುತ್ತದೆ. ಮಾನ್ಯ ಸಭಾಪತಿಯವರೇ, ಅವರು 2016 ರಲ್ಲಿ ಈ ಆದೇಶದ ಮೇಲೆ ಅಪೀಲು ಹೋಗುತ್ತಾರೆ.

(ಮುಂದು)

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(945) 23.09.2021, 1.30, ಟಿಸಿಹೆಚ್-ಬಿಎನ್ಎಸ್ **(ಉಪ ಸಭಾಪತಿಯವರ ಉಪಸ್ಥಿತಿ)**

**ಶ್ರೀ ಪುಟ್ಟಣ್ಣ (ಮುಂದು):-**

ಈಗಾಗಲೇ ಕೋರ್ಟಿನಿಂದ ಎರಡು ಬಾರಿ ಆದೇಶವಾಗಿದೆ. ಅಧಿಕಾರಿಗಳೇನು ಹುಡುಗಾಟ ಆಡುತ್ತಿದ್ದೀರಾ, ನಿಮ್ಮನ್ನು ಜೈಲಿಗೆ ಹಾಕಬೇಕಾಗುತ್ತದೆಂದು ಹೇಳುತ್ತಾರೆ. ಕೊನೆಗೆ ಆಯಿತು ನಾವು ಅವರು ಕೊಡುವಂಥ ಪರಿಹಾರವನ್ನು ತೆಗೆದುಕೊಳ್ಳುತ್ತೇವೆಂದು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಮತ್ತು ಭೂಮಾಲೀಕರು ಸೇರಿಕೊಂಡು ಒಂದು Joint Memo ಹಾಕುತ್ತಾರೆ. ಆದರೆ ಅವರು ಏನೂ ಹೆಚ್ಚು-ಕಡಿಮೆ ಕೇಳುತ್ತಿಲ್ಲ. ಬಿಡಿಎ ನಲ್ಲಿ ಏನು ಪರಿಹಾರ ಕೊಡುವಂಥ ನಿಯಮಗಳಿವೆ, ಆ ನಿಯಮಗಳನ್ವಯ ಪರಿಹಾರ ಕೊಟ್ಟರೆ ಸಾಕು ಎಂದು ಕೇಳುತ್ತಿದ್ದಾರೆ. ಈಗಾಗಲೇ ಅವರಿಗೆ ಸುಮಾರು 73 ವರ್ಷವಾಗಿದೆ. ಅವರು ಇದಕ್ಕಾಗಿ ಈಗಾಗಲೇ ಸುಮಾರು 20 ವರ್ಷಗಳು ಕಳೆದಿದ್ದಾರೆ. ಈಗಾಗಲೇ ಎನ್ಒಸಿ ಕೊಟ್ಟಿದ್ದಾರೆ, ಆ ಜಮೀನುಗಳನ್ನೆಲ್ಲಾ ಮಾರಾಟವಾಗಿದೆ. ಆದರೆ ನೀವು ಏನು ಗೆಜೆಟ್ ನೋಟಿಫಿಕೇಷನ್ ಮಾಡಬೇಕಾಗಿತ್ತೋ ಅದನ್ನು ಮಾಡಿ. ಈ ಹಿಂದೆ ಮಾನ್ಯ ಮುಖ್ಯಮಂತ್ರಿಯಾಗಿದ್ದ ಸನ್ಮಾನ್ಯ ಬಿ.ಎಸ್.ಯಡಿಯೂರಪ್ಪನವರು ಸಹಿ ಮಾಡಿದ್ದಾರೆ. ಅವರು ಅದನ್ನು ಮಾಡಿಕೊಡಲಿ. ಮತ್ತೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ರಸ್ತೆಗೆ ಏನು ಜಮೀನು ಉಳಿಸಿಕೊಂಡಿದ್ದಾರೆ ಅದಕ್ಕೆ ಪರಿಹಾರ ಕೊಡಿ ಎಂದು ಕೇಳುತ್ತಿದ್ದಾರೆ. ಅವರ ಬೇಡಿಕೆ ಇಷ್ಟೆ. ಕೋರ್ಟ್‌ಗೆ ಮೆಮೋ ಏನು ಸಬ್‌ಮಿಟ್ ಮಾಡಿದ್ದಾರೋ ಅದು ನಮ್ಮ ಗಮನಕ್ಕೇ ಬರಲಿಲ್ಲವೆಂದು ಸರ್ಕಾರಿ ವಕೀಲರು ಹೇಳಿದರು. ಬಿಡಿಎ ನವರು ಸರ್ಕಾರದ ಗಮನಕ್ಕೆ ತರಲು ಕಳುಹಿಸಿದರೆ ಸರ್ಕಾರ recommend ಮಾಡಿ, Advocate General ಗೆ ಕಳುಹಿಸುತ್ತದೆ. Advocate General ರವರ ಕಡತ ಮೂರು ಸಾವಿರ ಪೇಜ್‌ಗಳಾಗಿದೆ. ಒಬ್ಬರು ಅನಕ್ಷರಸ್ಥರಸ್ಥ ಭೂ ಮಾಲೀಕರು ಈ ಮೂರು ಸಾವಿರ ಪೇಜ್‌ಗಳನ್ನು ಓದುವುದಕ್ಕಾಗುತ್ತದೆಯೇ. ಅದನ್ನು ಓದಿಕೊಂಡು ಹೋರಾಟ ಮಾಡುವುದಕ್ಕೆ ಆಗುತ್ತದೆಯೇ? ಆದರೆ ಈ ಸಂದರ್ಭದಲ್ಲಿ ಅಡ್ವೊಕೇಟ್ ಜನರಲ್‌ರವರು ಸದರಿ ಜಂಟಿ ಮೆಮೋ ಸಲ್ಲಿಸಲು ಕಾರಣಗಳನ್ನು ಮತ್ತು ಸದರಿ ಪ್ರಸ್ತಾವನೆ ಹೇಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಅನುಕೂಲಕರವಾಗಿರುತ್ತದೆ ಎಂದು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ವಿವರಣೆ ಪಡೆಯುವುದು ಸೂಕ್ತ ಅಭಿಪ್ರಾಯಪಟ್ಟಿರುತ್ತಾರೆ. ಹಾಗಾದರೆ ಬಿ.ಡಿ.ಎ. ನಲ್ಲಿರತಕ್ಕಂಥವರೆಲ್ಲಾ ಮೂರ್ಖರೆ. ಅವರೇನು ದನ ಕಾಯುವವರೇ. ಅವರು ಕೂಡ ಕಾನೂನು ಪಂಡಿತರೆ. ಇವರು ಓದದೇ ಇರತಕ್ಕಂಥದ್ದನ್ನು ಭೂಮಾಲೀಕರು ಓದುವುದಕ್ಕೆ ಆಗುತ್ತದೆಯೇ? ಅಲ್ಲಿ ಇರತಕ್ಕಂಥವರು ಕೂಡ ಐಎಎಸ್ ಅಧಿಕಾರಿಗಳು ಹಾಗೂ ವಕೀಲರು. ಆದರೆ ಈ ಕಂಬ ಸುತ್ತಿಸುವಂಥ ಕೆಲಸವನ್ನು ಒಬ್ಬರಲ್ಲಾ ಒಬ್ಬರು ಅಧಿಕಾರಿಗಳು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡುತ್ತಿದ್ದಾರೆ. ಅದಕ್ಕೆ ದಯಮಾಡಿ ನಾನು ತಮ್ಮ ಮುಖಾಂತರ ಮನವಿ ಮಾಡುವುದೇನೆಂದರೆ, ಈ ಕೂಡಲೇ ಶ್ರೀ ಕೃಷ್ಣಮೂರ್ತಿ ಎಂಬುವರ ಭೂಮಿಯನ್ನು ಏನು ಉಪಯೋಗ ಮಾಡಿಕೊಂಡಿದ್ದಾರೆ, ಅದಕ್ಕೆ ಪರಿಹಾರವನ್ನು ಕೊಡಬೇಕು. ಅವರೇನು ಹೆಚ್ಚಿಗೆ ಕೇಳುತ್ತಿಲ್ಲ. ಬಿಡಿಎ ನಿಯಮದನ್ವಯವೇ ಪರಿಹಾರ ಕೊಡಿ ಎಂದು ಕೇಳುತ್ತಿದ್ದಾರೆ. ಈಗಾಗಲೇ ಅವರಿಗೆ ಸುಮಾರು 21 ವರ್ಷಗಳಿಂದ ಪರಿಹಾರ ಸಿಕ್ಕಿಲ್ಲ. ಕೊನೆಪಕ್ಷ ಈಗಲಾದರೂ ಪರಿಹಾರ ಕೊಡಬೇಕು. ಅವರ ತಿಥಿಗೆ ಕೊಡಬೇಡಿ. ಅವರು ಬದುಕಿದ್ದಾಗಲೇ ಪರಿಹಾರ ಕೊಡಿ. ಇಲ್ಲವೆಂದರೆ ಅವರು ಏನು ಮಾಡಬೇಕು? ಅವರು ಏನು ಮಾಡುವುದಕ್ಕೆ ಸಾಧ್ಯವಿದೆ. ಎ.ಜಿ.ಯವರು ಆ ರೀತಿ ಬರೆದು ಸರ್ಕಾರಕ್ಕೆ ಕೊಟ್ಟಿದ್ದಾರೆ. ಸರ್ಕಾರದವರು ಬಿಡಿಎಗೆ ದಿನಾಂಕ 10.06.2020ರಂದು ಪತ್ರ ಬರೆದಿದ್ದಾರೆ. ಇವರೇನು ಪರಿಹಾರ ಕೇಳುತ್ತಿದ್ದಾರೆ ಅದಕ್ಕೆ ಕಂಡಿಷನ್ ಹಾಕುತ್ತಾರೆ. ಹೇಗೆ ಉಪಯೋಗವಾಗಿದೆ ಎಂದು ಬರೆದಿರುವವರು ಮೂರ್ಖರೇ. ಎ.ಜಿ.ಯವರು ಬರೆದು ಮೂರು ತಿಂಗಳಾಗಿದೆ, ಇದುವರೆಗೂ ಕೂಡ ಉತ್ತರ ಬಂದಿಲ್ಲ. ಅವರು ಇನ್ನೂ ಎಷ್ಟು ವರ್ಷಗಳು ಸುತ್ತುತ್ತಿರಬೇಕು? ಅದಕ್ಕೆ ಮಾನ್ಯ ಸಭಾಪತಿಯವರೇ, ದಯಮಾಡಿ ನಾನು ತಮ್ಮಲ್ಲಿ ಮನವಿ ಮಾಡುವುದೇನೆಂದರೆ, ಆ ರೈತರು ಭೂಮಿಯನ್ನು ಕಳೆದುಕೊಂಡಿದ್ದಾನೆ ಅವರ ಭೂಮಿಯನ್ನು ಸರ್ಕಾರ ಉಪಯೋಗ ಮಾಡಿಕೊಂಡಿದೆ. ಬಿಡಿಎ ನವರು ಈ ಕೂಡಲೇ ಸರ್ಕಾರ ಅವರಿಗೆ ಪರಿಹಾರ ಕೊಡಬೇಕು. ಈ ಕೂಡಲೇ ಗೆಜೆಟ್ ನೋಟಿಫಿಕೇಷನ್ ಮಾಡಬೇಕು ಎಂದು ಸನ್ಮಾನ್ಯ ಮುಖ್ಯಮಂತ್ರಿಗಳೇ ಸಹಿ ಮಾಡಿದ್ದಾರೆ. ಈಗ ಜಂಟಿ ಮೆಮೊ ಕೂಡ ಕೋರ್ಟ್‌ಗೆ ಸಲ್ಲಿಸಿದ್ದಾರೆ. ಸರ್ಕಾರ ಜಂಟಿ ಮೆಮೊ ಹಾಕಿರುವುದು ಸರಿ ಇದೆಯೆಂದು ಇತ್ಯರ್ಥಪಡಿಸಿ. ಇಲ್ಲವೆಂದರೆ, ಅವರಿಗೆ ಏನು ಪರಿಹಾರ ಕೊಡಬೇಕಿದೆಯೋ ಆ ಪರಿಹಾರವನ್ನು ಕೊಡಬೇಕು ಎನ್ನುವಂಥದ್ದನ್ನು ನಾನು ತಮ್ಮ ಮುಖಾಂತರ ಸನ್ಮಾನ್ಯ ಮುಖ್ಯಮಂತ್ರಿಯವರಿಗೆ ಮನವಿಯನ್ನು ಮಾಡುತ್ತಿದ್ದೇವೆ.

**ಶ್ರೀ ಜೆ.ಸಿ.ಮಾಧುಸ್ವಾಮಿ (ಸಣ್ಣ ನೀರಾವರಿ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಮಾನ್ಯ ಮುಖ್ಯಮಂತ್ರಿಗಳ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಪುಟ್ಟಣ್ಣನವರು ಬರವಣಿಗೆಯಲ್ಲಿ ಕೊಟ್ಟಿರುವುದನ್ನು ನೋಡಿದ್ದೇನೆ. ನಾನು ಉತ್ತರ ಹೇಳುವುದಕ್ಕೆ ಮೊದಲು ಒಂದೇ ಒಂದು ಮಾತನ್ನು ಕಾನೂನು ಸಚಿವನಾಗಿ ಹೇಳುವುದಕ್ಕೆ ಬಯಸುತ್ತೇನೆ. Constitutional Body ಗಳನ್ನು ನಾವು ಆ ರೀತಿ ಅವಹೇಳನಕಾರಿಯಾಗಿ ಸಭೆಗಳಲ್ಲಿ ಮಾತನಾಡಬಾರದು. ಎ.ಜಿ. ಒಂದು Constitutional Body. ಅವರು opinion ಕೊಡಬೇಕೆಂದರೆ ಅದಕ್ಕೆ ಪೂರಕವಾದ ಮಾಹಿತಿಗಳನ್ನು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಒದಗಿಸಬೇಕು. ಇಲ್ಲದಿದ್ದರೆ ನಾವು opinion ಕೊಡುವುದಕ್ಕೆ ಆಗುವುದಿಲ್ಲವೆಂದು ಹೇಳಿರುವುದನ್ನು ಮಾನ್ಯ ಪುಟ್ಟಣ್ಣನವರು ಆ ರೀತಿ ಭಾವಿಸಬಾರದು.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರೇ, ನಾನು ಅವರ ಬಗ್ಗೆ ಏನೂ ಮಾತನಾಡಿಲ್ಲ. ನಾನು ಏನು ಹೇಳುವುದೇನೆಂದರೆ ಅವರು ಕೊಟ್ಟಿದ್ದಾರೆಲ್ಲಾ, ಅವರ ಮೇಲೆ ಕ್ರಮ ಕೈಗೊಳ್ಳಬೇಕೇ ಹೊರತು, ಪಾಪ, ಆ ರೈತನ ಹೊಟ್ಟೆ ಮೇಲೆ ಹೊಡೆದ್ದರೆ ಏನಾಗುತ್ತದೆ? ಒಂದು ವೇಳೆ ಅವರು ತಪ್ಪು ಮಾಡಿದ್ದರೆ ಅವರ ಮೇಲೆ ಕ್ರಮ ಕೈಗೊಳ್ಳಲಿ. ಆದರೆ ಆ ರೈತ ಏನು ಮಾಡುತ್ತಾನೆ. ಮಾನ್ಯ ಸಚಿವರೇ ನನ್ನ ಕಳಕಳಿ ಅಷ್ಟೇ. ನಾನು ಎ.ಜಿ.ಯವರು ಹಾಗೂ ಅಧಿಕಾರಿಗಳದ್ದು ಹೇಳುತ್ತಿಲ್ಲ. ಆದರೆ victim ಆ ರೈತ.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ಆಯ್ತು ಅದನ್ನು ಅಲ್ಲಿಗೇ ಬಿಟ್ಟುಬಿಡುತ್ತೇನೆ. ಸರ್.ಎಂ.ವಿಶ್ವೇಶ್ವರಯ್ಯ ಬಡಾವಣೆ ನಿರ್ಮಾಣ ಮಾಡಬೇಕೆಂದು ಬಿಡಿಎ ರವರು ನಿರ್ಧಾರ ತೆಗೆದುಕೊಂಡು 2001ರಲ್ಲಿ 4(1) Preliminary Notification ಮಾಡಿ, ಆಮೇಲೆ 6(1) Final Notification ಮಾಡಿ, ಆಗ ಹಣವನ್ನೂ ಕೂಡ ಡೆಪಾಸಿಟ್ ಮಾಡಿದ್ದರು. Land owners ಕೋರ್ಟ್‌ಗಳಿಗೆ ಹೋಗಿ, ಕೋರ್ಟ್‌ನಿಂದ ಸೂಚನೆ ಪಡೆದುಕೊಂಡು, ಆ ನೋಟಿಫಿಕೇಷನ್‌ನ್ನು ರದ್ದುಪಡಿಸಿದ ನಂತರ ನಾವು ಡೆಪಾಸಿಟ್ ಹಣವನ್ನು withdraw ಮಾಡಿಕೊಂಡೆವು. ಆಮೇಲೆ ಮತ್ತೆ ಮತ್ತೆ ಈ ಪ್ರಕರಣಗಳಲ್ಲಿ ನಾವು ಮತ್ತು ಭೂಮಾಲೀಕರು ಕುಳಿತುಕೊಂಡು ಅವರ ಜಾಗಗಳು ಬಿಬಿಎಂಪಿ ಮತ್ತು ಕಂದಾಯ ವ್ಯಾಪ್ತಿಯೊಳಗೆ ಬರುತ್ತದೆ, ಭೂಪರಿರ್ತನೆ ಆಗಿದೆ. 2018 ರಲ್ಲಿ ಎರಡು ತಿಂಗಳಿನೊಳಗೆ ಭೂಮಾಲೀಕರಿಗೆ ಮಾರುಕಟ್ಟೆ ದರ ದಂತೆ ಪರಿಹಾರ ನೀಡುತ್ತೇವೆ ಎಂದು ಜಂಟಿ ಮೆಮೊ ಹಾಕಿದ್ದೇವೆ. ಅದಾದ ನಂತರ ಉಲ್ಲಾಳ ಗ್ರಾಮದ ಸರ್ವೇ ನಂ. 14ರಲ್ಲಿ 3 ಎಕರೆ, ಸರ್ವೇ ನಂ. 15ರಲ್ಲಿ 1.31 ಎಕರೆ, ಸರ್ವೇ ನಂ. 16ರಲ್ಲಿ 1.12 ಎಕರೆ, ಸರ್ವೇ ನಂ. 17ರಲ್ಲಿ 1.11 ಎಕರೆ, ಸರ್ವೇ ನಂ. 18ರಲ್ಲಿ 1.22 ಎಕರೆ, ಸರ್ವೇ ನಂ. 19ರಲ್ಲಿ 35 ಗುಂಟೆ, ಸರ್ವೇ ನಂ. 20 ರಲ್ಲಿ 1.13 ಎಕರೆ, ಸರ್ವೇ ನಂ. 21ರಲ್ಲಿ 8.15 ಎಕರೆ, ಒಟ್ಟು ನಾವು ಸುಮಾರು 28 ಎಕರೆ ಜಮೀನನ್ನು ಕೇಳಿದ್ದೆವು. ಅದು ಕೂಡ ತಕರಾರಾಗಿದೆ. ಕೊನೆಗೆ ನಾವು ಇಡೀ ಜಾಗವನ್ನು ಬೇಡ ಎಂದು ನಿರ್ಧಾರ ತೆಗೆದುಕೊಂಡು ಮತ್ತೆ ಮಾಡಿದ್ದಂಥ deposit ನ್ನು withdraw ಮಾಡಿ, ಕೊನೆಗೆ 4.33 ಎಕರೆಯನ್ನು ರೋಡ್ ಮತ್ತು ಚರಂಡಿಗೆ ಪ್ರಾಧಿಕಾರದಿಂದ ಉಪಯೋಗ ಮಾಡಿದ್ದೇವೆ ಎಂದು; ಅದರಲ್ಲಿ ನಮ್ಮದು 24 ಗುಂಟೆ ಜಮೀನು ಖರಾಬ್ ಲ್ಯಾಂಡ್ ಇದೆ. ಇನ್ನುಳಿದ 4.09 ಎಕರೆಗೆ ಭೂಪರಿಹಾರವನ್ನು ಕೊಡುತ್ತೇವೆಂದು ನಾವು Joint Memo ಕೋರ್ಟ್‌ಗೆ ಸಲ್ಲಿಸಿದ್ದೇವೆ. ಈ Joint Memo ಸಲ್ಲಿಸಿದ ನಂತರ ಸಾಕಷ್ಟು technical problems ಬಂತು. ಅಪೀಲ್ ನಂ.4563/16ರ ಅಂತಿಮ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆದೇಶಕ್ಕೆ ಒಳಪಟ್ಟು ಭೂಮಾಲೀಕರಿಗೆ ಪರಿಹಾರ ಕೊಡುತ್ತೇವೆ. ನಾವು ಕೋರ್ಟ್ ಮುಂದೆ ಅಪೀಲ್‌ನಲ್ಲಿರುವುದು ಏನಾದರೂ ತೀರ್ಮಾನವಾದರೆ ಕೊಡುತ್ತೇವೆಂದು ಹೇಳಿದ್ದೇವೆ. ಆದರೆ ಈವರೆಗೆ ನ್ಯಾಯಾಲಯದಿಂದ case final ಆಗಿಲ್ಲ. ಈ ಜಂಟಿ ಮೆಮೊವನ್ನು ಪ್ರಾಧಿಕಾರ ಸರ್ಕಾರಕ್ಕೆ ಕೊಟ್ಟಿದೆ. ಈಗ ಮಾನ್ಯ ಪುಟ್ಟಣ್ಣನವರು particularly, ಶ್ರೀ ಕೃಷ್ಣಮೂರ್ತಿಯವರ ಕೇಸ್ ಒಂದಕ್ಕೆ ಅಡಚಣೆಯಾಗಿದೆ ಎಂದರೆ, ನಾನು ಬಿಡಿಎ ಆಯುಕ್ತರಿಗೆ ಹೇಳಿ, ಶ್ರೀ ಕೃಷ್ಣಮೂರ್ತಿಯವರನ್ನೂ ಜೊತೆ ಕೂರಿಸಿ, ಅವರದ್ದು ಏನಾದರೂ genuine case ಇದ್ದರೆ, ಅದನ್ನು ಬಗೆಹರಿಸುವುದಕ್ಕೆ Government will take all necessary action ಎಂದು ಹೇಳುತ್ತಿದ್ದೇನೆ. ನಮಗೆ ಈಗ ಈ ರೀತಿ extent, ಅಳತೆ ಸಮರ್ಪಕವಾಗಿ ಆಗದೇ Authority ಕೋರ್ಟ್ ಮುಂದೆ appeal ಇರುವುದರಿಂದ ನಿರ್ದಾಕ್ಷಿಣ್ಯವಾಗಿ ನಾನು ಹೀಗೆ ಮಾಡುತ್ತೇವೆಂದು ಹೇಳುವ ಸ್ಥಿತಿಯಲ್ಲಿ ಸರ್ಕಾರ ಇಲ್ಲ. Particularly ಯಾವುದೋ ಒಂದು individual ಕೇಸ್‌ನಲ್ಲಿ ಮಾನ್ಯ ಪುಟ್ಟಣ್ಣನವರಿಗೆ ನೋವಾಗಿದ್ದರೆ, ನಾನು ಅದನ್ನು ವೈಯಕ್ತಿಕವಾಗಿ ಗಮನಹರಿಸಿ, ಬಿಡಿಎ ನವರನ್ನು ಕರೆಸಿ sort out ಮಾಡಿಕೊಡುತ್ತೇನೆ.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ತುಂಬಾ ಒಳ್ಳೆಯ ಉತ್ತರವನ್ನು ಕೊಟ್ಟಿದ್ದಾರೆ. ಅದಕ್ಕೆ ನಾನು ಅವರಿಗೆ ಅಭಿನಂದಿಸುತ್ತೇನೆ. ಆದರೆ ಒಂದು ವಿಚಾರ ಏನೆಂದರೆ, ಈಗಾಗಲೇ extent ದ್ದು ಪ್ರಶ್ನೆ ಇಲ್ಲ. ಈಗಾಗಲೇ ಅವರು ಜಂಟಿ ಸರ್ವೇ ಮಾಡಿ, ಜಂಟಿ ಮೆಮೊವನ್ನು ಸರ್ಕಾರಕ್ಕೆ ಸಲ್ಲಿಸಿದ್ದಾರೆ. ಶ್ರೀ ಕೃಷ್ಣಮೂರ್ತಿಯವರ ಹೆಸರನ್ನು ಸೇರಿಸಿ ಹಾಕಿದ್ದಾರೆ. ಆದರೆ ಮತ್ತೆ ಇನ್ನೇನಾದರೂ ಪರಿಹಾರ ಮಾಡುತ್ತೇನೆ ಅಥವಾ ಇನ್ನೇನೋ ಮತ್ತೆ ನಾನು ಕೇಳುತ್ತೇನೆ ಎನ್ನುತಕ್ಕಂಥ ಪ್ರಶ್ನೆ ಇಲ್ಲವೇ ಇಲ್ಲ. Presently, ತೀರ್ಮಾನವಾಗಿದೆ. ಆದರೆ ಅದನ್ನು ಎಷ್ಟು ದಿನಗಳಲ್ಲಿ ಮಾಡುತ್ತಾರೆ. ನನ್ನ ಪ್ರಶ್ನೆ clear cut ಇದೆ. ಈಗ ಮಾನ್ಯ ಸಚಿವರು ಮನಸ್ಸು ಮಾಡಿದರೆ ಒಂದು ದಿನದಲ್ಲಿ ಮಾಡಬಹುದು. ಅದಕ್ಕಾಗಿ ದಯಮಾಡಿ ನೀವು ಎಷ್ಟು ದಿನದಲ್ಲಿ ಮಾಡುತ್ತಾರೆ? ಒಂದು ವಾರದಲ್ಲಿ ಮಾಡಿ. ಆತ ಬದುಕಿರುವಾಗಲೇ ಪರಿಹಾರವನ್ನು ಕೊಡಿ. ದಯಮಾಡಿ ನಾನು ಮಾನ್ಯ ಸಚಿವರಲ್ಲಿ request ಮಾಡುತ್ತೇನೆ. ಮಾನ್ಯ ಸಚಿವರು ತುಂಬಾ ಒಳ್ಳೆಯ ಉತ್ತರವನ್ನು ಕೊಟ್ಟಿದ್ದಾರೆ. ಮಾನ್ಯ ಸಚಿವರಿಗೆ ಬಹಳ ಕಳಕಳಿ ಇದೆ. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದ್ದರಿಂದ ದಯಮಾಡಿ ಅವರಿಗೆ ಪರಿಹಾರ ಕೊಡಬೇಕು. ಅಧಿಕಾರಿಗಳು ಅವರಿಗೆ ತುಂಬಾ ತೊಂದರೆ ಕೊಡುತ್ತಿದ್ದಾರೆ.

**ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಪುಟ್ಟಣ್ಣನವರೇ, ಮಾನ್ಯ ಸಚಿವರಾದ ಮಾಧುಸ್ವಾಮಿಯವರು ವಕೀಲರಿದ್ದಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬಹಳ ಸ್ಪಷ್ಟವಾಗಿ submission ಕೇಳಿಸಿಕೊಂಡೆನು. ನನ್ನ ಹತ್ತಿರ ಕೂಡ ರೆಕಾರ್ಡ್ ಇದೆ. Additional Chief Secretary has written to the Government. ಅವರು ಬಿಡಿಎಗೆ ಬರೆದಿರುವ ಲೆಟರ್ ಕೂಡ ಇದೆ. It is admitted.

**(ಮುಂದು...)**

**(946)23.9.2021/1.40/ಎಂ.ಎಂ-ಬಿ.ಎನ್.ಎಸ್**

(ಉಪಸಭಾಪತಿಯವರ ಉಪಸ್ಥಿತಿ)

**ಶ್ರೀ ಎಸ್.ಎಲ್. ಭೋಜೇಗೌಡ (ಮುಂದು):-**

ಅವರ ಜಾಗವನ್ನು ನಾವು ರಸ್ತೆ ಮಾಡುವುದಕ್ಕೆ ಉಪಯೋಗ ಮಾಡಿಕೊಂಡಿರುವುದರಲ್ಲಿ it is undisputed. Extent ಕೂಡ undisputed. ಅದು ಕರಾಬು ಮಾತ್ರ. ಕರಾಬಿನಲ್ಲಿ ವಾಪಸ್ ಪ್ರಶ್ನೆ ಬರುತ್ತದೆ. ನಿಮಗೆ ಗೊತ್ತಿದೆ, ಕರಾಬ್ ಭೂಮಾಲೀಕ ಯಾರು ಇರುತ್ತಾನೆ ಅವನಿಗೆ ಸೇರುತ್ತದೆ. ಅದನ್ನು dispute ಮಾಡೋಣ ಬಿಡಿ. 04 ಎಕರೆ, 13 ಗುಂಟೆ ಎಂದು ನಿಮ್ಮ ಬಾಯಲ್ಲಿ ಬಂದಿದೆ, ಇದರಲ್ಲೂ ಸ್ಪಷ್ಟವಾಗಿ ಬಂದಿದೆ. 14 ರಿಂದ 23ನೇ ಸರ್ವೆ ನಂಬರ್‌ವರೆಗೆ ಅಫಿಡವಿಟ್ ಹಾಕಿದಿರಿ, Joint Memo ಹಾಕಿದ್ದಿರಿ, ಅಪರ ಮುಖ್ಯ ಕಾರ್ಯದರ್ಶಿಯವರು ಬಿ.ಡಿ.ಎ., ಗೆ ಬರೆದಿದ್ದಾರೆ. It is a dispute between BDA and Government. It is not a dispute between anybody else. ನೀವು ಅಲ್ಲಿ ಕ್ಲಿಯರ್ ಮಾಡಿಕೊಂಡರೆ ಮುಗಿಯುತ್ತದೆ. ಅಪೀಲು ಹಾಕಿರುವುದು ಬಿ.ಡಿ.ಎ.ನವರು.

**ಶ್ರೀ ಜೆ.ಸಿ. ಮಾಧುಸ್ವಾಮಿ (ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಮತ್ತು ಸಣ್ಣ ನೀರಾವರಿ ಸಚಿವರು):-** ಮಾನ್ಯ ಸಭಾಪತಿಯವರೇ, ಹೌದು. 04 ಎಕರೆ 33 ಗುಂಟೆಯಲ್ಲಿ 24 ಗುಂಟೆ ಕರಾಬ್ ಜಾತಾ ಕೊಡಬೇಕಾ, ಕರಾಬ್ ಸೇರಿಸಿ ಕೊಡಬೇಕೇ ಎಂಬುದು dispute ಆಯಿತು. ಅದನ್ನು ಅವರು ಮೆಮೋನಲ್ಲಿ ಒಪ್ಪಿಕೊಂಡಿದ್ದರೆ ಆಗುತ್ತಿತ್ತು.

**ಶ್ರೀ ಪುಟ್ಟಣ್ಣ:-** ಮಾನ್ಯ ಸಚಿವರೇ, ಅವರು ಒಪ್ಪಿಕೊಂಡಿದ್ದಾರೆ. ಇದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

**ಶ್ರೀ ಜೆ.ಸಿ. ಮಾಧುಸ್ವಾಮಿ**:- ಮಾನ್ಯ ಪುಟ್ಟಣ್ಣನವರೇ, ನನಗೆ ಮಾತನಾಡಲು ಬಿಡಿ. ಅವರು ಒಪ್ಪಿಕೊಂಡಿದ್ದರೆ ನಾನು ಕಾನೂನು ಸಚಿವನಾಗಿ ಆ ಅಪೀಲನ್ನು ವಾಪಸ್

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತೆಗೆದುಕೊಳ್ಳುತ್ತೇವೆ, ಅವರ ಹಣವನ್ನೂ settle ಮಾಡುತ್ತೇವೆ. ಇದನ್ನು 15 ದಿವಸ ಅಥವಾ ತಿಂಗಳೊಳಗೆ ಮಾಡುತ್ತೇವೆ.

**ಉಪಸಭಾಪತಿಯವರು**:- ಈಗ ಮಾನ್ಯ ವೈ.ಎ. ನಾರಾಯಣಸ್ವಾಮಿ.

**ಡಾ: ವೈ.ಎ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನಿಯಮ 330ರಡಿಯಲ್ಲಿ ;

**ಉಪಸಭಾಪತಿಯವರು**:- ಮಾನ್ಯ ವೈ.ಎ. ನಾರಾಯಣಸ್ವಾಮಿಯವರು ಇದರ ವಿಚಾರದಲ್ಲಿಯೇ ಮಾತನಾಡುತ್ತಿದ್ದಾರೆ.

**ಶ್ರೀ ಎಸ್.ಆರ್. ಪಾಟೀಲ್**:- ಮಾನ್ಯ ಸಭಾಪತಿಯವರೇ, ನಮ್ಮದು serial number ನಲ್ಲಿ......

**ಉಪಸಭಾಪತಿಯವರು**:- ನಂತರ ಮಾನ್ಯ ರಮೇಶ್‌ರವರು ಮಾತನಾಡುತ್ತಾರೆ.

**ಶ್ರೀ ಎಸ್.ಆರ್. ಪಾಟೀಲ್:-** ನಮ್ಮದು ಏನಾಗಿದೆ?

**ಉಪಸಭಾಪತಿಯವರು**:- ನಿಮ್ಮದು ಮೂರನೇ ಸರದಿ.

**ಶ್ರೀ ಎಸ್.ಆರ್. ಪಾಟೀಲ್**:- ಅಜೆಂಡಾದಲ್ಲಿ ನಮ್ಮದು ನಂ.1 ಇತ್ತು. Additional agenda ನಂತರ ಬರುತ್ತದೆ. Additional agenda will never overtake the original agenda.

**ಉಪಸಭಾಪತಿಯವರು**:- Regular ಅಜೆಂಡಾದಲ್ಲಿ ಮಾನ್ಯ ರಮೇಶ್‌ರವರು ಇದ್ದಾರೆ. ಮುಖ್ಯಮಂತ್ರಿಗಳಿದ್ದರು.

**ಶ್ರೀ ಎಸ್.ಆರ್. ಪಾಟೀಲ್:-** ಮುಖ್ಯಮಂತ್ರಿಗಳಿದ್ದರೆ ನಾನೇನೂ ಅದರ ಬಗ್ಗೆ ಚಕಾರ ಎತ್ತಿಲ್ಲ. ಇಲ್ಲಿ ಈಗ ಬೇರೆ ಮಂತ್ರಿಗಳು ಉತ್ತರ ಕೊಡುತ್ತಾರೆ. ಇಲ್ಲಿ ಬಿ.ಡಿ.ಎ., ವಿಷಯ ಇದೆ. ನಾವು ಸಹ ಕೇಳಬೇಕಲ್ಲವೇ? ಸಭಾಪತಿಗಳು ಕರೆದರೆ ಅವರ ಮಾತಿಗೆ ಗೌರವ ಕೊಟ್ಟು . . .

**ಡಾ: ವೈ.ಎ. ನಾರಾಯಣಸ್ವಾಮಿ**:- ಮಾನ್ಯ ಸಭಾಪತಿಯವರೇ, . . .

**ಉಪಸಭಾಪತಿಯವರು**:- ಮಾನ್ಯ ರಮೇಶ್‌ರವರೇ, ಕಡಿಮೆ ಸಮಯದಲ್ಲಿ ಮುಗಿಸಿ.

**ಶ್ರೀ ಎಸ್.ಆರ್. ಪಾಟೀಲ್**:- ಇದು 14 ಜಿಲ್ಲೆಗಳ ಸಹಕಾರ ಬ್ಯಾಂಕುಗಳಿಗೆ ಸಂಬಂಧಿಸಿದಂತಹ ಪ್ರಶ್ನೆ. ಎಂಟು ದಿನಗಳಿಂದ ಸತತವಾಗಿ ಬೆನ್ನು ಹತ್ತಿದ್ದೇವೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಉಪಸಭಾಪತಿಯವರು**:- ಮಾನ್ಯ ರಮೇಶ್‌ರವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಕೇಳುತ್ತಿದ್ದಾರೆ ನಾನು ಅದನ್ನು ತೆಗೆದುಕೊಳ್ಳಲೇ?

**ಶ್ರೀ ಪಿ.ಆರ್. ರಮೇಶ್:-** ಮಾನ್ಯ ಸಭಾಪತಿಯವರೇ, ಇದನ್ನು ಮುಗಿಸಿಬಿಡಿ.

**ಉಪಸಭಾಪತಿಯವರು**:- ನೀವು ಬೇಗ ಮುಗಿಸುತ್ತೀರಾ? Drag ಮಾಡುವುದಿಲ್ಲ ತಾನೇ?

**ಶ್ರೀ ಪಿ.ಆರ್. ರಮೇಶ್**:- ಮಾನ್ಯ ಸಭಾಪತಿಯವರೇ, ಬಹಳಷ್ಟು ಬೇಗ ಮುಗಿಸುತ್ತೇನೆ.

**ಶ್ರೀ ಎಸ್.ಆರ್. ಪಾಟೀಲ್:-** ಈಗ ರಮೇಶ್‌ರವರಿಗೆ ಸಹಕಾರ ಮಾಡಿ, ಅದು ಮುಗಿದ ಕೂಡಲೇ ನಮ್ಮ ವಿಷಯ ತೆಗೆದುಕೊಳ್ಳಿ.

**ಉಪಸಭಾಪತಿಯವರು**:- ಮಾನ್ಯ ರಮೇಶ್‌ರವರು drag ಮಾಡುತ್ತಾರೆ. ಹಾಗೆ ಮಾಡಬೇಡಿ. ಇವರಿಗೆ ಅವಕಾಶ ಕಡಿಮೆಯಾಗುತ್ತದೆ. ದಯವಿಟ್ಟು ಬೇಗ ಮುಗಿಸಿ.

**ಡಾ: ವೈ.ಎ. ನಾರಾಯಣಸ್ವಾಮಿ**:- ಮಾನ್ಯ ಸಭಾಪತಿಯವರೇ, . . .

**ಶ್ರೀ ಜೆ.ಸಿ. ಮಾಧುಸ್ವಾಮಿ**:- ಮಾನ್ಯ ಪಿ.ಆರ್ ರಮೇಶ್ ರವರ ಬಳಿ ಇರುವ material ನೋಡಿದರೆ ಸಾಯಂಕಾಲದವರೆಗೂ ಆಗುವ ಹಾಗಿದೆ.

**ಶ್ರೀ ಎಸ್.ಆರ್. ಪಾಟೀಲ್**:- ನಮ್ಮದನ್ನು ಇದಾದ ಮೇಲೆ ತೆಗೆದುಕೊಳ್ಳುವುದು. ನಮ್ಮ 330ಗೆ ನೀವೇ ಉತ್ತರ ಕೊಡಬೇಕು.

**ಶ್ರೀ ಎಸ್.ಟಿ. ಸೋಮಶೇಖರ್ (ಸಹಕಾರ ಸಚಿವರು):-** ಈಗ ಅಮೆಂಡ್‌ಮೆಂಟ್ ಇದೆ, ನಿನ್ನೆ ಆಗಿದೆ.

**ಶ್ರೀ ಬಿ.ಕೆ. ಹರಿಪ್ರಸಾದ್:-** ನಿಯಮ 330ರಲ್ಲಿ ಯಾವ ಯಾವ ವಿಷಯಗಳಿವೆ ಅದನ್ನು ದಯವಿಟ್ಟು ಮುಗಿಸಿ. ನಂತರ ಬೇರೆ ವಿಷಯಗಳನ್ನು ತೆಗೆದುಕೊಳ್ಳಿ.

**ಶ್ರೀ ಎಸ್.ಆರ್. ಪಾಟೀಲ್**:- ಮಾನ್ಯ ಸಭಾಪತಿಯವರೇ, ನಿಯಮ 330 ಮುಗಿಸಿಬಿಡಿ.

**ಶ್ರೀ ಎಂ. ನಾರಾಯಣಸ್ವಾಮಿ**:- ಮಾನ್ಯ ಸಭಾಪತಿಯವರೇ, ಇವತ್ತು ಕಾರ್ಯಕಲಾಪಗಳ ಪಟ್ಟಿಯನ್ನು ಕೊಟ್ಟಿದ್ದೀರಿ ಯಾವುದೂ ಮುಗಿಯುತ್ತಿಲ್ಲ. ದಯಮಾಡಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸರ್ಕಾರದ ಗಮನಕ್ಕೆ ತಂದು ಸದನವನ್ನು ಒಂದು ವಾರ ಹೆಚ್ಚಿಗೆ ನಡೆಸುವುದಕ್ಕೆ ಅವಕಾಶ ಮಾಡಿಕೊಡಿ.

**ಉಪಸಭಾಪತಿಯವರು:-** ಸರಿ ಅದನ್ನು ಬಿ.ಎ.ಸಿ., ಮೀಟಿಂಗ್‌ನಲ್ಲಿ ಯೋಚನೆ ಮಾಡುತ್ತಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಇ)** 2011ರ ಗೆಜೆಟೆಡ್ ಪ್ರೊಬೇಷನರ್ಸ್ 362 ಹುದ್ದೆಗಳ ನೇಮಕಾತಿಯ ವಿಳಂಬ ನೀತಿಗೆ ಕಾರಣವಾದ ಸಾಂವಿಧಾನಿಕ ಬಿಕ್ಕಟ್ಟಿನಿಂದ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಕಳೆದ 10 ವರ್ಷಗಳಿಂದ ಹಲವಾರು ಹುದ್ದೆಗಳು ಖಾಲಿ ಇರುವ ಪ್ರಯುಕ್ತ ಸಾರ್ವಜನಿಕರಿಗೆ ಹಾಗೂ ಸರ್ಕಾರದ ಆಡಳಿತಕ್ಕೆ ಧಕ್ಕೆ ಉಂಟಾಗಿರುವ ಹಿನ್ನೆಲೆಯಲ್ಲಿ ಸರ್ಕಾರದ ಮಟ್ಟದಲ್ಲಿ ಕೈಗೊಂಡ ಕ್ರಮಗಳು ಹಾಗೂ ನಿರ್ಧಾರಗಳ ಬಗ್ಗೆ ಹಾಗೂ ಈ ವಿಷಯದಲ್ಲಿ ಗೌರವಾನ್ವಿತ ರಾಷ್ಟ್ರಪತಿಗಳ ಕಚೇರಿಯ ಆದೇಶಗಳು ಮತ್ತು ಗೌರವಾನ್ವಿತ ರಾಜ್ಯಪಾಲರ ನಿರ್ದೇಶನಗಳ ಬಗ್ಗೆ.

- - - - -

**ಶ್ರೀ ಪಿ.ಆರ್. ರಮೇಶ್ (ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, 2011 ಕೆಪಿಎಸ್‌ಸಿ ಯ ವಿಷಯ ಕಾನೂನು ಮಂತ್ರಿಗಳು ಮತ್ತು ಮುಖ್ಯಮಂತ್ರಿಗಳೆಲ್ಲರಿಗೂ ಗೊತ್ತಿರುವ ವಿಷಯ. ನಾನು ಯಾವುದನ್ನು touch ಮಾಡಬೇಕೋ ಅದನ್ನು ಮಾತ್ರ touch ಮಾಡುತ್ತೇನೆ, ನಿಮಗೆ ಬೋರ್ ಮಾಡಿಸುವುದಿಲ್ಲ. ಸುಮ್ಮನೇ ಕಾಲಾವಕಾಶ ತೆಗೆದುಕೊಳ್ಳಬಾರದು. ಈ ವಿಷಯ 2011ರ ಬ್ಯಾಚ್ ಸುಮಾರು 2014ರಲ್ಲಿ ಈ ವಿಷಯವನ್ನು ಸರ್ಕಾರಕ್ಕೆ ಒಂದು advice ಮಾಡತಕ್ಕಂತಹದ್ದನ್ನು ಕೆ.ಪಿ.ಎಸ್.ಸಿ.ಯವರು ಮಾಡುತ್ತಾರೆ. ತದನಂತರ ಸರ್ಕಾರದವರು ಒಂದು ಆದೇಶವನ್ನು ಹೊರಡಿಸುತ್ತಾರೆ. ಅದು 2014ರಲ್ಲಿ ರೂಲ್ 11 ಮತ್ತು 12ರಲ್ಲಿ ಹೊರಡಿಸಿದಂತಹ ಆದೇಶ. ಆ ರೂಲ್ ಯಾವುದೆಂದರೆ, ಕೆ.ಪಿ.ಎಸ್.ಸಿ.ಕಳಗಿರುವ ಏನು ಅಭ್ಯರ್ಥಿಗಳಿರುತ್ತಾರೆ ಅವರು accept ಮಾಡುವಂತಹ ರೀತಿಯಲ್ಲಿ ಅಥವಾ ಮಾಡದೇ ಇರುವಂತಹದ್ದಕ್ಕೆ ಅನ್ವಯಿಸುವ ರೂಲ್ಸ್ ಇದು. It is individual rules. ಈ individual rules ನಲ್ಲಿ ತಾವು ತೆಗೆದುಕೊಳ್ಳುವ ಸರ್ಕಾರದ ಆದೇಶ ಏನೆಂದರೆ, ಸರ್ಕಾರವು ಸಿ.ಓ.ಡಿ. ಮಧ್ಯಂತರ ವರದಿ, ಅಡ್ವೊಕೇಟ್ ಜನರಲ್‌ರವರ ಅಭಿಪ್ರಾಯ, ಮತ್ತು ಕಾನೂನು ಇಲಾಖೆಯ ಅಭಿಪ್ರಾಯಗಳಲ್ಲಿ ಎಲ್ಲಾ ಅಂಶಗಳನ್ನೂ ಕೂಲಂಕುಷವಾಗಿ ಪರಿಶೀಲಿಸಿದೆ. ಆದ್ದರಿಂದ ಈ ಕೆಳಕಂಡ ಆದೇಶ ಎಂದು ಆದೇಶದಲ್ಲಿ ಸರ್ಕಾರದವರು ಕೆ.ಪಿ.ಎಸ್.ಸಿ.ಗೆ ಏನು ಅಧಿಸೂಚನೆಯನ್ನು ಕಳುಹಿಸಿರುತ್ತೀರಿ ಆ ಅಧಿಸೂಚನೆಯನ್ನು ತಾವು ಇಲ್ಲಿ ರದ್ದುಪಡಿಸುವುದಕ್ಕೆ, ಮುಕ್ತಾಯಗೊಳಿಸುವುದಕ್ಕೆ ಆದೇಶ ಮಾಡುತ್ತೀರಿ. ಮುಕ್ತಾಯಗೊಳಿಸಿದ ಮೇಲೆ ಅದು ಕೆ.ಎ.ಟಿ., ಗೆ ಹೋಗುತ್ತದೆ. ಕೆ.ಎ.ಟಿ., ಯಲ್ಲಿ ಕ್ರಮಬದ್ಧವಾಗಿ, ಸಂವಿಧಾನಬದ್ಧವಾಗಿ ಆಗಿಲ್ಲವೆಂದು ನಿಮ್ಮ ವಿರುದ್ಧ ಆಗುತ್ತದೆ. ತದನಂತರ ಅದು ಸರ್ಕಾರಕ್ಕೆ ವಾಪಸ್ ಬರುತ್ತದೆ. ಸರ್ಕಾರ ಇದರ ಬಗ್ಗೆ ಅಪೀಲು ಹೋಗಬಾರದೆಂದು ಅಂದಿನ ಕ್ಯಾಬಿನೆಟ್ ನೇಮಕಾತಿ ಆದೇಶ ಕೊಡಬೇಕೆಂದು ತೀರ್ಮಾನಿಸಿದಂತೆ ನೇಮಕಾತಿ ಆದೇಶವನ್ನು ಕೊಡುತ್ತೀರಿ. ನೇಮಕಾತಿ ಆದೇಶ ಕೊಟ್ಟ ಮೇಲೆ ಅವರು ಸುಮಾರು ಆರು ತಿಂಗಳಿನಿಂದ 13 ತಿಂಗಳು ಕೆಲಸ ಮಾಡುತ್ತಾರೆ. ನೀವು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅವರಿಗೆ ಸಂಬಳವನ್ನೂ ಕೊಡುತ್ತೀರಿ. ತದನಂತರ ಒಂದು Public Interest Litigation ಹೈಕೋರ್ಟ್‌ಗೆ ಹೋಗುತ್ತದೆ. ಆಗ ಅದರಲ್ಲಿ ಒಂದು Public Interest Ligation ನ observations ಈ ವಿಚಾರದಲ್ಲಿ ಏನೆಂದರೆ Members ಮೇಲೆ ಇರುವಂತಹ ಕ್ರಮಗಳೇನಿದೆ, Prevention of Corruption Act ಕೆಳಗೆ ಆ ದಿಸೆಯಲ್ಲಿ ತೆಗೆದುಕೊಳ್ಳುವ ನಿರ್ಧಾರದ ಜೊತೆಗೆ ಈ ಲಿಸ್ಟನ್ನು ಕ್ಯಾನ್ಸಲ್ ಮಾಡುವುದಿಲ್ಲ. ಲಿಸ್ಟನ್ನು ಕ್ಯಾನ್ಸಲ್ ಮಾಡುವುದಕ್ಕೆ ಸರ್ಕಾರಕ್ಕೂ ಅಧಿಕಾರ ಇಲ್ಲ, ಮತ್ತು ಸರ್ಕಾರ ಕೊಟ್ಟಿರುವ ತಪ್ಪು ಮಾಹಿತಿಯಿಂದ ಆ ಅಧಿಸೂಚನೆಯನ್ನು ಕ್ಯಾನ್ಸಲ್ ಮಾಡುತ್ತಾರೆ. ಆದರೆ ಆ ಲಿಸ್ಟನ್ನು ನೀವು accept ಮಾಡಬೇಕು ಅಥವಾ non accept ಮಾಡಬೇಕು. Accept ಮಾಡುವಂತಹ ರೀತಿಯಲ್ಲಿ accept ಮಾಡಿದ್ದೀರಿ. Non accept ಮಾಡಬೇಕೆಂದರೆ you should go only with Article 323(2) of the Constitution. ಅದರ ಪ್ರಕಾರ ನೀವು ಹೋಗುವುದಕ್ಕಾಗುವುದಿಲ್ಲ. ಏಕೆಂದರೆ, you have accepted and you have issued appointment order. ಹಾಗಾಗಿ ನೇಮಕಾತಿ ಆದೇಶ ಕೊಡುವುದಕ್ಕಿಂತ ಮುಂಚೆ ಸಂವಿಧಾನದ ಅನುಚ್ಛೇದ 323 ಏನಿದೆ ಅದನ್ನು fulfil ಮಾಡಬೇಕಾಗಿತ್ತು. ಆದರೆ ತದನಂತರ ಮಾಡುವಂತಹದ್ದು ನೀವು ಕೋರ್ಟ್‌ಗೆ ಸುಳ್ಳು ಹೇಳಿದ್ದೀರಿ. ಈಗ ನಿಮ್ಮ ಮುಂದಿರುವುದು ಸುಪ್ರೀಂ ಕೋರ್ಟ್‌ನವರು ಇದನ್ನು consider ಮಾಡಿ ಎಂದು ಹೈಕೋರ್ಟ್‌ಗೆ ಕಳುಹಿಸುತ್ತಾರೆ, ಹೈಕೋರ್ಟ್ ಇದನ್ನು ಪಕ್ಕಾ ಮಾಡಿ it will confirm this order. ಆದೇಶದಲ್ಲಿರುವುದು ಬಹಳ ಸ್ಪಷ್ಟವಾಗಿದೆ. ನಿಮ್ಮ ಅಡಿಷನಲ್ ಅಡ್ವೊಕೇಟ್ ಜನರಲ್ ಏನು ಮಾಡುತ್ತಾರೆ ಎಂದರೆ, he will make a submission before the Court that 'we have complied with Article 323(2) of the Constitution and we have fulfilled the requirement of the Constitution.' ಎಂದು ಕೋರ್ಟ್ ಮುಂದೆ ಹೇಳುತ್ತಾರೆ. ಕೋರ್ಟ್ ಅದನ್ನು ಮುಖ್ಯವಾಗಿ ತೆಗೆದುಕೊಂಡು it will pass an order quashing the Notification. ಲಿಸ್ಟ್ ಅನ್ನು quash ಮಾಡುವುದಿಲ್ಲ. ಇದು ಬಹಳ ಪ್ರಮುಖವಾದುದು. 323 ಪ್ರಕಾರ ಲಿಸ್ಟನ್ನು quash ಮಾಡಬೇಕಾಗಿತ್ತು. ಆದರೆ ಲಿಸ್ಟನ್ನು ಕ್ಯಾನ್ಸಲ್ ಮಾಡುವುದಕ್ಕೆ ಬರುವುದಿಲ್ಲ. ಹೈಕೋರ್ಟ್ quash ಮಾಡಿದ್ದು ಅವರು ಮೊದಲು ಕೊಟ್ಟ ಕೆ.ಪಿ.ಎಸ್.ಸಿ ಅಧಿಸೂಚನೆ ಆಗಿದೆ. ಇದನ್ನು ರೂಲ್ 11 ಮತ್ತು12 ಆಧಾರದ ಮೇಲೆ ಮಾಡುತ್ತೀರಿ. ದಯವಿಟ್ಟು ರೂಲ್ 11 ಮತ್ತು 12ನ್ನು ನೋಡಿ. ಮಾನ್ಯ ಸಚಿವರಾದ ಮಾಧುಸ್ವಾಮಿಯವರು ಏತಕ್ಕೆ ಎದ್ದು ಹೋಗುತ್ತಿದ್ದಾರೆ? ಅವರಿದ್ದರೇ ನಮಗೆ ಪ್ರೋತ್ಸಾಹ.

(ಮುಂದು)

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(947) 23-09-2021/ 1-50/ ಕೆಹೆಚ್-ಜಿಆರ್

**(ಉಪ ಸಭಾಪತಿಯವರ ಉಪಸ್ಥಿತಿ)**

**ಶ್ರೀ ಪಿ.ಆರ್.ರಮೇಶ್ (ಮುಂದು):-**

ಹೀಗಾಗಿ ನಿಯಮ 11 ಮತ್ತು 12 ಏನು ಹೇಳುತ್ತದೆ ಎಂದರೆ, ಯಾವ ಒಬ್ಬ ಅಭ್ಯರ್ಥಿ medical examination ನಲ್ಲಿ fail ಆಗುತ್ತಾನೆ, ಪೊಲೀಸ್ ರಿಪೋರ್ಟ್‌ನಲ್ಲಿ fail ಆಗುತ್ತಾನೆ, ಅಂತಹ ಸಂದರ್ಭದಲ್ಲಿ ಆ ಅಭ್ಯರ್ಥಿಯನ್ನು individual ಆಗಿ ತೆಗೆದು ಹಾಕುವುದಕ್ಕೆ ಅವಕಾಶ ಇದೆ. ಇವರು ನಿಯಮ 11 ಮತ್ತು 12 ರ ಅಡಿಯಲ್ಲಿ ನೋಟಿಫಿಕೇಶನ್ ಅನ್ನೇ ರದ್ದು ಮಾಡುತ್ತಾರೆ. ತದನಂತರ ಇದು Article 323 of the Constitution of India ಅಡಿಯಲ್ಲಿ ಬರುತ್ತದೆ ಎಂದು ಉಚ್ಛ ನ್ಯಾಯಾಲಯಕ್ಕೆ ಸುಳ್ಳು ಹೇಳುತ್ತಾರೆ. Any order by any Court by placing reliance on false information, ಇವರು ಏನು collude ಆಗುತ್ತಾರೋ ಅಥವಾ facts ಅನ್ನು ಕೊಡುವುದಿಲ್ಲವೋ, ಅಂತಹ ಸಂದರ್ಭದಲ್ಲಿ ನೀಡಲಾದ ಒಂದು ಆದೇಶವು it always remains a fraudulent order. It cannot become an order in the eye of law. ತಮಗೆ ಇದರ ಬಗ್ಗೆ ಹೇಳಬೇಕಾಗಿಲ್ಲ. ತಾವು ಕೂಡ ಒಬ್ಬ ಅಡ್ವೊಕೇಟ್. ನಾನು ಅಡ್ವೊಕೇಟ್ ಅಲ್ಲ. ಇದರ ಬಗ್ಗೆ ನೀವು ಪರಮರ್ಶಿಸಬೇಕಾಗುತ್ತದೆ. ಇವರು ಈ ಆದೇಶ ಆದ ಮೇಲೆ ತದನಂತರ ಇದನ್ನು ರದ್ದು ಮಾಡುತ್ತಾರೆ. ಯಾರೋ ಒಬ್ಬರು medical examination ಗೆ ಹೋಗಿರುತ್ತಾರೆ. ಇನ್ನೊಬ್ಬರು ಪೊಲೀಸ್ ಠಾಣೆಗೆ ಹೋಗಿರುತ್ತಾರೆ. 362 ಅಭ್ಯರ್ಥಿಗಳು ಕೂಡ ಒಂದಲ್ಲ ಒಂದು ಕಡೆ appointment ತೆಗೆದುಕೊಳ್ಳುವುದಕ್ಕೆ ಓಡಾಡುತ್ತಿರುತ್ತಾರೆ. ಅಂತಹ ಸಂದರ್ಭದಲ್ಲಿ ತಕ್ಷಣವೇ ಅವರ ಹಾರ್ಟ್ ನಿಂತು ಹೋಗುತ್ತದೆ. ತಕ್ಷಣವೇ ಎಲ್ಲರನ್ನೂ ತೆಗೆದು ಹಾಕುತ್ತಾರೆ. ಇವರು ಅಂತಹ ಸಂದರ್ಭದಲ್ಲಿ appointment ಜೊತೆಗೆ ನೋಟಿಫಿಕೇಶನ್ ಅನ್ನು ರದ್ದು ಮಾಡುತ್ತಾರೆ. ಇವರಿಗೆ ಯಾರು ಅಧಿಕಾರ ಕೊಟ್ಟಿದ್ದಾರೆ? ಉಚ್ಛ ನ್ಯಾಯಾಲಯ ಹೇಗೆ ಆದೇಶ ಕೊಟ್ಟಿದೆ ಎಂದು ನನಗೆ ಆಶ್ಚರ್ಯವಾಗುತ್ತದೆ.

**ಉಪ ಸಭಾಪತಿಯವರು:-** ಮಾನ್ಯ ಪಿ.ಆರ್.ರಮೇಶ್‌ರವರೇ, ಅವರು ಅಡ್ವೊಕೇಟ್, ಅವರಿಗೆಲ್ಲಾ ಗೊತ್ತು ಎಂದು ತಾವೇ ಹೇಳಿದ್ದೀರಿ. ಬಿಟ್ಟು ಬಿಡಿ ಅವರು ಉತ್ತರ ಹೇಳಿ ಬಿಡಿ. ಇದನ್ನುಕೇಳುವ ಬದಲು ಸಂಪೂರ್ಣವಾಗಿ . . . ತಾವೇ ಹೇಳಿದೀರಲ್ಲವೇ.

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, ಅವರಿಗೆ ಗೊತ್ತಿಲ್ಲದೇ ಇರುವಂತಹ ವಿಚಾರವನ್ನು ನಾನು ಹೇಳಬೇಕಾಗುತ್ತದೆ. ಕೆಲವು ವಿಚಾರಗಳು ಅವರಿಗೆ ಗೊತ್ತಿಲ್ಲ. ಅದನ್ನು ಹೇಳಬೇಕಾಗುತ್ತದೆ.

**ಉಪ ಸಭಾಪತಿಯವರು:-** ಮಾನ್ಯ ಪಿ.ಆರ್.ರಮೇಶ್‌ರವರೇ, ಅವರು ಅಡ್ವೊಕೇಟ್ ಎಂದರೆ ಅವರಿಗೆ ಗೊತ್ತಿರುವ ವಿಚಾರವಾಗಿರುತ್ತದೆ.

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, ಅವರು ಅಡ್ವೊಕೇಟ್. ಅವರಿಗೆ ಈ ವಿಚಾರ ತಿಳಿಸಿದರೆ ಅವರು ಇನ್ನು ಒಳ್ಳೆಯ ಅಡ್ವೊಕೇಟಿಂಗ್ ಮಾಡುತ್ತಾರೆ. ಅವರು ನಮಗೆ favour ಆಗಿದ್ದಾರೆ. ಅವರು ನಮ್ಮ ವಿರುದ್ಧ ಇಲ್ಲ. ಅವರು ಇಲ್ಲಿ ಇರುವುದರಿಂದ ನಾನು ಮಾತನಾಡುತ್ತಿದ್ದೇನೆ.

**ಉಪ ಸಭಾಪತಿಯವರು:-** ಮಾನ್ಯ ಪಿ.ಆರ್.ರಮೇಶ್‌ರವರೇ, ಸರಿ ಆದಷ್ಟು ಬೇಗ ಮುಗಿಸಿ. ಈಗಾಗಲೇ 2 ಗಂಟೆ ಆಗುತ್ತಾ ಬಂದಿತು.

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, ಅವರು ಇರುವುದಕ್ಕೋಸ್ಕರ ನಾನು ಇಲ್ಲಿ ಮಾತನಾಡುತ್ತಿದ್ದೇನೆ. ಅವರು ಇರುವಂತದ್ದೇ ಒಂದು ಆಶೀರ್ವಾದ ನಾವು ಮಾತನಾಡುವುದಕ್ಕೆ ಮತ್ತು 362 ಅಭ್ಯರ್ಥಿಗಳ ಬಗ್ಗೆ ಮಾತನಾಡುವುದಕ್ಕೆ ಅವಕಾಶ ಸಿಕ್ಕಿದೆ. ಈಗ ನೇರವಾಗಿ ವಿಚಾರಕ್ಕೆ ಬರುತ್ತೇನೆ. This is one subject. ಈಗ ತಮ್ಮದು Trial Court ನಲ್ಲಿ Session Court ಮುಂದೆ ಇರುವಂತಹ ಒಂದು ವಿಚಾರ. Session Court ಮುಂದೆ ಇರುವಂತಹ ವಿಚಾರ ಏನಾಗಿದೆಯೆಂದರೆ, ಇದು ಹೈಕೋರ್ಟ್‌ಗೆ ಹೋಗಿದೆ. ಹೈಕೋರ್ಟ್‌ಗೆ ಹೋದ ಮೇಲೆ ತಾವು Prosecution ಅನುಮತಿಯನ್ನು ತೆಗೆದುಕೊಂಡು ಬಂದರೆ ಮತ್ತೆ we will consider ಎಂದು ಹೇಳಿ Session Court ಪ್ರಕರಣ ಹಾಗೆಯೇ ಇದೆ. Quash ಆಗಿಲ್ಲ. Complete ಆಗಿ ಹೋಗಿಲ್ಲ. It has remained status quo. Status quo ರೀತಿಯಲ್ಲಿ ಇಟ್ಟುಕೊಂಡಿದ್ದಾರೆ. If you bring some order from the President of India and also prosecution permission, definitely, the Sessions Court will take action.

**ಶ್ರೀ ಜೆ.ಸಿ.ಮಾಧುಸ್ವಾಮಿ (ಸಣ್ಣ ನೀರಾವರಿ, ಕಾನೂನು, ಸಂಸದೀಯ ವ್ಯವಹಾರ ಸಚಿವರು):-** ಮಾನ್ಯ ಸಭಾಪತಿಯವರೇ, ಅವರಿಗೆ latest development ಗೊತ್ತಿಲ್ಲ. ನಾವು prosecution ಅನ್ನು permit ಮಾಡದೇ ಇದ್ದಾಗ ಅವರಿಗೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೈಕೋರ್ಟ್‌ನಿಂದ ಸೂಚನೆ ಹೋಗಿ 'Case is closed and the Charge Sheet is returned' ಎಂದು Sessions Court ನಿಂದ ಆದೇಶವಾಗಿದೆ.

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, O.K., very good. I am glad. ಇನ್ನು ಒಳ್ಳೆಯದಾಯಿತು. It is favouring us.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ಅದರಲ್ಲಿ ಒಂದು ಮಾತು ಏನು ಹೇಳಿದೆ ಎಂದರೆ, "But, it is open to the Government to come with a new Charge Sheet, whenever it deems fit." So, liberty has been given.

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, ಇದು ಈಗ ಎರಡನೇ ಅಂಶ. ಒಂದು High Court's decision. ಇನ್ನೊಂದು, ನೀವೇ ಹೇಳಿದಂತೆ Session Court's order ಇದೆ. So, this is a legal factor. It remains as it is. ಈಗ ತಮಗೆ itches ಎಲ್ಲಿದೆ ಎಂದರೆ, ಹೈಕೋರ್ಟ್ ಆದೇಶ ಹೇಳಿಬಿಟ್ಟಿದೆ. That is the only point. ಹೈಕೋರ್ಟ್ ಆದೇಶ ತಾವು ಕೊಟ್ಟಿರುವಂತಹ ತಪ್ಪು ಮಾಹಿತಿಗಳ ಆಧಾರದ ಮೇಲೆ ಕೊಟ್ಟಿರುವಂತಹ ಆದೇಶ ಎಂದು already it is proved before the Legislative Assembly. ಹಿಂದಿನ ಮಾನ್ಯ ಮುಖ್ಯಮಂತ್ರಿಗಳು 'ನಾವು ಅನುಚ್ಛೇದ 323 ಅನ್ನು ಉಲ್ಲಂಘನೆ ಮಾಡಿಲ್ಲ, we have not taken the law in our hands' ಎಂದು ಸ್ಪಷ್ಟವಾಗಿ ಹೇಳಿಬಿಟ್ಟಿದ್ದಾರೆ. ಹಾಗಾಗಿ ಇವತ್ತು ಆ ಆದೇಶ questionable. Legislative Assembly ಮುಂದೆ ಇರುವಂತಹದ್ದು ಇವತ್ತು questionable ಆಯಿತು. ಹಾಗಾಗಿ it remains as it is. ಈಗ ಇದೆಲ್ಲಾ ಆದ ಮೇಲೆ 2014-15ರಲ್ಲಿ ಇವರು prosecute ಮಾಡುವುದಕ್ಕೆ ಹಿಂದಿನ ರಾಜ್ಯಪಾಲರಾಗಿದ್ದ ಶ್ರೀ ಭರಧ್ವಜ್ ಇದ್ದಾಗ ಕಳುಹಿಸುತ್ತಾರೆ. ಶ್ರೀ ಭರಧ್ವಜ್‌ರವರು ಪ್ರೆಸಿಡೆಂಟ್‌ಗೆ ಬರೆಯುತ್ತಾರೆ. I have got the copy. ಇವರ ಮೇಲೆ removal ಮಾಡಿ ಎಂದು ಕಳುಹಿಸುತ್ತಾರೆ. ಆದರೆ, removal ಆಗುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರು ಪೀಠವನ್ನು ಅಲಂಕರಿಸಿದರು)**

ಅಲ್ಲಿನ ಪ್ರೆಸಿಡೆಂಟ್ ಏನು ತೆಗೆದುಕೊಳ್ಳುವುದಿಲ್ಲ. ತದನಂತರ 2014-15ರಲ್ಲಿ ಶ್ರೀ ಭರಧ್ವಜ್ ಹೋದ ಮೇಲೆ ಈ ಹಿಂದಿನ ರಾಜ್ಯಪಾಲರಾಗಿದ್ದ ಶ್ರೀ ವಜುಭಾಯಿ ರುದಭಾಯಿ ವಾಲಾ ರವರ ಕಾಲದಲ್ಲಿ ಒಂದು prosecution ಮಾಡುವುದಕ್ಕೆ ಕಳುಹಿಸಿಕೊಡುತ್ತಾರೆ. ಅವರು ಒಂದು observation ಮಾಡುತ್ತಾರೆ. This order has been suppressed by the authorities. ಅದನ್ನು ಓದುತ್ತೇನೆ ನೋಡಿ. It reads:

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"The power to appoint the Members of the Commission is vested with the Governor whereas the power to remove the Member is vested with the Hon'ble President of India in terms of Article 317(1) of the Constitution of India. Recently, .. .."

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, it is a settled issue and Hon'ble Member is going to all infructuous orders. ಏತಕ್ಕೆ ಸಮಯ ವ್ಯರ್ಥ ಮಾಡೋಣ. ನಾನು ಉತ್ತರ ಹೇಳಿಬಿಡುತ್ತೇನೆ. I know, what is in his mind.

**ಶ್ರೀ ಯು.ಬಿ.ವೆಂಕಟೇಶ್ (ನಾಮ ನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ಮೊದಲು ನ್ಯಾಯ ಸಿಗಬೇಕು.

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, ನಾನು ಹೇಳುವುದೇನೆಂದರೆ, ಮಾನ್ಯ ಸಚಿವರು ನ್ಯಾಯ ಕೊಡುತ್ತಾರೆಂದು ನನಗೆ ಗ್ಯಾರಂಟಿ ಇದೆ. ನಾನು ಏಕೆ ಇದನ್ನು ಹೇಳಬೇಕೆಂದರೆ, . . .

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರೇ ಮಾತನಾಡುತ್ತಿದ್ದಾರೆ.

**ಸಭಾಪತಿಯವರು:-** ಮಾನ್ಯ ಪಿ.ಆರ್.ರಮೇಶ್‌ರವರು ಪ್ರಾರಂಭ ಮಾಡಿದರೆ ಬಿಡುವುದಿಲ್ಲ.

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, ಈ ರೀತಿ ಅಧಿಕಾರಿಗಳು ಮಾಡಿದ್ದಾರೆ. ಇದು ಒಂದು infructuous ಅಲ್ಲ. ಇದು ಏಕೆ ಎಂದು ಹೇಳುತ್ತೇನೆ. The observation of the Governor further reads:

"Recently, Allahabad High Court in a judgment in the case of Ramasevak Vs the State of Uttar Pradesh, while considering the grievance of a Member of the Commission against whom an enquiry .. .. .."

**ಸಭಾಪತಿಯವರು:-** ಮಾನ್ಯ ಪಿ.ಆರ್.ರಮೇಶ್‌ರವರೇ, ಇದು ಮಾನ್ಯ ಸಚಿವರಿಗೆ ಗೊತ್ತಿದೆ. ತಮ್ಮ ಕಡೆ ಇರುವ ಎಲ್ಲಾ ಮಾಹಿತಿಗಳು ಅವರ ಹತ್ತಿರ ಇದೆ. ಮಾನ್ಯ ಸಚಿವರು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಉತ್ತರ ಹೇಳಲಿ. ನಂತರ ತಾವು clarification ಕೇಳಿ. ತಾವು ಮಾನ್ಯ ಸಚಿವರು ಬಿಟ್ಟಿರುವುದನ್ನು ಕೇಳಿ.

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, ತಾವು ಹೇಳುತ್ತಿರುವುದು ಶೇಕಡ 100 ರಷ್ಟು ಸರಿ ಇದೆ. ನಾನು ಕೆಲವು ವಿಷಯಗಳನ್ನು ಹೇಳಲೇಬೇಕು. ನಾನು ಜಾಸ್ತಿ ಸಮಯವನ್ನು ತೆಗೆದುಕೊಳ್ಳುವುದಿಲ್ಲ. ತಾವು ಸಮಯದ ಬಗ್ಗೆ ಯೋಚನೆ ಮಾಡುತ್ತಿದ್ದೀರಾ. ಅದು ನನಗೂ ಗೊತ್ತಿದೆ. ನಾನು ಬಹಳ ಹೆಚ್ಚು ಸಮಯವನ್ನು ತೆಗೆದುಕೊಳ್ಳುವುದಿಲ್ಲ.

**ಸಭಾಪತಿಯವರು:-** ಮಾನ್ಯ ಪಿ.ಆರ್.ರಮೇಶ್‌ರವರಿಗೆ ಸಮಯ ಕೊಡುತ್ತಾರೆ ಎಂದು ಎಲ್ಲಾ ಮಾನ್ಯ ಸದಸ್ಯರುಗಳು ಕೇಳುತ್ತಾರೆ.

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, ಇಲ್ಲ. ನಾನು ಈಗಲೇ ಎದ್ದು ನಿಂತು ಮಾತನಾಡುತ್ತಿರುವುದು.

**ಸಭಾಪತಿಯವರು:-** ಮಾನ್ಯ ಪಿ.ಆರ್.ರಮೇಶ್‌ರವರೇ, ಸರಿ. ಚಿಕ್ಕದಾಗಿ ಮಾತನಾಡಿ ಮುಗಿಸಿ.

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, ಈ ಆದೇಶದಲ್ಲಿ ಏನಿದೆ ಎಂದು ತಮಗೂ ಗೊತ್ತಿದೆ ಎಂದು ಅಂದುಕೊಳ್ಳುತ್ತೇನೆ. ಆದರೆ, ಈ ಆದೇಶ 5-6 ವರ್ಷಗಳಿಂದ ತಮಗೂ ಗೊತ್ತಿಲ್ಲ. ತಮ್ಮ ಸರ್ಕಾರಕ್ಕೂ ಗೊತ್ತಿಲ್ಲ. ಹಿಂದಿನ ಸರ್ಕಾರಕ್ಕೂ ಗೊತ್ತಿಲ್ಲ. ಯಾರಿಗೂ ಗೊತ್ತಿಲ್ಲ. ಹಾಗೆಯೇ abeyance ನಲ್ಲಿ ಇಟ್ಟಿದ್ದಾರೆ. ಅದು ನಾನು ಹೇಳುತ್ತಿರುವುದು. This order was not brought before the High Court, when the High Court passed its order in 2018. This was suppressed. ಇದರ ಜೊತೆಗೆ provisions of Article 323 suppress ಆಗಿದೆ. ಈ ಎರಡು ಅಂಶ ನ್ಯಾಯಾಲಯದ ಗಮನಕ್ಕೆ ತರದೇ ಇದ್ದಾಗ ವಿಧಾನಸಭೆ ಮತ್ತು ವಿಧಾನ ಪರಿಷತ್ತು ಇರಬಹುದು. ಇದರ privilege defeat ಆಗಲಿಲ್ಲವೇ? Is it not? ಇದೇ ಕೆಲಸವನ್ನು ನಾವೋ, ನೀವೋ ಮಾಡಿದ್ದರೆ ಅಧಿಕಾರಿಗಳು ನಮ್ಮನ್ನು ಸ್ಲೇಟ್ ಹಿಡಿಸಿಬಿಡುತ್ತಿದ್ದರು. ನಮ್ಮ ಕೈಗೆ ಸ್ಲೇಟ್ ಕೊಟ್ಟು ಬಿಡುತ್ತಿದ್ದರು. ಫೋಟೋ ಹಾಕಿ ದೊಡ್ಡದಾಗಿ ಪೇಪರ್‌ನಲ್ಲಿ ಹಾಕಿ ಬಿಡುತ್ತಿದ್ದರು. ಹಾಗೆಯೇ ಪೊಲೀಸ್ ಠಾಣೆಯಲ್ಲಿ ದೊಡ್ಡ ಫೋಟೋ ಹಾಕಿ ಬಿಡುತ್ತಿದ್ದರು. I think, ಈ ರೀತಿ ಮಾಡಿರುವಂತಹ ಅಧಿಕಾರಿಗಳ ಮೇಲೆ Section 193, I.P.C., ಪ್ರಕಾರ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ತಾವು initiate ಮಾಡದೇ ಇದ್ದರೆ, ನಾವು initiate ಮಾಡುತ್ತೇವೆ. ಈ ರೀತಿ blunder ಆಗಿರುತ್ತದೆ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಸಭಾಪತಿಯವರು:-** ಮಾನ್ಯ ಪಿ.ಆರ್.ರಮೇಶ್‌ರವರೇ, ಬೇಗ ಮುಗಿಸಿ.

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, ಈ ರೀತಿ blunder ಆಗಿರುವಂತಹದ್ದು, ಇವತ್ತು ಅಧಿಕಾರಿಗಳು ತಪ್ಪು ಮಾಡಿರುವಂತದ್ದನ್ನು ಸರಿಪಡಿಸುವುದಕ್ಕೆ ಮತ್ತು ಮುಚ್ಚಿಹಾಕುವುದಕ್ಕೆ ನಾವು ಇಲ್ಲಿ ಕುಳಿತುಕೊಂಡಿದ್ದೇವೆ. ತದನಂತರ 20 ಜನ ಎಂ.ಎಲ್.ಎ., ಗಳೆಲ್ಲಾ ಸೇರಿ President of India ಗೆ ಬರೆಯುತ್ತಾರೆ. ಅದು ತಮಗೂ ಕೂಡ ಗೊತ್ತಿದೆ ಎಂದು ನನಗೆ ಅನಿಸುತ್ತದೆ. ಅವರು ಮಾನ್ಯ ಮುಖ್ಯ ಕಾರ್ಯದರ್ಶಿಯವರಿಗೆ ತಾವು ಇದರ ಬಗ್ಗೆ ಕ್ರಮ ತೆಗೆದುಕೊಳ್ಳಿ ಎಂದು ಸ್ಪಷ್ಟವಾಗಿ ಪತ್ರವನ್ನು ಬರೆಯುತ್ತಾರೆ. ಅದರಲ್ಲಿ ಏನಿದೆ ಎನ್ನುವುದನ್ನು ಸಹ ಹೇಳಿ ಬಿಡುತ್ತೇನೆ.

**ಸಭಾಪತಿಯವರು:-** ಮಾನ್ಯ ಪಿ.ಆರ್.ರಮೇಶ್‌ರವರೇ, ನಾನು ಏನು ಹೇಳುತ್ತೇನೆಂದರೆ, ಈಗಾಗಲೇ 2 ಗಂಟೆಯಾಯಿತು. ಸಾಕಷ್ಟು ವಿಚಾರಗಳನ್ನು ಹೇಳಿದ್ದೀರಿ. ಮಾನ್ಯ ಸಚಿವರ ಹತ್ತಿರ clarifications ಕೇಳಿ. ಮೊದಲು ಅವರು ಉತ್ತರ ಹೇಳಲಿ. ಅವರು ಉತ್ತರ ಹೇಳಿದ ನಂತರ ತಾವು ಮಾತನಾಡಿ. ಈಗ ತಾವು ಕುಳಿತುಕೊಳ್ಳಿ.

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, ನಾನು ಹೇಳಬೇಕಾಗಿರುವುದನ್ನು ಹೇಳಿ ಬಿಡುತ್ತೇನೆ.

**ಸಭಾಪತಿಯವರು:-** ಮಾನ್ಯ ಪಿ.ಆರ್.ರಮೇಶ್‌ರವರೇ, ನಂತರ ಹೇಳಿ. ಮಾನ್ಯ ಸಚಿವರು ಉತ್ತರ ಕೊಡಲಿ.

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, ಒಬ್ಬ ಐ.ಎ.ಎಸ್., ಅಧಿಕಾರಿ ಸುಂದರ್ ಎನ್ನುವವರಿಗೆ acquit ಮಾಡುತ್ತಾರೆ. How can it be? F.I.R., ಹಾಕಿ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತಾರೆ. ಸಚಿವ ಸಂಪುಟಕ್ಕೆ ತರುತ್ತಾರೆ. ಒಬ್ಬ ಐ.ಎ.ಎಸ್., ಅಧಿಕಾರಿ ವರ್ಗಾವಣೆ ಆಗುವುದಕ್ಕೆ ಎಲ್ಲಾ ರೀತಿಯ ಕ್ರಮ ತೆಗೆದುಕೊಂಡು ಆದೇಶ ಮಾಡುತ್ತಾರೆ. ಈ ರೀತಿ ಹೇಗೆ ಆಗುತ್ತದೆ? ಒಬ್ಬ ಐ.ಎ.ಎಸ್., ಅಧಿಕಾರಿಯನ್ನು ಜೋಪಾನ ಮಾಡುವುದಕ್ಕೆ ಇಡೀ ವ್ಯವಸ್ಥೆಯನ್ನೇ ಬದಲು ಮಾಡುವಂತಹ ರೀತಿಯಲ್ಲಿ ಮಾಡಿದರೆ ಹೇಗೆ? ಅಲ್ಲಿಗೆ administration ಏನಾಯಿತು? ಇದು ಬಹಳ ಮುಖ್ಯವಾಗಿರುವಂತಹದ್ದು. ಇದಾದ ಮೇಲೆ ಮಾನ್ಯ ಸಚಿವರೇ ನಾನು ಬಹಳ ಮುಖ್ಯವಾದಂತಹ ಅಂಶ ಹೇಳುತ್ತೇನೆ.

(ಮುಂದು)

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**(948) 2:00 ಎಸ್‌ಪಿಆರ್-ಜಿಆರ್ 23/09/2021**

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಪಿ.ಆರ್.ರಮೇಶ್ (ಮುಂದು):-**
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯವರು ರಾಜ್ಯ ಸರ್ಕಾರದ ಒಪ್ಪಿಗೆಯನ್ನು ಪಡೆದು ಕೇಂದ್ರದ ಸಿಬ್ಬಂದಿ ಮತ್ತು ತರಬೇತಿ ಇಲಾಖೆಗೆ ಪತ್ರವನ್ನು ಬರೆಯುತ್ತಾರೆ. ಆದರೆ, ಸದರಿ ಇಲಾಖೆಯವರು ಪತ್ರವನ್ನು ವಾಪಸ್ಸು ಕಳುಹಿಸುತ್ತಾರೆ. ಆ ನಂತರದಲ್ಲಿ ಸಚಿವ ಸಂಪುಟವು ಸದರಿ ಪ್ರಕರಣವನ್ನು ಸಿ.ಓ.ಡಿ., ಸಂಸ್ಥೆಗೆ ವಹಿಸುವ ತೀರ್ಮಾನವನ್ನು ತೆಗೆದುಕೊಳ್ಳುತ್ತದೆ. ಆಗ ಸಿ.ಓ.ಡಿ., ಸಂಸ್ಥೆಯು ಪುನಃ ಕೇಂದ್ರದ ಸಿಬ್ಬಂದಿ ಮತ್ತು ತರಬೇತಿ ಇಲಾಖೆಗೆ ಪತ್ರವನ್ನು ಬರೆಯುತ್ತದೆ. ಆ ಸಮಯದಲ್ಲಿ ಪ್ರಕರಣದ ಸಂಪೂರ್ಣ ಮಾಹಿತಿಯನ್ನು ನೀಡುತ್ತಾ, ನಾವು ಶಾಸಕರುಗಳೆಲ್ಲರೂ ಕೇಂದ್ರದ ಸಿಬ್ಬಂದಿ ಮತ್ತು ತರಬೇತಿ ಇಲಾಖೆಗೆ ಪತ್ರವನ್ನು ಬರೆಯುತ್ತೇವೆ. ಆಗ ಸದರಿ ಇಲಾಖೆಯು ಸಿ.ಓ.ಡಿ. ಸಂಸ್ಥೆಗೆ ಅದನ್ನು ವಾಪಸ್ಸು ಕಳುಹಿಸುತ್ತಾರೆ.

**ಸಭಾಪತಿಯವರು:-** ಮಾನ್ಯ ರಮೇಶ್‌ರವರೇ, ಇಲ್ಲಿಗೆ ಮುಗಿಸಿ. ಬಹಳ ಹೊತ್ತಾಯಿತು.

**ಶ್ರೀ ಪಿ.ಆರ್.ರಮೇಶ್(ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ಜಾಸ್ತಿ ಸಮಯವನ್ನು ತೆಗೆದುಕೊಳ್ಳದೇ, ಕೇವಲ ಐದು ನಿಮಿಷಗಳಲ್ಲಿ ನನ್ನ ಮಾತುಗಳನ್ನು ಪೂರ್ಣಗೊಳಿಸುತ್ತೇನೆ. ನಾವು ಈ ರೀತಿಯಾದ ನಿರ್ದೇಶನಗಳನ್ನು ರಾಜ್ಯದ ಮುಖ್ಯ ಕಾರ್ಯದರ್ಶಿಗಳಿಗೆ ಈಗಾಗಲೇ ನೀಡಿದ್ದೇವೆ; ನೀವು ಅಲ್ಲಿ ನೋಡಿಕೊಳ್ಳಿ ಎನ್ನುವ ಹಿಂಬರಹವನ್ನು ಡಿ.ಓ.ಪಿ.ಟಿ.ಯವರು ಶಾಸಕರಿಗೆ ನೀಡುತ್ತಾರೆ. ಡಿ.ಓ.ಪಿ.ಟಿ.ಯಿಂದ ವಾಪಸ್ಸು ಬಂದಿರುವ ಪ್ರಸ್ತಾವನೆಯು ಇವತ್ತಿನ ದಿವಸ ಸರ್ಕಾರದ ಮುಂದಿದ್ದು, ಇದು ವಾಸ್ತವ ಸಮಸ್ಯೆಯಾಗಿದೆ. ಉಚ್ಚ ನ್ಯಾಯಾಲಯವು ನೀಡಿರುವ ಆದೇಶಗಳನ್ನು ತೆರವುಗೊಳಿಸಲು ಸರ್ಕಾರವು ಅರ್ಜಿಯನ್ನು ನೀಡಿ, ರದ್ದುಗೊಳಿಸಿರುವ ಸರ್ಕಾರಿ ಆದೇಶ ದಿನಾಂಕ 14/08/2014 ನ್ನು ಪುನಃ ಆದೇಶಿಸಿದರೆ, ಈ ಸಮಸ್ಯೆಯು ಬಗೆಹರಿಯುತ್ತದೆ. ಈ ಹಿಂದೆ ಅಸ್ತಿತ್ವದಲ್ಲಿದ್ದ ಸರ್ಕಾರವು ತೆಗೆದುಕೊಂಡ ಸಚಿವ ಸಂಪುಟದ ತೀರ್ಮಾನವು ಚಾಲ್ತಿಗೆ ಬರುತ್ತದೆ ಹಾಗೂ ಈ ಅಭ್ಯರ್ಥಿಗಳಿಗೆ ಉದ್ಯೋಗ ದೊರೆಯುತ್ತದೆ. ಇಲ್ಲಿ ಇನ್ನೊಂದು ಪ್ರಶ್ನೆಯಿದೆ. ಈ ಹಿಂದಿನ ಅಭ್ಯರ್ಥಿಗಳಿಗೆ ನೀಡಿರುವ ನೇಮಕಾತಿ ಆದೇಶದ ಪ್ರಕಾರ ಅವರನ್ನು ಕೆಲಸಕ್ಕೆ ತೆಗೆದುಕೊಂಡಾಗ ಸೇವಾ ಹಿರಿತನ ಮತ್ತು ಕಿರಿತನದ ಬಗ್ಗೆ ಹೇಳುವುದಕ್ಕೆ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸರ್ಕಾರಕ್ಕೆ ಅಧಿಕಾರ ಬರುತ್ತದೆ. ಆದರೆ ಆ ಅಭ್ಯರ್ಥಿಗಳ ನೇಮಕಾತಿ ಇನ್ನೂ ಸಹ ಆಗಿರುವುದಿಲ್ಲ. How can you claim that there should be seniority? 2014 ಅಥವಾ 2015 ನೇ ಸಾಲಿನ ಅಭ್ಯರ್ಥಿಗಳ ಸೇವಾ ಹಿರಿತನದ ಬಗ್ಗೆ ಸರ್ಕಾರ ಹೇಳುವುದಕ್ಕೆ ಬರುವುದಿಲ್ಲ. First, let there be a Government employment for them. ಮೊದಲು ಆ ಅಭ್ಯರ್ಥಿಗಳ ನೇಮಕಾತಿಯಾಗಲಿ. ತದನಂತರ ಸೇವಾ ಹಿರಿತನವನ್ನು ನ್ಯಾಯಾಲಯವು ನೋಡಿಕೊಳ್ಳುತ್ತದೆ. If they want to claim through the law, let them go before the Court and then claim. 2014 ಅಥವಾ 2015 ನೇ ಸಾಲಿನ ಅಭ್ಯರ್ಥಿಗಳ ಒತ್ತಡದಿಂದ ಸರ್ಕಾರವು ಇದನ್ನು ಸಾಕಷ್ಟು ಫಿಲ್ಟರ್ ಮಾಡುತ್ತಿದೆ. ಅವರುಗಳು ಸಾಧ್ಯವಾದಷ್ಟು ಒತ್ತಡವನ್ನು ಇದರ ಮೇಲೆ ತರುತ್ತಿದ್ದಾರೆ. ಇವತ್ತಿನ ದಿವಸ ಸರ್ಕಾರ ಅಧಿಕಾರಿಗಳಿಂದಾದ ತಪ್ಪನ್ನು ಮುಚ್ಚಿಕೊಳ್ಳುವುದಕ್ಕೆ ದಯಮಾಡಿ ಅವಕಾಶವನ್ನು ನೀಡುವುದು ಬೇಡ. ತಪ್ಪಿತಸ್ಥರಿಗೆ ಶಿಕ್ಷೆಯಾಗಲಿ. ಅವರುಗಳು ಮಾಡಿರುವ ತಪ್ಪನ್ನು ಮುಚ್ಚಿಕೊಳ್ಳುವುದಕ್ಕಾಗಿ ಇವತ್ತಿನ ದಿವಸ 362 ಅಭ್ಯರ್ಥಿಗಳಿಗೆ ಉದ್ಯೋಗ ದೊರೆಯುವಂತೆ ಮಾಡುತ್ತಿದ್ದಾರೆ. ಉಚ್ಚ ನ್ಯಾಯಾಲಯದ ಆದೇಶವೇನು ಎನ್ನುವುದು ಸರಿಯಾಗಿ ಗೊತ್ತಿಲ್ಲ. It is a fraudulent order. ಇಂತಹ ಆದೇಶದ ಪ್ರಕಾರ ನೇಮಕಾತಿ ಮಾಡುವುದಕ್ಕೆ ಬರುವುದಿಲ್ಲವೆಂದು ಸರ್ಕಾರಕ್ಕೆ ತಿಳಿದಿದೆ. ಇದನ್ನು ನಾನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಆದಷ್ಟು ಬೇಗ 362 ಅಭ್ಯರ್ಥಿಗಳನ್ನು ಪರಿಗಣಿಸಿ, ಅವರಿಗೆ ನೇಮಕಾತಿ ಆದೇಶವನ್ನು ಸರ್ಕಾರವು ಹೊರಡಿಸಬೇಕು. ಸರ್ಕಾರಕ್ಕೆ ನನಗಿಂತಲೂ ಹೆಚ್ಚಾಗಿ ತಿಳಿದಿದೆ. ಸದರಿ ಅಭ್ಯರ್ಥಿಗಳ ನೇಮಕಾತಿ ಕುರಿತಾದ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ನಾನು ವಿನಂತಿಸುತ್ತೇನೆ.

**ಶ್ರೀ ಜೆ.ಸಿ.ಮಾಧುಸ್ವಾಮಿ(ಕಾನೂನು, ಸಂಸದೀಯ ವ್ಯವಹಾರಗಳ ಸಚಿವರು):-** ಮಾನ್ಯ ಸಭಾಪತಿಯವರೇ, ಈ ವಿಚಾರದಲ್ಲಿ ಬಹಳ ಉತ್ತರವನ್ನು ನೀಡಬೇಕಾಗುತ್ತದೆ. 2011 ನೇ ಸಾಲಿನ ಬ್ಯಾಚಿನ ಅಭ್ಯರ್ಥಿಗಳ ನೇಮಕಾತಿಯಾಯಿತು ಆಗ ನಡೆದ *viva voce* ಪರೀಕ್ಷೆಯಲ್ಲಿ ಅಂಕಗಳನ್ನು ನೀಡಬೇಕಾದರೆ ಭ್ರಷ್ಟಾಚಾರವಾಗಿದೆ, ಬಹಳ ತಾರತಮ್ಯಗಳನ್ನು ಮಾಡಿ ಅಂಕಗಳನ್ನು ನೀಡುತ್ತಿದ್ದಾರೆ ಎನ್ನುವ ಬಗ್ಗೆ ಅರ್ಜಿಯು ಸರ್ಕಾರದಲ್ಲಿ ಸ್ವೀಕೃತಗೊಳ್ಳುತ್ತದೆ. ಆಡಿಟರ್ ಜನರಲ್‌ರವರಿಗೆ ಸ್ವೀಕೃತಗೊಂಡ ಮನವಿಯ ಮೇಲೆ ಸರ್ಕಾರವು ತೀರ್ಮಾನವನ್ನು ತೆಗೆದುಕೊಂಡು ಹಾಲಿ ಹೊರಡಿಸಿರುವ ಆಯ್ಕೆ ಪಟ್ಟಿಯನ್ನು ಪರಿಷ್ಕರಿಸಿ ಎಂದು ಅಭ್ಯರ್ಥಿಗಳು ಮನವಿ ಸಲ್ಲಿಸುತ್ತಾರೆ. ಆಗ ನಾವು ಮತ್ತು ಕರ್ನಾಟಕ ಲೋಕಸೇವಾ ಆಯೋಗದವರು ನೇಮಕಾತಿಯನ್ನು ಕ್ರಮಬದ್ಧವಾಗಿ ಮಾಡಿದ್ದೇವೆ; ಹೀಗಾಗಿ ಈಗಾಗಲೇ ಹೊರಡಿಸಿರುವ ಆಯ್ಕೆ ಪಟ್ಟಿಯನ್ನು ಪರಿಷ್ಕರಣೆ ಮಾಡುವುದಕ್ಕೆ ಬರುವುದಿಲ್ಲ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎಂದು ಹೇಳಿದಾಗ, ಸದಸ್ಯರುಗಳ ವಿರುದ್ಧ ಸಿ.ಐ.ಡಿ., ಸಂಸ್ಥೆಯು ತನಿಖೆ ನಡೆಸಬೇಕೆಂದು ಆದೇಶವಾಗುತ್ತದೆ. ಆ ನಂತರ ಅವರುಗಳ ವಿರುದ್ಧ ಪ್ರಥಮ ವರ್ತಮಾನ ವರದಿಯೂ ಸಹ ದಾಖಲಾಗುತ್ತದೆ. ಆಗ ಸರ್ಕಾರವು ಈಗಾಗಲೇ ಹೊರಡಿಸಿದ್ದ ಆಯ್ಕೆ ಪಟ್ಟಿಯನ್ನು ರದ್ದುಗೊಳಿಸುವ ನಿರ್ಣಯವನ್ನೂ ಸಹ ತೆಗೆದುಕೊಳ್ಳುತ್ತದೆ. ಈ ನಿರ್ಣಯದಂತೆ ಆಯ್ಕೆ ಪಟ್ಟಿಯನ್ನು ರದ್ದುಗೊಳಿಸುವಾಗ ಈಗಾಗಲೇ ಆಯ್ಕೆಗೊಂಡ ಅಭ್ಯರ್ಥಿಗಳು ಕರ್ನಾಟಕ ಆಡಳಿತ ಮಂಡಳಿಗೆ ಅರ್ಜಿಯನ್ನು ಸಲ್ಲಿಸುತ್ತಾರೆ. ಅರ್ಜಿಯನ್ನು ಪರಿಶೀಲಿಸಿದ ನ್ಯಾಯಮಂಡಳಿಯು, ಈಗಾಗಲೇ ಹೊರಡಿಸಿದ ಆಯ್ಕೆ ಪಟ್ಟಿಯು ಕ್ರಮಬದ್ಧವಾಗಿದ್ದು, ಈಗ ತೆಗೆದುಕೊಳ್ಳುತ್ತಿರುವ ಕ್ರಮಗಳು ಸಮಂಜಸವಾಗಿಲ್ಲವೆಂದು ಅಭ್ಯರ್ಥಿಗಳ ಪರವಾಗಿ ಆದೇಶವನ್ನು ಹೊರಡಿಸುತ್ತದೆ. ಅಭ್ಯರ್ಥಿಗಳು ಬುದ್ಧಿವಂತರಾಗಿರುತ್ತಾರೆ. ಕೇವಲ 1-2 ವರ್ಗದ ಅಭ್ಯರ್ಥಿಗಳನ್ನು ಸರ್ಕಾರವು ವಿಶೇಷವಾಗಿ ಪರಿಗಣಿಸಿರುತ್ತದೆ. ಪುರಸಭೆಯ ಮುಖ್ಯಾಧಿಕಾರಿ ಮತ್ತು ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಾಹಕ ಹುದ್ದೆಗಳಿಗೆ ಈ ರೀತಿಯಾದ ವ್ಯಾಜ್ಯಗಳಿವೆ, ಅದಕ್ಕೊಳಪಟ್ಟು ನಿಮಗೆ ಕೆಲಸವನ್ನು ನೀಡುತ್ತೇವೆ ಮುಂದುವರೆದು, ಅವುಗಳನ್ನು ಉಳಿಸುತ್ತೇವೆ ಅಥವಾ ಸಮಾಪ್ತಿಗೊಳಿಸುತ್ತೇವೆ ಎಂದು ತಿಳಿಸುತ್ತಾ, ಷರತ್ತುಬದ್ಧ ನೇಮಕಾತಿ ಆದೇಶವನ್ನು ಹೊರಡಿಸಲಾಗಿರುತ್ತದೆ. 'Just by Notification they will not become Government Servants. K.A.T., has no jurisdiction to consider this.' ಎನ್ನುವ ಅಭಿಪ್ರಾಯವನ್ನು ಉಚ್ಚ ನ್ಯಾಯಾಲಯವು ವ್ಯಕ್ತಪಡಿಸುತ್ತದೆ. 'Under Rule 11 and 12 of the Karnataka Recruitment of Gazetted Probationers (Appointment by Competitive Examinations) Rules, 1997, whether the Government is empowered to take action' ಎನ್ನುವ ವಿಚಾರದಲ್ಲಿ ಸರ್ಕಾರವು ಪ್ರಕರಣವನ್ನು ದಾಖಲಿಸಿರುತ್ತದೆ. So, High Court simply says, 'yes, under law, the Government is empowered.' ಅಲ್ಲಿ statutory requirement, ಸಂವಿಧಾನಾತ್ಮಕವಾದ ಷರತ್ತು ಇತ್ತು. ಭಾರತ ಸಂವಿಧಾನದ ಅನುಚ್ಛೇದ 323 ರಡಿ ಇದು ಶಾಸನ ಸಭೆಯ ಮುಂದೆ ಅಂತಿಮಗೊಳ್ಳುತ್ತದೆ ಎನ್ನುವಂತಹ ಷರತ್ತು ಅದಾಗಿತ್ತು. For nullifying any decision of the K.P.S.C., it has to go before the Legislature. ಈಗ ಇದರಿಂದಲೇ ನಮ್ಮ ಜೀವ ಉಳಿಯುವ ಅಥವಾ ಕಳೆಯುವ ಪ್ರಶ್ನೆಯಾಗಿದೆ. ಈ ತೀರ್ಮಾನವನ್ನು ಸರ್ಕಾರವು ಶಾಸನ ಸಭೆಯ ಮುಂದೆ ಪ್ರಸ್ತಾಪಿಸಿತ್ತು ಎನ್ನುವುದು ಅಂದಿನ ಸರ್ಕಾರದ ವಾದವಾಗಿದೆ. 2017 Annual Report of the K.P.SC., ನಲ್ಲಿ ಸರ್ಕಾರವು ತಿಳಿಸಿದೆ. In its report, it has stated: "However the Government has taken a decision to nullify the list of 2014 and 2015 batch." ಇಷ್ಟು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

statutory requirement fulfil ಮಾಡುತ್ತದೆಯೇ ಎನ್ನುವ ಚರ್ಚೆಗಳನ್ನು ನಾವು ಮಾಡಿದ್ದೇವೆ. 'It was to be expressively done' ಎನ್ನುವುದೇ ಈಗಿರುವ ವಾದ. ಈ ವಿಷಯವನ್ನು ಅಜೆಂಡಾದಡಿ ತೆಗೆದುಕೊಂಡು ಬಂದು ಚರ್ಚೆ ಮಾಡಿ, ತೀರ್ಮಾನ ತೆಗೆದುಕೊಳ್ಳಬಹುದಾಗಿತ್ತು. ವಾರ್ಷಿಕ ವರದಿಯಲ್ಲಿ ಕೊಟ್ಟಿರುವುದಷ್ಟೇ ಸೂಕ್ತವಲ್ಲವೆನ್ನುವುದು ಈಗ ನಾವು ತೆಗೆದುಕೊಂಡಿರುವ ನಿಲುವು ಆಗಿದೆ. You are right. 'But it was made known to the House, but not expressively.' ಎನ್ನುವ ಒಂದು ಪದವನ್ನು ನಾವು ಬಳಸಿದ್ದೇವೆ. ಯಾವುದೋ ಒಂದು ವಾರ್ಷಿಕ ವರದಿಯಲ್ಲಿ ಇದನ್ನು ನಮೂದಿಸಿ, ಈ ಅಂಶವು ಸದಸ್ಯರುಗಳ ಗಮನಕ್ಕೆ ಬಂದಿಲ್ಲ ಹಾಗೂ ಇದರ ಬಗ್ಗೆ ಚರ್ಚೆಗಳಾಗಿಲ್ಲ. ನಂತರದಲ್ಲಿ ಏನಾಯಿತೋ ಗೊತ್ತಿಲ್ಲ, ಸರ್ಕಾರವು ತೀರ್ಮಾನವನ್ನು ತೆಗೆದುಕೊಂಡಿದೆ. 'No, no, we will go with the K.A.T., order. We are prepared to issue appointment orders' ಎಂದು ಸರ್ವೋಚ್ಚ ನ್ಯಾಯಾಲಯದಲ್ಲಿ ಸರ್ಕಾರವೇ ಮೇಲ್ಮನವಿಯನ್ನು ಸಲ್ಲಿಸುತ್ತದೆ. 'We have no case to interfere with the Karnataka High Court's decision. ಉಚ್ಚ ನ್ಯಾಯಾಲಯವೇ ತೀರ್ಮಾನ ನೀಡುತ್ತದೆ' ಎಂದು ಸರ್ವೋಚ್ಚ ನ್ಯಾಯಾಲಯವು ಆದೇಶಿಸುತ್ತದೆ. ಈ ಮಧ್ಯದಲ್ಲಿ ಸಿ.ಐ.ಡಿ., ತನಿಖಾ ವರದಿಯನ್ನು ವಿಚಾರಣಾ ನ್ಯಾಯಾಲಯದ ಮುಂದೆ ಸರ್ಕಾರವು ಮಂಡಿಸುತ್ತದೆ. ಸಕ್ಷಮ ಪ್ರಾಧಿಕಾರದ ಪೂರ್ವಾನುಮತಿ ಪಡೆದುಕೊಳ್ಳದೇ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುವುದು ತಪ್ಪು. ಹೀಗಾಗಿ ಇದನ್ನು ಜೊತೆಯಲ್ಲಿ ತೆಗೆದುಕೊಂಡು ಬನ್ನಿ; The Government has to permit you to prosecute, because they are Government Servants.' ಎಂದು ವಿಚಾರಣಾ ನ್ಯಾಯಾಲಯವು ಸರ್ಕಾರಕ್ಕೆ ತಿಳಿಸುತ್ತದೆ. ಪ್ರಕರಣದ ಒಂದನೇ ಆರೋಪಿತರ ವಿರುದ್ಧ ಕ್ರಮ ತೆಗೆದುಕೊಳ್ಳುವಷ್ಟರಲ್ಲಿ ಲೋಕ ಸೇವಾ ಆಯೋಗದ ಅಧ್ಯಕ್ಷರು ಸರ್ಕಾರಿ ಸೇವೆಯಿಂದ ನಿವೃತ್ತರಾಗಿರುತ್ತಾರೆ. ಆಗ ನಿವೃತ್ತರಾಗಿರುವವರ ವಿರುದ್ಧ ಭ್ರಷ್ಟಾಚಾರ ಪ್ರತಿಬಂಧಕ ಕಾಯ್ದೆಯ ನಿಯಮಗಳು ಅನ್ವಯಿಸುವುದಿಲ್ಲವೆಂದು ಅವರನ್ನು ಪ್ರಕರಣದಿಂದ ಕೈಬಿಡಲಾಗುತ್ತದೆ. ಆಯೋಗದ ಮತ್ತೋರ್ವ ಸದಸ್ಯರನ್ನು ಏಕಾಏಕಿ ಸರ್ಕಾರಿ ಸೇವೆಯಿಂದ ಅಮಾನತ್ತುಗೊಳಿಸುತ್ತಾರೆ. Suspension of the Member is not in the level or purview of the Government. ಅವರು ರಾಷ್ಟ್ರಪತಿಗಳಿಂದ ನೇಮಕಾತಿ ಹೊಂದಿದ್ದರಿಂದ ರಾಷ್ಟ್ರಪತಿಗಳ ಕಛೇರಿಗೆ ಸರ್ವೋಚ್ಚ ನ್ಯಾಯಾಲಯದ ಮುಖಾಂತರವೇ ಹೋಗಬೇಕಾಗಿತ್ತು. ರಾಜ್ಯ ಸರ್ಕಾರವು ತಪ್ಪು ತೀರ್ಮಾನವನ್ನು ತೆಗೆದುಕೊಂಡಿದೆ ಎಂದು ಉಚ್ಚ ನ್ಯಾಯಾಲಯವು struckdown ಮಾಡುತ್ತದೆ, ಆಗ ಸದಸ್ಯರು safeguard ಆಗುತ್ತಾರೆ. As you rightly said,

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಕರ್ನಾಟಕ ಲೋಕ ಸೇವಾ ಆಯೋಗದ ಕಾರ್ಯದರ್ಶಿಯು ಪ್ರಕರಣದ 3ನೇ ಆರೋಪಿಯಾಗಿದ್ದು, ಆ ಸಂದರ್ಭದಲ್ಲಿ ಪ್ರಕರಣದ ದೋಷಾರೋಪಣ ಪಟ್ಟಿಯು ಅಂತಿಮವಾಗಿ ಸಿದ್ಧಗೊಂಡಿರಲಿಲ್ಲ. ಆಗ ಸರ್ಕಾರವು ತೀರ್ಮಾನವನ್ನು ತೆಗೆದುಕೊಂಡು, ಸದರಿ ಆರೋಪಿಯನ್ನು ದೋಷಮುಕ್ತಗೊಳಿಸುತ್ತದೆ. ಆ ಸಂದರ್ಭದಲ್ಲಿ ಆಯೋಗದ ಅಂದಿನ ಕಾರ್ಯದರ್ಶಿಯು ಕೆಲಸವನ್ನು ಬಿಟ್ಟು ಬೇರೆಡೆಗೆ ಹೋಗಿರುತ್ತಾರೆ. ಇದು ಅಂದಿನ ಸರ್ಕಾರದ ತೀರ್ಮಾನವಾಗಿದ್ದು, ಅದರ ಬಗ್ಗೆ ನಾನು ಚರ್ಚೆ ಮಾಡುವುದಕ್ಕೆ ಇಷ್ಟಪಡುವುದಿಲ್ಲ. ಈಗ ಇಷ್ಟೆಲ್ಲಾ ಸಂಗತಿಗಳಾದ ಮೇಲೆ, ಸಿ.ಐ.ಡಿ., ಸಂಸ್ಥೆಯು ಸಲ್ಲಿಸಿರುವ ವರದಿಯಲ್ಲಿ 'there are few candidates who are tainted' ಎನ್ನುವ ಪದವನ್ನು ಬಳಸಿದೆ. ಅಭ್ಯರ್ಥಿಗಳು ಆಯೋಗದ ಸದಸ್ಯರೊಂದಿಗೆ ದೂರವಾಣಿಯಲ್ಲಿ ಮಾತನಾಡಿರುತ್ತಾರೆ ಎನ್ನುವ ಕಾರಣವನ್ನು ಸಿ.ಐ.ಡಿ., ಸಂಸ್ಥೆಯು ನೀಡುತ್ತದೆ. ಇದರಿಂದಾಗಿ ಅಲ್ಲಿ ಯಾವುದೋ ವ್ಯವಹಾರವಾಗಿದೆ ಎನ್ನುವುದನ್ನು ನಾವು ಭಾವಿಸಿಕೊಳ್ಳಬಹುದು ಎಂದು ಸಿ.ಐ.ಡಿ., ಯು ತನ್ನ ವರದಿಯಲ್ಲಿ ತಿಳಿಸಿತ್ತು. ಇದರಲ್ಲಿ ಕ್ರಿಮಿನಲ್ ಪ್ರಾಸಿಕ್ಯೂಷನ್ ಮತ್ತು ಭ್ರಷ್ಟಾಚಾರ ಪ್ರತಿಬಂಧಕ ಕಾಯ್ದೆ ಎನ್ನುವ ಎರಡು ಸಂಗತಿಗಳಿದ್ದವು. ಆರೋಪಿಗಳ ವಿರುದ್ಧದ ಕ್ರಿಮಿನಲ್ ಪ್ರಾಸಿಕ್ಯೂಷನ್ ಸರ್ಕಾರದ ಹಂತದಲ್ಲಿತ್ತು. ಆದರೆ, ಭ್ರಷ್ಟಾಚಾರ ಪ್ರತಿಬಂಧಕ ಕಾಯ್ದೆಯಡಿ ರಾಜ್ಯದ ರಾಜ್ಯಪಾಲರ ಮುಖಾಂತರ ಆವಾಗಲೇ ರಾಷ್ಟ್ರಪತಿಗಳಿಗೆ ತನಿಖಾ ವರದಿಯನ್ನು ಸಲ್ಲಿಕೆ ಮಾಡಬೇಕೆಂದು ಪ್ರಯತ್ನಿಸಿದಾಗ the then Governor rejects it on the ground no sufficient material is there.

(ಮುಂದು)

(949) 2.10 23-09-2021 CS/ MD

**ಶ್ರೀ ಜೆ.ಸಿ. ಮಾಧುಸ್ವಾಮಿ (ಮುಂದು):-**

Sufficient material ಇಲ್ಲದಿದ್ದರಿಂದ I cannot recommend your case to the Hon'ble President of India, ಗೆ ಮಾಡುವುದಿಲ್ಲ ಎಂದು ಅವತ್ತು ಹೇಳಿದ್ದೇನೆ. ಅದಾದ ಮೇಲೆ ಸರ್ಕಾರ ಬದಲಾವಣೆ ಆಯಿತು. ನಾವು ಅಧಿಕಾರಕ್ಕೆ ಬಂದ ಮೇಲೆ ನಮ್ಮ ಮೇಲೆ ಒತ್ತಡ ಹೆಚ್ಚಾಯಿತು. ಇದೆಲ್ಲ 2014 ನಿಂದ 2017ರವರೆಗೆ ನಡೆದಿದೆ. We took a decision. ಯಾವ ಸರ್ಕಾರದಲ್ಲಿದ್ದರು ಈ ನಿರ್ಧಾರ ಕೈಗೊಂಡಿದ್ದರೋ ಅವರೇ ಇವರುಗಳು ಅಮಾಯಕರಿದ್ದಾರೆ, innocents ಇದ್ದಾರೆ. ಅವರಿಗೇನಾದರೂ ಸಹಾಯ ಮಾಡಬೇಕೆಂದು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀಯುತರಾದ ಸಿದ್ದರಾಮಯ್ಯನವರು, ಮಾನ್ಯ ಹೆಚ್.ಕೆ.ಪಾಟೀಲ್‌ರವರು ಈ ವಿಚಾರವನ್ನು ವಿಧಾನಸಭೆಯಲ್ಲಿ ಪ್ರಸ್ತಾಪಿಸಿದರು. No, we have already filed an affidavit before the Supreme Court. ಅವರಿಗೆ ಕೊಡಬೇಕೆಂದು ನಾವು ಈಗಾಗಲೇ ತೀರ್ಮಾನ ಮಾಡಲಾಗಿದೆ. ಆದರೆ technical reasons ನಿಂದ ಹಾಳಾಗಿರುವುದರಿಂದ the Government has to consider ಎಂದು ನಾವು ಕೂಡ positive ಆಗಿಯೇ ಉತ್ತರ ನೀಡಿದ್ದೇವೆ. ಅದರಲ್ಲಿ ಯಾವುದೇ ಅನುಮಾನ ಇಲ್ಲ. The entire House is unanimous in this issue. Article 323 or 323 (2) ಕೆಳಗೆ ಅಸೆಂಬ್ಲಿಯಲ್ಲಿ ಹೇಳಬೇಕಾಗಿತ್ತು ಅದು ಸಂವಿಧಾನಾತ್ಮಕವಾದ ಜವಾಬ್ದಾರಿ, ಎನ್ನುವುದು ನಿಜ, ಆದರೆ ಅದು ಆಗಿಲ್ಲ. That means the Assembly has every power either to accept or reject the Government's recommendation. ಆ ಅಧಿಕಾರವನ್ನು constitutional provision ಏನಿದೆ, ಶಾಸನಬದ್ಧವಾಗಿದ್ದುದ್ದನ್ನು ನೀವು exercise ಮಾಡಲಿಲ್ಲ. ಆಗಲೇ Sessions Court ನಲ್ಲಿ charge sheet file ಆಗಿತ್ತು, charge sheet file ಆದ ಮೇಲೆ 'bring the prosecution permission' ಎಂದು ಅವರು ಹೇಳಿದರು. ನಾನು ಕ್ಯಾಬಿನೆಟ್‌ನಲ್ಲಿ ನನ್ನ ಅಧ್ಯಕ್ಷತೆಯಲ್ಲಿ ಒಂದು ಸಬ್ ಕಮಿಟಿಯನ್ನು ಮಾಡಿ, now we have taken a decision not to prosecute the, the then members of the PSC (Public Service Commission). ಇದರಲ್ಲಿ ನಮಗೆ ಸಾಕಷ್ಟು materials, prima facie case ಇದೆ ಎಂದು ಅನಿಸಲಿಲ್ಲ. ತನಿಖೆಯಲ್ಲಿ ಪೋನಿನ ಸಂಭಾಷಣೆಯನ್ನು ರೆಕಾರ್ಡ್ ಮಾಡಿದ ತಕ್ಷಣ ಮಕ್ಕಳು ಸದಸ್ಯರ ಜೊತೆಯಲ್ಲಿ ಮಾತನಾಡಿದರೆ, something is wrong. ಇಲ್ಲಿ ಭ್ರಷ್ಟಾಚಾರ ನಡೆದಿದೆ, favouritism, nepotism ಆಗಿದೆ ಎನ್ನುವುದಕ್ಕೆ ಆಗುವುದಿಲ್ಲ. ಅದೆಲ್ಲ ಇಲ್ಲದಿದ್ದರಿಂದ we are prepared to stop the prosecution proceedings ಎಂದು ನಾವು ತೆಗೆದುಕೊಂಡು the cabinet endorsed it. ಸಬ್ ಕಮಿಟಿ ಹೇಳಿದ ರೀತಿಯಲ್ಲಿ ಸದಸ್ಯರ ಮೇಲೆ prosecution case hold ಮಾಡಿ, there is no need of prosecuting the members criminally. Criminal prosecution ಅನ್ನು ಸದಸ್ಯರ ಮೇಲೆ ಮಾಡುವುದು ಬೇಡವೆಂದು ಸರ್ಕಾರ ತೀರ್ಮಾನವನ್ನು ಕೈಗೊಂಡಿತು. Prevention of Corruption Act ನಲ್ಲಿ the Government is not empowered. ಸರ್ಕಾರಕ್ಕೆ ಮಧ್ಯಪ್ರವೇಶ ಮಾಡುವುದಕ್ಕೆ ಅವಕಾಶ ಇರುವುದಿಲ್ಲ. ಹಾಗಾಗಿ ನಮ್ಮ ಮುಖ್ಯ ಕಾರ್ಯದರ್ಶಿಯವರು ಇದು ಸರ್ಕಾರದ ವ್ಯಾಪ್ತಿಗೆ ಬರುವುದಿಲ್ಲವೆಂದು ಹೇಳಿದೆ ಮೇಲೆ, lets aid it. If they want, to let them go independently and file the investigation report and charge sheet before the Hon'ble President ಅಂತ ಹೇಳಿದೆವು. ಅವರು ಹೋದರು. ನೀವುಗಳು ಪ್ರಯತ್ನ ಮಾಡಿದ್ದೀರಿ, ರಾಷ್ಟ್ರಪತಿಯವರು ಒಂದು ನಿರ್ಧಾರವನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೈಗೊಂಡು, “no, you have not come through proper channel ಎಂದು ಹೇಳಿ, it has been returned. ಇದು ನನಗೆ ತಿಳಿದಿರುವ ಮಾಹಿತಿ. ರಾಷ್ಟ್ರಪತಿಗಳಿಂದ ಹಿಂದಕ್ಕೆ ಬಂದಿತು. ಲೋಯರ್ ಕೋರ್ಟ್‌ನಲ್ಲಿ case is in abeyance ಎನ್ನುವುದು ನಮ್ಮ ತಲೆಯಲ್ಲಿತ್ತು. ಏಕೆಂದರೆ ಅವರು ಕೇಸನ್ನು ಕ್ಲೋಸ್ ಮಾಡದೇ, prosecution permission ತೆಗೆದುಕೊಂಡು ಬನ್ನಿ ಎಂದು ಹೇಳಿದರು. ಯಾವಾಗ ನಾವು prosecution permission ಕೊಡಬಾರದೆಂದು ನಿರ್ಧಾರ ಕೈಗೊಂಡ ಮೇಲೆ, we complained the same with the High Court of Karnataka. ಅವರು direct ಮಾಡಿ, ‘when they are not prepared to go for prosecution, why are you having the case with you. The judgement is given. I am closing the case and returning the charge sheet to the Investigating Agency’ ಎಂದು ವಾಪಸ್ಸು ಕಳುಹಿಸಿ, ಕೊನೆಯ ಲೈನ್‌ನಲ್ಲಿ “however the Government is open to come, approach the court if it feels in filling the new charge sheet.” ಎಂದು ಬರೆದಿದ್ದಾರೆ. Liberty is given to the Government. ಈಗ ಈ ಪ್ರಕರಣ ಈ ಹಂತದಲ್ಲಿದೆ. ಈಗ ಇವರಿಗೆ ಅನ್ಯಾಯ ಮಾಡಬೇಕೆನ್ನುವ ಭಾವನೆ ಎರಡು ಸದನಗಳ ಯಾವುದೇ ಪಕ್ಷದ ಸದಸ್ಯರಿಗೆ ಇಲ್ಲ. ಆದರೆ ನಾವೇನು ಮಾಡಿದ್ದೇವೆ ಎಂದು ಮತ್ತೆ ಮತ್ತೆ ಕೋರ್ಟಿಗೆ ಹೋಗಿ litigation ಹಾಕುವುದರಿಂದ, ಮತ್ತೆ ಆ ಹುಡುಗರು ಕೋರ್ಟಿನ ಬಾಗಿಲನ್ನು ಕಾಯುವುದು ಬೇಡ ಎಂದು ಸುಮಾರು consultations ಗಳನ್ನು ನಾನು ಮಾಡುತ್ತಿದ್ದೇನೆ. ಈ ಮಧ್ಯೆ I have sought the legal opinion of our Law Department and the Advocate General. ಹಾಗೆಯೇ ಒಂದಿಬ್ಬರು ಹಳೆಯ Advocate General ಗಳಿಗೂ how to proceed on this ಎಂದು ಸಹ ವೈಯುಕ್ತಿಕವಾಗಿ ಮನವಿಯನ್ನು ಮಾಡಿಕೊಂಡಿದ್ದೇನೆ. ಮಾನ್ಯ ಹೆಚ್.ಕೆ.ಪಾಟೀಲರಿಗೆ ಇದರ ಬಗ್ಗೆ ಉತ್ತರ ನೀಡಿದ್ದೇನೆ. How to proceed on this ಎನ್ನುವುದಕ್ಕೆ ಮತ್ತೆ ಏಕೆ ಕೋರ್ಟಿನ ಮುಂದೆ ಕೈ ಕಟ್ಟಿಕೊಂಡು ನಿಂತುಕೊಳ್ಳೋಣ ಎಂದು, we are working out on this, we are positive on this. ಆ ಲಿಸ್ಟ್ ನ್ನು ಆ ದಿನಾಂಕದಲ್ಲಿ ಏನು quash ಮಾಡಿದ್ದರು, ಅದನ್ನು consider ಮಾಡಬೇಕೆಂದು ಇದನ್ನೆಲ್ಲ ಮಾಡಲಾಗುತ್ತಿದೆ. One technical problem before us is High Court issues ಅನ್ನು frame ಮಾಡಿಕೊಂಡರು. 1, 2, 3ನಲ್ಲಿ 1ನೇಯದು, ‘can it be reconsidered at first level’ ಎಂದರು. First level is written examination level. They said it in negative point. Viva voce stage ನಲ್ಲಿ ‘Can it be reconsidered in second stage’ ಎಂದಾಗ ಅದನ್ನು ಸಹ ನೆಗಟಿವ್ ಎಂದು ಹೇಳಿದರು. Now we cannot go to that stage. The option for us is, we have to just accept that, the notification is valid. ಅದನ್ನು

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಮಾಡಿಕೊಳ್ಳುವಾಗ ಮೊದಲ ಹಂತದಲ್ಲಿ ಇನ್ನೇನು ಚರ್ಚೆಯನ್ನು ಮಾಡುವುದಕ್ಕೆ ನಮಗೆ ಅಧಿಕಾರ ಇಲ್ಲ. ಆದರೆ ಇದನ್ನು ಸಂವಿಧಾನಾತ್ಮಕವಾಗಿ ಏನು ಮಾಡಬಹುದು ಎನ್ನುವುದರ ಬಗ್ಗೆ somebody has to give an advice to the Government. Just because we want to see that, they get the job, we cannot take decision so rapidly. ನಾವು ಈಗ opinion ಕೇಳಿದ್ದೇವೆ. ಆ ಮನೆಯಲ್ಲಿಯೂ ಸಹ ನಾನು ಇದನ್ನು ಹೇಳಿದ್ದೇನೆ. Advocate General ರವರು ಸಹ ಸಬ್ ಕಮಿಟಿಯಲ್ಲಿ ಇದ್ದುಕೊಂಡು ಈ prosecution ಕೊಡುವ ಅಗತ್ಯ ಇಲ್ಲವೆಂದಾಗ ನಮ್ಮ ಜೊತೆ ಪಾರ್ಟಿ ಇದ್ದಾರೆ. Fresh ಆಗಿ ಹೇಗೆ ಹೋಗಬೇಕೆಂದು ನೋಡಬೇಕು. Will an executive order do or we will have to go for a law, ಇಲ್ಲಿ ತಂದು enact ಮಾಡಬೇಕೇ ಎನ್ನುವ ಚರ್ಚೆಗಳನ್ನು ಮಾಡಿ ಹೇಗಾಗುತ್ತದೆ, ಅದನ್ನು ನಾವು ಸರಿಪಡಿಸಬೇಕೆಂದು ಸರ್ಕಾರ ನಿರ್ಧಾರವನ್ನು ಕೈಗೊಂಡಿದೆ. ಸರ್ಕಾರ ನಿಮ್ಮೆಲ್ಲರ ಭಾವನೆಗಳಿಗೆ ಸ್ಪಂದಿಸಿದೆ. ಇದುವರೆಗೆ ನನಗೆ ಯಾವುದೇ ಜನಪ್ರತಿನಿಧಿಯಿಂದ 'ನಮಗೆ ಇದು ಬೇಡ, ತಪ್ಪಾಗಿದೆ 'ಎನ್ನುವ ಮಾತು ಬಂದಿಲ್ಲ. ಆದರೆ ನಮಗೆ as a Law Minister, I am fixed how to proceed on this issue. ನೀವು ಅರ್ಥ ಮಾಡಿಕೊಳ್ಳಬಹುದು. ಇದು ಅಷ್ಟೊಂದು ಸುಲಭವಲ್ಲ. Because the matter is trailed in the Higher Court. The High Court has considered it twice. It has rejected the Government's plea second time. The Supreme Court has rejected our plea. ನಾವು convince ಆಗಲೇ ಬೇಕಿದೆ. ನಾವು ಸುಪ್ರೀಮ್ ಕೋರ್ಟ್‌ಗೆ review ಹೋಗಲಿಕ್ಕೆ ಕೇಸಿಲ್ಲ. ಮೊದಲೇ ಹೋಗಿದೆ, ಮಕ್ಕಳು ಯಾರು implead ಮಾಡಲಿಲ್ಲ, ನಾವು infringed persons ಎಂದು ಅವರು ಯಾರು ಕೋರ್ಟ್ ಮುಂದೆ ಹೇಳಲಿಲ್ಲ. ಅಭ್ಯರ್ಥಿಗಳ ಸುದ್ದಿನೇ court trail ನಲ್ಲಿ ತೆಗೆದುಕೊಳ್ಳಲಿಲ್ಲ ಎನ್ನುವುದು ತಮಗೆಲ್ಲರಿಗೂ ಗೊತ್ತಿದೆ. Only whether the Government is empowered or not ಎನ್ನುವುದನ್ನು ತೆಗೆದುಕೊಂಡು ಮಾಡಿತ್ತು, ಆಮೇಲೆ ನಾವು charge sheet ಹಾಕಿದ ಮೇಲೆ 'they are tainted and non-tainted' ಎನ್ನುವ ಪದ ಬಳಸಿ, 30-40 ಅಭ್ಯರ್ಥಿಗಳ ಬಗ್ಗೆ ಸಿಐಡಿ ವರದಿಯಲ್ಲಿ ಒಂದಿಷ್ಟು ಉಲ್ಲೇಖ ಆಗಿದ್ದು, ನಾವು ಅದ್ಯಾವುದನ್ನು ಗಣನೆಗೆ ತೆಗೆದುಕೊಳ್ಳದೇ ಸಾರಾಸಗಟಾಗಿ we have refused the prosecution means we have rejected the entire charge sheet ಎನ್ನುವುದರಲ್ಲಿ ಯಾವುದೇ ಅನುಮಾನವಿಲ್ಲ. But please give us some time. ಹೇಗೆ ಮಾಡಬೇಕು, ಏನು ಮಾಡಬೇಕೆನ್ನುವುದರ ಬಗ್ಗೆ ತಮ್ಮ ಗಮನಕ್ಕೆ ತರುವುದೇನೆಂದರೆ 14 ಮತ್ತು 15ನೇ ಬ್ಯಾಚಿವನರೂ ಯಾರು ನಮ್ಮನ್ನು approach ಮಾಡಲಿಲ್ಲ. ಅವರು ಯಾರು ಇದರಲ್ಲಿ ಮಧ್ಯಪ್ರವೇಶವನ್ನು ಮಾಡಲಿಲ್ಲ. ನಾವು ಏಕೆ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅದನ್ನೆಲ್ಲ ಮಾತನಾಡಬೇಕು, ನಾನು ಕೆಳಗಿನ ಮನೆಯಲ್ಲಿ ಮಾತನಾಡುವಾಗ ಇದರಲ್ಲಿ risk ಇದೆ, seniority ಹೇಗೆ fix ಮಾಡಬೇಕೆನ್ನುವ ಬಗ್ಗೆ ಆಲೋಚನೆ ಮಾಡುತ್ತಿದ್ದೇವೆ ಎಂದು ಮಾನ್ಯ ಹೆಚ್.ಕೆ.ಪಾಟೀಲರಿಗೆ ಹೇಳಿದೆನು. In this regard nobody is pressurising us. We are not in the pressure of anybody. The Government is willing to do this job. But, the Government is finding the access to how to go ahead, how to finish this without being questioned in the court of law ಎನ್ನುವ ಒಂದು ಒಂದು ಕಾರಣಕ್ಕೆ ಆಲೋಚನೆಗಳನ್ನು ಮತ್ತು ತನಿಖೆಗಳನ್ನು ನಡೆಸಿ ಮುಂದುವರೆಯುತ್ತಿದ್ದೇವೆ. ದಯಮಾಡಿ ನಮಗೆ ಅವಕಾಶವನ್ನು ಕೊಟ್ಟರೆ ನಾವು ಈ ಕೆಲಸವನ್ನು ಮಾಡಿಕೊಡುತ್ತೇವೆ.

**ಶ್ರೀ ಪಿ.ಆರ್.ರಮೇಶ್(ನಾಮ ನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೆ, ನಾನು ಮಾನ್ಯ ಸಚಿವರ ಹೇಳಿಕೆಯನ್ನು ಸಂಪೂರ್ಣವಾಗಿ ಒಪ್ಪಿಕೊಳ್ಳುತ್ತೇನೆ. ಈಗಾಗಲೇ 7-8 ವರ್ಷಗಳಾಗಿ ಹೋಗಿದೆ. 2020ರಲ್ಲಿಯೇ ಒಂದೂವರೆ ವರ್ಷದ ಕೆಳಗೆ ಇದರ ಬಗ್ಗೆ ಕ್ರಮ ಕೈಗೊಳ್ಳುತ್ತೇವೆಂದು ತಾವೇ ಆಶ್ವಾಸನೆಯನ್ನು ಕೊಟ್ಟಿರಿ. ಒಂದು any collateral proceedings ಬೇಕಾದರೆ ಕೋರ್ಟ್ ಮುಂದೆ fraudulent order question ಮಾಡಬೇಕು. ಆ ನಿರ್ದಿಷ್ಟವಾದ ಆದೇಶದಲ್ಲಿ ಒಂದು itch ಇದೆ, ಆ itch ನ್ನು ತೆಗೆಯುವುದಕ್ಕೆ ಸರ್ಕಾರ ಕಾನೂನಾತ್ಮಕ ಕ್ರಮಗಳನ್ನು ಕೈಗೊಳ್ಳಬೇಕು. ಅದು ಒಂದು ಮಾಡಿದರೆ, it will come back to 2014 order. Then automatically they will stand, stick on ಆಗುತ್ತದೆ. ಆ ಒಂದು ಕೆಲಸವನ್ನು ಮಾಡುವುದಕ್ಕೆ ಸರ್ಕಾರ ಪ್ರಯತ್ನ ಮಾಡಿದರೆ, I think you will success. Please consider this.

(Contd..)

(950)/23-9-2021/2-20/ಎಲ್ಎಂ/ಎಂಡಿ

**ಶ್ರೀ ಎಸ್.ರುದ್ರೇಗೌಡ(ವಿಧಾನಸಭೆಯಿಂದ ಚುನಾಯಿತರಾದವರು)**:- ಮಾನ್ಯ ಸಭಾಪತಿಗಳೆ, 2011 batch select ಆಗುವಷ್ಟರಲ್ಲಿ ನಾನು ಕೆಪಿಎಸ್‌ಸಿ ಸದಸ್ಯತ್ವದಿಂದ ಹೊರಗೆ ಬಂದಿದೆ. ನಾನು ಅಲ್ಲಿಂದ ಬಂದ ಮೇಲೆ ಬಂದಿರುವಂತಹ ಬ್ಯಾಚ್ ಇದು. ಆಗ ಇದ್ದ ಅಭ್ಯರ್ಥಿಗಳಿಗೆ ಮತ್ತು ಸದಸ್ಯರಿಗೆ ಗೌರವ ಮತ್ತು ನಂಬಿಕೆ ಇದೆ. ಆದರೆ ಇಲ್ಲಿ ಇರುವ ಒಂದೇ ಒಂದು ಆತಂಕ ಎಂದರೆ, ತುಂಬಾ ಸಮಯ ಹೋಗುತ್ತಿದೆ. ಈಗಾಗಲೆ ಲಿಸ್ಟ್ ಬಂದು ೧೦ ವರ್ಷಗಳಾಗಿದೆ. ಇವರು ಬೇರೆ ಕಡೆ apply ಮಾಡುವ ಹಾಗೇಯು ಇಲ್ಲ ಮತ್ತು ಆ ಅಭ್ಯರ್ಥಿಗಳಿಗೆ ವಯಸ್ಸು ಕೂಡಾ ಆಗುತ್ತಿದೆ. ಮುಂದೆ ಅವರು ಯಾವುದೇ ಸರ್ಕಾರಿ ಕೆಲಸಕ್ಕೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅರ್ಜಿ ಹಾಕದಿರುವಂತಹ ಹಂತಕ್ಕೆ ಅವರು ಬಂದಿದ್ದಾರೆ. ಹೀಗಾಗಿ ಇದಕ್ಕೆ ಒಂದು ಮುಕ್ತಿಯನ್ನು ಆದಷ್ಟು ಬೇಗ ಕೊಡಿ ಎಂದು ಅಭ್ಯರ್ಥಿಗಳ ಪರವಾಗಿ ಮತ್ತು ಸದನದ ಎಲ್ಲಾ ಆಸಕ್ತರ ಪರವಾಗಿ ನಾನು ಕೇಳಿಕೊಳ್ಳುವುದು ಇಷ್ಟೆ,

**ಶ್ರೀ ಎನ್.ರವಿಕುಮಾರ್(ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರಾದ ಎಸ್.ರುದ್ರೇಗೌಡರು ಮತ್ತು ಶ್ರೀ ಪಿ.ಆರ್.ರಮೇಶ್‌ರವರು ಹೇಳಿದ ಹಾಗೆ ವಯಸ್ಸಿನ ಸಮಸ್ಯೆ ಇದೆ. ಅವರು ಬೇರೆ ಕಡೆಗೆ apply ಮಾಡಲು ಆಗುವುದಿಲ್ಲ. ಸರ್ಕಾರ ಒಂದು time bound ಹಾಕಿಕೊಂಡು ಇಷ್ಟು ತಿಂಗಳೊಳಗಡೆ ಎಲ್ಲ ಕ್ರಮಗಳನ್ನು ತೆಗೆದುಕೊಂಡು ಅವರಿಗೆ ನೇಮಕಾತಿ ಆದೇಶವನ್ನು ಕೊಡುವತ್ತ ಹೆಚ್ಚು ಗಮನಹರಿಸಬೇಕು ಎಂದು ಹೇಳುತ್ತೇನೆ. ಇದರಿಂದ ಅಭ್ಯರ್ಥಿಗಳಿಗೆ ಒಳ್ಳೆಯ positive message ನ್ನು ಕೊಡಬಹುದು. ಈಗ ಎಲ್ಲ ವಿಷಯಗಳಿಗೂ ಕೋರ್ಟ್‌ಗೆ ಹೋಗುವುದು ಪರಿಪಾಠವಾಗಿದೆ. ಆ ವಿಷಯದಲ್ಲಿ ತಾತ್ವಿಕತೆ ಇದೆಯೇ ಇಲ್ಲವೇ, ಸತ್ಯ ಇದೆಯೇ ಇಲ್ಲವೇ ಎನ್ನುವುದನ್ನು ನೋಡುವುದೇ ಇಲ್ಲ. ಎಲ್ಲ ವಿಷಯಗಳಿಗೂ ಕೋರ್ಟ್‌ಗೆ ಹೋಗುತ್ತಿದ್ದಾರೆ. ಇದರಿಂದ ಬಹಳಷ್ಟು decisions ಆಗುವುದೇ ಇಲ್ಲ. ಅದು negative ಆಗಿರಬಹುದು, positive ಆಗಿರಬಹುದು. ಕೆಪಿಎಸ್‌ಸಿ ಎಂದರೆ ಸಾಕು ಕೋರ್ಟ್ ಎನ್ನುವುದು ಆಗಿದೆ. ಈ ಕೋರ್ಟ್‌ಗೆ ಹೋಗುವವರ ಕಾರಣದಿಂದ ಕೆಟ್ಟ ಹೆಸರು ಬಂದಿದೆ. ಯಾವುದೇ ನೇಮಕಾತಿಗಳು ಆಗುತ್ತಿಲ್ಲ, ಮುಂದಕ್ಕೆ ಹೋಗುತ್ತಲೆ ಇಲ್ಲ. ಯಾವುದೇ ಸರ್ಕಾರವಿರಲಿ ಅಭಿವೃದ್ಧಿ ಕೆಲಸಗಳನ್ನು ಮಾಡಬೇಕೇ ಬೇಡವೇ? ಅಧಿಕಾರಿಗಳದ್ದೆ ಆಗಿರಲಿ ಎಲ್ಲದಕ್ಕೂ ಕೊಕ್ಕೆ ಹಾಕಿಕೊಂಡು ಕುಳಿತುಕೊಳ್ಳುವುದು ಸಮಾಜಕ್ಕೆ ಇದು ಒಳ್ಳೆಯ ಸಂಸ್ಕೃತಿಯಲ್ಲ. ಜೀವನದುದ್ದಕ್ಕೂ ಚೆಲ್ಲಾಟವಾಗಿ ಬಿಟ್ಟಿದೆ. ಅದಕ್ಕೆ ಸರ್ಕಾರ ಕಾಲಮಿತಿಯನ್ನು ಹಾಕಿಕೊಂಡು positive message ನ್ನು, KPSC ಗೆ ಒಂದು ದೊಡ್ಡ strength ನ್ನು ಕೊಡುವಂತಹ ಕೆಲಸವನ್ನು ಸರ್ಕಾರ ಮಾಡಬೇಕೆಂದು ವಿನಂತಿಸಿಕೊಳ್ಳುತ್ತೇನೆ.

**ಶ್ರೀ ಜೆ.ಸಿ.ಮಾಧುಸ್ವಾಮಿ (ಕಾನೂನು ಸಂಸದೀಯ ವ್ಯವಹಾರಗಳ ಸಚಿವರು)**:- ಮಾನ್ಯ ಸಭಾಪತಿಗಳೆ, ಇಂಗ್ಲಿಷ್‌ನಲ್ಲಿ ಒಂದು ಗಾದೆ ಇದೆ. “Undoing is more difficult than doing.” ಒಂದು ಸರ್ಕಾರದಲ್ಲಿ ತೆಗೆದುಕೊಂಡು ತೀರ್ಮಾನ, ಕೋರ್ಟ್‌ನಲ್ಲಿ ತೆಗೆದುಕೊಂಡ ತೀರ್ಮಾನಗಳನ್ನು ಅಷ್ಟು ಬೇಗ undo ಮಾಡಲು ಆಗುವುದಿಲ್ಲ. I cannot simply say that I can undo this. ನಾನು ನನ್ನ ಸಮಸ್ಯೆಯನ್ನು ಮುಕ್ತವಾಗಿ ಮಾತನಾಡಿದ್ದೇನೆ. ನೀವು ಯಾರಾದರೂ ಪುಣ್ಯಾತ್ಮರು ನನಗೆ ಸ್ವಲ್ಪ legal assistance ಕೊಡಿಸಿ, ಯಾರಾದರೂ ಒಳ್ಳೆಯ

“ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಲಾಯರ್ ಕರೆದುಕೊಂಡು ಬಂದು, ನೀವು ಈ ರೀತಿ proceed ಆಗಿ, ಏನು ತೊಂದರೆಯಾಗುವುದಿಲ್ಲ ಎಂದು ಹೇಳಿ ಪರಿಹಾರ ಮಾಡಿಬಿಡಲಿ.

**Sri S.R.PATIL:-** Basically you are a lawyer. Legal field ನಲ್ಲಿ ಎಷ್ಟು ಜನರಿದ್ದಾರೆಂದು ನಿಮಗೆ ಎಲ್ಲವು ಗೊತ್ತು, constitutional experts ಗಳ ಅಭಿಪ್ರಾಯ ತೆಗೆದುಕೊಂಡು ಅದಕ್ಕೆ ಒಂದು ಮುಕ್ತಿ ಕೊಡಿ. ಆ ಸಮಯದಲ್ಲಿ ನಾನು ಮಂತ್ರಿಯಾಗಿದ್ದೆ. ಇವರ ಪರವಾಗಿಯೇ ನಾನು ಇದ್ದೆ.

**ಸಭಾಪತಿಯವರು**:- ಎಲ್ಲರೂ ಅವರ ಪರವಾಗಿಯೇ ಇದ್ದಾರೆ.

**ಶ್ರೀ ಜೆ.ಸಿ.ಮಾಧುಸ್ವಾಮಿ**:- ಸಭಾಪತಿಗಳೆ ಕ್ಷಮಿಸಬೇಕು. ಇವರು ಹೇಗೆ ಅದರ ಪರವಾಗಿ ಇರಲು ಸಾಧ್ಯ, ಇವರ ಸರ್ಕಾರ ಇದ್ದಾಗ ಕ್ಯಾಬಿನೆಟ್‌ನಲ್ಲಿಯೇ ಇದರ ತೀರ್ಮಾನ ತೆಗೆದುಕೊಂಡಿರುವುದು.

**Sri S.R.PATIL:-** That I will share with you personally.

**ಶ್ರೀ ಪಿ.ಆರ್.ರಮೇಶ್**:- ಅದೇ ಕ್ಯಾಬಿನೆಟ್‌ನಲ್ಲಿ ಮತ್ತೆ ಕೊಟ್ಟಿರುವುದು.

**Sri J.C.MADHUSWAMY:-** No, I said it as a joke.

**Sri S.R.PATIL:-** Whatever I will say here, it will be on oath. It is my way of life; it is my style of functioning.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಎಸ್.ಆರ್.ಪಾಟೀಲರ integrity ಯನ್ನು ನಾನು ಪ್ರಶ್ನೆ ಮಾಡಿಲ್ಲ. ನಾನು ತಮಾಷೆ ಮಾಡಿದೆ. ಅದು ಆವತ್ತಿನ ಕ್ಯಾಬಿನೆಟ್ ನಿರ್ಣಯ.

**Sri S.R.PATIL:-** No doubt, ನೀವು ಹೇಳಿದ ಹಾಗೆ collective responsibility ಇದೆ. Cabinet decision means, ಕ್ಯಾಬಿನೆಟ್ ಸದಸ್ಯರು ಯಾರ್ಯಾರಿದ್ದಾರೆ, ಅವರ collective decision. ನೀವು ಸಹ ಕ್ಯಾಬಿನೆಟ್‌ನಲ್ಲಿದ್ದೀರಿ.

**Sri J.C.MADHUSWAMY:-** Luckily, ಇವತ್ತು ಎಲ್ಲರೂ ಈ ಕೆಲಸವನ್ನು ಮಾಡಿ ಎಂದು ಹೇಳುತ್ತಿದ್ದಾರೆ. ಅದೊಂದು ನಮಗೆ welcome trend ಅಷ್ಟೆ. No one is against it. ನಾವು ತೀರ್ಮಾನ ಮಾಡಬೇಕು ಎಂದು ನೀವು ಏನು ಹಠ ಹಿಡಿದಿರುವುದಿಲ್ಲ. ತಪ್ಪು ಆಗಿದೆ ಸರಿ ಮಾಡಿ ಎಂದು ನೀವೆ ಮುಂದೆ ಬಂದಿದ್ದೀರಿ.

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಆರ್.ಪಾಟೀಲ್**:- ಮಾನ್ಯ ಸಭಾಪತಿಗಳೆ, ಇವತ್ತು ಆ ಅಭ್ಯರ್ಥಿಗಳ ಪರಿಸ್ಥಿತಿ ಗಂಭೀರವಾಗಿದೆ. ಅವರಿಗೆ ವಯಸ್ಸಾಗುತ್ತಿದೆ. ಒಬ್ಬ ಅಭ್ಯರ್ಥಿ DySP (Deputy Superintendent of Police) ಆಗುತ್ತಾನೆ ಎಂದು ಹೆಣ್ಣು ಕೊಟ್ಟು engagement ಮಾಡಿರುವುದನ್ನು ಹೆಣ್ಣಿನ ತಂದೆ ನಿನಗೆ ಕೆಲಸ ಬರುವ ಹಾಗೆ ಕಾಣುತ್ತಿಲ್ಲ ಎಂದು cancel ಮಾಡಿಕೊಂಡಿದ್ದಾರೆ. ಮಹಿಳಾ ಅಧಿಕಾರಿಗಳ abortion ಆಗಿವೆ.

**ಶ್ರೀ ಜೆ.ಸಿ.ಮಾಧುಸ್ವಾಮಿ**:- ಮಾನ್ಯ ಸಭಾಪತಿಗಳೆ, ನಾನು ಒಂದು ವಿಚಾರವನ್ನು ಹೇಳುತ್ತೇನೆ ತಪ್ಪು ತಿಳಿದುಕೊಳ್ಳಬಾರದು. ಹುಡುಗ ಒಳ್ಳೆಯವನು, ಬೇಕಾದಷ್ಟು ಆಸ್ತಿಯಿಂದೆ ನಿಟ್ಟಾಗಿ ಮನೆಕಡೆ ಕೆಲಸ ಮಾಡಿಕೊಂಡು ಹೋಗುತ್ತಾನೆ ಹೆಣ್ಣು ಕೊಡಿ ಎಂದರೆ ಯಾರು ಕೊಡುವುದಿಲ. ಅಪಾಪೋಲಿ ಇಸ್ಪಿಟ್ ಆಡುತ್ತಾನೆ, ಕುಡಿಯುತ್ತಾನೆ ಯಾವುದೋ ಒಂದು ಸಣ್ಣ ಕೆಲಸದಲ್ಲಿದ್ದಾನೆ ಅವನಿಗೆ ಹೆಣ್ಣು ಕೊಡಬೇಡಿ ಎಂದರೆ, ಬಿಡಣ್ಣ ಸಂಬಳ ಬರುತ್ತದೆ ಎಂದು ಹೇಳುತ್ತಾರೆ. ಆ ಹಂತಕ್ಕೆ ತಂದು ಇಡಲಾಗಿದೆ.

**ಶ್ರೀ ಎಸ್.ಆರ್.ಪಾಟೀಲ್**:- ನಮ್ಮ ರೈತರ ಪರಿಸ್ಥಿತಿಯು ಹಾಗೆ ಆಗಿದೆ. ಒಬ್ಬ office attender ಇದ್ದರೆ ಸಾಕು ಹೆಣ್ಣು ಕೊಡುತ್ತಾರೆ.

**ಶ್ರೀ ಜೆ.ಸಿ.ಮಾಧುಸ್ವಾಮಿ**:- ನಾವು ಹಳ್ಳಿಯಲ್ಲಿ ಹುಟ್ಟಿರುವುದು ಪಾಪ, ರೈತರಾಗಿರುವುದು ಪಾಪ, ನಮಗೆ ಒಂದು ಒಳ್ಳೆಯ ಕನ್ಯೆಯು ಸಿಗದೆ ಹಾಗೆ ಆಗಿದೆ.

**ಶ್ರೀ ಎಸ್.ಆರ್.ಪಾಟೀಲ್**:- ಇದನ್ನು ಒಂದು ತಾರ್ಕಿಕ ಅಂತ್ಯಕ್ಕೆ ತೆಗೆದುಕೊಂಡು ಬನ್ನಿ. You take it to a logical end as early as possible. Kindly expedite.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಗಳೆ, ಮಾನ್ಯ ವಿರೋಧ ಪಕ್ಷದ ನಾಯಕರೆ ಈ ವಿಚಾರದಲ್ಲಿ ನಾವು ಬಹಳ serious ಆಗಿದ್ದೇವೆ.

**Sri S.R.PATIL:-** I agree.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಐದಾರು ಸಭೆಯನ್ನು ಮಾಡಿದ್ದೇವೆ. We will consider. We are in the final stage, and we will take decision.

**ಶ್ರೀ ಎಸ್.ರವಿಕುಮಾರ್**:- ಮಾನ್ಯ ಸಭಾಪತಿಗಳೆ, ಅಧಿವೇಶನ ಮುಗಿದ ಮೇಲೆ ಈ ವಿಚಾರವಾಗಿ ಚರ್ಚೆ ಮಾಡಲು ಒಂದು ದಿನ ಸಭೆ ನಿಗದಿ ಮಾಡಬೇಕೆಂದು ವಿನಂತಿ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಯಾರ ಜೊತೆ ಸಭೆ ಮಾಡಬೇಕು? I need some legal experts. We are doing it. ರೆಗ್ಯುಲರ್ ಆಗಿ ಮಾಡುತ್ತಿದ್ದೇವೆ.

**ಸಭಾಪತಿಯವರು**:- ಸಚಿವರು ಈ ವಿಚಾರದಲ್ಲಿ positive ಆಗಿದ್ದಾರೆ, thorough study ಮಾಡಿದ್ದಾರೆ. ಅದರ ಬಗ್ಗೆ ತೀರ್ಮಾನ ಮಾಡಬೇಕಾದರೆ ಕಾನೂನನ್ನು ಪರಿಶೀಲನೆ ಮಾಡಬೇಕಾಗುತ್ತದೆ. ಕಾನೂನನ್ನು ಮಾಡಿ ಕ್ರಮ ತೆಗೆದುಕೊಳ್ಳಿ ಎನ್ನುವುದರಲ್ಲಿ ಅಭ್ಯರ್ಥಿಗಳ ಬಗ್ಗೆ ಎಲ್ಲರ ಸಹಮತವಿದೆ ಎಂದು ಹೇಳೋಣ.

**ಶ್ರೀ ಟಿ.ಸೋಮಶೇಖರ್(ಸಹಕಾರಿ ಸಚಿವರು)**:- ಮಾನ್ಯ ಸಭಾಪತಿಗಳೆ, ನನ್ನದು ಬಿಲ್ ಇದೆ ಅದನ್ನು ತೆಗೆದುಕೊಂಡು ಬಿಡಿ.

**ಶ್ರೀ ಎಸ್.ಆರ್.ಪಾಟೀಲ್**:- ಮಾನ್ಯ ಸಭಾಪತಿಗಳೆ, ನನ್ನದೊಂದು ಮನವಿ. ಸಹಕಾರಿ ಸಚಿವರ ಬಿಲ್ ತೆಗೆದುಕೊಳ್ಳಿ, ನಮ್ಮದೇನು ಅಭ್ಯಂತರವಿಲ್ಲ, ಒಪ್ಪುತ್ತೇವೆ. ಆದರೆ ಮತ್ತೆ ಬಿಲ್ ತೆಗೆದುಕೊಳ್ಳುವುದೆ ಮುಂದುವರೆಯಬಾರದು. ನನ್ನ ನಿಯಮ ೩೩೦ ೧ನೇ ಸ್ಥಾನದಲ್ಲಿತ್ತು, ಆದರೆ ಅದನ್ನು ೯ನೇ ಸ್ಥಾನಕೆ ಹಾಕಿದ್ದೀರಿ. ಸಿಎಂ ರವರು ಬರಬೇಕು ಬರಲು ಆಗಿರುವುದಿಲ್ಲ ಎಂದು ಹೇಳಿದ್ದೀರಿ ಸರಿ.

**ಸಭಾಪತಿಯವರು**:- ಇವತ್ತು ಎಲ್ಲರ ವಿಷಯಗಳನ್ನು ತೆಗೆದುಕೊಳ್ಳಲಾಗುತ್ತದೆ.

**ಶ್ರೀ ಎಸ್.ಆರ್.ಪಾಟೀಲ್**:- ಸದನ ಪ್ರಾರಂಭವಾಗಿ ೯ ದಿನಗಳಾದ್ವವು. ಅವತ್ತಿನಿಂದ ಅದು ಮುಂದುರೆದುಕೊಂಡು ಬರುತ್ತಿದೆ. ರಾತ್ರಿ ೧೨ ಗಂಟೆಯಾಗಲಿ, ಬೆಳಗಿನವರೆಗೆಯಾದರೂ ಸರಿ ಅವರ ಬಿಲ್‌ಗಳನ್ನು ಪಾಸ್ ಮಾಡಿಕೊಡುತ್ತೇವೆ.

**ಸಭಾಪತಿಯವರು**:- ಮಾನ್ಯ ವಿರೋಧ ಪಕ್ಷದ ನಾಯಕರೆ ಇವತ್ತಿನ ಅಜೆಂಡಾ ಎಲ್ಲವನ್ನು ತೆಗೆದುಕೊಳ್ಳುತ್ತೇನೆ. ಎಲ್ಲರೂ ಸಹಕರಿಸಬೇಕು.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಇದರ ಹೆಸರೇ ಶಾಸನ ಸಭೆ. ಅಜೆಂಡಾ ಪ್ರಕಾರ ಮುಗಿಸಿಕೊಡಿ.

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ**:- ಮಾನ್ಯ ಸಭಾಪತಿಗಳೆ, ಇದನ್ನು ನಿಯಮ ೫೯ ರಿಂದ convert ಮಾಡಿ ನಿಯಮ ೭೦ಲಕ್ಕೆ ೨೦ನೇ ತಾರೀಖಿನಂದು ಹಾಕಿದ್ದೀರಿ. ಇವತ್ತು ೨೩ನೇ ತಾರೀಖು ಇವತ್ತಿನವರೆಗೆ ಅಜೆಂಡಾದಲ್ಲಿ ಬಂದಿರುವುದಿಲ್ಲ. ಇನ್ನು ಯಾವಾಗ ಹಾಕುತ್ತೀರಿ?

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸರ್ಕಾರದ ಬೊಕ್ಕಸಕ್ಕೆ ಕೋಟ್ಯಂತರ ರೂಪಾಯಿಗಳ ಲಾಸ್ ಆಗುತ್ತಿದೆ ಎನ್ನುವ ವಿಷಯವನ್ನು ನಾನು ಪ್ರಸ್ತಾಪ ಮಾಡಬೇಕು. ಅದಕ್ಕೆ ತಾವು ಅವಕಾಶವನ್ನು ಕೊಡುತ್ತಿಲ್ಲ.

**ಸಭಾಪತಿಯವರು**:- ಭೋಜನ ವಿರಾಮದ ನಂತರ ಹೇಳುತ್ತೇನೆ.

**10. ಶಾಸನ ರಚನೆ**

**ವಿಧೇಯಕಗಳ ಪರ್ಯಾಲೋಚನೆ ಮತ್ತು ಅಂಗೀಕಾರ**

**ಎ) ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ವಿಧೇಯಕ, 2021**
**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಎಸ್.ಟಿ. ಸೋಮಶೇಖರ್ (ಸಹಕಾರ ಸಚಿವರು)**:- ಮಾನ್ಯ ಸಭಾಪತಿಯವರೇ, ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ ೨೦೨೧ರ ಕರ್ನಾಟಕ ಸಹಕಾರ ಸಂಘಗಲ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಶ್ರೀ ಎಸ್.ಟಿ. ಸೋಮಶೇಖರ್(ಸಹಕಾರ ಸಚಿವರು)**:- ಮಾನ್ಯ ಸಭಾಪತಿಯವರೇ, ನಿನ್ನೆ ಸೌಹಾರ್ದ ಸಹಕಾರಿ ಸಂಘಗಳ ವಿಧೇಯದಲ್ಲಿ ಬಹುತೇಕ ಎಲ್ಲಾ ಸದಸ್ಯರು ಮಾತನಾಡಿದ್ದಾರೆ. ಇದರಲ್ಲಿ ಹೆಚ್ಚು ವ್ಯತ್ಯಾಸವಿಲ್ಲ. ಒಂದೆರಡು ಮೂರು ಮಾತ್ರ ಬದಲಾವಣೆ ಇದ್ದು, delegate ಏನಿರುತ್ತದೆ, ಅದಕ್ಕೆ particular ಆಗಿ delegate ಎನ್ನುವುದಕ್ಕೆ directions ಇರಲಿಲ್ಲ. ಅದನ್ನು ಇದರಲ್ಲಿ amendment ಮಾಡಿದ್ದೇವೆ. Delegate ಅಂದರೆ election ಗೆ ನಿಲ್ಲುವುದು ಮತ್ತು General Body Meeting attend ಮಾಡುವುದು ಹಾಗೂ election ನಿಲ್ಲುವವರಿಗೆ proposal ಮಾಡುವುದನ್ನು particular ಆಗಿ delegation ಎಂದು ಕರೆಯುತ್ತೇವೆ. ಇದು ಮುಂಚೆ ಇರಲಿಲ್ಲ. ಒಂದು Society ಗೆ application ಹಾಕಬೇಕಾದರೆ ೧೦ ಜನ ಮಾತ್ರ members ಎಂದು ಇತ್ತು. ಅದನ್ನು ೧೦ ಜನರ ಬದಲು ಈ ಬಾರಿ ೨೦ ಜನ ಎಂದು ಮಾಡಿದ್ದೇವೆ. ಒಕ್ಕೂಟ ಮತ್ತು ಮಹಾಮಂಡಲದಲ್ಲಿ ಯಾರು employees ಗಳು ಇರುತ್ತಾರೋ, ಅವರುಗಳು ಸದಸ್ಯತ್ವವನ್ನು ಪಡೆಯಬಾರದು ಎಂದು ಇದೆ.

(ಮುಂದು)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(951)23-09-2021(02-30)bsd-ak

**ಶ್ರೀ ಎಸ್.ಟಿ. ಸೋಮಶೇಖರ್ (ಮುಂದು)**

Federation ನಲ್ಲಿ ಮತ್ತು ಒಕ್ಕೂಟದಲ್ಲಿ election ನಿಂತರೆ employee ಗಳಿಗೆ awkward ಆಗುತ್ತದೆ ಎಂದು ನಿರ್ಬಂಧ ಮಾಡಿದ್ದೇವೆ. ನಂತರ ಒಂದೇ ರೀತಿ co-operative societies ನಲ್ಲಿ ಯಾವುದಾದರೂ dual membership ಇದ್ದರೆ ಅವರು ೯೦ ದಿವಸದ ಒಳಗೆ ಒಂದನ್ನು chose ಮಾಡಿಕೊಳ್ಳಬೇಕೆಂದು amendment ತಂದಿದ್ದೇವೆ. ಇದು ಮುಂಚೆ ಇರಲಿಲ್ಲ, ಈಗ amendment ತಂದಿದ್ದೇವೆ. ನಂತರ ೫ Annual General Meetings ಬಗ್ಗೆ ನಿನ್ನೆ ಕೂಡ discussion ಆಗಿದೆ. ೫ Annual General Meeting ಗಳಲ್ಲಿ ೩ Annual General Meeting ಗಳಲ್ಲಿ continuously absent ಆದರೆ ಅಂತಹವರು election ಗೂ ನಿಲ್ಲುವಂತಿಲ್ಲ, ಅದು ಯಾವುದಾದರೂ ೨ Annual General Meeting ಗಳಲ್ಲಿ attend ಆದರೆ ಸಾಕು ಎನ್ನುವುದನ್ನು ಮಾಡಿದ್ದೇವೆ. ೫ ವರ್ಷಗಳಲ್ಲಿ ೩ ವರ್ಷ ಏನಾದರೂ ಸೇವೆ ಮಾಡಬೇಕು ಎಂದಿರುವುದನ್ನು ರದ್ದುಪಡಿಸಿದ್ದೇವೆ. ಒಂದು term ನ ೫ ವರ್ಷಗಳಲ್ಲಿ ಯಾವುದಾದರೂ ೨ ವರ್ಷ ಅವರು ಸೇವೆಯಲ್ಲಿ deposit ಇರಬಹುದು, loan ತೆಗೆದುಕೊಳ್ಳುವುದು ಇರಬಹುದು, ಒಟ್ಟಿನಲ್ಲಿ ಏನಾದರೂ correspondence ಮಾಡಿರುವ amendment ಮಾಡಿದ್ದೇವೆ. ಮತದಾರ ಪಟ್ಟಿ ಪರಿಶೀಲನೆಯನ್ನು ೧೫ ದಿವಸದಿಂದ ೩೦ ದಿವಗಳಿಗೆ amendment ತಂದಿದ್ದೇವೆ. ೨೧ ದಿವಸ ಇದ್ದದ್ದನ್ನು ೪೫ ದಿವಸಗಳಿಗೆ ತಂದಿದ್ದೇವೆ. Election time ನಲ್ಲಿ membership ಗೆ notification ಮಾಡಿದಾಗ ಸರಿಯಾದ time ಆಗುವುದಿಲ್ಲ ಎಂದಿತ್ತು, ಅದನ್ನು amendment ತಂದಿದ್ದೇವೆ. Reserve Bank direction ಮಾಡಿರುವಂತೆ ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿ ಇದ್ದರೆ share amount ೫% ಒಳಗೆ ಇರಬೇಕೆಂದು ಮಾಡಿದ್ದೇವೆ. Annual General Meeting ಗೆ ಸಾಮಾನ್ಯ 1/10th of the members of the co-operative society ಅಥವಾ ೧೦೦೦ ಎಂದು fix ಇತ್ತು. ಆದರೆ Special General Meeting ಗೆ ಇದು ಇರಲಿಲ್ಲ. Annual General Meeting ಗೆ ಇರುವ rules ತಂದಿರುವಂತೆ 1/10th of the members of the co-operative society ಅಥವಾ ೧೦೦೦ ಎಂದಿರುವುದು Special General Meeting ಗೂ ಅನ್ವಯವಾಗುತ್ತದೆ ಎಂಬುದನ್ನು ತಂದಿದ್ದೇವೆ. ಉಳಿದಂತೆ ನಿನ್ನೆ discussion ಮಾಡಿರುವಂತೆಯೇ ಇದೆ. ಇದನ್ನು approve ಮಾಡಿ ಕೊಡಬೇಕೆಂದು ಮನವಿ.

**ಶ್ರೀ ಎಸ್.ಆರ್. ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, 90 days ಒಂದೇ ಆಗಿದ್ದು, ಉಳಿದಂತೆ ನಿನ್ನೆ ಚರ್ಚೆ ಮಾಡಿದ್ದೇವೆ. ವಿಧೇಯಕವನ್ನು ಸ್ವಾಗತ ಮಾಡುತ್ತೇವೆ. For determining Dual Membership of a person

who is a member in two or more co-operative societies, we want to know from which date the counting of 90 days will start?

**Sri S.T. SOMASHEKAR:** Election ಗೆ nomination ಹಾಕಿದಾಗ ಎರಡು society ಇರುತ್ತವೆ. One Co-operative Credit Society to another Co-operative Credit Society or one Co-operative Housing Society to another Co-operative Housing Society ಎಂದಿದ್ದು, ಒಂದೇ co-operative society ನಲ್ಲಿ ಎರಡು membership ಕೆಲವು ಸಾರಿ ಇರುತ್ತವೆ. Election ಗೆ nomination ಹಾಕುವ ಮುಂಚೆ withdraw ಮಾಡಿಕೊಳ್ಳಬೇಕಾಗುತ್ತದೆ. ಇದು ಮುಂಚೆ ಇರಲಿಲ್ಲ.

**Sri J.C. MADHUSWAMY:** It is just like withdrawing from the Voter List. ಒಂದೇ nature of society ನಲ್ಲಿ ಎರಡು ಕಡೆ member ಇದ್ದರೆ ಯಾವ society ಗೆ contest ಮಾಡುತ್ತಾರೋ, ಅದನ್ನು ಉಳಿಸಿಕೊಂಡು ಇನ್ನೊಂದು ಕಡೆ share ತೆಗೆದುಕೊಳ್ಳಬೇಕು.

**ಶ್ರೀ ಯು.ಬಿ. ವೆಂಕಟೇಶ್ (ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ಈ amendment ಗಳನ್ನು ನಮ್ಮ ಸಹಕಾರ ಮಂತ್ರಿಗಳು ಆದಷ್ಟು ಬೇಗ ಎಲ್ಲವನ್ನು ತರುತ್ತಿದ್ದು, ಅವರು ಮಂತ್ರಿಗಳಾದ ಮೇಲೆ ಬಂದಷ್ಟು amendment ಗಳು ಯಾವ ಕಾಲದಲ್ಲೂ ಬಂದಿಲ್ಲ. ಅದು ಯಾವುದೇ ಸಂಸ್ಥೆಗೆ share ಕಟ್ಟುವುದಾಗಬಹುದು, government nominate ಮಾಡಬಹುದು, ರೂ.೧೦ ಲಕ್ಷ ಕಟ್ಟಿ member ಆಗಿ, election ದಿವಸ member ಗಳನ್ನಾಗಿ ಮಾಡುವುದು. ಕೇಂದ್ರ ಸರ್ಕಾರದ ನೀತಿಗಳು ಮತ್ತು ನ್ಯಾಯಾಲಯಗಳ ಆದೇಶದಿಂದ ಸಹಕಾರಿ ಕ್ಷೇತ್ರ ಹಾಳಾಗಿ ಹೋಗುತ್ತಿದೆ. ಸಹಕಾರಿ ಕ್ಷೇತ್ರದವರ್ಯಾರೂ ಅವರವರ ಕೆಲಸ ಮಾಡುವುದಕ್ಕೆ ಆಗುತ್ತಿಲ್ಲ. ಆಮೇಲೆ ತನಿಖೆಗಳನ್ನು ಮಾಡಿಸುವುದಾಗಿ ಹೇಳುತ್ತಾರೆ, ಅವರ ತನಿಖೆಗಳ ಮೇಲೆ ಯಾರಿಗೂ ನಂಬಿಕೆಯೇ ಇಲ್ಲ. ಒಂದು ತನಿಖೆಯ ವರದಿಯೂ ಬರುವುದಿಲ್ಲ, ಆ ವರದಿ ಬರುವಷ್ಟರಲ್ಲಿ ತನಖೆಗೆ ಕೇಳಿದ್ದವನೇ ಸತ್ತು ಹೋಗಿರುತ್ತಾನೆ. Housing Society ಗಳಲ್ಲಿ ಏನಿದೆ; ಒಂದು ರೂಪಾಯಿ ಬಂಡವಾಳ ಇಲ್ಲ, ಯಾರೋ layout ಮಾಡುತ್ತಾರೆ, ಇವರಿಗೆ ಅಡಮಾನ ಇಡಬೇಕಂತೆ! ಇವರು ಒಂದು pass ಮಾಡಿಕೊಂಡು ಬಿಟ್ಟಿದ್ದಾರೆ. ಯಾರು ಈ right ಕೊಟ್ಟವರು? ನನ್ನ ಜಮೀನನ್ನು ನಾನೇಕೆ ಅವರಿಗೆ ಅಡಮಾನ ಇಡಬೇಕು? ಸರ್ಕಾರದವರು ನಿವೇಶನವನ್ನು ಬನಶಂಕರಿಯಲ್ಲಿ ಮಾಡಿದ್ದು, ಅಲ್ಲಿ light ಇಲ್ಲ, ನೀರು ಇಲ್ಲ, ಅವರ layout ಗೆ ಯಾರು? ಮಾನ್ಯ ನಾರಾಯಣಸ್ವಾಮಿಯವರು ವಿಶ್ವೇಶ್ವರಯ್ಯ layout ಬಗ್ಗೆ ಮಾತನಾಡಿದರು. ನಾನು layout

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾಡಿ, ಅವರಿಗೆ ಅಡಮಾನ ಇಡಬೇಕು ಎಂದರೆ layout ಮಾಡಲು ದುಡ್ಡು ಯಾರು ಕೊಡುತ್ತಾರೆ?

**ಶ್ರೀ ಎಸ್.ಟಿ. ಸೋಮಶೇಖರ್:-** ಮಾನ್ಯ ಸಭಾಪತಿಯವರೇ, ಅದು ನಮಗೆ ಬರುವುದಿಲ್ಲ, Town and Country Planning Act ಅಡಿಯಲ್ಲಿ ಬರುತ್ತದೆ. ಆ amendment ಇಲ್ಲಿ ಬರುತ್ತಿದೆ. ಅದು ಇದಕ್ಕೆ ಬರುವುದಿಲ್ಲ.

**ಶ್ರೀ ಯು.ಬಿ. ವೆಂಕಟೇಶ್:-** ಇದಕ್ಕೆ ಬರುವುದಿಲ್ಲ ಎಂದಲ್ಲ, ೧೦ ದಿವಸ session ನಡೆದರೆ ಅವರ ಹತ್ತಿರ ೨೦ bill ಗಳಿದ್ದರೆ ಪ್ರತಿ ದಿವಸ ಎರಡು ತಿದ್ದುಪಡಿ ವಿಧೇಯಕ ತಂದರೆ ಮುಗಿಯಿತು. ಎಲ್ಲವನ್ನು ಕೊನೆಯ ದಿವಸ ತೆಗೆದುಕೊಂಡು ಬರುತ್ತಾರೆ. ಯಾರೂ ಅದರ ಬಗ್ಗೆ ಮಾತನಾಡುವುದಕ್ಕೆ ಆಗುವುದಿಲ್ಲ. ಅವರು pass ಮಾಡಿಕೊಂಡು ಹೋಗುತ್ತಾರೆ. ಹೀಗಾದರೆ ನಾವು ನ್ಯಾಯ ಕೇಳುವುದು ಹೇಗೆ?

**ಸಭಾಪತಿಯವರು:-** ಅದು ಸದನದ ಮೇಲೆ depend ಆಗಿರುತ್ತದೆ.

**ಶ್ರೀ ಯು.ಬಿ. ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಸದನದ ಮೇಲೆ ಅಲ್ಲ, ಒಂದು ಕಡೆ ಸದಸ್ಯರು ಮಾತನಾಡಬೇಕೆಂದು ಹೇಳುತ್ತೀರಿ, ಒಂದು ಕಡೆ ಅವರ bill pass ಆಗಬೇಕು. ಎರಡು urgent ಇದೆ. ಒಂದೇ ದಿವಸ ೨೦ bill ಗಳನ್ನು ಏಕೆ ತರುತ್ತಾರೆ?

**ಶ್ರೀ ಜೆ.ಸಿ. ಮಾಧುಸ್ವಾಮಿ:-** ನಾವು session ಕರೆಯುವಾಗ ಸದಸ್ಯರು ಇಷ್ಟೊಂದು ಮಾತನಾಡುತ್ತಾರೆ ಎಂದು ಅಂದುಕೊಂಡಿರುವುದಿಲ್ಲ. ನಮ್ಮ bill ಗಳಿವೆ ಎಂದು ತಂದಿರುತ್ತೇವೆ.

**ಶ್ರೀ ಯು.ಬಿ. ವೆಂಕಟೇಶ್:-** ಹಾಗಾದರೆ session ಕರೆಯುವಾಗ ಹೇಳಿಬಿಡಬೇಕು. ಕಡಿಮೆ ಮಾತನಾಡಿ ಅಥವಾ session ಬರಬೇಡಿ ಎಂದು ಹೇಳಬೇಕು.

**Sri J.C. MADHUSWAMY:** Issues ಇಷ್ಟೊಂದು ಬರುತ್ತವೆ ಎಂದುಕೊಂಡಿರಲಿಲ್ಲ. ಈ session ನಲ್ಲಿ bill ಗಳನ್ನು ಬಿಟ್ಟರೆ Government Business ಬಹಳ ಇಲ್ಲ. ಉಳಿದಂತೆ ಸದಸ್ಯರ ಕಡೆ ಬಂದಿರುವುದನ್ನು anticipate ಮಾಡಿರುವುದಿಲ್ಲ ಎಂದು ಹೇಳಿದ್ದು.

**ಶ್ರೀ ಯು.ಬಿ. ವೆಂಕಟೇಶ್:-** ಬರೀ ತಿದ್ದುಪಡಿಗಳು ಜನರಿಗೆ ಸಹಕಾರಿಯಾಗಬೇಕೇ ಹೊರತು ಜನರ ವಿರೋಧಿ ನೀತಿಯಾಗಿ ತೊಂದರೆಯಾದರೆ ಹೇಗೆ? ಸದನದಲ್ಲಿ ಜನಪರವಾದ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನೀತಿಗಳನ್ನು ತೆಗೆದುಕೊಂಡು ಬರಲಿ. ಅವರಿಗೆ ಬೇಕಾದಂತೆ ಮಾಡಿಕೊಂಡು ಹೋದರೆ ಹೇಗೆ? ಮಾನ್ಯ ಮಂತ್ರಿಗಳು ಈ ವಿಚಾರಕ್ಕೆ ಉತ್ತರ ಕೊಡಬೇಕು.

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ವಿವರಣೆ ಕೊಡುವಾಗ ಮಾನ್ಯ ಸಚಿವರು ಒಂದು ಅಂಶವನ್ನು ಹೇಳಿದ್ದು ನನಗೆ ಅರ್ಥವಾಗಲಿಲ್ಲ. ಒಂದು ಸಂಘದಿಂದ ೧೦ ಮಂದಿ ಇದ್ದರೆ ೨೦ ಮಂದಿ ಎಂದು ಹೇಳಿರುವುದು ನನಗೆ ತಿಳಿಯಲಿಲ್ಲ. ಅದರ ಬಗ್ಗೆ ಬೆಳಕು ಚೆಲ್ಲಬೇಕು. ಮಾನ್ಯ ಸಚಿವರು ತಿದ್ದುಪಡಿಗಳನ್ನು ತರುತ್ತಿದ್ದು, ಸಹಕಾರಿ ಇಲಾಖೆಯಲ್ಲಿ ಶಾಸನಬದ್ಧ ತನಿಖೆಗಳಾದ Section 64, Section 68 ಏನೇನು enquiry ಗಳಿವೆಯೋ, ಇದಕ್ಕೆ ಯಾರೋ ಒಬ್ಬ retired official ನ್ನು ನೇಮಕ ಮಾಡುತ್ತಾರೆ. ಅವನು ೬ ತಿಂಗಳಾದರೂ ಮಾಡುವುದಿಲ್ಲ. ಮತ್ತೆ ಇನ್ನೊಬ್ಬ ಮಾಡುವುದಕ್ಕೆ ಆಗುವುದಿಲ್ಲ ಎಂದು ಬರೆದುಕೊಡುತ್ತಾನೆ. ಆಮೇಲೆ ಮತ್ತೊಬ್ಬರ ನೇಮಕ ಮಾಡುತ್ತಾರೆ. ೫ ವರ್ಷ ಅವರ period ಮುಗಿದರೂ ತನಿಖೆ ಆಗುವುದೇ ಇಲ್ಲ. ಏಕೆಂದರೆ ಸಹಕಾರಿ ಇಲಾಖೆಯಲ್ಲಿ ಶಾಸನಬದ್ಧ ತನಿಖೆಯಾದ Section 64 enquiry ಯನ್ನೇ ಯಾವುದೇ court ಅಥವಾ ಮತ್ತೊಂದು ಮಾನ್ಯ ಮಾಡುತ್ತದೆ. ಏನೇನು ತೀರ್ಮಾನಗಳನ್ನು ಕೈಗೊಳ್ಳಬೇಕು ಎಂದಿರುತ್ತದೆ. ಅಂತಹ ತನಿಖೆಗೆ ಒಂದು ನಿರ್ದಿಷ್ಟ ಅವಧಿಯನ್ನು ನಿಗದಿಗೊಳಿಸಿ ತಿದ್ದುಪಡಿಯಲ್ಲಿ ತರಬೇಕು. Retired employee ಗಳನ್ನು ತನಿಖೆಗೆ ಹಾಕುವುದರಿಂದ ನಿಷ್ಪಕ್ಷಪಾತ ತನಿಖೆ ಆಗುತ್ತಿಲ್ಲ, ಇದರ ಬಗ್ಗೆ ಮುಂದಿನ ದಿನಗಳಲ್ಲಿ ಪರಿಶೀಲನೆ ಮಾಡಬೇಕು ಮತ್ತು ಅದರ ಬಗ್ಗೆ ಬೆಳಕು ಚೆಲ್ಲಬೇಕು.

**ಶ್ರೀ ಎಸ್.ಎಲ್. ಭೋಜೇಗೌಡ (ಶಿಕ್ಷಕರ ಕ್ಷೇತ್ರ)**:- ಮಾನ್ಯ ಸಭಾಪತಿಯವರೇ, ಮಾನ್ಯ ಮಾಧುಸ್ವಾಮಿಯವರು veteran ಇದ್ದಾಗ ಹೇಳುವುದು ಏನಿದೆ? Government share ಬೇಡ ಎಂದು entire Board ತೀರ್ಮಾನ ಕೊಟ್ಟಾಗ..... ಅದು ರೈತರ ಸಂಸ್ಥೆ, ರೈತರ share ಇದ್ದು, ನಾವು ನಡೆಸಿಕೊಳ್ಳುತ್ತೇವೆ ಎಂದು ಹೇಳಿದಾಗ ಏಕೆ forcibly government share ಕಟ್ಟಬೇಕು? ಕಟ್ಟಿದ ನಂತರ nominee ಮಾಡಬೇಕು ಎನ್ನುವುದನ್ನು ದಯಮಾಡಿ close ಮಾಡಿ. ನಮಗೆ ಬೇಡ ಎಂದರೆ ಬೇಡ. Board ಬೇಡ ಎಂದು ಹೇಳಿದಾಗ ಮತ್ತೆ ಏಕೆ ಬೇಕು? ನಮ್ಮ ಸರ್ಕಾರ ಇದ್ದಾಗ ನಾವು ಮಾಡುವುದು, ಅವರ ಸರ್ಕಾರ ಇದ್ದಾಗ ಅವರು ಮಾಡುವುದು, ಇನ್ನೊಬ್ಬರು ಇದ್ದಾಗ ಮಾಡುವುದು ಬೇಡ, ಇದಕ್ಕೆ the government must put an end to this. ಆಗ government share ವಿಚಾರದಲ್ಲಿ ಸರಿಯಾಗುತ್ತದೆ. ಬೇಕಾದರೆ ತೆಗೆದುಕೊಳ್ಳಲಿ, ಬೇಡದಿದ್ದರೆ ಬಿಡಲಿ. ನಮ್ಮ ರೈತರ ಸಂಸ್ಥೆಗೆ ರೈತರ share ಇರಬೇಕು ಎಂದು ನಿಮ್ಮದು ಏಕೆ ಬೇಕು ಎಂದು ಕೇಳುತ್ತೇವೆ? ಆಗ ಹಸ್ತಕ್ಷೇಪ ಆಗುತ್ತದೆ. ಆದ್ದರಿಂದ Section 29C

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಲ್ಲಿ ತರಬೇಕಾಗುತ್ತದೆ. Section 29C ನಲ್ಲಿ once election is declared, Voter List final ಆದಮೇಲೆ ಯಾವ ಕಾರಣಕ್ಕೂ till the election is over ಅವನನ್ನು disqualify ಮಾಡುವುದಾಗಲೀ ಅಥವಾ ಇನ್ನೊಂದಾಗಲೀ ಮಾಡುವ ವ್ಯವಸ್ಥೆ A.R (Assistant Registrar) ಹತ್ತಿರ ಇದೆಯಲ್ಲಾ, ಆ power ಅನ್ನು ದಯವಿಟ್ಟು ತೆಗೆಯಬೇಕು. ಒಂದು ತಿಂಗಳು time ಇರುತ್ತದೆ, Voter List ಆಗುವವರೆಗೂ ಎಲ್ಲಾ ಇರುತ್ತದೆ, ಒಂದು ತಿಂಗಳು objection ಕೇಳಿರುತ್ತಾರೆ. Objection ಎಲ್ಲವೂ ಆಗಿ Voter List final ಆದಮೇಲೆ last, ನಾಳೆ election ಅಂದಾಗ ಬೆಳಗ್ಗೆ disqualify ಮಾಡಿದರೆ ಏನು ಮಾಡುವುದು? ಈ ರೀತಿ ಮಾಡಿದ್ದಾರೆ. ನಾನು ಎರಡು ಬಾರಿ ಅನುಭವಿಸಿದ್ದೇನೆ. ಇದು ನನ್ನ ದೃಷ್ಟಿ ಮಾತ್ರವಲ್ಲ. ಅಧಿಕಾರ ದುರುಪಯೋಗ ಎಂದಾಗುತ್ತದೆ. ನಾನು ಹೇಳಿದ್ದನ್ನು Assistant Registrar ಮಾಡುತ್ತಾರೆ, ಇನ್ನೊಬ್ಬರು ಅಧಿಕಾರದಲ್ಲಿರುವವರು ಹೇಳಿದ್ದನ್ನು ಮಾಡುತ್ತಾರೆ. ಆ ಕೆಲಸ ಮಾಡಬೇಕು. Section 64 enquiry ನಲ್ಲಿ ಸ್ವಲ್ಪ ತಿದ್ದುಪಡಿ ತರಬೇಕಾಗುತ್ತದೆ. Reserve Bank opinion ಇಲ್ಲದೇ ಸಮಾಪನಗೊಳಿಸುವ ಹಾಗೂ ಅವರ opinion ಮಾಡುವುದು ಒಳ್ಳೆಯದ್ದಾಗಿದೆ. ಇನ್ನೂ ಸ್ವಲ್ಪ strict ಮಾಡಿ, Section 29C and Section 64 enquiry ಇದೆಯಲ್ಲಾ, ಅದನ್ನು ಸ್ವಲ್ಪ ಸುಲಲಿತ ಮಾಡಿ, strict ಮಾಡಲಿ, ಆಗ co-operative society ಸ್ವಲ್ಪ ಅಚ್ಚುಕಟ್ಟಾಗುತ್ತದೆ ಎಂದು ನನ್ನ ಭಾವನೆ ಇದೆ. Government share ವಿಚಾರದಲ್ಲಿ ಬಹಳ serious ಆಗಿ ಯಾರಿದ್ದರೂ ಮಾಡಬೇಕಾಗುತ್ತದೆ. ಅವರು ನೊಂದಿದ್ದಾರೆ, ನಾವು ನೊಂದಿದ್ದೇವೆ.

**ಶ್ರೀ ಎಸ್.ಟಿ. ಸೋಮಶೇಖರ್:-** ಮಾನ್ಯ ಸಭಾಪತಿಯವರೇ, ಮಾನ್ಯ ವೆಂಕಟೇಶ್ ರವರು ಹೇಳಿದಂತೆ ಸಹಕಾರಿಗಳಿಗೆ ಮತ್ತು ರೈತರಿಗೆ ವಿರುದ್ದವಾದ amendment ಅನ್ನು ತಂದಿಲ್ಲ, ಸುಮಾರು ಒಂದು ವರ್ಷದಿಂದ entire State ಅನ್ನು tour ಮಾಡಿ, ಎಲ್ಲಾ ಸಹಕಾರ ಸಂಘಗಳ ಜೊತೆ, senior co-operators ಗಳ ಜೊತೆ ಮತ್ತು MLC, MLA, MP ಜೊತೆಯಲ್ಲಿರುವ Co-operator ಗಳೆಲ್ಲರ ಜೊತೆ ಚರ್ಚೆ ಮಾಡಿ ಕೆಲವನ್ನು ಮಾತ್ರ ತಂದಿದ್ದೇನೆ. ಮಾನ್ಯ ಸದಸ್ಯರು ಹೇಳಿರುವುದು Town and Country Planning Act ಅಡಿಯಲ್ಲಿ ಬರುತ್ತದೆ. Town and Country Planning Act ನಲ್ಲಿ ಏನು plan sanction ಇದೆ, ಅದರಲ್ಲಿ ಎಲ್ಲವೂ ಬರುತ್ತದೆ. ಇದರಲ್ಲಿ ಆ ರೀತಿ ಯಾವ amendment ಯನ್ನು ತಂದಿಲ್ಲ.

(ಮುಂದು)

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

(952)/23.09.2021/2.40/ಹೆಚ್‌ವಿ:ಎಕೆ

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಎಸ್.ಟಿ.ಸೋಮಶೇಖರ್(ಮುಂದುವರೆದದ್ದು):-**

ಮಾನ್ಯ ಮರಿತಿಬ್ಬೇಗೌಡರು ಹೇಳಿದಂತೆ, ಯಾವುದಾದರೊಂದು ಪ್ರಾಥಮಿಕ ಸಹಕಾರಿ ಸಂಘವನ್ನು ಪ್ರಾರಂಭ ಮಾಡಬೇಕಾದರೆ ಕನಿಷ್ಠ 10 ಜನ ಸದಸ್ಯರನ್ನು ಹೊಂದಿರಬೇಕೆಂದು ಹಿಂದೆ ನಿಯಮವಿತ್ತು ಈಗ ಅದಕ್ಕೆ ತಿದ್ದುಪಡಿಯನ್ನು ತಂದು 20 ಜನ ಸದಸ್ಯರೆಂದು ಮಾಡಿದ್ದೇವೆ. ಈ 20 ಜನ ಸದಸ್ಯರಲ್ಲಿ ಒಂದೇ ಕುಟುಂಬಕ್ಕೆ ಸೇರಿದವರು ಇರಬಾರದೆಂದು ಮಾಡಿದ್ದೇವೆ. ಹಿಂದೆ ಕೆಲವೊಂದು ಸಂದರ್ಭಗಳಲ್ಲಿ 10 ಜನ ಸದಸ್ಯರು ಎಂದು ಮಾಡಿದರೆ ಅವರ ಕುಟುಂಬ ಸದಸ್ಯರನ್ನೇ ಹಾಕಿಕೊಂಡು ಒಂದು ಸಂಘವನ್ನು ಮಾಡಿಕೊಳ್ಳುತ್ತಿದ್ದರು ಇದನ್ನು ತಪ್ಪಿಸಬೇಕೆನ್ನುವ ಹಿನ್ನೆಲೆಯಿಂದ ಸದಸ್ಯರ ಸಂಖ್ಯೆಯನ್ನು 20ಕ್ಕೆ ಹೆಚ್ಚು ಮಾಡಿದ್ದೇವೆ. ಒಂದೇ ಕುಟುಂಬದ ಸದಸ್ಯರು ಇರಬಾರದೆಂದು ಹೇಳಿದ್ದೇವೆ.

ಸನ್ಮಾನ್ಯ ಸಭಾಪತಿಯವರೇ, ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮದಲ್ಲಿನ ಪ್ರಕರಣ 64ಕ್ಕೆ ಯಾವುದೇ ತಿದ್ದುಪಡಿಯನ್ನು ತಂದಿಲ್ಲ. ಇನ್ನೂ ಬಹಳಷ್ಟು ನ್ಯೂನತೆಗಳಿವೆ. ಆ ನ್ಯೂನತೆಗಳನ್ನು ಗುರುತಿಸಿ ಸೂಕ್ತ ರೀತಿಯಾದ ತಿದ್ದುಪಡಿಗಳನ್ನು ತರಬೇಕೆನ್ನುವ ಚಿಂತನೆಯನ್ನು ನಾವು ನಡೆಸಿದ್ದೇವೆ.

ಮಾನ್ಯ ಸದಸ್ಯರು ಮಾತನಾಡುತ್ತಾ, ಸರ್ಕಾರಿ ಷೇರಿನ ಬಗ್ಗೆ ಪ್ರಸ್ತಾಪ ಮಾಡಿದ್ದರು. ಮಾನ್ಯ ಬಿ.ಎಸ್.ಯಡಿಯೂರಪ್ಪನವರು ಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲಿ ಸುಮಾರು 21 ಡಿ.ಸಿ.ಸಿ. ಬ್ಯಾಂಕ್‌ಗಳಿಗೆ 10 ಲಕ್ಷ ರೂಪಾಯಿಗಳನ್ನು ಸರ್ಕಾರಿ ಷೇರು ಮೊತ್ತವನ್ನಾಗಿ ನೀಡಬೇಕೆನ್ನುವ ತೀರ್ಮಾನವನ್ನು ತೆಗೆದುಕೊಳ್ಳಲಾಯಿತು. ಒಬ್ಬ ಸರ್ಕಾರಿ ಪ್ರತಿನಿಧಿ ಆಯಾಯ ಡಿ.ಸಿ.ಸಿ. ಬ್ಯಾಂಕ್‌ನಲ್ಲಿ ಇದ್ದಾರೆ; ಅಲ್ಲಿ ಏನಾದರೂ ಆದರೆ, ಅದರ ಬಗ್ಗೆ ಅವರು ಸರ್ಕಾರಕ್ಕೆ ವರದಿ ಕೊಡಬಹುದು; ಆ ಹಿನ್ನೆಲೆಯಲ್ಲಿ ಸರ್ಕಾರದ ಒಬ್ಬ ಪ್ರತಿನಿಧಿ ಅಲ್ಲಿ ಇರಲಿ ಎನ್ನುವ ಒಳ್ಳೆಯ ಉದ್ದೇಶಕ್ಕಾಗಿ ಈ ತೀರ್ಮಾನಕ್ಕೆ ಬರಲಾಯಿತು. ಕೆಟ್ಟ ಉದ್ದೇಶದಿಂದ ನಾವು ಯಾವುದೇ ತೀರ್ಮಾನಗಳನ್ನು ತೆಗೆದುಕೊಂಡಿಲ್ಲ. ರಾಜ್ಯದಲ್ಲಿರುವ ಸುಮಾರು 21 ಡಿ.ಸಿ.ಸಿ. ಬ್ಯಾಂಕ್‌ಗಳ ಪೈಕಿ 5-6 ಡಿ.ಸಿ.ಸಿ. ಬ್ಯಾಂಕ್‌ಗಳಲ್ಲಿ ಈಗಾಗಲೇ ಸರ್ಕಾರದ ಷೇರು ಇದೆ. ಅಲ್ಲಿಗೆ ಸರ್ಕಾರದ ವತಿಯಿಂದ ಒಬ್ಬ ಪ್ರತಿನಿಧಿಯನ್ನು ಸಹ ನೇಮಕ ಮಾಡಲಾಗಿದೆ. ಉಳಿದ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

10-15 ಡಿ.ಸಿ.ಸಿ. ಬ್ಯಾಂಕ್‌ಗಳಲ್ಲಿ ಸರ್ಕಾರದ ಷೇರು ಇರಲಿಲ್ಲ. ಕಳೆದ ಸಾಲಿನ ಆಯವ್ಯಯದಲ್ಲಿ ಆಗಿನ ಮುಖ್ಯಮಂತ್ರಿಗಳಾಗಿದ್ದ ಮಾನ್ಯ ಬಿ.ಎಸ್.ಯಡಿಯೂರಪ್ಪನವರು ಒಂದೊಂದು ಡಿ.ಸಿ.ಸಿ. ಬ್ಯಾಂಕ್‌ಗಳಿಗೆ 10 ಲಕ್ಷ ರೂಪಾಯಿಗಳನ್ನು ಸರ್ಕಾರ ಷೇರು ಮೊತ್ತವನ್ನಾಗಿ ನೀಡಬೇಕೆನ್ನುವ ತೀರ್ಮಾನವನ್ನು ಮಾಡಿದ್ದರು. ಇದನ್ನು ಯಾವುದೇ ಕೆಟ್ಟ ದೃಷ್ಟಿಯಿಂದ ಮಾಡಿಲ್ಲ. ಕೆಲವು ಡಿ.ಸಿ.ಸಿ. ಬ್ಯಾಂಕ್‌ನವರು 'ನಮ್ಮ ಡಿ.ಸಿ.ಸಿ. ಬ್ಯಾಂಕ್‌ಗೆ ಷೇರು ಕೊಡಿ' ಎನ್ನುವ ಬೇಡಿಕೆಯನ್ನು ಇಟ್ಟಿದ್ದ ಹಿನ್ನೆಲೆಯಲ್ಲಿ, ಗುಲ್ಬರ್ಗಾ ಡಿ.ಸಿ.ಸಿ. ಬ್ಯಾಂಕ್‌ಗೆ ಸುಮಾರು 10 ಕೋಟಿ ಷೇರು ಮೊತ್ತವನ್ನು ನೀಡಲಾಗಿದೆ. ಸರ್ಕಾರ 10 ಕೋಟಿ ಷೇರು ಮೊತ್ತವನ್ನು ಕೊಟ್ಟು ಒಬ್ಬ ಸರ್ಕಾರಿ ಪ್ರತಿನಿಧಿಯನ್ನು ಅಲ್ಲಿ ನೇಮಕ ಮಾಡದಿದ್ದರೆ ತಪ್ಪಾಗುತ್ತದೆ. ಆದ್ದರಿಂದ ದುರುದ್ದೇಶದಿಂದ ನಾವು ಯಾವುದೇ ತಿದ್ದುಪಡಿಯನ್ನು ತಂದಿಲ್ಲ. ನಮ್ಮ ಸರ್ಕಾರ ಸಹಕಾರ ಕ್ಷೇತ್ರಕ್ಕೆ ಸಹಕಾರವನ್ನು ನೀಡುತ್ತದೆ. ಮಾನ್ಯ ಭೋಜೇಗೌಡರಿಗೂ ಸಹಕಾರವನ್ನು ನೀಡಿದ್ದೇವೆ.

**ಶ್ರೀ ಎಸ್.ರವಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ಸರ್ಕಾರದಿಂದ 10 ಲಕ್ಷ ರೂಪಾಯಿಗಳ ಷೇರು ಕೊಟ್ಟು ಆ ಬ್ಯಾಂಕ್‌ನಲ್ಲಿ ಏನಾದರೂ ಹೆಚ್ಚುಕಡಿಮೆಯಾದರೇ ಸರ್ಕಾರಕ್ಕೆ ವರದಿ ಕೊಡುವುದಕ್ಕೆ ಒಬ್ಬ ಸರ್ಕಾರದ ಪ್ರತಿನಿಧಿಯಿರಲಿ ಎನ್ನು ದೃಷ್ಟಿಯಿಂದ ಒಬ್ಬ ಪ್ರತಿನಿಧಿಯನ್ನು ಅಲ್ಲಿಗೆ ನೇಮಕ ಮಾಡಲಾಗುತ್ತಿದೆ. ಸರ್ಕಾರ 10 ಲಕ್ಷ ರೂಪಾಯಿಗಳನ್ನು ಕೊಟ್ಟು ಒಬ್ಬ ಸರ್ಕಾರಿ ಪ್ರತಿನಿಧಿಯನ್ನು ನೇಮಕ ಮಾಡುವ ಅವಶ್ಯಕತೆ ಇಲ್ಲ. ಏಕೆಂದರೆ, ಈಗಾಗಲೇ ಅಲ್ಲಿ ಸಹಕಾರ ಇಲಾಖೆಯಿಂದ ಜಂಟಿ ನಿಬಂಧಕರು ಇರುತ್ತಾರೆ. ಮತದಾನ ಮಾಡುವಂತಹ ಹಕ್ಕು ಸಹ ಅವರಿಗೆ ಇರುತ್ತದೆ. ಇದರ ಜೊತೆಗೆ ಅಪೆಕ್ಸ್ ಬ್ಯಾಂಕ್ ಸಹ ಇರುತ್ತದೆ.

**ಶ್ರೀ ಎಸ್.ಟಿ.ಸೋಮಶೇಖರ್:-** ಸನ್ಮಾನ್ಯ ಸಭಾಪತಿಯವರೇ, ಡಿ.ಸಿ.ಸಿ. ಬ್ಯಾಂಕ್‌ಗಳಿಗೆ ಸರ್ಕಾರದಿಂದ ಷೇರು ಮೊತ್ತವನ್ನು ನೀಡುವುದರಿಂದ ಅವರಿಗೇನಾದರೂ ತೊಂದರೆಯಾಗುತ್ತದೆಯೇ?

**ಶ್ರೀ ಎಸ್.ರವಿ:-** ಸನ್ಮಾನ್ಯ ಸಭಾಪತಿಯವರೇ, ಸರ್ಕಾರ ಬಡ್ಡಿರಹಿತವಾಗಿ ಷೇರು ಕೊಟ್ಟರೆ ಏನೂ ತೊಂದರೆಯಾಗುವುದಿಲ್ಲ. ಮಾನ್ಯ ಸಚಿವರು ಮಾತನಾಡುತ್ತಾ, ಗುಲ್ಬರ್ಗಾ ಡಿ.ಸಿ.ಸಿ. ಬ್ಯಾಂಕ್‌ಗೆ ಸುಮಾರು 10 ಕೋಟಿ ರೂಪಾಯಿಗಳನ್ನು ಸರ್ಕಾರದ ಷೇರು

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮೊತ್ತವನ್ನಾಗಿ ನೀಡಲಾಗಿದೆ ಎನ್ನುವ ಮಾತನ್ನು ಹೇಳಿದ್ದಾರೆ. ಕೊಡುವುದಾದರೇ ಎಲ್ಲಾ ಡಿ.ಸಿ.ಸಿ. ಬ್ಯಾಂಕ್‌ಗಳಿಗೆ 10 ಲಕ್ಷ ರೂಪಾಯಿಗಳ ಷೇರು ಮೊತ್ತಕ್ಕೆ ಬದಲಾಗಿ 10 ಕೋಟಿ ರೂಪಾಯಿಗಳನ್ನು ನೀಡಲಿ ಇದರ ಬಗ್ಗೆ ನಮ್ಮ ಅಭ್ಯಂತರವೇನೂ ಇಲ್ಲ. ಕೇವಲ 10 ಲಕ್ಷ ರೂಪಾಯಿಗಳ ಷೇರು ಮೊತ್ತವನ್ನು ಕೊಟ್ಟು ಅಲ್ಲಿಗೆ ಒಬ್ಬ ಸರ್ಕಾರಿ ಪ್ರತಿನಿಧಿಯನ್ನು ನೇಮಕ ಮಾಡಿ, ಆತನನ್ನು ಡಿ.ಸಿ.ಸಿ. ಬ್ಯಾಂಕ್‌ನ ಅಧ್ಯಕ್ಷ, ಉಪಾಧ್ಯಕ್ಷ ಅಥವಾ Office Bearer ಮಾಡುವುದು ಸರಿಯಲ್ಲವೆನ್ನುವುದು ನನ್ನ ಸಲಹೆಯಾಗಿದೆ. ಚುನಾವಣೆಯಲ್ಲಿ ಗೆದ್ದು ಬರದೇ ಕೇವಲ 10 ಲಕ್ಷ ರೂಪಾಯಿಗಳ ಸರ್ಕಾರಿ ಷೇರು ಮೊತ್ತವನ್ನು ಕೊಟ್ಟು ಅವರು ಏಕಾಏಕಿ ಈ ಸ್ಥಾನಗಳನ್ನು ಅಲಂಕರಿಸುವುದು ಎಷ್ಟು ಸೂಕ್ತ? ನಾವು ವರ್ಷಾನುಗಟ್ಟಲೆ ಕಷ್ಟಪಟ್ಟು ಸಹಕಾರಿ ರಂಗದಲ್ಲಿ ಬಡಿದಾಡಿಕೊಂಡು ಆ ಸ್ಥಾನಕ್ಕೆ ಹೋಗಿರುತ್ತೇವೆ. ಆದರೆ, ನಾಳೆ ಅಧ್ಯಕ್ಷ ಉಪಾಧ್ಯಕ್ಷರ ಚುನಾವಣೆ ಎಂದು ಹೇಳಿದಾಗ, ಯಾರೋ ಒಬ್ಬ ಸರ್ಕಾರಿ ಪ್ರತಿನಿಧಿ ದಿಢೀರನೇ ಪ್ರತ್ಯಕ್ಷವಾಗುವುದು ಎಷ್ಟರಮಟ್ಟಿಗೆ ನ್ಯಾಯಸಮ್ಮತ ಎನ್ನುವುದನ್ನು ತಾವೇ ಯೋಚನೆ ಮಾಡಬೇಕಾಗಿದೆ.

ಸನ್ಮಾನ್ಯ ಸಭಾಪತಿಯವರೇ, ಒಂದು ಸಾವಿರ ಕೋಟಿ ರೂಪಾಯಿಗಳಷ್ಟು ವಹಿವಾಟನ್ನು ನಡೆಸುವಂತಹ ಡಿ.ಸಿ.ಸಿ. ಬ್ಯಾಂಕ್‌ಗೆ ಸರ್ಕಾರ ಕೊಡುವಂತಹ 10 ಲಕ್ಷ ರೂಪಾಯಿಗಳ ಅವಶ್ಯಕತೆಯಿದೆಯೇ? ಕೊಡುವುದಾದರೆ ಹೆಚ್ಚಿನ ಪ್ರಮಾಣದಲ್ಲಿ ಅಂದರೆ, 10-20 ಕೋಟಿ ರೂಪಾಯಿಗಳನ್ನು ಕೊಡಲಿ. ಸರ್ಕಾರದ ಪ್ರತಿನಿಧಿಯಾಗಿ ಬರುವವನು ಅಧ್ಯಕ್ಷ ಅಥವಾ ಉಪಾಧ್ಯಕ್ಷ ಸ್ಥಾನಕ್ಕೆ ಬರುವುದು ಬೇಡ, ಆತನು ಗಳಿಸಿಕೊಂಡಿರುವ ಅನುಭವ ಮತ್ತು ಜ್ಞಾನ, ಸಲಹೆ-ಸೂಚನೆಗಳನ್ನು ಧಾರಾಳವಾಗಿ ಆ ಸಂಸ್ಥೆಗೆ ನೀಡಲಿ. ಆದರೆ, ಅಧ್ಯಕ್ಷ ಅಥವಾ ಉಪಾಧ್ಯಕ್ಷ ಸ್ಥಾನಕ್ಕೆ ಬರುವುದು ಬೇಡವೆನ್ನುವುದು ನನ್ನ ಒತ್ತಾಯವಾಗಿದೆ. ಮಾನ್ಯ ಸಚಿವರು ಒಬ್ಬ ಸಹಕಾರಿಯಾಗಿ ನನ್ನ ಭಾವನೆಗಳನ್ನು ಅರ್ಥ ಮಾಡಿಕೊಳ್ಳುತ್ತಾರೆಂದು ಭಾವಿಸುತ್ತೇನೆ. ಇವತ್ತು ಅವರು ಅಧಿಕಾರದಲ್ಲಿದ್ದಾರೆ; ನಾಳೆ ಅವರು ಅಧಿಕಾರವನ್ನು ಕಳೆದುಕೊಂಡಾಗ, ಬೇರೆಯವರು ಆ ಸ್ಥಾನಕ್ಕೆ ಬರುತ್ತಾರೆ. ಅವರು ಈ ದಿನ ತೆಗೆದುಕೊಳ್ಳುವಂತಹ ನಿರ್ಧಾರಗಳು ಮಾರ್ಗದರ್ಶಕವಾಗಿರಲಿ ಎನ್ನುವುದು ನನ್ನ ಭಾವನೆಯಾಗಿದೆ.

**ಶ್ರೀ ಎಸ್.ಟಿ.ಸೋಮಶೇಖರ್:-** ಸನ್ಮಾನ್ಯ ಸಭಾಪತಿಯವರೇ, ಅವರು ಹೇಳುತ್ತಿರುವುದನ್ನು ನಾನು ವೈಯಕ್ತಿಕವಾಗಿ ಒಪ್ಪಿಕೊಳ್ಳುತ್ತಿದ್ದೇನೆ.

**ಶ್ರೀ ಎಸ್.ರವಿ:-** ಸನ್ಮಾನ್ಯ ಸಭಾಪತಿಯವರೇ, ಚುನಾವಣೆಯ ಸಂದರ್ಭದಲ್ಲಿ ಯಾವುದೋ ಒಂದು ಸಂಸ್ಥೆಯಲ್ಲಿರುವ ಎಲ್ಲ ಸದಸ್ಯರಿಗೂ ಮತದಾನದ ಹಕ್ಕು ಬರುತ್ತದೆ. ಯಾರೋ ಒಬ್ಬರು ಡೆಲಿಗೇಶನ್ ತೆಗೆದುಕೊಂಡು ಬಂದು, ನಾಮಿನೇಶನ್ ಹಾಕುತ್ತಾರೆ. ನಾಮಿನೇಶನ್ ಹಾಕಿದ ನಂತರ, ಪರಿಶೀಲನೆಯ ಸಂದರ್ಭದಲ್ಲಿ ಯಾರೋ ಅನಾಮಧೇಯರ ಕೈಯಲ್ಲಿ ಒಂದು ಅರ್ಜಿಯನ್ನು ಬರೆಯಿಸಿಕೊಳ್ಳುತ್ತಾರೆ. ಆ ಸಂಸ್ಥೆಗೆ ತನಿಖೆ ಮಾಡುವುದಕ್ಕೆ ಸಿ.ಡಿ.ಓ., ಒಂದು ನೋಟೀಸ್ ಸಹ ಕೊಡುವುದಿಲ್ಲ. ಏಕಾಏಕಿ ನಾನು ಅಲ್ಲಿಗೆ ಹೋಗಿದ್ದೆ, ನನಗೆ ಸೂಕ್ತವಾಗಿರುವ ದಾಖಲೆಪತ್ರಗಳನ್ನು ಕೊಡಲಿಲ್ಲ, ಈ ಸಂಸ್ಥೆಯ ನಡೆ ಅನುಮಾನಾಸ್ಪದವಾಗಿದೆ. ಆದ್ದರಿಂದ ಇದನ್ನು ಸೂಪರ್‌ಸೀಡ್ ಮಾಡಲಾಗುತ್ತದೆಂದು ಜಂಟಿ ನಿಬಂಧಕರಿಗೊಂದು ರಿಪೋರ್ಟ್ ಹಾಕುತ್ತಾನೆ. ಇಂತಹವುಗಳನ್ನು ಸರಿಪಡಿಸುವಂತಹ ಕೆಲಸವನ್ನು ಮಾನ್ಯ ಸಚಿವರು ಮಾಡಿದರೆ ಅವರಿಗೆ ಒಳ್ಳೆಯ ಹೆಸರು ಬರುತ್ತದೆ. ಈಗ ಮಾನ್ಯ ಸಹಕಾರ ಸಚಿವರು ತರುತ್ತಿರುವ ತಿದ್ದುಪಡಿಗಳೆಲ್ಲವೂ ಸೂಕ್ತವಾಗಿವೆ. ಆದರೆ, ಹೆಚ್ಚು ಕ್ರಾಂತಿಕಾರಕ ತಿದ್ದುಪಡಿಗಳನ್ನು ತರಬೇಕೆನ್ನುವುದು ನಮ್ಮ ಸಲಹೆಯಾಗಿದೆ.

ಸನ್ಮಾನ್ಯ ಸಭಾಪತಿಯವರೇ, ಷೇರುದಾರರು ಅಥವಾ ಸದಸ್ಯರು 5 ಸರ್ವ ಸದಸ್ಯರ ಸಭೆಯಲ್ಲಿ 2 ಸರ್ವ ಸದಸ್ಯರ ಸಭೆಗೆ ಕಡ್ಡಾಯವಾಗಿ ಹಾಜರಾಗಬೇಕು, ಇಲ್ಲದಿದ್ದರೆ ಅವರನ್ನು ಅನರ್ಹಗೊಳಿಸಲಾಗುತ್ತದೆ ಎನ್ನುವ ತಿದ್ದುಪಡಿಯನ್ನು ತಂದಿದ್ದಾರೆ. ಆದರೆ, ಅನರ್ಹಗೊಂಡಿರುವವರು ಕೋರ್ಟ್‌ಗೆ ಹೋಗುತ್ತಾರೆ ಕೋರ್ಟ್ ಪುನಃ ಅವರಿಗೆ ಮತದಾನದ ಹಕ್ಕನ್ನು ನೀಡುತ್ತದೆ. ಇಂತಹ ತಿದ್ದುಪಡಿಗಳಿಂದ ಏನೂ ಪ್ರಯೋಜನವಾಗುವುದಿಲ್ಲ. ಆದ್ದರಿಂದ ಮಾನ್ಯ ಸಹಕಾರ ಸಚಿವರು ತಮ್ಮ ಇಲಾಖೆಯ ಅಧಿಕಾರಿಗಳೊಂದಿಗೆ ಚರ್ಚಿಸಿ ಅವರುಗಳು ಕೋರ್ಟ್‌ಗೆ ಹೋದರೂ ಸ್ಟೇ ಸಿಗದಿರುವಂತೆ ತಿದ್ದುಪಡಿಗಳನ್ನು ತರಬೇಕೆನ್ನುವುದು ನನ್ನ ಸಲಹೆಯಾಗಿದೆ. ಷೇರುದಾರರು ಅಥವಾ ಸದಸ್ಯರು ಸತತ 5 ಸರ್ವ ಸದಸ್ಯರ ಸಭೆಯಲ್ಲಿ ಕನಿಷ್ಠ 2 ಸರ್ವ ಸದಸ್ಯರ ಸಭೆಗೆ ಹಾಜರಾಗದಿದ್ದರೆ, ಅವರು ಯಾತಕ್ಕೋಸ್ಕರ ಷೇರುದಾರರಾಗಿರಬೇಕು ಅಥವಾ ಸದಸ್ಯರಾಗಿರಬೇಕೆನ್ನುವುದು ನನ್ನ ಪ್ರಶ್ನೆಯಾಗಿದೆ.

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಎಸ್.ರವಿಯವರು ಒಳ್ಳೆಯ ಸಲಹೆಗಳನ್ನು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನೀಡುತ್ತಿದ್ದಾರೆ. ಯಾರು ಚುನಾವಣೆಯಲ್ಲಿ ಸ್ಪರ್ಧಿಸುತ್ತಾರೆ ಅವರು, ಅನರ್ಹಗೊಂಡು ಮತದಾನದ ಹಕ್ಕಿನಿಂದ ಹೊರಗುಳಿದವರಿಂದ ಕೋರ್ಟಿನಲ್ಲಿ ಅರ್ಜಿ ಹಾಕಿಸಿ, ಅಲ್ಲಿಂದ ಮತದಾನದ ಹಕ್ಕನ್ನು ಪಡೆದುಕೊಂಡು ಬಂದು, ಮತದಾನ ಮಾಡಿಸಿ ತಮಗೆ ಬೇಕಾದವರನ್ನು ಗೆಲ್ಲಿಸಿಕೊಳ್ಳುತ್ತಾರೆ. ಇಂತಹ ಕೆಲಸಗಳು ಆಗಬಾರದು. ಡಿ.ಸಿ.ಸಿ. ಬ್ಯಾಂಕ್‌ಗೆ ಸರ್ಕಾರ 10 ಲಕ್ಷ ರೂಪಾಯಿಗಳ ಸರ್ಕಾರಿ ಷೇರನ್ನು ಕೊಟ್ಟು ಅದಕ್ಕೊಬ್ಬ ಸರ್ಕಾರಿ ನಾಮಿನಿಯನ್ನು ನೇಮಕ ಮಾಡಿ, ಅವನನ್ನು ಆ ಸೊಸೈಟಿಗೆ ನಿರ್ದೇಶಕರನ್ನಾಗಿ ನೇಮಕ ಮಾಡಲು ಹೊರಟಿರುವುದು ಸರಿಯಾದ ಕ್ರಮವಲ್ಲ. ಮಾನ್ಯ ರವಿಯವರು ಹೇಳಿದಂತೆ ಸರ್ಕಾರ 10 ಕೋಟಿ ಅಥವಾ 50 ಕೋಟಿ ರೂಪಾಯಿಗಳನ್ನು ಸರ್ಕಾರಿ ಷೇರನ್ನಾಗಿ ನೀಡಿದರೆ, ಆಗ ಬ್ಯಾಂಕ್ ಹೆಚ್ಚು ಶಕ್ತಿಶಾಲಿಯಾಗುತ್ತದೆ. ಇದನ್ನು ಬಿಟ್ಟು ಕೇವಲ 10 ಲಕ್ಷ ರೂಪಾಯಿಗಳನ್ನು ಕೊಟ್ಟು ಅಲ್ಲಿಗೊಬ್ಬ ಸರ್ಕಾರಿ ಪ್ರತಿನಿಧಿಯನ್ನು ನೇಮಕ ಮಾಡಿ ಅಧ್ಯಕ್ಷರು ಅಥವಾ ಉಪಾಧ್ಯಕ್ಷರ ಚುನಾವಣೆಯಲ್ಲಿ ನಾಮಿನೇಶನ್ ಆಗಿರುವ ಉಪ ನಿಬಂಧಕರ ಜೊತೆಗೆ ಇತನೂ ಒಬ್ಬ ಡೈರೆಕ್ಟರ್ ಆಗಿ ಕುಳಿತುಕೊಳ್ಳುತ್ತಾನೆ. ಸರ್ಕಾರದ ವತಿಯಿಂದ ನಾಮನಿರ್ದೇಶನ ಮಾಡುವುದು ಪ್ರಜಾಪ್ರಭುತ್ವದಲ್ಲಿ ಸರಿಯಾದ ಕ್ರಮವಲ್ಲ. ಆದ್ದರಿಂದ ಹಿಂದೆ ಮಾನ್ಯ ಎಸ್.ಎಸ್.ಪಾಟೀಲ್‌ರವರು ಸಹಕಾರಿ ಮಂತ್ರಿಗಳಾಗಿದ್ದಾಗ, ನಾಮನಿರ್ದೇಶನ ಪದ್ಧತಿಯನ್ನೇ ತೆಗೆದು ಹಾಕಿದ್ದರು.

ಸನ್ಮಾನ್ಯ ಸಭಾಪತಿಯವರೇ, ಬಾಗಲಕೋಟೆ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್‌ನಲ್ಲಿ ಅಂದಾಜು 78 ಲಕ್ಷ ರೂಪಾಯಿಗಳಷ್ಟು ಷೇರು ಮೊತ್ತವಿತ್ತು. ಅದನ್ನು ನಾವು ಸರ್ಕಾರಕ್ಕೆ ವಾಪಸ್ಸು ಕೊಟ್ಟಿದ್ದೆವು. ಸರ್ಕಾರ ಅದನ್ನು ವಾಪಸ್ಸು ತೆಗೆದುಕೊಂಡಿತ್ತು. More or less, it is an interference by the government into the co-operative institutions. ಸರ್ಕಾರಿ ನಾಮಿನಿಯನ್ನು ನೇಮಕ ಮಾಡುವುದು ಸಹಕಾರಿ ಸಂಸ್ಥೆಯೊಳಗೆ ಸರ್ಕಾರದ ಹಸ್ತಕ್ಷೇಪಕ್ಕೆ ಅವಕಾಶ ಮಾಡಿಕೊಡುತ್ತಿದೆ. ನನಗೆ ತಿಳಿದ ಮಟ್ಟಿಗೆ ಮಾನ್ಯ ಸಚಿವರು ಒಬ್ಬ ಸಹಕಾರಿಯಾಗಿ ವೈಯಕ್ತಿಕವಾಗಿ ಅದನ್ನು ಒಪ್ಪುವುದಿಲ್ಲವೆನ್ನುವುದು ನನಗೆ ಗೊತ್ತಿದೆ. ಸರ್ಕಾರ 10 ಲಕ್ಷ ರೂಪಾಯಿಗಳ ಷೇರು ಮೊತ್ತವನ್ನು ಕೊಟ್ಟು ಅಲ್ಲಿಗೆ ಒಬ್ಬ ಸರ್ಕಾರಿ ನಾಮಿನಿಯನ್ನು ನೇಮಕ ಮಾಡುವಂತೆ ಅವರ ಮೇಲೆ ಯಾವುದೋ ಒತ್ತಡ ಬಂದ ಹಿನ್ನೆಲೆಯಲ್ಲಿ ಅವರು ಈ ರೀತಿಯ ನಿರ್ಣಯಕ್ಕೆ ಬಂದಿರಬಹುದೆಂದು ನಾನು ತಿಳಿದುಕೊಂಡಿದ್ದೇನೆ. ಈಗ ಅವರು ಅಧಿಕಾರದಲ್ಲಿರಬಹುದು, ನಾಳೆ ನಾವು ಅಧಿಕಾರಕ್ಕೆ ಬರಬಹುದು. ಆಗ ಈ ತಿದ್ದುಪಡಿಗಳೇ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

“ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಅವರಿಗೆ ವಿರುದ್ಧವಾಗಿ ಮಾರ್ಪಾಡಾಗಬಹುದೆಂದು ಹೇಳುತ್ತಾ, ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತಿದ್ದೇನೆ.

**ಶ್ರೀ ಎಸ್.ಎಲ್.ಭೋಜೇಗೌಡ(ಶಿಕ್ಷಕರ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಮಾನ್ಯ ಎಸ್.ರವಿಯವರು ಹೇಳಿದಂತಹ ಅಂಶಗಳನ್ನು ಈ ವಿಧೇಯಕದಲ್ಲಿ ಸೇರ್ಪಡೆ ಮಾಡಿದರೆ. ನಿಜವಾಗಿಯೂ ಮಾನ್ಯ ಸಹಕಾರ ಸಚಿವರಿಗೊಂದು ಒಳ್ಳೆಯ ಹೆಸರು ಬರುತ್ತದೆ ಮತ್ತು ಇದೊಂದು ಲ್ಯಾಂಡ್‌ಮಾರ್ಕ್ ಆಗಿ ಉಳಿಯುತ್ತದೆ.

ಸನ್ಮಾನ್ಯ ಸಭಾಪತಿಯವರೇ, ನಮ್ಮ ಜಿಲ್ಲೆಯ ಸಹಕಾರಿ ಬ್ಯಾಂಕ್‌ನಿಂದ ಸುಮಾರು 5 ಕೋಟಿ ರೂಪಾಯಿಗಳಷ್ಟು ಷೇರು ಮೊತ್ತವನ್ನು ವಾಪಸ್ಸು ಕಳುಹಿಸಿದ್ದೇವೆ. ಈ ಬ್ಯಾಂಕ್‌ನ ಮೂಲಕ ಸುಮಾರು 1000 ಕೋಟಿ ರೂಪಾಯಿಗಳಷ್ಟು ವ್ಯವಹಾರವನ್ನು ನಡೆಸಲಾಗುತ್ತಿದೆ. ಇಷ್ಟು ದೊಡ್ಡ ಮೊತ್ತದ ವ್ಯವಹಾರ ನಡೆಸುವ ಬ್ಯಾಂಕ್‌ಗೆ ಸರ್ಕಾರ ಕೇವಲ 10 ಲಕ್ಷ ರೂಪಾಯಿಗಳ ಷೇರು ಮೊತ್ತವನ್ನು ಕೊಟ್ಟು, ನಮ್ಮ ಮೇಲೆ ಸವಾರಿ ಮಾಡಲು ಪ್ರಯತ್ನಿಸುವುದು ಸರಿಯಾದ ಕ್ರಮವೇ ಎನ್ನುವುದು ನನ್ನ ಪ್ರಶ್ನೆಯಾಗಿದೆ. ಸಹಕಾರ ಬ್ಯಾಂಕ್‌ಗಳನ್ನು ನೋಡಿಕೊಳ್ಳುವುದಕ್ಕೆ ಅಪೆಕ್ಸ್ ಬ್ಯಾಂಕ್‌ನ ಪ್ರತಿನಿಧಿಗಳು ಇದ್ದಾರೆ. ಸಾವಿರಾರು ಕೋಟಿ ರೂಪಾಯಿಗಳನ್ನು ಅಪೆಕ್ಸ್ ಬ್ಯಾಂಕ್ ಕೊಡುತ್ತಿದೆ. ಆ ಬ್ಯಾಂಕ್‌ನ ಆಗುಹೋಗುಗಳನ್ನು ನೋಡಿಕೊಳ್ಳುವುದಕ್ಕೆ ಅಪೆಕ್ಸ್ ಬ್ಯಾಂಕ್‌ನ ಪ್ರತಿನಿಧಿ ಇರುತ್ತಾರೆ ಮತ್ತು ಸಹಕಾರ ಇಲಾಖೆಯ ಉಪ ನಿಬಂಧಕರು ಸಹ ಇರುತ್ತಾರೆ. ಸರ್ಕಾರದ ಷೇರನ್ನು ಯಾರು ಇಷ್ಟಪಡುತ್ತಾರೆ ಅವರು ತೆಗೆದುಕೊಳ್ಳಲಿ, ಯಾರಿಗೆ ಇಷ್ಟವಿಲ್ಲ ಅವರು ತೆಗೆದುಕೊಳ್ಳುವುದು ಬೇಡ.

ಸನ್ಮಾನ್ಯ ಸಭಾಪತಿಯವರೇ, ಒಂದು ಜಿಲ್ಲೆಯ ಸಹಕಾರಿ ಬ್ಯಾಂಕ್‌ನ ಚುನಾವಣಾಧಿಕಾರಿಯಾಗಿ ಕಾರ್ಯ ನಿರ್ವಹಿಸಿದವರು ಮತ್ತೊಂದು ಸೊಸೈಟಿಯ ಚುನಾವಣಾ ಕಾರ್ಯವನ್ನು ನಿರ್ವಹಿಸುವುದ ಬೇಡವೆನ್ನುವುದು ನನ್ನ ಸಲಹೆಯಾಗಿದೆ. ಬಹಳಷ್ಟು ಜನ ಅಧಿಕಾರಿಗಳಿದ್ದಾರೆ. ಈ ಕಾರ್ಯಕ್ಕೆ ಅವರನ್ನು ಬಳಸಿಕೊಳ್ಳಲಿ ಎನ್ನುವುದು ನನ್ನ ಸಲಹೆಯಾಗಿದೆ.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಎರಡನೆಯದಾಗಿ, ಕ್ರಿಮಿನಲ್ ಹಿನ್ನೆಲೆಯಿರುವ, ಒಂದು ಬಾರಿ ಸಸ್ಪೆಂಡ್ ಆಗಿರುವ, ಇಲಾಖಾ ವಿಚಾರಣೆಗೆ ಒಳಪಟ್ಟಿರುವವರನ್ನು ಚುನಾವಣಾ ಕಾರ್ಯಕ್ಕೆ ಬಳಸಿಕೊಳ್ಳಬಾರದೆನ್ನುವುದು ನನ್ನ ಸಲಹೆಯಾಗಿದೆ. ಮೊನ್ನೆ ಕ್ರಿಮಿನಲ್ ಹಿನ್ನೆಲೆಯಿರುವ ಒಬ್ಬ ಅಧಿಕಾರಿಯನ್ನೇ 10 ಕಡೆ ಚುನಾವಣಾ ಕಾರ್ಯಕ್ಕೆ ನಿಯೋಜನೆ ಮಾಡಲಾಗಿದೆ. ಒಳ್ಳೆಯವರನ್ನು ಈ ಕಾರ್ಯಕ್ಕೆ ಬಳಸಿಕೊಂಡು ಕ್ರಿಮಿನಲ್ ಹಿನ್ನೆಲೆಯಿರುವ, ಒಂದು ಬಾರಿ ಸಸ್ಪೆಂಡ್ ಆಗಿರುವ ಅಥವಾ ಇಲಾಖಾ ವಿಚಾರಣೆಗೆ ಒಳಪಟ್ಟಿರುವವರನ್ನು ಯಾವ ಕಾರಣಕ್ಕೂ ಚುನಾವಣಾಧಿಕಾರಿಯನ್ನಾಗಿ ನೇಮಕ ಮಾಡದೇ ಇರುವಂತಹ ತಿದ್ದುಪಡಿಯನ್ನು ತರಬೇಕೆನ್ನುವ ಸಲಹೆಯನ್ನು ನೀಡುವುದಕ್ಕೆ ಬಯಸುತ್ತಿದ್ದೇನೆ.

(ಮುಂದುವರಿದಿದೆ)

(953) 23.09.2021 2.50 ಪಿಕೆ:ಆರ್‌ಎನ್

**ಶ್ರೀ ಕೆ.ಸಿ.ಕೊಂಡಯ್ಯ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**:- ಮಾನ್ಯ ಸಭಾಪತಿಗಳೆ, ಸಹಕಾರಿ ವಿಷಯದಲ್ಲಿ ನನಗೆ ಎ,ಬಿ,ಸಿ,ಡಿ ಗೊತ್ತಿಲ್ಲ. ಯಾವುದೇ ಸೊಸೈಟಿಗಳನ್ನು ನೋಡಿಲ್ಲ; ಆದರೆ ಅದರ ಬಗ್ಗೆ ಕೇಳುತ್ತಿರುತ್ತೇವೆ ಅಷ್ಟೆ. ಹಿಂದಿನ ಸರ್ಕಾರಗಳು ಎಸ್‌ಸಿ, ಎಸ್‌ಟಿ ಗಳಿಗೆ ಸಹಕಾರಿ ಸಂಘದ ಸದಸ್ಯರಾಗಲು ಶೇರ್ ಕ್ಯಾಪಿಟಲ್ ಫ್ರೀಯಾಗಿ ಕೊಟ್ಟಿದ್ದವು. ನನ್ನ ಇನ್ನೊಂದು ಸಲಹೆ ಏನೆಂದರೆ, ನಾವು ಆಡಳಿತಾತ್ಮಕವಾಗಿ ಎಸ್‌ಸಿ, ಎಸ್‌ಟಿಗಳಿಗೆ ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿಗಳಲ್ಲಿ ಮೀಸಲಾತಿ ಕೊಟ್ಟಿದ್ದೇವೆ. ಈ ಸೊಸೈಟಿಗಳಲ್ಲಿ ರೊಟೇಷನ್ ಆಧಾರದ ಮೇಲೆ ಏಕೆ ಚೇರ್‌ಮನ್ ಆಗುವುದಕ್ಕೆ ಅವಕಾಶ ಕೊಡಬಾರದು? ನನಗೆ ತಿಳಿದ ಮಟ್ಟಿಗೆ ಕರ್ನಾಟಕ ರಾಜ್ಯದಲ್ಲಿ ಆರ್ಥಿಕವಾಗಿ ಅವರು ಬೆಳೆಯುವುದಕ್ಕೆ ಯಾವುದೇ ಪ್ರಾವಿಷನ್ ಮಾಡಿಲ್ಲ. ರೊಟೇಷನ್ ಆಧಾರ ಮೇಲೆ ಎಸ್‌ಸಿ, ಎಸ್‌ಟಿ ಗಳಿಗೆ ಏಕೆ ಅವಕಾಶ ಕೊಡಬಾರದು ಎನ್ನುವುದರ ಬಗ್ಗೆ ಚಿಂತನೆ ಮಾಡಬೇಕೆಂದು ಕೋರುತ್ತೇನೆ.

**ಶ್ರೀ ಎಸ್.ಟಿ.ಸೋಮಶೇಖರ್:-** ಮಾನ್ಯ ಸಭಾಪತಿಗಳೆ, ಮಾನ್ಯ ರವಿಯವರು ಹೇಳುತ್ತಿರುವುದೇನೆಂದರೆ, ಕಳೆದ ಎರಡು ವರ್ಷಗಳ ಹಿಂದೆ ಬೆಂಗಳೂರು ಮಿಲ್ಕ್ ಯೂನಿಯನ್‌ನ ಚುನಾವಣೆಯ ಸಂದರ್ಭದಲ್ಲಿ, ನಾಳೆ ಚುನಾವಣೆ ಇದ್ದು ಬೆಳಗ್ಗೆ 10.30 ಗಂಟೆಗೆ ನಾಮಿನೇಷನ್ ಫೈಲ್ ಮಾಡಬೇಕು ಎಂದಾಗ, ಆದರ ಹಿಂದಿನ ರಾತ್ರಿ 11.00 ಗಂಟೆಗೆ ಡಿಸ್ಕ್ವಾಲಿಫೈ ಮಾಡುತ್ತಾರೆ. ಆ ರೀತಿ ಆಗಬಾರದು. ನಾನು ಸಹಕಾರ ಸಚಿವನಾಗಿ ಯಾವತ್ತೂ ದ್ವೇಷದ ರಾಜಕಾರಣ ಮಾಡುವುದಕ್ಕೆ ಹೋಗಲಿಲ್ಲ. ಅದೆಲ್ಲಾ ಅನುಭವ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನನಗೂ ಆಗಿದೆ. ಸಿಓಡಿ ತನಿಖೆ ಎದುರಿಸಿದ್ದೇನೆ, 64 ಎನ್‌ಕ್ವೈರಿ ಎದುರಿಸಿದ್ದೇನೆ. ಈ ಸಹಕಾರ ಕ್ಷೇತ್ರದಲ್ಲಿ ಏನೇನು ಇದೆಯೋ ಅದೆಲ್ಲವನ್ನೂ ಮಾನ್ಯ ಭೋಜೇಗೌಡರ ಗುರುಗಳು ನನ್ನ ಮೇಲೆ ಪ್ರಯೋಗ ಮಾಡಿದ್ದಾರೆ. ಆದರೆ, ನಾನು ಯಾವತ್ತೂ ಕೂಡ ದ್ವೇಷದ ರಾಜಕಾರಣವನ್ನು ಮಾಡಲಿಲ್ಲ. ಏನೇನು ತೊಂದರೆಯಾಗಿದೆಯೋ ಅವೆಲ್ಲವನ್ನೂ ಸರಿಪಡಿಸುವುದಕ್ಕೆ ತಿದ್ದುಪಡಿ ತರಲಾಗಿದೆ. ಮಾನ್ಯ ಯಡಿಯೂರಪ್ಪನವರು, ಎಲ್ಲಾ ಡಿಸಿಸಿ ಬ್ಯಾಂಕುಗಳಿಗೆ ಒಂದು ನಿರ್ದಿಷ್ಟ ಮೊತ್ತ ಕೊಡಬೇಕು ಎಂದು ಮಾಡಿದರು. ಒಬ್ಬ ಪ್ರತಿನಿಧಿಯನ್ನು ಹಾಕಿದರೆ ಅವನು ತೊಂದರೆ ಮಾಡುವಂಥದ್ದಿಲ್ಲ. ಡಿಸಿಸಿ ಬ್ಯಾಂಕ್‌ನಲ್ಲಿ ಏನೇನು ನಡೆಯುತ್ತದೆ ಎನ್ನುವ ಮಾಹಿತಿ ಅವನಿಗೆ ಇರುತ್ತದೆ. ಅವನಿಂದ ಯಾರಿಗೂ ತೊಂದರೆ ಆಗುವಂಥದ್ದಿಲ್ಲ. ಯಾವುದಾದರೂ ಡಿಸಿಸಿ ಬ್ಯಾಂಕ್‌ಗಳಲ್ಲಿ ಸರ್ಕಾರದ ನಾಮಿನಿ ತೊಂದರೆ ಮಾಡುತ್ತಿದ್ದಾನೆ ಎಂದರೆ ಆತನನ್ನು ವಿತ್‌ಡ್ರಾ ಮಾಡಿ ಬೇರೊಬ್ಬರನ್ನು ತರಬಹುದಾಗಿದೆ. ಮಾನ್ಯ ಸಭಾಪತಿಗಳೆ, ಇದನ್ನು ನಾನು ಮಾಡಿಲ್ಲ. 2014ರಲ್ಲಿ ಕಾಂಗ್ರೆಸ್ ಸರ್ಕಾರ ಇದ್ದಾಗ, ಮಾನ್ಯ ಎಸ್.ಆರ್.ಪಾಟೀಲ್‌ರವರೇ ಇದನ್ನು ಮಾಡಿಸಿದ್ದಾರೆ. ನಾಮಿನಿಯನ್ನು ತಂದಿದ್ದೇ ಅವರು. ಯಾವುದೇ ಫೆಡರೇಷನ್‌ಗೆ ಇರಬಹುದು, ಯಾವುದೇ ಬೋರ್ಡ್‌ಗೆ ಇರಬಹುದು, ಯಾರು ಅಲ್ಲಿ ಸರ್ಕಾರದ ನಾಮಿನಿ ಇರುತ್ತಾರೋ ಅವರು ಅಧ್ಯಕ್ಷರಾಗಬಹುದು ಎಂದು ನಿಯಮವನ್ನು ತಂದಿದ್ದೇ ಅವರು. ವೈಯಕ್ತಿಕವಾಗಿ ಇದಕ್ಕೆ ನನ್ನ ವಿರೋಧ ಇದೆ. ಆದರೆ ಆ ಕುರಿತ ವಿಷಯವನ್ನು ಇಲ್ಲಿ ತಂದಿಲ್ಲ. ಮುಂದಿನ ಸಲ ಇದರ ಬಗ್ಗೆ ಸ್ಟಡಿ ಮಾಡಿ, ಎಲ್ಲರ ಜೊತೆ ಚರ್ಚೆ ಮಾಡಿ ಆ ನಿಟ್ಟಿನಲ್ಲಿ ತಿದ್ದುಪಡಿ ತರುವಂಥದ್ದನ್ನು ಮಾಡುತ್ತೇವೆ.

ಮಾನ್ಯ ಕೊಂಡಯ್ಯನವರು ಹೇಳಿದ ವಿಚಾರದ ಬಗ್ಗೆ ಚರ್ಚೆ ಮಾಡುತ್ತೇವೆ. ಸರ್ಕಾರ ಎಸ್‌ಸಿ, ಎಸ್‌ಟಿಗಳಿಗೆ ಯಾವಾಗಲೂ ಶೇರ್ ಅಮೌಂಟ್ ಕೂಡ ಕೊಡುತ್ತದೆ. ಮಾನ್ಯ ಸದಸ್ಯರು ಈ ಕುರಿತು ಹೇಳಿದ್ದನ್ನು ಮುಂದಿನ ಸಲ ತಿದ್ದುಪಡಿ ತಂದಾಗ ತೆಗೆದುಕೊಳ್ಳುತ್ತೇವೆ. ಸದ್ಯಕ್ಕೆ ಈ ವಿಧೇಯಕಕ್ಕೆ ಒಪ್ಪಿಗೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

**ಸಭಾಪತಿಯವರು**:- ಪ್ರಸ್ತಾವ ಏನೆಂದರೆ,

"ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2021ರ ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

<u>**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**</u>

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು**

**ಖಂಡ - 2 ರಿಂದ 15 ರವರೆಗೆ**

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ;

"ಖಂಡ 2 ರಿಂದ 15 ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಖಂಡ 2 ರಿಂದ 15 ರವರೆಗೆ ಎರಡೂ ಸೇರಿದಂತೆ ವಿಧೇಯಕ್ಕೆ ಸೇರಿಸಲಾಯಿತು)

**ಖಂಡ-1 ಇತ್ಯಾದಿ**

**ಸಭಾಪತಿಯವರು**:- ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಪ್ರಸ್ತಾವದ ಅಂಗೀಕಾರ**

**ಶ್ರೀ ಎಸ್.ಟಿ.ಸೋಮಶೇಖರ್ (ಸಹಕಾರ ಮಂತ್ರಿಗಳು):-** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2021ರ ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

"ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2021ರ ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

**ಸಭಾಪತಿಯವರು**:- ಈಗ ಸದನವನ್ನು 4.00 ಗಂಟೆಯವರೆಗೆ ಮುಂದೂಡಲಾಗಿದೆ.

(ಸದನವನ್ನು ಮಧ್ಯಾಹ್ನ 2.54 ಗಂಟೆಯಿಂದ ಸಂಜೆ 4.00 ಗಂಟೆಯವರೆಗೆ ಮುಂದೂಡಲಾಯಿತು)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(954) 23-09-2021, 4.30 KG BNS

**(ಭೋಜನ ವಿರಾಮಕ್ಕಾಗಿ ಮಧ್ಯಾಹ್ನ 02 ಗಂಟೆ 54 ನಿಮಿಷಗಳಿಗೆ ಮುಂದಲ್ಪಟ್ಟ ಸದನವು ಪುನಃ ಸಂಜೆ 04 ಗಂಟೆ 37 ನಿಮಿಷಗಳಿಗೆ ಪ್ರಾರಂಭಗೊಂಡಿತ್ತು)**

**(ಮಾನ್ಯ ಸಭಾಪತಿಯವರು ಪೀಠವನ್ನಲಂಕರಿಸಿದರು)**

**11. ನಿಯಮ 330 ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಮೇಲಿನ ಚರ್ಚೆ**

**ಈ) ಉತ್ತರ ಕರ್ನಾಟಕ ಭಾಗದ ಅನೇಕ ಖಾಸಗಿ ಸಕ್ಕರೆ ಕಾರ್ಖಾನೆಗಳು ನಷ್ಟ ಅನುಭವಿಸುತ್ತಿದ್ದು, ಸದರಿ ಸಕ್ಕರೆ ಕಾರ್ಖಾನೆಗಳಿಗೆ ಆರ್ಥಿಕ ನೆರವು ನೀಡಿದಂತಹ ಸಹಕಾರಿ ಬ್ಯಾಂಕ್‌ಗಳು ಸಹ ದುಸ್ಥಿತಿಗೆ ಬಂದಿರುವುದರಿಂದ ಕಬ್ಬು ಬೆಳೆಗಾರರ ಪರಿಸ್ಥಿತಿ ದುಸ್ತರವಾಗಿದ್ದು, ಕಬ್ಬು ಬೆಳೆಗಾರರ ಹಾಗೂ ಸಹಕಾರಿ ಬ್ಯಾಂಕ್‌ಗಳನ್ನು ಸುಸ್ಥಿತಿಗೆ ತರುವ ಸಂಬಂಧವಾಗಿ ಸೂಕ್ತ ಮಾರ್ಗೋಪಾಯಗಳನ್ನು ಕಂಡುಕೊಳ್ಳುವ ಕುರಿತು.**

- - -

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ನಿಯಮ 330 ರಡಿಯಲ್ಲಿ 8ನೇ ದಿನಾಂಕದಂದು ನಾನು ಒಂದು ವಿಷಯವನ್ನು ಚರ್ಚೆ ಮಾಡುವುದಕ್ಕೆ ಅವಕಾಶ ಕೇಳಿದ್ದೆ. ಇಂದು ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೀರಿ. ಅದಕ್ಕೆ ನಾನು ತಮಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಉತ್ತರ ಕರ್ನಾಟಕದಲ್ಲಿರುವಂತಹ ಅನೇಕ ಸಕ್ಕರೆ ಕಾರ್ಖಾನೆಗಳು ನಷ್ಟದಲ್ಲಿ ನಡೆಯುತ್ತಿದ್ದು, ಮುಂದಿನ ದಿವಸಗಳಲ್ಲಿ ಬಹುತೇಕ ಸಕ್ಕರೆ ಕಾರ್ಖಾನೆಗಳು NCLT ಗೆ ಹೋಗುತ್ತಿದ್ದು, ಅದೇರೀತಿ ಸಹಕಾರಿ ಕ್ಷೇತ್ರದಲ್ಲಿರುವಂತಹ ಸಕ್ಕರೆ ಕಾರ್ಖಾನೆಗಳನ್ನು lease ಮೇಲೆ ಕೊಡುವಂತಹ ಪದ್ಧತಿ ಉದ್ಭವಿಸಿದೆ. ಉತ್ತರ ಕರ್ನಾಟಕದ ಬಹುತೇಕ ಸಕ್ಕರೆ ಕಾರ್ಖಾನೆಗಳು ಕಬ್ಬು ನುರಿಸುವುದನ್ನು ಸ್ಥಗಿತಗೊಳಿಸಬಹುದೆಂಬ ಭಯ ಉಂಟಾಗಿದೆ. ಸಕ್ಕರೆ ಕಾರ್ಖಾನೆಗಳಿಗೆ ಆರ್ಥಿಕ ನೆರವು ನೀಡಿದಂತಹ ಸಹಕಾರಿ ಬ್ಯಾಂಕ್‌ಗಳೂ ಸಹ ಮುಳುಗುವಂತಹ ಸ್ಥಿತಿ ಉಂಟಾಗಿದ್ದು, ಉತ್ತರ ಕರ್ನಾಟಕದ ಕೋಟ್ಯಾಂತರ ರೈತರು ಕಬ್ಬು ಬೆಳೆಗಾರರು ಬೀದಿಗೆ ಬರುವಂತಹ ಪರಿಸ್ಥಿತಿ ಉಂಟಾಗಿದೆ. ಇಂತಹ ಸಂದರ್ಭದಲ್ಲಿ ಸರ್ಕಾರ ಮಧ್ಯಸ್ಥಿಕೆ ವಹಿಸಿ ಸಕ್ಕರೆ ಕಾರ್ಖಾನೆಗಳನ್ನು ಮತ್ತು ಕೋಟ್ಯಾಂತರ ಕಬ್ಬು ಬೆಳೆಗಾರರನ್ನು ಹಾಗೂ ಸಹಕಾರಿ ಬ್ಯಾಂಕ್‌ಗಳನ್ನು ಉಳಿಸಲು ಜರೂರಾಗಿ ಮಾರ್ಗೋಪಾಯವನ್ನು ಕಂಡುಕೊಳ್ಳಬೇಕಾಗಿರುವುದರಿಂದ ಈ ವಿಷಯ ಸಾರ್ವಜನಿಕವಾಗಿ ಅತ್ಯಂತ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಹತ್ವದ್ದಾಗಿರುವುದರಿಂದ ನಿಯಮ 330 ರಡಿಯಲ್ಲಿ ಚರ್ಚೆ ಮಾಡುವುದಕ್ಕೆ ನಾನು ಅವಕಾಶ ಕೇಳಿದ್ದೆ. ತಾವು ಅವಕಾಶ ನೀಡಿದ್ದೀರಿ. ಅದಕ್ಕೆ ತಮಗೆ ವಿಶೇಷವಾದ ಧನ್ಯವಾದಗಳನ್ನು ಅರ್ಪಿಸಿ ನಾನು ಕೆಲವು ಮಾತುಗಳನ್ನು ಹೇಳುವುದಕ್ಕೆ ಬಯಸುತ್ತೇನೆ. ನಮ್ಮ ರಾಜ್ಯದಲ್ಲಿ ಒಟ್ಟು 87 ಸಕ್ಕರೆ ಕಾರ್ಖಾನೆಗಳಿವೆ. ಅದರಲ್ಲಿ ಈಗಾಗಲೇ 22 ಸಕ್ಕರೆ ಕಾರ್ಖಾನೆಗಳು ಸ್ಥಗಿತವಾಗಿವೆ.

**( ಮುಂದು)**

**(955) 23-09-2021 (4.40) ಎಂವಿ-ಬಿಎನ್ಎಸ್**

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಎಸ್.ಆರ್.ಪಾಟೀಲ್ (ಮುಂದು...):-**

ಅಂದರೆ, 1/4th of sugar factories are closed. ಈಗ ಇರುವ 87 ಸಕ್ಕರೆ ಕಾರ್ಖಾನೆಗಳಲ್ಲಿ 63 ಸಕ್ಕರೆ ಕಾರ್ಖಾನೆಗಳು ಉತ್ತರ ಕರ್ನಾಟಕದಲ್ಲಿವೆ. ಅಂದರೆ, ರಾಜ್ಯದ ಬಹುತರ ಒಟ್ಟು ಸಕ್ಕರೆ ಕಾರ್ಖಾನೆಗಳಲ್ಲಿ ಶೇಕಡಾ 75ರಷ್ಟು ಕಾರ್ಖಾನೆಗಳಿವೆ. ಇನ್ನುಳಿದ ಕಡೆಗಳಲ್ಲಿ ಶೇಕಡಾ 25ರಷ್ಟು ಕಾರ್ಖಾನೆಗಳಿವೆ. ಉತ್ತರ ಕರ್ನಾಟಕದಲ್ಲೇ ಶೇಕಡಾ 75ರಷ್ಟು ಸಕ್ಕರೆ ಕಾರ್ಖಾನೆಗಳು ಕಾರ್ಯ ನಿರ್ವಹಿಸುತ್ತಿವೆ. ಈ ಸಂದರ್ಭದಲ್ಲಿ ಉತ್ತರ ಕರ್ನಾಟಕದಲ್ಲಿ ಮುಖ್ಯವಾಗಿ ಬೆಳಗಾವಿ, ಬಿಜಾಪುರ ಮತ್ತು ಬಾಗಲಕೋಟೆ ಈ ಮೂರು ಜಿಲ್ಲೆಗಳಲ್ಲಿ ಹೆಚ್ಚು ಸಕ್ಕರೆ ಕಾರ್ಖಾನೆಗಳಿವೆ. ಕರ್ನಾಟಕ ರಾಜ್ಯದ ಸಕ್ಕರೆಯ ಉತ್ಪಾದನೆಯಲ್ಲಿ ಈ ಮೂರು ಜಿಲ್ಲೆಗಳ ಕೊಡುಗೆ ಪ್ರತಿಶತ 80ರಷ್ಟು ಇದೆ. ಈಗಾಗಲೇ ನಮ್ಮ ಜಿಲ್ಲೆಯಲ್ಲಿ, ಬಾದಾಮಿಯಲ್ಲಿ ಇದ್ದಂತಹ ಬಾದಾಮಿ ಸಕ್ಕರೆ ಕಾರ್ಖಾನೆ ನಿಂತು ಹೋಗಿತ್ತು. ಅದೇ ರೀತಿಯಲ್ಲಿ ಕರಕಲ ಮಟ್ಟಿಯಲ್ಲಿ ಕೇದಾರನಾಥ್ ಸಕ್ಕರೆ ಕಾರ್ಖಾನೆ ನಿಂತು ಹೋಗಿತ್ತು. ಈಗ ಎನ್.ಸಿ.ಎಲ್.ಟಿ. ಮುಖಾಂತರ, ಇವತ್ತು ಈ ಸಕ್ಕರೆ ಕಾರ್ಖಾನೆಗಳು ಪುನಃ ಪ್ರಾರಂಭವಾಗಿವೆ. ಮತ್ತೆ ರನ್ನ ಸಕ್ಕರೆ ಕಾರ್ಖಾನೆ ಇದು ಕೂಡ ಇವತ್ತು ಎರಡನೇ ಹಂಗಾಮಿನಲ್ಲಿ ಕಬ್ಬು ನುರಿಸುವಂತಹ ಕಾರ್ಯದಿಂದ ದೂರ ಉಳಿದಿದೆ.

ಆ ರನ್ನ ಸಕ್ಕರೆ ಕಾರ್ಖಾನೆ ಬಗ್ಗೆ ಒಂದು ಮಾತು ಹೇಳುವುದಾದರೆ, ಮುಧೋಳ ತಾಲ್ಲೂಕಿನ ಸಂಸತ್ ಸದಸ್ಯರಾಗಿದ್ದಂತಹವರು ಮತ್ತು ಸಿಮೆಂಟ್ ಉದ್ಯಮದಲ್ಲಿ ಹೆಸರು ಪಡೆದಂತಹ ಉದ್ಯಮಪತಿಗಳಾದಂತಹ ಶ್ರೀಮಾನ್ ಎಸ್.ಟಿ.ಪಾಟೀಲರು ಆಗ ದಿವಂಗತ ವಿರೇಂದ್ರ ಪಾಟೀಲರು ರಾಜ್ಯದ ಮುಖ್ಯಮಂತ್ರಿಗಳಾಗಿದ್ದಂತಹ ಸಂದರ್ಭದಲ್ಲಿ ನಮ್ಮದೇ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆದಂತಹ ಒಂದು ಸಕ್ಕರೆ ಕಾರ್ಖಾನೆ ಇರಲಿ ಎಂದು ಅದರ ನೇತೃತ್ವ ವಹಿಸಿಕೊಂಡು, 1982ರಲ್ಲಿ ಈ ಸಂಸ್ಥೆಯನ್ನು ನೋಂದಾಯಿಸಿದರು. ಆ ನಂತರ 1994ರಲ್ಲಿ ಕಾರ್ಖಾನೆ ಕಟ್ಟಲ್ಲು ಪರವಾನಿಗೆ ದೊರೆಯಿತು. ಮುಂದೆ 1999ರಲ್ಲಿ ಸುಮಾರು 22 ವರ್ಷಗಳ ಹಿಂದೆ ಈ ಸಕ್ಕರೆ ಕಾರ್ಖಾನೆ ಪ್ರಾರಂಭವಾಯಿತು. ಆ ಕಾರ್ಖಾನೆಗೆ ಈಗಿನ ಜಲಸಂಪನ್ಮೂಲ ಮಂತ್ರಿಗಳಾಗಿರುವ ಮಾನ್ಯ ಗೋವಿಂದ ಎಂ. ಕಾರಜೋಳರವರು ಮೊದಲ ಅಧ್ಯಕ್ಷರಾಗಿದ್ದರು. ಅವರು ಅಧ್ಯಕ್ಷರಾಗಿ ಬಹಳ ದಿವಸ ಇದ್ದರು. ಶ್ರೀ ರಾಮಣ್ಣ ತಳವಾಡ ಎನ್ನುವವರು ಉಪಾಧ್ಯಕ್ಷರಾಗಿದ್ದರು. ಆಮೇಲೆ 2001ರಲ್ಲಿ ಮಾನ್ಯ ಗೋವಿಂದ ಎಂ. ಕಾರಜೋಳರವರು ಅಧ್ಯಕ್ಷ ಸ್ಥಾನದಿಂದ ಇಳಿದ ನಂತರ, ಉಪಾಧ್ಯಕ್ಷರಾದ ಶ್ರೀ ರಾಮಣ್ಣ ತಳವಾಡರವರು ಇದ್ದರು. ಇವತ್ತು ಏನಾಗಿದೆ ಎಂದರೆ, ಅಂದಾಜು ಎರಡು ತಿಂಗಳ ಹಿಂದೆ ಈ ಸಕ್ಕರೆ ಕಾರ್ಖಾನೆ ಸ್ಥಗಿತಗೊಂಡಿದೆ. ಕಳೆದ ಬಾರಿ ಅಂದರೆ, 2020-21 ಈಗ 2021-22 ಆಗುತ್ತಿದೆ. ಅದು 2021ರಲ್ಲಿಯೇ ಕಬ್ಬು ನುರಿಸುವುದನ್ನು ನಿಲ್ಲಿಸಿದೆ. ಅಂದರೆ, ಆ ಕಾರ್ಖಾನೆ ಹೋದ ಬಾರಿಯೇ ನಿಂತು ಹೋಗಿದೆ. ಆದರೆ, ಈ ಬಾರಿಯೂ ಸಹ ಅದು ಪ್ರಾರಂಭವಾಗುತ್ತದೆ ಎಂಬುದು ಸಂಶಯವಿದೆ. ಈ ಸಕ್ಕರೆ ಕಾರ್ಖಾನೆ ಕಟ್ಟುವುದಕ್ಕೆ, ರೈತರು 12 ಕೋಟಿ 80 ಲಕ್ಷ ಷೇರು ಹಾಕಿದ್ದಾರೆ. ಸರ್ಕಾರ ಕೂಡ ಇದಕ್ಕೆ 12 ಕೋಟಿ 72 ಲಕ್ಷ ಷೇರು ಹಾಕಿದೆ. ಇದಕ್ಕೆ loans and liabilities ಎಂದು 334 ಕೋಟಿ ರೂಪಾಯಿಗಳವರೆಗೆ ಬಂದಿದೆ. ಎರಡು ತಿಂಗಳಿನಿಂದ ಅಲ್ಲಿ ಕೆಲಸ ನಿರ್ವಹಿಸುವಂತಹ ಕಾರ್ಮಿಕರು ಮತ್ತು ಸಕ್ಕರೆ ಕಾರ್ಖಾನೆಯನ್ನು ಅವಲಂಬಿಸಿದ ತಮ್ಮ ತಾಲ್ಲೂಕಿನ ಕಬ್ಬು ಬೆಳೆಗಾರರು ಇವತ್ತು ಸತ್ಯಾಗ್ರಹದಲ್ಲಿ ಭಾಗಿಯಾಗಿದ್ದಾರೆ. ಅವರು ಸತ್ಯಾಗ್ರಹಕಕ್ಕೆ ಕುಳಿತು ಹತ್ತಿರ ಹತ್ತಿರ ಎರಡು ತಿಂಗಳು ಆಗಿದೆ. ಈ ವಿಚಾರವನ್ನು ಚರ್ಚೆ ಮಾಡುವಂತಹ ಸಂದರ್ಭದಲ್ಲಿ ತಮ್ಮ ಮುಖಾಂತರ ಸರ್ಕಾರಕ್ಕೆ ನನ್ನ ಮನವಿ ಏನೆಂದರೆ, ಸರ್ಕಾರ ಈ ಸಕ್ಕರೆ ಕಾರ್ಖಾನೆಯನ್ನು ಪ್ರಾರಂಭ ಮಾಡುವಂತಹ ಕ್ರಮ ಕೈಗೊಳ್ಳಬೇಕು. ಏಕೆಂದರೆ, ಇದು ತಮಗೆ ತಿಳಿದ ಹಾಗೆ, ಬಾಗಲಕೋಟೆ ಜಿಲ್ಲೆ, ಸಹಕಾರ ಜಿಲ್ಲೆ ಎಂದು ಇಡೀ ಕರ್ನಾಟಕ ರಾಜ್ಯದಲ್ಲಿ ಪ್ರಖ್ಯಾತಿ ಪಡೆದಂತಹ ಒಂದು ಜಿಲ್ಲೆ. ಈ ಜಿಲ್ಲೆಯಲ್ಲಿ ಇರತಕ್ಕಂತಹ ಏಕೈಕ ಸಕ್ಕರೆ ಕಾರ್ಖಾನೆ ಎಂದರೆ, ಮುಧೋಳದ ರನ್ನ ಸಹಕಾರಿ ಸಕ್ಕರೆ ಕಾರ್ಖಾನೆ ಮಾತ್ರ. ಅದು ಒಂದೇ ಒಂದು ಸಹಕಾರ ರಂಗದಲ್ಲಿ ಇರತಕ್ಕಂತಹ ಕಾರ್ಖಾನೆ. ಇವತ್ತು ಅದಕ್ಕೆ ಸಂಬಂಧಪಟ್ಟಂತೆ ಸರ್ಕಾರ ಕ್ರಮ ಕೈಗೊಳ್ಳಬೇಕಲ್ಲವೇ? ನಾವು ಮೊನ್ನೆ ಮೈ ಷುಗರ್ ಸಕ್ಕರೆ ಕಾರ್ಖಾನೆಯ ಬಗ್ಗೆ ಚರ್ಚೆ ಮಾಡಿದೆವು. ಆಗ ಮಾನ್ಯ ಕೆ.ಟಿ.ಶ್ರೀಕಂಠೇಗೌಡರು ಮೈ ಷುಗರ್ ಸಕ್ಕರೆ ಕಾರ್ಖಾನೆಗೆ ಸರ್ಕಾರ ಸುಮಾರು 400 ಕೋಟಿ ರೂಪಾಯಿಗಳನ್ನು ಕೊಟ್ಟಿದೆ ಎಂದು ಹೇಳಿದರು. ಅಂದರೆ, ಮೈ ಷುಗರ್ ಸಕ್ಕರೆ ಕಾರ್ಖಾನೆಗೆ ಮೇಲಿಂದ ಮೇಲೆ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹಣ ಕೊಟ್ಟಿದ್ದಾರೆ. ಈ ಸಹಕಾರಿ ರಂಗದ ಸಕ್ಕರೆ ಕಾರ್ಖಾನೆ, ಸಹಕಾರಿ ಜಿಲ್ಲೆಯಲ್ಲಿರತಕ್ಕಂತಹ ಏಕೈಕ ಸಕ್ಕರೆ ಕಾರ್ಖಾನೆ, ಅದು ಕವಿ ರನ್ನನ ಹೆಸರನ್ನು ಹೊತ್ತಿರುವಂತಹ ಸಕ್ಕರೆ ಕಾರ್ಖಾನೆ. ಆ ಸಕ್ಕರೆ ಕಾರ್ಖಾನೆ ನಿಂತರೆ, ಕವಿ ರನ್ನನಿಗೆ ಅವಮಾನ ಮಾಡಿದ ಹಾಗೆ ಎಂದು ಭಾವಿಸುತ್ತೇನೆ. ಅದಕ್ಕೆ ಸರ್ಕಾರ ಇದಕ್ಕೆ ಮುತುವರ್ಜಿ ವಹಿಸಿ, ಹೇಗೆ ಮೈ ಷುಗರ್ ಸಕ್ಕರೆ ಕಾರ್ಖಾನೆ ಹಾಗೂ ಮತ್ತಿತ್ತರೆ ಕಾರ್ಖಾನೆಗಳಿಗೆ ಹೇಗೆ ಹಣ ಕೊಟ್ಟು, ಪ್ರಾರಂಭ ಮಾಡಿದ್ದಾರೆ, ಆ ರೀತಿ ಈ ಸಕ್ಕರೆ ಕಾರ್ಖಾನೆಯನ್ನು ಸಹ ಪ್ರಾರಂಭ ಮಾಡುವುದಕ್ಕೆ ಸರ್ಕಾರ ಸೂಕ್ತವಾದ ಕ್ರಮ ಕೈಗೊಳ್ಳಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಸರ್ಕಾರ ಇದರ ಬಗ್ಗೆ ಆದಷ್ಟು ಬೇಗ ನಿರ್ಣಯ ಕೈಗೊಳ್ಳಬೇಕು. ಬಹುತರ crushing season, ಕೆಲವರು ಅಕ್ಟೋಬರ್ ತಿಂಗಳಿನ ಎರಡನೆ ವಾರದಲ್ಲಿ ಅಥವಾ ನವೆಂಬರ್ ತಿಂಗಳಿನಲ್ಲಿ ಪ್ರಾರಂಭ ಮಾಡುತ್ತಾರೆ. ಇದು ಬಹಳ ಸಮೀಪವಿದೆ. ಅವರು for harvesting and transportation gang ಗಳನ್ನು ತಯಾರು ಮಾಡಿಕೊಳ್ಳಬೇಕು ಮತ್ತು ಅದಕ್ಕೆ ಹಣ ನೀಡಬೇಕು. ನಾವು ಬಾಗಲಕೋಟೆ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನಿಂದ ಸುಮಾರು ನೂರು ಕೋಟಿ ರೂಪಾಯಿಗಳನ್ನು ಸಾಲ ನೀಡಿದ್ದೇವೆ. ಮತ್ತೆ ಪ್ರಸಂಗ ಬಂದರೆ, ಈ crushing season ನಲ್ಲಿ ಕಾರ್ಖಾನೆಯನ್ನು ಪ್ರಾರಂಭ ಮಾಡುತ್ತಾರೆಂದರೆ, ಅದಕ್ಕೆ ಬಾಗಲಕೋಟೆ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ನವರು ಆರ್ಥಿಕ ನೆರವು ನೀಡುವುದಕ್ಕೆ ತಯಾರಿದ್ದೇವೆ. ಸರ್ಕಾರ ಮನಸ್ಸು ಮಾಡಿ ಈ ರಾಜ್ಯದ ಪ್ರತಿಷ್ಠಿತ ಕರ್ನಾಟಕ ಸಹಕಾರ ಅಪೆಕ್ಸ್ ಸಹಕಾರ ಬ್ಯಾಂಕ್‌ನಿಂದ ಸಾಲ ತೆಗೆದುಕೊಂಡು, ಸರ್ಕಾರ ಮುಂಚೂಣಿಯಲ್ಲಿ ನಿಂತು ಮಾಡಿದರೆ, ಸದರಿ ಕಾರ್ಖಾನೆ ಈ season ನಲ್ಲಿ ಪ್ರಾರಂಭವಾಗುತ್ತದೆ. ಮಾನ್ಯ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ ರವರೇ 300 ಕೋಟಿ ರೂಪಾಯಿ ಸಾಲಕ್ಕೆ ಕನಿಷ್ಠಪಕ್ಷ ಬಡ್ಡಿಯನ್ನಾದರೂ ಕ್ಲಿಯರ್ ಮಾಡುವುದಕ್ಕೆ ಆಗುತ್ತದೆ ಅಲ್ಲವೇ? ಕಬ್ಬನ್ನು ನುರಿಯದೇ ಹೋದರೆ, ಅಲ್ಲಿ ಇರುವಂತಹ ಯಂತ್ರೋಪಕರಣಗಳು ತುಕ್ಕು ಹಿಡಿದು ಹೋಗುತ್ತವೆ. ಈಗ ಚಲಾವಣೆಯಲ್ಲಿ ಇರುವಂತಹ ವಾಹನಗಳೇ ಬೇರೆ. ಗ್ಯಾರೇಜ್‌ನಲ್ಲಿ ಇರುವಂತಹ ವಾಹನಗಳೇ ಬೇರೆ. ಇದನ್ನು crushing season ನಲ್ಲಿ ಪ್ರಾರಂಭ ಮಾಡಿದರೆ, ಆ ಸಕ್ಕರೆ ಕಾರ್ಖಾನೆಗೆ income generation ಆಗುತ್ತದೆ. ಆ income generation ನಿಂದ ಬಡ್ಡಿಯನ್ನು ಕ್ಲಿಯರ್ ಮಾಡಬಹುದು ಮತ್ತು ಅದರಿಂದ ಸ್ವಲ್ಪ ಅಸಲನ್ನು ಸಹ ಕೊಡುವುದಕ್ಕೆ ಸಾಧ್ಯವಾಗುತ್ತದೆ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ.

ಈಗ ಉತ್ತರ ಕರ್ನಾಟಕದಲ್ಲಿ ಇರತಕ್ಕಂಥ ಎಲ್ಲಾ ಸಕ್ಕರೆ ಕಾರ್ಖಾನೆಗಳಿಗೆ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕುಗಳು ಸಾಲ ನೀಡಿ ಅವುಗಳಿಗೆ ಆರ್ಥಿಕ ಸಹಾಯ ಮಾಡಿದ್ದಾರೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಪೆಕ್ಸ್ ಬ್ಯಾಂಕ್‌ನವರು ಸಹ ಸಹಾಯ ಮಾಡಿದ್ದಾರೆ. ಹಾಗೆಯೇ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಸ್ಥೆಗಳು ಕೂಡ ಸ್ವಲ್ಪ ಮಟ್ಟಿನ ಸಹಾಯ ಮಾಡಿದ್ದಾರೆ. ಈ ಸಕ್ಕರೆ ಕಾರ್ಖಾನೆಗಳು ಉಳಿಯಬೇಕು ಎನ್ನುವುದಕ್ಕೆ ನಾನು ಕೆಲವು ಮಾರ್ಗೋಪಾಯಗಳನ್ನು ಹೇಳುತ್ತೇನೆ. ಅಂದರೆ, ಇವತ್ತು ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ಮತ್ತು ಅಪೆಕ್ಸ್ ಬ್ಯಾಂಕ್‌ನವರು ಶೇಕಡಾ 13½ , 14 ಮತ್ತು 15ರಷ್ಟು ಬಡ್ಡಿಗಳನ್ನು ವಿಧಿಸುತ್ತಾರೆ. ಆದರೆ, ಅಲ್ಲಿನ cost of fund... ನಾನು ಅದೇ ಕ್ಷೇತ್ರದಲ್ಲಿ ಇರುವುದರಿಂದ, I am also founder-Chairman of one urban bank ಮತ್ತು ಸೌಹಾರ್ದ ಬ್ಯಾಂಕ್ ಅನ್ನು ಸಹ ಪ್ರಾರಂಭ ಮಾಡಿದ್ದೇನೆ. ಹಾಗೂ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ನಲ್ಲಿ ಇವತ್ತಿಗೂ ಕೂಡ ನಿರ್ದೇಶಕನಾಗಿದ್ದೇನೆ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ಪ್ರಾರಂಭದಲ್ಲಿ ಎರಡು ವರ್ಷ ಅಧ್ಯಕ್ಷನಾಗಿ ಕೆಲಸ ಮಾಡಿದ್ದೇನೆ. ಅಲ್ಲಿನ ಬಡ್ಡಿ ದರ ಏನಿದೆ ಎಂದರೆ, ಅಲ್ಲಿನ cost of fund ಬಹಳ ಎಂದರೆ ಶೇಕಡಾ 7ರಷ್ಟು ಇರಬಹುದು. ಮಾನ್ಯ ಸಹಕಾರಿ ಸಚಿವರೆ, ನಿಮಗೆ ಎಷ್ಟು ಅನಿಸುತ್ತದೆ. ಅದಕ್ಕಿಂತ ಹೆಚ್ಚಿಗೆ ಇರುವುದಿಲ್ಲ. ಈಗ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಬಡ್ಡಿ ದರ ಬಹಳ ಕಡಿಮೆಯಾಗಿದೆ. ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಶೇಕಡಾ 8, 8½ ಮತ್ತು 9ರಷ್ಟು ಬಡ್ಡಿ ದರವಿದೆ. ರಾಷ್ಟ್ರೀಕೃತ ಬ್ಯಾಂಕ್‌ನವರು ಶೇಕಡಾ 10ಕ್ಕಿಂತ ಕಡಿಮೆ ಬಡ್ಡಿ ದರದಲ್ಲಿ ಸಾಲ ನೀಡುತ್ತಿದ್ದಾರೆ. ಸಹಕಾರಿ ಬ್ಯಾಂಕ್‌ಗಳು ಆರ್ಥಿಕ ಸಹಾಯ ಮಾಡಿರುವುದರಿಂದ ಇಷ್ಟು ದೊಡ್ಡ ಪ್ರಮಾಣದಲ್ಲಿ ಸಕ್ಕರೆ ಕಾರ್ಖಾನೆಗಳು ಅಸ್ತಿತ್ವಕ್ಕೆ ಬಂದಿವೆ.

**(ಮುಂದು...**

(956) 23.09.2021 04-50 LL-GR

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಎಸ್.ಆರ್. ಪಾಟೀಲ್(ಮುಂದು):-**

ಈ ಸಹಕಾರ ಬ್ಯಾಂಕುಗಳಿಗೆ ಸಹಾಯ ಮಾಡದೇ ಇದ್ದರೆ, ಇಷ್ಟು ದೊಡ್ಡ ಪ್ರಮಾಣದಲ್ಲಿ ಸಕ್ಕರೆ ಕಾರ್ಖಾನೆಗಳು ಬರುತ್ತಿಲ್ಲವೆಂಬುದು ನನಗೂ ಸಹ ಮನವರಿಕೆಯಾಗಿದೆ. ಅದನ್ನು ನಾನು ಪ್ರಾಂಜಲ ಮನಸ್ಸಿನಿಂದ ಒಪ್ಪಿಕೊಳ್ಳುತ್ತೇನೆ. ಇವೊತ್ತಿನ ದಿವಸ ಈ ಸಕ್ಕರೆ ಕಾರ್ಖಾನೆಗಳ ಪರಿಸ್ಥಿತಿ ಹೇಗಿದೆ ಎಂದರೆ, ನನಗೆ ಅನಿಸಿದ ಮಟ್ಟಿಗೆ, ರೈತನಿಗೆ ಏನು ಉತ್ಪನ್ನ ಬರುತ್ತದೆ, ಅದರಲ್ಲಿ ಶೇಕಡ 90 ರಷ್ಟು ಆದಾಯ ಸಹಕಾರಿ ಬ್ಯಾಂಕುಗಳ ಸಾಲಕ್ಕೆ ಬಡ್ಡಿ ಕೊಡುವುದರಲ್ಲಿಯೇ ಹೋಗುತ್ತದೆ. ಅದು ಪ್ರಿನ್ಸಿಪಲ್ ಹಣ ಅಲ್ಲ. ಅದು ಕೇವಲ ಬಡ್ಡಿ ಹಣಕ್ಕೆ ಜಮಾ ಆಗುತ್ತದೆ. ಅಂದರೆ, ಶೇಕಡ 85 ರಿಂದ 90 ರಷ್ಟು ಆದಾಯ ಬಡ್ಡಿಗಾಗಿ ಕೊಡಬೇಕಾಗುತ್ತದೆ. ಅಷ್ಟು ದೊಡ್ಡ ಪ್ರಮಾಣದಲ್ಲಿ ಬಡ್ಡಿ ಕೊಟ್ಟರೆ ಮುಂದೆ ಅದು viability

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬರುವುದಿಲ್ಲ ಮತ್ತು ಒಂದು ವೇಳೆ ಈ ಸಕ್ಕರೆ ಕಾರ್ಖಾನೆಗಳು ನಿಂತು ಹೋದರೆ ಪರಿಸ್ಥಿತಿ ಏನಾಗುತ್ತದೆಯೆಂದರೆ, ಆ ಸಾಲ ಕೊಟ್ಟಂತಹ ಬ್ಯಾಂಕುಗಳು ಮುಳುಗುತ್ತವೆ. ಸಕ್ಕರೆ ಕಾರ್ಖಾನೆ ಮುಳುಗುವುದು ಒಂದು ಕಡೆಯಾದರೆ, ಮತ್ತೊಂದು ಕಡೆ ಸಾಲ ಕೊಟ್ಟಂತಹ ಸಹಕಾರ ಬ್ಯಾಂಕುಗಳು ಸಹ ಮುಳುಗುತ್ತವೆ. ಏಕೆಂದರೆ, ಆ ಸಕ್ಕರೆ ಕಾರ್ಖಾನೆ *N.C.L.T.,* (The National Company Law Tribunal) ಹೋದರೆ ಮುಗಿಯುತ್ತದೆ. ಸುಮಾರು 400 ಕೋಟಿ ಬೆಲೆ ಬಾಳುವ ಸಕ್ಕರೆ ಕಾರ್ಖಾನೆ ಕೇವಲ 50 ರಿಂದ 100 ಕೋಟಿ ರೂಪಾಯಿಗೆ ಮಾರಾಟ ಆಗುತ್ತದೆ. ಸಕ್ಕರೆ ಕಾರ್ಖಾನೆ ಮುಳುಗಿದರೆ ಮುಳುಗಲಿ. ಆದರೆ, ಆ ಸಕ್ಕರೆ ಕಾರ್ಖಾನೆಗೆ ಸಾಲ ಕೊಟ್ಟಂತಹ ಬ್ಯಾಂಕಿನ ಗತಿಯೇನು?

ಇವೊತ್ತಿನ ದಿವಸ, ಬಾಗಲಕೋಟೆ ಜಿಲ್ಲಾ ಸಹಕಾರ ಬ್ಯಾಂಕು ಇಡೀ ಕರ್ನಾಟಕ ರಾಜ್ಯದಲ್ಲಿಯೇ ಮೊದಲನೆ ಅಥವಾ ಎರಡನೆ ಸ್ಥಾನದಲ್ಲಿದೆ. ನಮ್ಮ ಜಿಲ್ಲೆಯಲ್ಲಿ ಶೇಕಡ 60 ರಷ್ಟು ರೈತರಿಗೆ ಸದರಿ ಬ್ಯಾಂಕಿನಿಂದ ಬೆಳೆ ಸಾಲ ಕೊಡುತ್ತಾರೆ. ಉಳಿದ ಶೇಕಡ 40 ರಷ್ಟು ರೈತರಿಗೆ ರಾಷ್ಟ್ರೀಕೃತ ಬ್ಯಾಂಕುಗಳಿಂದ ಸಾಲ ಕೊಡುತ್ತಾರೆ. ಒಂದು ವೇಳೆ ಆ ಬ್ಯಾಂಕುಗಳಿಗೆ ಧಕ್ಕೆಯಾದರೆ ಪರಿಸ್ಥಿತಿ ಏನಾಗಬಹುದು? ಇದೊಂದೇ ಬ್ಯಾಂಕಿನ ಬಗ್ಗೆ ನಾನು ಹೇಳುವುದಿಲ್ಲ. ಏಕೆಂದರೆ, ಬಿಜಾಪುರ ಜಿಲ್ಲಾ ಸಹಕಾರಿ ಬ್ಯಾಂಕು, ಮಂಗಳೂರು ಜಿಲ್ಲಾ ಸಹಕಾರಿ ಬ್ಯಾಂಕುಗಳು ಮತ್ತು ಬೆಳಗಾವಿ ಜಿಲ್ಲಾ ಸಹಕಾರಿ ಬ್ಯಾಂಕುಗಳು ರೈತರಿಗೆ ಬೆಳೆ ಸಾಲ ಕೊಟ್ಟಿರುತ್ತಾರೆ. ಈ ರೀತಿ ಅನೇಕ ಜಿಲ್ಲಾ ಸಹಕಾರಿ ಬ್ಯಾಂಕುಗಳು ರೈತರಿಗೆ ಏನು ಬೆಳೆ ಸಾಲ ಕೊಟ್ಟಿದ್ದಾರೆ, ಅವುಗಳು *N.C.L.T.,* ಗೆ ಹೋಗುತ್ತವೆ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ಈಗ ತಾವು ಮಾತನಾಡಿ. ನಂತರ ಅವರು ಮಾತನಾಡುತ್ತಾರೆ.

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ಹಾಗಾಗಿ ಸಹಕಾರಿ ಕಾರ್ಖಾನೆಗಳನ್ನು ಹರಾಜಿಗೆ ತರುತ್ತಾರೋ ಅಥವಾ ಲೀಸ್ ಆಧಾರದ ಮೇಲೆ ಕೊಡುವಂತಹ ಒಂದು ಪ್ರವೃತ್ತಿ ಈಗ ಪ್ರಾರಂಭ ಆಗಿರುತ್ತದೆ. ಅದರಂತೆ, ಸಕ್ಕರೆ ಕಾರ್ಖಾನೆಗಳು ಹೋಗಿರುತ್ತವೆ ಮತ್ತು ಬ್ಯಾಂಕುಗಳು ಹೋಗಿರುತ್ತವೆ. ಮುಂದೆ ಇವುಗಳನ್ನು ಅವಲಂಬಿಸಿರುವಂತಹ ಕೋಟ್ಯಂತರ ರೈತರುಗಳು ಅಂದರೆ, ಕಬ್ಬು ಬೆಳೆಗಾರರು ಬೀದಿಗೆ ಬರುವಂತಹ ಪರಿಸ್ಥಿತಿ ಬರುತ್ತದೆ. ಏಕೆಂದರೆ, ಸಕ್ಕರೆ ಕಾರ್ಖಾನೆಗಳು ಇಲ್ಲವೆಂದರೆ, ರೈತರು ಏನು ಮಾಡಬೇಕು? ಕಬ್ಬು ಬೆಳೆ ಬಿಟ್ಟು ಬೇರೆ ಬೆಳೆ ಬೆಳೆದರೆ ಅದರಿಂದ ಲಾಭ ಬರುವುದಿಲ್ಲ. ನಮ್ಮ ಜಿಲ್ಲೆಯನ್ನು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಉದಾಹರಣೆಗೆ ತೆಗೆದುಕೊಂಡರೆ, ನಮ್ಮ ಜಿಲ್ಲೆಯಲ್ಲಿ ಬಹುತೇಕ ರೈತರು ಕಬ್ಬು ಬೆಳೆಯುತ್ತಾರೆ. ಈ ಬಗ್ಗೆ ತಮಗೆ ಚೆನ್ನಾಗಿ ಗೊತ್ತಿದೆ. ಏಕೆಂದರೆ, ಕಬ್ಬು ಬೆಳೆ 'easy man's crop' ಆಗಿರುತ್ತದೆ. ಕಬ್ಬು ಬೆಳೆ ನಾಟಿ ಮಾಡಿ, ಮೋಟಾರ್ ಚಾಲು ಮಾಡಿದರೆ ತನ್ನಷ್ಟಕ್ಕೆ ತಾನೇ ಕಬ್ಬು ಬೆಳೆಗೆ ನೀರು ಹಾಯುತ್ತದೆ. ನಂತರ, ಕಬ್ಬು ಬೆಳೆ ಬೆಳೆದ ನಂತರ ಫ್ಯಾಕ್ಟರಿಯವರು ಮಹಾರಾಷ್ಟ್ರ ಅಥವಾ ಇನ್ನಿತರ ಕಡೆಗಳಿಂದ ಕಾರ್ಮಿಕರನ್ನು ಕರೆದು ತಂದು, ಕಬ್ಬು ಕಟಾವು ಮಾಡಿಕೊಂಡು, ಅವರೇ ಒಯ್ದು, ನಂತರ ಆ ಬೆಳೆ ಎಷ್ಟು ಬೆಲೆ ಬಾಳುತ್ತದೆ ಅಷ್ಟು ಹಣವನ್ನು ಸಂಬಂಧಪಟ್ಟ ರೈತರ ಬ್ಯಾಂಕ್ ಖಾತೆಗೆ ಜಮಾ ಮಾಡುತ್ತಾರೆ.

ನಮ್ಮ ಭಾಗದಲ್ಲಿ ಶೇಕಡ 100 ಕ್ಕೆ ಶೇಕಡ 90 ರಷ್ಟು ರೈತರು ಕಬ್ಬು ಬೆಳೆ ಮೇಲೆ ಅವಲಂಬಿತರಾಗಿದ್ದಾರೆ. ನಾನು ಇದನ್ನು ಬಹಳ ಸಮೀಪದಿಂದ ನೋಡಿದ್ದೇನೆ. ಅದೇನೆಂದರೆ, ಉತ್ತರ ಕರ್ನಾಟಕದ ಎಲ್ಲಾ ಸಕ್ಕರೆ ಕಾರ್ಖಾನೆ ವ್ಯಾಪ್ತಿಯಲ್ಲಿ ಬರತಕ್ಕಂತಹ ರೈತರ ಮೊದಲ ಪರಿಸ್ಥಿತಿ ಹೇಗಿತ್ತೆಂದರೆ, ಅವರ ಮನೆಯಲ್ಲಿ ಮೊದಲು ಬೈಸಿಕಲ್ ಸಹ ಇರಲಿಲ್ಲ. ಇವೊತ್ತಿನ ದಿನ ಅವರ ಮನೆಯಲ್ಲಿ ಮೋಟಾರ್ ಬೈಕ್, ಸ್ಕೂಟರ್ ಈ ರೀತಿ ಪ್ರತಿ ಮನೆಯಲ್ಲಿ ಕನಿಷ್ಠ 2-3 ದ್ವಿಚಕ್ರ ವಾಹನಗಳು ಇರುತ್ತವೆ. **(ಗೊಂದಲ)** ಕಬ್ಬು ಬೆಳೆ ಕಟಾವು ಮಾಡುವವರು ಸಹ ಮೋಟಾರ್ ಬೈಕಿನಲ್ಲಿ ಬರುತ್ತಾರೆ. ಅದೇ ರೀತಿ ನಾಲ್ಕು ಚಕ್ರದ ವಾಹನ ಅಂದರೆ, ಕಾರು, ಜೀಪುಗಳು ಮನೆಗೆ ಒಂದು ಅಥವಾ ಎರಡರಂತೆ ಇರುತ್ತವೆ. ಜೊತೆಗೆ, ರೈತರು ಅತ್ಯುತ್ತಮ ಶಿಕ್ಷಣ ಕೊಡುವಂತಹ ಶಿಕ್ಷಣ ಸಂಸ್ಥೆಗಳಿಗೆ ತಮ್ಮ ಮಕ್ಕಳನ್ನು ಕಳುಹಿಸಿಕೊಡುತ್ತಾರೆ. ಅಲ್ಲದೇ, ರೈತರು ತಮ್ಮ ಹೆಣ್ಣುಮಕ್ಕಳಿಗೆ ಮದುವೆ ಮಾಡಬೇಕೆಂದರೆ, ಒಳ್ಳೆಯ ಮನೆತನವನ್ನು ಹುಡುಕಿ, 'ತಮ್ಮ ಮಗಳು ಮದುವೆಯಾದ ನಂತರ ಆರಾಮವಾಗಿ ಇರಲಿ' ಎಂದು ಮದುವೆ ಮಾಡಿಕೊಡುವಂತಹ ಸಾಮರ್ಥ್ಯ ಆ ರೈತರಿಗೆ ಬಂದಿರುತ್ತದೆ. ಒಂದು ವೇಳೆ ಈ ಸಕ್ಕರೆ ಕಾರ್ಖಾನೆಗಳು ಕಬ್ಬು ಅರೆಯುವುದನ್ನು ನಿಲ್ಲಿಸಿದರೆ, ಸಕ್ಕರೆ ಕಾರ್ಖಾನೆ ಹೋದರೆ ಅಥವಾ ಸಹಕಾರ ಬ್ಯಾಂಕುಗಳು ಹೋದರೆ ಹೋಗಲಿ. ಆದರೆ, ಕೋಟ್ಯಂತರ ರೈತರು, ಈ ದೇಶಕ್ಕೆ ಅನ್ನವನ್ನು ಕೊಡುವಂತಹ ಅನ್ನದಾತರು, ಧಣಿಗಳೆಂದು ಕರೆಯುವ ರೈತರ ಪರಿಸ್ಥಿತಿ ಏನಾಗಬಾರದು? ಅದು ಅತ್ಯಂತ ಶೋಚನೀಯ ಸ್ಥಿತಿಗೆ ಬರುತ್ತದೆ ಎನ್ನುವಂತಹ ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ.

ಇವೊತ್ತಿನ ದಿವಸ, ನಿಯಮ 330ರ ಮೇರೆಗೆ ನಾನು ಪ್ರಸ್ತಾಪಿಸಿದ ವಿಷಯಕ್ಕೆ ಸರ್ಕಾರ ಕೊಟ್ಟಿರುವ ಉತ್ತರವನ್ನು ನಾನು ನೋಡಿದ್ದೇನೆ. ಆ ಉತ್ತರದಲ್ಲಿ, ರಾಜ್ಯದಲ್ಲಿ 10 ಸಹಕಾರಿ ಸಕ್ಕರೆ ಕಾರ್ಖಾನೆಗಳು ದುಡಿಯುವ ಬಂಡವಾಳ ಮತ್ತು ಅವಧಿ ಸಾಲದ ರೂಪದಲ್ಲಿ ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕು, ಜಿಲ್ಲಾ ಸಹಕಾರಿ ಕೇಂದ್ರ ಬ್ಯಾಂಕುಗಳು ಮತ್ತು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವ್ಯವಸಾಯ ಸೇವಾ ಸಹಕಾರ ಸಂಘಗಳ ಮೂಲಕ 618 ಕೋಟಿ 52 ಲಕ್ಷ ರೂಪಾಯಿ ಸಾಲ ಪಡೆದಿರುತ್ತವೆ. ಇನ್ನೂ 23 ಖಾಸಗಿ ಸಕ್ಕರೆ ಕಾರ್ಖಾನೆಗಳು ದುಡಿಯುವ ಬಂಡವಾಳ ಮತ್ತು ಅವಧಿ ಸಾಲದ ರೂಪದಲ್ಲಿ ಕರ್ನಾಟಕ ರಾಜ್ಯ ಅಪೆಕ್ಸ್ ಬ್ಯಾಂಕು, ಜಿಲ್ಲಾ ಸಹಕಾರಿ ಕೇಂದ್ರ ಬ್ಯಾಂಕುಗಳು ಮತ್ತು ವ್ಯವಸಾಯ ಸೇವಾ ಸಹಕಾರ ಸಂಘಗಳ ಮೂಲಕ 1936 ಕೋಟಿ 38 ಲಕ್ಷ ರೂಪಾಯಿಗಳಷ್ಟು ಸಾಲ ಪಡೆದಿರುತ್ತವೆ. ಸಹಕಾರಿ ಬ್ಯಾಂಕುಗಳು ಪಡೆದಂತಹ ಸಾಲದಲ್ಲಿ ಸುಸ್ತಿ ಸಾಲ 276 ಕೋಟಿ 75 ಲಕ್ಷ ರೂಪಾಯಿಗಳಾಗಿರುತ್ತದೆ. ಅದರಲ್ಲಿ N.P.A., (Non-performing Assets) ಆಗಿದ್ದು, 172 ಕೋಟಿ 15 ಲಕ್ಷ ರೂಪಾಯಿ. ಅದೇ ರೀತಿ 23 ಖಾಸಗಿ ಸಕ್ಕರೆ ಕಾರ್ಖಾನೆಗಳು ಪಡೆದಂತಹ ಸಾಲದಲ್ಲಿ ಸುಸ್ತಿ ಸಾಲ 418 ಕೋಟಿ 42 ಲಕ್ಷ ರೂಪಾಯಿಗಳಷ್ಟಿರುತ್ತದೆ. ಅದರಲ್ಲಿ N.P.A., ಆಗಿದ್ದು, 389 ಕೋಟಿ 96 ಲಕ್ಷ ರೂಪಾಯಿಗಳು. ಅಂದರೆ, ಸಕ್ಕರೆ ಕಾರ್ಖಾನೆಗಳಿಗೆ ಕೊಟ್ಟಂತಹ ಸಾಲ ಒಟ್ಟಾರೆಯಾಗಿ N.P.A., ಆಗಿದ್ದು, ಸುಸ್ತಿ ಸಾಲ 695 ಕೋಟಿ 17 ಲಕ್ಷ ರೂಪಾಯಿಗಳು. ಅದರಲ್ಲಿ N.P.A., 562 ಕೋಟಿ ರೂಪಾಯಿಗಳು. ಇವೆರಡನ್ನೂ ಕೂಡಿಸಿದರೆ, 1252 ಕೋಟಿ 28 ಲಕ್ಷ ರೂಪಾಯಿಗಳಾಗುತ್ತದೆ.

ಅಂದರೆ, ಸಹಕಾರಿ ಸಕ್ಕರೆ ಕಾರ್ಖಾನೆಗಳು ಮತ್ತು ಖಾಸಗಿ ಸಕ್ಕರೆ ಕಾರ್ಖಾನೆಗಳಿಗೆ ಕೊಟ್ಟಂತಹ ಸಾಲ 2554 ಕೋಟಿ ರೂಪಾಯಿಗಳು ಆಗಿರುತ್ತದೆ. ಈ ರೀತಿ ಸಾಲ ಕೊರುವುದರಲ್ಲಿ N.P.A., ಮತ್ತು ಸುಸ್ತಿ ಸಾಲ ಕೂಡಿಸಿದರೆ 1252 ಕೋಟಿ 28 ಲಕ್ಷ ರೂಪಾಯಿಗಳಾಗುತ್ತದೆ. ಅಂದರೆ, ಶೇಕಡ 50 ರಷ್ಟು ಬಾಕಿ ಉಳಿದರೆ ಬ್ಯಾಂಕು ನಡೆಸುವುದು ಹೇಗೆ? ಅದಕ್ಕೆ ಬಹಳಷ್ಟು ವಿಚಾರ ಮಾಡುವಂತಹ ಒಂದು ಸಂದರ್ಭ ಇರುತ್ತದೆ. ಆ ಭಾಗದ ಸಕ್ಕರೆ ಕಾರ್ಖಾನೆ ಮತ್ತು ಸಹಕಾರಿ ಬ್ಯಾಂಕುಗಳನ್ನು ಉಳಿಸಬೇಕು ಎನ್ನುವುದಕ್ಕಿಂತಲೂ ರೈತರನ್ನು ಉಳಿಸುವ ವಿಚಾರವನ್ನು ಯೋಚನೆ ಮಾಡಬೇಕು. ಉದಾಹರಣೆಗೆ, ಕೃಷ್ಣಾ ಮೇಲ್ದಂಡೆ ಯೋಜನೆ ಮತ್ತು ಇನ್ನೂ ಅನೇಕ ನೀರಾವರಿ ಯೋಜನೆಗಳಿಂದ ಉತ್ತರ ಕರ್ನಾಟಕದಲ್ಲಿ ನೀರಿನ ವ್ಯವಸ್ಥೆ ಸಾಕಷ್ಟಿರುತ್ತದೆ. ಅಲ್ಲಿ ಹವಾಗುಣ ಚೆನ್ನಾಗಿದೆ, ಭೂಮಿ ಗುಣ ಚೆನ್ನಾಗಿದೆ ಮತ್ತು ಮಣ್ಣಿನ ಫಲವತ್ತತೆ ಕೂಡ ಚೆನ್ನಾಗಿದೆ. ಕಬ್ಬು ಬೆಳೆ ಬೆಳೆಯುವುದರಲ್ಲಿ ಕೃಷ್ಣಾ ನದಿ ದಂಡೆಯಲ್ಲಿ ಅಧಿಕ ಬೇಡಿಕೆ ಬರುವಂತಹ ಕಬ್ಬನ್ನು ಅಲ್ಲಿನ ರೈತರು ಬೆಳೆಯುತ್ತಾರೆ. ನಮ್ಮ ರಾಜ್ಯ ಮತ್ತು ಮಹಾರಾಷ್ಟ್ರ ರಾಜ್ಯದವರು ಕಬ್ಬು ಬೆಳೆಯುತ್ತಾರೆ.

ಇವೊತ್ತಿನ ದಿವಸ ಇಡೀ ಭಾರತ ದೇಶದಲ್ಲಿ ಹೆಚ್ಚು ಬೇಡಿಕೆಯ ಕಬ್ಬು ಎಲ್ಲಿಯಾದರೂ ಬೆಳೆಯುತ್ತಾರೆಂದರೆ, ಅದು ಕೃಷ್ಣಾ ನದಿ ದಂಡೆಯ ಎಡ ಮತ್ತು ಬಲ ಭಾಗದಲ್ಲಿರುವ ಜಮೀನಿನಲ್ಲಿ ಬೆಳೆಯುತ್ತಾರೆ. ಅಲ್ಲದೇ, ಕಬ್ಬು ಬೆಳೆ 'easy man's crop' ಆಗಿರುವುದರಿಂದ

"ತಿದ್ದುಪಡಿಯಾಗದ ಪ್ರತಿ: ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರೈತರು ಆರ್ಥಿಕವಾಗಿ ಸದೃಢವಾಗುವಂತಹ ಸಾಧ್ಯತೆ ಇರುವುದರಿಂದ ಕಬ್ಬು ಬೆಳೆಯೇ ಅವರ ಜೀವನಾಧಾರ. ಕಬ್ಬು ಬೆಳೆ ಇಲ್ಲದೇ ಇದ್ದರೆ ಆ ರೈತರಿಗೆ ಯಾವುದೇ ಕೆಲಸ ಇರುವುದಿಲ್ಲ. ಕಬ್ಬು ಬೆಳೆಯಿಂದಾಗಿ ಅವರು ಆರಾಮಾಗಿ ಇದ್ದಾರೆ. ಈ ರೈತರು ಒಂದು ಸೀಸನ್ ಕಬ್ಬು ಬೆಳೆ ಬೆಳೆಯಲಿಲ್ಲವೆಂದರೆ... ರೈತ ಯಾವಾಗಲೂ ಸಾಲದಲ್ಲಿಯೇ ಹುಟ್ಟಿದರೆ, ಸಾಲದಲ್ಲಿಯೇ ಹೋಗುತ್ತಾರೆ. ಏಕೆಂದರೆ, ಇವೊತ್ತಿನ ದಿವಸ ಒಂದು ಕೋಟಿ ಬೆಲೆ ಬಾಳುವ ಉತ್ಪನ್ನ ಬಂದರೆ, ಎರಡು ಕೋಟಿ ರೂಪಾಯಿ ಆಸ್ತಿ ಮಾಡುತ್ತಾರೆ. That is different. ಆದರೆ, ಈ ಕಬ್ಬು ಬೆಳೆಯಿಂದ ವಂಚಿತರಾದರೆ ಅಥವಾ ಸಕ್ಕರೆ ಕಾರ್ಖಾನೆಗಳು ನಿಂತು ಹೋದರೆ ರೈತರ ಸ್ಥಿತಿ ಬಹಳ ಚಿಂತಾಜನಕವಾಗುತ್ತದೆ. ಆ ಸಂದರ್ಭದಲ್ಲಿ ಪುನಃ ರೈತರು ಸರ್ಕಾರದ ಬಳಿ ಬರುತ್ತಾರೆ.

ತಮಗೆ ತಿಳಿದಿರುವಂತೆ, ಒಂದು ಕಾಲದಲ್ಲಿ ಸಕ್ಕರೆ ಕಾರ್ಖಾನೆಗಳೇ ಇರಲಿಲ್ಲ. 100 ಟನ್ ಕಬ್ಬನ್ನು ಸಕ್ಕರೆ ಕಾರ್ಖಾನೆಗೆ ಕೊಡಬೇಕೆಂದರೆ, ಸಮೀರವಾಡಿಯಲ್ಲಿರುವ ಗೋದಾವರಿ ಸಕ್ಕರೆ ಕಾರ್ಖಾನೆಗೆ ಕೊಡಬೇಕಾಗಿತ್ತು. ಆ ಸಂದರ್ಭದಲ್ಲಿ ಮಾನ್ಯ ಸಕ್ಕರೆ ಸಚಿವರಲ್ಲದೇ, ರಾಜ್ಯದ ಮಾನ್ಯ ಮುಖ್ಯಮಂತ್ರಿಗಳು ಕಬ್ಬು ಬೆಳೆ ತೆಗೆದುಕೊಳ್ಳಬೇಕೆಂದು ಪತ್ರ ಕೊಟ್ಟರೂ ಸಹ ರೈತರ ಕಬ್ಬನ್ನು ತೆಗೆದುಕೊಳ್ಳುತ್ತಿರಲಿಲ್ಲ. ಆಗ ಎಷ್ಟೋ ಜನ ರೈತರು ಕಬ್ಬು ಬೆಳೆದು ನದಿಗೆ ಎಸೆದಿರುತ್ತಾರೆ ಅಥವಾ ಜಮೀನಿನ ಬದುವಿಗೆ ಹಾಕಿರುತ್ತಾರೆ. **(ಗೊಂದಲ)** ಆ ನಂತರ ಕಬ್ಬು ಒಯ್ದಿಲ್ಲವೆಂದು ರೈತರು ಏನು ಮಾಡುತ್ತಿದ್ದರೆಂದರೆ, ಕಬ್ಬು ಸುಟ್ಟಿದ್ದರೆ 24 ಗಂಟೆಯೊಳಗೆ ಒಯ್ಯುತ್ತಾರೆಂದು, ಕಬ್ಬು ಬೆಳೆಗೆ ಬೆಂಕಿ ಹಚ್ಚುತ್ತಿದ್ದರು. ಆಗ ಸುಟ್ಟ ಕಬ್ಬು ಬೆಳೆಗೆ ಶೇಕಡ 25 ರಷ್ಟು ಕಡಿತಗೊಳಿಸುತ್ತಿದ್ದರು. ಆದರೆ, ರೈತರು ಏನಾದರೂ ಹಾಳಾಗಿ ಹೋಗಲಿ, ಒಟ್ಟಿನಲ್ಲಿ ಕಬ್ಬು ಬೆಳೆಯನ್ನು ತೆಗೆದುಕೊಂಡು ಹೋಗಲಿ ಎಂದು ಸ್ವತಃ ರೈತರೇ ಕಬ್ಬು ಬೆಳೆಗೆ ಬೆಂಕಿ ಹಚ್ಚಿ ಕಾರ್ಖಾನೆಗಳಿಗೆ ಕಳುಹಿಸುವಂತಹ ಪರಿಸ್ಥಿತಿ ಇತ್ತು ಮತ್ತು ಆಗ ಮುಖ್ಯಮಂತ್ರಿಗಳ ಪತ್ರಕ್ಕೂ ಸಹ ಬೆಲೆ ಇರಲಿಲ್ಲ. ಇವೊತ್ತಿನ ದಿನ ಅನೇಕ ಸಕ್ಕರೆ ಕಾರ್ಖಾನೆಗಳು ಸ್ಥಾಪನೆಯಾಗಿರುತ್ತವೆ ಮತ್ತು ಈಗಾಗಲೇ ಇದ್ದಂತಹ ಸಕ್ಕರೆ ಕಾರ್ಖಾನೆಗಳಲ್ಲಿ ಕಬ್ಬು ಅರೆಯುವ ಸಾಮರ್ಥ್ಯವನ್ನು ಹೆಚ್ಚು ಮಾಡಿರುತ್ತಾರೆ. ಆದರೆ, ಈ ಹಿಂದೆ ಕಬ್ಬು ಬೆಳೆಗಾರರು ಸಕ್ಕರೆ ಕಾರ್ಖಾನೆಗಳಿಗೆ ಹೋಗಿ ಕಬ್ಬು ಬೆಳೆ ತೆಗೆದುಕೊಳ್ಳಬೇಕೆಂದು ಮನವಿ ಮಾಡಿಕೊಳ್ಳುತ್ತಿದ್ದರು.

(ಮುಂದು...)

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(957) 23-09-2021 YL-GR 5.00 (ಸಭಾಪತಿಯವರ ಉಪಸ್ಥಿತಿ)

**ಶ್ರೀ ಎಸ್.ಆರ್.ಪಾಟೀಲ್ (ಮುಂದು):-**

ಇವತ್ತು ಕಾರ್ಖಾನೆಯ ಮಾಲೀಕರು ಕಬ್ಬು ಬೆಳೆಗಾರರ ಮನೆ ಬಾಗಿಲಿಗೆ ಹೋಗಿ ನಮಗೆ ಕಬ್ಬು ಕೊಡಿ, ನಮಗೆ ಕಬ್ಬು ಕೊಡಿ ಎಂದು ಪೈಪೋಟಿ ಮೇಲೆ ಮನವಿ ಮಾಡಿಕೊಳ್ಳುವಂಥ ಪರಿಸ್ಥಿತಿ ಬಂದಿದೆ.

**ಸಭಾಪತಿಯವರು:-** ಸಮೀರ್‌ವಾಡಿಯವರು ಕಬ್ಬು ಕೊಡಿ ಎಂದು ಕೇಳಿಕೊಂಡು 10 ಸಲ ಬರುತ್ತಾರೆ.

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಸಮೀರ್‌ವಾಡಿಯವರು ಬಂದರೆ ಉಳಿದವರ ಗತ್ತಿಯೇನು? ಅದೊಂದು ದೊಡ್ಡ ಕಾರ್ಖಾನೆ, ಅಂದಿನ ಕಾಲದಲ್ಲಿಯೇ ಸುಮಾರು 200 ಕೋಟಿ ರೂಪಾಯಿಗಳಲ್ಲಿ ಕಾರ್ಖಾನೆ ನಿರ್ಮಿಸಿದ್ದಾರೆ. ಈಗಿನವರು 300-400 ಕೋಟಿಗಳನ್ನು ಖರ್ಚು ಮಾಡಿ ಕಾರ್ಖಾನೆ ನಿರ್ಮಿಸುತ್ತಾರೆ. ದುಡಿಯುವ ಕೈಗೆ ಉದ್ಯೋಗ ನೀಡಬೇಕು. ಉತ್ತರ ಕರ್ನಾಟಕದಲ್ಲಿ 63 ಸಕ್ಕರೆ ಕಾರ್ಖಾನೆಗಳಿರುವುದರಿಂದ ಸಂಖ್ಯಾತರ ರೈತರಿಗೆ ಸಹಾಯವಾಗಿದೆ, ಸಾವಿರಾರು ಜನರಿಗೆ ಉದ್ಯೋಗ ಸಿಕ್ಕಿದೆ. ಆದರೆ, ಇವತ್ತು ಪರೋಕ್ಷ ಅಥವಾ ಅಪರೋಕ್ಷವಾಗಿ ಲಕ್ಷಾಂತರ ಮಂದಿ ಉದ್ಯೋಗವನ್ನು ಕಳೆದುಕೊಂಡಿದ್ದಾರೆ. ಕೆಲಸ ಮಾಡುವಂತಹ ಕಾರ್ಮಿಕರಿಗೆ ಉದ್ಯೋಗ ಇಲ್ಲದಂತಾಗಿದೆ. ಕಾರ್ಮಿಕರು ಮಾತ್ರವಲ್ಲದೇ, ಹಿರಿಯ ಅಧಿಕಾರಿಗಳು ಸಹ ಇದ್ದಾರೆ. B.Sc., M.Sc., ಪದವಿ ಹೊಂದಿದವರು ಬಿ.ಇ., (ಮೆಕ್ಯಾನಿಕಲ್), ಎಂ.ಟೆಕ್., ಉನ್ನತ ವ್ಯಾಸಂಗ ಮಾಡಿದವರು ಇವತ್ತು ಸಕ್ಕರೆ ಕಾರ್ಖಾನೆಯಲ್ಲಿ ಕರ್ತವ್ಯವನ್ನು ನಿರ್ವಹಿಸುತ್ತಿರುವ ಲಕ್ಷಾಂತರ ಮಂದಿ ಕಾರ್ಖಾನೆ ಕೆಲಸ ನಿಂತರೆ ಉದ್ಯೋಗ ಕಳೆದುಕೊಳ್ಳುತ್ತಾರೆ. ಕೋಟ್ಯಂತರ ರೈತರು ತಲೆ ಮೇಲೆ ಮಸಿಗಡಿಗೆ ಹೊತ್ತುಕೊಂಡು, ನಿರ್ಗತಿಕರಾಗಿ ಬೀದಿಗೆ ಬರುವಂಥ ಪರಿಸ್ಥಿತಿ ಉದ್ಭವಿಸುತ್ತದೆ. ಇವತ್ತಿನ ದಿವಸ ಉತ್ತರ ಕರ್ನಾಟಕದ ರೈತರು ಸಕ್ಕರೆ ಕಾರ್ಖಾನೆಯಿಂದಾಗಿಯೇ ನೆಮ್ಮದಿಯಾಗಿರುವುದು. ಹಾಗಾಗಿ ಎಲ್ಲಿ ಸಕ್ಕರೆ ಕಾರ್ಖಾನೆ ಮುಚ್ಚಿ ಹೋಗುತ್ತದೆಯೋ ಎಂಬ ಒಂದು ಆತಂಕವಾಗಿದೆ. ಸರ್ಕಾರಕ್ಕೆ ತಮ್ಮ ಮೂಲಕ ಮನವಿ ಮಾಡಿಕೊಳ್ಳುವುದೇನೆಂದರೆ, ಉತ್ತರ ಕರ್ನಾಟಕ ರೈತರು ಅತ್ಯಂತ ಗೌರವ ಮತ್ತು ಸ್ವಾಭಿಮಾನದಿಂದ ಬದುಕಲು ಸಕ್ಕರೆ ಕಾರ್ಖಾನೆಯು ಸಹಾಯವಾಗಿದೆ. ಸ್ವತಂತ್ರ್ಯ ಬರುವ ಪೂರ್ವದಲ್ಲಿಯೇ ಮಂಡ್ಯ ಜಿಲ್ಲೆಯಲ್ಲಿ ಕೆ.ಆರ್.ಎಸ್., ಅಣೆಕಟ್ಟು ನಿರ್ಮಿಸಲು ಶ್ರೀ ನಾಲ್ವಡಿ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೃಷ್ಣರಾಜ ಒಡೆಯರ್‌ರವರು ಮತ್ತು ಭಾರತ ರತ್ನ ಸರ್.ಎಂ.ವಿಶ್ವೇಶ್ವರಯ್ಯನವರು ಪಟ್ಟ ಕಷ್ಟವನ್ನು ನೆನಪಿಸಿಕೊಳ್ಳಬೇಕಾಗಿದೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಲೆಸ್ಲಿ ಕೋಲ್ಮನ್ ಮತ್ತು ದಿವಾನ್ ಮಿರ್ಜಾ ಇಸ್ಮಾಯಿಲ್‌ರವರು ಪ್ರಾರಂಭಿಸಿದರು.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಅವರು ಸಹಾಯ ಮಾಡಿದ್ದವರು. ಬ್ರಿಟೀಷ್ ಅಧಿಕಾರಿಗಳಾಗಿದ್ದು, ಅವರ ಜೊತೆಗೆ ಇವರು ಇದ್ದರು. ಏಕೆಂದರೆ, ನಾನು ಮಂಡ್ಯಕ್ಕೆ ಹೋದಾಗ,...

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಇಲ್ಲ. ಅವರುಗಳು ಅಷ್ಟರೊಳಗೆ ಗಲಾಟೆ ಮಾಡಿಕೊಂಡು, ರಾಜೀನಾಮೆ ನೀಡಿದರು.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ರಾಜೀನಾಮೆ ನೀಡಿರಬಹುದು. ಆದರೆ, ಅವರುಗಳು ಸಹ ಇದ್ದರೂ ಎಂಬುದನ್ನು ಹೇಳುತ್ತಿದ್ದೇನೆ. ಭಾರತ ರತ್ನ ಪ್ರಶಸ್ತಿ ಪಡೆದಂಥ ಭಾರತ ರತ್ನ ಶ್ರೀ ಸರ್.ಎಂ.ವಿಶ್ವೇಶ್ವರಯ್ಯನವರು ಮತ್ತು ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರು ಕಾರಣ. 1964ನೇ ಸಾಲಿನಲ್ಲಿ ಅಡಿಗಲ್ಲು ಹಾಕಿ, ಇವತ್ತಿಗೆ 57 ವರ್ಷಗಳು ಕಳೆದರೂ ಆಲಮಟ್ಟಿ ಜಲಾಶಯ ಮುಗಿದಿಲ್ಲ. ಸ್ವಾತಂತ್ರ್ಯ ಬರುವ ಪೂರ್ವದಲ್ಲಿಯೇ ಮಹಾರಾಜರು ಕೆ.ಆರ್.ಎಸ್., ಅಣೆಕಟ್ಟನ್ನು ನಿರ್ಮಿಸಲು ಹಣದ ಸಮಸ್ಯೆ ಉದ್ಭವಿಸಿದಾಗ ಮಹಾರಾಜರು ವಜ್ರ, ವೈಡೂರ್ಯ, ಬೆಳ್ಳಿ, ಬಂಗಾರ ಅಡವಿಟ್ಟು ಜಲಾಶಯವನ್ನು ನಿರ್ಮಿಸಿದ್ದಾರೆ. ಈಗ ಆರ್ಥಿಕವಾಗಿ ಮಾನ್ಯ ಕೆ.ಟಿ.ಶ್ರೀಕಂಠೇಗೌಡರು, ಮಾನ್ಯ ಮರಿತಿಬ್ಬೇಗೌಡರು ಜೊತೆಗೆ ತಾವುಗಳು ಅತ್ಯಂತ ಬಲಿಷ್ಠರಾಗಿದ್ದೀರಿ. ಅದಕ್ಕೆ ಕಾರಣವೇನು? ಅದಕ್ಕೆ ಕಾರಣ ನೋಡಿದಾಗ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರ ಕೊಡುಗೆಯಾಗಿದೆ. ಅದನ್ನು ನಾನು ನೆನಪಿಸಿಕೊಳ್ಳುತ್ತೇನೆ. ನಮ್ಮಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆ ಅಸ್ತಿತ್ವದಲ್ಲಿದ್ದು, ಈಗಾಗಲೇ ಸುಮಾರು 15 ಲಕ್ಷ ಎಕರೆ ಅಷ್ಟು ನೀರಾವರಿಯಾಗಿದೆ. 3ನೇ ಹಂತ ಕಾಮಗಾರಿ ಮುಗಿದರೆ ಇನ್ನೂ 15 ಲಕ್ಷ ಎಕರೆ ನೀರಾವರಿಯಾಗುತ್ತದೆ. ಅಲ್ಲಿಗೆ ಒಟ್ಟು 30 ಲಕ್ಷ ನೀರಾವರಿಯಾಗುತ್ತದೆ. ಅನೇಕ ನೀರಾವರಿ ಯೋಜನೆಗಳು ಅಸ್ತಿತ್ವಕ್ಕೆ ಬಂದಿರುವುದರಿಂದ ಅದರ ಮೂಲಕ ರೈತರು ಆರ್ಥಿಕವಾಗಿ ಈಗ ಅಂಬೆಗಾಲು ಇಡುತ್ತಾ ಬೆಳೆಯುತ್ತಿದ್ದಾರೆ. ಆದರೆ, ಮಾನ್ಯ ಕೆ.ಟಿ.ಶ್ರೀಕಂಠೇಗೌಡರು ಈಗಾಗಲೇ ಮುಗಿಸಿ, ಆರ್ಥಿಕವಾಗಿ ಮುಂದೆ ಇದ್ದಾರೆ. ನಾವು ಸಹ ಅವರ ಹಾಗೆ ಸ್ವಾಭಿಮಾನ ಮತ್ತು ಗೌರವದಿಂದ ಬದುಕುವಂಥ

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಪರಿಸ್ಥಿತಿ ಉದ್ಭವಿಸಲಿ ಎಂದು ಹೇಳುತ್ತಾ, ಅನೇಕ ಸಕ್ಕರೆ ಕಾರ್ಖಾನೆಯನ್ನು ಮುಚ್ಚಿವಂಥದಾಗಿದೆ. ಬೇರೆ-ಬೇರೆ ರಾಜ್ಯಗಳಿಂದ ಬಂದವರು ಸಕ್ಕರೆ ಕಾರ್ಖಾನೆಯನ್ನು ನಮ್ಮ ರಾಜ್ಯದಲ್ಲಿ ತೆರೆದಿದ್ದಾರೆ. ದೊಡ್ಡ-ದೊಡ್ಡ ಉದ್ಯಮಗಳು ಬಂದಿರುವಂಥ ವಿಚಾರವು ಪತ್ರಿಕೆಯಲ್ಲಿ ಪ್ರಕಟವಾಗಿವೆ. ನಮ್ಮವರು ಸಹ ಅವರ ಹಾಗೆ ಮಾಡುತ್ತಾರೆ ಎಂದು ಭಾವಿಸಿದ್ದೇವು. ಆದರೆ, ಇವತ್ತು ಇಂತಹ ಪರಿಸ್ಥಿತಿ ಬಂದಿದೆ. ಆದರೆ, ಇಂತಹ ಸಂದರ್ಭದಲ್ಲಿ ಸರ್ಕಾರ ಬಹಳ ಯೋಚನೆ ಮಾಡಬೇಕಾಗಿದೆ.

**ಡಾ|| ಸಿ.ಎನ್.ಅಶ್ವಥ್‌ನಾರಾಯಣ:-** ಮಾನ್ಯ ಸಭಾಪತಿಯವರೇ, ಈಗ ಮಂಡ್ಯ ಜಿಲ್ಲೆಗೆ ಸಂಬಂಧಿಸಿದಂತೆ ಹೇಳುವುದಾದರೆ, ಇಡೀ ರಾಜ್ಯದಲ್ಲಿಯೇ ಅತೀ ಹೆಚ್ಚು ಸಾಲವನ್ನು ಮಾಡಿಕೊಂಡಿರುವ ಜಿಲ್ಲೆ ಯಾವುದಾದರು ಇದ್ದರೆ ಅದು ಮಂಡ್ಯ ಜಿಲ್ಲೆಯಾಗಿದೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ನಮ್ಮ ಕಡೆ **"ಮಂಡಿ ಉದ್ದ ಕಬ್ಬು, ಎದೆ ಉದ್ದ ಸಾಲ"** ಎಂಬ ಒಂದು ಗಾದೆ ಮಾತಿದೆ. ಅದರ ಬಗ್ಗೆ ನಾನು ಮಾತನಾಡುವಾಗ ಸಂಪೂರ್ಣವಾಗಿ ತಿಳಿಸುತ್ತೇನೆ.

**ಸಭಾಪತಿಯವರು:-** ಆಯಿತು. ತಮಗೆ ಪಿಂಚಣಿ ಸೌಲಭ್ಯ ಇದೆ. ಆರಾಮವಾಗಿ ಇದ್ದೀರಿ ಕುಳಿತುಕೊಳ್ಳಿ. ವಿರೋಧ ಪಕ್ಷದ ನಾಯಕರೇ ತಮ್ಮ ಮಾತನ್ನು ಮುಂದುವರೆಸಿ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಅಷ್ಟರಲ್ಲಿ ಮಹಾರಾಷ್ಟ್ರದಲ್ಲಿ ಕಾರ್ಖಾನೆಗಳೆಲ್ಲವೂ viable ಆಗಿವೆ. ಮಹಾರಾಷ್ಟ್ರದಲ್ಲಿಯು ಕೃಷ್ಣಾ ನದಿ ದಂಡೆಯ ಮೇಲೆ ಜಮೀನಿದೆ. ಅದೇ ರೀತಿ ಕರ್ನಾಟಕದಲ್ಲಿಯು ಕೃಷ್ಣಾ ನದಿ ದಂಡೆಯ ಮೇಲೆ ಜಮೀನಿದೆ. ಮಹಾರಾಷ್ಟ್ರದಲ್ಲಿ ಉತ್ತಮವಾದ ಸಕ್ಕರೆ ಕಾರ್ಖಾನೆಗಳಿವೆ. ನಮ್ಮಲ್ಲಿ ಏತಕ್ಕೋ viable ಆಗುತ್ತಿಲ್ಲ. ಮಹಾರಾಷ್ಟ್ರ ರಾಜ್ಯದಲ್ಲಿ ವಿದ್ಯುತ್ ಕೊರತೆ ಉದ್ಭವಿಸಿದರೆ, ಬೇರೆ-ಬೇರೆ ಮೂಲದಿಂದ ವಿದ್ಯುತ್ ಉತ್ಪಾದನೆಯಾಗುತ್ತದೆ. Wind Mill, ಸೋಲಾರ್, Cogeneration ಮೂಲಕ ಸಕ್ಕರೆ ಕಾರ್ಖಾನೆಯಿಂದ ವಿದ್ಯುತ್ ಬರುವಂಥದಾಗಿದ್ದು, ಮಹಾರಾಷ್ಟ್ರಕ್ಕೆ ಮೊದಲ ಆದ್ಯತೆ ಇದೆ. ಸಕ್ಕರೆ ಕಾರ್ಖಾನೆಯಿಂದ ಎಷ್ಟು ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆ ಮಾಡುತ್ತದೆ, ಅಷ್ಟು ವಿದ್ಯುತ್ತನ್ನು ಮಹಾರಾಷ್ಟ್ರ ಸರ್ಕಾರ purchase ಮಾಡುತ್ತಿದೆ. First priority is given to the power generated by the sugar factories. ಜೊತೆಗೆ ಪ್ರತಿ ಯೂನಿಟ್ ವಿದ್ಯುತ್‌ಗೆ ಹೆಚ್ಚು ಬೆಲೆಯನ್ನು ಸಹ ಭರಿಸುತ್ತಾರೆ. ಪ್ರತಿ ಯೂನಿಟ್ ವಿದ್ಯುತ್‌ಗೆ ಜಾಸ್ತಿ ಹಣವನ್ನು ನೀಡಿ, ಸಕ್ಕರೆ ಕಾರ್ಖಾನೆಯನ್ನು viable ಮಾಡಲು ಚಿಂತನೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡುತ್ತಿದ್ದಾರೆ. ಅಂತಹ ಕೆಲಸವು ನಮ್ಮ ಸರ್ಕಾರದಲ್ಲಿ ಆಗುತ್ತಿಲ್ಲ. ಹೊಸದಾಗಿ ಸಕ್ಕರೆ ಕಾರ್ಖಾನೆ ನಿರ್ಮಿಸಿದವರಿಂದ ನಾವು Power Purchase Agreement (PPA) ಮಾಡಿಕೊಳ್ಳುವುದಿಲ್ಲ ಎಂದು ಹೇಳುತ್ತಾರೆ. ನಮ್ಮಲ್ಲಿಯೇ ಸಾಕಷ್ಟು ವಿದ್ಯುತ್ surplus ಇದೆ, ಸಕ್ಕರೆ ಕಾರ್ಖಾನೆಯವರು ಏನು ವಿದ್ಯುತ್ ಉತ್ಪಾದನೆ ಮಾಡುತ್ತೀರಿ, ಅದನ್ನು ಏನಾದರೂ ಮಾಡಿಕೊಳ್ಳಿ ಎನ್ನುವಂಥ ಮಾತನ್ನು ಸರ್ಕಾರ ಹೇಳುತ್ತಿದೆ. Captive power ಏನಿದೆ, ಅದನ್ನು ತೆಗೆದುಕೊಳ್ಳುವುದಿಲ್ಲ ಎನ್ನುವಂಥ ಮಾತನ್ನು ಸರ್ಕಾರ ಹೇಳುತ್ತಿದೆ. ಸಕ್ಕರೆ ಕಾರ್ಖಾನೆಯಲ್ಲಿರುವಂಥ ವಿದ್ಯುತ್ತನ್ನು ಒಳ್ಳೆಯ ಬೆಲೆ ನೀಡಿ ಖರೀದಿಸಿದರೆ, ಸಕ್ಕರೆ ಕಾರ್ಖಾನೆಯವರು ಕಬ್ಬು ಬೆಳೆಗಾರರಿಗೆ ಕಬ್ಬಿನ ದರವನ್ನು ನೀಡಲು ಅನುಕೂಲವಾಗುತ್ತದೆ. P.P.A., ಮಾಡಿಕೊಳ್ಳದೇ ಇರುವುದರಿಂದ ಆ ರೈತರು ಎಲ್ಲಾ ಕಡೆಯು ಹೋರಾಡುವಂಥ ಪರಿಸ್ಥಿತಿ ಉಂಟಾಗಿದೆ. ಇಂಧನ ಸಚಿವರು ಒಳ್ಳೆಯವರಾಗಿದ್ದು, ಸದನಕ್ಕೆ ಬಂದಿದ್ದರೆ ಚೆನ್ನಾಗಿರುತ್ತಿತ್ತು. ಸಹಕಾರ ಸಚಿವರೆ, ಇಂಧನ ಸಚಿವರ ಸಹಾಯವನ್ನು ಪಡೆದುಕೊಳ್ಳಿ.

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೆ, ತಾವು ನನ್ನ ಕಡೆ ತಿರುಗಿಕೊಂಡು ಮಾತನಾಡಿ. ತಾವು ಆಡಳಿತ ಪಕ್ಷದವರ ಕಡೆ ತಿರುಗಿಕೊಂಡು ಮಾತನಾಡಿದರೆ, ಮತ್ತೆ ಅವರು ಮಾತನಾಡಲು ಪ್ರಾರಂಭಿಸುತ್ತಾರೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಸುದೈವದಿಂದ ಕೇಂದ್ರ ಸರ್ಕಾರದವರು Ethanal Project ಗಾಗಿ ಬ್ಯಾಂಕಿನವರು ಸಾಲವನ್ನು ನೀಡುತ್ತಿದ್ದಾರೆ, ಅದರಲ್ಲಿ ಶೇ.6 ರಷ್ಟು interest subversion ನೀಡಿದ್ದಾರೆ. ನಾನು ಈ ಸಂದರ್ಭದಲ್ಲಿ ಪಕ್ಷಾತೀತವಾಗಿ ಹೇಳುವುದೇನೆಂದರೆ, the Central Government has done good to the sugar factories, to make them viable. I will appreciate. ಒಳ್ಳೆಯ ಕೆಲಸವನ್ನು ಮಾಡಿದಾಗ ಅದನ್ನು appreciate ಮಾಡಬೇಕಲ್ಲವೇ?

**ಶ್ರೀ ಎನ್.ರವಿಕುಮಾರ್:-** ಮಾನ್ಯ ವಿರೋಧ ಪಕ್ಷದ ನಾಯಕರೆ ಅಂತಹವುಗಳು ಬಹಳ ಇದೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಬಹಳ ಇದ್ದರೆ ಅದನ್ನು ಸಹ ಹೇಳುತ್ತೇನೆ.

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ್ದಾರೆ ಅಲ್ಲವೇ ಅಷ್ಟು ಸಾಕು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, I am always an impartial man.

**ಶ್ರೀ ಎಸ್.ಎಲ್.ಧರ್ಮೇಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ವಿ.ಸೋಮಣ್ಣನವರು ಮಾತ್ರ ಒಳ್ಳೆಯ ಹೆಸರನ್ನು ತೆಗೆದುಕೊಂಡಿರುವುದು. ಅವರ ಹಾಗೆಯೇ ಬೇರೆ ಸಚಿವರು ಹೆಸರನ್ನು ತೆಗೆದುಕೊಳ್ಳಬೇಕು.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಒಳ್ಳೆಯ ವಿಚಾರ ಇದ್ದರೆ ಒಳ್ಳೆಯದು ಎಂದು ಹೇಳುತ್ತೇನೆ.

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೆ ನನ್ನ ಕಡೆ ತಿರುಗಿಕೊಂಡು ಮಾತನಾಡಿ ಎಂದು ಅದಕ್ಕಾಗಿಯೇ ಹೇಳಿದು.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಹೌದು. ನಾನು ನಿಮ್ಮ ಕಡೆ ತಿರುಗಿಕೊಂಡು ಮಾತನಾಡಿದರೆ ಒಳ್ಳೆಯದು. ಇಲ್ಲದಿದ್ದರೆ ಮಾನ್ಯ ಎನ್.ರವಿಕುಮಾರ್‌ರವರು ಮಧ್ಯೆ ಎದ್ದು ಏನಾದರೂ ಮಾತನಾಡುತ್ತಾರೆ. ಸಕ್ಕರೆ ಕಾರ್ಖಾನೆ ಸ್ವಲ್ಪವಾದರೂ viable ಆಗಬೇಕಾದರೆ, 60 KLPD ಆಗಲಿ, 120 KLPD ಆಗಲಿ, 200 KLPD ಆಗಲಿ ಮಾಡಬೇಕು. ಅವರವರ crushing capacity ಮೇಲೆ ಎಷ್ಟು KLPD ಮಾಡಬೇಕು, ಅದನ್ನು ಮಾಡಿದರೆ ಹೆಚ್ಚುವರಿ ಆದಾಯ ಬರುತ್ತದೆ. Molasses ನಿಂದಾಗಿ *Extra Neutral Alcohol* ನಾದರೂ ತಯಾರು ಮಾಡಬಹುದು, Ethanol ನಾದರೂ ತಯಾರು ಮಾಡಬಹುದು. Ethanol ನಲ್ಲಿ ಶೇ. 10 ರಷ್ಟು blending allow ಮಾಡಿದ್ದಾರೆ. ಅದೇ ರೀತಿ ಪೆಟ್ರೋಲ್‌ಗೆ ಶೇ. 10 ರಷ್ಟು Ethanol blending ಗೆ ಅವಕಾಶ ಕಲ್ಪಿಸಿದ್ದಾರೆ. ಮುಂದಿನ ನಿರ್ಮಾಣದಲ್ಲಿ ಶೇ.20 ರಷ್ಟು blending ಅವಕಾಶ ಕಲ್ಪಿಸುವಂಥ ಪ್ರಸ್ತಾವನೆ ಕೇಂದ್ರ ಸರ್ಕಾರದ ಮುಂದೆ ಇದೆ. ಜೊತೆಗೆ ಕೇಂದ್ರ ಸರ್ಕಾರದವರು release mechanism ಇಟ್ಟಿದ್ದಾರೆ. ಸಕ್ಕರೆ ಉತ್ಪಾದನೆ ಮಾಡುವುದರಿಂದ ಈ ತಿಂಗಳು ಎಷ್ಟು ಸಕ್ಕರೆ ಬಿಡುಗಡೆ ಮಾಡಬೇಕು, ಅಷ್ಟು ಮಾತ್ರ ಮಾಡಬೇಕು. ಅಂದರೆ, 1 ಲಕ್ಷ ಕ್ವಿಂಟಾಲ್ ಎಂದರೆ ಅಷ್ಟೇ ಇರಬೇಕು. ಹೆಚ್ಚಾಗಿಯು ಬಿಡುಗಡೆ ಮಾಡುವ ಹಾಗಿಲ್ಲ. Release mechanism ಹೋದಾಗ ಸಕ್ಕರೆ ಉತ್ಪಾದನೆ ಆದ ಕೂಡಲೇ ಬಿಸಿ-ಬಿಸಿ ಸಕ್ಕರೆಯನ್ನು ತಂದು ಒಂದು ಕಡೆ dump ಮಾಡುತ್ತಾರೆ. ಮೊದಲೆಲ್ಲಾ ಮಾರುಕಟ್ಟೆಗೆ 5 ಲಕ್ಷ ಕ್ವಿಂಟಾಲ್ ಸಕ್ಕರೆ ಬರುತ್ತಿದ್ದು, ಈಗ 50 ಲಕ್ಷ ಕ್ವಿಂಟಾಲ್ ಬರುತ್ತಿದೆ. ಇದರಿಂದಾಗಿ ಸಕ್ಕರೆ ದರವು ಕಡಿಮೆಯಾಗುತ್ತದೆ. ಹಾಗಾಗಿ ಇವತ್ತು release mechanism ಮಾಡಿ, ಪ್ರತಿ ಕ್ವಿಂಟಾಲ್‌ಗೆ 31

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರೂಪಾಯಿ ನಿಗದಿಪಡಿಸಿರುವುದರಿಂದ ನಮಗೆ ಸಹಾಯವಾಗಿದೆ ಎನ್ನುವಂಥ ಒಂದು ಒಳ್ಳೆಯ ಮಾತನ್ನು ಹೇಳಬಯಸುತ್ತೇನೆ.

**ಡಾ|| ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ,...

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೆ ಒಂದು ನಿಮಿಷ. ಮಾನ್ಯ ವೈ.ಎ.ನಾರಾಯಣಸ್ವಾಮಿಯವರು ಮಾತನಾಡುತ್ತಾರೆ.

(...ಮುಂದು)

(958) 23.09.2021/5.10/ ಎಸ್‌ಕೆ-ಎಂ.ಡಿ.

**(ಸಭಾಪತಿಯವರ ಉಪಸ್ಥಿತಿ)**

**ಡಾ. ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಿಯಮ 330 ರಡಿಯಲ್ಲಿ 18 ಪ್ರಸ್ತಾವಗಳು ಇವೆ. ನಾಳೆ ಯಾವುದೂ ಚರ್ಚೆಯಾಗುವುದಿಲ್ಲ. ಇವತ್ತೇ ಮುಗಿಸಬೇಕೆಂದರೆ, ದಯವಿಟ್ಟು, ಸಮಯವನ್ನು ನಿಗದಿ ಮಾಡಿದರೆ, ನಾವೆಲ್ಲ ಸದಸ್ಯರು ಮಾತನಾಡಿ ಮುಗಿಸುತ್ತೇವೆ. ಕೇವಲ ಎರಡ್ಮೂರು ಪ್ರಸ್ತಾವಗಳು ಮುಗಿದರೆ, ನಮ್ಮ ಗತಿ ಏನು? ಇದರ ಬಗ್ಗೆ ಮಾತನಾಡಲು ಕಾಯುತ್ತಿದ್ದೇವೆ.

**ಸಭಾಪತಿಯವರು:-** ಮಾನ್ಯ ನಾರಾಯಣಸ್ವಾಮಿಯವರೇ, ಒಂದು ನಿಮಿಷ. ನನ್ನ ಮಾತನ್ನು ಸ್ವಲ್ಪ ಕೇಳಿರಿ.

**ಡಾ. ವೈ.ಎ. ನಾರಾಯಣಸ್ವಾಮಿ:-** ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುತ್ತಿರುವ ಬಗ್ಗೆ ನಾನು ವಿರೋಧ ಮಾಡುತ್ತಿಲ್ಲ. ಮಾನ್ಯ ಸಭಾಪತಿಯವರು ಸಮಯವನ್ನು ಇನ್ನಷ್ಟು ನಿಗದಿ ಮಾಡಿದರೆ, ನಮ್ಮೆಗೆಲ್ಲರಿಗೂ ಅನುಕೂಲವಾಗುತ್ತದೆ.

**ಸಭಾಪತಿಯವರು:-** ಮಾನ್ಯ ನಾರಾಯಣಸ್ವಾಮಿಯವರೇ, ನಿಯಮ 330 ರಡಿಯಲ್ಲಿ ಪ್ರಸ್ತಾವಗಳು ಬಹಳ ಇದೆ. ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಚಿಕ್ಕದಾಗಿ ಮುಗಿಸಿ ಎಂದು ಹೇಳಿದ್ದೇನೆ. ಅವರು ವಿರೋಧ ಪಕ್ಷದನಾಯಕರಾಗಿರುವುದರಿಂದ, ನಾನು ಅವರಿಗೆ ಏನು ಹೇಳುವುದಕ್ಕಾಗುವುದಿಲ್ಲ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಆರ್. ಪಾಟೀಲ್ (ವಿರೋಧ ಪಕ್ಷದ ನಾಯಕರು)** ಮಾನ್ಯ ಸಭಾಪತಿಯವರೇ, ತಾವು ಹೇಳಲಿಲ್ಲವೆಂದರೆ, ಮಾನ್ಯ ನಾರಾಯಣಸ್ವಾಮಿಯವರು ಹೇಳುತ್ತಾರೆ.

**ಡಾ. ವೈ.ಎ. ನಾರಾಯಣಸ್ವಾಮಿ:-** ಮಾನ್ಯ ವಿರೋಧ ಪಕ್ಷದ ನಾಯಕರ ಬಗ್ಗೆ ಗೌರವವಿದೆ. ಇಲ್ಲಿ ಎಲ್ಲರ ಪ್ರಸ್ತಾವವಿದೆ. ಅದನ್ನು ಮುಗಿಸಿಕೊಂಡು ಹೋಗೋಣ.

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ ತಾವು ಮಾತನಾಡಿ.

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ಮುಂಬೈ ಕರ್ನಾಟಕ ಕಲ್ಯಾಣ ಕರ್ನಾಟಕದಲ್ಲಿರುವ ಒಟ್ಟು 14 ಜಿಲ್ಲೆಗಳಿವೆ. ಮಾನ್ಯ ರಘುನಾಥ್ ರಾವ್ ಮಲ್ಕಾಪೂರೆಯವರು ಅದರೊಳಗೆ ತಮ್ಮ ಜಿಲ್ಲೆಯೂ ಬರುತ್ತದೆ. ಒಟ್ಟು 14 ಜಿಲ್ಲೆಗಳಲ್ಲಿರುವ ರೈತರ ಸಾವು ಬದುಕಿನ ಪ್ರಶ್ನೆಯಾಗಿದೆ. ಮಾನ್ಯ ಸದಸ್ಯರಿಗೆ ಸಂಬಂಧಿಸಿದ ಜಿಲ್ಲೆಯಲ್ಲಿ ಆರು ಸಕ್ಕರೆ ಕಾರ್ಖಾನೆ ಬರುತ್ತವೆ. ಬೀದರ್‌ನಲ್ಲಿರುವ ಹಳ್ಳಿಖೇಡ ಸಹಕಾರಿ ಸಕ್ಕರೆ ಕಾರ್ಖಾನೆ ಕೂಡ ನಿಂತು ಹೋಗಿದೆ. ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, ಸಕ್ಕರೆ ಕಾರ್ಖಾನೆ crushing ಅನ್ನು ನಿಲ್ಲಿಸಿದರೆ, ಬ್ಯಾಂಕ್‌ಗಳು ಮುಳಗುತ್ತವೆ. ಅದರ ಜೊತೆಗೆ, ಅದನ್ನು ಅವಲಂಬಿಸಿರುವ ಕೋಟ್ಯಂತರ ರೈತರು ಇವತ್ತು ಆರ್ಥಿಕವಾಗಿ, ಸಮರ್ಥ ಶಕ್ತಿಶಾಲಿಯಾಗಿದ್ದಂತಹ, ಮಂಡ್ಯ ಜಿಲ್ಲೆಯ ರೈತರ ಸರಿ ಸಮಾನಾಗಿ, ಗೌರವ, ಸ್ವಾವಲಂಬಿಯಾಗಿ ಬದುಕಿದಂತಹ ರೈತರು ಈ ಸ್ಥಿತಿಗೆ ಬಂದಂತಹ ಸಂದರ್ಭದಲ್ಲಿ ಈ ಒಂದು viability ಹೋಯಿತು ಎಂದರೆ, ಬಹಳ ತೊಂದರೆಯಾಗುತ್ತದೆ ಎನ್ನುವ ದೃಷ್ಟಿಯಿಂದ ನಾನು ಹೇಳುತ್ತೇನೆ. ಈಗ ನಿಯಮ 330 ರಡಿಯಲ್ಲಿ ಬಹಳಷ್ಟು ಪ್ರಸ್ತಾವಗಳು ಇವೆ. ನಾನು ಲಂಭಿಸುವುದಿಲ್ಲ. ಕೊನೆಯದಾಗಿ, ನಾನು ತಮ್ಮ ಮೂಲಕ ಸರ್ಕಾರಕ್ಕೆ ಮನವಿ ಮಾಡುವುದೇನೆಂದರೆ, ಸರ್ಕಾರ ತಕ್ಷಣ ಇದಕ್ಕೆ intervene ಆಗಬೇಕು. ಅದಕ್ಕೆ intervene ಆಗಿ ಸರ್ಕಾರ ಏನು ಮಾಡಬೇಕೆಂದರೆ, ಈ ಸಾಲವನ್ನು ತೆಗೆದುಕೊಂಡವರದೆಲ್ಲಾ, ಅದನ್ನು re-structuring ಮಾಡಬೇಕು. ಸಕ್ಕರೆ ಕಾರ್ಖಾನೆ ತೆಗೆದುಕೊಂಡಂತಹ ಸಾಲವನ್ನು ಐದು ವರ್ಷಗಳಲ್ಲಿ ತೀರಿಸಬೇಕಾಗಿರುತ್ತದೆ. ಅದರ ಬದಲಿ ಹತ್ತು ವರ್ಷ, ಹನ್ನೆರಡು ವರ್ಷ ಅಂದರೆ ಸಣ್ಣ ಸಣ್ಣ ಕಂತುಗಳಾಗಿ ಮಾಡಬೇಕು. ಈಗ ಒಂದು ಸಕ್ಕರೆ ಕಾರ್ಖಾನೆಯಲ್ಲಿ ಸುಮಾರು ಐವತ್ತು ಕೋಟಿ ರೂಪಾಯಿಗಳ ಉತ್ಪನ್ನ ಬರುತ್ತದೆ ಎಂದರೆ, ಬಡ್ಡಿ ಮತ್ತು ಅಸಲನ್ನು ಜೊತೆಗೆ ಕೂಡಿ, ಐವತ್ತು ಕೋಟಿ ರೂಪಾಯಿಗಳನ್ನು ಒಂದು ವರ್ಷ ಕಂತು ಬರುವ ಹಾಗೇ ಮಾಡಬೇಕು. ಆದರೆ ಐದು ವರ್ಷಗಳಲ್ಲಿ ಸಾಲ ತೀರುವ ಬದಲಿ, ಹತ್ತು, ಹನ್ನೊಂದು ವರ್ಷಗಳವರೆಗೆ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೋಗಲಿ. ಬ್ಯಾಂಕಿನವರು ಸಾಲವನ್ನು ಯಾರು ನಿಶ್ಚಿತವರಿಗೆ ಕೊಟ್ಟಿರುತ್ತಾರೋ, ಅವರಿಗೆ ಮರು ಪಾವತಿ ಆಗುತ್ತದೆ. ಸಕ್ಕರೆ ಕಾರ್ಖಾನೆ viable ಆಗುತ್ತದೆ. ಬ್ಯಾಂಕ್ ಮತ್ತು ಸಕ್ಕರೆ ಕಾರ್ಖಾನೆಗಳು ಉಳಿಯುತ್ತವೆ. ಸಕ್ಕರೆ ಕಾರ್ಖಾನೆ ಉಳಿಯುವುದರಿಂದ, ಕೋಟ್ಯಂತರ ಜನ ರೈತರು ಉಳಿಯುತ್ತಾರೆ. ಅದಕ್ಕೆ re-structuring ಮಾಡಬೇಕು. ತಾವು ಒಂದು ಸಭೆಯನ್ನು ಕರೆಯಬೇಕು. ಜಿಲ್ಲಾ ಕೇಂದ್ರದ ಸಹಕಾರಿ ಬ್ಯಾಂಕ್, ಅಪೆಕ್ಸ್ ಬ್ಯಾಂಕ್ ಸಕ್ಕರೆ ಕಾರ್ಖಾನೆಯ ಪ್ರತಿನಿಧಿಗಳನ್ನು ಈ ಒಂದು ಸಭೆಗೆ ಕರೆದು, individually waive ಮಾಡಿ, ಒಂದು ಸಕ್ಕರೆ ಕಾರ್ಖಾನೆಯ ಪರಿಸ್ಥಿತಿ ಇನ್ನೊಂದು ಸಕ್ಕರೆ ಕಾರ್ಖಾನೆಗೆ ಅಂತರ ಇರಬೇಕು. ಅವುಗಳನ್ನು re-structuring ಮಾಡುವುದರ ಜೊತೆಗೆ ನಾನು ಹೇಳಿದಂತೆ ಮೊದಲು ಬಡ್ಡಿ ಶೇಕಡ 13, 14 ಇದೆ. ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಶೇಕಡ 6, 7, 8 ಬಡ್ಡಿ ಇದೆ. ಇದರ ಬಡ್ಡಿಯನ್ನು ಕಡಿಮೆ ಮಾಡುವುದಕ್ಕೆ ಹೇಳಿ. ಏಕೆಂದರೆ ಅವರು ಕೊಟ್ಟಂತಹ ಸಾಲ NCLT (National Company Law Tribunal) ಗೆ ಹೋದರೆ, ಬರುವುದಿಲ್ಲ. ಸಹಕಾರಿ ಸಕ್ಕರೆ ಕಾರ್ಖಾನೆಯ ಮೇಲೆ auction ಮಾಡುತ್ತೀರಲ್ಲ, ಅದಕ್ಕೂ ಹಣ ಬರುವುದಿಲ್ಲ. ಅದಕ್ಕೂ re-structuring ಮಾಡಬೇಕು. ಆಮೇಲೆ ತಾವು you have to prevail over the Co-operative Banks. ಅವರ cost of fund ಆರೇಳು ಇರುತ್ತದೆ. ಅಂತಹದ್ದರಲ್ಲಿ ಹದಿನಾಲ್ಕು, ಹದಿನೈದು ಪರ್ಸೆಂಟ್ ಬಡ್ಡಿ ತೆಗೆದುಕೊಳ್ಳುವುದು ಎಂದರೆ ಏನು? ಊರ ಮನೆ ಬಡ್ಡಿ ಆಯ್ದುಕೊಂಡಂತೆ ಆಗುತ್ತದೆ. ಅದಕ್ಕೆ ಮಾನ್ಯ ಸಚಿವರು ಮನಸ್ಸು ಮಾಡಿದರೆ, ತಮ್ಮ ಸ್ಥಾನದಿಂದ you have to prevail over the Co-operative Banks. ಇದನ್ನು ಅವರಿಗೆ ಹೇಳಿರಿ. Cost of fund ನೋಡಿ ಎಷ್ಟೊಂದು ಬಡ್ಡಿಯನ್ನು ತೆಗೆದುಕೊಳ್ಳುತ್ತೀರಿ. ಅವರಿಗೆ ಸ್ವಲ್ಪ ಬಡ್ಡಿಯನ್ನು ಕಡಿಮೆ ಮಾಡುವುದು ಮತ್ತು re-structuring ಮಾಡುವುದು. ಇವೆರಡನ್ನು ಮಾಡಿದರೆ, ಸಕ್ಕರೆ ಕಾರ್ಖಾನೆ ನಿಶ್ಚಿತವಾಗಿ ಉಳಿಯುತ್ತವೆ ಎನ್ನುವ ಮಾತನ್ನು ಹೇಳುವುದರ ಜೊತೆಗೆ ಇನ್ನೊಂದು ವಿಷಯವೇನೆಂದರೆ, ಇವತ್ತು ಮಹಾರಾಷ್ಟ್ರ ರಾಜ್ಯದಲ್ಲಿ ಒಂದು ಯೂನಿಟ್‌ಗೆ ರೂ. 4.75 ಗಳಂತೆ ಮಾಡಿದ್ದಾರೆ. ನನ್ನ ಬಳಿ ಆದೇಶವಿದೆ. ಅದರಲ್ಲಿ ಈ ರೀತಿ ಇದೆ. "*Maharashtra State Electricity Distribution Company Ltd is allowed to enter into EPA/PPA (Power Purchase Agreement) through MOU with the new bagasse-based co-generation plants upto the capacity 1350 MWs at the tariff of Rs. 4.75 per unit for a tenure of twenty years.*" ನನ್ನ ಬಳಿ ಇರುವ ಆದೇಶವನ್ನು ತಮಗೆ ಕಳುಹಿಸಿಕೊಡುತ್ತೇನೆ.

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಹಾರಾಷ್ಟ್ರ ರಾಜ್ಯದಲ್ಲಿ ರೂ.6.80 ಪೈಸೆಗೆ ಒಂದು ಯೂನಿಟ್‌ನ್ನು ಖರೀದಿ ಮಾಡಿದ್ದಾರೆ.

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ಅಲ್ಲಿ ಮೊದಲು ಒಂದು ಯೂನಿಟ್‌ಗೆ ರೂ. 6.50 ಪೈಸೆ ಇತ್ತು. ನಮ್ಮಲ್ಲಿ ಎಲ್ಲಿದೆ? ರೂ. 3.00, ರೂ. 3.50 ಇದೆ. ಅಲ್ಲಿ ಇಪ್ಪತ್ತು ವರ್ಷಗಳವರೆಗೆ fix ಮಾಡಿದ್ದಾರೆ ಈ ರಾಜ್ಯದಲ್ಲಿ ಮೂರು ವರ್ಷಕ್ಕೆ ಬದಲಾವಣೆಯಾಗುತ್ತದೆ. ಮೂರು ವರ್ಷಗಳಾದ ಮೇಲೆ ಜೀವ ಜಲ್ ಎನ್ನುತ್ತದೆ. ಮೂರು ವರ್ಷಗಳು ಮುಗಿದ ಕೂಡಲೇ ಮೂರವರೆ ರೂಪಾಯಿಗಳಿದ್ದನ್ನು ಎರಡೂವರೆ ರೂಪಾಯಿಗಳಿಗೆ ಮಾಡುತ್ತೀರಿ.

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ**:- ಇದನ್ನು renewal ಮಾಡುವಾಗ ಒಂದು ವರ್ಷ gap ಉಳಿಯುತ್ತದೆ.

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ಇದನ್ನು renewal ಒಂದು ವರ್ಷ gap ಆಗಿ ಉಳಿಯುತ್ತದೆ. ನಾನು ಬೇರೆ ವಿದೇಶವನ್ನು ಇಲ್ಲಿ compare ಮಾಡುವುದಿಲ್ಲ. ನಮ್ಮ ರಾಜ್ಯದ ಪಕ್ಕದಲ್ಲಿರುವ ಮಹಾರಾಷ್ಟ್ರ ರಾಜ್ಯದವರು ಸಕ್ಕರೆ ಕಾರ್ಖಾನೆಯನ್ನು ಉಳಿಸಬೇಕು. ಇದನ್ನು viable ಮಾಡಬೇಕು. ಸಕ್ಕರೆ ಕಾರ್ಖಾನೆಯವರು ಉತ್ಪಾದನೆ ಮಾಡುವಂತಹದ್ದಕ್ಕೆ ವಿದ್ಯುತ್‌ಗೆ ಹೆಚ್ಚಿನ ಬೆಲೆ ಕೊಡಬೇಕು. ಅದರ ಮುಖಾಂತರ ರೈತರಿಗೆ ಸಹಾಯವಾಗಲಿ ಎಂದು ಮಹಾರಾಷ್ಟ್ರ ರಾಜ್ಯ ಸರ್ಕಾರದವರು ಏನೊಂದು ಮನಸ್ಸು ಮಾಡಿದ್ದಾರೋ, ಅದೇ ರೀತಿ ಇಲ್ಲಿ ಮಾಡಬೇಕು. ರೂ. 6.50 ಇತ್ತು ಹೋಗಲಿ, atleast Rs. 4.75, ಇದನ್ನಾದರೂ ಒಂದು ಇಪ್ಪತ್ತು ವರ್ಷಗಳವರೆಗೆ ಮಾಡಿದರೆ, ಸಕ್ಕರೆ ಕಾರ್ಖಾನೆಗಳು ಉಳಿಯುತ್ತವೆ. ಅದಕ್ಕೆ ನಾನು ತಮ್ಮ ಮುಖಾಂತರ ಸರ್ಕಾರಕ್ಕೆ ಕಳಕಳಿಯಿಂದ ಮನವಿ ಮಾಡಿಕೊಳ್ಳುವುದೇನೆಂದರೆ, ಉತ್ತರ ಕರ್ನಾಟಕದಲ್ಲಿರುವಂತಹ 63 ಸಕ್ಕರೆ ಕಾರ್ಖಾನೆಗಳು, ಅಷ್ಟೇ ಅಲ್ಲ, ದಕ್ಷಿಣ ಕರ್ನಾಟಕ ಯಾವುದಾದರೂ ಸಕ್ಕರೆ ಕಾರ್ಖಾನೆಗಳು ಇವತ್ತಿನ ಈ ಒಂದು ಪರಿಸ್ಥಿತಿಯನ್ನು ಅನುಭವಿಸುತ್ತಿದೆ. ಸರ್ಕಾರ ಎಲ್ಲಾ ಸಕ್ಕರೆ ಕಾರ್ಖಾನೆಗಳಿಗೆ ಮಧ್ಯಸ್ಥಿಕೆ ವಹಿಸಬೇಕು. ಇವತ್ತು ಹೊಸದಾಗಿ ಮಾನ್ಯ ಸಕ್ಕರೆ ಸಚಿವರು ಯುವಕರಿದ್ದಾರೆ. ಪ್ರಥಮ ಬಾರಿಗೆ ಸಚಿವರಾಗಿದ್ದಾರೆ. ಅವರು enthusiastic ಆಗಿ ಕೆಲಸ ಮಾಡುತ್ತಾರೆಂಬ ನನಗೆ ವಿಶ್ವಾಸವಿದೆ. ಮಾನ್ಯ ಸಹಕಾರಿ ಸಚಿವರು ಬಹಳಷ್ಟು ಅನುಭವ ಹೊಂದಿದಂತಹವರು. ಸಹಕಾರಿ ಕ್ಷೇತ್ರದಿಂದ ಬಂದಂತಹವರು. ಮಾನ್ಯ ಸಚಿವರು ಅದಕ್ಕೆ intervene ಆಗಿ, ಸಕ್ಕರೆ

ಕಾರ್ಖಾನೆಗಳ ಪ್ರತಿನಿಧಿಗಳು ಮತ್ತು ಬ್ಯಾಂಕಿನ ಪ್ರತಿನಿಧಿಗಳನ್ನು ಈ ಒಂದು ಸಭೆಗೆ ಕರೆದು, re-structuring ಮಾಡಿ, rate of interest ಅನ್ನು ಕಡಿಮೆ ಮಾಡಿ. ಈ ಸಕ್ಕರೆ ಕಾರ್ಖಾನೆಗಳನ್ನು viable ಮಾಡುವುದರ ಜೊತೆಗೆ ತಮ್ಮ ಸರ್ಕಾರ ದಿಟ್ಟವಾದಂತಹ ನಿರ್ಧಾರವನ್ನು ಕೈಗೊಳ್ಳಬೇಕು. ಮಹಾರಾಷ್ಟ್ರ ರಾಜ್ಯದಲ್ಲಿ ಇವತ್ತೊಂದು ಆದೇಶ ಮಾಡಿದ್ದಾರೆ. ಮಹಾರಾಷ್ಟ್ರ ಸಕ್ಕರೆ ಕಾರ್ಖಾನೆಯವರು ಎಷ್ಟೊಂದು ವಿದ್ಯುತ್ ಉತ್ಪಾದನೆ ಮಾಡುತ್ತಾರೆ. ಅದನ್ನು first priority ಮೇಲೆ purchase ಮಾಡಿ. ಅವರು ಕೊಟ್ಟಂತಹ ಬೆಲೆಯನ್ನು ತಾವು ಬೆಲೆಯನ್ನು ಕೊಟ್ಟರೆ, ನಿಶ್ಚಿತವಾದಂತಹ ಕರ್ನಾಟಕ ರಾಜ್ಯದಲ್ಲಿರುವ ಸಕ್ಕರೆ ಕಾರ್ಖಾನೆಗಳೆಲ್ಲವೂ ಉಳಿಯುತ್ತವೆ. ಅದರ ಮುಖಾಂತರ ಬ್ಯಾಂಕ್‌ಗಳು ಮತ್ತು ಕೋಟ್ಯಂತರ ರೈತರನ್ನು ಇವತ್ತು ಉಳಿಸುವುದಕ್ಕೆ ಸಾಧ್ಯವಿದೆ. ದಯವಿಟ್ಟು ಸರ್ಕಾರ ಆ ಕೆಲಸವನ್ನು ಮಾಡಲಿ ಎಂದು ನಾನು ತಮ್ಮ ಮುಖಾಂತರ ಮನವಿಯನ್ನು ಮಾಡಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ. ನಮಸ್ಕಾರ.

**ಸಭಾಪತಿಯವರು:-** ಮಾನ್ಯ ನಿರಾಣಿ ಹಣಮಂತ್ ರುದ್ರಪ್ಪನವರೇ, ತಾವು ಚಿಕ್ಕದಾಗಿ ಮಾತನಾಡಿ.

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ(ಪದವೀಧರರ ಕ್ಷೇತ್ರ)**:- ಮಾನ್ಯ ಸಭಾಪತಿಯವರೇ, ಆಯಿತು. ನನಗೆ ಮಾತನಾಡಲು ಅವಕಾಶಕ್ಕಾಗಿ ಧನ್ಯವಾದಗಳನ್ನರ್ಪಿಸುತ್ತೇನೆ. ನಿಯಮ 330 ರ ಮೇರೆಗೆ ಹಿರಿಯ ಸದಸ್ಯರಾದ ಸನ್ಮಾನ್ಯ ಎಸ್.ಆರ್.ಪಾಟೀಲ್‌ರವರು ತಂದಿರುವಂತಹ ವಿಷಯಕ್ಕೆ ನಾನು ನನ್ನ ಬೆಂಬಲವನ್ನು ವ್ಯಕ್ತಪಡಿಸುತ್ತೇನೆ. ಇವತ್ತು ರಾಜ್ಯದ burning ವಿಷಯವನ್ನು ಎತ್ತಿದ್ದಾರೆ. ಹಿರಿಯ ಶಾಸಕರು ಹೌದು. ಸಹಕಾರಿ ಧುರೀಣರು, ಸಕ್ಕರೆ ಕಾರ್ಖಾನೆಗಳ ಉದ್ದಿಮೆದಾರರು ಹೌದು. ಅವರು ಹೇಳಿರುವಂತಹ ವಿಚಾರಗಳೆಲ್ಲವೂ ಕೂಡ ನಾನು ಇದಕ್ಕೆ ಬೆಂಬಲವನ್ನು ವ್ಯಕ್ತಪಡಿಸುತ್ತಿದ್ದೇನೆ. ನಿಜವಾಗಿಯೂ ಕೂಡ ಇವತ್ತಿನ ಸಕ್ಕರೆ ಕಾರ್ಖಾನೆಗಳ ಪರಿಸ್ಥಿತಿ ಯಾವ ರೀತಿಯಾಗಿದೆ ಎಂದರೆ, ಸಕ್ಕರೆ ಕಾರ್ಖಾನೆಗಳಿಂದ ರೈತರ ಅಭಿವೃದ್ಧಿಯಾಗಿರುವಂತಹದ್ದು. ಕೇವಲ ಬಾಗಲಕೋಟೆ ಜಿಲ್ಲೆಯೊಂದನ್ನೇ ಮಾತನಾಡುವುದಕ್ಕೆ ಹೋದರೆ, ಅಲ್ಲಿ 13 ಸಕ್ಕರೆ ಕಾರ್ಖಾನೆಗಳಿವೆ. ಆ 13 ಸಕ್ಕರೆ ಕಾರ್ಖಾನೆಗಳಲ್ಲಿ ಸುಮಾರು ಇಪ್ಪತ್ತು ಸಾವಿರ ಜನರು ಅಲ್ಲಿ ಖಾಯಂ ಹುದ್ದೆಯಲ್ಲಿದ್ದಾರೆ. ಆ 13 ಸಕ್ಕರೆ ಕಾರ್ಖಾನೆಗಳ ಸೇರಿ, ಒಂದು ದಿವಸಕ್ಕೆ ಒಂದು ಲಕ್ಷ ಟನ್ ಕಬ್ಬು crush ಮಾಡುವಂತಹ capacity ಇವತ್ತು ಇದೆ. ಒಂದು ಲಕ್ಷ ಟನ್ ಕಬ್ಬನ್ನು ಕಟಾವು ಮಾಡಿದರೆ, ಸುಮಾರು 1,50,000 ಗಳಷ್ಟು ಕೂಲಿ ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ. ಅಲ್ಲಿ ಸುಮಾರು ಐದಾರು ಸಾವಿರಗಳಷ್ಟು ಟ್ರ್ಯಾಕ್ಟರ್ ಲಾರಿಗಳು ಕೆಲಸ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡುತ್ತಿದೆ. ಇವೆಲ್ಲವನ್ನು ಸರಿದೂಗಿಸಿಕೊಂಡು ಹೋಗಬೇಕಾದರೆ, ಉದ್ಯೋಗ ಸೃಷ್ಟಿಯಾಗಬೇಕು. ಕೋಟ್ಯಂತರ ರೈತರು ಯೋಗ್ಯವಾದ ಬೆಳೆದಂತಹ ಕಬ್ಬಿಗೆ ಬೆಲೆ ಸಿಗಬೇಕೆಂದರೆ, ಸಕ್ಕರೆ ಕಾರ್ಖಾನೆಗಳು ಸುಸಜ್ಜಿತವಾಗಿ ನಡೆಯಬೇಕಾಗುತ್ತದೆ. ಸಕ್ಕರೆ ಕಾರ್ಖಾನೆಗಳು ಎಲ್ಲಿಯವರೆಗೆ ಸುಸಜ್ಜಿತವಾಗಿ ನಡೆಯುವುದಿಲ್ಲವೋ, ಅಲ್ಲಿಯವರೆಗೂ ರೈತರ ಬದುಕು ಅಸನಾಗುವುದಿಲ್ಲ. ರೈತರು ಈ ರಾಷ್ಟ್ರದ ಬೆನ್ನಲೆಬು ಎಂದು ಹೇಳುತ್ತಿದ್ದೇವೆ. ಬಿಜಾಪುರ, ಬಾಗಲಕೋಟೆ ಜಿಲ್ಲೆಗಳಲ್ಲಿರುವ ರೈತರು ಯಾರಾದರೂ ಸದೃಢರಾಗಿದ್ದರೆ, ಅದು ಕಬ್ಬು ಬೆಳೆಯನ್ನು ಬೆಳೆಯುವಂತಹ ರೈತ ಮಾತ್ರ.

(ಮುಂದು)

(959) 23.09.2021, 5.20, ಟಿಸಿಹೆಚ್-ಎಂಡಿ **(ಸಭಾಪತಿಯವರ ಉಪಸ್ಥಿತಿ)**

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಮುಂದು):-**

ಇವತ್ತಿನ ದಿವಸ ಕಬ್ಬನ್ನು ಹೊರತುಪಡಿಸಿ ಬೇರೆ ಬೆಳೆಯನ್ನು ಬೆಳೆಯತಕ್ಕಂಥ ರೈತ ತನ್ನ ಬದುಕನ್ನು ಆರ್ಥಿಕವಾಗಿ ಸಧೃಡಗೊಳಿಸುವುದಕ್ಕೆ ಸಾಧ್ಯವಾಗಿಲ್ಲ. ಇವತ್ತಿನ ದಿವಸ ಕಬ್ಬು ಒಂದು ವಾಣಿಜ್ಯ ಬೆಳೆಯಾಗಿ ಮಾರ್ಪಾಡಾಗಿದೆ. ಆ ನಿಟ್ಟಿನಲ್ಲಿ ಬಹಳಷ್ಟು ಜನರು ಇವತ್ತು ಕಬ್ಬನ್ನು ಬೆಳೆಯತಕ್ಕಂಥ ಕೆಲಸ ಮಾಡುತ್ತಿದ್ದಾರೆ. ಆ ಮುಖಾಂತರ ಉದ್ದಿಮೆಗಳು ಪ್ರಾರಂಭವಾಗಿವೆ. ಸಾಕಷ್ಟು ಉದ್ಯೋಗ ಸೃಷ್ಟಿಯಾಗಿದೆ. ಆರ್ಥಿಕ ವರಮಾನ ಹೆಚ್ಚಾಗಿದೆ. ಇವತ್ತಿನ ದಿವಸ ಬ್ಯಾಂಕ್‌ಗಳ ಮುಖಾಂತರ ಸಾಲ ಕೊಡತಕ್ಕಂಥ ವ್ಯವಸ್ಥೆ ಬಂದು, ಬ್ಯಾಂಕ್‌ಗಳು ಕೂಡ ಸಾಕಷ್ಟು ಸದೃಢತೆಯನ್ನು ಹೊಂದಿವೆ.

**ಸಭಾಪತಿಯವರು:-** ಮಾನ್ಯ ನಿರಾಣಿ ಹಣಮಂತ್ ರುದ್ರಪ್ಪ ನವರೇ, ಈಗ ಸರ್ಕಾರ ಏನು ಮಾಡಬೇಕು ಹೇಳಿ.

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ:-** ಮಾನ್ಯ ಸಭಾಪತಿಯವರೇ, ಆ ಕಾರ್ಖಾನೆಗಳು ಉಳಿಯಬೇಕಾದರೆ, Co-operative Bank ನಿಂದ ಕಾರ್ಖಾನೆಗಳಿಗೆ ಕೊಟ್ಟಿರತಕ್ಕಂಥ ಸಾಲವನ್ನು ಏನು ಕೊಟ್ಟಿದ್ದಾರೆ, ಆ ಸಾಲದ ಮೇಲಿನ ಬಡ್ಡಿ ದರ ರಾಷ್ಟ್ರೀಕೃತ ಬ್ಯಾಂಕ್‌ನವರು ವಿಧಿಸುತ್ತಿರುವ ಬಡ್ಡಿಗೆ ಸಮನಾಗಿ ಬರಬೇಕು. ಇವತ್ತಿನ ದಿವಸ Nationalized Bank ನವರು ಶೇ.೧೦ ಅಥವಾ ಶೇ.೧೧ ಬಡ್ಡಿ ದರದಲ್ಲಿ ಸಾಲವನ್ನು ಕೊಡುತ್ತಿದ್ದಾರೆ. ಇವತ್ತಿನ ದಿವಸ ಅದೇ Co-operative Bank ನಲ್ಲಿ ಶೇ.೧೪ ರಿಂದ ಶೇ.೧೬ ಬಡ್ಡಿ ದರದಲ್ಲಿ ಸಕ್ಕರೆ ಕಾರ್ಖಾನೆಗಳು ಸಾಲವನ್ನು ಪಡೆಯುತ್ತಿವೆ. ಹಾಗಾಗಿ, ಸಕ್ಕರೆ ಕಾರ್ಖಾನೆಗಳ ಆರ್ಥಿಕ ಸ್ಥಿತಿ

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಚಿಂತಾಜನಕವಾಗುತ್ತಾ ಬಂದಿದೆ. ಇದರ ಜೊತೆಗೆ ೧೦ ವರ್ಷಗಳವರೆಗೆ instalment and repayment ವ್ಯವಸ್ಥೆ ಇದೆ. ಇಲ್ಲಿ Co-operative Bank ನಲ್ಲಿ ಕೇವಲ ಐದು ವರ್ಷ ಇರುವುದರಿಂದ, ಬಡ್ಡಿ ಮತ್ತು ಗಂಟನ್ನು ತುಂಬುವುದಕ್ಕೆ ಸಕ್ಕರೆ ಕಾರ್ಖಾನೆಗಳು ಸಾಕಷ್ಟು ಹಾನಿಯನ್ನು ಅನುಭವಿಸತಕ್ಕಂಥ ಪ್ರಸಂಗ ಬಂದಿದೆ. ಒಂದು ವೇಳೆ ಏನಾದರೂ ಸಕ್ಕರೆ ಕಾರ್ಖಾನೆಗಳು ಬಂದ್ ಆದಲ್ಲಿ NCLT (National Company Law Tribunal) ಮುಖಾಂತರ ಆ ಕಾರ್ಖಾನೆಗಳು ಹಾನಿಯನ್ನು ಅನುಭವಿಸಿದರೆ ಆಗ ಗಂಟು ಇಲ್ಲ, ಬಡ್ಡಿಯೂ ಕೂಡ ಇಲ್ಲ. ಬ್ಯಾಂಕ್‌ಗೆ ಶೂನ್ಯ ಪ್ರಸಂಗ ಬರುತ್ತದೆ. ಅದಕ್ಕಾಗಿ ಬ್ಯಾಂಕ್‌ಗಳು ಕೂಡ ಉಳಿಯಬೇಕು. ಸಕ್ಕರೆ ಕಾರ್ಖಾನೆಗಳು ಕೂಡ ಬೆಳೆಯಬೇಕು. ರೈತರ ಅಭಿವೃದ್ಧಿಯೂ ಆಗಬೇಕೆಂದರೆ ಇವತ್ತಿನ ದಿವಸ ಸಹಕಾರಿ ಬ್ಯಾಂಕ್‌ಗಳ ಮುಖಾಂತರ ಕೊಡತಕ್ಕಂಥ ಸಾಲದ ಬಡ್ಡಿದರ ಏನಿದೆ ಅದು ಕಡಿಮೆಯಾಗಬೇಕು. Instalment ಈಗ ಏನು ೫ ವರ್ಷ ಇದೆ. ಅದನ್ನು ೧೦ ವರ್ಷಗಳವರೆಗೂ ಕೂಡ ವಿಸ್ತರಣೆ ಆಗಬೇಕು ಎಂದು ಮಾನ್ಯ ಸಚಿವರಿಗೆ ನಾನು ಕೇಳಿಕೊಳ್ಳುತ್ತಿದ್ದೇನೆ. ನಿಜವಾಗಿಯೂ ಈ ಹಿಂದೆ ಸಕ್ಕರೆ ಕಾರ್ಖಾನೆಗಳು 180 ದಿವಸಗಳು crushing ಮಾಡುತ್ತಿದ್ದವು. ನಾವೇ ವರ್ಷದಲ್ಲಿ ೬ ರಿಂದ ೭ ತಿಂಗಳವರೆಗೂ ಕೂಡ ನಾವೇ ಪ್ರಾರಂಭದಲ್ಲಿ crushing ಮಾಡಿದ್ದೇವೆ. ಆದರೆ ಇವತ್ತಿನ ದಿವಸ ಪರಿಸ್ಥಿತಿ ಎಲ್ಲಿಗೆ ಬಂದಿದೆ ಎಂದರೆ, ಕೇವಲ ೧೦೦ ರಿಂದ ೧೧೦ ದಿವಸಗಳು crushing ಮಾಡುತ್ತಿದ್ದಾರೆ. Investment ಮಾಡಿರತಕಂಥ ಸಕ್ಕರೆ ಕಾರ್ಖಾನೆಗಳು ೩೬೫ ದಿವಸಗಳ ಪೈಕಿ, ೧೦೦ ರಿಂದ ೧೧೦ ದಿವಸಗಳ ಮಾತ್ರ running ಇವೆ. ಇನ್ನುಳಿದ ದಿವಸಗಳಿಗೂ ಕೂಡ ನೌಕರರಿಗೆ ಸಂಬಳ ಕೊಡಬೇಕು. Administrative expenses ಕೂಡ ಇರುತ್ತದೆ. ಇವೆಲ್ಲವನ್ನೂ ಸರಿದೂಗಿಸಿಕೊಂಡು ಇವತ್ತಿನ ದಿವಸ ಸಕ್ಕರೆ ಕಾರ್ಖಾನೆಗಳು ಸುಸಜ್ಜಿತವಾಗಿ ಉಳಿಯಬೇಕಾದರೆ ಅದಕ್ಕೆ ಆರ್ಥಿಕ ಭದ್ರತೆ ಕೂಡ ಬೇಕಾಗಿದೆ. ಇವತ್ತು ಸಕ್ಕರೆ ಕಾರ್ಖಾನೆಗಳಲ್ಲಿ ಕೇವಲ ಸಕ್ಕರೆಯನ್ನು ಉತ್ಪಾದನೆ ಮಾಡಿದರೆ ಸಾಲುವುದಿಲ್ಲ ಎನ್ನತಕ್ಕಂಥ ಸಂದರ್ಭದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕೂಡ ಕಾರ್ಖಾನೆಗಳಿಗೆ ಉತ್ತೇಜನ ಕೊಟ್ಟರು. ನೀವು cogeneration ಹಾಕಿಕೊಂಡು ಸಹ ಘಟಕವನ್ನು ಪ್ರಾರಂಭ ಮಾಡಿ ಎಂದು ಹೇಳಿದಾಗ ಎಲ್ಲಾ ಕಾರ್ಖಾನೆಯವರು ಕೂಡ ತಮ್ಮ captive consumption ಗಿಂತ ಹೆಚ್ಚಿನ ಪ್ರಮಾಣದಲ್ಲಿ ವಿದ್ಯುತ್ ಉತ್ಪಾದನೆ ಮಾಡುವುದಕ್ಕೆ cogeneration ನ್ನು ಪ್ರಾರಂಭ ಮಾಡಿದರು. ಇವತ್ತಿನ ದಿವಸ ಅದನ್ನು ಪ್ರಾರಂಭ ಮಾಡಿರತಕ್ಕಂಥ ಪ್ರತಿಯೊಂದು ಕಾರ್ಖಾನೆಯಲ್ಲಿ ಇವತ್ತಿನ ದಿವಸ ೨೦ ಮೆಗಾವ್ಯಾಟ್ ವಿದ್ಯುತ್ ನಮ್ಮ ಫ್ಯಾಕ್ಟರಿಗೆ ಬೇಕಾದರೆ, ನಾವು ಇವತ್ತಿನ ದಿವಸ ೧೦೦ ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆ ಮಾಡುತ್ತಿದ್ದೇವೆ. ಸರ್ಕಾರ ಅದನ್ನು ಖರೀದಿ ಮಾಡುತ್ತದೆ ಎನ್ನತಕ್ಕಂಥ ಹಿನ್ನೆಲೆಯಲ್ಲಿ ನಾವೆಲ್ಲಾ ಸಕ್ಕರೆ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಾರ್ಖಾನೆಯವರು ವಿದ್ಯುತ್ ಘಟಕಗಳನ್ನು ದೊಡ್ಡ ಪ್ರಮಾಣದಲ್ಲಿ ಹಾಕಿಕೊಂಡಿದ್ದೇವೆ. ಕಳೆದ ಮೂರ್ನಾಲ್ಕು ವರ್ಷಗಳನ್ನು ಗಮನಿಸಿದಾಗ ಈ ವಿದ್ಯುತ್‌ನ್ನು ಖರೀದಿ ಮಾಡುವುದಕ್ಕೆ ಸರ್ಕಾರ ಮುಂದೆ ಬರುತ್ತಿಲ್ಲ. ಕಳೆದ ನಾಲ್ಕು ವರ್ಷಗಳಿಂದ ಹೊಸ ಕಾರ್ಖಾನೆಗಳಿಗೆ PPA (Power Purchase Agreement) ಆಗುತ್ತಿಲ್ಲ. ಇವತ್ತಿನ ದಿವಸ ನಾಲ್ಕು ವರ್ಷಗಳವರೆಗೆ ನಾವು ಉತ್ಪಾದನೆ ಮಾಡಿದಂಥ ವಿದ್ಯುತ್ waste ಆಗಿ ಹೋಗುತ್ತಿದೆ. ಇವತ್ತಿನ ದಿವಸ ಅದು ಬಳಕೆಯಾಗದೇ ಹಾಳಾಗುತ್ತಿರುವುದರಿಂದ, ಕೇವಲ ಆ ಕಾರ್ಖಾನೆಗಷ್ಟೇ ಅಲ್ಲ; ಅದೊಂದು national waste ಎನ್ನುವುದನ್ನು ನಾವು ಗಮನಿಸಬೇಕಾಗುತ್ತದೆ. ಆ ಹಿನ್ನೆಲೆಯಲ್ಲಿ Power Purchase Agreement ನ್ನು ಮೊದಲು ಕರ್ನಾಟಕದಲ್ಲೂ ಕೂಡ ೬.೫೦ ರೂಪಾಯಿ ಮಾಡಿದ್ದಾರೆ, ೪.೮೦ ರೂಪಾಯಿ ಮಾಡಿದ್ದಾರೆ. ಮಾನ್ಯ ಸಭಾಪತಿಯವರೇ, ಇವತ್ತಿನ ದಿವಸ ಆ ವಿದ್ಯುತ್‌ನ್ನು ೨.೪೦ ರೂಪಾಯಿಗೂ ಕೂಡ ಖರೀದಿ ಮಾಡುತ್ತಿಲ್ಲ. ಮಹಾರಾಷ್ಟ್ರದಲ್ಲಿ ಮಾಡಿರತಕ್ಕಂಥ ಮಾದರಿಯಲ್ಲಿ ಕರ್ನಾಟಕ ಸರ್ಕಾರವು ಕೂಡ ಎಲ್ಲಾ ಸಕ್ಕರೆ ಕಾರ್ಖಾನೆಗಳಲ್ಲಿ ಏನು power purchase ಮಾಡುವುದಕ್ಕೆ ಮೊದಲ ಆದ್ಯತೆಯನ್ನು ಕೊಡಬೇಕು. ಇವತ್ತಿನ ದಿವಸ ೯ ರೂಪಾಯಿಗಳು ಮತ್ತು ೮ ರೂಪಾಯಿಗಳಿಗೆ ಕೂಡ ಸೋಲಾರ್ ಪವರ್‌ನ್ನು ಸರ್ಕಾರ ಖರೀದಿ ಮಾಡುತ್ತಿದೆ. ಇವತ್ತಿನ ದಿವಸ ಈ Solar Power Plant ಒಂದು ಕುಟುಂಬದ ಆಸ್ತಿಯಾಗಿ ಬೆಳೆಯುತ್ತಿದೆ. ಆದರೆ ಇವತ್ತಿನ ದಿವಸ ಸಾವಿರಾರು ರೈತರ ಬೆನ್ನೆಲು ಆಗಿ ಸಕ್ಕರೆ ಕಾರ್ಖಾನೆಗಳು ಕೆಲಸ ಮಾಡುತ್ತಿವೆ. ಆ ಸಕ್ಕರೆ ಕಾರ್ಖಾನೆಯಲ್ಲಿ ಉತ್ಪಾದನೆಯಾಗಿರತಕ್ಕಂಥ ವಿದ್ಯುತ್‌ನ್ನು ಒಂದು ಉತ್ತಮವಾಗಿರತಕ್ಕಂಥ ಬೆಲೆಗೆ ಖರೀದಿಸರಕ್ಕಂಥ ಕೆಲಸ ಸರ್ಕಾರ ಶೀಘ್ರದಲ್ಲೇ ಮಾಡಬೇಕೆಂಬ ವಿಚಾರವನ್ನು ತಮ್ಮ ಮೂಲಕ ಸರ್ಕಾರದ ಗಮನ ಸೆಳೆಯುವುದಕ್ಕೆ ಬಯಸುತ್ತಿದ್ದೇನೆ. ಅದರ ಜೊತೆಗೆ ಸನ್ಮಾನ್ಯ ಹಿರಿಯ ಸಹಕಾರ ಸಚಿವರು ಕೂಡ ಇದ್ದಾರೆ. Co-operative sector ನಲ್ಲಿರತಕ್ಕಂಥ ವ್ಯವಸ್ಥೆಗೆ ಬ್ಯಾಂಕಿಗೆ ಸಹಾಯ ಮತ್ತು ಸಹಕಾರವನ್ನು ಮಾಡುವುದರ ಜೊತೆಗೆ ಕಡಿಮೆ ಬಡ್ಡಿ ದರದಲ್ಲಿ ಸಾಲ ಕೊಡುವಂಥ ವ್ಯವಸ್ಥೆ ಆಗಬೇಕು. Instalments ಕೂಡ ಹೆಚ್ಚಾಗಿ ಕಾರ್ಖಾನೆಗಳು ಸದೃಢವಾಗುವುದರ ಜೊತೆಗೆ ರೈತರ ಬದುಕಿಗೆ ಆಸರೆಯಾಗಬೇಕು ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳಿ, ಅನೇಕ ವಿಚಾರಗಳನ್ನು ನಮ್ಮ ಹಿರಿಯ ಶಾಸಕರು ಮಾತನಾಡಿದ್ದಾರೆ. ನಾನು ಇನ್ನೂ ಹೆಚ್ಚಿಗೆ ಮಾತನಾಡಬೇಕೆಂದು ಆಸೆಯನ್ನಿಟ್ಟುಕೊಂಡಿದ್ದೆನು. ಸಮಯದ ಅಭಾವದಿಂದ ಹೆಚ್ಚು ಮಾತನಾಡುವುದಕ್ಕೆ ಆಗುತ್ತಿಲ್ಲ. ಆದರೂ ಕೂಡ ಇವತ್ತಿನ ದಿವಸ ಮಹಾರಾಷ್ಟ್ರದ ಮಾದರಿಯಲ್ಲಿ ವಿದ್ಯುತ್ ಖರೀದಿ ಮಾಡತಕ್ಕಂಥ ನಿಟ್ಟಿನಲ್ಲಿ ಸರ್ಕಾರ ಮುಂದೆ ಬರಬೇಕು. ಸಕ್ಕರೆ ಕಾರ್ಖಾನೆಗಳು

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸದೃಢವಾದರೆ ಇವತ್ತಿನ ದಿವಸ ರೈತ two-wheeler ನಲ್ಲಿ ಓಡಾಡುತ್ತಿದ್ದಾನೆಂದರೆ, four-wheeler ನಲ್ಲಿ ಓಡಾಡುವಂಥ ಶಕ್ತಿ ಬರಬೇಕಾದರೆ ಅದು ವಾಣಿಜ್ಯ ಬೆಳೆಯಾದ ಕಬ್ಬಿನಿಂದ ಮಾತ್ರ ಎಂದು ಈ ಸಂದರ್ಭದಲ್ಲಿ ಹೇಳಿ ಅವಕಾಶ ಕೊಟ್ಟಿದ್ದಕ್ಕಾಗಿ ನನ್ನ ಮಾತುಗಳನ್ನು ಮುಗಿಸುತ್ತಿದ್ದೇನೆ.

**ಶ್ರೀ ಆರ್.ಬಿ.ತಿಮ್ಮಾಪೂರ (ವಿಧಾನ ಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಖಾಸಗಿ ಸಕ್ಕರೆ ಕಾರ್ಖಾನೆಗಳ ಬಗ್ಗೆ ನಮ್ಮ ಹಿರಿಯ ಸದಸ್ಯರಾದಂಥ ಮಾನ್ಯ ಎಸ್.ಆರ್.ಪಾಟೀಲ್, ಮಾನ್ಯ ನಿರಾಣಿ ಹಣಮಂತ್ ರುದ್ರಪ್ಪನವರು ಮಾತನಾಡಿದ್ದಾರೆ. ಸಹಕಾರ ಕ್ಷೇತ್ರದಲ್ಲಿ ಒಟ್ಟು ೨೯ ಸಕ್ಕರೆ ಕಾರ್ಖಾನೆಗಳು ಪ್ರಾರಂಭವಾಗಿದ್ದವು. ಆದರೆ ಈಗ ೧೨ ಕಾರ್ಖಾನೆಗಳು ಮಾತ್ರ ಇದೆ. ಅವುಗಳು ಈಗಾಗಲೇ ನಷ್ಟದಲ್ಲಿವೆ. ಈಗಾಗಲೇ ಸರ್ಕಾರ ೮ ಸಕ್ಕರೆ ಕಾರ್ಖಾನೆಗಳನ್ನು lease ಗೆ ಕೊಟ್ಟಿದ್ದಾರೆ. ೫ ಸಕ್ಕರೆ ಕಾರ್ಖಾನೆಗಳು liquidation ನಲ್ಲಿವೆ. ೪ ಸಕ್ಕರೆ ಕಾರ್ಖಾನೆಗಳು defunct ಆಗಿವೆ. ಈ ಸಹಕಾರಿ ಕ್ಷೇತ್ರದಲ್ಲಿ ನಾನು ಒಂದು ವಿಷಯವನ್ನು ಪ್ರಸ್ತಾಪ ಮಾಡಲೇಬೇಕಾಗಿದೆ. ತಾವು ನಮ್ಮ ಭಾಗದಿಂದ ಬಂದಿರುವುದರಿಂದ, ಈ ಸಹಕಾರಿ ಸಕ್ಕರೆ ಕಾರ್ಖಾನೆಗಳನ್ನು ಯಾವ ರೀತಿ ಪ್ರಾರಂಭ ಮಾಡಿದ್ದರು ಎಂದು ಗೊತ್ತಿದೆ. ನಮ್ಮ ಜಿಲ್ಲೆಯಲ್ಲಿರತಕ್ಕಂಥದ್ದು ಒಂದು. ಬಿಜಾಪುರ ಜಿಲ್ಲೆಯಲ್ಲಿ ಎರಡನೆಯದ್ದು. ರನ್ನ ಸಕ್ಕರೆ ಕಾರ್ಖಾನೆಗಳ ಇತಿಹಾಸವನ್ನು ಸ್ವಲ್ಪ ಹೇಳಿಬಿಡುತ್ತೇನೆ. ಶ್ರೀ ಎಸ್.ಟಿ ಪಾಟೀಲ್‌ರವರು ಎಂ.ಪಿ ಇದ್ದರು. ಈಗ ಅವರು ಮಾಜಿ ಎಂ.ಪಿ. ಆಗಿದ್ದಾರೆ. ಅವರು ಈ ಸಹಕಾರಿ ರಂಗದಲ್ಲಿ ಸಕ್ಕರೆ ಕಾರ್ಖಾನೆ ಮಾಡಬೇಕು. ರೈತರ ಫ್ಯಾಕ್ಟರಿ ಇರಬೇಕು. ಆಗ ನಾನು repeat ಮಾಡುವುದಿಲ್ಲ. ರೈತರಿಗೆ excess sugar-cane ಇತ್ತು, ಆದರೆ ಕಾರ್ಖಾನೆ ನಡೆಸತಕ್ಕಂಥ ಶಕ್ತಿ ಇರಲಿಲ್ಲ. ಆಗ ಅವರು ೧೯೮೨ರಲ್ಲಿ ಸಂಸ್ಥೆಯನ್ನು ನೋಂದಾಯಿಸುತ್ತಾರೆ. ತದನಂತರ ಆಗ ಮಾನ್ಯ ವಿರೇಂದ್ರ ಪಾಟೀಲ್‌ರವರು ಮುಖ್ಯಮಂತ್ರಿಯಾಗಿದ್ದರು. ಮಾನ್ಯ ಪಾಟೀಲ್‌ರವರೇ, ಏಕ್ರೀ ನೀವು ಮಾಡುತ್ತೀರಿ. ಸಹಕಾರಿ ರಂಗ ದಿವಾಳಿಯಾಗುತ್ತದೆ. ಎಲ್ಲಾ ಆಡಳಿತ ಮಂಡಳಿಯವರು ತಿಂದು ಹಾಕುತ್ತಾರೆ. ನೀವು ಅದನ್ನು ಮಾಡಬೇಡಿ. ನೀವು ಬಲಿಷ್ಠರಿದ್ದೀರಿ, ನೀವು ಕಟ್ಟುವುದಕ್ಕೆ ಶಕ್ತಿ ಇದೆ ನೀವು ಮಾಡಿ ಎಂದು ಹೇಳಿದಾಗ್ಯೂ ಕೂಡ ಮಾನ್ಯ ಶ್ರೀ ಎಸ್.ಟಿ ಪಾಟೀಲ್‌ರವರು ಏನು ಹೇಳುತ್ತಾರೆಂದರೆ, ನಾನು ರೈತರ ಪರವಾಗಿ ಕಟ್ಟುತ್ತೇನೆಂದು ೧೯೮೨ರಲ್ಲಿ ಆ ಕಾರ್ಖಾನೆಯನ್ನು ನೋಂದಾಯಿಸುತ್ತಾರೆ. 1994ರಲ್ಲಿ ರೂ.1.26 ಕೋಟಿಗಳು ಶೇರು ಕೂಡಿಸುತ್ತಾರೆ. ದಿನಾಂಕ ೨೩.೦೩.೧೯೯೪ ರಲ್ಲಿ license ಸಿಗುತ್ತದೆ. ನಾನು ಆ ಸಂದರ್ಭದಲ್ಲಿ ಶಾಸಕನಾಗಿದ್ದೆನು. ಮಾನ್ಯ ವೀರಪ್ಪ ಮೊಯಿಲಿ ರವರು ಮುಖ್ಯಮಂತ್ರಿಗಳಾಗಿದ್ದರು. ಆಗ ೨೦೦ ಎಕರೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸರ್ಕಾರದ ಜಮೀನನನ್ನು ೨೪ ಲಕ್ಷಕ್ಕೆ ಆ ಸಕ್ಕರೆ ಫ್ಯಾಕ್ಟರಿಗೆ ಕೊಟ್ಟರು. ತದನಂತರ ೧೯೯೫ ರಲ್ಲಿ ಶ್ರೀ ಕಲುತಿ ಎನ್ನತಕ್ಕಂಥವರು ಅಲ್ಲಿಗೆ ಆಡಳಿತಾಧಿಕಾರಿಯಾಗಿ ಬರುತ್ತಾರೆ. ೧೯೯೮ ರಲ್ಲಿ ಆ ಸಕ್ಕರೆ ಕಾರ್ಖಾನೆ ಪ್ರಾರಂಭಿಸಲಾಯಿತು. ತದನಂತರ ಆಡಳಿತ ಮಂಡಳಿಯಲ್ಲಿ ನಾನು ಕೂಡ ಡೈರೆಕ್ಟರ್ ಎನ್ನತಕ್ಕಂಥದ್ದು ಪ್ರಾರಂಭವಾಯಿತು. ಅದಕ್ಕೆ ೧೯೯೯ ರಲ್ಲಿ ಪ್ರಥಮ ಅಧ್ಯಕ್ಷರು ಈಗಿನ ನೀರಾವರಿ ಸಚಿವರು, ಅವೊತ್ತು ರನ್ನ ಸಹಕಾರ ಸಕ್ಕರೆ ಕಾರ್ಖಾನೆಯಲ್ಲಿ ಅಧ್ಯಕ್ಷರಾಗಿದ್ದರು. ಮೊದಲ ವರ್ಷ ರೂ.೧.೨೦ ಕೋಟಿಗಳು ಹಾನಿ ಯಾಗಲು ಪ್ರಾರಂಭವಾಯಿತು. ಎರಡನೇ ವರ್ಷ ರೂ. ೩ ಕೋಟಿಗಳು ಹಾನಿ ಆಯಿತು. ಮೂರನೇ ಸೀಜನ್‌ಗೆ ೧೪.೪೩ ಕೋಟಿಗಳು ಹಾನಿಯಾಯಿತು. ಸಹಕಾರಿ ಸಕ್ಕರೆ ಕಾರ್ಖಾನೆ ಕಟ್ಟಿದ್ದು ಕೇವಲ ರೂ.೪೨ ಕೋಟಿಗಳು. ಮೂರನೇ ಸೀಜನ್‌ಗೆ ೧೪.೪೩ ಕೋಟಿ ಹಾನಿಯಾಯಿತು. ಇದನ್ನು ಆಡಿಟ್‌ನವರು ಹೇಳುತ್ತಾರೆ. ಹಾಗಾಗಿ, ಆಡಳಿತ ಮಂಡಳಿಯಲ್ಲಿ ಶ್ರೀ ಎಂ.ಗೋವಿಂದ ಕಾರಜೋಳ, ಶ್ರೀ ಆರ್.ಎಸ್.ತಳೇವಾಡ, ಶ್ರೀ ಕರೇಹೊನ್ನೂರ್ ಹೀಗೆಯೇ ೧೭ ಮಂದಿ ನಿರ್ದೇಶಕರು ಇದ್ದರು. ಮಾನ್ಯ ಸಭಾಪತಿಯವರೇ, ಈ ಹಾನಿ ಅನುಭವಿಸತಕ್ಕಂಥದ್ದು ಯಾವಾಗ ಪ್ರಾರಂಭವಾಗುತ್ತದೆಂದರೆ, ೩ ವರ್ಷಕ್ಕೆ ರೂ.೧೪ ಕೋಟಿಗಳು loss ಆಯಿತು. ನಾನು ಸಹಕಾರಿ ಸಚಿವರಲ್ಲಿ ವಿನಂತಿ ಮಾಡುವುದೇನೆಂದರೆ, ಲಾಸ್ ಆಡಿಟ್ ರಿಪೋರ್ಟ್‌ನಲ್ಲಿ ಎಲ್ಲಾ ಮಾಹಿತಿ ಸಿಗುತ್ತದೆ. ಸಾಲ ಮತ್ತು ಲಾಸ್ ಆಗಿದ್ದರ ಬಗ್ಗೆ ಪತ್ರಿಕೆಗಳಲ್ಲಿ ಮತ್ತೊಂದರಲ್ಲಿ ಬಂದಿದ್ದು, ಈ loss ನ್ನು ಮೊದಲೇ ತಡೆಗಟ್ಟಿದ್ದರೆ ಇವತ್ತಿನ ದಿವಸ ರೂ.೩೦೦ ಕೋಟಿಗಳು ಸಾಲ ಮತ್ತು ರೂ.೧೭೦ ಕೋಟಿ ಹಾನಿಯಾಗಿದ್ದು ತಪ್ಪುತ್ತಿತ್ತು.

**(ಮುಂದು...)**

**(960)23.9.2021/5.30/ಎಂ.ಎಂ-ಎ.ಕೆ** (ಸಭಾಪತಿಯವರ ಉಪಸ್ಥಿತಿ)

**ಶ್ರೀ ಆರ್.ಬಿ. ತಿಮ್ಮಾಪೂರ [ಮುಂದು]:-**

ಈ ನಷ್ಟವನ್ನು ಆಗಲೇ ತಡೆಗಟ್ಟಿದ್ದರೆ 300 ಕೋಟಿ ರೂಪಾಯಿಗಳ ಸಾಲ ಮತ್ತು 170 ಕೋಟಿ ರೂಪಾಯಿಗಳಿಗಿಂತ ಹೆಚ್ಚಿನ ಹಾನಿ, ಇದನ್ನು ಇಷ್ಟು ವರ್ಷ ಬಿಡುವ ಬದಲು ಪ್ರತಿ ವರ್ಷ ಆಡಿಟ್ ಆದ ತಕ್ಷಣ ಸಹಕಾರಿ ರಂಗದಲ್ಲಿಒಂದು ಸಂಸ್ಥೆ ತೆಗೆದುಕೊಂಡು ಅದನ್ನು ಸ್ಟಡಿ ಮಾಡಿ ಏತಕ್ಕೆ ಈ ರೀತಿ ಆಗಿದೆ, ಮುಂದೆ ಅದಕ್ಕೆ ಅವಕಾಶ ಕೊಡಬೇಕೋ, ಬಿಡಬೇಕೋ; ಯಾವ ರೀತಿ ಮಾಡಬೇಕೆನ್ನುವುದನ್ನು ತಾವು ಯೋಚನೆ ಮಾಡಬೇಕು. ನಾನು ಮಂತ್ರಿಯಾಗಿದ್ದಾಗ ಹೀಗಾಗಿದೆ ಎಂದು ತಕ್ಷಣವೇ ಇದಕ್ಕೆ supersede ಮಾಡಿಸಿದ್ದೆ. ಸೆಕ್ಷನ್ 68 ರ ಅಡಿಯಲ್ಲಿ ತನಿಖೆ ಎಂದರು, ಆ ವೇಳೆಗೆ ಅಲ್ಲಿದ್ದವರು ಹೋಗಿ ಯಾರೋ D.R. (Deputy

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

Registrar) ಬಂದರು. ಅನಂತರ ನಮ್ಮ ಸರ್ಕಾರ ಬದಲಾವಣೆಯಾಯಿತು. ಆ ಡಿ.ಆರ್. ಗೆ ಈಗ ನಮ್ಮ ಸರ್ಕಾರ ಇದೆ, ಇದನ್ನು ಮುಚ್ಚಿ ಹಾಕಬೇಕೆಂದು ಹೇಳಿದರು ಅದನ್ನು ಮುಚ್ಚಲಾಯಿತು. ಹೀಗೆ ಒಂದು ಕಡೆ ನಮ್ಮ ಸಹಕಾರಿ ರಂಗದಲ್ಲಿ ಸಹಕಾರಿ ಸಕ್ಕರೆ ಕಾರ್ಖಾನೆ ಏತಕ್ಕೆ ಬರಬೇಕಾಗಿತ್ತು ಎಂದರೆ, ರೈತಾಪಿ ವರ್ಗಕ್ಕೆ ಸಹಾಯವಾಗಬೇಕಾಗಿತ್ತು. ಮಾನ್ಯ ಎಸ್.ಆರ್. ಪಾಟೀಲರು ಮತ್ತು ಮಾನ್ಯ ನಿರಾಣಿಯವರು, ಬಹಳ ಜನರು ಮಾಡಿದ್ದಾರೆ. ಅಂತಹ ಕಡೆ ಪೈಪೋಟಿ ಮಾಡುವುದಕ್ಕೆ ಸಹಕಾರ ರಂಗದಲ್ಲಿ ಒಂದು ಸಕ್ಕರೆ ಕಾರ್ಖಾನೆ ಇಲ್ಲ. ನಾವು ಸಹಕಾರಿ ರಂಗದಲ್ಲಿ ಹೆಚ್ಚಿನ ಬೆಲೆ ಕೊಡುತ್ತೇವೆ, ಅವರ ಜೊತೆ ಸ್ಪರ್ಧೆ ಮಾಡುತ್ತೇವೆ ಎನ್ನುವಂತಹ ರೀತಿಯಲ್ಲಿ ಬೆಳೆಯಬೇಕಾದ ಸಹಕಾರಿ ರಂಗ, ಆ Director ಪರಿಸ್ಥಿತಿ ಹೀಗಾದರೆ ಹೇಗೆ? 14 ಕೋಟಿ 43 ಲಕ್ಷ ಆದ ನಂತರ ನೀರಾವರಿ ಸಚಿವರು ಆ ಅಧ್ಯಕ್ಷನನ್ನು automatically ತೆಗೆಯುತ್ತಾರೆ. ಆದರೆ 17 ವರ್ಷ ಆ ಡ್ರೈವರ್‌ನ ಸಂಬಳ ಮಾತ್ರ ಫ್ಯಾಕ್ಟರಿಯಲ್ಲಿಯೇ ಆಗುತ್ತದೆ. ತಮಗೆ ಬೇಕಾದರೆ ನನ್ನಲ್ಲಿರುವ record ಕೊಡುತ್ತೇನೆ. ಇದು 17 ವರ್ಷ. ಆ ಡ್ರೈವರ್ ಪಗಾರ ಮಾತ್ರ ಎಲ್ಲಿ ಆಗುತ್ತದೆ? ಅಗಲಿ. ಮುಂದೆ ಅವರು ನೀರಾವರಿ ಸಚಿವರಾಗುತ್ತಾರೆ. ನೀರಾವರಿ ಸಚಿವರಾದರೆ ಸರ್ಕಾರದಿಂದಲೂ ನಾಲ್ಕು ವರ್ಷ ಪಗಾರ, ಅಲ್ಲಿ, ಸಹಕಾರಿ ಸಕ್ಕರೆ ಕಾರ್ಖಾನೆಯಲ್ಲಿ 17 ವರ್ಷ ಪಗಾರ. ಹೀಗಾದರೆ ಯಾವ ಸಹಕಾರಿ ಫ್ಯಾಕ್ಟರಿ ಉಳಿಯುತ್ತದೆ? ಯಾವುದಾದರೂ ಉಳಿಯುವುದಕ್ಕೆ ಸಾಧ್ಯವೇ? ಹೀಗೆ ಈ ಸ್ಥಿತಿಗೆ ಬಂದು 58 ದಿವಸವಾಯಿತು. ಕಾರ್ಮಿಕರು, ಹೆಂಡತಿ, ಮಕ್ಕಳೆಲ್ಲರೂ ತಹಸೀಲ್ದಾರ್ ಕಛೇರಿಯಲ್ಲಿ ನಿಂತಿದ್ದಾರೆ. ಕೆಲವರು ಅಲ್ಲಿಯೇ 15, 20 ದಿವಸ ಒಂದು ತಿಂಗಳು ಊಟ ಕೊಟ್ಟರು. ಯಾರೂ ಕೊಡಲಾರದ್ದಕ್ಕೆ ಏನು ಮಾಡುತ್ತಾರೆ? 10 ಜನರು ಅಲ್ಲಿ ಕುಳಿತುಕೊಳ್ಳುತ್ತಾರೆ, 10 ಜನರು ಒಂದು ದಿವಸಕ್ಕೆ ಎರಡು ಊರಿನಲ್ಲಿ ಭಿಕ್ಷೆ ಬೇಡುತ್ತಾರೆ. 'ಸ್ವಾಮಿ, ನಮ್ಮ ಬದುಕು ಹೀಗಾಗಿದೆ, ಸಹಕಾರಿ ರಂಗದವರು ಫ್ಯಾಕ್ಟರಿಯನ್ನು ಮುಚ್ಚಿ ಹಾಕಿದ್ದಾರೆ, ನಮಗೆ ಭಿಕ್ಷೆ ಕೊಡಿ, ಅನ್ನ ಕೊಡಿ' ಎಂದು ಪ್ರತಿ ದಿವಸ ಎರಡು ಊರಿಗೆ ಹೋಗಿ ಭಿಕ್ಷೆ ಬೇಡಿ ಅಲ್ಲಿ ಸತ್ಯಾಗ್ರಹ ಮಾಡುತ್ತಾರೆ. ಈ ರೀತಿ ಸಹಕಾರಿ ಸಕ್ಕರೆ ಕಾರ್ಖಾನೆಗಳಾದರೆ ಅವರ ಪರಿಸ್ಥಿತಿ ಏನು? ಇದು ಸರ್ಕಾರದಲ್ಲಿ ಪಗಾರ ತೆಗೆದುಕೊಂಡ ಡ್ರೈವರ್ ಹೆಸರು ಬೇಡ. ಈ ಸಹಕಾರಿ ಸಕ್ಕರೆ ಕಾರ್ಖಾನೆ, ತದನಂತರ ಇಲ್ಲಿ ಇವರೇ ಹೆಚ್ಚು ಕಡಿಮೆ 20 ವರ್ಷ ಒಬ್ಬರು ಅಧ್ಯಕ್ಷರು, ಇನ್ನು ಎರಡೂವರೆ ವರ್ಷ ಉಪಾಧ್ಯಕ್ಷರು. ಇವತ್ತು ಏನು 170 ಕೋಟಿ ಹಾನಿಯಾಗಿದೆ, ಇಂತಹ ಸಹಕಾರಿ ರಂಗಗಳನ್ನು ಆದಷ್ಟು ಬೇಗ ತಕ್ಷಣವೇ ಹಿಡಿದು ಅವುಗಳನ್ನು ಗಮನಿಸಬೇಕು ಎಂದು ಹೇಳಿ ನಾನು ಹೆಚ್ಚಾಗಿ ಮಾತನಾಡುವುದಕ್ಕೆ ಹೋಗುವುದಿಲ್ಲ. ಇವತ್ತು ನೌಕರರು ಏನು ಧರಣಿ ಮಾಡುತ್ತಿದ್ದಾರೆ, ಅವರು ಎಷ್ಟು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬೇಡಿಕೆಗಳನ್ನಿಟ್ಟಿದ್ದಾರೆ, ಏನಾದರೂ ಮಾಡಿ ಕಾರ್ಖಾನೆ ಪ್ರಾರಂಭ ಮಾಡಿ. ನಮಗೆ ಹೊಟ್ಟೆಗೆ ಊಟ ಕೊಡುವಂತಹ ಕೆಲಸ ಆಗಬೇಕು. ಕಾರ್ಮಿಕರ, ರೈತರ ಹೆಸರಿನಲ್ಲಿರುವಂತಹ ಬ್ಯಾಂಕ್ ಆಫ್ ಇಂಡಿಯಾದಿಂದ ಏನು ಸಾಲವನ್ನು ಪಡೆದಿದ್ದಾರೆ ಅದನ್ನು ಮರುಪಾವತಿ ಮಾಡಬೇಕು, ಕಾರ್ಮಿಕರಿಗೆ ಆರನೇ ವೇತನ ಜಾರಿಯಾಗಬೇಕು. ಪೂರ್ಣ ಪ್ರಮಾಣದ ವೇತನವನ್ನು 20ರವರೆಗೆ ಕೊಡಬೇಕು, ಕಾರ್ಮಿಕರಿಗೆ ರೂ. 06,18,00,824/- ಹೆಚ್ಚುವರಿ ಅವಧಿ ಹಣ ಏನು ಕೊಡಬೇಕಾಗಿದೆ ಅದನ್ನು ಕೊಡಬೇಕು. ಹೀಗೆ ಹಲವಾರು ಬೇಡಿಕೆಗಳನ್ನಿಟ್ಟುಕೊಂಡು 58 ದಿವಸಗಳಿಂದ ಸರ್ಕಾರ; ನಿಮಗೆ ಕೈ ಮುಗಿಯುತ್ತೇನೆ. ಕಾರ್ಮಿಕರು ಭಿಕ್ಷೆ ಬೇಡುತ್ತಿರುತ್ತಾರೆ. ಸರ್ಕಾರಕ್ಕೆ ನಾಚಿಕೆ ಅನಿಸಬೇಕಲ್ಲವೇ? At least ಕಾರ್ಮಿಕರನ್ನು ರಕ್ಷಣೆ ಮಾಡಬೇಕು, ಎರಡು ಊರಿನಿಂದ ಭಿಕ್ಷೆ ಬೇಡುತ್ತಿದ್ದಾರೆ ಎಂಬ ಕರುಣೆ ನಿಮಗೆ ಬರದಿದ್ದರೆ ನಾವು ಯಾರ ಹತ್ತಿರ ಹೋಗಬೇಕು?

**ಸಭಾಪತಿಯವರು**:- ಮಾನ್ಯ ತಿಮ್ಮಾಪೂರರವರೇ, ತಮ್ಮ ಭಾಷಣ 04 ಗಂಟೆ 15 ನಿಮಿಷಕ್ಕೆ ಪ್ರಾರಂಭವಾಗಿದೆ.

**ಶ್ರೀ ಆರ್.ಬಿ. ತಿಮ್ಮಾಪೂರ:-** ಮಾನ್ಯ ಸಭಾಪತಿಯವರೇ, ಎರಡೇ ನಿಮಿಷದಲ್ಲಿ ಮುಗಿಸುತ್ತೇನೆ. ದಯಮಾಡಿ ಸಕ್ಕರೆ ಕಾರ್ಖಾನೆಯನ್ನು ಪುನಃ ಪ್ರಾರಂಭ ಮಾಡಲು ಸರ್ಕಾರ ಅದಕ್ಕೆ ಸಹಾಯ ಮಾಡಬೇಕು ಎಂದು ವಿನಂತಿ ಮಾಡುತ್ತೇನೆ.

**ಸಭಾಪತಿಯವರು**:- ಈಗ ಮಾನ್ಯ ಬಸವರಾಜ ಪಾಟೀಲ್ ಇಟಗಿಯವರು ಎರಡೇ ನಿಮಿಷ ಮಾತನಾಡಲಿ. ಇವರೇ ಕೊನೆ. ಇನ್ನು ಯಾರೂ ಇಲ್ಲ. ಇನ್ಯಾರಿಗೂ ಅವಕಾಶ ಕೊಡುವುದಿಲ್ಲ. ಮಾನ್ಯ ಬಸವರಾಜ ಇಟಗಿಯವರೇ, ಬೇಗ ಮುಗಿಸಿ.

**ಶ್ರೀ ಬಸವರಾಜ ಪಾಟೀಲ್ ಇಟಗಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಸಹಕಾರಿ ಉದ್ಯಮಿಗಳಿಗೆ, ರೈತರಿಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ತಮಗೆ ಧನ್ಯವಾದಗಳು. ನಾನು ಹೇಳಿದ್ದನ್ನೇ ಹೇಳುವುದಿಲ್ಲ. ಎರಡು ನಿಮಿಷದಲ್ಲಿ ಮುಗಿಸುತ್ತೇನೆ. ಅವರು ಕಾರ್ಖಾನೆಗಳ ಬಗ್ಗೆ ಎಲ್ಲಾ ಹೇಳಿದರು. ಅದನ್ನು ರಿಪೀಟ್ ಮಾಡುವುದಿಲ್ಲ. ರೈತರ ವಿಷಯ ಬಂದಾಗ ಏತಕ್ಕೆ ಕಬ್ಬು ಬೆಳೆಗೆ ಹೋಗುತ್ತಾರೆ ಎನ್ನುವುದು ಬಹಳ ಪ್ರಮುಖವಾದುದು. ನಮ್ಮ ಉತ್ತರ ಕರ್ನಾಟಕದಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆ ಬಂದ ಮೇಲೆ ಮೆಣಸಿನಕಾಯಿ, ಹತ್ತಿ, ತೊಗರಿ, ಸೂರ್ಯಕಾಂತಿ ಮತ್ತು ಕಬ್ಬು ಬೆಳೆಯುವುದನ್ನು ನೋಡುತ್ತಿದ್ದೇವೆ. ಮೆಣಸಿನಕಾಯಿ ಬೆಳೆಯಿಂದ ಎಕರೆಗೆ 70 ರಿಂದ 80 ಸಾವಿರ ರೂಪಾಯಿ ಬರುತ್ತದೆ, ರೂ. 40,000/-

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಖರ್ಚಾಗುತ್ತದೆ, ಇನ್ನುಳಿದ 40,000 ರೂಪಾಯಿ ಮಾತ್ರ ರೈತನಿಗೆ ಉಳಿಯುತ್ತದೆ. ಇವೆಲ್ಲಾ ಏನೆಂದರೆ, best yield ಬಂದಾಗ. ಹತ್ತಿ ಬೆಳೆ ಎಕರೆಗೆ ಸುಮಾರು 15 ರಿಂದ 18 ಕ್ವಿಂಟಾಲ್ ಬರುತ್ತದೆ, ಒಂದು ಎಕರೆಗೆ 70 ರಿಂದ 90 ಸಾವಿರ ರೂಪಾಯಿ ಬರುತ್ತದೆ. ಅದರಲ್ಲಿ ಅಂದಾಜು ರೂ. 30,000/- ಖರ್ಚಾಗುತ್ತದೆ. ಮತ್ತೆ ರೂ. 40,000/- ಉಳಿಯುತ್ತದೆ. ಕಬ್ಬು ಬೆಳೆ ಏನೆಂದರೆ, ನನಗೆ ತಿಳಿದ ಮಟ್ಟಿಗೆ ಇಲ್ಲಿ ಸಾಕಷ್ಟು ಜನರು ಕಾರ್ಖಾನೆ ಹೊಂದಿದ್ದಾರೆ ಮತ್ತು ರೈತರೂ ಇದ್ದಾರೆ. ಹೆಚ್ಚೆಂದರೆ ಕನಿಷ್ಟ ಒಂದು ಲಕ್ಷ ರೂಪಾಯಿ ಬರುತ್ತದೆ. ಎಕರೆಗೆ ಸರಿಸುಮಾರು 50 ರಿಂದ 80 ಟನ್ ಬೆಳೆ ಬರುತ್ತದೆ. ಬಾಗಲಕೋಟ, ಬಿಜಾಪುರ, ಬೆಳಗಾವಿ ಕಡೆಗಳಲ್ಲೆಲ್ಲಾ 50 ಟನ್ ಮೇಲೆ ಬೆಳೆ ತೆಗೆಯುತ್ತಾರೆ. ಸುಮಾರು 01 ಲಕ್ಷ 20 ಸಾವಿರದಿಂದ 01 ಲಕ್ಷ 40 ಸಾವಿರ ರೂಪಾಯಿ ಪ್ರತಿ ಎಕರೆಗೆ ಬರುತ್ತದೆ. ಅದರಲ್ಲಿ ಅವರಿಗೆ ಖರ್ಚಾಗುವುದು ರೂ. 35 ರಿಂದ 40 ಸಾವಿರ ರೂಪಾಯಿಗಳು. ಒಂದು ಲಕ್ಷ ರೂಪಾಯಿ ನಿವ್ವಳ ಆದಾಯ ಬರುತ್ತದೆ. ಈ ಒಂದು ಪರಿಸ್ಥಿತಿ ಇದೆ. ಸಾಕಷ್ಟು ವೆಚ್ಚ ಹೆಚ್ಚಾಗಿರುವುದರಿಂದ ಕಬ್ಬು ಬೆಳೆಗೆ ಹೋದರೆ 50 ರಿಂದ 60 ಸಾವಿರ ರೂಪಾಯಿಗಳು ಉಳಿಯುತ್ತದೆ ಎಂಬುದು ಕೂಡ ರೈತರಿಗೆ ಇದೆ. ಆ ಉದ್ದೇಶದಿಂದ ಒಂದು ಸಲ ನಾನೇನು ಮಾಡಿದೆ ಎಂದರೆ, ನಮ್ಮಲ್ಲಿ Core Green Sugars ಎಂದು factory ಬಂದಿದೆ. ಭೀಮಾ ಮತ್ತು ಕೃಷ್ಣಾ ನದಿ ಪ್ರದೇಶದ ಮಧ್ಯದಲ್ಲಿ ಆಂಧ್ರಪ್ರದೇಶದವರು ಎನ್. ಆರ್.ಐ.,ನವರು ಸುಮಾರು 400 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ Core Green Sugars ಎಂದು factory ಮಾಡಿದರು. ಅದು ಸ್ವಲ್ಪ ತಡವಾಗಿ ಪ್ರಾರಂಭವಾಯಿತು. ನಾನು ಅಷ್ಟೊತ್ತಿಗೆ ಹಾಕಿಬಿಟ್ಟಿದ್ದೆ. ನನಗೆ ಪ್ರತಿ ಎಕರೆಗೆ 70 ರಿಂದ 75 ಟನ್ ಬೆಳೆ ಬಂದಿತ್ತು, ಬಹಳ ಒಳ್ಳೆಯ yield ಬಂದಿತ್ತು. ಆದರೆ ಆ ಫ್ಯಾಕ್ಟರಿ ನಾನು ಬೆಳೆದ ಕಬ್ಬನ್ನು ತೆಗೆದುಕೊಳ್ಳಲಿಲ್ಲ. ಆಮೇಲೆ ಬಿಜಾಪುರದ ಬಳಿ ನಾಗನಹಳ್ಳಿ ಫ್ಯಾಕ್ಟರಿ ಎಂದು ಇದೆ. ಅಲ್ಲಿಗೆ ಹೋದರೆ ಅಲ್ಲಿಯೂ ತೆಗೆದುಕೊಳ್ಳಲಿಲ್ಲ. ಯಾವ ಫ್ಯಾಕ್ಟರಿಯೂ ತೆಗೆದುಕೊಳ್ಳಲಿಲ್ಲ. ಕೊನೆಗೆ 30-40 ಸಾವಿರ ರೂಪಾಯಿಗಳನ್ನು ಕೊಟ್ಟು ಆ ಬೆಳೆಗಳನ್ನು ಹೊಲದಲ್ಲಿಯೇ ಸುಟ್ಟು ಹಾಕಿದೆವು. ಜಾತ್ರೆಗೆ ಉಚಿತವಾಗಿ ತೆಗೆದುಕೊಂಡು ಮಾರಾಟ ಮಾಡಿ ಎಂದರೆ ಜಾತ್ರೆಗೂ ತೆಗೆದುಕೊಳ್ಳಲಿಲ್ಲ. ಕಬ್ಬು ಗಾಣದವರಿಗೆ ಅದನ್ನು ತೆಗೆದುಕೊಂಡು ಹೋಗಿ ಕಬ್ಬಿನ ಹಾಲಿನ ಜ್ಯೂಸ್ ಅನ್ನು ಮಾರುವಂತೆ ಹೇಳಿದೆವು, ಅವರೂ ತೆಗೆದುಕೊಳ್ಳಲಿಲ್ಲ. ಈ ಪರಿಸ್ಥಿತಿ ಇದೆ. ರೈತರಿಗೆ ಕಬ್ಬು ಬೆಳೆಯುವ ಉದ್ದೇಶ ಇದೆ. ನಾವು ನೋಡುತ್ತಿರುವಂತೆ ಈಗ ಇದ್ದಂತಹ ಸಕ್ಕರೆ ಕಾರ್ಖಾನೆಗಳಲ್ಲಿ ರೈತರು ಪ್ರತಿ ದಿನವೂ ಪೇಮೆಂಟ್ ಬಂದಿಲ್ಲವೆಂದು ಧರಣಿ ಮಾಡುತ್ತಿದ್ದಾರೆ. ಕಬ್ಬು ನಾಟಿ ಮಾಡಿದ ಮೇಲೆ ಒಂದು ವರ್ಷ 3-4 ತಿಂಗಳಾದ ಮೇಲೆ ಅಂದರೆ ಸುಮಾರು 15ರಿಂದ 16 ತಿಂಗಳ ನಂತರ ಕಟಾವಿಗೆ ಬರುತ್ತದೆ. ಅದು ಮೊದಲ ಬೆಳೆ. ಕಟಾವಿಗೆ ಬಂದ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮೇಲೆ ಬಿಲ್ ಪೇಮೆಂಟ್ ಆಗುವ ಹೊತ್ತಿಗೆ ಒಂದು ವರ್ಷ, 6-7 ತಿಂಗಳಾಗುತ್ತದೆ. ಆದರೂ ರೈತರಿಗೆ ಪೂರ್ತಿ ಪೇಮೆಂಟ್ ಆಗುವುದಿಲ್ಲ. Partwise payment ಆಗುತ್ತದೆ. ಈ ರೀತಿಯ ಪರಿಸ್ಥಿತಿ ಇದೆ. ಇವತ್ತು ಏತಕ್ಕೆ ಸಹಕಾರಿ ಸಕ್ಕರೆ ಕಾರ್ಖಾನೆಗಳು defunct ಆಗುತ್ತಿವೆ ಎಂದರೆ ಮೊದಲನೆಯದಾಗಿ, mismanagement of administration ಕಾರಣವಾಗುತ್ತದೆ. ಆ ಆಡಳಿತ ಮಂಡಳಿ ಏನಿರುತ್ತದೆ ಅದರಲ್ಲಿ ಒಟ್ಟು ಶೇ. 90ರಷ್ಟು mismanagement ಇರುತ್ತದೆ. Mismanagement ಎಂದರೆ, ಅಧ್ಯಕ್ಷರು, ಅತಿಥಿ ಗೃಹಗಳು ಇದರಲ್ಲಿಯೇ ಹೋಗುತ್ತವೆ. Concentration ಇರುವುದಿಲ್ಲ. ಇಲ್ಲಿ ಪ್ರಮುಖವಾದುದು ಏನೆಂದರೆ Cane Development Officers ಮತ್ತು ಏರಿಯಾ. ಅವರು promote ಮಾಡುವುದೇ ಇಲ್ಲ. ನಮ್ಮಲ್ಲಿ ಎಲ್ಲಾ ರೈತರ ಬಳಿ ಸಹಕಾರಿ ರಂಗದಲ್ಲಿ ಸದಸ್ಯತ್ವ, ಎಲ್ಲವನ್ನೂ ಮಾಡಿಕೊಳ್ಳುತ್ತಾರೆ. ಮೊದಲ ಕೆಲಸವೇನೆಂದರೆ, ಈ ವರ್ಷ ಇಷ್ಟು ಕಬ್ಬನ್ನು ಈ ಪ್ರದೇಶದಲ್ಲಿ ತೆಗೆದುಕೊಳ್ಳಬೇಕೆಂದು ನಿರ್ದಿಷ್ಟವಾಗಿ ಮಾಡಬೇಕಲ್ಲವೇ, ಅವರು ಅದನ್ನು ಮಾಡುವುದೇ ಇಲ್ಲ. ಅದನ್ನು ಆಮೇಲೆ ನೋಡೋಣವೆಂದು ಪಕ್ಕಕ್ಕಿಡುತ್ತಾರೆ. ಆಮೇಲೆ ಮೊದಲ ವರ್ಷ ಒಂದು ಕೋಟಿ ರೂಪಾಯಿ ಬಂತು, ಎರಡನೇ ವರ್ಷ ನಾಲ್ಕು ಕೋಟಿ ರೂಪಾಯಿ ಬಂತು. ಇದೇನೆಂದರೆ mismanagement. ಸರಿಯಾದ technical staff ಇಡುವುದಿಲ್ಲ ಮತ್ತು ಸರಿಯಾದ ಮಾಹಿತಿಯನ್ನು ಕೊಡುವುದಿಲ್ಲ. ಆಮೇಲೆ ಯಾವ variety ಹಾಕಬೇಕೆಂಬುದೂ ಮುಖ್ಯ. ಇವರಿಗೆಲ್ಲಾ ಅನುಭವವಾಗಿದೆ. Variety ಎಲ್ಲಾ ಗೊತ್ತು. ಹೊಸದಾಗಿ ಸಕ್ಕರೆ ಕಾರ್ಖಾನೆ ಮಾಡಿ limited ಆಗಿ 60-70 ಹಳ್ಳಿಗಳನ್ನು ಆರಿಸಿದಾಗ ಇವೆಲ್ಲಾ ತಂತ್ರಜ್ಞಾನವನ್ನು ಪೂರ್ತಿ ಮಾಡಿ ಸರಿ ಮಾಡಿದಾಗ ಮಾತ್ರ ಅದು management ಮಾಡುವುದಕ್ಕೆ ಬರುತ್ತದೆ. ಆಮೇಲೆ ಸಹಕಾರಿ ಸಕ್ಕರೆ ಕಾರ್ಖಾನೆಗಳೇನಾಗಿವೆ ಎಂದರೆ, ಏನಾದರೂ ನಷ್ಟವಾದರೆ ಸರ್ಕಾರ ಕೊಡುತ್ತದೆ ಎನ್ನುವ ಲೆಕ್ಕ. ಸಹಕಾರ ಸಚಿವರಾದರೆ ಪ್ರತಿ ವರ್ಷ audit ಅನ್ನು ನಿಮ್ಮ Registrar ಮತ್ತು ಅಧಿಕಾರಿಗಳು ಏತಕ್ಕೆ ನೋಡುವುದಿಲ್ಲ? ಆ ಸಕ್ಕರೆ ಕಾರ್ಖಾನೆ ಸರಿಯಾಗಿ ನಡೆಯುತ್ತಿದೆಯೋ ಇಲ್ಲವೋ ಎಂಬುದನ್ನು ತಪಾಸಣೆ ಮಾಡಿ ಎಷ್ಟು ಲಾಭ ಮಾಡುತ್ತಿದ್ದಾರೆ, ಏನು ಪರಿಸ್ಥಿತಿ ಇದೆ ಎಂಬುದನ್ನು ಪರಿಶೀಲಿಸಬೇಕಲ್ಲವೆ? ಏಕೆಂದರೆ, ಸದಸ್ಯರ huge money involve ಆಗಿರುತ್ತದೆ. ಬಹುತೇಕ ಅಲ್ಲಿ ರೈತರೇ ಸದಸ್ಯರಾಗಿರುತ್ತಾರೆ. ಅವರ involvement ಇರುತ್ತದೆ ಮತ್ತು ಅವರ ಬದುಕೂ ಮುಖ್ಯವಾಗಿರುತ್ತದೆ. ಕಾರ್ಖಾನೆ ಬಂದ್ ಆದರೆ ಆ ರೈತ ಸತ್ತ ಹಾಗೆಯೇ. ಕಬ್ಬನ್ನು ತೆಗೆದುಕೊಂಡು ಹೋಗಿ ಎಲ್ಲಿಗೆ ಹಾಕಬೇಕು? ಹಿಂದೆ ನಮ್ಮಲ್ಲಿ ಉಳ್ಳಾಗಡ್ಡಿಯನ್ನು ಮಾರುವುದಕ್ಕೆ ಹೈದರಾಬಾದ್‌ಗೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಲಾರಿಯಲ್ಲಿ ಹೋಗುತ್ತಿದ್ದರು. ಅಲ್ಲಿಗೆ ಹೋದ ಮೇಲೆ ಅಲ್ಲಿ ಏನು ದರ ಇರುತ್ತದೆ, ಲಾರಿ ಬಾಡಿಗೆ ಕೊಡಲಾರದೇ ರಾತ್ರಿಯೇ ಓಡಿ ಬರುತ್ತಿದ್ದರು.

(ಮುಂದು)

(961) 23-09-2021/ 5-40/ ಕೆಹೆಚ್-ಎಕೆ **(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಬಸವರಾಜ ಪಾಟೀಲ್ ಇಟಗಿ (ಮುಂದು):-**

ಆ ರೀತಿಯ ಪರಿಸ್ಥಿತಿ ಈಗ ಕಬ್ಬು ಬೆಳೆಗೆ ಬಂದಿದೆ. ಫ್ಯಾಕ್ಟರಿ ತೆಗೆದುಕೊಳ್ಳಲಿಲ್ಲ, ಕಬ್ಬನ್ನು ಸರಿಯಾದ ಸಮಯದಲ್ಲಿ ಕಟಾವು ಮಾಡುವುದಿಲ್ಲ. ಇವೆಲ್ಲವೂ ಕೂಡ ಬಹಳಷ್ಟು defunct ಸಕ್ಕರೆ ಕಾರ್ಖಾನೆಗಳನ್ನು ಈ ಖಾಸಗಿ ಕಂಪನಿಯವರು ನಡೆಸುತ್ತಾರೆಯಲ್ಲವೇ, ಮಾನ್ಯ ನಿರಾಣಿ ಹಣಮಂತ್ ರುದ್ರಪ್ಪನವರು ಸಕ್ಕರೆ ಕಾರ್ಖಾನೆಯನ್ನು ನಡೆಸುತ್ತಾರೆ. ಅವರಿಗೆ ಕೊಡಿ first class ಆಗಿ ತುಂಬಾ ಚೆನ್ನಾಗಿ ಫ್ಯಾಕ್ಟರಿಗಳನ್ನು ನಡೆಸುತ್ತಾರೆ. ಸಮಯಕ್ಕೆ ಸರಿಯಾಗಿ ದುಡ್ಡನ್ನು ಕೊಡುತ್ತಾರೆ. ಏಕೆಂದರೆ, ಅಲ್ಲಿ ಒಬ್ಬ ಮಾಲೀಕ ಇರುತ್ತಾನೆ. ದಿನ ಮುಂಜಾನೆ ಆ ಕೆಲಸವನ್ನು ನೋಡುತ್ತಿರುತ್ತಾನೆ. ಇಲ್ಲಿ ಏನಾಗಿದೆ ಎಂದರೆ, ಹೋದರೆ ಹೋಗಲಿ ಬಿಡಪ್ಪಾ, ಎಲ್ಲರದೂ ಆದ ಹಾಗೆ ನಮ್ಮದು ಆಗುತ್ತದೆ. ಇದು ಯಾವ ಲೆಕ್ಕ ಎಂದು ಹೇಳುತ್ತಾರೆ. ಸರ್ಕಾರಕ್ಕೆ ನನ್ನ ವಿನಂತಿಯೇನೆಂದರೆ, ಮಾನ್ಯ ಎಸ್.ಆರ್.ಪಾಟೀಲ್‌ರವರು ಸಾಕಷ್ಟು ಸಹಕಾರಿ ಬ್ಯಾಂಕುಗಳು ದುಡ್ಡು ಕೊಟ್ಟಿವೆ ಎಂದು ಹೇಳಿದರು. ರೈತರು ಸಾಲ ಕೇಳುವುದಕ್ಕೆ ಹೋದರೆ ಸಹಕಾರಿ ಬ್ಯಾಂಕ್‌ಗಳು ಸಾಲ ಕೊಡುವುದಕ್ಕೆ ತಯಾರಿಲ್ಲ. ಸಕ್ಕರೆ ಕಾರ್ಖಾನೆಗಳಿಗಾದರೆ ಮೊದಲು ಡಿ.ಸಿ.ಸಿ., ಬ್ಯಾಂಕುನವರು 100-100 ಕೋಟಿ ರೂಪಾಯಿಗಳನ್ನು ಸಾಲವನ್ನು ಕೊಡುತ್ತಾರೆ. ನಮಗೆ ಕೇವಲ 50 ಸಾವಿರ ರೂಪಾಯಿಗಳನ್ನು ಕೊಟ್ಟಿರುತ್ತಾರೆ. Crop Loan ಹೆಚ್ಚು ಮಾಡಿ ಎಂದರೆ 75 ಸಾವಿರ ರೂಪಾಯಿ ಮಾಡಿ ರೊಕ್ಕ ಬಂದಿಲ್ಲ ಎಂದು ಹೇಳುತ್ತಾರೆ. ಅಪೆಕ್ಸ್ ಬ್ಯಾಂಕ್‌ನಿಂದ ಬಂದಿಲ್ಲ, ಅದಾಗಿದೆ, ಇದಾಗಿದೆ. ತಮ್ಮ ಸಾಲ ಮನ್ನಾ ಆಗಿದೆ. ಸಾಲ ಮನ್ನಾ ರೊಕ್ಕ ಬಂದಿಲ್ಲ ಎಂದು ಮೂರು-ಮೂರು ವರ್ಷ ಎಳೆಯುತ್ತಾರೆ. ಈ ರೀತಿಯ ಪರಿಸ್ಥಿತಿ ಇದೆ. ಅದಕ್ಕೆ ನಮ್ಮ ಸಹಕಾರ ಮಂತ್ರಿಗಳು efficient ಇದ್ದಾರೆ. ಅವರನ್ನು ಮೊದಲಿನಿಂದ ನೋಡಿದ್ದೇನೆ. ಯಾವುದೇ co-operative industries, not only sugar factories, ಎಲ್ಲದರಲ್ಲೂ ಕೂಡ ಹೀಗೆ ಆಗುತ್ತಿದೆ. ಅದರ ಮೇಲೆ ನಿಗಾ ಇಡುವಂತಹ ಕೆಲಸ ಆದ್ಯತೆ ಮೇಲೆ ತೆಗೆದುಕೊಳ್ಳಬೇಕೆಂದು ಹೇಳಿ ಅವಕಾಶ ಕೊಟ್ಟಿರುವುದಕ್ಕೆ ಧನ್ಯವಾದಗಳು. ಇನ್ನು ಹೇಳುವುದಕ್ಕೆ ಬಹಳಷ್ಟು ಇದೆ. ಮಾತನಾಡುವುದಕ್ಕೆ ಹೋದರೆ ಸಮಯದ ಅಭಾವ ಇದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ಮಾನ್ಯ ಬಸವರಾಜ ಪಾಟೀಲ್ ಇಟಗಿಯವರೇ, ಈಗ ಸಮಯ ಇಲ್ಲ.

**ಶ್ರೀ ಎಸ್.ಟಿ.ಸೋಮಶೇಖರ್ (ಸಹಕಾರ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಬಸವರಾಜ ಪಾಟೀಲ್ ಇಟಗಿಯವರೇ, ಧನ್ಯವಾದಗಳು. ಮಾನ್ಯ ಎಸ್.ಆರ್.ಪಾಟೀಲ್‌ರವರು, ಮಾನ್ಯ ಆರ್.ಬಿ.ತಿಮ್ಮಾಪೂರರವರು, ಮಾನ್ಯ ನಿರಾಣಿ ಹಣಮಂತ್ ರುದ್ರಪ್ಪನವರು ಮತ್ತು ಮಾನ್ಯ ಬಸವರಾಜ ಪಾಟೀಲ್ ಇಟಗಿಯವರು ಇದರ ಬಗ್ಗೆ ಸಂಕ್ಷಿಪ್ತವಾಗಿ ಮಾತನಾಡಿದ್ದಾರೆ. ಎಲ್ಲಾ ಮಾನ್ಯ ಸದಸ್ಯರುಗಳು ಮಾತನಾಡಿರುವಂತಹ ವಿಚಾರಕ್ಕೆ ಸಂಬಂಧಪಟ್ಟಂತೆ ಸಂಕ್ಷಿಪ್ತವಾಗಿ ಮಾಹಿತಿಯನ್ನು ಕೊಟ್ಟಿದ್ದೇವೆ. ಭಾರತ ದೇಶದಲ್ಲಿಯೇ ಕರ್ನಾಟಕ ರಾಜ್ಯ ಸಕ್ಕರೆ ಉತ್ಪಾದನೆಯಲ್ಲಿ 3ನೇ ಸ್ಥಾನದಲ್ಲಿ ಇದೆ. 2020-21ನೇ ಸಾಲಿನಲ್ಲಿ 441 ಲಕ್ಷ ಮೆಟ್ರಿಕ್ ಟನ್ ಕಬ್ಬು ಅರೆದು, 43 ಲಕ್ಷ ಮೆಟ್ರಿಕ್ ಟನ್ ಸಕ್ಕರೆ ಉತ್ಪಾದನೆಯಾಗಿದೆ. ಮಾನ್ಯ ಬಸವರಾಜ ಪಾಟೀಲ್ ಇಟಗಿಯವರು ಹೇಳಿದ ಹಾಗೆ ಅಪೆಕ್ಸ್ ಬ್ಯಾಂಕ್‌ನಲ್ಲಿ 50 ಸಾವಿರ ರೂಪಾಯಿಗಳು ಎಲ್ಲಿ, 25 ಲಕ್ಷ ರೂಪಾಯಿಗಳು ಸಾಲ ಕೊಡುವಂತಹದ್ದು ಎಲ್ಲಿ ಎಂದು ಹೇಳಿದರು. ಯಾರಾದರೊಬ್ಬ ರೈತ ಸರಿಯಾದ ಸಮಯಕ್ಕೆ ಸಾಲ ಕಟ್ಟಲಿಲ್ಲವೆಂದರೆ, ಅವನ ಮೇಲೆ ನ್ಯಾಯಾಲಯದಲ್ಲಿ ಮೊಕದ್ದಮೆ ಹಾಕುವಂತಹದ್ದು ಇದೆ. ಪೆನಾಲ್ಟಿ ಹಾಕುವಂತಹದ್ದು ಇದೆ, ಅವರ ಮನೆಗೆ ಡಂಗೂರ ಮಾಡುವಂತಹದ್ದು ಮಾಡುತ್ತಾರೆ. ಈ ಸಕ್ಕರೆ ಕಾರ್ಖಾನೆಗಳಿಗೆ 100 ರಿಂದ 250 ಕೋಟಿ ರೂಪಾಯಿಗಳಷ್ಟು ಸಾಲ ಕೊಟ್ಟಿದ್ದರೂ ಸಹ ಒಂದೇ ಒಂದು ನೋಟಿಸ್ ಕೊಡುವಂತಹದ್ದನ್ನು ನಾನು ಗಮನಿಸಿಲ್ಲ. ಒಬ್ಬ ರಾಜಕೀಯ ಪ್ರಮುಖರು ಸಕ್ಕರೆ ಕಾರ್ಖಾನೆಗಾಗಿ ಸುಮಾರು 250 ಕೋಟಿ ರೂಪಾಯಿಗಳನ್ನು ತೆಗೆದುಕೊಂಡಿದ್ದಾರೆ. ಅಪೆಕ್ಸ್ ಬ್ಯಾಂಕ್, ಕಾರವಾರ ಡಿ.ಸಿ.ಸಿ. ಬ್ಯಾಂಕ್, ಬೆಳಗಾವಿ ಡಿ.ಸಿ.ಸಿ. ಬ್ಯಾಂಕ್ ಈ ಎಲ್ಲಾ ಬ್ಯಾಂಕುಗಳಲ್ಲಿ ಸಾಲವನ್ನು ತೆಗೆದುಕೊಂಡಿದ್ದಾರೆ. ಇದುವರೆಗೂ ಒಂದೇ ಒಂದು ರೂಪಾಯಿನೂ ಕೂಡ ಸಾಲ ಕಟ್ಟಲಿಲ್ಲ. ಮಾನ್ಯ ಎಸ್.ಆರ್.ಪಾಟೀಲ್‌ರವರು ಸಾಲ ತೆಗೆದುಕೊಂಡಿದ್ದಾರೆ. ಅವರು ಅಸಲು ಮತ್ತು ಬಡ್ಡಿ ಎರಡನ್ನು ಕಟ್ಟುತ್ತಾರೆ. ಶೇಕಡ 50 ರಷ್ಟರಲ್ಲಿ ಸುಮಾರು 34 ಸಕ್ಕರೆ ಕಾರ್ಖಾನೆಯಲ್ಲಿ ಶೇಕಡ 50 ರಷ್ಟು ಮಾತ್ರ up to date ಕಟ್ಟುತ್ತಿದ್ದಾರೆ. ಕೆಲವರು ಬಡ್ಡಿಯನ್ನು ಮಾತ್ರ ಕಟ್ಟುತ್ತಾರೆ. ಅಸಲು ಕಟ್ಟುವುದಿಲ್ಲ. ಇನ್ನು ಕೆಲವರು ಅಸಲು ಮತ್ತು ಬಡ್ಡಿ ಎರಡನ್ನು ಸಮಾನವಾಗಿ ಕಟ್ಟಿಕೊಂಡು ಹೋಗುತ್ತಾರೆ. ಇನ್ನು ಕೆಲವರು ನಮ್ಮ ಮಾನ್ಯ ಶಾಸಕರುಗಳೇ ಒಂದೇ ಒಂದು ರೂಪಾಯಿಯನ್ನು ಕಟ್ಟುವುದಿಲ್ಲ. ಅವರಿಗೆ ನೋಟೀಸ್ ಕೊಡುವುದಿಲ್ಲ. ಏನೂ ಇಲ್ಲ. ಎಲ್ಲ ನಡೆದುಕೊಂಡು ಹೋಗುತ್ತಲೇ ಇರುತ್ತದೆ. ಮಾನ್ಯ ಬಸವರಾಜ ಪಾಟೀಲ್ ಇಟಗಿಯವರು

ಹೇಳಿದ ಹಾಗೆ 50 ಸಾವಿರ ರೂಪಾಯಿಗಳು ಅಲ್ಲ. 25 ಸಾವಿರ ರೂಪಾಯಿಗಳನ್ನು ಕೊಡುವುದಿಲ್ಲ. ಮಾನ್ಯ ಎಸ್.ಆರ್.ಪಾಟೀಲ್‌ರವರು ಹೇಳಿದ ಹಾಗೆ ಅಪೆಕ್ಸ್ ಬ್ಯಾಂಕ್, 7-8 ಡಿ.ಸಿ.ಸಿ., ಬ್ಯಾಂಕ್‌ನವರು ಸಾಲವನ್ನು ಕೊಡುತ್ತಿದ್ದಾರೆ. ನಾನು ಮತ್ತು ಸಕ್ಕರೆ ಸಚಿವರು ಸದನದಲ್ಲೇ ಇದ್ದೇವೆ. ಸಕ್ಕರೆ ಕಾರ್ಖಾನೆಯವರು ಅಪೆಕ್ಸ್ ಬ್ಯಾಂಕ್ ಮತ್ತು ಡಿ.ಸಿ.ಸಿ., ಬ್ಯಾಂಕುಗಳಲ್ಲಿ ಯಾರು ಸಾಲ ತೆಗೆದುಕೊಂಡಿದ್ದಾರೆ. Sugar Director ಎಲ್ಲರನ್ನೂ ಕೂಡ 15ನೇ ತಾರೀಖು ಆದಮೇಲೆ ಒಂದು ಸಭೆ ಮಾಡುತ್ತೇನೆ. ಮಾನ್ಯ ಎಸ್.ಆರ್.ಪಾಟೀಲ್‌ರವರ ನೇತೃತ್ವದಲ್ಲಿ ಸರ್ಕಾರದಿಂದ ಏನಾಗಬೇಕೆನ್ನುವ ಬಗ್ಗೆ ಸರ್ಕಾರದ ಗಮನಕ್ಕೆ ಇದೆ ತಾವು ಹೇಳಿರುವಂತಹದ್ದು ಎಲ್ಲಾ ಸರಿ ಇದೆ. ಆದರೆ, ಕೆಲವರು ಸಾಲ ತೆಗೆದುಕೊಂಡು ಏನು misuse ಮಾಡುತ್ತಿದ್ದಾರೆ. ಮಾನ್ಯ ಆರ್.ಬಿ.ತಿಮ್ಮಾಪೂರರವರು ಹೇಳಿದ ಹಾಗೆ ಇದರ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇದೆ. ಸಕ್ಕರೆ ಕಾರ್ಖಾನೆಯ ಬಗ್ಗೆ ನಾನು ಎರಡು ಬಾರಿ ರಿವ್ಯೂ ಮಾಡಿದ್ದೇನೆ. ಈ ಸಕ್ಕರೆ ಕಾರ್ಖಾನೆಯ ಬಗ್ಗೆ ರಿವ್ಯೂ ಮಾಡುವುದಕ್ಕೂ ನಮ್ಮನ್ನು ಬಿಡುವುದಿಲ್ಲ. ಅಷ್ಟೊಂದು ಬಲಾಢ್ಯರಿದ್ದಾರೆ. ಇನ್ನು ಆ ವಿಷಯ ಬಂದಿರುವುದೇ ಇಲ್ಲ. ಆಗಲೇ ಅಡಚಣೆ ಮಾಡುವಂತಹದ್ದು ಇದೆ. ಕರ್ನಾಟಕದಲ್ಲಿ ಸಕ್ಕರೆ ಕಾರ್ಖಾನೆಗಳ ಲಾಬಿ ಅಷ್ಟೊಂದು ಪ್ರಬಲವಾಗಿ ಇದೆ. ಆದ್ದರಿಂದ, . . .

**ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, . . .

**ಶ್ರೀ ಎಸ್.ಟಿ.ಸೋಮಶೇಖರ್:-** ಮಾನ್ಯ ಸಭಾಪತಿಯವರೇ, ನಾನು ಬೆಳಕು ಚೆಲ್ಲಿದರೆ ನನ್ನನ್ನು ಕಳುಹಿಸಿಬಿಡುತ್ತಾರೆ. ಮಾನ್ಯ ಎಸ್.ಆರ್.ಪಾಟೀಲ್‌ರವರು ಹೇಳಿದ ಹಾಗೆ ಎಲ್ಲರನ್ನೂ 15ನೇ ತಾರೀಖು . . .

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, . . .

**ಶ್ರೀ ಎಸ್.ಟಿ.ಸೋಮಶೇಖರ್:-** ಮಾನ್ಯ ಸಭಾಪತಿಯವರೇ, ನಾನು ಮಾನ್ಯ ಲಕ್ಷ್ಮಣ ಸಂಗಪ್ಪ ಸವದಿಯವರನ್ನು ನೋಡಲಿಲ್ಲ. ಇಲ್ಲಿಯೇ ಕುಳಿತುಕೊಂಡಿದ್ದಾರೆ. ಮಾನ್ಯ ಎಸ್.ಆರ್.ಪಾಟೀಲ್‌ರವರು ಒಪ್ಪಿಕೊಂಡರೆ ಮಾನ್ಯ ಸಕ್ಕರೆ ಸಚಿವರು ಇಲ್ಲಿಯೇ ಇದ್ದಾರೆ. ಇದಕ್ಕೆ ಸಂಬಂಧಪಟ್ಟಂತೆ ಯಾರ್ಯಾರನ್ನೂ ಕರೆದು ಸಭೆ ಮಾಡಬೇಕೆಂದು ಮತ್ತು ಏನೇನು ಮಾಹಿತಿಗಳನ್ನು ಕೊಟ್ಟಿದ್ದಾರೆಂಬ ಬಗ್ಗೆ . . .

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಪವರ್ ಮಿನಿಸ್ಟರ್ ಮತ್ತು ಸಕ್ಕರೆ ಸಚಿವರು ತಮ್ಮ ನೇತೃತ್ವದಲ್ಲಿಯೇ ಈ ಸಭೆ ಆಗಲಿ.

**ಶ್ರೀ ಎಸ್.ಟಿ.ಸೋಮಶೇಖರ್:-** ಮಾನ್ಯ ಸಭಾಪತಿಯವರೇ, ಸಕ್ಕರೆ ಸಚಿವರು ಮತ್ತು ಸಹಕಾರ ಸಚಿವರು, ಅಪೆಕ್ಸ್ ಬ್ಯಾಂಕ್, ಡಿ.ಸಿ.ಸಿ. ಬ್ಯಾಂಕ್, ಅಧಿಕಾರಿಗಳು ತಾವು ಇನ್ನು ಯಾರನ್ನೂ ಕರೆಯಬೇಕೆಂದು ಹೇಳಿದರೆ ಅವರನ್ನು ಕರೆಯುತ್ತೇವೆ. 15ನೇ ತಾರೀಖಿನವರೆಗೂ ನಾನು ದಸರಾ ಕೆಲಸದಲ್ಲಿ ನಿರತನಾಗಿರುತ್ತೇನೆ. 16 ಮತ್ತು 17ನೇ ತಾರೀಖು ತಮ್ಮ ಹತ್ತಿರ ದಿನಾಂಕವನ್ನು ತೆಗೆದುಕೊಂಡು, ನಮ್ಮ ಪವರ್ ಮಂತ್ರಿಗಳ ಹತ್ತಿರ ಮಾಹಿತಿಯನ್ನು ತೆಗೆದುಕೊಂಡು, ಇದರಿಂದ, ತಮಗೆ ಏನೆಲ್ಲಾ ಅನುಕೂಲಗಳು ಬೇಕೋ . . .

**ಶ್ರೀ ಕೆ.ಟಿ.ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇದರ ಜೊತೆಗೆ ತಾವು ಮತ್ತು ಸಕ್ಕರೆ ಸಚಿವರು ಒಂದು ಬಾರಿ ಗುಜರಾತ್ ಮತ್ತು ಮಹಾರಾಷ್ಟ್ರಕ್ಕೆ ಹೋಗಿ ಬನ್ನಿ. ಅಲ್ಲಿ ಹೊಸ ಯೋಜನೆಯನ್ನು ರೂಪಿಸಿದ್ದಾರೆ.

**ಸಭಾಪತಿಯವರು:-** ಮಾನ್ಯ ಕೆ.ಟಿ.ಶ್ರೀಕಂಠೇಗೌಡರವರೇ, ತಾವು ನನ್ನನ್ನು ಏನು ಕೇಳುವುದಿಲ್ಲವೇ?

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಒಂದು clarification ಕೇಳುತ್ತೇನೆ.

**ಸಭಾಪತಿಯವರು:-** ಮಾನ್ಯ ಕೆ.ಟಿ.ಶ್ರೀಕಂಠೇಗೌಡರವರೇ, ತಾವು ನನ್ನನ್ನು ಕೇಳಬೇಕಲ್ಲವೇ?

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಅದು remedy. ನಾನು ಕೇಳಿದರೆ ತಾವು ಅವಕಾಶ ಕೊಡುವುದಿಲ್ಲ.

**ಸಭಾಪತಿಯವರು:-** ಮಾನ್ಯ ಕೆ.ಟಿ.ಶ್ರೀಕಂಠೇಗೌಡರವರೇ, ಯಾವ ಕಾಲೇಜ್‌ನ ಪ್ರಿನ್ಸಿಪಾಲ್ ನೀವು.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಆಯಿತು. ಬಿಡಿ.

**ಶ್ರೀ ಎಸ್.ಟಿ.ಸೋಮಶೇಖರ್:-** ಮಾನ್ಯ ಸಭಾಪತಿಯವರೇ, 16ನೇ ತಾರೀಖು ಆದಮೇಲೆ ಒಂದು ಸಭೆ ಮಾಡಿ, ಮಾನ್ಯ ಎಸ್.ಆರ್.ಪಾಟೀಲ್‌ರವರು ಹೇಳಿರುವ ವಿಚಾರದ ಬಗ್ಗೆ ಪ್ರಾಮಾಣಿಕವಾಗಿ ಮಾಡುತ್ತೇನೆ ಎಂದು ತಮಗೆ ಮಾಹಿತಿ ನೀಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಸಕಾರತ್ಮಕವಾಗಿ ಮತ್ತು ತೃಪ್ತಿಕರವಾಗಿ ಉತ್ತರವನ್ನು ನೀಡಿದ್ದಾರೆ. ತಮ್ಮ ಮೇಲೆ ನಮಗೆ ವಿಶ್ವಾಸ ಮತ್ತು ನಂಬಿಕೆ ಇದೆ. ತಾವು ಮತ್ತು ಸಕ್ಕರೆ ಸಚಿವರು, ಪವರ್ ಮಿನಿಸ್ಟರ್, ಎಲ್ಲರನ್ನೂ 16ನೇ ತಾರೀಖು ನಂತರ ಒಂದು ದಿನಾಂಕ ನಿಗದಿ ಮಾಡಿ ಸಭೆ ಕರೆಯುತ್ತೇನೆ ಎಂದು ಹೇಳಿದ್ದಾರೆಯಲ್ಲವೇ, ತಮಗೆ ವಿಶೇಷವಾದ ಧನ್ಯವಾದಗಳನ್ನು ಮತ್ತು ಕೃತಜ್ಞತೆಗಳನ್ನುಅರ್ಪಿಸುತ್ತೇನೆ.

**ಶ್ರೀ ಎಸ್.ಟಿ.ಸೋಮಶೇಖರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಎಸ್.ಆರ್.ಪಾಟೀಲ್‌ರವರಿಗೂ ಧನ್ಯವಾದಗಳು.

**ಸಭಾಪತಿಯವರು:-** ಮಾನ್ಯ ಬಿ.ಕೆ.ಹರಿಪ್ರಸಾದ್‌ರವರೇ, ಒಂದು ವಿಧೇಯಕವನ್ನು ತೆಗೆದುಕೊಂಡು ನಂತರ ತೆಗೆದುಕೊಳ್ಳುತ್ತೇನೆ.

**ಶ್ರೀ ಬಿ.ಕೆ.ಹರಿಪ್ರಸಾದ್ (ವಿಧಾನ ಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರ ಹಕ್ಕುಗಳನ್ನು ಮೊಟಕು ಮಾಡುವುದಕ್ಕೆ ಹೋಗಬೇಡಿ.

**ಸಭಾಪತಿಯವರು:-** ಮಾನ್ಯ ಬಿ.ಕೆ.ಹರಿಪ್ರಸಾದ್‌ರವರೇ, ಆ ರೀತಿ ಇಲ್ಲ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ನಾನು ಏನು enlighten ಮಾಡುತ್ತಿಲ್ಲ. ವಿಧೇಯಕದ ಹೆಸರುಗಳಲ್ಲಿ ಮಾನ್ಯ ಸದಸ್ಯರುಗಳ ಹಕ್ಕುಗಳನ್ನು ಕಿತ್ತುಕೊಳ್ಳುತ್ತಿದ್ದಾರೆ. ಅವರು ಸಾಕಷ್ಟು ವಿಧೇಯಕಗಳನ್ನು ತಂದಿದ್ದಾರೆ. ಇದು ಬಹಳ ಮಹತ್ವಪೂರ್ಣವಾದ ವಿಚಾರ. ಇದನ್ನು ತಾವು ಕೂಡ ಕೇಳಬೇಕು.

**ಸಭಾಪತಿಯವರು:-** ಮಾನ್ಯ ಬಿ.ಕೆ.ಹರಿಪ್ರಸಾದ್‌ರವರೇ, ಈ ವಿಧೇಯಕವನ್ನು ತೆಗೆದುಕೊಂಡ ಮೇಲೆ ತಮ್ಮದ್ದನ್ನು ತೆಗೆದುಕೊಳ್ಳುತ್ತೇನೆ.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಬಿ.ಕೆ.ಹರಿಪ್ರಸಾದ್‌ರವರ ವಿಷಯ ದೀರ್ಘವಾಗಿ ಚರ್ಚೆಯಾಗುತ್ತದೆ.

**ಸಭಾಪತಿಯವರು:-** ಮಾನ್ಯ ಮುಖ್ಯಮಂತ್ರಿಯವರ ವಿಧಾನಸಭೆಯಿಂದ ತಿದ್ದುಪಡಿಯಾಗಿ ಅಂಗೀಕಾರವಾದ ರೂಪದಲ್ಲಿರುವ "ಕರ್ನಾಟಕ ಧಾರ್ಮಿಕ ಕಟ್ಟಡಗಳ (ಸಂರಕ್ಷಣೆ) ವಿಧೇಯಕ, 2021"ರ ಮೇಲಿನ ಪ್ರಸ್ತಾವನೆಯನ್ನು ಪರ್ಯಾಲೋಚಿಸುವುದು. ಮಾನ್ಯ ಜೆ.ಸಿ.ಮಾಧುಸ್ವಾಮಿಯವರೇ, ಹೇಳಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಈ ವಿಧೇಯಕವನ್ನು ನಾಳೆ ತೆಗೆದುಕೊಳ್ಳುತ್ತೇವೆ.

**ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ಯಾವುದಾದರೂ ಒಂದಾದರೂ ಹೇಳಬೇಕಲ್ಲವೇ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾನಾಯಕರೇ, ನಾನು ಮಾನ್ಯ ಸಚಿವರಿಗೆ ಹೇಳಿದ್ದೆ. ಅವರ ಗಮನಕ್ಕೆ ಬಂದಿಲ್ಲ.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾನಾಯಕರೇ, ಏಕೆ ಬೇಡ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಚಿವರೇ, ಇದರ ಬಗ್ಗೆ ಹೆಚ್ಚು ಚರ್ಚೆ ಇದೆ ಎಂದು ಬೇಡ ಎಂದು ಹೇಳಿದೆ.

**ಸಭಾಪತಿಯವರು:-** ಮಾನ್ಯ ಜೆ.ಸಿ.ಮಾಧುಸ್ವಾಮಿಯವರು ವಿಧೇಯಕ ತೆಗೆದುಕೊಳ್ಳಿ ಎಂದು ಹೇಳುತ್ತಾರೆ. ಇವರೇ ಈಗ ಬೇಡ ಎಂದು ಹೇಳುತ್ತಾರೆ. ಸರ್ಕಾರ ತಯಾರಿಲ್ಲವೇ. ಮಾನ್ಯ ಬಿ.ಕೆ.ಹರಿಪ್ರಸಾದ್‌ರವರೇ, ತಮಗೆ ಎಷ್ಟು ಸಮಯ ಬೇಕು?

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ತಾವು ಎಷ್ಟು ಸಮಯ ಕೊಡುತ್ತೀರೋ, ಅಷ್ಟು.

**ಸಭಾಪತಿಯವರು:-** ಮಾನ್ಯ ಬಿ.ಕೆ.ಹರಿಪ್ರಸಾದ್‌ರವರೇ, ಸರಿ. ಈಗ ಮಾತನಾಡುವುದಕ್ಕೆ ಪ್ರಾರಂಭ ಮಾಡಿ. ಆದಷ್ಟು ಚಿಕ್ಕದಾಗಿ ಮಾತನಾಡಿ ಮುಗಿಸಿ.

ಆ) **ವಿಷಯ:- ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯು "ನೆರೆ-ಹೊರೆಯಲ್ಲಿ ಸಮಾನ ಶಿಕ್ಷಣ ನೀತಿ" ಎಂಬ ಸಂವಿಧಾನದ ಆಶಯಗಳಿಗೆ ವಿರುದ್ಧವಾಗಿರುವ ಬಗ್ಗೆ.**

***

**ಶ್ರೀ ಬಿ.ಕೆ.ಹರಿಪ್ರಸಾದ್ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ತಾವೊಬ್ಬರು ಅಧ್ಯಾಪಕರಾಗಿ ಈ ಸದನವನ್ನು 40 ವರ್ಷಗಳ ಕಾಲ ಸತತವಾಗಿ represent ಮಾಡುತ್ತಿದ್ದೀರಿ. "ಹೊಸ ರಾಷ್ಟ್ರೀಯ ಶಿಕ್ಷಣ ನೀತಿ" ಈ ಒಂದು ಮಹತ್ವಪೂರ್ಣವಾದ ನೀತಿಯನ್ನು ಜಾರಿಗೊಳಿಸುವಾಗ ಅಥವಾ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅನುಷ್ಠಾನಗೊಳಿಸುವಾಗ ಯಾವ ರೀತಿ, ನೀತಿಗಳನ್ನು ಅನುಸರಿಸಿಕೊಳ್ಳಬೇಕಾಗಿತ್ತು. ಆ ವಿಚಾರದ ಬಗ್ಗೆ ಮಾತನಾಡುವುದಕ್ಕೆ ತಮ್ಮ ಮುಂದೆ ನಿಂತಿದ್ದೇನೆ. ನಮ್ಮ ಉದ್ದೇಶ ಹೊಸ ಶಿಕ್ಷಣ ನೀತಿಯನ್ನು ಅಲ್ಲಗೆಳೆಯುವುದಂತಲ್ಲ ಅಥವಾ ನಾವು ಪರಿವರ್ತನೆ ಬೇಡ ಎಂದು ಹೇಳುವಂತವರಲ್ಲ. ಯಾವುದಾದರೂ ಒಂದು ಮಹತ್ವಪೂರ್ಣವಾದ ನೀತಿಯನ್ನು ಅದರಲ್ಲೂ ಸಹ ಈ ರಾಜ್ಯದ ಮಕ್ಕಳ ಭವಿಷ್ಯವನ್ನು ನಿರ್ಧಾರ ಮಾಡುವಂತಹ ಮಹತ್ವಪೂರ್ಣವಾದ ನೀತಿಯನ್ನು ಚರ್ಚೆ ಮಾಡುವಂತಹದ್ದು ಎಲ್ಲಿ ಎನ್ನುವುದರ ಬಗ್ಗೆ ಸದನ ತೀರ್ಮಾನ ಮಾಡಬೇಕು. ನಾನು ಈ ವಿಚಾರದಲ್ಲಿ ಮಾತನಾಡುವುದಕ್ಕಿಂತ ಮೊದಲು ಬಹಳ . . .

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಬಹಳ ಮಹತ್ವಪೂರ್ಣವಾದ ವಿಚಾರ. ಗ್ಯಾಲರಿಯಲ್ಲಿ ಮಾನ್ಯ ಸಚಿವರು ಮತ್ತು ಶಿಕ್ಷಣ ಇಲಾಖೆಯ ಅಧಿಕಾರಿಗಳೊಬ್ಬರು ಇಲ್ಲ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಸದನದಲ್ಲಿ ಶಿಕ್ಷಣ ಸಚಿವರು ಇದ್ದರೂ ಏನು ಪ್ರಯೋಜನವಾಗುವುದಿಲ್ಲ.

(ಮುಂದು)

**(962) 5:50 ಎಸ್‌ಪಿಆರ್-ಆರ್‌ಎನ್ 23/09/2021**

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಬಿ.ಕೆ.ಹರಿಪ್ರಸಾದ್(ಮುಂದು):-**

ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರಾದ ಶ್ರೀ ಮಾಧುಸ್ವಾಮಿಯವರು ಪ್ರಸ್ತುತ ಸದನದಲ್ಲಿದ್ದಾರೆ, ಪರವಾಗಿಲ್ಲ. ನಾನು ಈ ವಿಚಾರವನ್ನು ಪ್ರಾರಂಭಿಸುವ ಮೊದಲು, ನಮ್ಮ ಶಿಕ್ಷಣ ಸಚಿವರು ತೆಗೆದುಕೊಂಡಿರುವ ನಿಲುವನ್ನು ನಾನು ಪ್ರಬಲವಾಗಿ ಖಂಡಿಸುತ್ತೇನೆ.

**(ಈ ಹಂತದಲ್ಲಿ ಉಪಸಭಾಪತಿಯವರು ಪೀಠವನ್ನು ಅಲಂಕರಿಸಿದರು)**

ಅದೇನೆಂದರೆ, ನಮ್ಮ ಸಭಾಪತಿಗಳೂ ಸಹ ಶಿಕ್ಷಕರಾಗಿದ್ದಾರೆ. ಈ ಸದನದ ಕಲವೇ ಕೆಲವು ಸದಸ್ಯರುಗಳನ್ನು ಕರೆಸಿ, ಅದರ ಬಗ್ಗೆ ಚರ್ಚೆ ಮಾಡಿದ್ದಾರೆ. ನಾವುಗಳು ಯಾರೂ ಸಹ ಈ ಸದನದ ಸದಸ್ಯರುಗಳಲ್ಲವೇ? ಇದರ ಬಗ್ಗೆ ಎಲ್ಲರೊಂದಿಗೆ ಚರ್ಚೆ ಮಾಡಬಹುದಾಗಿತ್ತು. ಇದರಿಂದ ಸರ್ಕಾರದ ಸ್ಪಷ್ಟವಾದ ನಿಲುವು ಗೊತ್ತಾಗುತ್ತದೆ. ಇವುಗಳೆಲ್ಲವೂ ಯಾವುದೋ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹಿಂದಿನ ಬಾಗಿಲಿನಿಂದ ಬರುವಂತಹ ಕೆಲಸಗಳಾಗಿವೆ. ನಮ್ಮ ದೇಶವು ಉದಯವಾಗುವುದಕ್ಕಿಂತ ಮೊದಲು ನಮ್ಮ ದೇಶದಲ್ಲಿ 1835 ನೇ ಇಸವಿಯಲ್ಲಿ ಮೊದಲನೇ ಶಿಕ್ಷಣ ನೀತಿ ಆಗಿತ್ತು. ಅಂದರೆ, ದಿನಾಂಕ 07/03/1835 ರಂದು ಲಾರ್ಡ್ ಥಾಮಸ್ ಮೆಕಾಲೆರವರು ಇದನ್ನು ಜಾರಿಗೊಳಿಸಿದ್ದರು. ಆ ಸಂದರ್ಭದಲ್ಲಿ ಈಸ್ಟ್ ಇಂಡಿಯಾ ಕಂಪನಿಯಲ್ಲಿದ್ದ ಲಾರ್ಡ್ ವಿಲಿಯಮ್ ಬೆಂಟಿಂಕ್‌ರವರು ಆಗಿನ ಹಿಂದೂ ಮಹಾಸಭಾದ ಮಹಾನ್ ನಾಯಕರಾದ ಶ್ರೀ ರಾಜಾರಾಮ್ ಮೋಹನ್ ರಾಯ್ ರವರದೊಂದಿಗೆ ಮಾತನಾಡಿ, ಶಿಕ್ಷಣ ನೀತಿಯನ್ನು ಅನುಷ್ಠಾನಗೊಳಿಸಲು ತೀರ್ಮಾನ ತೆಗೆದುಕೊಂಡಿದ್ದರು. ಆಗ ದೇಶದಲ್ಲಿ ಕೇವಲ ಶೇಕಡಾ 3 ರಷ್ಟು ಸಾಕ್ಷರತೆಯ ಪ್ರಮಾಣವಿತ್ತು. ದೇಶದ ಪ್ರಾಚೀನ ಸಂಸ್ಕೃತಿಯನ್ನು ಅಳವಡಿಸಿಕೊಳ್ಳುವ ಶಿಕ್ಷಣ ನೀತಿಯನ್ನು ಜಾರಿಗೆ ತರಲಾಗುವುದು ಎಂದು ಶಿಕ್ಷಣ ನೀತಿಯಲ್ಲಿ ಉಲ್ಲೇಖಿಸಲಾಗಿತ್ತು. 1835 ನೇ ಇಸವಿಯಲ್ಲಿ ಶೇಕಡಾ 3 ರಷ್ಟಿದ್ದ ಸಾಕ್ಷರತೆಯ ಪ್ರಮಾಣವು 1947 ನೇ ಇಸವಿಯಲ್ಲಿ ಶೇಕಡಾ 12 ರಷ್ಟಕ್ಕೆ ಏರಿಕೆಯಾಯಿತು. ದೇಶಕ್ಕೆ ಸ್ವಾತಂತ್ರ ಬಂದ ಸಂದರ್ಭದಲ್ಲಿ ದೇಶದಲ್ಲಿ ಒಟ್ಟು 11 ವಿಶ್ವವಿದ್ಯಾನಿಲಯಗಳಿದ್ದವು. 2011 ನೇ ಸಾಲಿಗೆ ದೇಶದಲ್ಲಿ ಒಟ್ಟಾರೆ ವಿಶ್ವವಿದ್ಯಾಲಯಗಳ ಸಂಖ್ಯೆ 573 ಆಯಿತು ಮತ್ತು ಸಾಕ್ಷರತೆಯ ಪ್ರಮಾಣ ಶೇಕಡಾ 74 ರಷ್ಟಾಗಿರುವುದನ್ನು ನಾವುಗಳೆಲ್ಲರೂ ನೋಡಿದ್ದೇವೆ. ಇದು ದೇಶಕ್ಕೆ ಸ್ವಾತಂತ್ರ್ಯ ಬಂದ 70 ವರ್ಷಗಳ ಸಾಧನೆಯಾಗಿದೆ. ನಮ್ಮ ಪಕ್ಷವು ಕಳೆದ 70 ವರ್ಷಗಳಿಂದ ಏನು ಮಾಡಿಲ್ಲವೆಂದು ಎದುರು ಪಕ್ಷದವರು ಯಾವಾಗಲೂ ಹೇಳುತ್ತಿರುತ್ತಾರೆ. ಅಂದಿನ ಕಾಲದಲ್ಲಿ ಲಾರ್ಡ್ ಥಾಮಸ್ ಮೆಕಾಲೆರವರು ಶಿಕ್ಷಣ ನೀತಿಯನ್ನು ಜಾರಿಗೆ ತರುವ ಸಂದರ್ಭದಲ್ಲಿ, ಈ ರಾಷ್ಟ್ರದಲ್ಲಿ ಯಾವ ಭಾಷೆಯನ್ನು ಅಧಿಕೃತ ಭಾಷೆಯನ್ನಾಗಿ ಮಾಡಬೇಕೆಂದು ಚರ್ಚೆಗಳನ್ನು ಮಾಡುವ ಸಂದರ್ಭದಲ್ಲಿ, ಥಾಮಸ್ ಮೆಕಾಲೆರವರು ಲಾರ್ಡ್ ಬೆಂಟಿಂಕ್‌ರವರ ಮೂಲಕ ಶ್ರೀ ರಾಜಾರಾವ್ ಮೋಹನ್ ರಾಯ್‌ರವರೊಂದಿಗೆ ಸಂಸ್ಕೃತ, ಆಂಗ್ಲ ಅಥವಾ ಪರ್ಷಿಯನ್ ಭಾಷೆ ಅಧಿಕೃತವಾಗಿರಬೇಕೇ ಎಂದು ಚರ್ಚಿಸುತ್ತಾರೆ. ಆಗ ಹಿಂದಿ ಭಾಷೆಯು ಇರಲಿಲ್ಲ. ಆಗ ಶ್ರೀ ರಾಜಾರಾವ್ ಮೋಹನ್ ರಾಯ್‌ರವರು ಆಂಗ್ಲ ಭಾಷೆಯು ಅಧಿಕೃತವಾಗಿದ್ದರೆ ಉತ್ತಮ ಎಂದು ಹೇಳಿದ್ದರ ಹಿನ್ನೆಲೆಯಲ್ಲಿ, ಆಂಗ್ಲ ಭಾಷೆಯನ್ನು ಅಧಿಕೃತಗೊಳಿಸುತ್ತಾರೆ. 1947ನೇ ಇಸವಿಯಲ್ಲಿ ರಾಷ್ಟ್ರದಲ್ಲಿ ಸರ್ಕಾರ ರಚನೆಯಾದ ನಂತರ, ಮೌಲಾನಾ ಅಬ್ದುಲ್ ಕಲಾಂ ಆಜಾದ್‌ರವರು ಸ್ವತಂತ್ರ ದೇಶದ ಮೊಟ್ಟ ಮೊದಲ ಶಿಕ್ಷಣ ಸಚಿವರಾಗಿ ತಮ್ಮ ಜವಾಬ್ದಾರಿಯನ್ನು ವಹಿಸಿಕೊಳ್ಳುತ್ತಾರೆ. ದೇಶದ ಮೊದಲ ಉಪರಾಷ್ಟ್ರಪತಿಗಳಾದ ಡಾ|| ಸರ್ವಪಲ್ಲಿ ರಾಧಾಕೃಷ್ಣನ್ ರವರು ಶಿಕ್ಷಣ ಸಚಿವರೊಂದಿಗೆ ಸೇರಿ ಈ ರಾಷ್ಟ್ರದ ಮೊದಲ ಶಿಕ್ಷಣ ನೀತಿಯನ್ನು ಮಾಡುವ

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಂದರ್ಭದಲ್ಲಿ.... ನಂತರದಲ್ಲಿ ಶಿಕ್ಷಣ ಮಂತ್ರಿಗಳಾದ ಪ್ರಮುಖರನ್ನು ನಾನು ಇಲ್ಲಿ ಉಲ್ಲೇಖಿಸ ಬಯಸುತ್ತೇನೆ. ಶ್ರೀ ಎಂ.ಸಿ.ಚಾವ್ಲಾ, ನಮ್ಮ ರಾಜ್ಯದ ಬಳ್ಳಾರಿ ಜಿಲ್ಲೆಯವರಾದ ಶ್ರೀ ವಿ.ಕೆ.ಆರ್.ವಿ.ರಾವ್, ಕರಣ್ ಸಿಂಗ್, ನಮ್ಮ ಬೆಳಗಾವಿ ಜಿಲ್ಲೆಯವರಾದ ಶ್ರೀ ಬಿ.ಶಂಕರಾನಂದ, ಇವರು ಸರ್ಕಾರಿ ಮುಖ್ಯ ಸಚೇತಕರಾದ ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ ರವರ ಗುರುಗಳ ಗುರುಗಳಾಗಿದ್ದಾರೆ. ಶ್ರೀ ಎಸ್.ಬಿ.ಚವ್ಹಾಣ್, ಶ್ರೀ ಕೆ.ಸಿ. ರಾಮು, ಶ್ರೀ ನರಸಿಂಗ ರಾವ್, ಶ್ರೀ ಪಿ.ಶಿವಶಂಕರ್, ಶ್ರೀ ವಿ.ಪಿ.ಸಿಂಗ್, ಶ್ರೀ ಅಟಲ್ ಬಿಹಾರಿ ವಾಜಪೇಯಿ, ಶ್ರೀ ಎಸ್. ಆರ್.ಬೊಮ್ಮಾಯಿ. ಇಂತಹ ಮಹಾನ್ ವ್ಯಕ್ತಿಗಳು ದೇಶದ ಶಿಕ್ಷಣ ಇಲಾಖೆಯ ಜವಾಬ್ದಾರಿಯನ್ನು ವಹಿಸಿಕೊಂಡು ರಾಷ್ಟ್ರದಲ್ಲಿ ಯಾವ ರೀತಿಯಾದ ಶಿಕ್ಷಣ ಇರಬೇಕೆಂದು ಯೋಚಿಸಿದ್ದರು. ರಾಷ್ಟ್ರದಲ್ಲಿ ಶಿಕ್ಷಣ ನೀತಿಯನ್ನು ಜಾರಿಗೆ ತರುವಾಗ ..., ಸಂಪೂರ್ಣವಾಗಿ ಸಂವಿಧಾನ, ಸಾಮಾಜಿಕ ನ್ಯಾಯ ಮತ್ತು ಒಕ್ಕೂಟ ತತ್ವದ ಪದ್ಧತಿಯ ವಿರುದ್ಧವಾಗಿರುವ ಈ ಶಿಕ್ಷಣ ನೀತಿಯನ್ನು ಅಳವಡಿಸುವುದಕ್ಕೆ ಕೇಂದ್ರ ಸರ್ಕಾರವು ಪ್ರಯತ್ನಿಸಿತು. ಭಾರತೀಯ ಜನತಾ ಪಾರ್ಟಿಯ ಸರ್ಕಾರವು ಕೇಂದ್ರದಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಜಾರಿಗೆ ತರುವ ಸಂದರ್ಭದಲ್ಲಿ ಅಂದರೆ ದಿನಾಂಕ 29/07/2020 ರಂದು ಅಂದರೆ ಕೋವಿಡ್-19 ರಂತಹ ಸಾಂಕ್ರಾಮಿಕ ಕಾಯಿಲೆಯು ವ್ಯಾಪಕವಾಗಿ ಹರಡುತ್ತಿರುವ ಸಂದರ್ಭದಲ್ಲಿ ಜನರ ಓಡಾಟವು ಸ್ಥಗಿತಗೊಂಡಿತ್ತು. ಆ ಸಂದರ್ಭದಲ್ಲಿ ಕೇಂದ್ರ ಸರ್ಕಾರವು ಏಕಾಏಕಿ ಸಚಿವ ಸಂಪುಟದಲ್ಲಿ ತೀರ್ಮಾನವನ್ನು ತೆಗೆದುಕೊಂಡು ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಜಾರಿಗೆ ತರಲು ಘೋಷಿಸಿತು. ಅದೇ ಕೋವಿಡ್-19 ರ ಸಂದರ್ಭದಲ್ಲಿ ಕರಾಳ ಕಾನೂನು ಮತ್ತು ನೀತಿಗಳನ್ನು ಜಾರಿಗೆ ತರುವ ಪ್ರಯತ್ನವನ್ನು ಕೇಂದ್ರ ಸರ್ಕಾರವು ಸಂಪೂರ್ಣವಾಗಿ ಯಶಸ್ವಿಗೊಳಿಸಿತು. ಈ ನೂತನ ನೀತಿಯಿಂದಾಗಿ ಯಾರಿಗೆ ಅನುಕೂಲವಾಗುತ್ತದೆ ಎನ್ನುವುದನ್ನು ತಾವುಗಳೆಲ್ಲರೂ ಸಹ ನೋಡಿದ್ದೀರಿ. ಇದಲ್ಲದೇ, ರಾಷ್ಟ್ರವು ನಮ್ಮ ಪ್ರಾಚೀನ ಸಂಸ್ಕೃತಿಯ ಕಡೆಗೆ ಹೋಗಬೇಕಾದರೆ ..., ರಾಷ್ಟ್ರೀಯ ಶಿಕ್ಷಣ ನೀತಿಯು 484 ಪುಟಗಳಷ್ಟಿದೆ. ನಮ್ಮ ರಾಜ್ಯದ ಶ್ರೀ ಕಸ್ತೂರಿ ರಂಗನ್ ರವರು ರಾಷ್ಟ್ರೀಯ ಶಿಕ್ಷಣ ನೀತಿಯ ಅಧ್ಯಕ್ಷರಾಗಿದ್ದರು. ಅದಕ್ಕೂ ಮೊದಲು ಶ್ರೀ ಸುಬ್ರಮಣಿಯಂರವರು ಅಧ್ಯಕ್ಷರಾಗಿದ್ದರು. ಶ್ರೀ ಕಸ್ತೂರಿ ರಂಗನ್‌ರವರು ಬೆಂಗಳೂರು ನಗರ ಮಲ್ಲೇಶ್ವರಂ ಪ್ರದೇಶದಲ್ಲಿರುತ್ತಾರೆ. ಇದು ಉನ್ನತ ಶಿಕ್ಷಣ ಮಂತ್ರಿಗಳ ಕ್ಷೇತ್ರವಾಗಿದೆ. ನಾನು ಅವರೊಂದಿಗೆ ರಾಜ್ಯ ಸಭಾ ಸದಸ್ಯನಾಗಿದ್ದೆನು. ಅವರ ಪ್ರತಿಭೆ, ಜ್ಞಾನಗಳಿಗೆ ನಮಗೆ ಯಾವುದೇ ರೀತಿಯ ಆಕ್ಷೇಪಗಳಿಲ್ಲ. ನಾನು ಅವರಿಗೆ ಸೆಲ್ಯೂಟ್ ಮಾಡುತ್ತೇನೆ. ಆದರೆ, ಅವರ ಮುಖವಾಡವನ್ನಿಟ್ಟುಕೊಂಡು ಈ ನೀತಿಯನ್ನು ಜಾರಿಗೆ ತರುವಂತೆ ಮಾಡಿರುವುದಕ್ಕೆ ನಮ್ಮ ತೀವ್ರವಾದ ಆಕ್ಷೇಪವಿದೆ. ನಮ್ಮ ದೇಶದಲ್ಲಿ ಸಾಕ್ಷರತೆಯ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪ್ರಮಾಣ ಕೇವಲ ಶೇಕಡಾ 3 ರಷ್ಟಿರುವ ಸಂದರ್ಭದಲ್ಲಿ ಶಿಕ್ಷಣ ಎನ್ನುವುದು ಕೇವಲ ಕೆಲವೇ ಜನರಿಗೆ ಮಾತ್ರವೇ ಮೀಸಲಾಗಿತ್ತು. ಆಗ ಶಿಕ್ಷಣಕ್ಕೆ ಮೀಸಲಾತಿಯನ್ನು ನೀಡಲಾಗಿತ್ತು. ದಲಿತರು, ಶೂದ್ರರು ಶಿಕ್ಷಣದಿಂದ ವಂಚಿತರಾಗಿದ್ದರು. ಅವರುಗಳು ಶಿಕ್ಷಣ ಪಡೆಯಬೇಕೆನ್ನುವ ಹಂಬಲವನ್ನು ಸೂಚಿಸಿ.... ಗುರುಗಳಿಲ್ಲದೇ ಸ್ವಯಂ ಶಿಕ್ಷಣವನ್ನು ಪಡೆದ ಏಕಲವ್ಯನ ಕಥೆ ಏನಾಯಿತು ಎಂದು ಎಲ್ಲರಿಗೂ ಸಹ ತಿಳಿದಿದೆ. ಕಾಂಗ್ರೆಸ್ ಪಕ್ಷದವರು ಲಾರ್ಡ್ ಥಾಮಸ್ ಮೆಕಾಲೆರವರನ್ನು ಯಾವಾಗಲೂ ಹೊಗಳುತ್ತಿರುತ್ತಾರೆಂದು ಭಾರತೀಯ ಜನತಾ ಪಕ್ಷದ ಅಧ್ಯಕ್ಷರು ಹೇಳುತ್ತಿದ್ದರು. ಕಾಂಗ್ರೆಸ್ ಪಕ್ಷದವರು ಹೊಗಳುತ್ತಾರೋ ಅಥವಾ ಬಿಡುತ್ತಾರೋ ಈ ದೇಶದಲ್ಲಿರುವ ದಲಿತ, ಶೂದ್ರ ಸಮುದಾಯವು ಲಾರ್ಡ್ ಥಾಮಸ್ ಮೆಕಾಲೆರವರ ಫೋಟೋವನ್ನು ಇಟ್ಟುಕೊಳ್ಳಬೇಕಾಗುತ್ತದೆ. ನಮ್ಮ ದೇಶದಲ್ಲಿ ವಿದ್ಯಾವಂತರ ಸಂಖ್ಯೆಯನ್ನು ಜಾಸ್ತಿ ಮಾಡಿದ ಕೀರ್ತಿಯು ಲಾರ್ಡ್ ಥಾಮಸ್ ಮೆಕಾಲೆರವರಿಗೆ ಸಲ್ಲುತ್ತದೆ. ಆದರೆ, ಶಿಕ್ಷಣ ಕ್ಷೇತ್ರದಲ್ಲಿ ಇಷ್ಟೊಂದು ಸಂಖ್ಯೆಯಲ್ಲಿ ಸಾಧನೆಯನ್ನು ಮಾಡಿದ ಹಿಂದುಳಿದವರು, ಅಲ್ಪಸಂಖ್ಯಾತರು ಅಥವಾ ದಲಿತ ಸಮುದಾಯ ಅಥವಾ ಆದಿವಾಸಿಗಳ ಬಗ್ಗೆ ಯಾವ ರೀತಿಯಾದ ರಕ್ಷಣೆಯನ್ನು ನೀಡಲಾಗುತ್ತದೆ ಎನ್ನುವುದನ್ನು ಈ ನೂತನ ನೀತಿಯಲ್ಲಿ ಎಲ್ಲಿಯೂ ಸಹ ಹೇಳಿಲ್ಲ. ಸಂವಿಧಾನದಲ್ಲಿರುವ ಅನುಚ್ಛೇದ 15(4), (21-ಎ), (24) ಮತ್ತು (45) ಇವುಗಳ ಬಗ್ಗೆ ನೂತನ ಶಿಕ್ಷಣ ನೀತಿಯಲ್ಲಿ ಯಾವುದೇ ರೀತಿಯ ಪ್ರಸ್ತಾಪವಿಲ್ಲ. ಇದಲ್ಲದೇ ಶಿಕ್ಷಣ ನೀತಿ ಎನ್ನುವುದು ಸಮವರ್ತಿ ಪಟ್ಟಿಯಾಗಿದೆ. ಅಂದರೆ concurrence list, 7 ನೇ ಅನುಬಂಧದ ಪಟ್ಟಿಯಲ್ಲಿ ಇದು ಬರುತ್ತದೆ. ಇದರನ್ವಯ ಹೆಚ್ಚಿನ ಜವಾಬ್ದಾರಿಯು ರಾಜ್ಯ ಸರ್ಕಾರಗಳ ಮೇಲಿರುತ್ತದೆ. ಕೇಂದ್ರ ಸರ್ಕಾರವು ನೀತಿಯನ್ನು ಕೇವಲ ಪ್ಲ್ಯಾನ್ ಮಾಡಬಹುದು. ಆದರೆ ಅದನ್ನು ಅನುಷ್ಠಾನಕ್ಕೆ ತರುವ ಸಂಪೂರ್ಣ ಜವಾಬ್ದಾರಿಯು ರಾಜ್ಯ ಸರ್ಕಾರಗಳ ಮೇಲಿರುತ್ತದೆ. "ಒಂದು ದೇಶ ಒಂದು ಶಿಕ್ಷಣ" ಎನ್ನುವ ಘೋಷಣೆಯನ್ನು ಕೇಂದ್ರ ಸರ್ಕಾರವು ಮಾಡಿ, ರಾಜ್ಯದ ಎಲ್ಲಾ ಹಕ್ಕುಗಳನ್ನು ಕಿತ್ತುಕೊಳ್ಳುವ ಹುನ್ನಾರವನ್ನು ಈ ಶಿಕ್ಷಣ ನೀತಿಯಲ್ಲಿ ನಾವುಗಳು ನೋಡಬಹುದು. ಇಲ್ಲಿರುವ ನಮ್ಮ ಆಕ್ಷೇಪವೇನೆಂದರೆ, ಈ ಮಹತ್ವಪೂರ್ಣವಾದ ಶಿಕ್ಷಣ ನೀತಿಯ ಬಗ್ಗೆ ಚರ್ಚೆಯನ್ನು ಮಾಡುವಾಗ, ಯಾರೊಂದಿಗೆ ಚರ್ಚೆ ಮಾಡಬೇಕಾಗಿತ್ತು? Teacher is the Centre of this Policy ಎಂದು ಹೇಳುತ್ತಾ, ಅವರ ವರದಿಯನ್ನೂ ಸಹ ನೀಡಿದ್ದಾರೆ. ಅದಕ್ಕಿಂತಲೂ ಮೊದಲು 36 ವರ್ಷಗಳ ಹಿಂದೆ ಅಂದರೆ 1986 ನೇ ಇಸ್ವಿಯಲ್ಲಿ ನನ್ನ ಅಚ್ಚುಮೆಚ್ಚಿನ ನಾಯಕರಾದ ದಿವಂಗತ ರಾಜೀವ್ ಗಾಂಧೀಯವರು ಶಿಕ್ಷಣ ನೀತಿಯನ್ನು ಜಾರಿಗೆ ತರುವಾಗ, ಅದರ ಅಧ್ಯಕ್ಷ ಸ್ಥಾನವನ್ನು ಕೊಠಾರಿ ಎನ್ನುವವರಿಗೆ ವಹಿಸಿದ್ದರು.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(963) 6.00 23-09-2021 ಸಿಎಸ್/ ಆರ್‌ಎನ್

**ಶ್ರೀ ಬಿ.ಕೆ.ಹರಿಪ್ರಸಾದ್(ಮುಂದು):-**

ಅದರಲ್ಲಿ 21 ಜನರು ಸದಸ್ಯರಿದ್ದರು. ಅದರಲ್ಲಿ ಕಾಂಗ್ರೆಸ್ ಪಕ್ಷದ ಯಾವುದೇ ಸದಸ್ಯರು ಇರಲಿಲ್ಲ. ಅದರಲ್ಲಿ ಶಿಕ್ಷಣ ಕ್ಷೇತ್ರದ ನುರಿತರು . ಶಿಕ್ಷಣ ಕ್ಷೇತ್ರದ ತಜ್ಞರು, ಶಿಕ್ಷಕರು, ವಿದ್ಯಾರ್ಥಿ ಸಂಘಟನೆಗಳು, ಮತ್ತು ಎಲ್ಲಾ ವಿಶ್ವವಿದ್ಯಾನಿಲಯದ ಉಪ ಕುಲಪತಿಗಳು, ಆ ಸಮಿತಿಯಲ್ಲಿದ್ದರು. ಅವರೆಲ್ಲರೂ ಈ ವಿಚಾರದ ಬಗ್ಗೆ ವ್ಯಾಪಕವಾಗಿ ಚರ್ಚೆಯನ್ನು ಮಾಡಿ, ಈ ಶಿಕ್ಷಣ ನೀತಿಯನ್ನು ನಮ್ಮ ರಾಷ್ಟ್ರದಲ್ಲಿ ತರುವುದಕ್ಕೆ ಪ್ರಯತ್ನವನ್ನು ಮಾಡಿದರು. National Education Policy ಯಲ್ಲಿ ನಮ್ಮ ಸಂವಿಧಾನದ ಆಶಯಗಳನ್ನು ಸಂಪೂರ್ಣವಾಗಿ ಕಡೆಗಣಿಸಿದ್ದಾರೆ ಎನ್ನುವುದಿದ್ದರೆ ಸಂವಿಧಾನದ ಮೂಲ ಆಶಯಗಳಾದ ಜ್ಯಾತ್ಯಾತೀತ ತತ್ವ, ಭ್ರಾತೃತ್ವ ಸಮಾನತೆ ಮತ್ತು ಸಮಾಜವಾದದ ಪ್ರಸ್ತಾವವೇ ಇಲ್ಲ, ಅದರಲ್ಲಿಯೂ ನಮ್ಮ ಸಂವಿಧಾನದಲ್ಲಿರುವ ಹಾಗೆ 14 ವಯಸ್ಸಿನವರೆಗೆ ಉಚಿತ ಶಿಕ್ಷಣ ಎನ್ನುವ ವಿಚಾರ ಎಲ್ಲಿಯೂ ಪ್ರಸ್ತಾಪ ಆಗಿಲ್ಲ. ಶ್ರೀಯುತ ರಾಜೀವ್ ಗಾಂಧಿಯವರು ಈ ಸಮಿತಿ ರಚನೆ ಮಾಡಿದಾಗ ಶ್ರೀಮಾನ್ ಕೊಠಾರಿಯವರು ಇದರ ಅಧ್ಯಕ್ಷರಾಗಿದ್ದರು. ಭಾರತೀಯ ಜನತಾ ಪಕ್ಷದ ಎನ್‌ಡಿಎ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ತಂದಂತಹ ಶಿಕ್ಷಣ ನೀತಿಯ ಸಮಿತಿಗೆ ಶ್ರೀ ಸುಬ್ರಮಣ್ಯಂರವರು ಅಧ್ಯಕ್ಷರಾಗಿದ್ದರು. ಆನಂತರ ಶ್ರೀ ಕಸ್ತೂರಿ ರಂಗನ್ ಅವರು ಅಧ್ಯಕ್ಷರಾಗಿದ್ದರು. ಸಂಪೂರ್ಣವಾಗಿ ಈ ರಾಷ್ಟ್ರದ ಶಿಕ್ಷಣ ನೀತಿಯನ್ನು ಬದಲಾವಣೆ ಮಾಡಬೇಕೆಂದು ಹೊರಟಾಗ ಅವರು ಕರ್ನಾಟಕದ ಮಾದರಿಯನ್ನು ಒಪ್ಪಿಕೊಳ್ಳಬೇಕಾಗಿತ್ತು, ತಾವೇ ನೀಡಿರುವ ಪುಸ್ತಕದ 15ನೇ ಪುಟದಲ್ಲಿ Karnataka has the third highest number of colleges in the country with 3670 colleges, ಅದರಲ್ಲಿಯೂ ಸಹ ಇಡೀ ರಾಷ್ಟ್ರದಲ್ಲಿಯೇ ಬೆಂಗಳೂರಿನಲ್ಲಿ ಅತ್ಯಂತ ಹೆಚ್ಚಿನ ವಿದ್ಯಾಸಂಸ್ಥೆಗಳಿವೆ ಎನ್ನುವ ವಿವರಗಳಿವೆ. ಇದನ್ನೆಲ್ಲ ಓದಿದಾಗ ಒಂದು ಕಡೆ ಬಹಳ ಹೆಮ್ಮೆ ಅನಿಸುತ್ತದೆ. ಇಡೀ ರಾಷ್ಟ್ರದಲ್ಲಿಯೇ ಕರ್ನಾಟಕ ರಾಜ್ಯ ಶಿಕ್ಷಣ ನೀತಿಗೆ ಮಾದರಿಯಾಗಿದೆ. ಶಿಕ್ಷಣ ಕ್ಷೇತ್ರದಲ್ಲಿ ಅತಿ ಹೆಚ್ಚು ಶಿಕ್ಷಣ ಸಂಸ್ಥೆಗಳಿರುವುದು ಮೊದಲಿಗೆ ಆಂಧ್ರಪ್ರದೇಶದಲ್ಲಿ ಎಂದು ನನಗನಿಸುತ್ತದೆ, ಮಹಾರಾಷ್ಟ್ರದ ಪೂನಾ, ರಾಜಾಸ್ಥಾನದಲ್ಲಿ ಕೋಟಾ, ದೆಹಲಿ, ಬೆಂಗಾಲ್, ಇವೆಲ್ಲವೂ ಸಹ ಶಿಕ್ಷಣ ಕ್ಷೇತ್ರದಲ್ಲಿ ಅತಿ ಹೆಚ್ಚು ಸಾಧನೆಯನ್ನು ಮಾಡಿರತಕ್ಕ ರಾಜ್ಯಗಳು. ಉನ್ನತ ಶಿಕ್ಷಣದಲ್ಲಿ ನಮ್ಮ ರಾಜ್ಯದಲ್ಲಿಯೇ ಬೆಂಗಳೂರು ನಗರ ಮೊದಲನೆಯ ಸ್ಥಾನದಲ್ಲಿದೆ. ಈ ರಾಜ್ಯದ ಶಿಕ್ಷಣ ನೀತಿಯ ಮಾದರಿಯನ್ನು ಇಡೀ ದೇಶಕ್ಕೆ ಅನ್ವಯಿಸುವ ಕೀರ್ತಿ ಮತ್ತು ಹೆಮ್ಮೆಯನ್ನು ನಮ್ಮ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸರ್ಕಾರ ಪಡೆದುಕೊಳ್ಳಬಹುದಿತ್ತು. ಯಾರಾದರೂ ಸ್ವಾಭಿಮಾನಿಗಳಿದ್ದರೆ ಈ ಕರ್ನಾಟಕ ರಾಜ್ಯದ ಶಿಕ್ಷಣ ನೀತಿಯ ಮಾದರಿಯನ್ನು ಇಡೀ ರಾಷ್ಟ್ರಕ್ಕೆ ತರುತ್ತೇವೆಂದು ಹೇಳಬೇಕಾಗಿತ್ತು.

ಈ ಶಿಕ್ಷಣ ನೀತಿಯ ಹಕ್ಕುದಾರರು ಎಂದರೆ ಮೊದಲಿಗೆ ವಿದ್ಯಾರ್ಥಿಗಳು, ನಂತರ ಶಿಕ್ಷಕರು, ನಂತರ ಪೋಷಕರು. ಮಾನ್ಯ ಶಿಕ್ಷಣ ಸಚಿವರು ನೀಡಿರುವ ಹೇಳಿಕೆಗಳನ್ನು ನಾನು ಕೆಲವು ಪತ್ರಿಕೆಗಳಲ್ಲಿ ಓದಿದ್ದೇನೆ. ಸುಮಾರು ೫ ಲಕ್ಷ ವ್ಯಕ್ತಿಗಳ ಜೊತೆಯಲ್ಲಿ ನಾವು ಚರ್ಚೆ ಮಾಡಿ, ಕೆಲವು ವಿದ್ಯಾಸಂಸ್ಥೆಗಳ ಜೊತೆಯಲ್ಲಿ ಚರ್ಚೆ ಮಾಡಿ ಈ ತೀರ್ಮಾನಕ್ಕೆ ನಾವು ಬಂದಿದ್ದೇವೆ ಎನ್ನುವ ಹೇಳಿಕೆಯನ್ನು ಶಿಕ್ಷಣ ಸಚಿವರು ನೀಡಿದ್ದಾರೆ. ಆದರೆ ಆ ತೀರ್ಮಾನ ಏನು ಎನ್ನುವುದನ್ನು ಯಾವ ಸಂಸ್ಥೆಗಳಿಗೂ ಸಹ ಇನ್ನೂ ಹೇಳಿಲ್ಲ. ಈ ರಾಷ್ಟ್ರೀಯ ಶಿಕ್ಷಣ ನೀತಿಯ ಬಗ್ಗೆ ಸಂವಿಧಾನದ ಅನುಚ್ಛೇದ 29 ಮತ್ತು 30ನೇ ದಲ್ಲಿ The National Education Policy makes it mandatory for Christian and Muslims Education Institution to follow NEP. This goes against the constitutional guarantee for the Minority Rights. Under Article 29 & 30 the Indian Constitution guarantees the Minority Rights. In Article.28, 29 & 30. ಸಂವಿಧಾನದ ಅನುಚ್ಛೇದ 28ರಲ್ಲಿ 484ರ ಪುಟದಲ್ಲಿ ಏನು ಹೇಳಿದ್ದಾರೆ, ಅದರ 11.5 ಕಂಡಿಕೆಯಲ್ಲಿ 7ನೇ ಶತಮಾನದ ಬಾಣಭಟ್ಟ ಎನ್ನುವ ಕವಿ ಬರೆದ ಕಾದಂಬರಿಯಲ್ಲಿ 64 ವಿದ್ಯೆಗಳನ್ನು ಕಲಿಸಿಕೊಡಬಹುದು ಎಂದು ಹೇಳಲಾಗಿದೆ. ತೆಲಗು ಭಾಷೆಯಲ್ಲಿ ಒಂದು ಗಾದೆ ಇದೆ, “**ಮಾ ಚಿನ್ನೋಡು, ಅರವೈನಾಲ್ಗುಲ ವಿದ್ಯಲೊ ಪಾರಂಗತುಡು, ಆದರೆ ರಂಡೇರಂಡು ವಿದ್ಯಲು ತೆಲಿಲೇದು, ಅದಿ ಏಮಂಟೆ, ಸ್ವಂತ ಬುದ್ಧಿಲೇದು, ಇಂಕೊಕರು ಚೆಪ್ಪೇದಿ ವಿನಲೇದು,”** ಅಂದರೆ ಆತ 64 ವಿದ್ಯೆಯಲ್ಲಿ ಪರಿಣಿತರು, ಆದರೆ ಅವರಿಗೆ ಸ್ವಂತ ಬುದ್ಧಿ ಇಲ್ಲ, ಬೇರೊಬ್ಬರು ಹೇಳುವುದನ್ನು ಕೇಳುವುದು ಇಲ್ಲ. ಅಂದರೆ ನಮ್ಮ ಸಂವಿಧಾನದ ಆರ್ಟಿಕಲ್ 28ನಲ್ಲಿ “Freedom as to attendance at religious instruction or religious worship in certain educational institutions. (1) No religious instruction shall be provided in any educational institution wholly maintained out of State funds.” ಸರ್ಕಾರ ಅದನ್ನು ಕೂಡ ಜಾರಿಗೆ ತಂದಿದೆ. ಇದು ಸಂವಿಧಾನದ ಆಶಯಗಳಿಗೆ ವಿರೋಧವಾಗಿರುವ ನೀತಿ. ಈ ದೇಶದ ಭವಿಷ್ಯವನ್ನು ರೂಪಿಸುವ ಶಿಕ್ಷಣ ನೀತಿಯನ್ನು ಚರ್ಚೆ ಮಾಡುವುದಕ್ಕೆ ಸಮಿತಿಗೆ ನೀಡಲಾಗಿದೆ. ಅದಕ್ಕೆ ನಮ್ಮ ಅಭ್ಯಂತರವೇನೂ ಇಲ್ಲ. National Education Policy ನೀತಿಯಲ್ಲಿ One Nation, One Education. ಸಂಪೂರ್ಣವಾಗಿ ನಮ್ಮ University Grant Commission ಎನ್ನುವ ಅಂಗಡಿಯನ್ನು ಮುಚ್ಚಿ, Higher Education Council of India ಎಂದು ಮಾಡಿ, ಸಂಪೂರ್ಣವಾಗಿ ಕೇಂದ್ರೀಕೃತ ಮಾಡುವ

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಒಂದು ಹುನ್ನಾರ ಈ ಶಿಕ್ಷಣ ನೀತಿಯಲ್ಲಿದೆ. ಅದಲ್ಲದೇ by proposing the creation of Educational Zones for the socio-economically disadvantaged groups. NEP-2020 effectively proposes to establish a segregated National School and Teacher Education System. It goes against the spirit of Article.14,15 & 16 of Indian Constitution. 2009ರಲ್ಲಿ ತಂದಿರುವ Right Education Act establishes the duty of the State to provide elementary educational for all children of India. As a result the number out-of-school children age between 14 & 16 fell from 13 million to 2006 and 6 million in 2014. ಹಿಂದೆ Right Education Act ಎಂದು ಶ್ರೀಮತಿ ಸೋನಿಯಾ ಗಾಂಧಿಯವರು ಮತ್ತು ಮಾನ್ಯ ಮನಮೋಹನ ಸಿಂಗ್‌ರವರು ಶಿಕ್ಷಣ ನೀತಿಯನ್ನು ಜಾರಿಗೆ ತಂದಾಗ ಎಲ್ಲಾ ಶಿಕ್ಷಣ ಸಂಸ್ಥೆಗಳಲ್ಲಿಯೂ ಸಹ ಶೇಕಡ 25ರಷ್ಟು ಬಡ ಮಕ್ಕಳಿಗೆ ಉಚಿತ ಶಿಕ್ಷಣವನ್ನು ನೀಡಬೇಕೆನ್ನುವ ಒಂದು ಕಾನೂನನ್ನು ಮಾಡಿದ್ದರು. ಅದಕ್ಕೆ ಕೆಲವು ಶಿಕ್ಷಣ ಸಂಸ್ಥೆಯವರು ನಾವು ಹೊಟ್ಟೆಪಾಡಿಗಾಗಿ ಶಾಲೆಗಳನ್ನು ತೆರೆದಿದ್ದೇವೆ, ಅದಕ್ಕೆ Right Education Act ತಂದು ಉಚಿತ ಶಿಕ್ಷಣ ನೀಡಬೇಕೆಂದರೆ ಏನು ಮಾಡುವುದು ಎಂದು ತಮ್ಮ ವಿರೋಧವನ್ನು ವ್ಯಕ್ತಪಡಿಸಿದರು. ಆದರೆ ಈ ರಾಷ್ಟ್ರದಲ್ಲಿ ಮಹಾತ್ಮ ಗಾಂಧೀಜಿಯವರ ಆಶಯದಂತೆ ಈ ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಸಹ ಪ್ರಜಾಪ್ರಭುತ್ವದ ಆಶಯದಂತೆ ಎಲ್ಲಾ ಸವಲತ್ತುಗಳು ದೊರೆಯಬೇಕು. ಈ ಮಹಾತ್ಮರ ಆಶಯಕ್ಕೆ ತಣ್ಣೀರನ್ನು ಹಾಕಲಾಗಿದೆ. ಅಲ್ಲದೇ ನಾವೆಲ್ಲರೂ ಓದುವಾಗ Scholarship ಮತ್ತು Freeship ಸಿಗುತ್ತಿತ್ತು. ಈಗ National Education Policy ನೀತಿಯ ಪ್ರಕಾರ Merit based Scholarship ಎಂದು ಹೇಳುತ್ತಿದ್ದಾರೆ. Merit based Scholarship ಎನ್ನುವುದು ಅವಕಾಶವನ್ನು ವಂಚನೆ ಮಾಡತಕ್ಕ ಒಂದು ಪಾಲಿಸಿ. ಸರ್ಕಾರ ಏನಾದರೂ ತಯಾರಿಯನ್ನು ಮಾಡಕೊಂಡಿರಬಹುದು. ಆದರೆ ತರಾತುರಿಯಲ್ಲಿ ತಂದಿರುವ ಈ ಪಾಲಿಸಿ. ಶಿಕ್ಷಣ ಕ್ಷೇತ್ರದಲ್ಲಿ ಬದಲಾವಣೆ ತರುತ್ತೇವೆಂದು ಈ ಶಿಕ್ಷಣ ನೀತಿಯನ್ನು ಜಾರಿಗೆ ತಂದಿರಬಹುದು. ಆದರೆ ಶಿಕ್ಷಣ ವ್ಯವಸ್ಥೆಯ ಪಾಲುದಾರರಾಗಿರುವ ಅರ್ಥಾತ್ ವಿದ್ಯಾರ್ಥಿಗಳು, ಶಿಕ್ಷಕರು, ಪಾಲಕರು ಮತ್ತು ಶಿಕ್ಷಣ ಸಂಸ್ಥೆಗಳು ಈ ನೀತಿಗೆ ಎಷ್ಟರಮಟ್ಟಿಗೆ ತಯಾರಾಗಿವೆ. ಇದನ್ನೆಲ್ಲ ಜಾರಿಗೆ ತರಲು syllabus ಮಾಡಲು ಇನ್ನೂ 10 ವರ್ಷಗಳ ಕಾಲ ಬೇಕಾಗುತ್ತದೆ. ಒಂದು ಶಿಕ್ಷಣ ನೀತಿಯನ್ನು ಜಾರಿಗೆ ತರುವುದಕ್ಕೆ ಕನಿಷ್ಠ ತಯಾರಿಯನ್ನು ಸಹ ಮಾಡದೇ ಶಿಕ್ಷಣ ನೀತಿಯನ್ನು ಜಾರಿಗೆ ತರುವುದರ ಮೂಲಕ ಮಕ್ಕಳನ್ನು ಬಲಿಪಶು ಮಾಡುವ ಕೆಲಸವನ್ನು ಸರ್ಕಾರ ಮಾಡಲಾಗಿದೆ. ಇದರ ಜೊತೆಗೆ ಸರ್ಕಾರ ನಾಲ್ಕು ವರ್ಷಗಳ CBCS (Choice Based Credit

System) ಪದ್ಧತಿಯನ್ನು ತರುವುದಕ್ಕೆ ಪ್ರಯತ್ನವನ್ನು ಮಾಡುತ್ತಿದೆ. ಈಗಾಗಲೇ ದೆಹಲಿಯಲ್ಲಿ 2016 ಅಥವಾ 2017ರಲ್ಲಿ ಇಂತಹ ನೀತಿಯನ್ನು ಜಾರಿಗೆ ತಂದರೂ ಸಹ ಅದರಿಂದ ಯಾವುದೇ ಫಲ ದೊರೆಯಲಿಲ್ಲ. ಹಾಗಾಗಿ ಅದನ್ನು withdraw ಮಾಡಿದರು.

(ಮುಂದು)

(964)/23-9-2021/6-10/ಎಲ್ಎಂ/ವಿಕೆ

**ಶ್ರೀ ಬಿ.ಕೆ.ಹರಿಪ್ರಸಾದ್(ಮುಂದು)**:-

ಮಾನ್ಯ ಸಭಾಪತಿಗಳೆ, ಅದರ ವಿಫಲತೆಯನ್ನು ಇಲ್ಲಿ ಅನುಷ್ಠಾನಕ್ಕೆ ತಂದು ಅನುಸರಿಸುತ್ತಿದ್ದೀರಾ ಅಥವಾ ಅಲ್ಲಿ ಫೇಲ್ ಆಗಿರುವುದನ್ನು ಇಲ್ಲಿ ತೆಗೆದುಕೊಳ್ಳುತ್ತಿದ್ದೀರಾ ಎನ್ನುವುದನ್ನು ತಿಳಿಸಬೇಕಾಗುತ್ತದೆ. ದೆಹಲಿಯ ವಿಫಲತೆಗೆ ಕಾರಣವೇನು ಎನ್ನುವುದನ್ನು ಆಧ್ಯಯನ ಮಾಡಿ ಈ ತೀರ್ಮಾನವನ್ನು ಸರ್ಕಾರ ತೆಗೆದುಕೊಂಡಿದ್ದರೆ ನನದೇನು ಅಭ್ಯಂತರವಿಲ್ಲ. ಗುಣಮಟ್ಟದ ಔಪಚಾರಿಕ ಶಿಕ್ಷಣದ ಮೂಲಕ ಭವಿಷ್ಯದ ವಿಜ್ಞಾನಿ, ಇಂಜಿನಯರ್, ಡಾಕ್ಟರ್, ಸಮಾಜಶಾಸ್ತ್ರಜ್ಞರು, ಇತಿಹಾಸಕಾರರು, ಶಿಕ್ಷಣ ತಜ್ಞರು, ಭಾಷಾ ವಿಜ್ಞಾನಿಗಳು ಮುಂತಾದವರನ್ನು ರೂಪಿಸುವಂತಹ ಶಿಕ್ಷಣವನ್ನು ಕೈಬಿಟ್ಟು ಕೌಶಲ್ಯದ ಹೆಸರಿನಲ್ಲಿ ಬಂಡವಾಳಶಾಹಿಗಳಿಗೆ ಸರ್ಕಾರ ಮಣೆ ಹಾಕುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ನಾನು ಇದನ್ನು ಏಕೆ ಹೇಳುತ್ತಿದ್ದೇನೆ ಎಂದರೆ, ನಿನ್ನೆ ಚಾಣಕ್ಯ ವಿಶ್ವವಿದ್ಯಾನಿಲಯ ಸ್ಥಾಪನೆ ಬಗ್ಗೆ ಚರ್ಚೆಯಾಗಿ ಇದನ್ನು ವಿಶ್ವವಿದ್ಯಾನಿಯ ಎಂದು announce ಮಾಡಿದರು. ಅದರಲ್ಲಿ ಜಿಯೋ ವಿಶ್ವವಿದ್ಯಾನಿಲಯ, ಅಂಬಾನಿ ವಿಶ್ವವಿದ್ಯಾನಿಲಯ, ಇವುಗಳ ಸ್ಥಾಪನೆಗೆ ಇನ್ನು ಒಂದು ಕಲ್ಲನ್ನು ಇಟ್ಟಿಲ್ಲ ಆಗಲೇ first class International University ಎಂದು ಹೇಳಿಬಿಟ್ಟರು. ವ್ಯಾಪಾರ ಮಾಡುವವರಿಗೆ ನೀವು ಶಿಕ್ಷಣ ಕ್ಷೇತ್ರವನ್ನು ಕೊಟ್ಟಾಗ ಏನು ಆಗುತ್ತದೆ ಎನ್ನುವುದನ್ನು ಯೋಚನೆ ಮಾಡಬೇಕು. ಪಠ್ಯಪುಸ್ತಕ ರಚನೆ ಮಾಡುವುದನ್ನು ಕೇಂದ್ರಿಕರಿಸುವ ಹುನ್ನಾರವನ್ನು ೪.೩೨ ಭಾರತೀಯ ಸಂಸ್ಕೃತಿಯಲ್ಲಿರುವ ಕಲಾ ಶಿಕ್ಷಣವನ್ನು ಕಲಿಕೆಯ ಪ್ರಕ್ರಿಯೆಯಲ್ಲಿ ಸಮ್ಮಿಳನಗೊಳಿಸಬೇಕೆಂದು ನೀತಿ ಹೇಳುವುದಾದರೂ ರಾಷ್ಟ್ರದಲ್ಲಿ ಪಠ್ಯ ಕ್ರಮ ನಿರ್ಧಾರವಾಗುವ ಭಾರತದ ಕಲೆ ಎನ್ನುವುದು ಯಾವುದು, ಪಾರಂಪರಿಕ ಅಂದರೆ historical. ಯಾವ ವಿಶ್ವವಿದ್ಯಾನಿಲಯ ತೆಗೆದುಕೊಳ್ಳುತ್ತೀರಿ? ನಿಮ್ಮದೇ ಆದ ವಿಶ್ವವಿದ್ಯಾನಿಲಯ ತೆಗೆದುಕೊಳ್ಳುತ್ತೀರಾ. Nationalised, ಕೇಂದ್ರಿಕೃತವಾದರೆ ರಾಜ್ಯದಲ್ಲಿರುವ ಐತಿಹಾಸಿಕ ಪುರುಷರು, ಮಹಿಳೆಯರು ಇದ್ದಾರೆ. ರಾಷ್ಟ್ರದ ಸ್ವತಂತ್ರ ಹೋರಾಟ ಎಂದರೆ ೧೮೫೭ನೇ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಾಲಿನಲ್ಲಿ ಎಂದು ಹೇಳುತ್ತಾರೆ. ಝಾನ್ಸಿರಾಣಿ ಎಂದು ಹೇಳುತ್ತಾರೆ ಅದೆಲ್ಲವನ್ನು ನಾವು ಓದಬೇಕು. ಕರ್ನಾಟಕ ರಾಜ್ಯದ ಅಬ್ಬಕ್ಕ ರಾಣಿ, ಕಿತ್ತೂರರಾಣಿ ಚೆನ್ನಮ್ಮ, ಕೆಳದಿ ಚನ್ನಮ್ಮ ಅಥವಾ ಓಬ್ಬವ್ವನ ಬಗ್ಗೆ ಈ ಇತಿಹಾಸದಲ್ಲಿ ಎಲ್ಲಿಯು ಕಾಣುವುದಿಲ್ಲ. ಇಂತಹ ಕೆಲಸವನ್ನು ತಾವು ಮಾಡಲು ಹೊರಟ್ಟಿದ್ದಿರಿ. ೮ ದೊಡ್ಡ ಧರ್ಮಗಳು ಇರುವಂತಹ ರಾಷ್ಟ್ರ ನಮ್ಮದು. ಹಿಂದೂ, ಇಸ್ಲಾಂ, ಕ್ರೈಸ್ತ, ಬೌಧ , ಜೈನ್, and Zoroastrian ಧರ್ಮಗಳು. ಆರ್ಯ, ದ್ರಾವಿಡ ಮಂಗೋಲಿಯನ್ ಮೂರು ರೀತಿಯ ನಾಗರೀಕತೆ ಇರುವಂತಹ ರಾಷ್ಟ್ರ. ೨೨ ಅಧಿಕೃತವಾದ ಭಾಷೆಗಳು ಇರುವಂತಹ ರಾಷ್ಟ್ರ ನಮ್ಮದು. ಇನ್ನು ೨೬ ಭಾಷೆಗಳು ಲೈನ್‌ನಲ್ಲಿ ನಿಂತಿವೆ. ಅದರಲ್ಲಿ ತುಳು ಮತ್ತು ಕೊಡವ ಭಾಷೆಗಳು ನಮಗೂ ಅಧಿಕೃತ ಸ್ಥಾನ-ಮಾನವನ್ನು ಕೊಡಿ ಎಂದು ಕೇಳುತ್ತಿದ್ದಾರೆ. ವಿವಿಧ ಭಾಷೆಗಳು ಇರುವಂತಹ ಈ ರಾಷ್ಟ್ರದಲ್ಲಿ ತಾವು ಏಕಾಏಕಿ ಶಿಕ್ಷಣ ನೀತಿಯನ್ನು ಕೇಂದ್ರಿಕರಿಸಿ ಹಿಂದಿಯನ್ನು ಹೇರುವಂತಹ ಪ್ರಯತ್ನ ಮಾಡುತ್ತಿರುವುದು ತಪ್ಪು. ಕಾಂಗ್ರೆಸ್‌ನ ಕಾರ್ಯಕರ್ತನಾಗಿ ನಾನು ಹಿಂದಿ ಮಾತನಾಡಲು ಹೆಮ್ಮೆ ಪಡುತ್ತೇನೆ. ಆದರೆ ನಾನು ಹಿಂದಿ ಭಾಷೆಯನ್ನು ಮಾತನಾಡುತ್ತೇನೆ ಎಂದು ನನ್ನ ಮೇಲೆ ಹಿಂದಿ ಭಾಷೆಯನ್ನು ಹೇರಲು ಸಾಧ್ಯವಿಲ್ಲ. ಪಂಡಿತ ಜವಾಹರಲಾಲ್ ನೆಹರುರವರ ತ್ರೀಭಾಷಾ ಸೂತ್ರ ಅಂದರೆ, ಮಾತೃ ಭಾಷೆ, ಅಧಿಕೃತವಾದ ಭಾಷೆ, ಹಿಂದಿ/ಇಂಗ್ಲೀಸ್ ತೆಗೆದುಕೊಳ್ಳಬಹುದು ಎಂದು ಹೇಳಿದ್ದಾರೆ. ೧೯೫೦ನೇ ಸಾಲಿನಲ್ಲಿ ಶಿಕ್ಷಣ ನೀತಿಯಾದಾಗ ಪಂಡಿತ ಜವಾಹರಲಾಲ್ ನೆಹರುರವರು ೧೫ ವರ್ಷಗಳ ಕಾಲ ಹಿಂದಿ ಅಧಿಕೃತವಾದ ಭಾಷೆಯಾಗಿರುತ್ತದೆ ಎಂದು ಹೇಳಿದರು. ೧೯೬೫ನೇ ಸಾಲಿನಲ್ಲಿ ಅದನ್ನು review ಮಾಡಲು ಹೋದಾಗ ತಮಿಳುನಾಡಿನಲ್ಲಿ ದೊಡ್ಡ ಗಲಭೆಯಾಯಿತು. ತಮಿಳುನಾಡಿನವರು ಹಿಂದಿಯನ್ನು ಒಪ್ಪಿಕೊಳ್ಳಲು ತಯಾರಿರಲಿಲ್ಲ. ಈಗ ಶಿಕ್ಷಣ ನೀತಿಯಲ್ಲಿ ಇವರು ಮಾತೃ ಭಾಷೆ ಮತ್ತು ಹಿಂದಿ ಎಂದು ಹೇಳುತ್ತಾರೆ. ಅಂದರೆ ಪರೋಕ್ಷವಾಗಿ ಹಿಂದಿಯನ್ನು ಹೇರುವಂತಹ ಕೆಲಸವನ್ನು ಈ ಸರ್ಕಾರ ಮಾಡುತ್ತಿದೆ. ತುಳು, ಕೊಡವ ಮಾತನಾಡುವವರು ಸುಮಾರು ಜನ ಇದ್ದೇವೆ. ತುಳು ಮತ್ತು ಕೊಡವ ಭಾಷೆಯ ಕಥೆ ಏನು ಎಂದು ಯಾರಿಗೂ ಗೊತ್ತಿಲ್ಲ. ಕೊಂಕಣಿ ೨೮ ಅಧಿಕೃತ ಭಾಷೆಯಲ್ಲಿ ಇದೆ. ಅದಕ್ಕೆ ಏನು ತೊಂದರೆಯಾಗುವುದಿಲ್ಲ. ಏಕೆಂದರೆ ಕೊಂಕಣಿಯನ್ನು ದೊಡ್ಡ-ದೊಡ್ಡ ಜನರು ಮಾತನಾಡುತ್ತಾರೆ. ತುಳು ಮತ್ತು ಕೊಡವ ಭಾಷೆಯನ್ನು ಆಯಾ ಸಮುದಾಯಕ್ಕೆ ಸೇರಿದವರು ಮಾತನಾಡುವುದು. ಅವುಗಳಿಗೆ ಇನ್ನು ಅಧಿಕೃತವಾದ ಸ್ಥಾನ-ಮಾನವನ್ನು ಕೊಡಲಿಲ್ಲ. ಈ ವಿಚಾರವಾಗಿ ನಾವು ಲೋಕಸಭೆಯಲ್ಲಿ ಸತತವಾಗಿ ಚರ್ಚೆ ಮಾಡಿದ್ದೇವೆ. ಆದರೆ ಈ ರಾಜ್ಯದಲ್ಲಿ ನಾಲ್ಕು ಭಾಷೆ ಇರುವಾಗ ಹಿಂದಿ ಏಕೆ ಬೇಕು? " ಪೋಷಕರು ಮತ್ತು

ಮಕ್ಕಳಿಗೆ ಬಿಟ್ಟಿರುವ ವಿಚಾರ ಎಂದರೆ ಭಾಷೆಯ ವಿಚಾರ" ಇದರ ಬಗ್ಗೆ ಸುಪ್ರಿಮ ಕೋರ್ಟ್ ತೀರ್ಮಾನ ಕೊಟ್ಟಿದೆ. ಈ ಸರ್ಕಾರ ಪರೋಕ್ಷವಾಗಿ ಹಿಂದಿಯನ್ನು ಹೇರುತ್ತಿದೆ, ಇದಕ್ಕೆ ನಮ್ಮ ವಿರೋಧವಿದೆ. ಪಠ್ಯಪುಸ್ತಕದಲ್ಲಿ *"Research topics are going to be decided by a National Research Association. With that, the freedom to choose your research topic is being taken away. "Higher Education will no longer be a tool of emancipation but of perpetuation of certain types of ideology and certain kind of thinking,"* Research and PhD ಮಾಡುವ ಸಂದರ್ಭದಲ್ಲಿ ಸಾಕಷ್ಟು ಸಮಯ ಮತ್ತು ಸಂಪನ್ಮೂಲಗಳನ್ನು ಕ್ರೂಢಿಕರಿಸಿಕೊಂಡು ಈ ದೇಶಕ್ಕೆ ಒಳ್ಳೆಯದಾಗಬೇಕೆಂದು research ಅದನ್ನು ಸಹ ಕೇಂದ್ರದವರು ಏನು research ಮಾಡಬೇಕು ಎನ್ನುವುದನ್ನು ಹೇಳುತ್ತಾರೆ.

**ಡಾ: ತೇಜಸ್ವಿನಿಗೌಡ**:- ಮಾನ್ಯ ಸಭಾಪತಿಗಳೆ, ಮಾನ್ಯ ಹರಿಪ್ರಸಾದ್‌ರವರು ರಾಷ್ಟ್ರೀಯ ಪಕ್ಷದ ರಾಷ್ಟ್ರ ಮಟ್ಟದ ನಾಯಕರಾಗಿ ಕೆಲಸ ಮಾಡಿದವರು. Indian National Congress, ಹಿಂದಿಯನ್ನು ದೇಶದ ಮುಖ್ಯ ಸಂಪರ್ಕ ಭಾಷೆಯನ್ನಾಗಿ ಮಾಡುವುದಕ್ಕೆ ಪಕ್ಷದ ನಿಲುವೇನು? ಮತ್ತು ಈಗ ತಾವು ಹೇಳುತ್ತಿರುವುದು ನಿಮ್ಮ ಪಕ್ಷದ ನಿಲುವೇ ಅಥವಾ ನಿಮ್ಮ ವೈಯಕ್ತಿಕ ನಿಲುವೇ ಎನ್ನುವುದನ್ನು ಸ್ಪಷ್ಟಪಡಿಸಬೇಕು.

**ಶ್ರೀ ಬಿ.ಕೆ.ಹರಿಪ್ರಸಾದ್**:- ಮಾನ್ಯ ಸಭಾಪತಿಗಳೆ, ನನ್ನ ವೈಯಕ್ತಿಕ ನಿಲುವನ್ನು ಹೇಳಬೇಕಾದ ಸಂದರ್ಭದಲ್ಲಿ ಹೇಳಿ ಹೇಳುತ್ತೇನೆ. ಕಾಂಗ್ರೆಸ್ ಪಕ್ಷದ ನಿಲುವು ಎಂದರೆ ತ್ರೀ ಭಾಷಾ ಸೂತ್ರ. ಮಾತೃ ಭಾಷೆ, ಹಿಂದಿ ಮತ್ತು ಇಂಗ್ಲೀಸ್ ಯಾವುದಾದರೂ ಕಲಿಯಬಹುದು. ಅದು ಪಕ್ಷದ ನಿಲುವು. ಇದರಲ್ಲಿ ಯಾರಿಗೂ ಸಂಶಯ ಬೇಡ. ಪಂಡಿತ ಜವಾಹರಲಾಲ್ ನೆಹರುರವರ ತ್ರೀ ಭಾಷಾ ಸೂತ್ರ ೭೦ ವರ್ಷಗಳಿಂದ ಈ ರಾಷ್ಟ್ರದಲ್ಲಿ ಸತತವಾಗಿ ನಡೆದುಕೊಂಡು ಬಂದಿದೆ. ಅದಕ್ಕೆ ತಿಲಾಂಜಲಿ ಹೇಳುವುದು ಸರಿಯಲ್ಲ. ಈ research ಬಗ್ಗೆ ಏಕೆ ಹೇಳುತ್ತಿದ್ದೇನೆ ಎಂದರೆ, ಮಾನ್ಯ ಮುಖ್ಯಮಂತ್ರಿಗಳು ಗಣೇಶ್, ಮಹಾಗಣಪತಿ ಎಂದರೆ ನಮ್ಮ ನಂಬಿಕೆ ಎಂದು ಹೇಳಿದರು. ಆಗಿನ ಕಾಲದಲ್ಲಿ plastic surgery ಮಾಡಿದರು. ಯಾರನ್ನು misguide ಮಾಡುತ್ತಿದ್ದೀರಿ. ಕಾಶ್ಮೀರದ Pulwama ದಲ್ಲಿ ಬಾಂಬ್ ಬಿತ್ತು. ಆಗ ಕೆಲವು Journalist ಕೂಡಿಸಿಕೊಂಡು " ಯಾರ್ ಲೋಗ ಆಯೇತ್ತೆ ಮೇರೆ ಪಾಸ್, ಆಜ್ ಭಾರಿಶ್ ಹೋರಹಾಹೈ ಪ್ಲೈಟ್ ಊಡಾನಹಿಸಕ್ತಾ, ತೋ ಹಮ್ಮೇನೆ ಭೋಲಾ, ಯಾರ್ ಬಹುತ್ ಅಚ್ಚಾ ಮೌಕಾಹೈ ಪ್ಲೈಟ್‌ಕೂ ಬಾದಲಕೆ ಉಪ್ಪರಸೇ ಲೇಜಾಓ ಔರ್ ಬಾಂಬ್ ಉಡಾವೊ" ಎಂದು ಹೇಳಿದ್ದಾರೆ. ಇವರು ಮೋಡದ scientist ಕೂಡಾ ಆಗಿಬಿಟ್ಟಿದ್ದಾರೆ. ಬಾಂಬೆ ಐಐಟಿಗೆ ಹೋದಾಗ ಭಾಷಣ ಮಾಡುತ್ತಾ, ನಿರುದ್ಯೋಗಿ ಇದೆ ಎಂದು ತಲೆ ಕೆಡಿಸಿಕೊಳ್ಳಬೇಡಿ, ನಿಮ್ಮ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮನೆ ಪಕ್ಕದಲ್ಲಿ ಹಾದು ಹೋಗುವ ಚರಂಡಿಯಲ್ಲಿ ಮಿಥೆಲ್ ಗ್ಯಾಸ್ ಬರುತ್ತದೆ. ಅದಕ್ಕೆ ಪೈಪ್ ಹಾಕಿ ಒಂದು ಪಾತ್ರೆಗೆ ಹಾಕಿದರೆ ಅದರಿಂದ ಟೀ ಮಾಡಬಹುದು ಎಂದು ಹೇಳಿದ್ದಾರೆ. ನೋಯಿಡಾದ ಟಿವಿ ಸಂದರ್ಶನದಲ್ಲಿ ಕುಳಿತು, ನಿರುದ್ಯೋಗದ ಸಮಸ್ಯೆಯೇ ಇಲ್ಲ, ಟಿವಿ ಕಛೇರಿಯ ಹೊರಗೆ ಪಕೋಡ ಮಾಡಿ ಮಾರಿ ಎಂದು ಹೇಳಿದರು. ಇವೆಲ್ಲ research ಆಗಬಾರದು

**ಶ್ರೀ ಮಹಾಂತೇಶ. ಎಂ.ಕವಟಗಿಮಠ(ಸರ್ಕಾರದ ಮುಖ್ಯ ಸಚೇತಕರು)**:-ಮಾನ್ಯ ಸಭಾಪತಿಯವರೇ, ಯಾವ ವಿಷಯಕ್ಕೆ ಇದನ್ನು ಹೇಳುತ್ತಿದ್ದಾರೆ ಎನ್ನುವುದು ನನಗೆ ಅರ್ಥವಾಗುತ್ತಿಲ್ಲ. You are speaking about the National Education Policy or what policy? ಯಾರ ವಿಷಯ ಮಾತನಾಡುತ್ತಿದ್ದೀರಿ? ನಮಗೆ ಅರ್ಥವಾಗುತ್ತದೆ. ದಯಮಾಡಿ ಮಾತನಾಡುವಾಗ....

**ಶ್ರೀ ಬಿ.ಕೆ.ಹರಿಪ್ರಸಾದ್**:- ನಿಮಗೆ ಅರ್ಥ ಮಾಡಿಸುತ್ತೇನೆ, ತಾವು ಕುಳಿತುಕೊಳ್ಳಿ. ನಾನು ಉತ್ತರ ಕೊಡುತ್ತೇನೆ ಕುಳಿತುಕೊಳ್ಳಿ.

**ಶ್ರೀ ಎನ್.ನಾರಾಯಣಸ್ವಾಮಿ**:- ನಿಮಗೆ ಯಾರು ಅರ್ಥವಾಗಿದ್ದಾರೆ ಅವರ ಬಗ್ಗೆಯೇ ಮಾತನಾಡುತ್ತಿದ್ದಾರೆ.

**(ಗೊಂದಲ)**

**ಶ್ರೀ ಮಹಾಂತೇಶ. ಎಂ.ಕವಟಗಿಮಠ:-** ಶಿಕ್ಷಣದ ನೀತಿ ಬಗ್ಗೆ ಮಾತನಾಡಿ. We are hearing you...

**ಶ್ರೀ ಬಿ.ಕೆ.ಹರಿಪ್ರಸಾದ್**:- ಮಾನ್ಯ ಸಭಾಪತಿಗಳೆ, ತಾವು ಶಿಕ್ಷಣ ರಂಗದಲ್ಲಿ ಬಹಳ ದೊಡ್ಡವರು, ನಿಮಗೆ ಎಲ್ಲಾ ಗೊತ್ತು. Research ಎಂದರೆ ಶಿಕ್ಷಣ ಅಲ್ಲದೆ ಇನ್ನೇನು? Plastic surgery ಕೂಡಾ ಒಂದು research.

**ಡಾ: ಸಿ.ಎಸ್.ಅಶ್ವಥನಾರಾಯಣ**:- ಯಾವುದಾದರೂ ವಿಷಯವನ್ನು ಹೇಳುವಾಗ ಯಾವ ದಾಖಲೆಯನ್ನು ಇಟ್ಟುಕೊಂಡು ಮಾತನಾಡುತ್ತಿದ್ದಾರೆ ಎನ್ನುವುದನ್ನಾದರೂ ಹೇಳಬೇಕು. ವಿಷಯ ಬಿಟ್ಟು ಬೇರೆಯದನ್ನ ಹೇಳುತ್ತಾ ಹೋದರೆ ಹೇಗೆ?

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಿ.ಕೆ.ಹರಿಪ್ರಸಾದ್ :-** ಮಾನ್ಯ ಸಭಾಪತಿಗಳೆ, ನಮಗೆ ಮಾತನಾಡಲು ಅವಕಾಶ ಮಾಡಿಕೊಡಿ.

**ಉಪಸಭಾಪತಿಗಳು**:- ನೀವು ಮಾತನಾಡಿ.

**ಶ್ರೀ ಬಿ.ಕೆ.ಹರಿಪ್ರಸಾದ್**:- ನೀವು ಮಾತನಾಡಿ ಎಂದು ಹೇಳುತ್ತೀರಿ, ನಿಮ್ಮ ಮಂತ್ರಿಗಳು ಪೀಠಕ್ಕೆ ಬೆನ್ನು ತೋರಿಸಿಕೊಂಡು ಅಲ್ಲಿ ಹೋಗಿ ಅಧಿಕಾರಿಗಳ ಜೊತೆಯಲ್ಲಿ ಮಾತನಾಡುತ್ತಿದ್ದಾರೆ.

(**ಮುಂದು**)

(965)23-09-2021(06-20)bsd-vk

**ಶ್ರೀ ಬಿ.ಕೆ. ಹರಿಪ್ರಸಾದ್ (ಮುಂದು)**

ಅವರ ಉತ್ತರವನ್ನು ಕೊಡಲಿ, ಉತ್ತರ ಕೊಡಬೇಕೆಂದು ಕಾಯುತ್ತಿದ್ದೇನೆ. ಮಾನ್ಯ ಸಭಾಪತಿಯವರೇ, ಸ್ವಲ್ಪ ಸದನವನ್ನು ನಡೆಸುವುದಕ್ಕೆ ಅವಕಾಶ ಮಾಡಿಕೊಡಿ.

**ಉಪ ಸಭಾಪತಿಯವರುಃ-** ಮಾತನಾಡಿ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾತನಾಡಿ ಎಂದರೆ, ನಿಮ್ಮ ಹತ್ತಿರ ರಕ್ಷಣೆ ಕೇಳುತ್ತೇವೆ, ನೀವು ರಕ್ಷಣ ಕೊಡುವುದಿಲ್ಲ ಎಂದು ಗೊತ್ತು. ಆದರೂ ಕೇಳುತ್ತೇವೆ. ಮಂತ್ರಿಯೊಬ್ಬರು ನಿಮ್ಮ ಪೀಠಕ್ಕೆ ಬೆನ್ನು ತೋರಿಸಿಕೊಂಡು ಮಾತನಾಡುತ್ತಿದ್ದರೆ ಹೇಗೆ?

**ಉಪ ಸಭಾಪತಿಯವರುಃ-** ಅದು ಎಲ್ಲರಿಗೂ ಅನ್ವಯಿಸುತ್ತದೆ, ಎಲ್ಲರೂ ಅದನ್ನು follow ಮಾಡುವುದನ್ನು ಕಲಿತುಕೊಳ್ಳಬೇಕು.

**ಶ್ರೀ ಬಿ.ಕೆ. ಹರಿಪ್ರಸಾದ್:-** ನಾನು ಮಾತನಾಡುವಾಗ disturb ಮಾಡಬಾರದು, ಅವರು disturb ಮಾಡಿದರೆ ನಾನು ಹಾಗೆ ಮಾಡುತ್ತೇನೆ.

**ಉಪ ಸಭಾಪತಿಯವರುಃ-** ಮಾತನಾಡಿ.

**ಶ್ರೀಮತಿ ಭಾರತಿಶೆಟ್ಟಿಃ-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಮಾತನಾಡುತ್ತಿರುವುದನ್ನು ತುಂಬಾ ಚೆನ್ನಾಗಿ ಕೇಳುತ್ತಿದ್ದೇವೆ. ಆದರೆ ಅವರು research ಎಂದುಕೊಂಡು ಆಲೂಗಡ್ಡೆ ಹಾಕಿದರೆ ಬಂಗಾರ ಬರುವಂತಹ research ಹೇಳಿದರೆ ನಾನೇನು ಮಾಡಲಿ, ನಾನು ಹೇಗೆ ಕೇಳಲಿ. ಬಹಳ ವಿಷಯವನ್ನು ಚೆನ್ನಾಗಿ ಮತ್ತು ಮನಮುಟ್ಟುವಂತೆ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಹೇಳುತ್ತಿದ್ದಾರೆ. ಅದನ್ನು ಕೇಳುತ್ತಿದ್ದೇವೆ. ಆದರೆ ದಯವಿಟ್ಟು ಆಲೂಗಡ್ಡೆ ಹಾಕಿದರೆ ಬಂಗಾರ ಬರುವಂತಹ research ಅನ್ನು ಹೇಳಬಾರದು. ಅದನ್ನು ಕೇಳುವುದಕ್ಕೆ ಆಗುವುದಿಲ್ಲ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ತಮ್ಮಲ್ಲಿ ಮನವಿ ಏನೆಂದರೆ ನಾನು ನನ್ನ ಭವಿಷ್ಯಕ್ಕೆ ಇಲ್ಲಿ ಮಾತನಾಡುತ್ತಿಲ್ಲ. ನನ್ನ ಭವಿಷ್ಯ ಮುಗಿದಿದ್ದು, ನಾನು ಏನೇನು ನೋಡಬೇಕೋ, ಎಲ್ಲವನ್ನು ನೋಡಿ ಇಲ್ಲಿಗೆ ಬಂದಿದ್ದೇನೆ. ಈ ರಾಷ್ಟ್ರ ಮತ್ತು ರಾಜ್ಯದ ಭವಿಷ್ಯ ಮುಖ್ಯ. ಈ ರಾಷ್ಟ್ರ ಬೆಳೆದಿರುವುದು ನಮ್ಮ ಕಣ್ಮುಂದೆ ನೋಡಿದ್ದೇವೆ. ಅದು safe ಆಗಿರಬೇಕು. ಅದಕ್ಕೋಸ್ಕರ ನಾನು ಮಾತನಾಡುತ್ತಿದ್ದೇನೆ.

**ಡಾಃ ವೈ.ಎ. ನಾರಾಯಣಸ್ವಾಮಿಃ-** ಅವರು ದೆಹಲಿಯಲ್ಲಿ ಮಂತ್ರಿಯಾಗಬೇಕು.

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಬೆಂಗಳೂರು ನಗರ is a Science City. TATA Institute, ಇರುವ ಮಹಾನ್ ಸಂಸ್ಥೆ ಇರುವ ಪಕ್ಕದಲ್ಲಿಯೇ ಹುಟ್ಟಿ ಬೆಳೆದವನು ನಾನಾಗಿದ್ದೇನೆ. ಆದ್ದರಿಂದ ದಯವಿಟ್ಟು patience ಇಟ್ಟುಕೊಂಡು ಸದಸ್ಯರು ಕೇಳಬೇಕು. ಈ ಒಂದು NEP (New Education Policy) ಮಾಡುವ ಸಂದರ್ಭದಲ್ಲಿ ಮೀಸಲಾತಿ ಎನ್ನುವುದು ಎಲ್ಲಿಯೂ ಇಲ್ಲ. ಉಚ್ಚ ಶಿಕ್ಷಣದಲ್ಲಿ ೨೦೦೬ನೇ ಇಸವಿಯಲ್ಲಿ Higher Education ನಲ್ಲಿ ಮೀಸಲಾತಿ ಬೇಕೆಂದು ೨೭% ಮೀಸಲಾತಿಯನ್ನು ಮಾನ್ಯ ಅರ್ಜುನ್‌ಸಿಂಗ್ ರವರು ಶಿಕ್ಷಣ ಸಚಿವರಾದ್ದಾಗ pass ಮಾಡಿಸಿದೆವು. ಅದರ implement ಅನ್ನು ನಾವೇ ಮಾಡಿದ್ದೇವೆ. ಅದೇ ಸಂದರ್ಭದಲ್ಲಿ TATA Institute of Science ನಲ್ಲಿ Board Member ಆಗಿದ್ದೆನು. ಆ Board Member ಆಗಿದ್ದಾಗ ಈ ವಿಚಾರ ಬಂತು. ಕೇಂದ್ರದ Parliament ನಲ್ಲಿ OBC ಗಳಿಗೆ ೨೭% ಮೀಸಲಾತಿ ಕೊಡಬೇಕೆಂದು ಒಂದು Act ಮಾಡಿದ್ದಾರೆ. ಅವರು ನನ್ನ ಹೆಸರನ್ನು ತಿಳಿದುಕೊಂಡು, ನಾನು ಯಾವುದೋ ದೊಡ್ಡ ಜಾತಿಯಲ್ಲಿ ಹುಟ್ಟಿರಬೇಕೆಂದು ಎಲ್ಲರೂ ಮಾಡಿದಂತೆ ಮೀಸಲಾತಿ ಬಗ್ಗೆ ತಮಾಷೆ ಮಾಡುತ್ತಿದ್ದರು. ಕೊನೆಗೆ ನಾನು this is the Act of the Parliament and that must be implemented ಹೇಳಿದೆ. So, we need three months' time and then we will call for the application ಎಂದು ಹೇಳಿದೆ. ಅಷ್ಟರಲ್ಲಿ ೨೦೦೭ನೇ ಇಸವಿ ಆಗಿತ್ತು. ೧೯೦೭ನೇ ಇಸವಿಯಲ್ಲಿ TATA Institute of Science ಸ್ಥಾಪನೆಯಾಗಿತ್ತು. ೨೦೦೭ರಲ್ಲಿ TATA Institute ಗೆ ೧೦೦ ವರ್ಷ ಆಗಿತ್ತು. Next meeting ಹೋದಾಗ ಎಷ್ಟು application ಗಳು ಬಂದಿತ್ತು ಎಂದು ಕೇಳಿದೆ. ಆಗ ೫೦ applications ಗಳು ಬಂದಿತ್ತು ಎಂದು ಹೇಳಿದರು. ಎಷ್ಟು ಜನ pass ಆದರು ಎಂದು ಕೇಳಿದಾಗ, ೨೩ ಜನ ಆಗಿದ್ದರು. ಅವರಿಗೆ pre-interview coaching ಕೊಟ್ಟಿದ್ದೀರಾ ಎಂದು ಕೇಳಿದಾಗ 'ಇಲ್ಲ'

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎಂದು ಹೇಳಿದರು. ಆದರೆ ೧೦೦ ವರ್ಷಗಳ ಕಾಲ ಮಹತ್ವಪೂರ್ಣವಾದ ವಿಜ್ಞಾನ ಕೇಂದ್ರದಲ್ಲಿ ಹಿಂದುಳಿದ ವರ್ಗದವರಿಗೆ admission ಇರಲಿಲ್ಲ. ಅದೇ ನೀತಿ ಇಲ್ಲಿಯೂ ಸಹ ಬರುತ್ತಿದೆ. ಶ್ರೀ ಕಸ್ತೂರಿ ರಂಗನ್‌ರವರು ನನಗೆ ಬಹಳ ಪರಿಚಯರಿದ್ದು, ೬ ವರ್ಷಗಳ ಕಾಲ ಒಟ್ಟಿಗೆ ಇದ್ದವರು. ಈ NEP ಗೆ ಅವರ ಮುಖವಾಡ. ಶ್ರೀ ಕಸ್ತೂರಿ ರಂಗನ್‌ರವರ team ಉತ್ತರ ಪೂರ್ವದ ಯಾವುದೇ ರಾಜ್ಯಕ್ಕೆ ಹೋಗಿಲ್ಲ. ಅಲ್ಲಿ ೭ ರಾಜ್ಯಗಳಿದ್ದು, ಅವುಗಳನ್ನು seven sisters of India ಎಂದು ಕರೆಯುತ್ತೇವೆ. ಮಧ್ಯಪ್ರದೇಶಕ್ಕೆ ಹೋಗಿರಲಿಲ್ಲ. ಕರ್ನಾಟಕಕ್ಕೆ ಮೂರು ಸಾರಿ ಬಂದರು. ಏಕೆಂದರೆ ಇಬ್ಬರು-ಮೂರು ಸದಸ್ಯರು ಇಲ್ಲಿಯೇ ಇದ್ದರು. ಅವರು ಚರ್ಚೆಯನ್ನು ಯಾರ ಜೊತೆ ಮಾಡಿದರು? ರಾಷ್ಟ್ರೀಯ ಶಿಕ್ಷಣ ನೀತಿ ರೂಪುಗೊಳ್ಳುತ್ತಿದ್ದ ಸಮಯದಲ್ಲಿ ಪೂರ್ವಭಾವಿಯಾಗಿ RSS ಸಂಸ್ಥೆಗಳಾದ ಭಾರತೀಯ ಶಿಕ್ಷಾ ಮಂಡಲ್, ಶಿಕ್ಷಾ ಸಂಸ್ಕೃತಿ ಉತ್ಥಾನ್ ನ್ಯಾಸ್, ಭಾರತೀಯ ಭಾಷಾ ಮಂಚ್ ಇವೆಲ್ಲವೂ ಸೇರಿದಂತೆ ಸುಮಾರು ೪೦ seminar ಗಳನ್ನು ಮಾಡಿದರು. ಶಿಕ್ಷಾ ಸಂಸ್ಕೃತಿ ಉತ್ಥಾನ್ ನ್ಯಾಸ್‌ನ ರಾಷ್ಟ್ರೀಯ ಕಾರ್ಯದರ್ಶಿಗಳು ಒಂದು ಪತ್ರಿಕಾ ಹೇಳಿಕೆಯನ್ನು ಕೊಟ್ಟರು. ಅದೇನೆಂದರೆ, ನೈತಿಕ ಮೌಲ್ಯಗಳನ್ನು ಅಳವಡಿಸಿಕೊಳ್ಳದೇ ಯಾವುದೇ ಶಿಕ್ಷಣ ನೀತಿ ಪೂರ್ಣಗೊಳ್ಳುವುದಿಲ್ಲ,ಭಾರತದ ಮೌಲ್ಯಗಳು, ಭಾಷೆ, ಕಲೆ, ಸಂಸ್ಕೃತಿ ಮುಂತಾದವು NEP 2020 ನ ಮುಖ್ಯ ಭಾಗವಾಗಿರುತ್ತದೆ. ನಾವು ಈ ಸಮಿತಿಗೆ ದೀರ್ಘವಾದ ಸಲಹೆಗಳನ್ನು ಕೊಟ್ಟಿದ್ದೇವೆ, ಮುಂದೆಯೂ ಸೂಕ್ತ ಬದಲಾವಣೆಗಳನ್ನು ಸೂಚಿಸುತ್ತೇವೆ ಎಂದು ಕಳೆದ ಜುಲೈನಲ್ಲಿ ಹೇಳಿಕೆ ಕೊಟ್ಟರು. ಈ ಹೇಳಿಕೆ ನೀಡಿದಾಗ ಇದರಲ್ಲಿ ಕೆಲವು ಸಂಘಟನೆಗಳ ಹಸ್ತಕ್ಷೇಪ ಇರುವುದು ಪ್ರತ್ಯಕ್ಷವಾಗಿ ಕಾಣುತ್ತಿದೆ. ಈ ಸಂಘದ ಸದಸ್ಯರಲ್ಲಿ ಶ್ರೀ ಕಸ್ತೂರಿ ರಂಗನ್ ರವರನ್ನು ಬಿಟ್ಟರೆ Prof. ವಸುಧಾ ಕಾಮತ್, Prof. ಮಂಜುಲ್ ಭಾರ್ಗವ, Dr. ರಮಾಶಂಕರ್ ಕುರಿಲ್, Prof. ತೇಜಸ್ವಿ ಕಟ್ಟಿಮನಿ, ಶ್ರೀ ಕೃಷ್ಣಮೋಹನ್ ತ್ರಿಪಾಠಿ, Prof. ಮಜರ್ ಅಸೀಫ್, Prof. ಎಂ.ಕೆ. ಶ್ರೀಧರ್, ಶ್ರೀ ರಾಜೇಂದ್ರ ಪ್ರತಾಪ್ ಗುಪ್ತ ರವರುಗಳು ಸಮಿತಿಯ ಸದಸ್ಯರುಗಳಾಗಿದ್ದರು. Prof. ಎಂ.ಕೆ. ಶ್ರೀಧರ್‌ರವರು ನಿನ್ನೆ ಚಾಲುಕ್ಯದಲ್ಲಿ ಇದ್ದರು. ನಿನ್ನೆ ಮಾನ್ಯ ರವಿಕುಮಾರ್‌ರವರು ಹೇಳಿದರು, ಎಮ್.ಕೆ. ಶ್ರೀಧರ್ ರವರು RSS ನ ಸಂಚಾಲಕರಾಗಿದ್ದರು. ABVP ಯಲ್ಲಿ ನಾವೆಲ್ಲರೂ ಇದ್ದಾಗ ಅವರು ಉಪಾಧ್ಯಕ್ಷರಾಗಿದ್ದರು. ಶ್ರೀ ರಾಜೇಂದ್ರ ಪ್ರತಾಪ್ ಗುಪ್ತರವರು ೨೦೦೯ ರಿಂದ ೨೦೧೬ರ ವರೆಗೆ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಪಕ್ಷದ ಪ್ರಣಾಳಿಕೆ ರೂಪಿಸಿದವರಲ್ಲಿ ಪ್ರಮುಖರು. ೨೦೧೮ರಲ್ಲಿ ಕೇಂದ್ರ ಆರೋಗ್ಯ ಮಂತ್ರಿ ಶ್ರೀ ಜೆ.ಪಿ. ನಡ್ಡಾ ರವರ ಸಲಹೆಗಾರರಾಗಿದ್ದ ಶ್ರೀ ರಾಜೇಂದ್ರ ಪ್ರತಾಪ ಗುಪ್ತರವರನ್ನು ಭ್ರಷ್ಟಾಚಾರದ ಆರೋಪದ ಮೇಲೆ ವಜಾ ಮಾಡಲಾಗಿತ್ತು. ಆದರೆ

ಹಿಂದಿನ ರಾಷ್ಟ್ರೀಯ ಕೊಠಾರಿ ಆಯೋಗದ ಸದಸ್ಯರಿಗೂ ಇವರಿಗೂ ಏನೂ ವ್ಯತ್ಯಾಸ ಇದೆ ಎಂಬುದನ್ನು ತಿಳಿದುಕೊಳ್ಳಿ. ಆ NDA ನಲ್ಲಿ ಆಗಿನ ಮಾನವ ಸಂಪನ್ಮೂಲ ಇಲಾಖಾ ಮಂತ್ರಿಯಾದ ಶ್ರೀ ರಮೇಶ್ ಪೊಕ್ರಿಯಾಲ್ ಅವರ degree ಇನ್ನೂ doubtful ಆಗಿದೆ. ಹಿಂದಿನ ಮಂತ್ರಿಯಾಗಿದ್ದ ಶ್ರೀ ಪ್ರಕಾಶ್ ಜಾವಡೇಕರ್ ರವರು ಕೇವಲ RSS ಪದಾಧಿಕಾರಿಗಳೊಂದಿಗೆ ಮತ್ತು ಬಿಜೆಪಿ ಸರ್ಕಾರ ಅಧಿಕಾರದಲ್ಲಿದ್ದ ರಾಜ್ಯಗಳ ಶಿಕ್ಷಣ ಮಂತ್ರಿಗಳೊಂದಿಗೆ ಸತತವಾಗಿ ಸಮಾಲೋಚನೆ ನಡೆಸಿ, ಈ ಅಭಿಪ್ರಾಯನ್ನು ಶ್ರೀ ಸುಬ್ರಮಣ್ಯ ಸಮಿತಿಗೆ ಮತ್ತು ನಂತರ ಶ್ರೀ ಕಸ್ತೂರಿ ರಂಗನ್ ರವರಿಗೆ ಕೊಟ್ಟರು. ಮುಖ್ಯವಾಗಿ ಇದರಲ್ಲಿ ಯಾವ ರೀತಿಯ ಚಿಂತನೆಗಳು, ಇತಿಹಾಸಗಳು ಬರಬಹುದು ಎಂಬುದನ್ನು ಯೋಚನೆ ಮಾಡಬೇಕು. ಇದು ಕೇವಲ ಖಾಸಗೀಕರಣಕ್ಕೆ ಮಾಡುವ ವಿಚಾರವಾಗಿದೆ. ಕೆಲವು ವಿಚಾರಗಳನ್ನು ಹೇಳುವುದಕ್ಕೆ ಬಯಸುತ್ತೇನೆ. ೧೯೮೬ನೇ National Education Policy ನಲ್ಲಿ *"..most of the Colleges in Higher Education Institutions are affiliated to State University and had no autonomy in curriculum and evaluation..."* ಈಗ ಇರುವುದರಲ್ಲಿ *"..all Higher Education Institutions including Colleges are autonomous and there will be no Affiliated Colleges to State Universities and Autonomy in declaring curriculum and evaluation..."* ಯಾರು ಏನು ಬೇಕಾದರೂ ಮಾಡಿಕೊಳ್ಳಬಹುದು. ಅದರ ಮೇಲೆ ಯಾವುದೇ ನಿಯಂತ್ರಣ ಇಲ್ಲ. ಅದಲ್ಲದೇ ನಮ್ಮಲ್ಲಿ ೧೯೮೬ ರಲ್ಲಿ *"Examination is independent of teaching: All examination and evaluation are affiliating University controlled. There is a little role of teaching faculty members in evaluating the students directly..."* ಈಗ ಇರುವುದರಲ್ಲಿ *"..examination is a part of continuous evaluation system, faculty members who are teaching a subject are responsible for evaluation and examination..."* ಅಂದರೆ ನನ್ನ ಮುಖ ನೋಡಿದರೆ ಕೆಲವರಿಗೆ ಆಗುವುದಿಲ್ಲ, ಆಗ ನನ್ನನ್ನು fail ಮಾಡಿ ಕಳುಹಿಸುತ್ತಾರೆ. ಇದು ಈ system ನಲ್ಲಿದೆ. ಅದಲ್ಲದೇ ಸುಮಾರು ೩೫ points ಗಳಿದ್ದು, ಅದೆಲ್ಲವನ್ನು ಸಮಯದ ಅಭಾವದಿಂದ ಹೇಳುವುದಕ್ಕೆ ಹೋಗುವುದಿಲ್ಲ. ಇದಲ್ಲದೇ M.Phil ಅಂದರೆ Master in Philosophy ಮಾಡುವಾಗ ನಾವು ೨ ವರ್ಷ PUC, ೩ ವರ್ಷ Degree ಮತ್ತು ೨ ವರ್ಷ Post-Graduation ಮಾಡಿ, M.Phil ಅನ್ನು ಒಂದು ವರ್ಷ ಮಾಡುತ್ತಿದ್ದೆವು. ಅದು 1986 policy ಯಲ್ಲಿತ್ತು. ಈಗ *"...one year research degree leading to M.Phil in any subject is discontinued due to the reason the students are exposed to preliminary research in their under-graduate and post-graduate courses..."* ಇವೆಲ್ಲವೂ Universal Education ಗೆ ತದ್ವಿರುದ್ಧವಾಗಿವೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇದಲ್ಲದೇ currently teachers education comprises of two year B.Ed program after graduation.

(ಮುಂದು)

(966)/23.09.2021/6.30/ಹೆಚ್‌ವಿ:ಬಿಎನ್‌ಎಸ್

(ಉಪ ಸಭಾಪತಿಯವರ ಉಪಸ್ಥಿತಿ)

**ಶ್ರೀ ಬಿ.ಕೆ. ಹರಿಪ್ರಸಾದ್(ಮುಂದುವರೆದದ್ದು):-**

Secondary school teachers have to spend five years after their higher secondary education to teach at higher secondary level. ಸನ್ಮಾನ್ಯ ಸಭಾಪತಿಯವರೇ, ಈಗ the proposed teachers' education comprises of four years integrated B.Ed. This Degree is compulsory requirement to become a faculty at school education stages. ಇವರುಗಳು 'ಸ್ವದೇಶಿ' ಎಂದು ಬಹಳಷ್ಟು ಉಪನ್ಯಾಸಗಳನ್ನು ನೀಡುತ್ತಿರುತ್ತಾರೆ. No foreign Universities are allowed to function directly in India; 1986 policy. About 100 top rank foreign Universities will be allowed to function in India to compete with Indian Universities. ಇದು ಇವರ ನೀತಿಯಾಗಿದೆ.

**ಉಪ ಸಭಾಪತಿಯವರು:-** ಮಾನ್ಯ ಬಿ.ಕೆ.ಹರಿಪ್ರಸಾದ್‌ರವರೇ, ತಾವು ತಮ್ಮ ಮಾತುಗಳನ್ನು ಪ್ರಾರಂಭಿಸಿ ಇಲ್ಲಿಗೆ 40 ನಿಮಿಷಗಳಾಗಿವೆ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಸನ್ಮಾನ್ಯ ಸಭಾಪತಿಯವರೇ, ನಾನು ಬಹಳ ಗಂಭೀರವಾಗಿರುವ ವಿಚಾರದ ಮೇಲೆ ಮಾತನಾಡುತ್ತಿದ್ದೇನೆ. ಬಹಳ ಹಿಂದೆಯೇ ಅಂದರೆ, 14ನೇ ತಾರೀಖಿಗೆ ಈ ವಿಚಾರವನ್ನು ಪ್ರಸ್ತಾಪ ಮಾಡಲು ಅನುಮತಿ ಕೋರಿ ತಮಗೆ ನೋಟೀಸ್ ಕಳುಹಿಸಿ ಕೊಟ್ಟಿದ್ದೆ. ಯಾವ ಕಾರಣದ ಹಿನ್ನೆಲೆಯಲ್ಲಿ ತಾವು ನನಗೆ ಕೊನೆಯ ದಿನ ಅವಕಾಶವನ್ನು ಕೊಟ್ಟಿದ್ದೀರಿ ಎನ್ನುವುದು ನನಗೆ ಗೊತ್ತಿಲ್ಲ.

**ಉಪ ಸಭಾಪತಿಯವರು:-** ಗಂಭೀರವಾಗಿರುವ ವಿಚಾರವಲ್ಲವೆಂದು ನಾನು ಹೇಳುತ್ತಿಲ್ಲ. ಆದರೆ, ಸಮಯದ ಬಗ್ಗೆಯೂ ಗಮನವನ್ನು ಹರಿಸಬೇಕಾಗುತ್ತದೆ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಿ.ಕೆ.ಹರಿಪ್ರಸಾದ್:-** ಸನ್ಮಾನ್ಯ ಸಭಾಪತಿಯವರೇ, ತಾವು ಮಾತನಾಡಬೇಡಿ ಎಂದು ಹೇಳಿದರೆ, ನಾನು ಈ ವಿಚಾರವಾಗಿ ನನ್ನ ವಿರೋಧವನ್ನು ವ್ಯಕ್ತಪಡಿಸಬೇಕಾಗಿತ್ತು, ಆ ಕೆಲಸವನ್ನು ಮಾಡಿದ್ದೇನೆ. 'ಮಾತನಾಡಿರುವುದು ಸಾಕು ಕುಳಿತುಕೊಳ್ಳಿ' ಎಂದು ತಾವು ಹೇಳಿದರೆ ನಾನು ಕುಳಿತುಕೊಳ್ಳುತ್ತೇನೆ. ನನ್ನ ಅಭ್ಯಂತರವೇನೂ ಇಲ್ಲ.

**ಉಪ ಸಭಾಪತಿಯವರು:-** ಮಾನ್ಯ ಹರಿಪ್ರಸಾದ್‌ರವರೇ, ಸಮಯವನ್ನು ನೆನಪು ಮಾಡಿಕೊಡುವುದು ಪೀಠದ ಜವಾಬ್ದಾರಿಯಾಗಿರುತ್ತದೆ. ಸಮಯದ ಬಗ್ಗೆ ತಮಗೂ ಸ್ವಲ್ಪ ಅರಿವಿರಲಿ.

**ಶ್ರೀ ಎಂ.ನಾರಾಯಣಸ್ವಾಮಿ(ವಿರೋಧ ಪಕ್ಷದ ಮುಖ್ಯ ಸಚೇತಕರು):-** ಸನ್ಮಾನ್ಯ ಸಭಾಪತಿಯವರೇ, ನಾವೆಲ್ಲರೂ ಈ ವಿಚಾರದ ಮೇಲೆ ಮಾತನಾಡಬೇಕಾಗಿತ್ತು. ಆದರೆ, ಈಗ ನಮ್ಮ ಸಮಯವನ್ನು ಮಾನ್ಯ ಬಿ.ಕೆ.ಹರಿಪ್ರಸಾದ್‌ರವರಿಗೆ ಕೊಡುತ್ತಿದ್ದೇವೆ. ಅವರೊಬ್ಬರೇ ಈ ವಿಚಾರದ ಮೇಲೆ ನಮ್ಮೆಲ್ಲರ ಪರವಾಗಿ ಮಾತನಾಡಲಿ.

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):-** ಸನ್ಮಾನ್ಯ ಸಭಾಪತಿಯವರೇ, ನಮ್ಮ ಪಕ್ಷದ ಸಮಯವನ್ನು ಅವರಿಗೇ ಕೊಡುತ್ತಿದ್ದೇವೆ.

**ಉಪ ಸಭಾಪತಿಯವರು:-** ಸಮಯದ ಬಗ್ಗೆ ನೆನಪು ಮಾಡಿಕೊಡುವುದು ನಮ್ಮ ಜವಾಬ್ದಾರಿಯಾಗಿದೆ. ಅದಕ್ಕಾಗಿ ನಾನು ಆ ಮಾತನ್ನು ಹೇಳಿದ್ದೇನೆ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಸನ್ಮಾನ್ಯ ಸಭಾಪತಿಯವರೇ, ಆಯಿತು ಸಮಯವನ್ನು ನೆನಪಿನಲ್ಲಿಟ್ಟುಕೊಳ್ಳುತ್ತೇನೆ. ಈ ಸರ್ಕಾರದವರು ತರಾತುರಿಯಲ್ಲಿ ನೂತನ ಶಿಕ್ಷಣ ನೀತಿಯನ್ನು ಜಾರಿಗೆ ತರುವುದಕ್ಕೆ ಹೊರಟಿದ್ದಾರೆ. ನಮ್ಮ ರಾಜ್ಯದಲ್ಲಿ ಸುಮಾರು 5 ಸಾವಿರ ಶಾಲೆಗಳು ಏಕೋಪಾಧ್ಯಾಯ ಶಾಲೆಗಳಾಗಿವೆ. ಶಾಲಾ ಕಟ್ಟಡಗಳು ಇಲ್ಲವೆಂದು ಮರದ ಕೆಳಗೆ, ಹಸುವಿನ ಕೊಟ್ಟಿಗೆಯಲ್ಲಿ ಅಥವಾ ಯಾರಾದರು ದಾನಿಗಳು ಜಾಗವನ್ನು ಕೊಟ್ಟರೆ ಅಲ್ಲಿ ಶಾಲೆಗಳನ್ನು ನಡೆಸುತ್ತಿದ್ದಾರೆ. ಆದರೆ, ಶಿಕ್ಷಕರಿಲ್ಲದೇ ಶಾಲೆಗಳನ್ನು ನಡೆಸುವುದು ಕಷ್ಟದ ಕೆಲಸವಾಗಿದೆ. Entire policy should have been around the teachers and Universities. ಕೆಲವೊಂದು ನದಿಗಳು ಇಲ್ಲದಿದ್ದರೂ ಅವುಗಳ ಹೆಸರನ್ನು ಇಟ್ಟುಕೊಂಡಿದ್ದೇವೆ.

ಉದಾಹರಣೆಗೆ ಹೇಳಬೇಕಾದರೆ, ಗಂಗಾ, ಯಮುನ, ಸರಸ್ವತಿ ಎಂದು ಹೇಳುತ್ತೇವೆ. ಆದರೆ, 'ಸರಸ್ವತಿ' ಎನ್ನುವ ನದಿ ಎಲ್ಲಿಯೂ ಇಲ್ಲ. ಅದೇ ರೀತಿಯಲ್ಲಿ ಅಸ್ತಿತ್ವದಲ್ಲಿಯೇ ಇರದ ಮತ್ತು ಪ್ರಪಂಚದಲ್ಲಿಯೇ ಇರದ ವಿಶ್ವವಿದ್ಯಾಲಯಗಳ ಹೆಸರಿನಲ್ಲಿ ಇವರು ಏನೋ ಮಾಡುವುದಕ್ಕೆ ಹೊರಟಿದ್ದಾರೆ. ಇದು ಬಹಳ ಘಾತುಕದ ಕೆಲಸವೆನ್ನುವುದು ನನ್ನ ಅನಿಸಿಕೆಯಾಗಿದೆ.

ಸನ್ಮಾನ್ಯ ಸಭಾಪತಿಯವರೇ, ಈ ನೂತನ ಶಿಕ್ಷಣ ನೀತಿ ವಿದ್ಯಾರ್ಥಿಗಳಿಗೆ ಅನುಕೂಲಕರವಾಗಿದೆಯೆಂದು ನನಗನ್ನಿಸುವುದಿಲ್ಲ. ಕಾರಣವೇನೆಂದರೆ, ಮಹತ್ವಪೂರ್ಣವಾಗಿರುವ ದೇಶದ ಭವಿಷ್ಯವನ್ನು ನಿರ್ಧರಿಸಬಲ್ಲ ಶಿಕ್ಷಣ ನೀತಿಯನ್ನು ಮೊದಲು ಲೋಕಸಭೆಯಲ್ಲಿ ಚರ್ಚೆ ಮಾಡಬೇಕಾಗಿತ್ತು. ಅಲ್ಲಿ ಪ್ರತಿಯೊಂದು ರಾಜ್ಯಗಳಿಂದ ಚುನಾಯಿತರಾಗಿ ಬಂದಿರುವ ಸುಮಾರು 545 ಜನ ಸದಸ್ಯರಿರುತ್ತಾರೆ. ರಾಜ್ಯಸಭೆಯಲ್ಲಿ ಸುಮಾರು 245 ಜನ ಸದಸ್ಯರಿದ್ದಾರೆ. ಅಲ್ಲಿ ಈ ವಿಚಾರದ ಬಗ್ಗೆ ಚರ್ಚೆ ಮಾಡಿ ನಂತರ ರಾಜ್ಯದ ವಿಧಾನಮಂಡಲದಲ್ಲಿ ಚರ್ಚೆ ಮಾಡಿ ಈ ನೂತನ ಶಿಕ್ಷಣ ನೀತಿಯನ್ನು ಅನುಷ್ಠಾನಕ್ಕೆ ತರಬೇಕಾಗಿತ್ತೇ ವಿನಃ ಕೇವಲ ಸಂಘ ಪರಿವಾರದ ಸಂಘಸಂಸ್ಥೆಗಳೊಂದಿಗೆ ಮಾತನಾಡಿ ಈ ನೀತಿಯನ್ನು ಜಾರಿಗೊಳಿಸುವುದು ಸರಿಯಾದ ಕ್ರಮವಲ್ಲ. ಆರ್.ಎಸ್.ಎಸ್.ನ ಸಂಘಸಂಸ್ಥೆಗಳೊಂದಿಗೆ ಇವರು ಚರ್ಚೆ ಮಾಡುವುದರಲ್ಲಿ ನನ್ನದೇನೂ ಅಭ್ಯಂತರವಿಲ್ಲ. Whether RSS is a registered organization and is there accountability for it? ನಾಳೆ ನಾವು ಏನಾದರೂ ಪ್ರಶ್ನೆ ಮಾಡುವುದಾದರೆ, ಅವರಿಗೆ ಜವಾಬ್ದಾರಿ ಮತ್ತು ಹೊಣೆಗಾರಿಕೆ ಎನ್ನುವುದು ಇದೆಯೇ? It is not a registered organization. ನಾವುಗಳು ಇವರ ಷಡ್ಯಂತರಕ್ಕೆ ಸಿಕ್ಕಿಹಾಕಿಕೊಂಡಿದ್ದೇವೆ. ಈ ಶಿಕ್ಷಣ ನೀತಿಯಲ್ಲಿ ಇವರು ಅಲ್ಲಲ್ಲಿ ತಕ್ಷಶಿಲಾ, ನಳಂದಾ ವಿಕ್ರಮಶೀಲ, ವಲ್ಲಭಿ, ಚರಕ, ಶುಶ್ರೂತ ಮತ್ತು ಆರ್ಯಭಟ ಹೀಗೆ ಎಲ್ಲರ ಹೆಸರುಗಳನ್ನು ಉಲ್ಲೇಖ ಮಾಡಿದ್ದಾರೆ. ಆದರೆ, ಈ ರಾಷ್ಟ್ರದಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಕ್ರಾಂತಿಯನ್ನುಂಟು ಮಾಡಿದ ಮಹಾತ್ಮ ಜ್ಯೋತಿಬಾ ಫುಲೆ ಅವರ ಹೆಸರು ಎಲ್ಲಿಯೂ ಕಂಡು ಬರುತ್ತಿಲ್ಲ. ಸಮಾಜದ ಅನಿಷ್ಟ ಪದ್ಧತಿಗಳಾದ ಬಾಲ್ಯ ವಿವಾಹ, ಸತಿಸಹಗಮನ ಪದ್ಧತಿ, ವಿರುದ್ಧ ಹೋರಾಟ ಮಾಡಿ, ಮಹಿಳೆಯರಿಗೋಸ್ಕರ ಪ್ರಪ್ರಥಮವಾಗಿ ಶಾಲೆಗಳು, ಅಬಲಾಶ್ರಮಗಳನ್ನು ಸ್ಥಾಪನೆ ಮಾಡಿದ ಮತ್ತು ಪ್ರಪ್ರಥಮ ಮಹಿಳಾ ಶಿಕ್ಷಕಿಯಾದ ಮಹಾತ್ಮ ಜ್ಯೋತಿಬಾ ಫುಲೆಯವರ ಮಡದಿ ಶ್ರೀಮತಿ ಸಾವಿತ್ರಿಬಾಯಿ ಫುಲೆ ಮತ್ತು ಅವರ ಜೊತೆಗಿದ್ದ ಫಾತಿಮಾ ಬೀ ಹಾಗೂ ತಮಿಳುನಾಡಿನ ಪ್ರಸಿದ್ಧ ತಮಿಳು ಕವಿ ಮತ್ತು ತತ್ವಜ್ಞಾನಿಯಾದ ತಿರುವಳ್ಳುವರ್ ಇವರುಗಳ ಹೆಸರುಗಳು ಕಾಣೆಯಾಗಿವೆ.

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸನ್ಮಾನ್ಯ ಸಭಾಪತಿಯವರೇ, ಇವರು ಈ ನೂತನ ಶಿಕ್ಷಣ ನೀತಿಯ ಮೂಲಕ ಸಂಘ ಪರಿವಾರದ ಸಂಪೂರ್ಣ ಸಿದ್ಧಾಂತವನ್ನು ಈ ರಾಷ್ಟ್ರದ ಮಕ್ಕಳಲ್ಲಿ ತುಂಬಿ ಈ ದೇಶದಲ್ಲಿ ನೆಲೆಯೂರಿರುವ ಬಹುತ್ವದ ಪದ್ಧತಿಯನ್ನು ಸಂಪೂರ್ಣವಾಗಿ ನಾಶಪಡಿಸುವುದಕ್ಕೆ ಹೊರಟಿದ್ದಾರೆ. ಯಾವುದೇ ಚರ್ಚೆಯಿಲ್ಲದೆ ಅನುಷ್ಠಾನಗೊಳಿಸಲು ಹೊರಟಿರುವ ಈ ಶಿಕ್ಷಣ ನೀತಿಯನ್ನು ನಾವು ಸಂಪೂರ್ಣವಾಗಿ ವಿರೋಧಿಸುತ್ತಿದ್ದೇವೆ. ಶಿಕ್ಷಣ ವ್ಯವಸ್ಥೆಯಲ್ಲಿ ಬದಲಾವಣೆ ತರಬೇಕೆನ್ನುವುದನ್ನು ಮತ್ತು ಒಳ್ಳೆಯ ನೀತಿಗಳನ್ನು ಜಾರಿಗೊಳಿಸಬೇಕೆನ್ನುವುದನ್ನು ನಾವು ಒಪ್ಪಿಕೊಳ್ಳುತ್ತೇವೆ.

ಸನ್ಮಾನ್ಯ ಸಭಾಪತಿಯವರೇ, ಈ ಶಿಕ್ಷಣ ನೀತಿಯಲ್ಲಿ ನಗರ ಮತ್ತು ಗ್ರಾಮೀಣ ಪ್ರದೇಶದ ಮಕ್ಕಳ ಕಲಿಕೆಯ ನಡುವೆ ಇರುವಂತಹ ಅಂತರದ ಬಗ್ಗೆ ಎಲ್ಲಿಯೂ ಪರಿಹಾರವನ್ನು ಸೂಚಿಸಿಲ್ಲ. ನಗರಪ್ರದೇಶದ ಮಕ್ಕಳ ಜೊತೆಗೆ ಸ್ಪರ್ಧಿಸಬೇಕೆನ್ನುವ ಹಿನ್ನೆಲೆಯಲ್ಲಿ ಗ್ರಾಮೀಣ ಭಾಗದ ಮಕ್ಕಳಿಗೆ ಹೆಚ್ಚುವರಿಯಾಗಿ 10 ಅಂಕಗಳನ್ನು ಕೃಪಾಂಕದ ರೀತಿಯಲ್ಲಿ ನೀಡುತ್ತಿದ್ದೇವೆ. ಅದರ ಬಗ್ಗೆ ಈ ಶಿಕ್ಷಣ ನೀತಿಯಲ್ಲಿ ಎಲ್ಲಿಯೂ ಚಕಾರವನ್ನು ಎತ್ತಿಲ್ಲ. ಎಸ್.ಎಸ್.ಎಲ್.ಸಿ. ಪರೀಕ್ಷೆ ಇರುತ್ತದೆಯೋ ಇಲ್ಲವೋ ಎನ್ನುವುದು ಗೊತ್ತಾಗುತ್ತಿಲ್ಲ. ಮೈಸೂರಿನ ಮಹಾರಾಜರಾದ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರು 1911ನೇ ಇಸವಿಯಲ್ಲಿ ಎಸ್.ಎಸ್.ಎಲ್.ಸಿ. ಪರೀಕ್ಷೆಗಳನ್ನು ಪ್ರಾರಂಭಿಸಿದ್ದರು. ಎಸ್.ಎಸ್.ಎಲ್.ಸಿ. ಪರೀಕ್ಷೆಯನ್ನು ವಿದ್ಯಾರ್ಥಿಗಳು ತಮ್ಮ 16ನೇ ವಯಸ್ಸಿನಲ್ಲಿ ಎದುರಿಸುತ್ತಾರೆ. ಇಂತಹ ಐತಿಹಾಸಿಕ ಎಸ್.ಎಸ್.ಎಲ್.ಸಿ. ಪರೀಕ್ಷೆಯನ್ನು ರದ್ದುಗೊಳಿಸುವ ಯೋಜನೆಯಲ್ಲಿರುವ ನೂತನ ಶಿಕ್ಷಣ ನೀತಿ ರದ್ದಾಗಲಿ. ಮೈಸೂರು ಮಹಾರಾಜರಾದ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರು 1879ನೇ ಇಸವಿಯಲ್ಲಿಯೇ ಮೀಸಲಾತಿಯನ್ನು ಒದಗಿಸಿ ಕೊಟ್ಟಿದ್ದರು. ಇದನ್ನು ಹೊಸದಾಗಿ ಜಾರಿಗೊಳಿಸಿಲ್ಲ.

ಸನ್ಮಾನ್ಯ ಸಭಾಪತಿಯವರೇ, 'Skill India' ಎನ್ನುವ ಮೂಲಕ ಕುಲ ಕಸುಬುಗಳಿಗೆ ಅವರನ್ನು ವಾಪಸ್ಸು ಕಳುಹಿಸುವಂತಹ ಕೆಲಸವಾಗುತ್ತಿದೆ. ಮಡಿಕೆ ಮಾಡುವುದು, ಹೆಂಡ ಮಾರುವುದು, ಮೀನು ಹಿಡಿಯುವುದು ಇಂತಹ ಕೆಲಸಗಳನ್ನು ಕಲಿಸಿಕೊಡುತ್ತಿದ್ದಾರೆಯೇ ವಿನಃ ಡಾಕ್ಟರ್, ಇಂಜಿನಿಯರ್, ವಿಜ್ಞಾನಿಗಳಾಗಿ ರಾಷ್ಟ್ರದ ಮತ್ತು ಪ್ರಪಂಚದ ಭವಿಷ್ಯವನ್ನು ಉಜ್ವಲಗೊಳಿಸುವ ನೀತಿ ಪಾಠಗಳು ಇದರಲ್ಲಿ ಕಾಣಿಸುತ್ತಿಲ್ಲ. ಭಾರತೀಯ ಜನತಾ ಪಕ್ಷದ

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಮಾನ್ಯ ನರೇಂದ್ರ ಮೋದಿಯವರ ನೇತೃತ್ವದಲ್ಲಿ 29ನೇ ಜುಲೈ 2020ರಲ್ಲಿ ಯಾರಿಗೂ ಹೇಳದೇ ಕೇವಲ ಕ್ಯಾಬಿನೆಟ್‌ನಲ್ಲಿ ತೀರ್ಮಾನವನ್ನು ತೆಗೆದುಕೊಂಡು ನೂತನ ಶಿಕ್ಷಣ ನೀತಿಯನ್ನು ಅನುಷ್ಠಾನಕ್ಕೆ ತರಲಾಯಿತು. ಈ ದಿನ ರಾಷ್ಟ್ರಕ್ಕೆ ಕರಾಳದಿನವಾಗಿದೆ. ಇದನ್ನು ನಾನು ವಿರೋಧಿಸುತ್ತೇನೆ ಎನ್ನುವ ಮಾತನ್ನು ಹೇಳುತ್ತಿದ್ದೇನೆ.

ಸನ್ಮಾನ್ಯ ಸಭಾಪತಿಯವರೇ, ಡಾ||ಕಸ್ತೂರಿ ರಂಗನ್‌ರವರು 'NEP focuses on main streaming Sanskrit.' ಎಂದು ಹೇಳಿದ್ದಾರೆ. ಪಠ್ಯಕ್ರಮವನ್ನು ನೋಡಿದರೆ, ಪ್ರಧಾನ ವಿಷಯವನ್ನಾಗಿ ಸಂಸ್ಕೃತ ಭಾಷೆಯನ್ನು ತೋರಿಸುತ್ತಿದ್ದಾರೆ. ಇಡೀ ದೇಶದಲ್ಲಿ ಸಂಸ್ಕೃತ ಮಾತನಾಡುವವರ ಸಂಖ್ಯೆ ಕೇವಲ 50 ಸಾವಿರವಾಗಿದೆ. ಸಂವಿಧಾನದ ಅನುಚ್ಛೇದ 351ರ ಮೇರೆಗೆ ಅದು ಅಧಿಕೃತ ಭಾಷೆಯಾದ ಮೇಲೆ ಆ ಭಾಷೆಯ ಅಭಿವೃದ್ಧಿಗೆ ಸಾವಿರಾರು ಕೋಟಿ ರೂಪಾಯಿಗಳು ದೊರೆಯುತ್ತಿವೆ. ಕನ್ನಡ ಭಾಷೆಗೆ ಕೇವಲ 6 ಕೋಟಿ ರೂಪಾಯಿಗಳು ಮಾತ್ರ. ನೂತನ ಶಿಕ್ಷಣ ನೀತಿಯ ಮೂಲಕ ಸಂಸ್ಕೃತವನ್ನು ನಮ್ಮ ಮೇಲೆ ಹೇರುವಂತಹ ಪ್ರಯತ್ನ ನಡೆಯುತ್ತಿದೆ. ಇದನ್ನು ನಾವು ಒಪ್ಪುವುದಿಲ್ಲ. ಪೋಷಕರು ಮತ್ತು ಮಕ್ಕಳು ಯಾವ ಭಾಷೆಯನ್ನು ಕಲಿಯಬೇಕೆಂದು ಇಚ್ಛೆಪಡುತ್ತಾರೆ ಆ ಭಾಷೆಯನ್ನು ಕಲಿಯುವುದಕ್ಕೆ ಅವಕಾಶ ಮಾಡಿಕೊಡಬೇಕಾಗುತ್ತದೆ. ಯಾವುದೇ ಭಾಷೆಯನ್ನು ಹೇರಬಾರದು ಎನ್ನುವ ಮಾತನ್ನು ತಮ್ಮ ಮೂಲಕ ಈ ರಾಜ್ಯದ ಜನತೆಗೆ ಹೇಳುವ ಮೂಲಕ ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತಿದ್ದೇನೆ.

**ಶ್ರೀ ಮರಿತಿಬ್ಬೇಗೌಡ(ಶಿಕ್ಷಕರ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ನೂತನ ಶಿಕ್ಷಣ ನೀತಿಯ ಮೇಲೆ ಮಾತನಾಡುವುದಕ್ಕೆ ಅವಕಾಶವನ್ನು ನೀಡಿದ ತಮಗೆ ವಂದಿಸುತ್ತಾ, ನನ್ನ ಮಾತುಗಳನ್ನು ಪ್ರಾರಂಭಿಸುತ್ತಿದ್ದೇನೆ. ಮಾನ್ಯ ಸದಸ್ಯರಾದ ಶ್ರೀ ಬಿ.ಕೆ.ಹರಿಪ್ರಸಾದ್‌ರವರ ಮಾತುಗಳಿಗೆ ನನ್ನ ಸಂಪೂರ್ಣವಾದ ಸಹಮತವನ್ನು ವ್ಯಕ್ತಪಡಿಸುತ್ತಾ, ಅವರು ಮಾತನಾಡಿರುವ ವಿಚಾರಗಳನ್ನು ಪುನರುಕ್ತಿ ಮಾಡದೇ ಒಂದೆರಡು ಹೊಸ ಸಂಗತಿಗಳನ್ನು ಸದನದ ಗಮನಕ್ಕೆ ತರಲು ಬಯಸುತ್ತಿದ್ದೇನೆ.

ಸನ್ಮಾನ್ಯ ಸಭಾಪತಿಯವರೇ, ರಾಷ್ಟ್ರದ ಶಿಕ್ಷಣ ಕ್ಷೇತ್ರದಲ್ಲಿ ಹೊಸ ಬದಲಾವಣೆ ಅನಿವಾರ್ಯವೆಂದು ನಾನು ಭಾವಿಸಿದ್ದೇನೆ. ಈ ನೀತಿಯನ್ನು ನಾನು ಸ್ವಾಗತಿಸುತ್ತಿದ್ದೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಾಲಕಾಲಕ್ಕೆ ಇಂತಹ ಒಂದು ಬದಲಾವಣೆ ಅನಿವಾರ್ಯವಾಗಿದೆ. ರಾಷ್ಟ್ರಕವಿ ಕು.ವೆಂ.ಪು.ರವರು;

**ಯಾವ ಕಾಲದ ಶಾಸ್ತ್ರ ಏನು ಹೇಳಿದರೇನು?**
**ಎದೆಯ ದನಿಗೂ ಮಿಗಿಲು ಶಾಸ್ತ್ರವಿಹುದೇನು?**
**ಎಂದೋ ಮನು ಬರೆದಿಟ್ಟುದಿಂದೆಮಗೆ ಕಟ್ಟೇನು?**
**ನಿನ್ನೆದೆಯ ದನಿಯೆ ಋಷಿ! ಮನು ನಿನಗೆ ನೀನು;**

**ಹಿಂದಿನಾ ಋಷಿಗಳೂ ಮಾನವರೆ ನಮ್ಮಂತೆ,**
**ಅವರ ಶಾಸ್ತ್ರವು ಅವರ ಕಾಲಕ್ಕೆ ಮಾತ್ರ;**
**ಕಾಲಕ್ಕೆ ತಕ್ಕಂತೆ, ದೇಶಕ್ಕೆ ತಕ್ಕಂತೆ,**
**ನಮ್ಮ ಹೃದಯವೆ ನಮಗೆ ಶ್ರೀ ಧರ್ಮ ಸೂತ್ರ!**

ಎಂದು ಹೇಳಿದ್ದಾರೆ.

(ಮುಂದುವರಿದಿದೆ)

(967) 23.9.2021 6.40 ಪಿಕೆ:ಬಿಎನ್ಎಸ್

**ಶ್ರೀ ಮರಿತಿಬ್ಬೇಗೌಡ (ಮುಂದು)**

ಶಿಕ್ಷಣ ನೀತಿಯಲ್ಲಿ ಬದಲಾವಣೆ ತರುವುದನ್ನು ಸ್ವಾಗತ ಮಾಡುತ್ತೇನೆ. ನಮ್ಮ ರಾಜ್ಯದಲ್ಲಿ NEP (National Education Policy) ಸಮಿತಿ ರಚನೆ ಆದಮೇಲೆ ಉನ್ನತ ಶಿಕ್ಷಣದಲ್ಲಿ ಅದರ ಇಂಪ್ಲಿಮೆಂಟೇಷನ್‌ಗೆ ಒಂದು ಸಮಿತಿ ಮಾಡಿಕೊಂಡಿದ್ದಾರೆ; Implementation frame work Task Force. ಅದರಲ್ಲಿನ 14 ಮಂದಿಗಳ ಪೈಕಿ, 7 ಮಂದಿ official ಗಳಿದ್ದಾರೆ; 7 ಮಂದಿ non-official ಗಳಿದ್ದಾರೆ. ಶ್ರೀ ಎಸ್.ವಿ.ರಂಗನಾಥ್‌ರುವರು ಇದ್ದಾರೆ, ಪ್ರೊ:ಬಿ.ತಿಮ್ಮೇಗೌಡರು, ವಿ.ಸಿ., ಪ್ರೊ: ಎಂ.ಕೆ.ಶ್ರೀಧರ್, Member, NEP Committee, ಪ್ರೊ: ಅನುರಾಗ್ ಬೇಹರ್, ವಿ.ಸಿ., ಪ್ರೇಮ್‌ಜೀ ಯುನಿವರ್ಸಿಟಿ. ಶ್ರೀ ಅರುಣ ಶಹಾಪುರ, ಎಂಎಲ್‌ಸಿ, ಶಿಕ್ಷಕರ ಕ್ಷೇತ್ರ, ಶ್ರೀಮತಿ ವಿಶಾ ಹೊಳ್ಳ, ಶಿಕ್ಷಣ ತಜ್ಞರು. ಇದೊಂದು ಕಮಿಟಿ. ಇನ್ನು, ಎರಡು ಉಪಸಮಿತಿಗಳಿವೆ. ಒಂದು, curriculum ಗೆ ಸಂಬಂಧಪಟ್ಟಂತೆ ಇದ್ದು, ಅದರಲ್ಲಿ 4 ಮಂದಿ ಇದ್ದಾರೆ. ಈ 4 ಮಂದಿ ಕೂಡ non-officials. ಇನ್ನೊಂದು, regulatory, regulations ಮಾಡುವುದಕ್ಕೆ ಒಂದು ಸಮಿತಿ ಇದ್ದು ಅದರಲ್ಲಿ 5 ಮಂದಿ ಇದ್ದಾರೆ. ಇವರೂ ಕೂಡ non-official ಗಳಾಗಿದ್ದಾರೆ. ಇದರಲ್ಲಿ ಇರುವವರು ಈ ಮೂರೂ ಕಮಿಟಿಗಳಲ್ಲೂ ಇದ್ದಾರೆ. ಒಂದು ಕಡೆ ಅಜೀಂ ಪ್ರೇಮ್‌ಜೀ ವಿಶ್ವವಿದ್ಯಾಲಯದಲ್ಲಿರುವ ಶ್ರೀ ರಿಷಿಕೇಶ್ ಎನ್ನುವವರನ್ನು ಎರಡು ಕಮಿಟಿಗಳಿಗೆ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹಾಕುತ್ತಾರೆ. ಈ ವಿಶ್ವವಿದ್ಯಾಲಯದ ಮಂದಿ ಮೂರು ಕಮಿಟಿಗಳಲ್ಲೂ ಇದ್ದಾರೆ. ನಮ್ಮ ರಾಜ್ಯದಲ್ಲಿ ಎಂಥೆಂಥ ಉತ್ತಮವಾದಂಥ, ಹೆಸರು ಮಾಡಿರುವಂತಹ, ಗುಣಾತ್ಮಕ ಮಟ್ಟದ ಶಿಕ್ಷಣವನ್ನು ಕೊಡುವಂತಹ ಅನೇಕ ವಿಶ್ವವಿದ್ಯಾಲಯಗಳು ಇವೆ; ವೈಸ್ ಚಾನ್ಸಲರ್‌ಗಳೂ ಕೂಡ ಬಹಳ ಜನ ಇದ್ದಾರೆ. ಇವರಲ್ಲೊಬ್ಬರಿಗೆ ಇಲ್ಲಿ ಅವಕಾಶ ಕೊಡಲಿಲ್ಲ. ರಾಜ್ಯದಲ್ಲಿರುವ ಮೈನಾರಿಟಿ ಇನ್ಸ್‌ಟಿಟ್ಯೂಷನ್‌ಗಳ ವ್ಯಕ್ತಿಗಳಿಗೂ ಇದರಲ್ಲಿ ಅವಕಾಶ ಕೊಡಲಿಲ್ಲ. Linguistic minority University ಇದೆ. ಆ ವಿಶ್ವವಿದ್ಯಾಲಯಗಳು ಅಂದರೆ, ಜೈನ ವಿಶ್ವವಿದ್ಯಾಲಯ ಇರಬಹುದು, ಎಂ.ಎಸ್.ರಾಮಯ್ಯ ವಿಶ್ವವಿದ್ಯಾಲಯ ಇರಬಹುದು ಈ ರೀತಿ ಎಂಥೆಂಥ ವಿಶ್ವವಿದ್ಯಾಲಯಗಳಿವೆ. ಈ ಸಂಸ್ಥೆಗಳಿಂದಲೂ ಯಾರನ್ನೂ ತೆಗೆದುಕೊಂಡಿಲ್ಲ. ಇದನ್ನು ನೋಡಿದರೆ ಏನು ಅನಿಸುತ್ತದೆ? ಯಾವುದೋ ಒಂದು ಗುಂಪಿಗೆ, ಯಾವುದೋ ಒಂದು ಸಂಸ್ಥೆಗೆ ಸೀಮಿತವಾದಂಥವರು ಈ ಎನ್‌ಇಪಿ ಯನ್ನು ಜಾರಿಗೆ ತರುತ್ತಿದ್ದಾರೆ, ಯಾವುದೋ ಒಂದು ಉದ್ದೇಶವನ್ನು ಇಟ್ಟುಕೊಂಡು ಈ ಎನ್‌ಇಪಿ ಯನ್ನು ಜಾರಿಗೆ ತರುತ್ತಿದ್ದಾರೆ ಎಂದೆನಿಸುತ್ತದೆಯೇ ಹೊರತು ಇದು ಸಾರ್ವತ್ರಿಕವಾಗಿರುವಂಥದ್ದನ್ನು ಸೂಚಿಸುವುದಿಲ್ಲ. ಈ ಕಮಿಟಿಯಲ್ಲಿರುವ ಸದಸ್ಯರ ಬಗ್ಗೆ ನಾನು ವೈಯಕ್ತಿಕವಾಗಿ ಆರೋಪ ಮಾಡುವುದಿಲ್ಲ. ಅವರ ಅರ್ಹತೆ-ಅನರ್ಹತೆ ಬಗ್ಗೆ ನಾನು ಮಾತನಾಡುವುದಿಲ್ಲ. ಇದು ಎಲ್ಲೋ ಒಂದು ಕಡೆ, ಎನ್‌ಇಪಿಯ ಈ ಸಮಿತಿಗಳಲ್ಲಿ ಸಂಶಯ ಹುಟ್ಟುಹಾಕುವ ಸದಸ್ಯರ ಪಟ್ಟಿ ಇದೆ. ಮತ್ತೆ, School of Education ನಲ್ಲಿ ಒಂದು ಸಮಿತಿ ಇದೆ. ಅದರಲ್ಲಿ 6 ಮಂದಿ ಸದಸ್ಯರು ಇದ್ದಾರೆ. ಅದರಲ್ಲಿ ಅರುಣ ಶಹಾಪುರ, ಎಂಎಲ್‌ಸಿಯವರು ಚೇರ್‌ಮನ್ ಆಗಿದ್ದಾರೆ. ಶ್ರೀಮತಿ ದೀಪಾ ಚೋಳನ್ ಮತ್ತು ಇನ್ನುಳಿದವರು ಅಧಿಕಾರಿಗಳಾಗಿದ್ದಾರೆ. ನನಗೆ ಮಾನ್ಯ ಅರುಣ ಶಹಾಪುರರವರ ಬಗ್ಗೆ ವಿಶ್ವಾಸ ಇದೆ, ಗೌರವ ಇದೆ. ನೀವು ಜನ ಪ್ರತಿನಿಧಿಗಳಿಗೆ ಅವಕಾಶ ಕೊಟ್ಟಾಗ, ವಿರೋಧ ಪಕ್ಷದ ಮತ್ತು ಆಡಳಿತ ಪಕ್ಷದ 5 ಶಾಸಕರನ್ನು ಹಾಗೂ 3 ಎಂಎಲ್‌ಸಿ ಗಳನ್ನು ಈ ಕಮಿಟಿಗಳಲ್ಲಿ ಹಾಕಬಹುದಿತ್ತು. ತಾವು ಇದನ್ನು ಗಮನಿಸಿ, ತಮ್ಮ ಅಭಿಪ್ರಾಯಗಳನ್ನು ಸೂಚಿಸಿ, ಇದರ ಇಂಪ್ಲಿಮೆಂಟೇಷನ್‌ಗೆ ನಿಮ್ಮೆಲ್ಲರ ಸಹಕಾರವನ್ನು ನೀಡಿ ಎಂದು ಸಮಿತಿಗಳಲ್ಲಿ ಹಾಕಬಹುದಿತ್ತು. ಕೇವಲ 2 ಕಮಿಟಿಗಳಲ್ಲಿ ಮಾನ್ಯ ಅರುಣ ಶಹಾಪುರ ಅವರನ್ನು ಮಾತ್ರ ಹಾಕಿದ್ದಾರೆ. ಮಾನ್ಯ ಸದಸ್ಯರು ಆರ್‌ಎಸ್‌ಎಸ್‌ನ ಒಂದು ಭಾಗ ಎಂತಲೋ ಅಥವಾ ಒಟ್ಟಾರೆ ಆಡಳಿತ ಪಕ್ಷ ಮತ್ತು ವಿರೋಧ ಪಕ್ಷದ ಪ್ರತಿನಿಧಿ ಎಂದು ಹಾಕಿದ್ದಾರೆಯೇ? ಇಂತಹ ಕಮಿಟಿಗಳನ್ನು ರಚನೆ ಮಾಡುವುದರಿಂದ ಎಲ್ಲೋ ಒಂದು ಕಡೆ ಅನುಮಾನ, ಸಂಶಯ ಬರುತ್ತದೆ. ಸಾಮಾಜಿಕ ಕಳಕಳಿ ಇಲ್ಲಾ ಎನ್ನುವುದನ್ನು ತೋರುತ್ತದೆ. ಈ ಕಮಿಟಿಗೆ ಅಧಿಕಾರಿಗಳು, ಸೆಕ್ರೆಟರಿಗಳು ಮತ್ತು ಕಮಿಷನರ್‌ಗಳನ್ನು ಹಾಕಿಕೊಂಡಿದ್ದಾರೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಎಲ್ಲೂ ಕೂಡ ಕಾನೂನು ಇಲಾಖೆಯ ಕಾರ್ಯದರ್ಶಿಯವರನ್ನು ಸೇರಿಸಿಲ್ಲ. ಹಾಗಾದರೆ ಎನ್‌ಇಪಿ ಇಂಪ್ಲಿಮೆಂಟೇಷನ್‌ಗೆ ಕಾನೂನು ಸಲಹೆಗಾರರ ಅಭಿಪ್ರಾಯ ಬೇಕಾಗಿಲ್ಲವೇ? ಭಾರತ ದೇಶದ ಸಂವಿಧಾನವನ್ನು ಬರೆದಂತಹ ಡಾ: ಬಿ.ಆರ್. ಅಂಬೇಡ್ಕರ್‌ರವರು ಏನು ಹೇಳಿದರು? ಈ ದೇಶದ ಎಲ್ಲಾ ಜನರಿಗೆ ಕಡ್ಡಾಯವಾಗಿ ಶಿಕ್ಷಣ ಕೊಡಬೇಕು ಎಂದು ಸಂವಿಧಾನದಲ್ಲಿ ಹೇಳಿದ ಮಹಾನ್ ವ್ಯಕ್ತಿಗಳಾಗಿದ್ದಾರೆ. ಈ ದೇಶ ಬೆಳೆಯಬೇಕಾದರೆ ನಮ್ಮ ದೇಶದ ಹೆಣ್ಣು ಮಕ್ಕಳು ದೇವಸ್ಥಾನದಲ್ಲಿ ಕ್ಯೂ ನಿಲ್ಲುವ ಬದಲು ಗ್ರಂಥಾಲಯಗಳಲ್ಲಿ ಕುಳಿತು ಓದಬೇಕು ಎಂಬ ಮಾತನ್ನು ಹೇಳಿದವರು. ಇದರ ಉಲ್ಲೇಖ ಎಲ್ಲೂ ಇಲ್ಲ. ಆ ಸಮಾಜದಲ್ಲಿ ಬಾಬಾ ಸಾಹೇಬ್ ಅಂಬೇಡ್ಕರ್‌ರವರಷ್ಟು ಓದಿದಂಥವರು, ಅವರು ಮಾಡಿದಷ್ಟು ಬರವಣಿಗೆಯನ್ನು ದೇಶದಲ್ಲಿ ಬೇರೆ ಯಾರು ಬರೆಯಲಿಲ್ಲ. ತಾನು ಕಲಿತ ಶಿಕ್ಷಣವನ್ನು ಈ ದೇಶದ ಪ್ರತಿಯೊಬ್ಬ ಪ್ರಜೆಗೂ ಕೊಡಬೇಕು ಎನ್ನುವ ಉದ್ಗಾರವನ್ನು ಕೊಟ್ಟವರು ಬಾಬಾ ಸಾಹೇಬ್ ಅಂಬೇಡ್ಕರ್‌ರವರು. ಅವರ ಬಗ್ಗೆ ಇದರಲ್ಲಿ ಉಲ್ಲೇಖ ಇಲ್ಲ. ಮಾನ್ಯ ಸಭಾಪತಿಗಳೆ, ನಾನು ಈಗ ನೇರ ವಿಷಯಕ್ಕೆ ಬರುತ್ತೇನೆ. ಈ ಟಾಸ್ಕ್ ಫೋರ್ಸ್ ಬಗ್ಗೆ ಹೇಳಿದೆ. ಇದರಲ್ಲಿ ನಮಗೆ ಅನುಮಾನು ಹುಟ್ಟುತ್ತದೆ. ಈ ಕಮಿಟಿಗಳಲ್ಲಿರುವ ಸದಸ್ಯರನ್ನು ನೋಡಿದರೆ ಯಾವುದೋ ಒಂದು ಗುಂಪಿಗೆ, ಯಾವುದೋ ಒಂದು ಸಂಘಕ್ಕೆ ಸೇರಿದೆ ಏನೋ ಎಂದು ಭಾಸವಾಗಿ ಅದು ಸ್ವಲ್ಪ ಮನಸ್ಸಿಗೆ ಚುಚ್ಚುತ್ತದೆ. ಅದಕ್ಕೆ ನಾನು ಈ ಮಾತುಗಳನ್ನು ಹೇಳಿದೆ. ಇದರಲ್ಲಿ BoG (Body of Governors) ಎಂದು ಹೇಳಿದ್ದಾರೆ. Zero year ನಿಂದ ಪ್ರಾರಂಭ ಮಾಡಿ, 2020 ರಿಂದ 2023ರವರೆಗೆ ಒಂದು, 2023 ರಿಂದ 2025ರವರೆಗೆ ಇನ್ನೊಂದು ಮತ್ತು 2025 ರಿಂದ 2030ರವರೆಗೆ ಮತ್ತೊಂದು. ಹತ್ತು ವರ್ಷದೊಳಗೆ NEP ಅನ್ನು ರಾಜ್ಯದಲ್ಲಿ ಪರಿಪೂರ್ಣವಾಗಿ ಕಾರ್ಯಗತ ಮಾಡುತ್ತೇವೆ ಎಂದು ಹೇಳಿದ್ದಾರೆ. ಈಗ ಇವರು BoG ಎಂದು ಹೇಳುತ್ತಿದ್ದಾರೆ. It is Governing Council Body. ಈಗ ನಮಗೆ ಇರುವುದು UGC, NET, AICTE, ಹೀಗೆ ಹೈಯರ್ ಎಜುಕೇಷನ್‌ಗೆ ಸಂಬಂಧಪಟ್ಟಂತೆ ದೇಶದಲ್ಲಿ 23 ಸಮಿತಿಗಳಿವೆ. ಆ 23 ಸಮಿತಿಗಳು ಕೂಡ ಈಗ ಎನ್‌ಇಪಿ ಅಂಡರ್‌ನಲ್ಲಿ ಬರುತ್ತದೆ. ಇದುವರೆಗೂ UGC, AICTE ಅವರೇ ವಿಕ್ರಮರಂತೆ ಇದ್ದರು, ದೊಡ್ಡವರಂತೆ ಇದ್ದರು. ಈಗ ಇವರೆಲ್ಲಾ ಎನ್‌ಇಪಿ ಅಂಡರ್‌ನಲ್ಲಿ ಬರುತ್ತಾರೆ. ಇದುವರೆಗೂ Governing Body ಎನ್ನುವುದು UGC, AICTE ಗಳಲ್ಲಿ ಆಗಲಿಲ್ಲ. ಶಿಕ್ಷಣಕ್ಕೋಸ್ಕರ ಏನು 23 ಅಂಗ ಸಂಸ್ಥೆಗಳೇನಿವೆ ಅಲ್ಲೆಲ್ಲೂ ಕೂಡ Governing Body form ಆಗಲಿಲ್ಲ. Governing Body form ಆಗಲಿಲ್ಲ ಎಂದರೆ ಈ ಎನ್‌ಇಪಿ ರಾಜ್ಯದಲ್ಲಿ ಹೇಗೆ ಈ ವರ್ಷದಿಂದ ಕಾರ್ಯ ಪ್ರಾರಂಭ ಮಾಡುತ್ತದೆ? ಗವರ್ನಿಂಗ್ ಬಾಡಿ ಎಂದರೇನು? ನೀವು ಇದರ ಇಂಪ್ಲಿಮೆಂಟೇಷನ್, ನಿರ್ವಹಣೆ ಎಲ್ಲವನ್ನೂ ಸಂಪೂರ್ಣವಾಗಿ ಈ Governing

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

Body ಗೆ ಕೊಟ್ಟಿದ್ದೀರಿ. ಆದರೆ ಆ ಗವರ್ನಿಂಗ್ ಬಾಡಿ ಎಲ್ಲೂ ಕೂಡ ಆಗಿಲ್ಲ. ಈ ಗವರ್ನಿಂಗ್ ಬಾಡಿ ವಿಶ್ವವಿದ್ಯಾಲಯಗಳಲ್ಲೂ ಆಗಬೇಕು ಎಂದು ಹೇಳುತ್ತೆ. ಆದರೆ ಯಾವ ವಿಶ್ವವಿದ್ಯಾಲಯಗಳಲ್ಲೂ ಕೂಡ ಗವರ್ನಿಂಗ್ ಬಾಡಿಯನ್ನು ರಚನೆ ಮಾಡಲಿಲ್ಲ. ಮಾಡಿದ್ದರೆ, ಇಂತಹ ಕಡೆ ಗವರ್ನಿಂಗ್ ಬಾಡಿಯನ್ನು ರಚನೆ ಮಾಡಿದ್ದೇವೆ, ಅದರಲ್ಲಿ ಇಂಥಿಂಥ ಸದಸ್ಯರಿದ್ದಾರೆ ಎಂದು ದಯವಿಟ್ಟು ಹೇಳಿ. ಗವರ್ನಿಂಗ್ ಬಾಡಿ ಮಾಡದೇ ಜೀರೋ ವರ್ಷದಿಂದ ಪ್ರಾರಂಭ ಮಾಡುತ್ತೇವೆ ಎಂದು ಹೇಳುವುದು ಹಸಿ ಸುಳ್ಳು. ಇದು ವಿದ್ಯಾರ್ಥಿಗಳಿಗೆ ಮತ್ತು ನಾಡಿನ ಜನರಿಗೆ ಒಂದು ಕಡೆ ಎಲ್ಲೋ ತರಾತುರಿಯಲ್ಲಿ ಏನೋ ಒಂದು ಇಂಪ್ಲಿಮೆಂಟೇಷನ್ ಮಾಡುತ್ತಿದ್ದಾರೆ ಎನ್ನುವುದು ಗೊತ್ತಾಗುತ್ತದೆ. ನಮ್ಮ ರಾಜ್ಯದಲ್ಲಿ 65 ವಿಶ್ವವಿದ್ಯಾಲಯಗಳಿವೆ ಎಂದು ಈ ಎನ್‌ಇಪಿಯಲ್ಲಿ ಕೊಡಲಾಗಿದೆ.

(ಮುಂದು . . .)

(968) 23-9-2021 6.50 DS-GR

**ಶ್ರೀ ಮರಿತಿಬ್ಬೇಗೌಡ(ಮುಂದು):-**

ಎನ್.ಇ.ಪಿ., ಯಲ್ಲಿ two types of Universities ಬರುತ್ತದೆ ಎಂದು ಹೇಳುತ್ತಿದ್ದಾರೆ. ಅದೇನೆಂದರೆ ಒಂದನೆಯದು ಸಂಶೋಧನೆ, ಮತ್ತೊಂದು ಕಲಿಕೆ ವಿಶ್ವವಿದ್ಯಾನಿಲಯಗಳು ಎಂದು. ಹಾಗಾದರೆ, ಈ 65 ವಿಶ್ವವಿದ್ಯಾನಿಲಯಗಳಲ್ಲಿ ಸಂಶೋಧನಾ ವಿಶ್ವವಿದ್ಯಾನಿಲಯಗಳು ಯಾವುವು, ಕಲಿಕೆ ವಿಶ್ವವಿದ್ಯಾನಿಲಯಗಳು ಯಾವುದು ಎಂಬುದು ಈ ದಿನದವರೆಗೂ ಸ್ಪಷ್ಟೀಕರಣವನ್ನು ಕೊಟ್ಟಿಲ್ಲ. ಆ ಸಂಶೋಧನೆ ವಿಶ್ವವಿದ್ಯಾನಿಲಯಗಳಲ್ಲಿ ಅಭ್ಯಾಸ ಮಾಡುವಂಥದ್ದಕ್ಕೆ ಅವಕಾಶವಿಲ್ಲವೇ? ಅಭ್ಯಾಸ ಮಾಡುವುದಕ್ಕೆ ಪ್ರತ್ಯೇಕವಾದಂತಹ, Type-1, Type-2 ಎಂದು ಮಾಡಿದ್ದಾರೆಯೇ? ಇದರ ಬಗ್ಗೆ ಎಲ್ಲೂ ಸ್ಪಷ್ಟತೆ ಇಲ್ಲ. ಈ 65 ವಿಶ್ವವಿದ್ಯಾನಿಲಯಗಳಲ್ಲಿ ಸಂಶೋಧನೆಗೋಸ್ಕರ ಯಾವ ವಿಶ್ವವಿದ್ಯಾನಿಲಯಗಳಿವೆ ಮತ್ತು ಅಭ್ಯಾಸಕ್ಕೋಸ್ಕರ ಯಾವ ವಿಶ್ವವಿದ್ಯಾನಿಲಯಗಳಿವೆ ಎಂಬುದನ್ನು ಈ ದಿನದವರೆಗೂ ಮಾನ್ಯ ಸಚಿವರು ಸ್ಪಷ್ಟ ಮಾಡಿಲ್ಲ. ಹಾಗಾದರೆ ಹತ್ತು ವರ್ಷಗಳಲ್ಲಿ ಈ ವಿಶ್ವವಿದ್ಯಾನಿಲಯಗಳಿಗೆಲ್ಲಾ ಸ್ವಾಯತ್ತತೆ ಕೊಡುತ್ತೇವೆ ಎಂದು ಹೇಳುತ್ತಿದ್ದಾರೆ. ಹತ್ತು ವರ್ಷಗಳಲ್ಲಿ ಬರೀ ವಿಶ್ವವಿದ್ಯಾನಿಲಯಗಳಲ್ಲ, ಪ್ರತಿಯೊಂದು ಶಿಕ್ಷಣ ಸಂಸ್ಥೆಗಳಿಗೂ, ಪ್ರತಿಯೊಂದು ಕಾಲೇಜುಗಳಿಗೂ ಸ್ವಾಯತ್ತತೆ ಕೊಡುತ್ತೇವೆ, ಹತ್ತು ವರ್ಷಗಳಲ್ಲಿ ಇದನ್ನು ಅನುಷ್ಠಾನಕ್ಕೆ ತರುತ್ತಿದ್ದೇವೆಂದು ಹೇಳುತ್ತಿದ್ದಾರೆ. ಸ್ವಾಯತ್ತತೆ ಎಂದರೆ ಸರ್ಕಾರದವರಿಗೆ, ಖಾಸಗಿಯವರಿಗೆ, ಎಲ್ಲಾ ಶಿಕ್ಷಣ ಸಂಸ್ಥೆಗಳಿಗೂ ಸ್ವಾಯತ್ತತೆ

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಕೊಡಲಾಗುತ್ತದೆ. ಆದರೆ ವಿಶ್ವವಿದ್ಯಾನಿಲಯಗಳು ಇನ್ನು ಮುಂದೆ only Regulatory Bodies. ವಿಶ್ವವಿದ್ಯಾನಿಲಯಗಳಿಗೆ ಇನ್ನು ಯಾವುದೇ ಸ್ವಾಯತ್ತತೆ ಇಲ್ಲ. ಇಲ್ಲಿ ಪ್ರತಿ ಕಾಲೇಜಿಗೂ ಕೂಡ ಸ್ವಾಯತ್ತತೆ ಕೊಡಲಾಗುತ್ತದೆ. ಇವತ್ತು ದೇಶದಲ್ಲಿ, ನಾಡಿನಲ್ಲಿ ಸ್ವಾಯತ್ತತೆ ಕೊಟ್ಟಿರುವಂತಹ ಶಿಕ್ಷಣ ಸಂಸ್ಥೆಗಳಿವೆ. ಆ ಎಲ್ಲಾ ಸಂಸ್ಥೆಗಳು ಸರ್ಕಾರಿ ವಿಶ್ವವಿದ್ಯಾನಿಲಯಗಳು ಬಿಟ್ಟರೆ ಬೇರೆ ಎಲ್ಲಾ ಖಾಸಗಿ ವಿಶ್ವವಿದ್ಯಾನಿಲಯಗಳು, ಅಂತಹ ಸ್ವಾಯತ್ತ ವಿಶ್ವವಿದ್ಯಾನಿಲಯಗಳು ಇವತ್ತು ಮುದ್ರಣ ಮಾಡಿ ಪದವಿ ಅಂಕಪಟ್ಟಿಯನ್ನು ಪ್ಯಾಕೇಜ್ ರೂಪದಲ್ಲಿ ಹಂಚಿಕೆ ಮಾಡುತ್ತಿರುವುದು ಈ ದೇಶದ ಜನತೆಗೆ ಗೊತ್ತು. ಇನ್ನು ಸ್ವಾಯತ್ತತೆ ಕೊಟ್ಟ ಮೇಲೆ ಎಲ್ಲರೂ ಕೂಡ ಇನ್ನು ಅವರವರದ್ದೇ ಗದೆ ಒತ್ತುಕೊಂಡು ನಾನು ಪರಾಕ್ರಮಿ, ನನ್ನ ಸಂಸ್ಥೆಗೆ ಬನ್ನಿ, ನಿಮಗೆ ಯಾವ ಪದವಿ ಬೇಕು ಎಂದು ಕೇಳುವ ಹಾಗೆ ಆಗುತ್ತದೆ. ಸ್ವಾಯತ್ತತೆಯನ್ನು ಎಲ್ಲರಿಗೂ ಕೊಡುವುದರಿಂದ ಈ ದೇಶದಲ್ಲಿ ವಿದ್ಯಾರ್ಥಿಗಳಿಗೆ ಆಗತಕ್ಕಂಥ ಅನ್ಯಾಯದ ಬಗ್ಗೆ ಎನ್.ಇ.ಪಿ., ಯಲ್ಲಿ ಚಿಂತನೆ ಮಾಡಲಿಲ್ಲ. ಎಲ್ಲರಿಗೂ ಸ್ವಾಯತ್ತತೆ ಕೊಡುವಂಥದ್ದು. ಸ್ವಾಯತ್ತತೆ ಎಂದರೆ, ಕಾಲೇಜಿಗೆ ಅಡ್ಮಿಷನ್ ಆದ ಮೇಲೆ, ಪಾಠ ಮಾಡಲಿ ಮಾಡದಿರಲಿ; ಪರೀಕ್ಷೆ ಮಾಡಲಿ, ಮಾಡದಿರಲಿ; ಅಂಕಪಟ್ಟಿ, ಪದವಿ ಸರ್ಟಿಫಿಕೇಟ್ ಕೊಡುವುದು, ಇದು ಇರತಕ್ಕಂಥ ವ್ಯವಸ್ಥೆ. ಅದಕ್ಕೋಸ್ಕರ ಇವತ್ತು ಸ್ವಾಯತ್ತ ಸಂಸ್ಥೆಯಲ್ಲಿ ಓದಬೇಕು ಎಂದು ಹೇಳುತ್ತಾರೆ. ಸ್ವಾಯತ್ತ ಸಂಸ್ಥೆಗೆ ಹೋಗುವಂಥವರು ಯಾರೆಂದರೆ, ಹಣ ಇರುವವರು, ಶ್ರೀಮಂತರ ಮಕ್ಕಳು. ಸ್ವಾಯತ್ತ ಸಂಸ್ಥೆಯಲ್ಲಿ ಹೆಚ್ಚಿನ ಅಂಕ ಗಳಿಸುವವರು ಯಾರೆಂದರೆ ಶ್ರೀಮಂತರ ಮಕ್ಕಳು. ಸರ್ಕಾರಿ ವಿಶ್ವವಿದ್ಯಾನಿಲಯಗಳಲ್ಲಿ ಓದತಕ್ಕಂಥವರು, ಸರ್ಕಾರಿ ಶಾಲೆ, ಕಾಲೇಜುಗಳಲ್ಲಿ ಓದತಕ್ಕಂಥವರು ಬಡವರ ಮಕ್ಕಳು. ಆದರೆ ಸ್ವಾಯತ್ತ ಸಂಸ್ಥೆಗಳಲ್ಲಿ ಬಡವರ ಮಕ್ಕಳ ಬಗ್ಗೆ ಚಿಂತನೆಯೇ ಇಲ್ಲ. ಇದು ಹತ್ತು ವರ್ಷಗಳಲ್ಲಿ ಜಾರಿಯಾದ ಕೂಡಲೇ ಎಲ್ಲಾ ಸರ್ಕಾರಿ ವಿಶ್ವವಿದ್ಯಾನಿಲಯಗಳನ್ನು ಮುಚ್ಚುವುದೇ ಕಾರ್ಯಕ್ರಮ. ಇಲ್ಲವೆಂದರೆ ಯಾರೋ ನಿರ್ಗತಿಕರ ಮಕ್ಕಳು, ಕಾಡು ಜನರ ಮಕ್ಕಳು, ಜೀವನದಲ್ಲಿ ಏನು ಇಲ್ಲದಿರುವಂತಹ ಜನ ಅಲ್ಲಿ ಸೇರಿ ಆ ಪಾಪದ ಜನ ಓದಿಕೊಳ್ಳಬೇಕು. ಆ ಮಟ್ಟಕ್ಕೆ ವಿಶ್ವವಿದ್ಯಾನಿಲಯಗಳು ಹೋಗುತ್ತಿವೆ. ಇದರಲ್ಲಿ ವಿದ್ಯಾರ್ಥಿಗೆ ಸ್ವಾತಂತ್ರ್ಯವನ್ನು ಕೊಡುವುದು ಎಂದು ಇದೆ. ಯಾವ ರೀತಿ ಎಂದರೆ,ಮೊದಲನೇ ವರ್ಷ ಬಿ.ಎ., ಪದವಿಗೆ ಸೇರುತ್ತೇನೆ, ಯಾವುದೋ ಒಂದು combination ಕೋರ್ಸ್ ತೆಗೆದುಕೊಳ್ಳುತ್ತೇನೆ. ನನಗೆ ಒಂದು ಸರ್ಟಿಫಿಕೇಟ್ ಕೊಡುತ್ತಾರೆ. ಎರಡನೇ ವರ್ಷ ಓದಿದರೆ ಡಿಪ್ಲೋಮೋ ಸರ್ಟಿಫಿಕೇಟ್ ಕೊಡುತ್ತಾರೆ. ಈಗ ಮೊದಲನೇ ವರ್ಷ ಯಾವುದೋ ಕೋರ್ಸ್‌ನ್ನು ಓದಿ ಆ ಕೋರ್ಸ್‌ನ್ನು discontinue ಮಾಡಿಕೊಂಡು ಎಲ್ಲೋ ಓಡಾಡಿಕೊಂಡು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಥವಾ ಕೆಲಸಕ್ಕೆ ಸೇರಿಕೊಂಡು ಇನ್ನು ನಾಲ್ಕು ವರ್ಷಗಳಾದ ಮೇಲೆ ಮತ್ತೆ ಎರಡನೇ ವರ್ಷ ಬಿ.ಎ., ಓದಬಹುದಂತೆ. ಒಂದು ವರ್ಷ ನಾವು ಇಲ್ಲಿ dropout ಆಗಿ ಹೋದರೆ ಆ ಮಕ್ಕಳನ್ನು ಮತ್ತೆ ವಾಪಸ್ಸು ಕರೆದುಕೊಂಡು ಬರುವುದೇ ದೊಡ್ಡ ಕಷ್ಟವಾಗುತ್ತದೆ. ಮೂರು ವರ್ಷ ಬಿಟ್ಟು ಹೋಗಿ ದೇಶವೆಲ್ಲಾ ಸುತ್ತಿಕೊಂಡು ಎಲ್ಲೆಲ್ಲೋ ಏನೇನೋ ಮಾಡಿಕೊಂಡು ಬಂದು ನಾಲ್ಕನೇ ವರ್ಷ ಬಂದು ನಾನು ಎರಡನೇ ವರ್ಷದ ಬಿ.ಎ., ಬಿ.ಎಸ್‌ಸಿ., ಬಿ.ಕಾಂ., ಓದುತ್ತೇನೆಂದರೆ, ಆಯಿತು ಓದಿ ಎಂದು ಹೇಳಬಹುದು. ಬಡವರ ಮಕ್ಕಳು ಎಷ್ಟರ ಮಟ್ಟಿಗೆ ಬರುತ್ತಾರೆ? ಇವತ್ತು ಬಡವರ ಮಕ್ಕಳು ಯಾರು ಕೂಡ ಪದವಿ ಮಾಡಬಾರದು, ಪಿ.ಜಿ., ಮಾಡಬಾರದು ಎನ್ನುವ ಉದ್ದೇಶದಿಂದ ಇದನ್ನು ತಂದಿದ್ದಾರೆ. ಶೂದ್ರರ ಮಕ್ಕಳು ಇವತ್ತು ಹೆಚ್ಚು dropout ಆಗಬೇಕು, ಇವರು ಯಾರೂ ಪದವಿ ಮಾಡಬಾರದೇ? ಉದ್ಯೋಗದ ಆಸೆಗೆ ಅವರು ಮಧ್ಯದಲ್ಲೇ ಬಿಟ್ಟು ಹೋಗಬೇಕು. ಮಾನ್ಯ ಮಂತ್ರಿಗಳು skill ಬಗ್ಗೆ ಹೇಳುತ್ತಾರೆ.

**ಶ್ರೀ ಎನ್.ರವಿಕುಮಾರ್:-** ಇದು ನಮ್ಮ ಸರ್ಕಾರದ ಉದ್ದೇಶವಲ್ಲ.

**ಉಪ ಸಭಾಪತಿಯವರು:-** ಮಾನ್ಯ ಮರಿತಿಬ್ಬೇಗೌಡರೇ, ಶಾಂತ ರೀತಿಯಲ್ಲಿ ಮಾತನಾಡಿ. Excite ಆಗಬೇಡಿ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ನಮ್ಮ ಮಂತ್ರಿಗಳು skill ಎಂದು ಹೇಳುತ್ತಾರೆ. Skill ಎಂದರೆ, ಮೊದಲನೇ ವರ್ಷ ಬಿ.ಎಸ್‌ಸಿ., ಅಥವಾ ಬಿ.ಎ., ಯನ್ನು ಓದುತ್ತೇನೆ. ಯಾವುದೋ ಮೂರು ವಿಷಯಗಳನ್ನು ತೆಗೆದುಕೊಂಡು ಓದುತ್ತೇನೆ. ನಾನು Psychology, Journalism and Geography ಓದುತ್ತೇನೆ. ನನಗೆ ಒಂದು ಸರ್ಟಿಫಿಕೇಟ್ ಕೊಡುತ್ತಾರೆ. ಅದೊಂದೇ ವರ್ಷ ಮೂರು ವಿಷಯಗಳನ್ನು ಓದುಬಿಟ್ಟು ಯಾವ ಪರಿಣಿತಿ ನನಗೆ ಸಿಗುತ್ತದೆ? ಯಾವ ಪರಿಣಿತಿ ಮೇಲೆ ಸಂಸ್ಥೆಯಲ್ಲಿ ನನಗೆ ಉದ್ಯೋಗವನ್ನು ಕೊಡುತ್ತಾರೆ? ನಾನು ಮೂರು ವರ್ಷ ಆಳವಾಗಿ ಅಧ್ಯಯನ ಮಾಡದೆ ಒಂದು ವರ್ಷ ಓದಿ ಹೊರಗಡೆ ಹೋದರೆ ನನಗೆ ಯಾವ ಪರಿಣಿತಿ ಸಿಗುತ್ತದೆ, ಯಾವ ಅನುಭವ ಸಿಗುತ್ತದೆ? ನಾನು ಯಾವ skill ನ್ನು ಅಭಿವೃದ್ಧಿಪಡಿಸಿಕೊಂಡಿರುತ್ತೇನೆ, ನನಗೆ ಎಲ್ಲಿ ಉದ್ಯೋಗ ಸಿಗುತ್ತದೆ? ನಾನು ಬಡವರ ಮಗ, ಒಂದು ವರ್ಷದ ಸರ್ಟಿಫಿಕೇಟ್ ತೆಗೆದುಕೊಂಡು ನಾಲ್ಕು ವರ್ಷ ಎಲ್ಲಿಯೂ ಉದ್ಯೋಗ ಸಿಗದೆ ಮತ್ತೆ ಬರಬೇಕು. ಇವತ್ತು ಬಡವರ ಮಕ್ಕಳಿಗೆ ಉದ್ಯೋಗದ ಆಸೆ ತೋರಿಸಿ ವಿದ್ಯಾಭ್ಯಾಸ ಮಾಡುವುದು ಸ್ಥಗಿತಗೊಳಿಸಲಾಗುತ್ತಿದೆ. ಇದು ಶೂದ್ರ ಜನಾಂಗದ ಮೇಲೆ ದೊಡ್ಡ ಪರಿಣಾಮ ಬೀರುತ್ತದೆ. ಇದು ಅಲ್ಲಲ್ಲೇ ವಿದ್ಯಾಭ್ಯಾಸ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸ್ಥಗಿತಗೊಳಿಸುವಂಥದ್ದಾಗುತ್ತದೆ. ಈ ರೀತಿ ಆಗಬಾರದು.

(ಗೊಂದಲ)

**ಶ್ರೀ ಎನ್.ರವಿಕುಮಾರ್ :-** ಮಾನ್ಯ ಸಭಾಪತಿಯವರೇ, ಮಾನ್ಯ ಮರಿತಿಬ್ಬೇಗೌಡರು New Education Policy ಯಲ್ಲಿ ಇಲ್ಲದಿರುವಂತಹ ವಿಷಯಗಳನ್ನು ಹೇಳುತ್ತಿದ್ದಾರೆ. ಅಲ್ಲದೆ, ಅದರಲ್ಲಿ ಇಲ್ಲದಿರುವಂತಹ ವಿಷಯಗಳನ್ನು ತಮಗೆ ತೋಚಿದ ರೀತಿಯಲ್ಲಿ ಹೇಳುತ್ತಿದ್ದಾರೆ. ಇದು ಸರಿಯಲ್ಲ.

(ಗೊಂದಲ)

**ಶ್ರೀ ಎನ್.ರವಿಕುಮಾರ್ :-** ಮಾನ್ಯ ಸಭಾಪತಿಯವರೇ, ಮಾನ್ಯ ಮರಿತಿಬ್ಬೇಗೌಡರು New Education Policy ಯಲ್ಲಿ ಏನಿದೆ, ಅದನ್ನು ಹೇಳಲಿ. ಇಲ್ಲದಿರುವಂತಹ ವಿಷಯಗಳನ್ನು ಹೇಳುವ ಅಗತ್ಯವಿಲ್ಲ. ಅವರು New Education Policy ಯನ್ನು ಓದಿಕೊಂಡು ಬಂದಿಲ್ಲ. ಹೀಗಾಗಿ ಸುಳ್ಳು ಹೇಳಿ ಸದನವನ್ನು ದಾರಿ ತಪ್ಪಿಸುವ ಅವಶ್ಯಕತೆಯಿಲ್ಲ.

(ಗೊಂದಲ)

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ನಾಲ್ಕು ವರ್ಷದ ಕೋರ್ಸ್‌ನಲ್ಲಿ ಮಧ್ಯದಲ್ಲಿ ಯಾವಾಗಲಾದರೂ ಬಿಟ್ಟು ಹೋಗಬಹುದು ಎನ್ನುವುದು ಸರಿಯಿಲ್ಲ.

**ಉಪ ಸಭಾಪತಿಯವರು:-** ಮಾನ್ಯ ರವಿಕುಮಾರ್‌ರವರೇ, ಮಾನ್ಯ ಹರಿಪ್ರಸಾದ್‌ರವರೇ, ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ನಾನು ಔಲ್ಡ್ ಆಗಿಲ್ಲ. ಈ ರೀತಿಯಾದರೆ ನಾನು ರಾತ್ರಿ ೧೨ ಗಂಟೆಯವರೆಗೆ ಮಾತನಾಡುತ್ತೇನೆ.

(ಗೊಂದಲ)

**ಉಪ ಸಭಾಪತಿಯವರು:-** ಮಾನ್ಯ ರವಿಕುಮಾರ್‌ರವರೇ, ನಿಮಗೆ ಮಾತನಾಡುವುದಕ್ಕೆ ಅವಕಾಶ ಕೊಡುತ್ತೇನೆ, ಕುಳಿತುಕೊಳ್ಳಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಗೊಂದಲ)

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಶೂದ್ರರಿಗೆ New Education Policy ಯಲ್ಲಿ ಶಿಕ್ಷಣ ಸಿಗುವುದಿಲ್ಲ ಎನ್ನುವುದು ಎಲ್ಲಿದೆ ಎಂಬುದನ್ನು ಅವರು ತೋರಿಸಲಿ. ಅವರು ಇಲ್ಲದಿರುವಂತಹ ವಿಷಯಗಳನ್ನು ಹೇಳಿ ಸದನವನ್ನು ದಾರಿ ತಪ್ಪಿಸುವಂತಹ ಅವಶ್ಯಕತೆ ಇಲ್ಲ. ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ನಾವು ತಯಾರಿದ್ದೇವೆ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ಸೋಮವಾರದಿಂದ ಚರ್ಚೆಗೆ ಇಡಿ. ಅವರ ಪಕ್ಷದ ಸದಸ್ಯರನ್ನು ಅಧ್ಯಕ್ಷರನ್ನಾಗಿ ಮಾಡಿ ಸದನದಲ್ಲಿ ಚರ್ಚೆ ಮಾಡುತ್ತೀರಲ್ಲಾ ನಾಚಿಕೆಯಾಗುವುದಿಲ್ಲವೇ? ಇದರಲ್ಲಿ ಎಲ್ಲಾ ಸದಸ್ಯರಿಗೂ ಹಕ್ಕಿದೆ. ಈ ರಾಜ್ಯದ ಭವಿಷ್ಯದ ಬಗ್ಗೆ ಚರ್ಚಿಸಲು ಎಲ್ಲರಿಗೂ ಹಕ್ಕಿದೆ. ನಾವು ಚರ್ಚೆ ಮಾಡುವುದಕ್ಕೆ ತಯಾರಿದ್ದೇವೆ. ಯಾರು ಚರ್ಚೆ ಮಾಡುವುದಕ್ಕೆ ತಯಾರಿಲ್ಲ ಎಂದು ಹೇಳುತ್ತಿದ್ದಾರೆ? Mislead ಮಾಡಬೇಡಿ. (ಗೊಂದಲ)

**ಶ್ರೀ ನಸೀರ್ ಅಹಮದ್:-** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ಚರ್ಚೆ ಮಾಡೋಣ. Let us have a debate.

**ಉಪ ಸಭಾಪತಿಯವರು:-** ಮಾನ್ಯ ರವಿಕುಮಾರ್‌ರವರೇ, ಕುಳಿತುಕೊಳ್ಳಿ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ಸೋಮವಾರದಿಂದ ಒಂದು ವಾರ ಚರ್ಚೆ ಮಾಡೋಣ.

(ಗೊಂದಲ)

(ಮುಂದು)

969/23-09-2021/7-00/ bkp-gr

ಉಪ ಸಭಾಪತಿಯವರ ಉಪಸ್ಥಿತಿ

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ಇದರ ಬಗ್ಗೆ ಚರ್ಚೆಯಾಗಲಿ ಎಂದು ಬೇಡಿಕೆಯನ್ನಿಟ್ಟಿದ್ದಾರೆ, ಅದರ ಬಗ್ಗೆ ಚರ್ಚೆಯಾಗಲಿ, ಸೋಮವಾರದಿಂದ ಚರ್ಚೆಗೆ ಇಡಿ. ನಾವು ಚರ್ಚೆ ಮಾಡಲಿಕ್ಕೆ ತಯಾರಿದ್ದೇವೆ.

***(ಈ ಹಂತದಲ್ಲಿ ಸಭಾಪತಿಯವರು ಪೀಠವನ್ನು ಅಲಂಕರಿಸಿದರು)***

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಶ್ರೀ ಅರುಣ ಶಹಾಪುರ:-** ಮಾನ್ಯ ಸಭಾಪತಿಯವರೆ,

**(ಗೊಂದಲ)**

**ಸಭಾಪತಿಯವರು:** ಶ್ರೀಯುತ ಅರುಣ ಶಹಾಪುರ್, ನೀವು ಸೇರಿದಂತೆ ಎಲ್ಲರೂ ದಯವಿಟ್ಟು ಕುಳಿತುಕೊಳ್ಳಿ. ನೀವು ನೀವೇ ಮಾತನಾಡಿಕೊಂಡರೆ ಹೇಗೆ? ಎಲ್ಲರೂ ಕುಳಿತುಕೊಳ್ಳಿ.

**(ಗೊಂದಲ)**

(ಈ ಹಂತದಲ್ಲಿ ಯಾವುದು ಕಡತಕ್ಕೆ ಹೋಗಬಾರದು ಎಂದು ಸಭಾಪತಿಯವರು ಸೂಚಿಸಿದರು)

**ಶ್ರೀ ಅರುಣ ಶಹಾಪುರ:-** ಮಾನ್ಯ ಸಭಾಪತಿಯವರೆ, ತಾವು ಅನುಮತಿ ಕೊಟ್ಟರೆ ನಾನು ಮಾತನಾಡುತ್ತೇನೆ.

**ಸಭಾಪತಿಯವರು:** ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ಬಹಳ ಸಮಯ ಆಗಿದೆ. ಸಚಿವರು ಉತ್ತರವನ್ನು ಹೇಳುತ್ತಾರೆ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೆ, ಇದು ಬಹಳ ಅತ್ಯಂತ ಪ್ರಮುಖವಾದ ವಿಚಾರ. ನನಗೆ ಅವಕಾಶ ಕೊಟ್ಟರೆ ಇನ್ನು ಅರ್ಧ ತಾಸಿನಲ್ಲಿ ನನ್ನ ಭಾಷಣವನ್ನು ಮುಗಿಸುತ್ತೇನೆ.

, **(ಗೊಂದಲ)**

**ಸಭಾಪತಿಯವರು:** ತಮಗೆ ನಾನು ಮಾತನಾಡುತ್ತಿರುವುದು ಕೇಳಿಸುತ್ತಿಲ್ಲವೇ? ಇಷ್ಟು ಮಂದಿ ಗಮನಸೆಳೆಯುವ ಸೂಚನೆಯಲ್ಲಿಯೋ ನಿಯಮ 330 ರಡಿಯಲ್ಲಿಯೋ ವಿಚಾರಗಳನ್ನು ಪ್ರಸ್ತಾಪ ಮಾಡುವವರಿದ್ದಾರೆ. ಈ ರೀತಿಯಾದರೆ ಅವರಿಗೆ ಹೇಗೆ ಅವಕಾಶ ಕೊಡಲಿಕ್ಕೆ ಆಗುತ್ತದೆ? ನಿಯಮ 330 ರಡಿಯಲ್ಲಿ ಮಾತನಾಡಲಿಕ್ಕೆ ಎಷ್ಟು ಜನ ಸದಸ್ಯರು ಪ್ರಸ್ತಾವನೆಯನ್ನು ಕೊಟ್ಟಿದ್ದಾರೆಂದು ಅಜೆಂಡ ತೆಗೆದು ನೋಡಿ. ತಮಗೆ ಅವಕಾಶ ಕೊಟ್ಟರೆ 1 ಗಂಟೆಯಾಗುತ್ತದೆ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೆ, ನಾವು ರಾತ್ರಿ 12 ಗಂಟೆಯಾದರೂ ಪರವಾಗಿಲ್ಲ, ಕುಳಿತುಕೊಳ್ಳುತ್ತೇವೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**“ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”**

**(ಗೊಂದಲ)**

**ಸಭಾಪತಿಯವರು:** ನೀವು ಕುಳಿತುಕೊಳ್ಳುತ್ತೀರಿ, ಬೇರೆಯವರು ಕುಳಿತುಕೊಳ್ಳಬೇಕಲ್ಲವೇ?

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೆ, ಈ ವಿಚಾರವನ್ನು ನಿಯಮ 68 ರಡಿಯಲ್ಲಿ ಚರ್ಚೆ ಮಾಡಲು ಕನ್ವರ್ಟ್ ಮಾಡಿಕೊಡಬೇಕೆಂದು ಕೇಳಿದ್ದೇವೆ. ನಾವು ಇದರ ಬಗ್ಗೆ ವಿನಂತಿ ಮಾಡಿಕೊಂಡಾಗ ಅವಕಾಶ ಕೊಡುತ್ತೇವೆಂದು ಹೇಳಿದ್ದೀರಿ. ಈಗ ತಾವು ಅವಕಾಶವನ್ನು ಕೊಟ್ಟಿದ್ದೀರಿ. ಇನ್ನು ಅರ್ಧ ಗಂಟೆ ದಯವಿಟ್ಟು ಅವಕಾಶ ಕೊಡಿ ಸಾಕು. ನಾನು ಹೆಚ್ಚು ಮಾತನಾಡುವುದಿಲ್ಲ.

**ಡಾ||ವೈ.ಎ. ನಾರಾಯಣಸ್ವಾಮಿ:-** ಮಾನ್ಯಸಭಾಪತಿಯವರೆ, ಮಾತನಾಡಲಿಕ್ಕೆ ನಮಗೂ ಬೇರೆ ಬೇರೆ ಸಹ ವಿಷಯಗಳಿವೆ. ಅವರೊಬ್ಬರದೇ ಅಲ್ಲ. ನಮ್ಮದು ಗಮನಸೆಳಯುವ ಸೂಚನೆ ಇದ್ದು ಮಾತನಾಡಲಿಕ್ಕೆ ನಮಗೂ ಸಮಯ ಬೇಕು. ನಾವು 10 ಗಂಟೆಯವರೆಗೂ ಕುಳಿತುಕೊಳ್ಳಲಿಕ್ಕೆ ಆಗುವುದಿಲ್ಲ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೆ, ಇನ್ನು ಅರ್ಧ ಗಂಟೆ ದಯವಿಟ್ಟು ಅವಕಾಶ ಕೊಡಿ ಸಾಕು. ನಾನು ಹೆಚ್ಚು ಮಾತನಾಡುವುದಿಲ್ಲ.

**ಸಭಾಪತಿಯವರು:-** ತಾವು ಚರ್ಚೆಯನ್ನು 6-35ಕ್ಕೆ ಪ್ರಾರಂಭ ಮಾಡಿದ್ದೀರಿ. ಮತ್ತೆ ಶ್ರೀ ಹರಿಪ್ರಸಾದ್ ರವರು ಅರ್ಧ ತಾಸು ಮಾತನಾಡಿದ್ದಾರೆ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೆ, ನಾನು ಚರ್ಚೆಯನ್ನು 6-40ಕ್ಕೆ ಪ್ರಾರಂಭ ಮಾಡಿದ್ದೇನೆ. ಇನ್ನು ಅರ್ಧ ಗಂಟೆ ದಯವಿಟ್ಟು ಅವಕಾಶ ಕೊಡಿ ಸಾಕು.

**ಸಭಾಪತಿಯವರು:-** ಆಗುವುದಿಲ್ಲ ಕುಳಿತುಕೊಳ್ಳಿ. ನಾನು ಇಲ್ಲಿ ಬರೆದುಕೊಂಡಿದ್ದೇನೆ. ಸಚಿವರು ಉತ್ತರವನ್ನು ಹೇಳಬೇಕು.

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೆ, ನಮ್ಮ ಪಕ್ಷದ ಮಾನ್ಯ ಸದಸ್ಯರಾದ ಶೀ ನಸೀರ್ ಅಹಮದ್ ರವರು ಮಾತನಾಡುತ್ತಾರೆ. ಪಟ್ಟಿಯಲ್ಲಿ ಅವರ ಹೆಸರು ಸಹ ಇದೆ.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಸಭಾಪತಿಯವರು:-** ಶ್ರೀಯುತ ಹರಿಪ್ರಸಾದ್ ರವರೆ, ತಾವು ಹಿರಿಯರಿದ್ದೀರಿ. ಮಾತನಾಡಲಿಕ್ಕೆ ಸಾಕಷ್ಟು ಮಂದಿ ಇದ್ದು, ದಯಮಾಡಿ ಅರ್ಥ ಮಾಡಿಕೊಳ್ಳಿ.

**(ಗೊಂದಲ)**

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೆ, ನಾನು 20 ನಿಮಿಷದಲ್ಲಿ ಮುಗಿಸುತ್ತೇನೆ.

**ಸಭಾಪತಿಯವರು:** ಆಗುವುದಿಲ್ಲ, 5 ನಿಮಿಷ ಕೊಡುತ್ತೇನೆ. ಅದಕ್ಕಿಂತ ಹೆಚ್ಚು ಕೊಡುವುದಕ್ಕಾಗುವುದಿಲ್ಲ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೆ, 5 ನಿಮಿಷದಲ್ಲಿ ಆಗುವುದಿಲ್ಲ.

**ಸಭಾಪತಿಯವರು:-** ಹಾಗಾದರೆ, ಆಗುವುದಿಲ್ಲ, ಕುಳಿತುಕೊಳ್ಳಿ. ಶ್ರೀಯುತ ನಸೀರ್ ಅಹಮದ್ ರವರೇ ತಾವು ಮಾತನಾಡಿ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೆ, 10 ನಿಮಿಷದಲ್ಲಿ ಮುಗಿಸುತ್ತೇನೆ.

**ಸಭಾಪತಿಯವರು:-** ಇಲ್ಲ, ಆಗುವುದಿಲ್ಲ ಕುಳಿತುಕೊಳ್ಳಿ, ಶ್ರೀಯುತ ಹರಿಪ್ರಸಾದ್‌ರವರೆ, ನೀವು ಅವರಿಗೆ ಹೇಳಿ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೆ, ತಮ್ಮನ್ನು ನಾನು ಒಂದು ವಾರದಿಂದ ಕೇಳಿಕೊಂಡು ಬರುತ್ತಿದ್ದೇನೆ. 10 ನಿಮಿಷ ಕೊಡುವುದಿಲ್ಲವೆಂದರೆ ಹೇಗೆ?

**ಸಭಾಪತಿಯವರು:-** ಅವಾಜ್ ಮಾಡಬೇಡಿ. ಒಂದು ನಿಮಿಷ ಕೇಳಿ, ಇಲ್ಲದಿದ್ದರೆ, ನೀವು ಏನು ಮಾಡಿಕೊಳ್ಳುತ್ತಿರೋ ಮಾಡಿಕೊಳ್ಳಿ. ನಾನು ಕೊಡಲಿಕ್ಕೆ ಆಗುವುದಿಲ್ಲ, ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೆ, ನ್ಯಾಷನಲ್ ಎಜುಕೇಷನ್ ಪಾಲಿಸಿ ಬಗ್ಗೆ ನಾವು ಮಾತನಾಡಬಾರದೇ? ಬೆಳಿಗ್ಗೆ 3-00ಗಂಟೆಯವರೆಗೂ ಈ ಸದನ ನಡೆದಿರುವ ನಿದರ್ಶನ ಇದೆ. ನಾವು ಇಡೀ ರಾತ್ರಿ ಕುಳಿತುಕೊಳ್ಳುತ್ತೇವೆ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೆ, ಶ್ರೀಯುತ ಮರಿತಬ್ಬೇಗೌಡರವರು ಒಂದು ರಾಜಕೀಯ ಪಕ್ಷದ ನಾಯಕರಿದ್ದಾರೆ.

**ಸಭಾಪತಿಯವರು:** ಇರಲಿ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೆ, ಈಗ ಅವರು ಅರ್ಧ ಗಂಟೆ ಕಾಲಾವಕಾಶವನ್ನು ಕೇಳಿದ್ದು, ತಾವು 10 ನಿಮಿಷ ಕೊಡುತ್ತೇನೆಂದು ಹೇಳಿದ್ದೀರಿ.

**ಸಭಾಪತಿಯವರು:-** ಶ್ರೀಯುತ ಹರಿಪ್ರಸಾದ್ ರವರೆ, ತಾವು 330 ನಿಯಮವನ್ನು ನೋಡಿ. 20 ನಿಮಿಷಕ್ಕಿಂತ ಹೆಚ್ಚು ಮಾತನಾಡಲಿಕ್ಕೆ ಅವಕಾಶವಿಲ್ಲ. ಹಿರಿಯ ಸದಸ್ಯರಿದ್ದು, ತಾವು ಹೇಳಿದ್ದೀರಿ, ಎಂದು ನಾನು ಮಾತನಾಡಲಿಕ್ಕೆ ಅವಕಾಶವನ್ನು ಕೊಟ್ಟಿದ್ದೇನೆ. ಮತ್ತೆ, ಉಳಿದ ಸದಸ್ಯರ ಕಡೆಯು ನಾವು ಗಮನ ಕೊಡಬೇಕಲ್ಲವೇ? ತಾವು ಅರ್ಥ ಮಾಡಿಕೊಳ್ಳಬೇಕು.

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೆ, ತಾವು ಗಂಭೀರ ಪರಿಸ್ಥಿತಿಯನ್ನು ಅರ್ಥ ಮಾಡಿಕೊಂಡಿದ್ದೀರಿ ಎಂದು ನಾನು ತಿಳಿದುಕೊಂಡಿದ್ದೇನೆ.

**ಸಭಾಪತಿಯವರು:** ನಾನು ತಿಳಿದುಕೊಂಡಿದ್ದೇನೆ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೆ, ಶ್ರೀಯುತ ಮರಿತಿಬ್ಬೇಗೌಡರವರು genuine points ಗಳನ್ನು ಹೇಳುತ್ತಿದ್ದಾರೆ. ಈಗ ನಾನು ಬೇರೆ ಪಕ್ಷದವರ ಜೊತೆ ಮಾತನಾಡಿದ್ದೇನೆ. ಕೇವಲ ಒಂದೇ ಒಂದು ಪಕ್ಷ ಅವರ ಸಂಘ ಪರಿವಾರದ ಜೊತೆ ಮಾತನಾಡುತ್ತೇನೆಂದರೆ, ನಾನು ಒಪ್ಪುವುದಿಲ್ಲ. ಆದ್ದರಿಂದ, ಅವರಿಗೆ 10 ನಿಮಿಷ ಮಾತನಾಡಲು ಅವಕಾಶ ಮಾಡಿಕೊಡಿ.

**ಸಭಾಪತಿಯವರು:** ಆಯಿತು, 10 ನಿಮಿಷ ಅವರು ಮಾತನಾಡಲಿ.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೆ, ಅವಕಾಶ ಕೊಟ್ಟಿದ್ದಕ್ಕೆ ಧನ್ಯವಾದಗಳು.

**ಸಭಾಪತಿಯವರು:-** ಜೋರು ಮಾಡಿ ಅವಕಾಶವನ್ನು ತೆಗೆದುಕೊಂಡಿದ್ದೀರಿ.

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೆ, 2ನೇ ವರ್ಷ ಡಿಪ್ಲೊಮಾ ಎಂದು ಕೊಡುತ್ತೇವೆಂದು ಹೇಳಿದ್ದಾರೆ. ಈಗ ಇಂಜಿನಿಯರಿಂಗ್ ಕಾಲೇಜುಗಳಲ್ಲಿ, ಪಾಲಿಟೆಕ್ನಿಕ್‌ನಲ್ಲಿ 3 ವರ್ಷಗಳ ಡಿಪ್ಲೋಮಾ ಕೋರ್ಸ್‌ಗಳಿವೆ. ಈಗ ನೀವು 2ನೇ ವರ್ಷಕ್ಕೆ ಯಾವುದೇ ಡಿಗ್ರಿ ಎಂದರೆ ಡಿಪ್ಲೋಮಾ ಎಂದಾಕ್ಷಣಕ್ಕೆ ಈಗ 3ನೇ ವರ್ಷದ ಡಿಪ್ಲೋಮಾ ಎಂದರೆ ಯಾರಾದರೂ ಮಕ್ಕಳು ಬರುತ್ತಾರೆಯೇ? ಅದರ ಕಥೆ ಏನು? ನೀವು ಈ ಡಿಪ್ಲೋಮಾ ಕೋರ್ಸ್ ಆ 3 ವರ್ಷದ ಡಿಪ್ಲೋಮಾ ಕೋರ್ಸ್‌ಗೆ ಸಮಯವಿದೆಯೇ ಎನ್ನುವುದು ಇವತ್ತು ಈ ವಿದ್ಯಾರ್ಥಿಗಳಿಗೆ ದೊಡ್ಡ ಸಮಸ್ಯೆಯಾಗಿದೆ, ಅದರ ಬಗ್ಗೆ ನೀವು ಸ್ಪಷ್ಟನೆ ಕೊಡಬೇಕು. ಮತ್ತೆ ಎರಡನೆಯದಾಗಿ, ಕ್ವಾಲಿಟಿ ಎಜುಕೇಷನ್ ಬಗ್ಗೆ ಹೇಳುವುದಾದರೆ, ಇವತ್ತು ವಿದ್ಯಾರ್ಥಿಗಳಿಗೆ ಇಂಜಿನಿಯರಿಂಗ್‌ನಲ್ಲಿ 20 ವಿದ್ಯಾರ್ಥಿಗಳಿಗೆ ಒಬ್ಬ ಶಿಕ್ಷಕರು, ಪಾಲಿಟೆಕ್ನಿಕ್‌ನಲ್ಲಿ 25 ವಿದ್ಯಾರ್ಥಿಗಳಿಗೆ ಒಬ್ಬ ಶಿಕ್ಷಕರು ಇದ್ದರೆ, ನಮ್ಮ ಡಿಗ್ರಿ ಕಾಲೇಜುಗಳಲ್ಲಿ ಸಾಮಾನ್ಯವಾಗಿ ಯೂನಿವರ್ಸಿಟಿಗಳಲ್ಲಿ ಇವತ್ತು ಏನಾಗಿದೆ ಎಂದರೆ ವಿದ್ಯಾರ್ಥಿಗಳ ಸಂಖ್ಯೆ 110 ಮಕ್ಕಳನ್ನು ಒಂದೇ ಕಡೆ ಕುಳ್ಳಿರಿಸಿಕೊಂಡು ಪಾಠ ಮಾಡುವಂತಹ ಪರಿಸ್ಥಿತಿ ಬಂದು ಹೋಗಿದೆ. ಇವತ್ತು ರಾಜ್ಯದಲ್ಲಿರುವಂತಹ 410 ಸರ್ಕಾರಿ ಕಾಲೇಜುಗಳಲ್ಲಿ ಸುಮಾರು 12 ವರ್ಷಗಳಿಂದ ಪ್ರಾಂಶುಪಾಲರೆ ಇರುವುದಿಲ್ಲ. ಮತ್ತೆ, ಇವತ್ತು ಕಾಲೇಜುಗಳಲ್ಲಿ ಶುದ್ಧವಾದ ಒಂದು ಶೌಚಾಲಯವೂ ಇರುವುದಿಲ್ಲ. ಆ ಶೌಚಾಲಯವನ್ನು ಶುಚಿಗೊಳಿಸಲಿಕ್ಕೆ ಫೆನಾಯಿಲ್ ಕೊಳ್ಳಲು ಹಣ ಕೊಡುತ್ತಿಲ್ಲ. ಲ್ಯಾಬ್‌ನಲ್ಲಿ ಜನರೇಟರ್ ಸ್ಟಾರ್ಟ್ ಮಾಡಲಿಕ್ಕೆ ಡೀಸೆಲ್ ಕೊಡುತ್ತಿಲ್ಲ. ಇವತ್ತು ಸರ್ಕಾರಿ ಕಾಲೇಜುಗಳು ಯಾವ ರೀತಿ ಇವೆ ಎಂದು ಹೇಳಲಿಕ್ಕೆ ಅಸಾಧ್ಯವಾಗಿದೆ. ಅವುಗಳನ್ನು ಅಭಿವೃದ್ಧಿಪಡಿಸಲಿಕ್ಕೆ ಆಗುತ್ತಿಲ್ಲ. ಇವತ್ತು ಯಾವುದೇ ಯೂನಿವರ್ಸಿಟಿಗಳಲ್ಲಿಯೂ ಕೂಡ 70% ಫ್ಯಾಕಲ್ಟಿ ಖಾಲಿ ಇದೆ. ಇವತ್ತು ಡಿಗ್ರಿ ಕಾಲೇಜಿನಲ್ಲಿ 14 ಸಾವಿರ ಜನ ಅತಿಥಿ ಫ್ಯಾಕಲ್ಟಿ ಕೆಲಸ ಮಾಡುತ್ತಿದ್ದಾರೆ . ಈಗ ಕಾಯಂ ಶಿಕ್ಷಕರಿಲ್ಲವೆಂದು ಎನ್.ಇ.ಪಿ ಹೇಳುತ್ತಿದೆ. ಹೀಗಾಗಿ, ಎನ್.ಇ.ಪಿ., ಯನ್ನು ಜಾರಿಗೆ ತರಲಿಕ್ಕೆ ಡಿಗ್ರಿಯಲ್ಲಿ ಕಾಯಂ ಶಿಕ್ಷಕರೇ ಇರಬೇಕೆಂದು ಹೇಳಲಾಗುತ್ತಿದೆ. ಆದರೆ, ಎಲ್ಲಿಯೂ ಸಹ ಶೇಕಡ 70ರಷ್ಟು ಕಾಯಂ ಉಪನ್ಯಾಸಕರೇ ಇರುವುದಿಲ್ಲ. ಇದನ್ನು ಈ ವರ್ಷ ಪ್ರಾರಂಭ ಮಾಡುತ್ತೇವೆಂದು ಹೇಳುತ್ತಿದ್ದೀರಿ. ಹಾಗಾದರೆ, ಇದನ್ನು ಈ ವರ್ಷ ಯಾವ ರೀತಿ ಜಾರಿಗೆ ತರಲಿಕ್ಕೆ ಆಗುತ್ತದೆ? ಯಾವ ರೀತಿಯಲ್ಲಿ ಮೂಲಸೌಲಭ್ಯಗಳನ್ನು ಕೊಡುತ್ತೀರಿ. ನಮ್ಮ ಸರ್ಕಾರಿ ಕಾಲೇಜುಗಳ ಪರಿಸ್ಥಿತಿಯೇ ಈ ರೀತಿಯಾದರೆ, ಖಾಸಗಿ ಕಾಲೇಜುಗಳ ಪರಿಸ್ಥಿತಿಯನ್ನು ನೋಡಿದರೆ ಇನ್ನು ಹದಗೆಟ್ಟು ಹೋಗಿದೆ. ಅನುದಾನ ಮತ್ತುಅನುದಾನ ರಹಿತ ಕಾಲೇಜುಗಳೆಂದು

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಇವೆ. ಅವುಗಳು ಕೂಡ ಇದೆಲ್ಲವನ್ನು ವ್ಯವಸ್ಥೆ ಮಾಡಿಕೊಳ್ಳಬೇಕೆಂದರೆ ಸ್ವಲ್ಪ ಸಮಯ ಬೇಡವೇ? ನೀವು ಸಮಯವನ್ನೇ ಕೊಡದೇ ಈ ವರ್ಷವೇ ಪ್ರಾರಂಭ ಮಾಡುತ್ತೇವೆಂದು ಹೊರಟಿದ್ದೀರಿ. ಆದರೆ, ಸರ್ಕಾರಿ ಕಾಲೇಜುಗಳನ್ನು ಅಭಿವೃದ್ಧಿಪಡಿಸಲಿಕ್ಕೆ ಬಜೆಟ್‌ನಲ್ಲಿ ಎಷ್ಟು ಹಣವನ್ನಿಟ್ಟಿದ್ದೀರಿ? ಎನ್.ಇ.ಪಿ. ಮಾಡಲಿಕ್ಕೋಸ್ಕರ ಇಂತಹ ಸವಲತ್ತುಗಳಿಗೋಸ್ಕರ ಹಣ ಕೊಟ್ಟಿದ್ದೇವೆ, ಫ್ಯಾಕಲ್ಟಿಗಳನ್ನು ನೇಮಕ ಮಾಡಲಿಕ್ಕೋಸ್ಕರ ಕೊಟ್ಟಿದ್ದೇವೆನ್ನುವುದು ಎಲ್ಲಿಯೂ ಸ್ಪಷ್ಟತೆ ಇಲ್ಲ. ಮತ್ತೆ ಯಾವ ಯಾವ ಯೂನಿವರ್ಸಿಟಿಗಳಲ್ಲಿ ಎಷೆಷ್ಟು ಹೊಸ ಕೋರ್ಸ್‌ಗಳನ್ನು ನಾವು ಪ್ರಾರಂಭ ಮಾಡುತ್ತಿದ್ದೇವೆ. ಈಗಾಗಲೇ ಎಲ್ಲಾ ಯೂನಿವರ್ಸಿಟಿಗಳಲ್ಲಿ ದಾಖಲಾತಿ ಮುಗಿದು ಹೋಗಿದೆ. ಯಾವ ಯಾವ ಯೂನಿವರ್ಸಿಟಿಗಳಲ್ಲಿ ಎಷ್ಟೆಷ್ಟು ಹೊಸ ಕೋರ್ಸ್‌ಗಳನ್ನು ತೆರೆಯುತ್ತಿದ್ದೇವೆ. ಯಾವ ವಿದ್ಯಾರ್ಥಿ ಯಾವ ಒಂದು ಹೊಸ ಕೋರ್ಸ್ ಅನ್ನು ತೆಗೆದುಕೊಂಡು ಓದಬೇಕು ಎನ್ನುವುದಕ್ಕೆ ಯಾವುದೇ ಒಂದು ಮಾಹಿತಿ ಇರುವುದಿಲ್ಲ. ಈಗ 1ನೇ ಅಕ್ಟೋಬರ್‌ನಿಂದ ಡಿಗ್ರಿ ಕಾಲೇಜುಗಳು ಪ್ರಾರಂಭವಾಗುತ್ತಿದೆ. ಯಾವುದಕ್ಕೂ ಸಹ ಇನ್ನು ಸಿಲಬಸ್ ಫ್ರೇಮ್ ಮಾಡಿರುವುದಿಲ್ಲ. ಸಿಲಬಸ್ ಅನ್ನೇ ಫೈನಲ್ ಮಾಡಿರುವುದಿಲ್ಲ. 1ನೇ ಅಕ್ಟೋಬರ್‌ನಿಂದ ಕಾಲೇಜುಗಳು ಮತ್ತು ಯೂನಿವರ್ಸಿಟಿಗಳು ಪ್ರಾರಂಭವೆಂದು ಹೇಳುತ್ತಿದ್ದಾರೆ. ಸಿಲಬಸ್ ಆಗದಿದ್ದರೆ ಪಠ್ಯಪುಸ್ತಕಗಳು ಎಲ್ಲಿ ಸಿಗುತ್ತವೆಂದು ಸರ್ಕಾರ ಸ್ಪಷ್ಟಪಡಿಸಬೇಕು.

**ಮುಂದು**

**(970) 23.09.2021 07.10 ಎಸ್‌ವಿ-ಎಂಡಿ**

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಮರಿತಿಬ್ಬೇಗೌಡ (ಮುಂದು):-**

ಆನ್‌ಲೈನ್‌ನಲ್ಲಿ ಕೂಡ ಉನ್ನತ ಶಿಕ್ಷಣವನ್ನು ಕಲಿಯುವ ಸಲುವಾಗಿ ಎಂ.ಬಿ.ಎ., ಎಂ.ಸಿ.ಎ. ಕೋರ್ಸ್‌ಗಳನ್ನು ಕೊಟ್ಟಿದ್ದಾರೆ. ಅದರಲ್ಲಿ *ODL* (Open and Distance Learning) Programmes and *OL* (Online) Programmes ಎನ್ನುವ ಎರಡು ಸ್ಕೀಮ್‌ಗಳಿವೆ. 10,000 ವಿದ್ಯಾರ್ಥಿಗಳನ್ನು ಒಂದು ವಿಶ್ವವಿದ್ಯಾಲಯ, ಒಂದು ಶಿಕ್ಷಣ ಸಂಸ್ಥೆ ಆನ್‌ಲೈನ್‌ನಲ್ಲಿ ದಾಖಲಾತಿ ಮಾಡಿಕೊಳ್ಳಬಹುದು ಎಂಬುದು ಯು.ಜಿ.ಸಿ. ನಿಯಮವಾಗಿದೆ. *ODL* ಎಂದರೆ ಒಂದು, *OL* ಎಂದರೆ ಒಂದು. ಎರಡನ್ನೂ ಮಾಡಬಹುದು. ಒಂದು ವಿಶ್ವವಿದ್ಯಾಲಯವು 20,000 ವಿದ್ಯಾರ್ಥಿಗಳನ್ನು ದಾಖಲು ಮಾಡಿಕೊಳ್ಳಬಹುದು. ಆದರೆ 10,000 ವಿದ್ಯಾರ್ಥಿಗಳಿಗೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಾಲ್ಕೇ *faculty.* ಒಬ್ಬರು *Professor,* ಒಬ್ಬರು *Associate Professor* ಹಾಗೂ ಇಬ್ಬರು ಸಹಾಯಕ ಪ್ರಾಧ್ಯಾಪಕರು. ಇಷ್ಟೇ ಸಾಕು ಎಂದು *UGC (University Grant Commission) and AICTE (All India Council for Technical Education)* ಹೇಳುತ್ತಿದೆ. 10,000 ವಿದ್ಯಾರ್ಥಿಗಳಿಗೆ ನಾಲ್ಕು *faculty* ಎಂದರೆ ಖಾಸಗಿಯವರು ಯಾವ ಪ್ರಮಾಣದಲ್ಲಿ ದುಡ್ಡು ಮಾಡತಕ್ಕಂತಹ ದಂಧೆಯು ಇದಾಗಿದೆ? ಈ *NEP (National Education Policy)* ಯಲ್ಲಿ ಖಾಸಗಿಯವರಿಗೆ ಇರತಕ್ಕಂತಹ ಸ್ವಾತಂತ್ರ್ಯ ನೋಡಿದರೆ ಶಿಕ್ಷಣವನ್ನು ಪೂರ್ಣವಾಗಿ ಮಾರಾಟಕ್ಕೆ ಇಟ್ಟಂತಿದೆ. ಖಾಸಗಿಯವರು ಬಂಡವಾಳಶಾಹಿಗಳು ದುಡ್ಡು ಮಾಡುವುದಕ್ಕೆ ಇದು ಮಾರ್ಗವಾಗಿದೆ. ನಮ್ಮ ವಿಶ್ವವಿದ್ಯಾಲಯಗಳಲ್ಲಿ ಎಂ.ಬಿ.ಎ. ಗೆ ಸೀಟು ನೀಡಬೇಕೆಂದರೆ ರೂ.70,000. *NEP* ಯೋಜನೆಯ *ODL and OL* ನಲ್ಲಿ ದಾಖಲಾಗುವವರಿಗೆ ರೂ.20,000 *fees* ಎಂದರೂ ಸಹ 10,000 ಜನರಿಗೆ 20 ಕೋಟಿ ದುಡ್ಡು ಆಗುತ್ತದೆ. ಅವರು *faculty* ಮತ್ತಿತರ ಖರ್ಚುಗಳಿಗೆ ರೂ.2 ಕೋಟಿಯನ್ನು ವ್ಯಯ ಮಾಡಿದರೂ ರೂ.18 ಕೋಟಿ ಲಾಭವನ್ನು ಒಂದು ವರ್ಷದಲ್ಲಿ ಗಳಿಸಬಹುದು. ಇಂತಹ ಒಂದು ಸ್ವಾತಂತ್ರ್ಯವನ್ನು ಖಾಸಗಿಯವರಿಗೆ ಈ ಶಿಕ್ಷಣ ನೀತಿಯಲ್ಲಿ ನೀಡಲಾಗಿದೆ. ಈ ರೀತಿ ಖಾಸಗಿಯವರಿಗೆ *NEP* ಯಿಂದ ದೊರೆತಿರುವ ಸ್ವಾತಂತ್ರ್ಯದಿಂದಾಗಿ ಸರ್ಕಾರಿ ಸ್ವಾಮ್ಯದ ಶಿಕ್ಷಣ ಸಂಸ್ಥೆಗಳು ಹಾಳಾಗುತ್ತವೆ. ದೊಡ್ಡ ಖಾಸಗೀಕರಣ, ದೊಡ್ಡ ವ್ಯಾಪಾರೀಕರಣ ಈ ವ್ಯವಸ್ಥೆಯಿಂದ ಜಾರಿಗೆ ಬರುತ್ತವೆ.

ನೈತಿಕ ಮೌಲ್ಯದ ಬಗ್ಗೆ ಮಹಾತ್ಮಾ ಗಾಂಧೀಜಿಯವರು "**ನೈತಿಕತೆ ಇಲ್ಲದ ಬದುಕು ಮರಳಿನಲ್ಲಿ ಕಟ್ಟಿದ ಮನೆಯಂತೆ**" ಎನ್ನುವ ಒಂದು ಮಾತನ್ನು ಹೇಳಿದ್ದರು. ನಮ್ಮಲ್ಲಿ ನೈತಿಕ ಶಿಕ್ಷಣಕ್ಕೆ ಒತ್ತು ಕೊಟ್ಟಿಲ್ಲ. ಅದೇ ರೀತಿ ಗೌತಮ ಬುದ್ಧ "**ಎಷ್ಟೇ ವಿದ್ಯೆ ಇದ್ದರೂ, ವಿದ್ಯೆಯ ಜೊತೆಗೆ ಶೀಲವಿರಬೇಕು. ಶೀಲವಿರದ ವಿದ್ಯೆ ದೇಶಕ್ಕೇ ಅಪಾಯಕಾರಿ**" ಎಂದು ಹೇಳಿದ್ದಾರೆ. ಇಂದು ಅಂತಹ ಶೀಲ, ನಡತೆ, ನೈತಿಕತೆಯನ್ನು ತುಂಬತಕ್ಕಂತಹ ಶಿಕ್ಷಣವನ್ನು *NEP* ಯಲ್ಲಿ ಎಲ್ಲಿಯೂ ಅಳವಡಿಸಿರುವುದಿಲ್ಲ. ನೈತಿಕ ಶಿಕ್ಷಣಕ್ಕಾಗಿ *NEP* ಯಲ್ಲಿ 'ಯೋಗ ಶಿಕ್ಷಣ' ಎಂದು ಬಿಜೆಪಿ ಸರ್ಕಾರ ಅಸ್ತಿತ್ವಕ್ಕೆ ಬಂದ ಮೇಲೆ ದೊಡ್ಡ ಕಾರ್ಯಕ್ರಮವನ್ನು ಮಾಡಲಾಗುತ್ತಿದೆ. ದಯಮಾಡಿ ಯೋಗ ಶಿಕ್ಷಣವನ್ನು *NEP* ಯಲ್ಲಿ ಅಳವಡಿಸುವಂತೆ ಮಾಡಬೇಕು. ಅದರಿಂದ ಈ ದೇಶದ ಮಕ್ಕಳಿಗೆ ಚೈತನ್ಯ, ಶಕ್ತಿ, ಆರೋಗ್ಯ ಎಲ್ಲವೂ ಬರುತ್ತದೆ. ಇದರಲ್ಲಿ ಎಲ್ಲರ ಭಾಗವಹಿಸುವಿಕೆಯಿಂದಾಗಿ ರಾಷ್ಟ್ರೀಯತೆ, ಜಾತ್ಯಾತೀತತೆ ವೃದ್ಧಿಯಾಗುತ್ತದೆ. ಇದನ್ನು ಕಡ್ಡಾಯಗೊಳಿಸಬೇಕು. ಪದವಿ ಪೂರ್ಣಗೊಳಿಸಿರುವವರು ಯಾರಾದರೂ ನೈತಿಕತೆ, ಮಾನವೀಯತೆ ಬಗ್ಗೆ ಕಲಿಯಬೇಕೆಂದು ಹೇಳಿದರೆ ಸೇನೆಯಲ್ಲಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಥವಾ ಪೊಲೀಸ್ ಇಲಾಖೆಯಲ್ಲಿ ಎಲ್ಲಿಯಾದರೂ ಸೇವೆ ಮಾಡುವಂತಹ ಅವಕಾಶವನ್ನು ಮಾಡಿಕೊಡಬೇಕು. ಅಲ್ಲಿ ಅವರಿಗೆ ನೈತಿಕವಾದಂತಹ ಸಾಮರ್ಥ್ಯ ಬರುತ್ತದೆ.

*"ತನಗೆ ಇರತಕ್ಕಂತಹ ಸಾಮರ್ಥ್ಯವನ್ನು ತಾನು ಅರ್ಥ ಮಾಡಿಕೊಂಡು ಸಾದರ ಪಡಿಸದೆ ಹೋದರೆ ಯಾವ ಶಿಕ್ಷಣ ಕಲಿತರೂ ಏನೂ ಪ್ರಯೋಜನವಿಲ್ಲ. ತಮ್ಮ ಜ್ಞಾನವನ್ನು ತಾವು ಬೆಳೆಸಿಕೊಳ್ಳಬೇಕು"* ಎನ್ನುವ ಮಾತನ್ನು ಸ್ವಾಮಿ ವಿವೇಕಾನಂದರು ಹೇಳಿದ್ದಾರೆ. 1957ರಲ್ಲಿ ಧಾರವಾಡದಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ರಾಷ್ಟ್ರಕವಿ ಕುವೆಂಪು ಅವರು *"ಈಗ ನಾವು ವಿದ್ಯಾರ್ಥಿಗಳಿಗೆ ಕೊಡುತ್ತಿರುವುದು ಅನ್ನದ ಭಾಷೆಯ ಶಿಕ್ಷಣ. ಈ ಶಿಕ್ಷಣ ಸರಿಯಾದುದಲ್ಲ. ವಿದ್ಯಾರ್ಥಿಗಳಿಗೆ ಜ್ಞಾನದ ದೀಕ್ಷೆಯಾಗುವಂತಹ ಶಿಕ್ಷಣವನ್ನು ಕೊಡಬೇಕು."* ಎಂದು ಹೇಳಿದ್ದರು. ಇಂದು ಅದು ಎಲ್ಲಿ ಆಗುತ್ತಿದೆ? *"ನಾವು ಮಕ್ಕಳಿಗೆ ಮಾಡುತ್ತಿರುವುದು ನೆನಪಿನ ಪರೀಕ್ಷೆಗಳು, ಅದೃಷ್ಟದ ಪರೀಕ್ಷೆಗಳು. ಜ್ಞಾನದ ದೀಕ್ಷೆಯ ಶಿಕ್ಷಣವನ್ನು ನೀಡಬೇಕು."* ಎಂದು ಅಂದೇ ಅವರು ಹೇಳಿದ್ದರು. ಇಂದು ಜಾರಿಗೆ ತರಲಾಗಿರುವ *NEP* ಯಲ್ಲಿಯಾದರೂ ಅವರ ಮಾತುಗಳನ್ನು ಸಾಕಾರಗೊಳಿಸಲಾಗುತ್ತಿಲ್ಲವಲ್ಲ. ಎಲ್ಲಿಯೂ ಕೂಡ ನಾವು ನೋಡುವುದಕ್ಕಾಗುತ್ತಿಲ್ಲ.

ಈ *NEP* ಯಲ್ಲಿ ನಿರುದ್ಯೋಗ ಸಮಸ್ಯೆಯನ್ನು ಬಹಳವಾಗಿ ಕಾಣಬಹುದು. ಏಕೆಂದರೆ *dropouts* ಗೆ ಸರ್ಕಾರವೇ ಹೆಬ್ಬಾಗಿಲನ್ನು ತೆರೆದಿದೆ. ಮೊದಲನೇ ವರ್ಷಕ್ಕೆ ಹೊರಹೋಗಬಹುದು, ಎರಡನೇ ವರ್ಷಕ್ಕೆ ಹೊರಹೋಗಬಹುದು ಎಂದು ಹೊರಹೋಗಲು ಎಲ್ಲಾ ಬಾಗಿಲುಗಳನ್ನು ತೆರೆದಿದ್ದಾರೆ. ಯಾರೇ ಅಲ್ಪಸಂಖ್ಯಾತರು, ಹಿಂದುಳಿದವರು ಉದ್ಯೋಗದ ಆಸೆಯಿಂದ ವಿದ್ಯಾಭ್ಯಾಸವನ್ನು ಬಿಟ್ಟು ಹೊರಟು ಹೋಗುವುದರಿಂದ ಅವರು ಯಾವುದೇ ಒಂದು ವಿಷಯದಲ್ಲಿ ಪರಿಪೂರ್ಣವಾಗಿ ಪಾರಂಗತನಾಗಿ ಪದವಿಯನ್ನು ಪಡೆಯುವ ಅವಕಾಶಗಳಿಂದ ವಂಚಿತರಾಗುತ್ತಾರೆ. ಮಾನ್ಯ ಬಾಬಾಸಾಹೇಬ್ ಅಂಬೇಡ್ಕರ್ ಅವರು ಪರಿಶಿಷ್ಟ ಜಾತಿಯವರಿರಬಹುದು, ಅಲ್ಪಸಂಖ್ಯಾತರಿರಬಹುದು ಎಲ್ಲರಿಗೂ ಶಿಕ್ಷಣವನ್ನು ನೀಡಬೇಕೆಂದು ಹೇಳಿದ್ದರು. ಅವರನ್ನು ನಾವು ಒಂದು ಪದವಿ ಪಡೆಯುವ ಮಟ್ಟಕ್ಕೆ, ಒಂದು ಪಿ.ಜಿ.ಕೋರ್ಸ್ ಓದುವ ಮಟ್ಟಕ್ಕೆ, ಒಂದು ಪಿ.ಹೆಚ್.ಡಿ. ಮಾಡುವ ಮಟ್ಟಕ್ಕೆ ತೆಗೆದುಕೊಂಡು ಹೋಗುವುದಕ್ಕೆ ಆಗುವುದಿಲ್ಲ. ಅವರಿಗೆ ನಾವು ಏನೆಲ್ಲಾ ಆರ್ಥಿಕ ನೆರವನ್ನು ನೀಡಿದರೂ ಅವರು ಎಲ್ಲಿಯೋ ಒಂದು ಕಡೆ *dropout* ಆಗುವಂತಹ ಪರಿಸ್ಥಿತಿಯನ್ನು ಇಲ್ಲಿ ತಂದಿಟ್ಟಿದ್ದಾರೆ. ಇದರಿಂದಾಗಿ ನಿರುದ್ಯೋಗ ಸಮಸ್ಯೆ ಹೆಚ್ಚಾಗುತ್ತದೆ ಎಂದು ನಾನು ಅಂತಿಮವಾಗಿ ಹೇಳುತ್ತೇನೆ. ನೈತಿಕ ಶಿಕ್ಷಣಕ್ಕೆ ಇಲ್ಲಿ ಹೆಚ್ಚು ಒತ್ತನ್ನು ಕೊಟ್ಟಿರುವುದಿಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇಲ್ಲಿ ನನಗೆ ರಾಷ್ಟ್ರಕವಿ ಕುವೆಂಪು ಅವರ ಒಂದು ಮಾತು ನೆನಪಾಗುತ್ತದೆ.

ಸುಳ್ಳಿನ ಮಾಲೆಯ ಕೊರಳಿಗೆ ಸೂಡಿ
ಕಳ್ಳನೊಬ್ಬನನು ಗುರುವನು ಮಾಡಿ
ಬಡವರ ಹೊನ್ನನು ಕಾಣಿಕೆ ನೀಡಿ
ಧರ್ಮವ ಮೆರೆವರು ನೋಡಯ್ಯ.

ರಾಷ್ಟ್ರೀಯ ಶಿಕ್ಷಣ ನೀತಿ ಈ ರೀತಿಯಿದೆ. ಇದು ರಾಷ್ಟ್ರಕವಿ ಕುವೆಂಪು ಅವರು ಹೇಳಿರುವುದು, ನಾನು ಹೇಳಿರುವುದಲ್ಲ.

ಇನ್ನೊಂದು ಬಸವಣ್ಣನವರ ವಚನವನ್ನು ಹೇಳುತ್ತೇನೆ.

ನೀರ ಕಂಡಲ್ಲಿ ಮುಳುಗುವರಯ್ಯ
ಮರವ ಕಂಡಲ್ಲಿ ಸುತ್ತುವರಯ್ಯ
ಬತ್ತುವ ಜಲವ ಒಣಗುವ ಮರವ
ನೆಚ್ಚಿದವರು ನಿಮ್ಮ ನೆಚ್ಚಬಲ್ಲರೇ
ಕೂಡಲಸಂಗಮದೇವ.

ಈ *NEP* ಯಿಂದ ಇದಕ್ಕೆ ಜನರನ್ನು ದೂಡುತ್ತಿದ್ದಾರೆ. ಮುಗ್ಧ ಜನರು ತಮ್ಮಲ್ಲಿರತಕ್ಕಂತಹ ಸಾಮರ್ಥ್ಯವನ್ನು ಬಳಸಿಕೊಂಡು ಈ ದೇಶ ಕಟ್ಟುವ ನೈತಿಕ ಶಿಕ್ಷಣಕ್ಕೆ ಇಲ್ಲಿ ಒತ್ತು ಕೊಟ್ಟಿಲ್ಲ. ಖಂಡಿತವಾಗಿ ಇದರಿಂದ ವಿದ್ಯಾರ್ಥಿಗಳ ಭವಿಷ್ಯ ಹಾಳಾಗುತ್ತದೆ. ನಿರುದ್ಯೋಗ ಸಮಸ್ಯೆ ಹೆಚ್ಚಾಗುತ್ತದೆ. ಖಾಸಗೀಕರಣ ವ್ಯಾಪಾರೀಕರಣವಾಗುತ್ತದೆ. ಇದರಿಂದ ಒಳಿತಾಗುವುದಿಲ್ಲ.

ಇದರ ಜೊತೆಯಲ್ಲಿ ನಾನು ಒಂದು ಮಾತನ್ನು ಹೇಳುತ್ತೇನೆ. *NEP* ಬಗ್ಗೆ ರಾಷ್ಟ್ರಮಟ್ಟದಲ್ಲಿ ಹಾಗೂ ರಾಜ್ಯ ಮಟ್ಟದಲ್ಲಿ ಚರ್ಚೆಗಳಾಗಿವೆ, ಸೆಮಿನಾರ್‌ಗಳಾಗಿವೆ. ಆದರೆ ಯಾವುದೇ ಸೆಮಿನಾರ್‌ನಿಂದ ಯಾರಾದರೂ ಚಿಂತಕರು ಒಂದೆರಡು ಒಳ್ಳೆಯ ಸಲಹೆಗಳನ್ನು ಕೊಟ್ಟಿರುವುದಿಲ್ಲವೇ? ಅವು ಯಾವುದನ್ನೂ ಕೂಡ ಸೇರ್ಪಡೆ ಮಾಡಿದ್ದೇವೆ, ಬದಲಾವಣೆ ತಂದಿದ್ದೇವೆ ಎನ್ನುವ ಮಾತನ್ನು *Central Committee and State Committee* ಗಳೂ ಹೇಳುತ್ತಿಲ್ಲ. ಹಾಗಾದರೆ ಅವರೆಲ್ಲಾ ಕೊಟ್ಟಿರುವ ಚಿಂತನೆಗಳು, ಅಭಿಪ್ರಾಯಗಳು ಏನು? ಇವರದ್ದು ಒಂದೇ ಒಂದು ಅಜೆಂಡಾ. ನಾವು ನಾಲ್ಕು ಜನ ತೀರ್ಮಾನ ಮಾಡಿ ತೆಗೆದುಕೊಂಡು ಬಂದಿದ್ದೇವೆ. ನೀವು ಒಪ್ಪಿಕೊಂಡು ಕಲಿತರೆ ಕಲಿಯಿರಿ. ಕಲಿಯದಿದ್ದರೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೋಗಿ. ಇದು *NEP* ಯಲ್ಲಿರುವ ನೀತಿ. ವಿರೋಧ ಪಕ್ಷಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವುದಿಲ್ಲ. ದೇಶಕ್ಕೋಸ್ಕರ, ಜನರಿಗೋಸ್ಕರ ನಾವು ಮಾಡುವುದು ಎಂದು ಹೇಳುತ್ತಾರೆ. **ಮನ್ ಕಿ ಬಾತ್** ಎಂದು ಹೇಳುತ್ತಾರೆ, ವಿರೋಧ ಪಕ್ಷದವರಿಗೆ ಮಾತನಾಡಲು ಅವಕಾಶ ಕೊಡುವುದಿಲ್ಲ. ಈ ರಾಜ್ಯದಲ್ಲಿ ವಿರೋಧ ಪಕ್ಷದವರ ಜೊತೆ *NEP* ಬಗ್ಗೆ ಚರ್ಚೆ ಮಾಡುವುದಕ್ಕೆ ಹೋಗಲಿಲ್ಲ. ಅವರ ಅಭಿಪ್ರಾಯಗಳನ್ನು ತಿಳಿಸುವುದಕ್ಕೆ ಅವಕಾಶವನ್ನೇ ಕೊಡಲಿಲ್ಲ. ಆಡಳಿತ ಪಕ್ಷಕ್ಕೆ ಯಾವಾಗಲೂ ತಾಯಿ ಕರುಳಿರಬೇಕು. ಈ ಸರ್ಕಾರಕ್ಕೆ ತಾಯಿ ಕರುಳೇ ಇಲ್ಲ. ಎಲ್ಲಾ ಕತ್ತು ಕುಯ್ಯುವಂತಹ ಚಿಂತನೆಗಳೇ. ನಾವು ಹೀಗೆಯೇ ಮಾಡುವುದು ಎನ್ನುವ ಧೋರಣೆ. ದಯಮಾಡಿ ಆಳುವ ಪಕ್ಷದಲ್ಲಿ ಯುವಕರ ಆಶಾಕಿರಣ, ಯುವಕರ ಬದುಕನ್ನು ರೂಪಿಸುವಂತಹ ಶಿಕ್ಷಣದ ಬಗ್ಗೆ ಮಾನ್ಯ ಬಾಬಾಸಾಹೇಬ್ ಅಂಬೇಡ್ಕರ್ ಅವರು, ದೊಡ್ಡ ದೊಡ್ಡ ಸಾಹಿತಿಗಳು, ಚಿಂತಕರು ಏನು ಹೇಳಿದ್ದಾರೆಯೋ ಅದನ್ನು ಉನ್ನತೀಕರಿಸಿ ಇಂದಿನ ಕಾಲಕ್ಕನುಗುಣವಾಗಿ ತೆಗೆದುಕೊಂಡು ಬರುವಾಗ ಶಿಕ್ಷಣದ ಜೊತೆಗೆ ನೈತಿಕ ಶಿಕ್ಷಣ, ಎಲ್ಲಿಯೂ ನಿರುದ್ಯೋಗ ಸಮಸ್ಯೆಗೆ ಅವಕಾಶವಿಲ್ಲದ ರೀತಿ ಮತ್ತು ಖಾಸಗಿಯವರು ಉಸಿರಾಡಬಾರದಂತಹ ವ್ಯವಸ್ಥೆಯನ್ನು ರೂಢಿಸಿದ್ದಾಗ ಮಾತ್ರ ದೇಶ ಕಟ್ಟುವ ಕೆಲಸ ಭವಿಷ್ಯತ್ತಿನ ವಿದ್ಯಾರ್ಥಿಗಳಿಂದ ಆಗುತ್ತದೆ.

ಮಾನ್ಯ ಸಭಾಪತಿಯವರೇ, ಹರಕಲು ಮುರುಕಲು ವ್ಯವಸ್ಥೆ ತಮಗೆ ತಿಳಿದೇ ಇದೆ. ನಮ್ಮ ಸರ್ಕಾರಿ ಕಾಲೇಜುಗಳು ಯಾವ ಸ್ಥಿತಿಯಲ್ಲಿವೆ ಎಂದು ತಾವು 45 ವರ್ಷಗಳಿಂದ ನೋಡುತ್ತಿದ್ದೀರಿ. ಅದರಲ್ಲಿ ಈ ಶಿಕ್ಷಣ ನೀತಿಯನ್ನು ಪ್ರಾರಂಭ ಮಾಡುತ್ತೇವೆಂದು ಸರ್ಕಾರ ಹೇಳುತ್ತಿದೆ. ಇದು ಎಂತಹ ದುರದೃಷ್ಟಕರ? ದಯಮಾಡಿ ಸರ್ಕಾರ ಇದರ ಬಗ್ಗೆ ಮರುಚಿಂತನೆ ಮಾಡಬೇಕು. *Urgency* ಇಲ್ಲ. ಖಂಡಿತವಾಗಿ ಬದಲಾವಣೆಗೆ ನಮ್ಮ ವಿರೋಧವಿಲ್ಲ. ಇಲ್ಲಿ ಬಂದಿರತಕ್ಕಂತಹ ಅಭಿಪ್ರಾಯಗಳನ್ನು ಕ್ರೋಢೀಕರಿಸಿ ಕೆಲವು ಬದಲಾವಣೆಗಳನ್ನು ತೆಗೆದುಕೊಂಡು ಬರಬೇಕು. ಸಮಿತಿಯಲ್ಲಿ ಎಲ್ಲಾ ಸಂಘ ಸಂಸ್ಥೆಯವರು, ಅಲ್ಪಸಂಖ್ಯಾತರು, *linguistic minorities* ಎಲ್ಲರಿಗೂ ಪ್ರಾತಿನಿಧ್ಯ ಕೊಡಬೇಕು.

**(...ಮುಂದು)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(971) 23.09.2021 7.20. ಕೆಜಿ MD**

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಮರಿತಿಬ್ಬೇಗೌಡ (ಮುಂದು.,):-**

ದಯಮಾಡಿ, ಇದೆಲ್ಲವನ್ನು ಗಮನದಲ್ಲಿಟ್ಟುಕೊಂಡು ಈ ಎಲ್ಲಾ ಅಂಶಗಳನ್ನು ಕ್ರೋಢೀಕರಿಸಿ ಈ ಸಮಾಜದ ಒಳಿತಿಗಾಗಿ ಒಂದು ವರ್ಷ ತಡವಾಗಿಯಾದರೂ ಸರಿ ನಿಧಾನವಾಗಿ ಮಾಡಲಿ. ಕರ್ನಾಟಕದಲ್ಲಿ ಇದನ್ನು ಮೊದಲು ಜಾರಿಗೆ ತರುವಂತಹ ಕೀರ್ತಿ ಅವರೇ ತೆಗೆದುಕೊಳ್ಳಲಿ. ಈ ವರ್ಷ ಇದನ್ನು ಯಾವ ರಾಜ್ಯದವರು ಜಾರಿಗೆ ತರುತ್ತಿಲ್ಲ. ದಯಮಾಡಿ ಇದರ ಬಗ್ಗೆ ಒಂದು ದೊಡ್ಡ ಚಿಂತನೆಯಾಗಬೇಕೆಂದು ತಮ್ಮ ಮೂಲಕ ವಿನಂತಿ ಮಾಡಿಕೊಂಡು ನನಗೆ ಮಾತನಾಡಲು ಅವಕಾಶ ಕೊಟ್ಟಿದಕ್ಕಾಗಿ ತಮಗೆ ಧನ್ಯವಾದಗಳನ್ನು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ನಸೀರ್ ಅಹ್ಮದ್ (ವಿಧಾನಸಭೆಯಿಂದ ಆಯ್ಕೆಯಾದವರು):-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಕೊಟ್ಟಿದಕ್ಕಾಗಿ ಧನ್ಯವಾದಗಳನ್ನು ಸಲ್ಲಿಸುತ್ತೇನೆ. ಈಗಾಗಲೇ ಇದರ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ನಾನು ತಮ್ಮನ್ನು ಒಂದು ಪ್ರಶ್ನೆ ಕೇಳುವುದಕ್ಕೆ ಬಯಸುತ್ತಿದ್ದೇನೆ. ತಾವು ಸುಮಾರು 40 ವರ್ಷಗಳಿಂದ ಈ ಕ್ಷೇತ್ರದಲ್ಲಿ ಇದ್ದೀರಿ. ಈ ಪಾಲಿಸಿ ತಮಗೆ ಏನಾದರೂ ಸಮಾಧಾನ ತಂದಿದ್ದೆಯೇ? ತಾವು ದಯವಿಟ್ಟು ಹೇಳಿ? ಈ ಸದನದಲ್ಲಿ *Teachers' Constituency and Graduates' Constituency* ಯಿಂದ ಬಂದ ಸಾಕಷ್ಟು ಶಾಸಕರು ಇದ್ದಾರೆ. ಅದೇ ರೀತಿ ನಮ್ಮ ರಾಜ್ಯದಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಸಾಕಷ್ಟು ಜನ ತಜ್ಞರು ಇದ್ದಾರೆ. ಇದು ಯಾರ ಜೊತೆಗೆಯಾದರೂ ಚರ್ಚೆಯಾಗಿದೆಯೇ? ಈಗ ನಮ್ಮ ರಾಜ್ಯದಲ್ಲಿ ಸುಮಾರು ಒಂದು ಕೋಟಿ ನಾಲ್ಕು ಲಕ್ಷ ಜನ ಮಕ್ಕಳು ಎಲ್ಲಾ ವಿದ್ಯಾಸಂಸ್ಥೆಗಳಲ್ಲಿ ಕಲಿಯುತ್ತಿದ್ದಾರೆ, ಅವರಿಗೆ ಈ ಪಾಲಿಸಿಯಿಂದ ನೇರವಾಗಿ ಪ್ರಭಾವ ಬೀಳುತ್ತದೆ. ಇಂತಹ ಒಂದು ಸಂಖ್ಯೆಯಲ್ಲಿರುವಂತಹ *students* ಗಳ ಬಗ್ಗೆ ಚರ್ಚೆಯಾಗಬೇಕು. ಇದು ಹಲವಾರು ರೀತಿಯಲ್ಲಿ *discussion and debate* ಆಗಬೇಕು. *For example, minorities and linguistic minorities* ಗೆ ಸೇರಿದ 5 ಸಾವಿರ ಶಾಲೆಗಳಿವೆ. ಅದರಲ್ಲಿ ಉರ್ದು ಶಾಲೆಗಳು ಬರುವುದಿಲ್ಲ. ತೆಲಗು, ತಮಿಳು ಮತ್ತು ಮರಾಠಿ ಶಾಲೆಗಳು ಬರುತ್ತವೆ. ಈ ಶಾಲೆಗಳಲ್ಲಿ ಸುಮಾರು 6 ಲಕ್ಷ ಜನ ಮಕ್ಕಳಿದ್ದಾರೆ. ಅದರ ಬಗ್ಗೆ ಒಂದು ಶಬ್ದವನ್ನು ಈ ಪಾಲಿಸಿಯಲ್ಲಿ ನಮೂದು ಮಾಡಿಲ್ಲ. ಇದನ್ನು ನೋಡಿದಾಗ, ನಮಗೆ *what is going to happen in the future, what is that we are going to offer to the coming generation*

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎಂದು ಒಂದು ರೀತಿಯಲ್ಲಿ ಭಯವಾಗುತ್ತದೆ. ಮಾನ್ಯ ಸಚಿವರು ಈ ಪಾಲಿಸಿ 2020 ರಿಂದ 2030ರವರೆಗೆ ಮಾತ್ರ ಎಂದು ಮಾತನಾಡುತ್ತಿದ್ದಾರೆ. ಈ 10 ವರ್ಷಗಳಲ್ಲಿ ಎಷ್ಟು ಬದಲಾವಣೆಗಳು ಆಗಬಹುದು. ಮಾನ್ಯ ಸಚಿವರು ಇವತ್ತಿನ ದಿವಸ *'Digital India'* ಬಗ್ಗೆ ಮಾತನಾಡುತ್ತಿದ್ದರು. *'Digital India'* ದಲ್ಲಿ *according to your own unified district information,* ಅವರು ಕೊಟ್ಟಿರುವಂತಹ ವರದಿ ಪ್ರಕಾರ, ಕೇವಲ 9.8% *computers* ಮಾತ್ರ ನಮ್ಮ ಸರ್ಕಾರಿ ಶಾಲೆಗಳಲ್ಲಿವೆ. *Only 4.5% internet facilities are provided.* ಇನ್ನೊಂದು ಕಡೆ ನೋಡಿದಾಗ ಸುಮಾರು 45% *private school students* ಇದ್ದಾರೆ. *Almost about 45 lakh students are studying in private schools.* ಈಗ ಇನ್ನು ಈ ಗೊಂದಲ ಸರಿಯಾಗಿ ಬಗೆಹರಿದಿಲ್ಲ. *Online classes* ಅನ್ನು ಶಾಲೆಯವರು ಮಾಡಿದ್ದಾರೆ. ಶಾಲಾ ಶುಲ್ಕ ಕಡಿಮೆ ಮಾಡಿ ಎಂದರೆ, *examination* ಗೆ *promotion* ಕೊಡುವುದಿಲ್ಲ. *Promotion* ಬೇಕಾದರೆ, ಪೂರ್ತಿ ಶುಲ್ಕವನ್ನು ಕಟ್ಟಿ ಎಂದು *demand* ಮಾಡುತ್ತಾರೆ. ಈ ಬಗ್ಗೆ ಸಾಕಷ್ಟು ಬಾರಿ ಸರ್ಕಾರದ ಜೊತೆಗೆ ಚರ್ಚೆಯಾಗಿದೆ. *Private School Management* ನವರ ಜೊತೆಗೆ ಚರ್ಚೆಯಾಗಿದೆ. ಪೋಷಕರ ಜೊತೆಗೆ ಚರ್ಚೆ ಮಾಡಿದ್ದಾರೆ. ಆದರೆ, ಇದಕ್ಕೆ ಇನ್ನು ಯಾವುದೇ ಒಂದು *finality* ಬಂದಿಲ್ಲ. ಇವತ್ತಿನ ದಿವಸ ಆ ಖಾಸಗೀ ಶಾಲೆಗಳಲ್ಲಿ ಪಾಠ ಮಾಡುವಂತಹ ಶಿಕ್ಷಕರ ಗತಿ ಏನಾಗಿದೆ? ಅವರಿಗೆ ಏನಾದರೂ ವೇತನ ಕೊಡುತ್ತಿದ್ದಾರೆಯೇ? ಅವರಿಗೆ ಈ ಹಿಂದೆ 30 ರಿಂದ 40 ಸಾವಿರ ರೂಪಾಯಿಗಳ ವೇತನ ಕೊಡುತ್ತಿದ್ದರು. ಈಗ ಅವರಿಗೆ ತಿಂಗಳಿಗೆ 10 ಸಾವಿರ ರೂಪಾಯಿಗಳ ವೇತನವನ್ನು ಕೊಡುತ್ತಿಲ್ಲ. ಹಾಗಾಗಿ, ಇದರ ಬಗ್ಗೆ ಸರ್ಕಾರ ಚಿಂತನೆ ಮಾಡುವುದು ಬೇಡವೇ? ಮಾನ್ಯ ಮುಖ್ಯಮಂತ್ರಿಗಳಾಗಿದ್ದ ದಿವಂಗತ ಶ್ರೀ ಎಸ್.ಬಂಗಾರಪ್ಪನವರ ಕಾಲದಲ್ಲಿ ಮಕ್ಕಳು ಶಾಲೆಗೆ ಬಂದರೆ, ಒಂದು ದಿವಸಕ್ಕೆ ಒಂದು ರೂಪಾಯಿ ಕೊಡುತ್ತೇವೆ ಎಂಬ ಕಾರ್ಯಕ್ರಮವನ್ನು ರೂಪಿಸಿದ್ದರು. ಇದಕ್ಕೆ ಕಾರಣ ಏನೆಂದರೆ, ಮಕ್ಕಳಿಗೆ *attraction* ಕೊಡಬೇಕು ಮತ್ತು ಅವರು ಶಾಲೆಗೆ ಬರಬೇಕೆಂದು ಮಾಡಿದ್ದರು. ಆಗ ಸಾಕಷ್ಟು *enrolment* ಆ ಕಾಲದಲ್ಲಿ ಆಗಿತ್ತು. ಮತ್ತೆ ಮುಖ್ಯಮಂತ್ರಿಗಳಾಗಿದ್ದ ಶ್ರೀ ಎಸ್.ಎಂ.ಕೃಷ್ಣರವರ ಕಾಲದಲ್ಲಿ ಮಕ್ಕಳಿಗೆ ಮಧ್ಯಾಹ್ನದ ಬಿಸಿ ಊಟದ ಕಾರ್ಯಕ್ರಮವನ್ನು ಮಾಡಿದ್ದರು. *The reason behind it was to attract the students.* ಮಕ್ಕಳು ಶಾಲೆಗೆ ಬಂದರೆ, ಬಿಸಿ ಊಟ ಸಿಗುತ್ತದೆ ಎಂದು ಮಾಡಿದ್ದರು. ಮುಖ್ಯಮಂತ್ರಿಗಳಾಗಿದ್ದ ಶ್ರೀ ಬಿ.ಎಸ್.ಯಡಿಯೂರಪ್ಪನವರ ಕಾಲದಲ್ಲಿ ಶಾಲಾ ಮಕ್ಕಳಿಗೆ ಸೈಕಲ್ ಕೊಡುವಂತಹ ಕಾರ್ಯಕ್ರಮವನ್ನು ಮಾಡಿದ್ದರು. ಈ ಕಾರ್ಯಕ್ರಮಗಳನ್ನು ಏತಕ್ಕೆ ಮಾಡಿದ್ದರು?

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಮುಖ್ಯ ಮಂತ್ರಿಗಳಾಗಿದ್ದ ಶ್ರೀ ಹೆಚ್.ಡಿ.ಕುಮಾರಸ್ವಾಮಿರವರ ಆಡಳಿತದ ಕಾಲದಲ್ಲಿ ಸೈಕಲ್ ವಿತರಣಾ ಕಾರ್ಯಕ್ರಮವನ್ನು ಮಾಡಿದ್ದರು. ಮಾನ್ಯ ಸಭಾಪತಿಯವರು ಆಗ ಶಿಕ್ಷಣ ಸಚಿವರಾಗಿದ್ದರು.

**ಶ್ರೀ ನಸೀರ್ ಅಹ್ಮದ್:-** ಮಾನ್ಯ ಸಭಾಪತಿಯವರೇ, *Sorry,* ಅದನ್ನು ಮಾನ್ಯ ಬಿ.ಎಸ್.ಯಡಿಯೂರಪ್ಪನವರು ಮುಂದುವರಿಸಿದರು. ಅದನ್ನೇಲ್ಲಾ ಏತಕ್ಕೆ ಮಾಡಿದ್ದರು? *enrolment* ಆಗಲಿ ಎಂದು ಮಾಡಿದ್ದರು. *United States of America, European Countries* ಗಳ ಮಟ್ಟಕ್ಕೆ ನಾವು ಇನ್ನೂ ಬೆಳೆದಿಲ್ಲ. ಅಲ್ಲಿ *Neighbourhood Schools* ಗಳಿವೆ. ಅಲ್ಲಿರುವಂತಹ ವಾತಾವರಣ ಬೇರೆ. ನಮ್ಮಲಿರುವಂತಹ ವತಾವರಣವೇ ಬೇರೆ. ಅದನ್ನು ತೆಗೆದುಕೊಂಡು ಬಂದು ಇಲ್ಲಿ 5 + 3 + 3 + 4 ಮಾಡುತ್ತೇವೆಂದರೆ ಆಗುವುದಿಲ್ಲ. ಇಲ್ಲಿ 7ನೇ ತರಗತಿ ವ್ಯಾಸಂಗ ಮಾಡಿದರೆ, ನಮ್ಮ ಸಮಾಜದಲ್ಲಿ ನಾವು ಅವರಿಗೆ ಒಂದು ಗೌರವವನ್ನು ಕೊಡುತ್ತೇವೆ. ನಮ್ಮ ಮಗ 10ನೇ ತರಗತಿ ಪಾಸ್ ಮಾಡಿದರೆ, ನಮ್ಮ ಮಗ 10ನೇ ತರಗತಿ ಪಾಸ್ ಮಾಡಿದ್ದಾನೆಂದು ಹೇಳಿಕೊಳ್ಳುತ್ತೇವೆ. ಇನ್ನು 12ನೇ ತರಗತಿ ಏನಾದರೂ ಪಾಸ್ ಮಾಡಿದರೆ, ಅವನಿಗೆ ಎಲ್ಲಾದರೂ ಒಂದು ಕೆಲಸ ಸಿಗುತ್ತದೆಯೇ ಎಂದು ನೋಡುತ್ತೇವೆ. ಹಾಗಾಗಿ, ಇಲ್ಲಿರುವಂತಹ *culture* ಬೇರೆ. ಮಾನ್ಯ ಸಚಿವರಿಗೆ ಇದನ್ನು ಯಾರು *advice* ಮಾಡುತ್ತಿದ್ದಾರೋ ಹಾಗೂ ಇದನ್ನು ಯಾರ *influence* ನಲ್ಲಿ ತಂದಿದ್ದಾರೆಂದು ಗೊತ್ತಿಲ್ಲ. ಈಗ ಎಲ್ಲಾ ಶಾಲೆ/ಕಾಲೇಜುಗಳು ಬಂದ್ ಆಗಿವೆ. ವಿದ್ಯಾರ್ಥಿಗಳು ಶಾಲೆಗಳಿಗೆ ಹೋಗುತ್ತಿಲ್ಲ. ಶಿಕ್ಷಕರು ಪಾಠ ಹೇಳಿಕೊಡುತ್ತಿಲ್ಲ. ಇಂತಹ ಒಂದು *pandemic situation* ನಲ್ಲಿ ಈ *policy* ಯನ್ನು ಏಕೆ ತರಾತುರಿಯಲ್ಲಿ ತರುತ್ತಿದ್ದಾರೆ? *Most of the Universities, Education Institutions and student representatives are stakeholders.* ಇದರ ಬಗ್ಗೆ ಅವರ ಜೊತೆಗೆ ಚರ್ಚೆಮಾಡಬೇಕಾಗಿತ್ತು. ಇವತ್ತಿನ ದಿವಸ ಇದನ್ನು ತರಾತುರಿಯಲ್ಲಿ ತಂದು, *as a Higher Education Minister Dr.Ashwathnarayan* ಅವರ *enthusiasm* ಅನ್ನು *definitely appreciate* ಮಾಡುತ್ತೇವೆ. ಮಾನ್ಯ ಸಚಿವರಿಗೆ ನಮ್ಮ ರಾಜ್ಯ ಇಡೀ ನಮ್ಮ ದೇಶದಲ್ಲಿಯೇ ಮುಂದಿರಬೇಕೆಂಬ ಆಸೆ ಇರಬಹುದು. *Yes, we really appreciate it. But please you have a consultation, a dialogue or debate. You take everybody into confidence. In this Upper House, you have the representatives particularly from the Graduates' Constituency and Teachers' Constituency.* ಮಾನ್ಯ ಸದಸ್ಯರಾದ ಶ್ರೀ ಕೆ.ಟಿ.ಶ್ರೀಕಂಠೇಗೌಡರವರು ಶಿಕ್ಷಕರಾಗಿ ಕೆಲಸ ಮಾಡಿದ್ದಾರೆ, *Principal* ಆಗಿ ಕೆಲಸ ಮಾಡಿದ್ದಾರೆ. ಅವರಿಗೆ ಇದರ ಬಗ್ಗೆ ಸಾಕಷ್ಟು ಅನುಭವ ಇದೆ. ಮಾನ್ಯ ಸದಸ್ಯರಾದ ಅರುಣ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶಹಾಪುರರವರಿಗೂ ಸಾಕಷ್ಟು ಅನುಭವ ಇದೆ. ಅದೇ ರೀತಿ ಶ್ರೀ ಅ.ದೇವೇಗೌಡರವರು ಇದ್ದಾರೆ. ಮಾನ್ಯ ಸದಸ್ಯರಾದ ಎಸ್.ವ್ಹಿ.ಸಂಕನೂರರವರು ಇದ್ದಾರೆ. ಸಾಕಷ್ಟು ಜನ ಸದಸ್ಯರಿದ್ದಾರೆ. ಇದರ ಬಗ್ಗೆ ಒಂದು ಸಮಿತಿ ಮಾಡಿ. ಇಲ್ಲವೆಂದರೆ, ಇದರ ಬಗ್ಗೆ ಒಂದು ದಿವಸ *special session* ಕರೆದು ಚರ್ಚೆ ಮಾಡಿ. *We are ready to have a debate on this* ಎಂದು ನಮ್ಮ ಗೆಳೆಯರಾದ ಶ್ರೀ ಎನ್.ರವಿಕುಮಾರ್‌ರವರು ಹೇಳಿದರು. *I really appreciate it. Let us have a debate on this and we will appeal to the Chairman. Let us have a special session on this matter. This is going to influence nearly about one crore ten lakh students of the state. There is a very big stakeholder.* ವಿದ್ಯಾರ್ಥಿಗಳ ಭವಿಷ್ಯ ಇದೆ. ಅವರ *future* ಇದೆ. *So, let us not take a decision in a hurry.* ಅದಕ್ಕೆ ತರಾತುರಿಯಲ್ಲಿ *decision* ತೆಗೆದುಕೊಳ್ಳುವುದು ಬೇಡ. ಅದಕ್ಕೆ ದಯವಿಟು ಕೈಮುಗಿದು ಕೇಳಿಕೊಳ್ಳುತ್ತೇನೆ. *There are different cultures.* ನಿನ್ನೆ ದಿವಸ ನಿಯಮ 330 ರಡಿಯಲ್ಲಿ *Director of Minorities* ಬಗ್ಗೆ ಒಂದು ಪ್ರಶ್ನೆಯನ್ನು ಸಹ ಕೇಳಿದ್ದೇನೆ. ಅದಕ್ಕೆ ಮಾನ್ಯ ಶಿಕ್ಷಣ ಸಚಿವರಾದ ಶ್ರೀ ಬಿ.ಸಿ.ನಾಗೇಶ್‌ರವರು ಉತ್ತರವನ್ನು ಕೊಟ್ಟಿದ್ದಾರೆ. *Different issues are there.* ಕೇವಲ 10-15 ಜನರಿಂದ ಒಂದು ವರದಿಯನ್ನು ತೆಗೆದುಕೊಂಡು ಇದನ್ನು ಈ ವರ್ಷದಿಂದ *implement* ಮಾಡುತ್ತೇವೆಂದು ಹೇಳಿ ವರದಿಯನ್ನು ಕೊಟ್ಟರೆ, ಅದು ಆದಷ್ಟು ಎಲ್ಲರಿಗೂ ಸಮಾಧಾನವಾಗಬೇಕಲ್ಲವೇ? *Everybody should feel, yes, what is being done is in the interest of the state, in the interest of the students' community and in the interest of the parents* ಎಂದು ಆ *feeling* ಬರಬೇಕಲ್ಲವೇ? ನಾನು ಹೆಚ್ಚಾಗಿ ಮಾತನಾಡುವುದಿಲ್ಲ. *My only appeal to you is, please let us defer this now and have a discussion. We will request to the Government,* ಮಾನ್ಯ ಜೆ.ಸಿ.ಮಾಧುಸ್ವಾಮಿಯವರೇ, ಇದರ ಬಗ್ಗೆ ಒಂದು *special session* ಕರೆಯಿರಿ. *Let everybody discuss on this matter, as there is a major impact on this. It is a question pertaining to the future of the students of this State and India.* ನಾವೇ, *yes, let us be in forefront, but we will take everybody into confidence.* ಇವತ್ತಿನ ದಿವಸ ಇರುವಂತಹ ಅನುಮಾನವನ್ನು ಮಾನ್ಯ ಸದಸ್ಯರಾದ ಮರಿತಿಬ್ಬೇಗೌಡರವರು ಹೇಳಿದರು. *What about the SC-ST and Backward Class students?* ಇದರ ಬಗ್ಗೆ *address* ಮಾಡಬೇಕಾಗುತ್ತದೆ.

**(ಮುಂದು.,) .**

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(972) 23-09-2021 (7.30) ಎಂವಿ-ಎಕೆ**

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ನಸೀರ್ ಅಹ್ಮದ್ (ಮುಂದು..):-**

ದಯವಿಟ್ಟು ಇದರ ಬಗ್ಗೆ ವಿಶೇಷ ಅಧಿವೇಶನ ಕರೆಯುವುದಾಗಲಿ, ಒಂದು ದಿವಸ ಚರ್ಚೆ ಮಾಡುವುದಾಗಲಿ ಆ ರೀತಿ ಏನಾದರೂ ಮಾಡಿ. ಕೊನೆಗೆ yes, it is your right. You are in the government. You can do it. You can bring it. But let us consult with all the stakeholders. ತಮ್ಮ ಮುಖಾಂತರ ಮಾನ್ಯ ಸಚಿವರಿಗೆ ಮನವಿ ಮಾಡಿಕೊಳ್ಳುತ್ತೇನೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಒಂದೇ ಒಂದು ನಿಮಿಷ ಮಾತನಾಡುತ್ತೇನೆ.

**ಸಭಾಪತಿಯವರು:-** ನಾನು ಈಗ ಯಾರಿಗೂ ಅವಕಾಶ ನೀಡುವುದಿಲ್ಲ. ಮಾನ್ಯ ಉನ್ನತ ಶಿಕ್ಷಣ ಸಚಿವರು ತಾವು ಉತ್ತರ ನೀಡಿ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೆ, ಈಗ ಬದಲಾವಣೆ ಎಂದರೆ, ಪ್ರೈಮರಿಯಿಂದ ಡಿಗ್ರಿಯವರೆಗೆ ಇದೆ. ಅದು ಕೇವಲ ಡಿಗ್ರಿಗೆ ಸಂಬಂಧಪಟ್ಟಂತೆ ಇದೆ. ಈಗ ನಾನು ಪ್ರೈಮರಿ ಮತ್ತು ಸೆಕೆಂಡರಿಗೆ ಸಂಬಂಧಪಟ್ಟಂತೆ ಮಾತನಾಡಬೇಕು.

**ಸಭಾಪತಿಯವರು:-** ಮಾನ್ಯ ಶ್ರೀ ಕೆ.ಟಿ.ಕಂಠೇಗೌಡರೆ, ನನ್ನ ಬಳಿ ಯಾರ್‍ಯಾರ ಹೆಸರು ಇದೆ. ಅವರುಗಳ ಹೆಸರನ್ನು ಮಾತ್ರ ಕರೆದಿದ್ದೇನೆ. ನೀವು ಆಮೇಲೆ ಸ್ಪಷ್ಟೀಕರಣ ಕೇಳಿ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೆ, ಒಬ್ಬ ವಿದ್ಯಾರ್ಥಿ ತನ್ನ ಜೀವಿತಾವಧಿಯಲ್ಲಿ ಇಪ್ಪತ್ತರಿಂದ ಇಪ್ಪತ್ತೈದು ವರ್ಷ ಓದುತ್ತಾನೆ. ಅದು ಅವನ ಜೀವನದ ಮಹತ್ವದ ಘಟ್ಟ. ತಾವು ನನಗೆ ಐದು ನಿಮಿಷ ಸಮಯಾವಕಾಶವನ್ನು ನೀಡಿ.

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಈ ವಿಷಯಕ್ಕೆ ಸಂಬಂಧಪಟ್ಟಂತೆ ನಾನು ಸ್ವಲ್ಪ ಮಾತನಾಡುತ್ತೇನೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೆ, ನಾನು ಶಿಕ್ಷಕರ ಕ್ಷೇತ್ರದವನು ನನಗೆ ಐದು ನಿಮಿಷ ಮಾತನಾಡಲು ಅವಕಾಶ ಮಾಡಿಕೊಡಿ. ತಾವು ದಯಮಾಡಿ ನನಗೆ justice ಕೊಡಿ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ಮಾನ್ಯ ಉನ್ನತ ಶಿಕ್ಷಣ ಸಚಿವರು ತಾವು ಉತ್ತರ ನೀಡಿ. ಮಾನ್ಯ ಕೆ.ಟಿ.ಶ್ರೀಕಂಠೇಗೌಡರೆ, ತಾವು ಆಮೇಲೆ ಮಾತನಾಡಿ. ಖಂಡಿತವಾಗಿ ನಾನು ನಿಮಗೆ ಅವಕಾಶ ನೀಡುತ್ತೇನೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೆ, ನನಗೆ ಅವಕಾಶ ನೀಡಲಿಲ್ಲವೆಂದರೆ ಲೋಪವಾಗುತ್ತದೆ. ನಾನು ಖಂಡಿತವಾಗಿ ರಾಜಕಾರಣ ಮಾತನಾಡಿ ಸಮಯವನ್ನು ವ್ಯರ್ಥ ಮಾಡುವುದಿಲ್ಲ.

**ಡಾ|| ಅಶ್ವಥ್ ನಾರಾಯಣ ಸಿ.ಎನ್ (ಉನ್ನತ ಶಿಕ್ಷಣ, ಐಟಿ & ಬಿಟಿ, ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು):-** ಮಾನ್ಯ ಸಭಾಪತಿಯವರೆ,...

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೆ, ಇದು ನನಗೆ ಅರ್ಥವಾಗುತ್ತಿಲ್ಲ. ನಾನು ಶಿಕ್ಷಕನಾಗಿ ಸುಮಾರು 36 ವರ್ಷ ಕರ್ತವ್ಯ ನಿರ್ವಹಿಸಿದ್ದೇನೆ. ನನಗೆ ಎಲ್ಲಾ ಹಂತಗಳು ಗೊತ್ತಿರುತ್ತದೆ. ಹೀಗಾದರೆ ಹೇಗೆ?

**ಸಭಾಪತಿಯವರು:-** ಮಾನ್ಯ ಕೆ.ಟಿ.ಶ್ರೀಕಂಠೇಗೌಡರೆ, ಸ್ವಲ್ಪ ಅರ್ಥ ಮಾಡಿಕೊಳ್ಳಿ, ನಾನು ಹೇಳುವುದನ್ನು ತಾವು ಕೇಳಿ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೆ, ರಾಜ್ಯದ ಶಿಕ್ಷಣ ವ್ಯವಸ್ಥೆಯಲ್ಲಿ ಬಹು ದೊಡ್ಡ ಬದಲಾವಣೆ ಆಗುತ್ತಿದೆ. ಇಲ್ಲಿ ಒಬ್ಬ ಮನುಷ್ಯ ಓದಿನಲ್ಲಿ ತನ್ನ ಇಪ್ಪತ್ತು ವರ್ಷಗಳನ್ನು ಕಳೆಯುತ್ತಾನೆ. ಅದಕ್ಕೆ ಸಂಬಂಧಪಟ್ಟಂತೆ ಹತ್ತು ನಿಮಿಷ ಮಾತನಾಡುತ್ತೇನೆಂದರೆ ತಾವು ನನಗೆ ಅವಕಾಶ ನೀಡುವುದಿಲ್ಲವೆಂದರೆ ಹೇಗೆ? ನಾನು ತಮಗೆ ಎರಡು ಬಾರಿ ಪತ್ರ ಬರೆದು ಮನವಿ ಮಾಡಿಕೊಂಡಿದ್ದೇನೆ. ನಾನು ಸದನದಲ್ಲಿ ಕೈ ಎತ್ತಿದ್ದೇನೆ. ದಯವಿಟ್ಟು ನಾನು ಪರಿಪರಿಯಾಗಿ ಕೈಮುಗಿದು ಕೇಳಿಕೊಳ್ಳುತ್ತೇನೆ. ನಾನು ಮಾತನಾಡುವುದಕ್ಕೆ ಐದು ನಿಮಿಷ ಅವಕಾಶ ಮಾಡಿಕೊಡಿ. ಐದು ನಿಮಿಷದ ಮೇಲೆ ಒಂದು ನಿಮಿಷ ಬೇಡ. Please, Please, Please.

**ಸಭಾಪತಿಯವರು:-** ಮಾನ್ಯ ಸಚಿವರೆ, ತಾವು ಕುಳಿತುಕೊಳ್ಳಿ. ಮಾನ್ಯ ಕೆ.ಟಿ.ಶ್ರೀಕಂಠೇಗೌಡರು ಮಾತನಾಡಲಿ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೆ, ಮಾತನಾಡಲು ಅವಕಾಶ ನೀಡಿದ್ದಕ್ಕೆ ತಮಗೆ ನಮಸ್ಕಾರ ಹೇಳಿ, ನನ್ನ ಕೃತಜ್ಞತೆ ತಿಳಿಸುತ್ತೇನೆ. ಶಿಕ್ಷಣ ನಿಂತ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನೀರಾಗಬಾರದು. ಅದು ಸದಾ ಹರಿಯುವ ನೀರಾಗಬೇಕು. ಶಿಕ್ಷಣ ಆಕರ್ಷಣಿಯವಾಗಿರಬೇಕು ಮತ್ತು ವಿದ್ಯಾರ್ಥಿಗಳಲ್ಲಿ ಆಸಕ್ತಿಯನ್ನು ಹುಟ್ಟಿಸಬೇಕು. ನಾವು ಅದಕ್ಕಾಗಿ ಬದಲಾವಣೆಗಳನ್ನು ಬಯಸುತ್ತೇವೆ. 1986ನೇ ಇಸವಿಯಲ್ಲಿ ಶಿಕ್ಷಣದ ಬದಲಾವಣೆಯಾಯಿತು, 1992ನೇ ಇಸವಿಯಲ್ಲಿ ಕೇವಲ ಆರು ವರ್ಷಗಳಲ್ಲಿ ಅದರ ಪರಿಷ್ಕರಣೆಯಾಯಿತು. ನಾವು ಈಗ 35 ವರ್ಷಗಳ ನಂತರ ಬದಲಾವಣೆಯ ಕಾಲಘಟ್ಟದಲ್ಲಿದ್ದೇವೆ. ನಾನು ಈಗಾಗಲೇ ಹೇಳಿದ ಹಾಗೆ, ಪ್ರತಿಯೊಬ್ಬ ವಿದ್ಯಾರ್ಥಿ ತನ್ನ ಆರಂಭದ ಬದುಕಿನ ಇಪ್ಪತ್ತು-ಇಪ್ಪತ್ತೈದು ವರ್ಷಗಳನ್ನು ಶಿಕ್ಷಣ ವ್ಯವಸ್ಥೆಯಲ್ಲಿ ಕಳೆಯುತ್ತಾನೆ. ಅಂತಹ ಆ ಇಪ್ಪತ್ತು-ಇಪ್ಪತ್ತೈದು ವರ್ಷಗಳ ಕಾಲ, ಅವನಿಗೆ ಕೊಡುವ ಶಿಕ್ಷಣದ ವ್ಯವಸ್ಥೆ ಹೇಗೆ ಇರಬೇಕು ಎನ್ನುವುದರ ಬಗ್ಗೆ ನಾವೆಲ್ಲಾ ಗಂಭೀರವಾದ ಚಿಂತನೆಯನ್ನು ಮಾಡಬೇಕಾಗಿದೆ. ಇವತ್ತು ಏನಾಗಿದೆ ಎಂದರೆ, ಈಗ ಮಾತನಾಡಿದ ಮೂರು ಜನ ಸದಸ್ಯರು ಉನ್ನತ ಶಿಕ್ಷಣವನ್ನು ಮಾತ್ರ ಕೇಂದ್ರಿಕರಿಸಿ ಮಾತನಾಡಿದ್ದಾರೆ. ಇಲ್ಲಿಯವರೆಗೆ ಸ್ವಾತಂತ್ರ್ಯ ನಂತರ ಮತ್ತು ಸ್ವಾತಂತ್ರ್ಯ ಪೂರ್ವದಲ್ಲಿ ಒಬ್ಬ ವಿದ್ಯಾರ್ಥಿಗೆ ಆರು ವರ್ಷದ ಮೇಲೆ ಎಂದು ಯೋಚನೆ ಮಾಡಿದ್ದರು. ಆದರೆ, ಈ ಹೊಸ ಶಿಕ್ಷಣ ನೀತಿಯಲ್ಲಿ ಅದನ್ನು ಮೂರು ವರ್ಷಕ್ಕೆ ಎಂದು ಯೋಚನೆ ಮಾಡಿದ್ದಾರೆ. ಅವನು ಮೂರು ವರ್ಷಕ್ಕೆ ಬರಬೇಕೆಂದು ಹೇಳುತ್ತಾರೆ. ಈಗ ಒಂದನೇ ತರಗತಿಗಿಂತ ಮುಂಚೆ ಪೂರ್ವ ಪ್ರಾಥಮಿಕ ಮೂರು ವರ್ಷದ ಶಿಕ್ಷಣ ಇರಬೇಕೆಂದು ಹೇಳುತ್ತಾರೆ. ಅವನು ಮೂರರಿಂದ ನಾಲ್ಕು, ನಾಲ್ಕರಿಂದ ಐದು ಮತ್ತು ಐದರಿಂದ ಆರಕ್ಕೆ ಬರುತ್ತಿದ್ದ. ಕಡ್ಡಾಯ ಸಾರ್ವತ್ರಿಕ ಶಿಕ್ಷಣವನ್ನು 16 ವರ್ಷಕ್ಕೆ ಸೀಮಿತ ಮಾಡಿದ್ದರು. ಆದರೆ, ಈಗ ಅದನ್ನು 18 ವರ್ಷಕ್ಕೆ ಹೆಚ್ಚಿಸಿದ್ದಾರೆ. ಈಗಿರುವ ವ್ಯವಸ್ಥೆಯಲ್ಲಿ ಒಂದರಿಂದ ಐದು, ಆರು, ಏಳು ಮತ್ತು ಎಂಟು ಎಂದು ಇತ್ತು. ಮತ್ತೆ ಹತ್ತರವರೆಗೆ ಇತ್ತು. ಎರಡು ಬೇರೆ ವ್ಯವಸ್ಥೆ ಇತ್ತು. ಪದವಿ ಮೂರು ವರ್ಷವಿತ್ತು. ಆದರೆ, ಈಗ ಅವರು ಆಮೂಲಾಗ್ರವಾದ ಬದಲಾವಣೆಗೆ ಹೊರಟಿದ್ದಾರೆ. ಪೂರ್ವ ಪ್ರಾಥಮಿಕ ಶಿಕ್ಷಣ ಮೂರು ವರ್ಷ, ಒಂದರಿಂದ ಐದು ವರ್ಷದವರೆಗೆ ಪ್ರಾಥಮಿಕ ಶಿಕ್ಷಣ. ಇದಕ್ಕೆ ನಾನು ಪ್ರಶ್ನೆ ಮಾಡುತ್ತೇನೆ. ಈ ವರ್ಷ ಇವರು ಅದನ್ನು ಜಾರಿಗೆ ತಂದಿದ್ದಾರೆ. ಈಗ ಮೂರು ವರ್ಷದ ಮಗುವನ್ನು ದಾಖಲು ಮಾಡಿಕೊಳ್ಳುವುದಕ್ಕೆ ಎಲ್ಲಿ ಅವಕಾಶ ಮಾಡಿಕೊಟ್ಟಿದ್ದಾರೆ. ಒಂದು ಕಡೆ ಅಂಗನವಾಡಿ ಎಂದು ಹೇಳುತ್ತಾರೆ. ಹಾಗಾದರೆ, ಅಂಗನವಾಡಿಗಳನ್ನು ಶಿಕ್ಷಣ ಇಲಾಖೆಗೆ ತೆಗೆದುಕೊಳ್ಳುತ್ತಾರೆಯೇ? ನರ್ಸರಿ-1 ಮತ್ತು ನರ್ಸರಿ-2, LKG and UKG ಎಂದು ಹೇಳುತ್ತಾರೆ. ನನ್ನ ಕಡೆ ಅದರ ಹೊತ್ತಿಗೆ ಇದೆ. ಅವರು LKG and UKG ಗೆ ಅವಕಾಶ ಮಾಡಿದ್ದಾರೆ. ಈಗ ನೂತನ ಶಿಕ್ಷಣ ನೀತಿಯನ್ನು ಜಾರಿಗೆ ತಂದಿದ್ದಾರೆ, ಈಗ ಅದನ್ನು ಎಲ್ಲಿ ಮಾಡುವುದು.

ಇಲ್ಲಿಯವರೆಗೆ ಒಂದರಿಂದ ನಾಲ್ಕರವರೆಗೆ ಇದೆ. ಈಗ ಒಂದರಿಂದ ಐದಕ್ಕೆ ಕೊಠಡಿಗಳು ಎಲ್ಲಿವೆ? ಮತ್ತು ನರ್ಸರಿ-1 ಮತ್ತು ನರ್ಸರಿ-2, LKG and UKG ಗೆ ಪಾಠ ಮಾಡುವುದಕ್ಕೆ ಶಿಕ್ಷಕರು ಎಲ್ಲಿದ್ದಾರೆ? I am speaking practically. ಈಗ ಅವರು ನೂತನ ಶಿಕ್ಷಣ ನೀತಿಯನ್ನು ಜಾರಿ ಮಾಡಿದ್ದಾರೆ. ಈಗ ಇಡೀ ರಾಜ್ಯದಲ್ಲಿ LKG and UKG ಯನ್ನು ಪ್ರಾರಂಭ ಮಾಡಬೇಕು. ಹಾಗಾದರೆ, ಶಿಕ್ಷಕರು ಎಲ್ಲಿದ್ದಾರೆ? ದಾಖಲಾತಿಯನ್ನು ಹೇಗೆ ಮಾಡಿಕೊಳ್ಳುತ್ತಾರೆ. ಈಗ ಮೂರು, ನಾಲ್ಕು ಮತ್ತು ಐದು ಒಂದು ಹಂತವೆಂದು ಹೇಳುತ್ತಾರೆ. ಆರು, ಏಳು ಮತ್ತು ಎಂಟು ಎಂದು ಹೇಳುತ್ತಾರೆ. ಒಂಬತ್ತು, ಹತ್ತು, ಹನ್ನೊಂದು ಮತ್ತು ಹನ್ನೆರಡು ಎಂದು ಹೇಳುತ್ತಾರೆ. ಈಗ ಒಂದೊಂದು ವರ್ಷವನ್ನು ಹೆಚ್ಚು ಮಾಡಿದ ಮೇಲೆ ಅವುಗಳಿಗೆ ಕಟ್ಟಡಗಳನ್ನು ಎಲ್ಲಿಂದ ತರುತ್ತಾರೆ. ಹಾಗಾದರೆ, ಆ ಮಕ್ಕಳಿಗೆ ಪಾಠ ಮಾಡುವವರು ಯಾರು? ಅದಕ್ಕೆ accommodation ಹೇಗೆ ಮಾಡುತ್ತಾರೆ? ಅದಕ್ಕೆ ಏನು ಸವಲತ್ತು ಕೊಡುತ್ತಾರೆ? ಈಗ ಉಚಿತ ಶಿಕ್ಷಣವನ್ನು 16 ರಿಂದ 18ರವರೆಗೆ ಕೊಡಬೇಕು. ಈಗ ಅವರಿಗೆ ಬಿಸಿಯೂಟ ಕೊಡಬೇಕು, ಅದಕ್ಕೆ ಏನು ಮಾಡುತ್ತಾರೆ? ಅವರಿಗೆ ಪುಸ್ತಕ ಕೊಡಬೇಕು, ಫೀ ಕೊಡಬೇಕು, ಅವರಿಗೆ ಯೂನಿಫಾರ್ಮ್ ಕೊಡಬೇಕು. ಅವುಗಳಿಗೆಲ್ಲಾ ಏನು ತಯಾರಿ ಮಾಡಿಕೊಂಡಿದ್ದಾರೆ ಮತ್ತು ಅದಕ್ಕೆ ಏನು ಘೋಷಣೆ ಮಾಡಿದ್ದಾರೆ? ಇದು ಹುಡುಗಾಟಿಕೆಯ ವಿಚಾರವಲ್ಲ. ಮಾನ್ಯ ಉನ್ನತ ಶಿಕ್ಷಣ ಸಚಿವರೆ, ಇದು ತುಂಬಾ ಗಂಭೀರವಾದಂತಹ ವಿಚಾರ. ಮಾನ್ಯ ಕಾನೂನು ಸಚಿವರೆ, ನಾನು ಡಿಗ್ರಿ ಮತ್ತು ಪಿ.ಯು. ಕಾಲೇಜ್ ಲೆಕ್ಚರರ್ ಮತ್ತು ಪ್ರಾಂಶುಪಾಲನಾಗಿದ್ದೇನೆ. ನಾನು ಎಂಟರಿಂದ ಹನ್ನೆರಡರವರೆಗೆ ಪ್ರಾಂಶುಪಾಲರ ಕೆಲಸವನ್ನು ಮಾಡಿದ್ದೇನೆ. ದಯಮಾಡಿ ನಾನು ಹೇಳುವುದನ್ನು ಕೇಳಿಸಿಕೊಳ್ಳಿ. ಇವತ್ತು ನಾಲ್ಕು ವರ್ಷದ ಡಿಗ್ರಿ ಎಂದು ಹೇಳಿದ್ದಾರೆ. ಈಗ ಆ ನಾಲ್ಕು ವರ್ಷದ curriculum ಎಲ್ಲಿದೆ? ಒಬ್ಬ ವಿದ್ಯಾರ್ಥಿ ಡಿಗ್ರಿ ಓದಬೇಕಾದರೆ, ಅವನಿಗೆ ಇದು ಏನು curriculum ಎಂದು ನಾಲ್ಕು ವರ್ಷದ ಮುಂಚೆ ತಯಾರು ಮಾಡಬೇಕು. ಏನು curriculum ಎಂದು ಎಲ್ಲಿ ಕೊಟ್ಟಿದ್ದಾರೆ. ಅವನು ಅದನ್ನು ಹೇಗೆ ಆಯ್ಕೆ ಮಾಡಿಕೊಳ್ಳುವುದು. ಈಗ PG curriculum ಎಲ್ಲಿದೆ? Research curriculum ಎಲ್ಲಿದೆ? ನಾನು ಬದಲಾವಣೆ ಬೇಡವೆಂದು ಹೇಳುವುದಿಲ್ಲ. ಆದರೆ, ಇದಕ್ಕೆ ಬಹಳ ತಯಾರಿ ಬೇಕು. ನಾನು ಹೇಳಿದಂತೆ ಇದು ನಿಂತ ನೀರಾಗಬಾರದು, ಹರಿಯುವ ನೀರಾಗಬೇಕು. ಅದಕ್ಕೆ ಆಕರ್ಷಣೆ ಬೇಕು ಅವರಿಗೆ ಆಸಕ್ತಿ ಹುಟ್ಟಿಸಬೇಕು. ಇದಕ್ಕೆ ಏನು ಸಿದ್ಧತೆ ಇದೆ? ಅವರು ಏನು ಮಾಡಿದ್ದಾರೆ? ನಾನು ಎಲ್ಲವನ್ನು ಸಹ ಮಾತನಾಡುತ್ತೇನೆ. ಈಗ ನಾನು ಬಹಳ ಆಳವಾಗಿದ್ದೇನೆ. ಈಗ ಬಹುಪಾಲು ಡಿಗ್ರಿ ಕಾಲೇಜುಗಳಲ್ಲಿ ಕೇವಲ ಆರ್ಟ್ಸ್ ಇದೆ. ಕೆಲವರು ಕಾಲೇಜುಗಳಲ್ಲಿ ಆರ್ಟ್ಸ್ ಮತ್ತು ಕಾಮರ್ಸ್ ಅನ್ನು ಪ್ರಾರಂಭ ಮಾಡಿದ್ದಾರೆ. ಕೇವಲ ಎರಡು

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಾಂಬಿನೇಷನ್‌ಗಳಿವೆ. ಎಲ್ಲೋ ಬೆರಳೆಣಿಕೆಯಷ್ಟು ಕಾಲೇಜುಗಳಲ್ಲಿ ಆರ್ಟ್ಸ್, ಸೈನ್ಸ್ ಮತ್ತು ಕಾಮರ್ಸ್ ವಿಷಯಗಳಿವೆ. ಆದರೆ, ಅವರು ಆರ್ಟ್ಸ್, ಸೈನ್ಸ್ ಮತ್ತು ಕಾಮರ್ಸ್ ಯಾವುದಾದರನ್ನು ತೆಗೆದುಕೊಳ್ಳಲಿ ಎಂದು ಹೇಳುತ್ತಾರೆ. ಈಗ ಬಹುಪಾಲು ಕಾಲೇಜುಗಳಲ್ಲಿ ಕೇವಲ ಆರ್ಟ್ಸ್ ಮಾತ್ರ ಇದೆ. ಅವರು ಕಾಮರ್ಸ್ ಅನ್ನು ಹೇಗೆ ತೆಗೆದುಕೊಳ್ಳುತ್ತಾನೆ. ಅವನು ಕಾಂಬಿನೇಷನ್‌ಗೆ ಸಂಬಂಧಪಟ್ಟಂತೆ ಯೂನಿವರ್ಸಿಟಿಗೆ ಅಪ್ಲೈ ಮಾಡುವುದಕ್ಕೆ ಸಮಯ ಎಲ್ಲಿದೆ? ಅವನು ಹೊಸ ಕಾಂಬಿನೇಷನ್ ಅನ್ನು ಹೇಗೆ ತೆಗೆದುಕೊಳ್ಳುವುದು. ಸೈನ್ಸ್ ತೆಗೆದುಕೊಳ್ಳುವುದಕ್ಕೆ, ಅವರು ಸೈನ್ಸ್ ವಿಷಯವನ್ನು introduce ಮಾಡಬೇಕು. ಈಗ ಅದಕ್ಕೆ ಸಮಯ ಎಲ್ಲಿದೆ? ಇದಕ್ಕೆ Affiliation Committee ಬರಬೇಕು. ಅವರು fee ಕಟ್ಟಬೇಕು. University Academic Council, Syndicate ಮಂಜೂರು ಮಾಡಬೇಕು. ಆಮೇಲೆ ಪ್ರಾರಂಭ ಮಾಡಬೇಕು. ಆ ಕಾಲೇಜುಗಳ ಕಥೆ ಏನು? ದಯಮಾಡಿ, be practical. ಬದಲಾವಣೆ ಬೇಕು. ನಾನು ಬದಲಾವಣೆ ಬಯಸುತ್ತೇನೆ. ಆದರೆ, ಅದಕ್ಕೆ ಸಿದ್ಧತೆ ಎಲ್ಲಿದೆ? ಇದರಿಂದ ಇಡೀ ವ್ಯವಸ್ಥೆ ಗೊಂದಲಕ್ಕೆ ಹೋಗುತ್ತದೆ. Be practical. ಈಗ ದೆಹಲಿಯಲ್ಲಿ ಮುಂದುವರೆಸಿಕೊಂಡರು. ಇಡೀ ರಾಜ್ಯದಲ್ಲಿ ಎಲ್ಲೂ ಅನುಷ್ಠಾನ ಇಲ್ಲ. ಆದರೆ, ಇಲ್ಲಿ ಮಾತ್ರ. ಇದಕ್ಕೆ ಆತುರ ಏಕೆ? ಮಾನ್ಯ ಪ್ರಧಾನ ಮಂತ್ರಿಗಳು ಹೇಳಿದರು, "Government interference in the implementation of the NEP should be minimum" ಎಂದು ಹೇಳುತ್ತಾರೆ. ಆದರೆ, ಸರ್ಕಾರದ interference ಯೇ ಜಾಸ್ತಿಯಾಗಿದೆ. ಅವರ ಕಡೆಯಿಂದ ವಿಶ್ವವಿದ್ಯಾಲಯಗಳಿಗೆ ಸ್ವಾಯತ್ತತೆ ಎಲ್ಲಿ ಉಳಿಯುತ್ತಿದೆ? ಅವರು ಸ್ವತಂತ್ರವಾಗಿ curriculum ಮಾಡಿಕೊಳ್ಳುವುದಕ್ಕೆ, Board of Studies ನಲ್ಲಿ approval ಮಾಡಿಕೊಳ್ಳುವುದಕ್ಕೆ ಟೈಮ್ ಎಲ್ಲಿದೆ. ಅಲ್ಲಿ ಸಿಲೆಬಸ್‌ಗಳನ್ನೇ ಕೊಡುತ್ತಿಲ್ಲ. ಮಕ್ಕಳಿಗೆ ಯಾವ ಕೋರ್ಸ್‌ಗೆ, ಯಾವ ಕಾಂಬಿನೇಷನ್ ಎಂದು ಹೇಳುವುದಕ್ಕೆ ಆಗುತ್ತಿಲ್ಲ ಯಾವ ಕಾಂಬಿನೇಷನ್ ತೆಗೆದುಕೊಳ್ಳಲಿ, ಏನನ್ನು ಓದಲಿ? ಮತ್ತು ಯಾವ ವಿಷಯವನ್ನು ಓದಲಿ ಎಂದು . ಅವರು ನನಗೆ ಫೋನ್ ಮಾಡಿ ಕೇಳುತ್ತಾರೆ. ಈಗ ಇಡೀ ಉನ್ನತ ಶಿಕ್ಷಣ ಗೊಂದಲದಲ್ಲಿದೆ. ಇಡೀ ಶಿಕ್ಷಣ ವ್ಯವಸ್ಥೆಯ ಬದಲಾವಣೆ ಗೊಂದಲವಿದೆ. ಅದಕ್ಕೆ ಅವರು ಸ್ಪಷ್ಟತೆ ನೀಡಲಿ. ಬದಲಾವಣೆಗೆ ತಯಾರು ಮಾಡಿಕೊಳ್ಳಿ. ಅದನ್ನು ಜಾರಿ ಮಾಡಿ. ಆದರೆ, ಅದಕ್ಕೆ ಸಿದ್ಧತೆ ಮಾಡಿಕೊಳ್ಳಿ. ಇಲ್ಲದೇ ಹೋದರೆ, ಅನಾಹುತಗಳಾಗಿ ತೊಂದರೆಗಳಾಗುತ್ತವೆ. ನಮಸ್ಕಾರಗಳು.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಡಾ|| ಅಶ್ವಥ್ ನಾರಾಯಣ ಸಿ.ಎನ್ (ಉನ್ನತ ಶಿಕ್ಷಣ, ಐಟಿ & ಬಿಟಿ, ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು):-** ಮಾನ್ಯ ಸಭಾಪತಿಯವರೆ,

**(ಉತ್ತರದ ಪ್ರತಿಯನ್ನು ಲಗತ್ತಿಸಲಾಗಿದೆ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**12. ಪ್ರಕಟಣೆ**

**ಸಭಾಪತಿಯವರು:-** ಮಾನ್ಯ ಸಭಾಧ್ಯಕ್ಷರಿಂದ ಈ ಮುಂದಿನ ಸಂದೇಶ ಬಂದಿರುತ್ತದೆ. ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮ 104ರ ಮೇರೆಗೆ ವಿಧಾನ ಸಭೆಯು ದಿನಾಂಕ 23.09.2021ರಂದು ಕರ್ನಾಟಕ ಧನವಿನಿಯೋಗ (ಸಂಖ್ಯೆ:3) ವಿಧೇಯಕ, 2021 ಅನ್ನು ಅಂಗೀಕರಿಸಿತು ಎಂದು ಹಾಗೂ ಸದರಿ ವಿಧೇಯಕಕ್ಕೆ ವಿಧಾನ ಪರಿಷತ್ತಿನ ಸಹಮತಿ ನೀಡಬೇಕೆಂದು ಕೋರಿರುತ್ತಾರೆ.

**13. ಕಾರ್ಯದರ್ಶಿಯವರ ವರದಿ**

ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ ಈ ಕೆಳಕಂಡ ವಿಧೇಯಕಗಳನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

೧. ಕರ್ನಾಟಕ ಧನವಿನಿಯೋಗ (ಸಂಖ್ಯೆ:3) ವಿಧೇಯಕ, 2021

೨.. ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ ತಿದ್ದುಪಡಿ ವಿಧೇಯಕ, 2020

**ಸಭಾಪತಿಯವರು:-** ಮಾನ್ಯ ಉನ್ನತ ಶಿಕ್ಷಣ ಸಚಿವರು ಉತ್ತರ ಹೇಳಿ.

**14. ನಿಯಮ 330ರ ಮೇರೆಗೆ ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯು "ನೆರೆ-ಹೊರೆಯಲ್ಲಿ ಸಮಾನ ಶಿಕ್ಷಣ ನೀತಿ"ಎಂಬ ಸಂವಿಧಾನದ ಆಶಯಗಳಿಗೆ ವಿರುದ್ಧವಾಗಿರುವ ಬಗ್ಗೆ ಮುಂದುವರೆದ ಚರ್ಚೆ.**

**ಡಾ|| ಅಶ್ವಥ್ ನಾರಾಯಣ ಸಿ.ಎನ್ (ಉನ್ನತ ಶಿಕ್ಷಣ, ಐಟಿ & ಬಿಟಿ, ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು):-** ಮಾನ್ಯ ಸಭಾಪತಿಯವರೇ, ಸದಸ್ಯರುಗಳಾದ ಮಾನ್ಯ ಬಿ.ಕೆ.ಹರಿಪ್ರಸಾದ್‌ರವರು, ಮಾನ್ಯ ಮರಿತಿಬ್ಬೇಗೌಡರು, ಮಾನ್ಯ ನಸೀರ್ ಅಹ್ಮದ್‌ರವರು ಹಾಗೂ ಮಾನ್ಯ ಕೆ.ಟಿ.ಶ್ರೀಕಂಠೇಗೌಡರು ಇವತ್ತು ಈ ಸದಸ್ಯರುಗಳು ನಿಯಮ 330ರ ಅಡಿಯಲ್ಲಿ ಸೂಚನಾ ಪತ್ರ ನೀಡಿದ್ದಾರೆ.

**(ಈ ಹಂತದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಸದನಕ್ಕೆ ಆಗಮಿಸಿದರು)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, ಒಂದು ಧನ ವಿಧೇಯಕವಿದೆ, ತಾವು ದಯವಿಟ್ಟು ತೆಗೆದುಕೊಳ್ಳಬೇಕು.

**ಸಭಾಪತಿಯವರು:-** ಮಾನ್ಯ ಉನ್ನತ ಶಿಕ್ಷಣ ಸಚಿವರೆ, ಧನವಿಧೇಯಕ ಮುಗಿದ ಮೇಲೆ ತಾವು ಉತ್ತರ ನೀಡಿ.

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, ತಾವು ಆ ವಿಷಯವನ್ನು ಮುಗಿಸಿಬಿಡಿ.

**ಸಭಾಪತಿಯವರು:-** ಮಾನ್ಯ ಉನ್ನತ ಶಿಕ್ಷಣ ಸಚಿವರೆ, ಮಾನ್ಯ ಮುಖ್ಯಮಂತ್ರಿಗಳು ತಿಳಿಸಿದ್ದಾರೆ. ಈಗ ತಾವು ಉತ್ತರವನ್ನು ನೀಡಿ.

**ಡಾ|| ಅಶ್ವಥ್ ನಾರಾಯಣ ಸಿ.ಎನ್:-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರುಗಳು ನಿಯಮ 330ರ ಅಡಿಯಲ್ಲಿ ಸೂಚನಾಪತ್ರಕ್ಕೆ ಉತ್ತರವನ್ನು ಕೇಳಿದ್ದಾರೆ. ಅವರು ಕೇಳಿರುವ ವಿಷಯ Right to Education ವಿಚಾರಕ್ಕೆ ಮತ್ತು ಸಂವಿಧಾನದ ಆಶಯದ ವಿಚಾರವನ್ನು ತಿಳಿಸಿರುವಂಥದ್ದು.

**(ಮುಂದು...**

(973) 23.09.2021 07.40 LL-AK

**(ಸಭಾಪತಿಯವರ ಉಪಸ್ಥಿತಿ)**

**ಡಾ: ಅಶ್ವತ್‌ನಾರಾಯಣ ಸಿ.ಎನ್.(ಮುಂದು):-**

ಇವೊತ್ತಿನ ದಿವಸ ಬಹಳ ಮುಖ್ಯವಾಗಿ ನಮ್ಮ ರಾಷ್ಟ್ರದ ಶಿಕ್ಷಣ ನೀತಿ ಬಗ್ಗೆ ಒಂದಿಷ್ಟು ಪ್ರಕ್ರಿಯೆಗಳು ಯಾವ ರೀತಿ ನಡೆಯಿತು ಎಂಬುದನ್ನು ತಿಳಿಸುವುದು ಬಹಳ ಮುಖ್ಯವಾದ ವಿಚಾರವಾಗಿದೆ. ಸುಮಾರು 36 ವರ್ಷಗಳ ಹಿಂದೆ, 1986 ರ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಜಾರಿಗೆ ತರಲಾಯಿತು. ಅದಕ್ಕೂ ಹಿಂದೆ, 1968ರಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಜಾರಿಗೆ ತರಲಾಗಿತ್ತು. ಅದಾದ ನಂತರ, 36 ವರ್ಷಗಳ ಅವಧಿಯಲ್ಲಿ ಯಾವುದೇ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಜಾರಿಗೆ ತರಲಾಗಲಿಲ್ಲ.

ಸದರಿ 36 ವರ್ಷಗಳ ಅವಧಿಯಲ್ಲಿ ಶಿಕ್ಷಣ ವ್ಯವಸ್ಥೆ ನಿಂತ ನೀರಾಗಿತ್ತು. ನಮ್ಮ ಮಾನ್ಯ ಪ್ರಧಾನ ಮಂತ್ರಿಗಳಾದಂತಹ ಶ್ರೀ ನರೇಂದ್ರ ಮೋದಿಯವರು ತಮ್ಮ ಅಧಿಕಾರವನ್ನು ವಹಿಸಿಕೊಂಡ ವರ್ಷದಲ್ಲಿ ಶಿಕ್ಷಣದಲ್ಲಿ ಬಹಳಷ್ಟು ಸುಧಾರಣೆಗಳನ್ನು ತರಬೇಕು; ನಮ್ಮ ಯುವಕರಿಗೆ ಉತ್ತಮ ಭವಿಷ್ಯವನ್ನು ಕೊಡಬೇಕು; ಇಡೀ ವಿಶ್ವದಲ್ಲಿಯೇ ನಾವು ಪ್ರಥಮ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸ್ಥಾನದಲ್ಲಿರಬೇಕು; ನಾವು ಯಾರಿಗಿಂತಲೂ ಕಡಿಮೆ ಇರಬಾರದು; we must be 'second to none' ಅನ್ನುವಂತಹ ಉದ್ದೇಶದಿಂದ ಅದಕ್ಕೆ ಮಾರ್ಗ ಇರುವುದು ಶಿಕ್ಷಣ ಮತ್ತು ಕೌಶಲ್ಯದಲ್ಲಿ. ಒಂದು ಮೌಲ್ಯಾಧಾರಿತ ಶಿಕ್ಷಣ ಎನ್ನುವುದು ಬಹಳ ಮುಖ್ಯವಾಗಿದೆ. ಶಿಕ್ಷಣ ಎಲ್ಲರಿಗೂ ಸಿಗಬಹುದು. ಆದರೆ, ಗುಣಮಟ್ಟದ ಶಿಕ್ಷಣ ಸಿಗುವುದು ಬಹಳ ಮುಖ್ಯ. ಅದರಲ್ಲಿಯೂ ಅದು ಮೌಲ್ಯಾಧಾರಿತವಾಗಿ ಬೇಕು. ಇವೊತ್ತಿನ ದಿನ ನಾವು ಶಿಕ್ಷಣ ಕಲಿಯುವುದು ಯಾವುದಕೋಸ್ಕರ ಎಂದರೆ, ನನ್ನ ಕಲಿಕೆ ಈ ಸಮಾಜಕ್ಕೆ ಪ್ರಯೋಜನ ಆಗುವಂಥದ್ದು ಬಹಳ ಮುಖ್ಯವಾದ ವಿಚಾರವಾಗಿರುತ್ತದೆ. ಹಾಗಾಗಿ, ಈ ಎಲ್ಲಾ ವಿಷಯಗಳನ್ನು ಗಮನಿಸಿದಾಗ, ಅದನ್ನು ಮಾಡುವುದಕೋಸ್ಕರ ಪ್ರಕ್ರಿಯೆಯನ್ನು ಪ್ರಾರಂಭ ಮಾಡಿದರು.

ಇದಕ್ಕೆ ಮೊದಲು 1968 ಮತ್ತು 1986ರ ರಾಷ್ಟ್ರೀಯ ಶಿಕ್ಷಣ ನೀತಿ ಜಾರಿಗೆ ತಂದಾಗ, ಯಾವ ರೀತಿ ಪ್ರಕ್ರಿಯೆ ನಡೆದಿದೆ ಎನ್ನುವುದನ್ನು ನಾನು ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಆ ಸಂದರ್ಭದಲ್ಲಿ ಅದು ಕೇವಲ ಕೆಲವೇ ಸಂಸ್ಥೆಗಳು, ಕೆಲವೇ ವ್ಯಕ್ತಿಗಳು ಮತ್ತು ಕೆಲವೇ ಜನರಿಗೆ ಅದು ಸೀಮಿತವಾಗಿತ್ತು. ಆದರೆ, ಈ ಬಾರಿ ರಾಷ್ಟ್ರೀಯ ಶಿಕ್ಷಣ ನೀತಿ 2020 ಪ್ರಾರಂಭ ಮಾಡುವುದಕ್ಕೆ ಪ್ರಕ್ರಿಯೆ ಮಾಡಿದ್ದು 26ನೇ ಜನವರಿ 2015ರಂದು. ಅದನ್ನು 'MyGov' online portal ಮೂಲಕ ಸಲಹೆಗಳನ್ನು ಕೊಡುವುದಕ್ಕೆ ಆ ಪೋರ್ಟಲ್ ಪ್ರಾರಂಭ ಮಾಡಲಾಯಿತು. ಅದರ ನಂತರ consultation ಆಗಬೇಕು. ಒಂದು ಡ್ರಾಫ್ಟ್ ಅಥವಾ ಫ್ರೇಮ್‌ವರ್ಕ್ ಮಾಡುವುದಕೋಸ್ಕರ ಎರಡು ಸೆಕ್ಷನ್ ಮಾಡುವಂಥದ್ದು ಆಗುತ್ತದೆ. ಪ್ರಥಮವಾಗಿ consultation ಆಗಬೇಕು. Consultation ಮಾಡಿದ ನಂತರ ಒಂದು ಡ್ರಾಫ್ಟ್ ಆಗಬೇಕು ಮತ್ತು ಆ ಡ್ರಾಫ್ಟ್‌ಗೆ ಫೀಡ್‌ಬ್ಯಾಕ್ ತೆಗೆದುಕೊಳ್ಳಬೇಕೆಂದು ಎರಡನೆ ಭಾಗ ಮಾಡುವಂಥದ್ದು ಆಗುತ್ತದೆ. ಮೊದಲನೆ ಭಾಗದಲ್ಲಿ stakeholders ಏನಿದ್ದಾರೆ, ಒಬ್ಬ ಸಾಮಾನ್ಯ ಮನುಷ್ಯ, ಕುಗ್ರಾಮದಲ್ಲಿರುವಂತಹವನು, ದೀನದಲಿತ, ಪ್ರತಿಯೊಬ್ಬ ವ್ಯಕ್ತಿಗೂ ತನ್ನ ಶಿಕ್ಷಣ ಹೇಗಿರಬೇಕು ಎನ್ನುವಂಥದ್ದು ತಾನು ತಿಳಿಸಲಿಕ್ಕೆ ಅವಕಾಶ ಮಾಡಿಕೊಡಬೇಕೆಂದು ಈ ದೇಶದಲ್ಲಿರುವಂತಹ 2.50 ಲಕ್ಷ ಗ್ರಾಮ ಪಂಚಾಯಿತಿಗಳಲ್ಲಿ 6600 ಬ್ಲಾಕ್ಸ್, 6000 ಅರ್ಬನ್ ಲೋಕಲ್ ಬಾಡೀಸ್, 6776 ಜಿಲ್ಲೆಗಳು, 36 ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳು, ಇಲ್ಲೆಲ್ಲಾ ಸಮಾಲೋಚನೆಗಳನ್ನು ಮಾಡಬೇಕೆಂದು ನಿಶ್ಚಯ ಮಾಡಿ, ಆ ಪ್ರಕಾರದಲ್ಲಿ ದಿನಾಂಕ 27ನೇ ಫೆಬ್ರುವರಿ 2015ರಂದು multi-stakeholder National Education Policy Task Force ರಚನೆ ಆಗುವಂಥದ್ದು ಆಗುತ್ತದೆ. Academics and representatives of various ministries, departments of the Government of India was set up to monitor the

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

progress of the consultation process. ಈ ಪ್ರಕ್ರಿಯೆಯನ್ನು ಮಾಡುವುದಕ್ಕೆ ಟಾಸ್ಕ್‌ಫೋರ್ಸ್ ರಚನೆ ಮಾಡಲಾಗಿರುತ್ತದೆ.

ಇವೊತ್ತಿನ ದಿನ 2.50 ಲಕ್ಷ ಗ್ರಾಮ ಪಂಚಾಯಿತಿಗಳು, ಜಿಲ್ಲೆಗಳು ಮತ್ತು ರಾಜ್ಯಗಳಲ್ಲಿ consultation ಪ್ರಾರಂಭ ಮಾಡುವುದಕೋಸ್ಕರ ಬೇಕಾಗಿರುವಂತಹ ಒಂದು questionnaire, ಒಟ್ಟು 33 themes. Primary and Secondary ಗೆ 13 themes ಮತ್ತು Higher Education ಗೆ 20 themes ಮತ್ತು question ಗಳು. ಏನೆಲ್ಲಾ ಪ್ರಶ್ನೆಗಳನ್ನು ಕೇಳಬಹುದು ಎಂಬ format ಅನ್ನು ಸಹ ತಯಾರು ಮಾಡಿ ಕೊಡುವಂಥದ್ದು ಆಗುತ್ತದೆ. ಇವೆಲ್ಲವನ್ನೂ ಕೊಟ್ಟು ವರ್ಕ್‌ಫ್ಲೋಗಳನ್ನು ಪ್ರಾರಂಭ ಮಾಡುವುದಕ್ಕೆ ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲಿಯೂ ವಿಲೇಜ್ ಎಜುಕೇಷನ್ ಕಮಿಟಿಗಳಲ್ಲಿ ಎಲ್ಲಾ ರೀತಿಯ ಸಮಾಲೋಚನೆ ಮಾಡುವುದಕ್ಕೆ ಅವಕಾಶ ಕೊಡುವಂಥದ್ದು ಆಗುತ್ತದೆ ಮತ್ತು ಎಲ್ಲಾ ಜಿಲ್ಲೆಗಳಲ್ಲಿ, ಬೇರೆ ಬೇರೆ ಅರ್ಬನ್ ಲೋಕಲ್ ಬಾಡಿಗಳಲ್ಲಿ ಸಮಾಲೋಚನೆ ಮಾಡುವಂಥದ್ದು ಆಗುತ್ತದೆ. ಈ ಸಮಾಲೋಚನೆಗಳು ಆಗಿ, 29ನೇ ಫೆಬ್ರುವರಿ ತಿಂಗಳೊಳಗೆ ಉನ್ನತ ಶಿಕ್ಷಣ ಇಲಾಖೆಗೆ ಎರಡೂವರೆ ಲಕ್ಷ ಗ್ರಾಮ ಪಂಚಾಯಿತಿ ಮಟ್ಟದಿಂದ 1,10,623 consultations, ಸಲಹೆಗಳು/ಸಮಾಲೋಚನೆಗಳು ಬರುವಂಥದ್ದು ಇದೆ. ಅದು ಆನ್‌ಲೈನ್‌ಗೆ ಅಪ್‌ಲೋಡ್ ಆಗುವಂಥದ್ದು ಆಗುತ್ತದೆ.

ಈ ರೀತಿ ಅಪಲೋಡ್ ಮಾಡುವವರು ಕೇಂದ್ರ ಸರ್ಕಾರದವರು ಆಗಿರಲಿಲ್ಲ. ಆ ಇಡೀ ಪ್ರಕ್ರಿಯೆಯಲ್ಲಿ ಸಂಬಂಧಪಟ್ಟ ರಾಜ್ಯ ಸರ್ಕಾರಗಳ ಜವಾಬ್ದಾರಿ ಆಗಿರುತ್ತದೆ. ಇಷ್ಟು ಜಿಲ್ಲಾವಾರು, ಅರ್ಬನ್ ಲೋಕಲ್ ಬಾಡೀಸ್, ಗ್ರಾಮ ಪಂಚಾಯಿತಿಗಳಲ್ಲಿ ಸಮಾಲೋಚನೆ ಮಾಡುವುದಕ್ಕೆ ಜವಾಬ್ದಾರಿಯನ್ನು ಸಂಬಂಧಪಟ್ಟ ರಾಜ್ಯ ಸರ್ಕಾರಗಳಿಗೆ ಕೊಡುವಂಥದ್ದು ಆಗಿರುತ್ತದೆ. ಆ ಜವಾಬ್ದಾರಿಯನ್ನು ರಾಜ್ಯ ಸರ್ಕಾರಗಳು ಹೊತ್ತು, ಎಲ್ಲಾ ಸಮಾಲೋಚನೆಗಳನ್ನು ಮಾಡಿ, ಸಲಹೆಗಳು ಏನು ಬರುತ್ತವೆ ಆ ಸಲಹೆ/ಸಮಾಲೋಚನೆಗಳನ್ನು ಫೀಡ್ ಮಾಡುವಂಥದ್ದು ಮತ್ತು ಅಪ್‌ಲೋಡ್ ಮಾಡುವಂಥದ್ದು ಆಗುತ್ತದೆ. ಅದಲ್ಲದೇ, 'MyGov' ಪೋರ್ಟಲ್‌ಗೆ 26,500 ಸಲಹೆಗಳು ಆನ್‌ಲೈನ್‌ನಲ್ಲಿಯೂ ಸಹ ಬರುತ್ತದೆ. ತದನಂತರ, Central Advisory Board of Education ನಲ್ಲಿ ಹಲವಾರು ಸಭೆಗಳು ನಡೆಯುತ್ತವೆ. ಆ ಸಂದರ್ಭದಲ್ಲಿ ನಮ್ಮ ರಾಜ್ಯದ ಶಿಕ್ಷಣ ಸಚಿವರಾಗಿದ್ದಂತಹ ಶ್ರೀ ಕಿಮ್ಮನೆ ರತ್ನಾಕರ್‌ರವರು, ಶ್ರೀ ತನ್ವೀರ್ ಸೇಠ್‌ರವರು ಮತ್ತು ಶ್ರೀ ಬಸವರಾಜ ರಾಯರೆಡ್ಡಿಯವರು ಈ ಎಲ್ಲಾ ಸಭೆಗಳಲ್ಲಿ ಭಾಗವಹಿಸಿರುತ್ತಾರೆ ಮತ್ತು ಸಾಕಷ್ಟು virtual conference ಗಳು ನಡೆದಿರುತ್ತವೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇದರ ಜೊತೆಗೆ, ಎಲ್ಲಾ ಸ್ಟೇಕ್‌ಹೋಲ್ಡರ್‌ಗಳ ಜೊತೆಯಲ್ಲಿ ಸಮಾಲೋಚನೆಗಳನ್ನು ಸಂಬಂಧಪಟ್ಟ ಶಿಕ್ಷಣ ಸಂಸ್ಥೆಗಳು ಮತ್ತು ಇನ್ನಿತರ ಪರಿಣಿತರ ಜೊತೆಯಲ್ಲಿ ನಡೆಯುವಂಥದ್ದು ಆಗಿರುತ್ತದೆ. ಈ ಸಮಾಲೋಚನೆಗಳಲ್ಲಿ ಕೆಲವು ಹೇಳಬೇಕೆಂದರೆ, ಅಂದಿನ ಮುಖ್ಯಮಂತ್ರಿಯಾಗಿದ್ದಂತಹ ಶ್ರೀ ಸಿದ್ದರಾಮಯ್ಯನವರ ಸರ್ಕಾರದಲ್ಲಿ ಯಾವ ಸಲಹೆಗಳನ್ನು ಕೊಟ್ಟಿದ್ದಾರೆಂದು ಸಹ ನಾನು ಹೇಳುತ್ತೇನೆ. ಇವೊತ್ತಿನ ದಿವಸ, ಮಾನ್ಯ ಹರಿಪ್ರಸಾದ್‌ರವರು internationalization of education ಬಗ್ಗೆ ಹೇಳಿದರು. ಆದರೆ, internationalization of education ಮಾಡಿ ಎಂದು ಅಂದಿನ ಮುಖ್ಯಮಂತ್ರಿಗಳೇ ಹೇಳಿರುತ್ತಾರೆ. 'Affiliation system of colleges has outlived. Affiliation system ನ್ನು ತೆಗೆದುಹಾಕಿ, it should be phased out' ಎನ್ನುವಂಥದ್ದನ್ನು ಬಹಳ ಸ್ಪಷ್ಟವಾಗಿ ಹೇಳಿರುತ್ತಾರೆ. ಎಲ್ಲಾ ರೀತಿಯಲ್ಲಿಯೂ structure ಗಳ ಬದಲಾವಣೆ ಆಗಬೇಕು. ಅದಕ್ಕಾಗಿ single discipline phase out ಆಗಬೇಕು. ಈ ರೀತಿ ಹಲವಾರು ಸಲಹೆಗಳನ್ನು ಎಲ್ಲಾ ಹಂತದಲ್ಲಿಯೂ ಅವರು ಕೊಡುತ್ತಾ ಹೋಗಿರುತ್ತಾರೆ. ಇವೊತ್ತಿನ ದಿವಸ, ನಾವು ಏನೆಲ್ಲಾ ಸಲಹೆಗಳನ್ನು ಹೇಳುತ್ತಿದ್ದೇವೆ...

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಹಾಗಾದರೆ ಮಾನ್ಯ ಸಚಿವರು ಹೇಳುತ್ತಿರುವುದು, ಮಾನ್ಯ ಸಿದ್ದರಾಮಯ್ಯನವರು ನೀಡಿದಂತಹ ಎಲ್ಲಾ ಸಲಹೆಗಳನ್ನು ಅವರು ಒಪ್ಪಿಕೊಂಡಿದ್ದಾರೆ ಎಂತಲೇ?

**ಡಾ: ಅಶ್ವತ್‌ನಾರಾಯಣ ಸಿ.ಎನ್.:-** ಮಾನ್ಯ ಸಭಾಪತಿಯವರೇ, ಆ ಸಂದರ್ಭದಲ್ಲಿ ಅವರು ಹಲವಾರು ಸಲಹೆಗಳನ್ನು ಕೊಟ್ಟಿದ್ದಾರೆ. ಅದರಲ್ಲಿ ಅವರು ಕೆಲವು ಪ್ರಮುಖವಾದಂತಹ ಸಲಹೆಗಳನ್ನು ಕೊಟ್ಟಿದ್ದಾರೆ. ಮಾನ್ಯ ಸದಸ್ಯರು ಆಗಲೇ ಹೇಳಿದ ಹಾಗೆ, ಈ ಸಲಹೆಗಳನ್ನು ಯಾರೋ, ಎಲ್ಲಿಯೋ ಒಂದು ಕಡೆ ಕುಳಿತು ಮಾಡಿರುವುದಲ್ಲ. ಇಡೀ ಸಮಾಜಕ್ಕೆ ಭಾರತ ಹೇಗೆ ಸದೃಢ ಆಗಬೇಕು; ಪ್ರತಿಯೊಬ್ಬ ನಾಗರಿಕನಿಗೂ ಉತ್ತಮ ಭವಿಷ್ಯ ರೂಪಿಸಿಕೊಳ್ಳುವುದಕ್ಕೆ; ತನ್ನಲ್ಲಿರುವ ಪ್ರತಿಭೆಯನ್ನು ಹೊರತರುವುದಕ್ಕೆ ಏನೆಲ್ಲಾ ಒಳ್ಳೆಯದನ್ನು ಮಾಡಬೇಕಾಗಿದೆಯೋ ಅದಕ್ಕೆ ಇಡೀ ಸಮಾಜ ಒಂದಾಗಿ ಮಾಡುವಂಥದ್ದು ಆಗಬೇಕಾಗುತ್ತದೆ. ಇನ್ನು ಮುಂದುವರೆದು, ಇವೊತ್ತಿನ ದಿವಸ Central Advisory Board of Education ನಲ್ಲಿ ಎಲ್ಲಾ ಸಚಿವರು, ಅಧಿಕಾರಿಗಳು, ಕಾರ್ಯದರ್ಶಿಗಳು, ಶಿಕ್ಷಣ ಸಂಸ್ಥೆಗಳು ಭಾಗವಹಿಸಿ ಸಲಹೆಗಳನ್ನು ಕೊಟ್ಟಿರುವಂಥದ್ದು ಇದೆ. ಆ ಎಲ್ಲಾ ಸಲಹೆಗಳನ್ನು ಪಡೆದು, ಸಾಕಷ್ಟು ಸಂದರ್ಭದಲ್ಲಿ ಟೈಮ್‌ಲೈನ್ ಪ್ರೋಸೆಸ್‌ನಲ್ಲಿ ಹಲವಾರು ಸಲಹೆಗಳು ಬರುವಂಥದ್ದು ಆಗುತ್ತದೆ. ಅದರಂತೆ, 24ನೇ ಜೂನ್ 2017ರಲ್ಲಿ ಈ ಎಲ್ಲಾ ಸಲಹೆಗಳು,

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

consultations ಆದ ಮೇಲೆ ಒಂದು ಫ್ರೇಮ್‌ವರ್ಕ್ ಮಾಡುತ್ತಾರೆ. ನಂತರ, Draft National Education Policy ಮಾಡುವುದಕ್ಕೆ ಒಂದು ಕಮಿಟಿ ಆಗಬೇಕೆಂದು ನಿಶ್ಚಯವಾಗಿ 24ನೇ ಜೂನ್ 2017ರಂದು ಮಾನ್ಯ ಡಾ: ಕಸ್ತೂರಿ ರಂಗನ್‌ರವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ರಚನೆ ಆಗುತ್ತದೆ. ಸದರಿ ಸಮಿತಿಯು ಡಾ: ಕಸ್ತೂರಿ ರಂಗನ್ ರವರ ಬಗ್ಗೆ ಆ ಕಾಲದಿಂದಲೂ ಈ ದೇಶದ ಒಬ್ಬ ಹೆಮ್ಮೆಯ ಮಗ. ಈ ದೇಶಕ್ಕಾಗಿ ಅವಿರತವಾಗಿ ದುಡಿದು, ಬಹು ಕೊಡುಗೆಯನ್ನು ಕೊಟ್ಟಿರುವಂತಹ ಮಹಾನ್ ವ್ಯಕ್ತಿ ಅವರು. ಅಂತಹ ವ್ಯಕ್ತಿಗಳ ಬಗ್ಗೆಯೂ ಸಹ ಅನುಮಾನಗಳನ್ನು ವ್ಯಕ್ತಪಡಿಸುವಂತಹವರು ಸಹ ಇದ್ದಾರೆ. ಹಿಂದಿನ ಸರ್ಕಾರದ ಅವಧಿಯಲ್ಲಿಯೇ ಅವರಿಗೆ ಪದ್ಮಶ್ರೀ ಮತ್ತು ಪದ್ಮಭೂಷಣ ಪ್ರಶಸ್ತಿಗಳನ್ನು ಕೊಟ್ಟಿರುವಂಥದ್ದು ಇದೆ.

(ಮುಂದು...)

(974) 23-09-2021 YL-RN 7.50 (ಸಭಾಪತಿಯವರ ಉಪಸ್ಥಿತಿ)

**ಶ್ರೀ ಅಶ್ವಥ್‌ನಾರಾಯಣ ಸಿ.ಎನ್.(ಮುಂದು):-**

ಹಾಗೆಯೇ ಯಾವುದೇ ವಿಜ್ಞಾನಿಗೆ ಪ್ರಶಸ್ತಿಯನ್ನು ನೀಡಿದರೆ, ಆತನ ಸಾಧನೆಗಳೆಲ್ಲವನ್ನೂ ಸಹ ನೋಡಿ ಯೋಗ್ಯವಾದ ವಿಜ್ಞಾನಿಗೆ ಈ ದೇಶದ ಹೆಮ್ಮೆಯ ಮಗ ಎಂದು ಪರಿಗಣಿಸಿ, ಯೋಗ್ಯವಾದಂಥ ವ್ಯಕ್ತಿಗಳು ಎಂದು ಪ್ರಶಸ್ತಿ ನೀಡುವಂಥದ್ದಾಗಿದೆ. ಡಾ|| ಮಂಜುಲ್ ಭಾರ್ಗವರವರು Princeton ವಿಶ್ವವಿದ್ಯಾಲಯದಲ್ಲಿ ವಿದ್ಯಾಭ್ಯಾಸವನ್ನು ಪಡೆದವರಾಗಿದ್ದು, ನಮ್ಮ ದೇಶದವರೆ ಆಗಿದ್ದು, ಅದ್ಭುತವಾಗಿ ಕಲಿಕೆ ಮಾಡಿದವರಾಗಿದ್ದಾರೆ ಮತ್ತು ವಸುಧಾ ಕಾಮತ್ ಇವರೆಲ್ಲರೂ ಸದಸ್ಯರಾಗಿದ್ದಾರೆ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಗುಪ್ತಾರವರು ಸಹ ಬರುತ್ತಾರೆ.

**ಶ್ರೀ ಅಶ್ವಥ್‌ನಾರಾಯಣ ಸಿ.ಎನ್.(ಉನ್ನತ ಶಿಕ್ಷಣ, ಐಟಿ-ಬಿಟಿ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಕೌಶಲ್ಯಾಭಿವೃದ್ಧಿ ಸಚಿವರು):-** ಮಾನ್ಯ ಸಭಾಪತಿಯವರೇ, ಗುಪ್ತಾರವರು 3 ತಿಂಗಳುಗಳಿಗೆ ಸೀಮಿತವಾಗಿ Co-op ಸದಸ್ಯರಾಗಿದ್ದವರೆ ವಿನಃ full time ಸದಸ್ಯರಾಗಿದ್ದವರಲ್ಲ. ಜೊತೆಗೆ ಡಾ|| ಎಂ.ಕೆ.ಶ್ರೀಧರ್‌ರವರು Knowledge Commission ನಲ್ಲಿ ಬಹಳಷ್ಟು ಕರ್ತವ್ಯವನ್ನು ನಿರ್ವಹಿಸಿದವರಾಗಿದ್ದಾರೆ. ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರ ಸರ್ಕಾರದಲ್ಲಿಯು Knowledge Commission ಇದ್ದ ಪ್ರಯುಕ್ತ ಆ ಸಮಿತಿಯ ಸದಸ್ಯರಾಗಿ ಡಾ|| ಎಂ.ಕೆ.ಶ್ರೀಧರ್‌ರವರು ಕರ್ತವ್ಯವನ್ನು ನಿರ್ವಹಿಸಿದ್ದಾರೆ. ಶ್ರೀ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಳವಂಡಿ ಶಿವಮೂರ್ತಿ ಸ್ವಾಮಿ ಇಂದಿರಾ ಕಟ್ಟಿಮನಿ ಹಿರೇಮಠರವರು Tribal university ಒಳಗೊಂಡಂತೆ, ನಾಲ್ಕೈದು ವಿಶ್ವವಿದ್ಯಾಲಯದಲ್ಲಿ ಕುಲಸಚಿವರಾಗಿ ಕರ್ತವ್ಯವನ್ನು ನಿರ್ವಹಿಸಿದ್ದವರು. ಹಾಗಾಗಿ ಅವರು ಸಹ ಒಬ್ಬ ಸದಸ್ಯರಾಗಿದ್ದವರು. Dr. Mazhar Asif, ಅವರಿಗೆ Centre for Persian and Central Asian Studies School of Language, Literature and Cultural Studies in Jawaharlal Nehru University, New Delhi ಬಹಳ ಇಷ್ಟವಾಗಿರುವಂಥ ವಿಶ್ವವಿದ್ಯಾಲಯವಾಗಿತ್ತು. ಹಾಗೆಯೇ Dr. Ram Shankar Kureel ಹಾಗೂ Shri K.J.Alphonse ರವರು ಒಳಗೊಂಡಿದ್ದಾರೆ. K.J.Alphonse ರವರು ಮಂತ್ರಿಯಾಗುವ ಮೊದಲು ಆ ಸಮಿತಿಯ ಸದಸ್ಯರಾಗಿದ್ದರು. ಯಾವ-ಯಾವ ಸಂಸ್ಥೆಯನ್ನು ಹೇಳುತ್ತಾರೆ, ಆ ಎಲ್ಲಾ ಸಂಸ್ಥೆಯ ವರದಿಗೆ review ಆಗಿರುವಂತದ್ದಿದೆ. ಈ ರಾಷ್ಟ್ರೀಯ ಶಿಕ್ಷಣವು ಎಲ್ಲಾ ಜಾತಿ, ಜನಾಂಗ, ಧರ್ಮದವರಿಗೂ ಸೇರಿರುವುದಾಗಿದೆ. ಇವತ್ತು ಇಷ್ಟು ಅನುಮಾನ ವ್ಯಕ್ತಪಡಿಸುವುದನ್ನು ನೋಡಿದರೆ, ನಿಜಕ್ಕೂ ಆಶ್ಚರ್ಯವಾಗುತ್ತದೆ. Details of consultation by the Committee for the Draft National Education Policy. Aga Khan Foundation, Akshaya Patra Foundation, Anjuman Islam. ಕೆಲವೊಂದು ಅವರಿಗೆ ಇಷ್ಟವಾಗಿರುವುದನ್ನು ಉಲ್ಲೇಖ ಮಾಡಲು ಬಯಸುತ್ತೇನೆ. Associated Chambers of Commerce of India, Association of Health Care Providers of India. Association of Indian University, Catholic Bishops Conference of India, Centre for Contemporary Studies, Indian Institute of Science, Confederation of Indian Industry, Consortium of Christian Minority Higher Education Institution, Darul Uloom Deoband. ಇಂತಹ ಹಲವಾರು ಸಂಘ-ಸಂಸ್ಥೆಗಳನ್ನು ಎಲ್ಲಾ ಜಾತಿ, ಧರ್ಮ, ಜನಾಂಗದವರಿಗೆ ಸೇರಿರುವುದನ್ನು ನೂರಾರು ಸಂಸ್ಥೆಗೆ consultation ಮಾಡಿರುವುದಾಗಿದೆ. Consultation ಆದಾಗ ನಮ್ಮ ಸಮಾಜಕ್ಕೆ ಬಂದ ಸಲಹೆಗಳೇನು ಎಂಬುದನ್ನು ಮಾನ್ಯ ಸದಸ್ಯರು ಕೇಳಿದರು. ಅದರ ಬಗ್ಗೆ ಹೇಳುವುದಾದರೆ, ಸುಮಾರು ಒಂದೂವರೆ ಲಕ್ಷದಿಂದ ಎರಡೂವರೆ ಲಕ್ಷದವರೆಗೂ consultation ಬಂದಿದೆ. ಕರಡು ಸಮಿತಿ ಆದಮೇಲೆ, Draft National Education Policy ಮಾಡಿದ ಮೇಲೆ ಆ ವರದಿಯನ್ನು ದಿನಾಂಕ: 15.09.2018 ರಂದು ಸರ್ಕಾರಕ್ಕೆ ಸಲ್ಲಿಸಲಾಯಿತು. ಆ ವರದಿಯನ್ನು ಸಲ್ಲಿಸಿದ ನಂತರ feedback ಕರೆಯುವಂಥ ಕೆಲಸ ಮಾಡಲಾಗುತ್ತದೆ. ಈ feedback ಅನ್ನು ಜೂನ್-ಆಗಸ್ಟ್ ಮಾಹೆಯ ಮಧ್ಯೆದಲ್ಲಿ ತೆಗೆದುಕೊಳ್ಳಲಾಗಿದ್ದು, ಸುಮಾರು ಎರಡು ಲಕ್ಷಗಳಷ್ಟು feedback ಬರುವಂಥದಾಗುತ್ತದೆ. ಈ ಎರಡು ಲಕ್ಷ feedback ನಲ್ಲಿ process ಮಾಡಿದಾಗ ಅದೇ ವ್ಯಕ್ತಿಗಳು ಬೇರೆ-ಬೇರೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರೂಪದಲ್ಲಿ, ಬೇರೆ-ಬೇರೆ ಮಾಧ್ಯಮದಲ್ಲಿ ಕೆಲವೊಂದು duplication ಗಳಿರುವಂಥ feedback ನೀಡುವಂಥದಾಗುತ್ತದೆ. ಆ ಎರಡು ಲಕ್ಷದಲ್ಲಿ Duplication ಇರುವುದರನ್ನು ತೆಗೆದು ಹಾಕಿದರೆ ಕೊನೆಗೆ ಉಳಿದು ಕೊಳ್ಳುವುದು ಒಂದು ಲಕ್ಷದ ಇಪ್ಪತ್ತು ಸಾವಿರ ಮಾತ್ರ. ಆ ಒಂದು ಲಕ್ಷದ ಇಪ್ಪತ್ತು ಸಾವಿರದಲ್ಲಿ ವರ್ಗೀಕರಣ ಮಾಡಿದಾಗ ಆ ವಿಷಯಕ್ಕೆ ಸಂಬಂಧ ಇಲ್ಲದೇ ಇದ್ದರೂ unrelated 52585 ಹೊಸ ಶಿಕ್ಷಣ ನೀತಿಗೆ ಬೆಂಬಲ ನೀಡಿ, feedback ನೀಡಿದವರು 30241 ಮಂದಿ. ಅವರ ಸಲಹೆಗಳನ್ನು ನೀಡಿ ಈ ಹೊಸ ಶಿಕ್ಷಣ ನೀತಿಗೆ inclusion ಮಾಡಿ ಎಂದು ಸಲಹೆ ನೀಡಿದವರು 36471. ಈ 36471 ರಲ್ಲಿ 5106 ಜನರ ಸಲಹೆಗಳನ್ನು ತೆಗೆದುಕೊಳ್ಳಲಾಗಿದೆ. ಅವರು ನೀಡಿರುವಂಥ ಸಲಹೆಗಳನ್ನು ಸಹ ಈ ಸಂದರ್ಭದಲ್ಲಿ ತಿಳಿಸಲು ತಯಾರಿದ್ದೇನೆ. ಅದೇನೆಂದರೆ; The Importance of Public Education System; to meet the educational goals to be emphasized fundamental principles in the page:5 para:8, 4, 26, 26.2. Measures against the commercialisation of the education to be clearly stated in para: 8.3. 18.12, 18.14, 26.7 ಇದರಲ್ಲಿ ಎಲ್ಲಾ ಉಲ್ಲೇಖ ಮಾಡಲಾಗಿದೆ. Public Libraries to be strengthened to encourage learning at all levels of education para:2.8 and 21.9. While collecting data relating to students and education institution is important. Data security and confidentiality must not be compromised. The integration in technology in teaching and learning must be approached with caution. Keeping in mind issues of access and equity. The provisions in the RPWD (Rights of Persons with Disabilities) Act 2016 to be incorporated in letter and spirit when making provision for education of persons with disabilities at levels of schooling. Pertaining to the school education the huge shortage of special educators must be acknowledged and addressed. Sign language must be offered as one of the languages studies and it used as one of the languages in the classroom facilitated. The role of residential school and educational institution like KGBV (Kasturba Gandhi Balika Vidayala) Ashram Shalas, Navodaya Vidyalayas as a mean of equitable access must be high-lightened. A fundamental shift in the approach to the comprehensive teaching of early education, early language and literacies need. This must reflect in all chapters and section relating to this topic including Teacher Education. The necessity of Census Exam must be considered. If State desired to conduct them aggregated

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

rather individualised report must be shared course of individual students and school must be kept confidential. Even though the large number of and diversity of school boards across the country measures to ensure equivalence must be taken. Pertaining to Higher Education students in private institution must be protected from arbitrary fee hike, financial support, financial support through scholarship and other means must be available for students from socio-economically disadvantage backgrounds in private institution. Areas in Data Science, Entrepreneurship development, Environmental Education and so on should be included in the curriculum in the Higher Education. Tenure Track approach for career progression should be explained to ensure it does not have implication and security of employment. ಬಂದಿರುವ ಎಲ್ಲಾ ಅರ್ಜಿಗಳು ಪ್ರತಿಯೊಂದನ್ನು process ಮಾಡಲಾಗಿದೆ.ಈ ರೀತಿಯಾಗಿ ಎಲ್ಲರೂ ನೀಡಿರುವಂಥ ಅರ್ಜಿಯಿಂದ ಸವಿಸ್ತಾರವಾಗಿ ಮಾಹಿತಿಯನ್ನು ತೆಗೆದುಕೊಂಡು ಒಳ್ಳೆಯ ಸಲಹೆಗಳನ್ನು ಸ್ವೀಕರಿಸಲಾಗಿದೆ ವಿನಃ ಈ ಹಿಂದೆ 1968 ಮತ್ತು 1986 ರಲ್ಲಿ ಮಾಡಿದ ರೀತಿ ಮಾಡಿಲ್ಲ. ಹಾಗೆಯೇ ಭಾಷಾ ನೀತಿಗೆ ಸಂಬಂಧಿಸಿದಂತೆ ಹೇಳುವುದಾದರೆ,...

**ಸಭಾಪತಿಯವರು:-** ಏನು ಸಲಹೆಗಳನ್ನು ಕೇಳಿದ್ದಾರೆ ಅದನ್ನು ಹೇಳಿ.

**ಶ್ರೀ ಅಶ್ವಥ್‌ನಾರಾಯಣ ಸಿ.ಎನ್.:-** ಮಾನ್ಯ ಸಭಾಪತಿಯವರೇ, ರಾಷ್ಟ್ರೀಯ ಶಿಕ್ಷಣ ನೀತಿ ಕುರಿತು ಸಮಾಜದಲ್ಲಿ ಹೇಳಿತ್ತಿರುವುದೇನೆಂದರೆ, ಎಂದೂ ಇಂತಹ ಶಿಕ್ಷಣವನ್ನು ನೋಡಿಯೇ ಇರಲಿಲ್ಲ, ಹೊಸದಾಗಿ ಶಿಕ್ಷಣ ನೋಡಿದ್ದೇವೆ, ಈ ಶಿಕ್ಷಣವು ನಮ್ಮ ಸಮಾಜವನ್ನು ಒಡೆದು ಹಾಕುತ್ತದೆ, ಸಮಾಜಕ್ಕೆ ವಿರುದ್ಧವಾಗಿದೆ ಎನ್ನುವಂತೆ ಬಿಂಬಿಸುವ ಹಾಗೆ ಆಗಿದೆ. ಹಾಗಾಗಿ ಸ್ಪಷ್ಟೀಕರಣ ನೀಡಲಾಗುತ್ತಿದೆ.

**ಸಭಾಪತಿಯವರು:-** ಆಯಿತು. ಅವರು ಏನು ಕೇಳಿದ್ದಾರೆ, ಅದಕ್ಕೆ ಸಂಬಂಧಿಸಿದಂತೆ ಮಾತ್ರ ಸಲಹೆಯನ್ನು ನೀಡಿದರೆ ಸಾಕು.

(...ಮುಂದು)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(975) 23.09.2021/8.00/ ಎಸ್‌ಕೆ/ಆರ್‌ಎನ್

**(ಸಭಾಪತಿಯವರ ಉಪಸ್ಥಿತಿ)**

**ಡಾ. ಸಿ.ಎಸ್. ಅಶ್ವಥ ನಾರಾಯಣ (ಉನ್ನತ ಶಿಕ್ಷಣ ಸಚಿವ, ಐಟಿ-ಬಿಟಿ, ವಿಜ್ಞಾನ ಹಾಗೂ ತಂತ್ರಜ್ಞಾನ ಇಲಾಖೆ, ಕೌಶಲ್ಯಾಭಿವೃದ್ಧಿ):-** ಮಾನ್ಯ ಸಭಾಪತಿಯವರೇ, ತಮಗೆ ಗೊತ್ತಿರುವ ಹಾಗೇ, ರಾಷ್ಟ್ರೀಯ ಶಿಕ್ಷಣ ನೀತಿಯ ಬಗ್ಗೆ ಚರ್ಚೆ ಮಾಡುವುದಕ್ಕೆ, ಯಾವತ್ತು ನಾವು ಹಿಂದೆ ಸರಿದವರಲ್ಲ. ಈ ಹಿಂದೆ ನಡೆದಂತಹ ಅಧಿವೇಶನದಲ್ಲಿ ಮಾನ್ಯ ಬಿ.ಕೆ. ಹರಿಪ್ರಸಾದ್‌ರವರು Calling Attention ನಲ್ಲಿ ಭಾಷಾ ನೀತಿಯ ಬಗ್ಗೆ ಚರ್ಚೆ ಮಾಡುವುದಕ್ಕೆ ತೆಗೆದುಕೊಂಡಿದ್ದರು. ಆಗ ಇದರ ಬಗ್ಗೆ ಚರ್ಚೆಯಾದಾಗ, ಇದನ್ನು ಕೇಳಬೇಕಾಗಿತ್ತು. ಇದನ್ನು ಏಕೆ ಕೇಳಲಿಲ್ಲ. ಒಂದು ದಿನ ನಿಯಮಾವಳಿಯನ್ನು ತೆಗೆದುಕೊಂಡು, ಇದರ ಬಗ್ಗೆ ಒಂದು ದಿನ ಚರ್ಚೆ ಮಾಡುವುದಕ್ಕೆ ಪ್ರತಿ ಪಕ್ಷದವರು ಆದ್ಯತೆಯನ್ನು ಕೊಡುತ್ತಿಲ್ಲ. ಇದೇ ನಮ್ಮ ದುರಂತ. ಚರ್ಚೆಯ ಪ್ರಾರಂಭದಲ್ಲಿಯೇ ಮೊದಲು ಸಮಾಜಕ್ಕೆ ಬೇಕಾಗಿರುವುದು ಏನು ಎಂಬುದು ಗೊತ್ತಿಲ್ಲವಲ್ಲ. ಪ್ರಮುಖವಾಗಿ ಶಿಕ್ಷಣದ, ಕೌಶಲ್ಯತೆಗಳು, ಮೌಲ್ಯಗಳು, ಉತ್ತಮವಾದಂತಹ ಸಬಲೀಕರಣವಾಗಬೇಕೆಂದರೆ, ಹೇಗೆ ಎನ್ನುವುದೇ ಗೊತ್ತಿಲ್ಲ. ಬರೀ ಎರಡ್ಮೂರು ವಿಚಾರಗಳು ಅಲ್ಲಿ ರೌಂಡ್ ಹೊಡೆತ್ತಿರುತ್ತದೆ. ಎರಡ್ಮೂರು ರೌಂಡ್ ಹೊಡೆದು, ಅಲ್ಲಿ ಹೋಗಿ, ಅಲ್ಲಿಯೇ ಬಂದು ನಿಂತುಕೊಳ್ಳುವಂತಹದ್ದು ಇದೆ. ಈ ಸಮಾಜದಲ್ಲಿರುವ ಮಕ್ಕಳು ಮತ್ತು ನಾಗರೀಕರಿಗೆ ಸಮಗ್ರವಾಗಿ ಒಳ್ಳೆಯದಾಗಬೇಕು ಎನ್ನುವ ಕಲ್ಪನೆ ಮತ್ತು ಕಾಳಜಿ ಯಾವುದೂ ಇಲ್ಲ. ನಾನು ಮತ್ತೆ ಹಿಂದೆ ಬರಬೇಕು.

**ಸಭಾಪತಿಯವರು:-** ಮಾನ್ಯ ಸಚಿವರೇ, ನಾನು ತಮಗೆ ಸಲಹೆಯನ್ನು ಕೊಡಲೇ, ಈ ಅಧಿವೇಶನ ಮುಗಿದ ನಂತರ, ಎಲ್ಲಾ ಸದಸ್ಯರನ್ನು ಕರೆದು ಒಂದು ಸಭೆ ಮಾಡಿ, ಇದರ ಬಗ್ಗೆ ಚರ್ಚೆ ಮಾಡಿ, ಎಲ್ಲರ ಅಭಿಪ್ರಾಯವನ್ನು ತೆಗೆದುಕೊಂಡು, ಇದರಲ್ಲಿ ಮುಂದೆ ಹೋದರೆ ಒಳ್ಳೆಯದು ಎನ್ನುವುದು ನನ್ನ ಸಲಹೆಯಾಗಿದೆ. ಆ ಕೆಲಸವನ್ನು ಇಬ್ಬರು ಸಚಿವರು ಮಾಡಿ.

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಲಗಿಕೊಂಡವರನ್ನು ಎಬ್ಬಿಸಬಹುದು, ಮಲಗಿಕೊಂಡವರಂತೆ ನಟಿಸುವವರನ್ನು ಎಬ್ಬಿಸುವುದು ಕಷ್ಟ.

**ಸಭಾಪತಿಯವರು:-** ಮಾನ್ಯ ಅರುಣ ಶಹಾಪೂರರವರೇ, ಬೇಡ. ಮತ್ತೆ ನೀವು ಕಡ್ಡಿ ಕೊರೆಯುವುದಕ್ಕೆ ಹೋಗಬೇಡಿ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಗೊಂದಲ)**

**ಶ್ರೀ ಯು.ಬಿ. ವೆಂಕಟೇಶ್ (ನಾಮ ನಿರ್ದೇಶನವನ್ನು ಹೊಂದಿದವರು):-**ಮಾನ್ಯ ಸಭಾಪತಿಯವರೇ, .....

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಯು.ಬಿ.ವೆಂಕಟೇಶ್‌ರವರೇ, ಒಂದು ನಿಮಿಷ. ನಾನು ಹೇಳುತ್ತಿದ್ದೇನೆ. ಇದರ ಬಗ್ಗೆ ತಾವು ಒಂದು ವಿಚಾರ ಮಾಡಿ. ಈ ವಿಷಯದ ಬಗ್ಗೆ ಸಂಜೆ ಐದು ಗಂಟೆ ಐವತ್ತು ನಿಮಿಷಕ್ಕೆ ಚರ್ಚೆಯು ಪ್ರಾರಂಭವಾಗಿದೆ. ನಿಯಮ 330 ರಡಿಯಲ್ಲಿ ಚರ್ಚೆಯಾಗಿರುವ ಬಗ್ಗೆ ಇಷ್ಟೊಂದು ಸಮಯ ತೆಗೆದುಕೊಂಡಿದ್ದು, ಯಾವ ಇತಿಹಾಸದಲ್ಲಿ ನಡೆದಿಲ್ಲ. ನಾನು ಸಲಹೆ ಕೊಡುವುದೇನೆಂದರೆ, ಉನ್ನತ ಶಿಕ್ಷಣ ಸಚಿವರಾದರ ತಾವು ಮತ್ತು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಮತ್ತು ಸದಸ್ಯರೆಲ್ಲರೂ ಸೇರಿಕೊಂಡು ಸಭೆ ಮಾಡುವುದಕ್ಕೆ ದಿನಾಂಕವನ್ನು ನಿಗಧಿ ಮಾಡಿ, ಇದರ ಬಗ್ಗೆ ಚರ್ಚೆ ಮಾಡಿ. Expertsನ್ನು ಕರೆದು ಅಭಿಪ್ರಾಯವನ್ನು ತೆಗೆದುಕೊಳ್ಳಿ. ಆಮೇಲೆ ಮುಂದೆ ಹೋದರೆ ಒಳ್ಳೆಯದಾಗುತ್ತದೆ.

**ಡಾ. ಸಿ.ಎಸ್. ಅಶ್ವಥ ನಾರಾಯಣ:-** ಮಾನ್ಯ ಸಭಾಪತಿಯವರೇ, ನಾನು ತಮ್ಮ ಗಮನಕ್ಕೆ ತರುವುದೇನೆಂದರೆ, ತಾವು ಸಭಾಪತಿಯಾಗುವ ಮುಂಚೆಯೂ, ನಾವೆಲ್ಲ ಸದಸ್ಯರುಗಳು ಈ ರಾಷ್ಟ್ರೀಯ ಶಿಕ್ಷಣ ನೀತಿಯ ಬಗ್ಗೆ ನಿರ್ದಿಷ್ಟವಾಗಿ, ಪದವೀಧರರ ಕ್ಷೇತ್ರ ಮತ್ತು ಶಿಕ್ಷಕರ ಕ್ಷೇತ್ರದಿಂದ ಆಯ್ಕೆಯಾಗಿರುವಂತಹ ಸದಸ್ಯರ ಜೊತೆ ಶಿಕ್ಷಣದ ಬಗ್ಗೆ ಮೂರು ಬಾರಿ ಚರ್ಚೆಗಳನ್ನು ಮಾಡುವಂತಹದ್ದು ಇದೆ. ವಿಶೇಷವಾಗಿ ಈ ಕ್ಷೇತ್ರಗಳಿಂದ ಬಂದಂತಹ ಸದಸ್ಯರ ಜೊತೆ ನಿರ್ದಿಷ್ಟವಾಗಿ ಈ ವಿಷಯದ ಬಗ್ಗೆ ಚರ್ಚೆ ಮಾಡುವಂತಹದ್ದಾಗುತ್ತದೆ. ಇನ್ನು ಉಳಿದಂತೆ, ಈ ಸದನದಲ್ಲಿ ಪ್ರತಿ ಪಕ್ಷದವರು ಪ್ರಶ್ನೆಯನ್ನು ಕೇಳಿರುವ ಬಗ್ಗೆ ಚರ್ಚೆ ಮಾಡಿ, ಗಮನ ಸೆಳೆಯುವಂತಹದ್ದು. ಈ ವಿಷಯದ ಬಗ್ಗೆ ಚರ್ಚೆ ಮಾಡುವ ಅವಕಾಶ ಎಲ್ಲರಿಗೂ ಇದ್ದೇ ಇರುತ್ತದೆ. ವಿಧಾನಸಭೆ ಮತ್ತು ವಿಧಾನ ಪರಿಷತ್‌ನಲ್ಲಿ ಪ್ರತಿ ಪಕ್ಷದ ಸದಸ್ಯರಾಗಲೀ, ಇದರ ಆದ್ಯತೆಯ ಮೇರೆಗೆ ಕೇಳಬೇಕಲ್ಲ ಏನೋ, ಯಾರೋ ಕೇಳುತ್ತಿದ್ದಾರಲ್ಲ ಎಂದು ಕೇಳುತ್ತಿರುವುದು. ಇವತ್ತು ನಾನು ಬಹಳ ಮುಖ್ಯವಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಿ.ಕೆ. ಹರಿಪ್ರಸಾದ್ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, Point of Order.

**ಸಭಾಪತಿಯವರು:-**ಮಾನ್ಯ ಹರಿಪ್ರಸಾದ್‌ರವರೇ, ಒಂದು ನಿಮಿಷ. ತಾವು ಮಾತನಾಡುವಾಗ,

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, No. ಯಾರೋ ಕೇಳಿದರು ಎಂದರೆ ನಾನು ಹೇಳುತ್ತೇನೆ. ಇವರು ಯಾರೋ ನಾಗ್ಪುರದಿಂದ ಹೇಳುತ್ತಿದ್ದಾರೆ. ಅದಕ್ಕೆ ಇವರು ಹೇಳುತ್ತಿದ್ದಾರೆ ಎಂದು ನಾನು ಹೇಳುತ್ತೇನೆ.

**(ಗೊಂದಲ)**

**ಸಭಾಪತಿಯವರು:-** ಒಂದು ನಿಮಿಷ. ನಾನು ಹೇಳುವುದನ್ನು ಕೇಳಿ.

**(ಗೊಂದಲ)**

**ಶ್ರೀ ಎನ್. ರವಿಕುಮಾರ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ....ಅವರು ಹೇಳುತ್ತಿರುವುದು ಸರಿಯಲ್ಲ.

**(ಗೊಂದಲ)**

**ಸಭಾಪತಿಯವರು:-** ನಾನು ಇಲ್ಲಿ ಕುಳಿತಿದ್ದೇನೆ. ಇದರ ಬಗ್ಗೆ ನಾನು ಹೇಳುತ್ತೇನೆ. ದಯವಿಟ್ಟು, ಮಾನ್ಯ ಸದಸ್ಯರೇ ಕುಳಿತುಕೊಳ್ಳಿ. ಮಾನ್ಯ ಮುಖ್ಯಮಂತ್ರಿಗಳು ಮಾತನಾಡುತ್ತಾರೆ.

**(ಗೊಂದಲ)**

**ಶ್ರೀ ಬಸವರಾಜ ಬೊಮ್ಮಾಯಿ (ಮುಖ್ಯಮಂತ್ರಿ):-** ಮಾನ್ಯ ಸಭಾಪತಿಯವರೇ, ಈಗ ಮಾನ್ಯ ಸದಸ್ಯರೆಲ್ಲರೂ ಕೂಡ ಚರ್ಚೆ ಮಾಡಿದ್ದಾರೆ. ಇದಕ್ಕೆ ಮಾನ್ಯ ಸಚಿವರು ಸಮರ್ಪಕವಾದಂತಹ ಉತ್ತರವನ್ನು ಕೊಡುತ್ತಿದ್ದಾರೆ. ಇಡೀ ಜಗತ್ತಿನಲ್ಲಿಯೇ ಶಿಕ್ಷಣ ಅತ್ಯಂತ ಪ್ರಮುಖವಾಗಿರುವ ವಿಷಯವಾಗಿದೆ. ಇದು ಭಾರತಕ್ಕೊಂದೇ ಸೀಮಿತವಲ್ಲ. ಅದು ಭಾರತ ದೇಶದಲ್ಲಿರುವ ಹಲವಾರು ಭಾಷೆ, ಸಂಸ್ಕೃತಿಯಿಂದ ಬಂದಂತಹ ಅವರವರ ಹಿನ್ನೆಲೆಯಲ್ಲಿ ಆಶೋತ್ತರಗಳನ್ನು ಈಡೇರಿಸುವಂತಹ ಕೆಲಸ ಖಂಡಿತವಾಗಿ ಆಗಬೇಕು. ಇವತ್ತು ಕಾಲ ಬದಲಾಗುತ್ತದೆ. ಇದೊಂದು Global Village ಆಗಿದೆ. ಇವತ್ತು ಕರ್ನಾಟಕಲ್ಲಿನ ಒಬ್ಬ ಹಳ್ಳಿಯ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹುಡಗ ಜಗತ್ತಿನ ಬಹಳ ಮುಂದುವರೆದ ರಾಷ್ಟ್ರಗಳ ಮಕ್ಕಳ ಜೊತೆಗೆ ಪೈಪೋಟಿ ಮಾಡುವಂತಹ ಕಾಲ ಬಂದಿದೆ. ನಮ್ಮ ದೇಶದಲ್ಲಿ ಒಂದು NEET Exam ಬರೆಯಬೇಕಾದರೆ, ತುಂಬಾ ಪೈಪೋಟಿ ಇರುವುದರಿಂದ ಮಕ್ಕಳು ತುಂಬಾ ಕಷ್ಟ ಪಡಬೇಕು. ಮೊದಲು ಈ ತರಹ ಇರಲಿಲ್ಲ. ಸಿ.ಇ.ಟಿ. ಪ್ರತಿಯೊಂದು ಪರೀಕ್ಷೆಗಳಲ್ಲಿ ಸ್ಪರ್ಧೆ ಇದೆ. ಆದರೆ ಆ ಸ್ಪರ್ಧೆಯನ್ನು ನಾವು ಒಪ್ಪಿಕೊಂಡಿದ್ದೇವೆ. ಅದಕ್ಕೆ ತಯಾರಿಯನ್ನು ಮಾಡಿಕೊಂಡಿಲ್ಲ. ಅದಕ್ಕೆ ಪೂರ್ಣ ಪ್ರಮಾಣದಲ್ಲಿ ತಯಾರಿಯಾಗಬೇಕು. ಇಷ್ಟು ಅಮೂಲಗ್ರವಾಗಿರುವಂತಹ ವ್ಯವಸ್ಥೆಯಲ್ಲಿ ಏನಾದರೂ ಬದಲಾವಣೆಯಾದಾಗ, ಸಹಜವಾಗಿ ಅದರ ಪರ ಮತ್ತು ವಿರೋಧ್ಗ ವಾದ ಇರುತ್ತದೆ. ಅದು ಸಹಜವಾಗಿರುತ್ತದೆ. Any change there will be lot of deference of opinions naturally. ಹೀಗಿರುವಾಗ, ಈ ಒಂದು ಹೊಸ ಶಿಕ್ಷಣ ನೀತಿ overnight ಬಂದಿಲ್ಲ. ಹಲವಾರು ವರ್ಷಗಳಿಂದ ಬೇರೆ ಬೇರೆ ರೀತಿಯಲ್ಲಿ ಬಂದಿರುವಂತಹದ್ದು. ಇದು ಮತ್ತೆ ಸುದ್ದಿಯಲ್ಲಿ ಇದ್ದೇ ಇದೆ. ಇದರಲ್ಲಿ ಪರ ವಿರೋಧ, Experts ನಲ್ಲಿ ಪರ ವಿರೋಧ ಸಹಜವಾಗಿ ಇರುವಂತಹದ್ದು. ನನ್ನ ಪ್ರಕಾರ ಇಂತಹ ಒಂದು ಬದಲಾವಣೆಯನ್ನು ತರುವುದಕ್ಕೆ ಬಹಳ ದಿನಗಳ ನಂತರ ಶಿಕ್ಷಣಕ್ಕೆ ತರುವಂತಹ ಕೆಲಸವನ್ನು ನಮ್ಮ ನಾಯಕರಾದ ಶ್ರೀ ನರೇಂದ್ರ ಮೋದಿಯವರು ಮಾಡಿದ್ದಾರೆ. ಅದರ ಬಗ್ಗೆ ಅವರಿಗೆ ಗೊತ್ತಿದೆ. ಅಮೂಲಾಗ್ರವಾದ ತಂದಂತಹ ಸಂದರ್ಭದಲ್ಲಿ ಹಲವಾರು ಅಡೆತಡೆಗಳು ಬಂದೇ ಬರುತ್ತದೆ. ಆದರೆ ಈ ಅಡೆತಡೆಗಳನ್ನು ದಾಟಿ, ನಮ್ಮ ಭಾರತ ದೇಶದ ಮಕ್ಕಳಿಗೆ ಒಳ್ಳೆಯ ಭವಿಷ್ಯವನ್ನು ಮಾಡಬೇಕು ಎನ್ನುವ ಸಲುವಾಗಿ ಮಾಡಿದ್ದಾರೆ. ಇದು ವ್ಯಾಪಕವಾಗಿ ಚರ್ಚೆಯಾಗಿದೆ. ನಾನು ಮುಕ್ತವಾಗಿದ್ದೇನೆ ಮತ್ತು ಇದರ ಬಗ್ಗೆ ಇನ್ನಷ್ಟು ಚರ್ಚೆಯಾಗಬೇಕೆಂದು ನಾನು ಕೂಡ ಹೇಳಿದ್ದೇನೆ. ಈಗ ಶಿಕ್ಷಣ ಸಚಿವರು ಒಂದು ಹಂತದವರೆಗೂ ಚರ್ಚೆ ಮಾಡಿದ್ದಾರೆ. ಇನ್ನು ಬೇಕಾದಷ್ಟು ಆಯಾಮಗಳಿವೆ. Lot of dimensions are there. ಇನ್ನು ಚರ್ಚೆಯಾಗಬೇಕಾಗಿದೆ. ನಾವು Task Force ಮಾಡಿ, ಅದರ ಎಲ್ಲಾ ವರದಿಗಳನ್ನು ಕೂಡ ಅವರು ಪಡೆದುಕೊಂಡಿದ್ದಾರೆ. ಇದರ ಮಧ್ಯೆ ಇನ್ನಷ್ಟು ಚರ್ಚೆಯಾಗಬೇಕೆಂದು ತಾವು ಒಂದು ಸಲಹೆಯನ್ನು ಕೊಟ್ಟಿದ್ದೀರಿ. ಇದಕ್ಕೆ ನಮ್ಮ ಸರ್ಕಾರ ಸಿದ್ಧವಿದೆ. ಇದರಲ್ಲಿ ಹಿಂದೇಟು ಹಾಕುವಂತಹ ಯಾವ ವಿಚಾರವೂ ಇಲ್ಲ. ಇದರ ಬಗ್ಗೆ ಚರ್ಚೆಯಾದಷ್ಟು, ಜನರಿಗೆ ಗೊತ್ತಾಗುತ್ತದೆ. ನಮ್ಮ ಸರ್ಕಾರದ ಉದ್ದೇಶ, ನಿಯತ್ತು ಮತ್ತು ನೀತಿ ಬಹಳಷ್ಟು ಸ್ಪಷ್ಟವಾಗಿದೆ. ನಮ್ಮ ಮಕ್ಕಳಿಗೆ ಹಲವಾರು ಶಿಕ್ಷಣವನ್ನು ಕೊಡಬೇಕು. ಅವರಿಗೆ ಮುಕ್ತವಾದಂತಹ ವಾತಾವರಣವನ್ನು ನಿರ್ಮಾಣವಾಗಬೇಕು. Hi-Tech, Hi-skilled education ಅನ್ನು ಪ್ರೈಮರಿಯಿಂದಲೇ ಕೊಟ್ಟು, ನಮ್ಮ ಮಕ್ಕಳನ್ನು ಅಂತರಾಷ್ಟ್ರೀಯ ಪೈಪೋಟಿಗೆ ನಾವು

ಸಿದ್ಧತೆಯನ್ನು ಮಾಡಿಕೊಳ್ಳಬೇಕು. ಇವತ್ತು ಯಾವ ದೇಶ ಶಿಕ್ಷಣಕ್ಕೆ ಬಹಳ ಮಹತ್ವವನ್ನು ಕೊಟ್ಟಿದೆಯೋ ಬಹಳ ಮುಂದುವರೆದಿದೆ. 21ನೇ ಶತಮಾನ ಜ್ಞಾನದ ಶತಮಾನವಾಗಿದೆ. ಇಲ್ಲಿ ಜ್ಞಾನವನ್ನು ಯಾವುದೇ ರೂಪದಲ್ಲಿ ಬಂದರೆ, ಅದನ್ನು ಸ್ವೀಕಾರ ಮಾಡುವಂತಹ ಒಂದು ಕಾಲ ಬಂದಿದೆ. ನಾನು ವಿನಂತಿ ಮಾಡುವುದೇನೆಂದರೆ, ಎರಡೂ ಕಡೆ ಮುಕ್ತವಾಗಿ ಸ್ವೀಕಾರ ಮಾಡೋಣ. ಇದಕ್ಕೆ ಕೆಲವು ಸಲಹೆ ಸೂಚನೆಗಳನ್ನು ಕೊಡಿ. ರಾಷ್ಟ್ರೀಯ ಶಿಕ್ಷಣ ನೀತಿ ಇದ್ದರೂ ಕೂಡ ಅದನ್ನು ಅನುಷ್ಠಾನ ಮಾಡುವುದಕ್ಕೆ ಸಾಕಷ್ಟು ಅವಕಾಶಗಳು. ಇಲ್ಲಿ ಕೆಲವು ಅನುಷ್ಠಾನ ಮಾಡುವಾಗ, ಕೆಲವು ಬದಲಾವಣೆಗಳು ತರುವಂತಹ ಎಲ್ಲವೂ ಕೂಡ ಬೇಕಾದಷ್ಟು ಇದೆ. ಆದ್ದರಿಂದ ಆ ನಿಟ್ಟಿನಲ್ಲಿ ನಾವು ಮುಕ್ತವಾಗಿ ಚರ್ಚೆ ಮಾಡುವುದಕ್ಕೆ ಸಿದ್ಧರಿದ್ದೇವೆ. ಆ ರೀತಿ ಮಾಡಿದರೆ ನನಗೆ ಒಳ್ಳೆಯದು ಅನಿಸುತ್ತದೆ.

**ಡಾ. ಸಿ.ಎಸ್. ಅಶ್ವಥ ನಾರಾಯಣ:-** ಮಾನ್ಯ ಸಭಾಪತಿಯವರೇ, ಈ ಒಂದು ಡ್ರಾಫ್ಟ್ ಸಹ 22 ಭಾಷೆಗಳು ...

**ಶ್ರೀ ಬಿ.ಕೆ. ಹರಿಪ್ರಸಾದ್:-** ಇದರ ಬಗ್ಗೆ ಮುಕ್ತವಾಗಿ ಚರ್ಚೆ ಮಾಡುವುದಕ್ಕೆ ಸಿದ್ಧ ಎಂದು ಮಾನ್ಯ ಮುಖ್ಯಮಂತ್ರಿಗಳು ಸ್ಪಷ್ಟವಾಗಿ ಹೇಳಿದ್ದಾರೆ. Silver line in the dark clouds ಎನ್ನುವ ಹಾಗೆ, ದಯವಿಟ್ಟು, ಅದಕ್ಕೆ ಅವಕಾಶ ಮಾಡಿಕೊಡಿ.

**ಸಭಾಪತಿಯವರು:-** ಈಗ ಚರ್ಚೆ ಮಾಡುವುದು ಬೇಡ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಅವರು ಹೇಳಿರುವ ಹಾಗೇ Teachers' Constituency, Graduates' Constituency. ಹಾಗಾದರೆ, ಬಾಕಿ ನಾವೇನೂ ಸದಸ್ಯರಲ್ಲವೇ? ನಮಗೇನೂ ಜವಾಬ್ದಾರಿ ಇಲ್ಲವೇ? ಇದನ್ನು ತಾವು ಹೇಳಿದ್ದಲ್ಲ. ಈಗತಾನೇ ಶಿಕ್ಷಣ ಸಚಿವರು ಹೇಳಿರುವಂತಹದ್ದು. ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಮುಕ್ತವಾಗಿ ಚರ್ಚೆಯಾಗಬೇಕೆಂದು ಹೇಳಿರುವುದರಿಂದ, ದಯವಿಟ್ಟು, ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಿ. ಇಲ್ಲಿಗೆ ಚರ್ಚೆ ನಿಲ್ಲಿಸಿ. ಇಲ್ಲವೆಂದರೆ, ಕಠಿಣವಾಗುತ್ತಿರುತ್ತದೆ. ಅವರು ಹೇಳುತ್ತಿರುವುದನ್ನು contradict ಮಾಡಬೇಕಾಗುತ್ತದೆ. ನಾನು ಕೂಡ clarification ಕೇಳಬೇಕಾಗುತ್ತದೆ.

**ಸಭಾಪತಿಯವರು:-** ಮಾನ್ಯ ಮುಖ್ಯಮಂತ್ರಿಗಳು ಈಗ ಚರ್ಚೆ ಮಾಡಬೇಕೆಂದು ಹೇಳಲಿಲ್ಲ. ತದನಂತರ ಕರೆದು ತೀರ್ಮಾನ ಮಾಡಿ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಅದರ ಬಗ್ಗೆ ತೀರ್ಮಾನ ಮಾಡಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ನಾನು ಹೇಳಿರುವ ಬಗ್ಗೆ ಚರ್ಚೆ ಮಾಡಿ.

**ಶ್ರೀ ಬಸವರಾಜ ಬೊಮ್ಮಾಯಿ :-** ಮಾನ್ಯ ಸಚಿವರೇ, ಒಂದು ಕೆಲಸ ಮಾಡಿ. ಕೆಲವು ಪ್ರಮುಖವಾದಂತಹ ನಾಲ್ಕೈದು ಅಂಶಗಳನ್ನು ಹೇಳಿ ಮುಗಿಸಿ. ಇನ್ನುಳಿದ ಅಂಶಗಳನ್ನು ಮುಂದಿನ ಸಭೆಯಲ್ಲಿ ತೆಗೆದುಕೊಳ್ಳೋಣ.

(ಮುಂದು)

(976) 23.09.2021, 8.10, ಟಿಸಿಹೆಚ್-ವಿಕೆ **(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ಈ ನಾಡಿನ ದೊರೆಗಳು. ಶಿಕ್ಷಣದ ಬಗ್ಗೆ ಅಪಾರವಾದ ಕಾಳಜಿವುಳ್ಳವರು. ಮಾನ್ಯ ಸಭಾಪತಿಯವರ ಸಲಹೆ ಮೇರೆಗೆ ಮಾನ್ಯ ಮುಖ್ಯಮಂತ್ರಿಗಳೇ ಈಗ ಚರ್ಚೆಗೆ ಮುಕ್ತವಾದ ಅವಕಾಶವನ್ನು ಕೊಡುತ್ತೇವೆಂದು ಹೇಳಿದ್ದಾರೆ. ದಯಮಾಡಿ ಈಗ ಸಮಯ ವ್ಯರ್ಥ ಮಾಡುವುದು ಬೇಡ. ದಯವಿಟ್ಟು ಯಾವೊತ್ತಾದರೂ ಒಂದು ದಿನ ನಿಗದಿಪಡಿಸಿ, ಅದರ ಬಗ್ಗೆ ಚರ್ಚೆ ಮಾಡೋಣ. ದಯವಿಟ್ಟು ಈಗ ಮುಂದಕ್ಕೆ ಹೋಗೋಣ. ಈಗ ಮಾನ್ಯ ಮುಖ್ಯಮಂತ್ರಿಗಳು ಅದರ ಬಗ್ಗೆ ಮಾತನಾಡಿದ್ದಕ್ಕೆ ನಾವು ಬಹಳ ಸ್ವಾಗತ ಮಾಡುತ್ತೇವೆ. ಮಾನ್ಯ ಮುಖ್ಯಮಂತ್ರಿಗಳು ಈ ಸದನದ ಮುಂದೆ ಬಹಳ ಒಳ್ಳೆಯ ಅಭಿಪ್ರಾಯವನ್ನು ಇಟ್ಟಿದ್ದಾರೆ.

**ಡಾ.ಸಿ.ಎಸ್.ಅಶ್ವಥ್‌ನಾರಾಯಣ:-** ಮಾನ್ಯ ಸಭಾಪತಿಯವರೇ, ನಾವು ಮಾನ್ಯ ಮರಿತಿಬ್ಬೇಗೌಡ ಮತ್ತು ಮಾನ್ಯ ಕೆ.ಟಿ.ಶ್ರೀಕಂಠೇಗೌಡ ರಷ್ಟು education ನಲ್ಲಿ expert ಅಲ್ಲ. ಅವರು ಪ್ರೊಫೆಸರ್ ಆಗಿದ್ದಂಥವರು ಮತ್ತು ಅದೇ ಕ್ಷೇತ್ರದಿಂದ ಗೆದ್ದು ಬಂದಿರತಕ್ಕಂಥವರು.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ನಾನು ಏನೂ ಹೇಳುವುದಕ್ಕೆ ಅವಕಾಶ ಸಿಕ್ಕಿಲ್ಲ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ನಾನು ಒಬ್ಬ ಈ ಗೌರವಾನ್ವಿತ ಸಭೆಯ ಸದಸ್ಯನಿದ್ದೇನೆ. ನನಗೆ ಎಲ್ಲಾ ಹಕ್ಕಿದೆ ಮಾತನಾಡುತ್ತೇನೆ. Individual ಆಗಿ ಅದು, ಇದು ಎಂದು ಹೇಳುವುದು ಬೇಡ. ನಾವೂ ಕೂಡ ಹೇಳಬೇಕಾಗುತ್ತದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ಮಾನ್ಯ ಬಿ.ಕೆ.ಹರಿಪ್ರಸಾದ್‌ರವರೇ, ಮಾತನಾಡಬಹುದು ಏನೂ ತಪ್ಪಿಲ್ಲ. ಅದರ ಬಗ್ಗೆ ಯಾರದ್ದು ತಕರಾರು ಇಲ್ಲ. ಮಾನ್ಯ ಅಶ್ವಥ್‌ನಾರಾಯಣ್‌ರವರೇ, ತಾವು ಈಗ ಮುಗಿಸಿ. ನಾನು ಹೇಳಿದಂತೆ ಒಂದು ಸಭೆ ಮಾಡಿ. ನೀವು ೭೫ ಸದಸ್ಯರಿಗೂ ಕಳುಹಿಸಿ ಕೊಡಿ. ಚರ್ಚೆ ಮಾಡಿದ ನಂತರ ತೀರ್ಮಾನ ತೆಗೆದುಕೊಳ್ಳೋಣ.

**ಡಾ.ಸಿ.ಎಸ್.ಅಶ್ವಥ್‌ನಾರಾಯಣ:-** ಮಾನ್ಯ ಸಭಾಪತಿಯವರೇ, ನಾನು ಒಂದೇ ಒಂದು statement ಮಾಡಿ ಮುಗಿಸಿಬಿಡುತ್ತೇನೆ.

**ಶ್ರೀ ಬಸವರಾಜ ಬೊಮ್ಮಾಯಿ (ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೇ, ನಾನು education ಚರ್ಚೆ ಬಗ್ಗೆ ಹೇಳಿದೆನು. ತಾವೇನು ಸಲಹೆಯನ್ನು ಕೊಟ್ಟಿದ್ದೀರೋ ಅದನ್ನೇ ನಾನು ಹೇಳುವುದು. ಎಲ್ಲಾ ಮಾನ್ಯ ಸದಸ್ಯರನ್ನು ಕರೆದು ಚರ್ಚೆ ಮಾಡುತ್ತೇನೆ ಎಂದಷ್ಟೇ ಹೇಳಿದ್ದೇನೆ. ಈಗ ಮಾನ್ಯ ಉನ್ನತ ಶಿಕ್ಷಣ ಸಚಿವರು conclude ಮಾಡಲು ಹೇಳಿ.

**ಡಾ.ಸಿ.ಎಸ್.ಅಶ್ವಥ್‌ನಾರಾಯಣ:-** ಮಾನ್ಯ ಸಭಾಪತಿಯವರೇ, ನಾನು ಏಕೆ ಈ ವಿಚಾರವನ್ನು ಹೇಳುತ್ತಿದ್ದೇನೆಂದರೆ, ಇಲ್ಲೇ ಸನ್ಮಾನ್ಯ ಮುಖ್ಯಮಂತ್ರಿಗಳು ಇದ್ದಾರೆ. ಇವತ್ತು ನಾವು ಇಲ್ಲಿ ಕುಳಿತುಕೊಂಡಿರತಕ್ಕಂಥವರು ಯಾವ ಹಿನ್ನೆಲೆಯಲ್ಲಿ ಬಂದಿದ್ದೇವೆಂದು ಎಲ್ಲರಿಗೂ ಗೊತ್ತಿದೆ. ಇವತ್ತು ನಾವು ಸದೃಢರಾಗಿ ಉತ್ತಮವಾದ ತಿಳುವಳಿಕೆ, ಜ್ಞಾನ ಎಲ್ಲವನ್ನೂ ಪಡೆದುಕೊಂಡು ನಮ್ಮ ಕಾಲಿನ ಮೇಲೆ ನಿಂತುಕೊಂಡು ಇಲ್ಲಿಗೆ ಬಂದಿದ್ದೇವೆ. ನಾವು ಇಲ್ಲಿಗೆ ಬರುವುದಕ್ಕೆ ಏನು ಕಾರಣವೆಂದು ನಮಗೆಲ್ಲಾ ಗೊತ್ತಿದೆ ಅಲ್ಲವೇ? ಹಾಗಾಗಿ ನಮ್ಮ ಸಮಾಜಕ್ಕೆ ಏನು ಮಾಡಿದರೆ ಒಳ್ಳೆಯದು ಆಗುತ್ತದೆಂದು ಗೊತ್ತಿದ್ದೂ ಕೂಡ; ಶಿಕ್ಷಣ, ಕೌಶಲ್ಯತೆ ಹಾಗೂ ಮೌಲ್ಯಗಳಿಗೆ ಆದ್ಯತೆಯನ್ನು ಕೊಡದೇ ಬರೀ ಎಲ್ಲಾ development ಎಂದರೆ ಏನು ಎನ್ನುವುದೇ ಗೊತ್ತಿಲ್ಲವಲ್ಲ. ಇಲ್ಲಿ what is development ಎನ್ನುವುದೇ define ಆಗಿಲ್ಲ. ನನಗೆ ನಿಜಕ್ಕೂ ದುಃಖವಾಗುತ್ತಿದೆ. ಇವತ್ತಿನ ದಿವಸ ಯಾವುದೇ ಸಮಾಜದಲ್ಲಿ development ಎಂದರೇನು ಎಂದು ಅರ್ಥಮಾಡಿಕೊಳ್ಳದೇ ಸಮಾಜವನ್ನು ಕಟ್ಟುವುದಕ್ಕೆ ಹೋಗುತ್ತಿದ್ದೇವೆ. ಇವತ್ತು ನಮಗೆ ಬರುವಂಥ ಗ್ರ್ಯಾಂಟ್ ಒಂದು ರೋಡ್ ಇದ್ದರೂ ಕೂಡ ಬೇರೆ ಯಾವುದೋ ಮಾಡಿಕೊಳ್ಳುವಂಥದ್ದು ಆಗುತ್ತಿದೆ. ನಮ್ಮ ಶಾಲೆ, ನಮ್ಮ ಸಮಾಜಕ್ಕೆ ಉತ್ತಮವಾದಂಥ ಶಿಕ್ಷಣವನ್ನು ಕೊಡುವುದಕ್ಕೆ ನಾವು ಇಷ್ಟೇ ಖರ್ಚು ಮಾಡುತ್ತೇವೆ. ನಾವು ಪಡೆದುಕೊಳ್ಳುತ್ತೇವೆ. ಸಮಗ್ರವಾಗಿ ಚರ್ಚೆ ಮಾಡುತ್ತೇವೆ. ಈ ಸದನ ಪ್ರಾರಂಭವಾದಾಗ ಶಿಕ್ಷಣ ತೆಗೆದುಕೊಳ್ಳುತ್ತೇವೆಂದು ಯಾರು ಮುಂದೆ ಬಂದರು? ಇವತ್ತಿನ ದಿವಸ ಮೂಲಕ್ಕೆ ಯಾರು ಹೋಗುತ್ತಿದ್ದಾರೆ. ನಾವು ಸಮಾನತೆ ಕಾಣಬೇಕಾದರೆ ಎಲ್ಲಿಂದ ಕಾಣುವಂಥದ್ದು ಆಗುತ್ತದೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಾನು ಈಗಲೂ ಕೂಡ ಮಾನ್ಯ ಶ್ರೀಕಂಠೇಗೌಡರವರಿಗೆ ಅಲ್ಲಿ, ಇಲ್ಲಿ hit and run ಆಗುತ್ತಿದೆ, ಸಮಗ್ರವಾದ ಶಿಕ್ಷಣದಲ್ಲಿ ಸಮಸ್ಯೆ ಏನು ಎಂದು ಚರ್ಚೆಯಾಗುತ್ತಿಲ್ಲ ಎಂದು ಹೇಳಿದೆನು. ಬಿಗಿಯಾದ ಚರ್ಚೆ ಮಾಡಿ ಏನೇನು ಮಾಡಿದರೆ ಒಳ್ಳೆಯದಾಗುತ್ತದೆಂದು ಹೇಳುವಂಥ ಪ್ರಯತ್ನವೇ ಆಗುತ್ತಿಲ್ಲ. ನಾನು ಮಾನ್ಯ ಸಭಾಪತಿಯವರ ಹತ್ತಿರವೇ ಕೇಳುತ್ತಿದ್ದೇನೆ. ಇವತ್ತಿನ ದಿವಸ ನೀವು ಜನರ ಪ್ರತಿನಿಧಿಯಾಗಿ ವಿರೋಧ ಪಕ್ಷದಲ್ಲಿ ಬಂದಿದ್ದೀರಿ. ಸರ್ಕಾರದಲ್ಲಿ ನಾವು ಮಾಡುವಂಥದ್ದನ್ನು ಗಮನಸೆಳೆದು ಏನು ಮಾಡಬೇಕೆಂದು ಒತ್ತಾಯ ಮಾಡುವಂಥದ್ದು ತಮ್ಮ ಕಡೆಯಿಂದಲೂ ಕೂಡ ಆಗುತ್ತಿಲ್ಲ. ನೀವು ಅದನ್ನು ಮಾಡುತ್ತಲೇ ಇಲ್ಲ. ಹಾಗಾಗಿ, ಅದನ್ನು ಮಾಡಿ. ಇವತ್ತು ಚರ್ಚೆ ಸುಮ್ಮನೆ ನೆಪ ಮಾತ್ರಕ್ಕೆ ಆಗುವುದಲ್ಲ.

**ಶ್ರೀ ಯು.ಬಿ.ವೆಂಕಟೇಶ್:-** ಈಗ ಏನು ಮಾಡಬೇಕು ಹೇಳಿ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ತಾರೀಖು ೧೪ ರಂದು ಈ ಕುರಿತು ಚರ್ಚೆಗೆ ತೆಗೆದುಕೊಳ್ಳುತ್ತೇವೆಂದು ಹೇಳಿದ್ದೀರಿ. ಆಮೇಲೆ ಬುಧವಾರ ಮಾಡುತ್ತೇವೆಂದು ಹೇಳಿದ್ದೀರಿ. ಆಗಲೂ ಆಗಲಿಲ್ಲ. ಶುಕ್ರವಾರವೂ ಆಗಲಿಲ್ಲ. ನಾವು ಇವತ್ತು ತಂದಿದ್ದೇವೆಂದು ಹೇಳುತ್ತಿದ್ದೀರಿ. ಕಳೆದ ಬಾರಿ ತ್ರಿಭಾಷಾ ಸೂತ್ರದಲ್ಲಿ ಮಾತನಾಡಿದಾಗ ಅರ್ಧದಲ್ಲೇ ನಿಂತು ಹೋಯಿತು. ಆಗ ನಾವೇನು ತಯಾರಿರಲಿಲ್ಲ ಅಂದುಕೊಂಡುಬಿಟ್ಟಿದ್ದೀರೇನು?

**ಡಾ.ಅಶ್ವಥ್‌ನಾರಾಯಣ:-** ಮಾನ್ಯ ಸಭಾಪತಿಯವರೇ, ಅವರ ಚರ್ಚೆಯಾಗಲೇಬೇಕು ಎಂದು ಒತ್ತಾಯ ಮಾಡಲೇ ಇಲ್ಲ. ಇವತ್ತಿನ ದಿವಸ ನಾವು ನಿಜಕ್ಕೂ ಸಮಾಜದಲ್ಲಿ represent ಮಾಡತಕ್ಕಂಥವರು. ನಾವು ಇಡೀ ಸಮಾಜವನ್ನು ಪ್ರತಿನಿಧಿಸತಕ್ಕಂಥವರು. ಅವರ ದುರಂತವೋ, ಅವರ ಭಾಗ್ಯವೋ ಗೊತ್ತಿಲ್ಲ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ವಿಧಾನಸಭೆ ಅಧಿವೇಶನ ಬೇಡ. ಇನ್ನೂ ಮೂರು ದಿನ ವಿಧಾನ ಪರಿಷತ್‌ನ ಅಧಿವೇಶನ ನಡೆಸೋಣ.

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಉನ್ನತ ಶಿಕ್ಷಣ ಸಚಿವರು ವಿರೋಪಕ್ಷದವರು ಕೇಳಬೇಕಾಗಿದ್ದನ್ನು ಕೇಳುತ್ತಿಲ್ಲ ಎಂದು ಹೇಳುವುದು ಸರಿಯೇ. ಇದು ಅವರಿಗೆ ಭೂಷಣವೇ?

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಡಾ.ಅಶ್ವಥ್‌ನಾರಾಯಣ:-** ಮಾನ್ಯ ಸಭಾಪತಿಯವರೇ, ಮಾನ್ಯ ಎಸ್.ಆರ್.ಪಾಟೀಲ್‌ರವರೇ ನಿಮಗೆ ಖುಷಿ ಆಗುತ್ತಿದೆ ಎಂದುಕೊಂಡೆನು. ತಾವು ಹಿರಿಯರು ಇದ್ದೀರಿ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಇಷ್ಟು ಚರ್ಚೆಯಾಗಿದೆ. ಇದಕ್ಕೆ ಚರ್ಚೆಗೆ ಸಮಯವಿಲ್ಲ. ಗೌರವಾನ್ವಿತ ಮುಖ್ಯಮಂತ್ರಿಗಳು ಇದರ ಬಗ್ಗೆ ಸರಿಯಾಗಿ ಚರ್ಚೆಯಾಗಬೇಕು. ನಾವು ಚರ್ಚೆಗೆ ತಯಾರಿದ್ದೇವೆ. ಇದಕ್ಕೆ ಒಂದು ದಿನಾಂಕವನ್ನು ಫಿಕ್ಸ್ ಮಾಡೋಣವೆಂದು ಹೇಳಿದರು. ಆದರೆ ಉನ್ನತ ಶಿಕ್ಷಣ ಸಚಿವರು ಏನು ಹೇಳಿದರೆಂದರೆ, ವಿರೋಧ ಪಕ್ಷದವರು ಮಾಡುವಂಥ ಕರ್ತವ್ಯವನ್ನು ಮಾಡುವುದಿಲ್ಲ ಎಂದು ಈ ರೀತಿ ಅಪಾದನೆ ಮಾಡುವುದು ಸರಿಯಲ್ಲ. We are ready. ನೀವು ಎಷ್ಟು ದಿವಸ ಚರ್ಚೆ ಮಾಡುತ್ತೀರೋ ಮಾಡಿ.

**ಡಾ.ಅಶ್ವಥ್‌ನಾರಾಯಣ:-** ಮಾನ್ಯ ಸಭಾಪತಿಯವರೇ, ಈಗ ನನ್ನ ಒತ್ತಾಯಕ್ಕೆ ಮಾಡುವುದಲ್ಲ. ನೀವು ಹಿರಿಯರು ಮೊದಲೇ ಮಾಡಬೇಕಿತ್ತು ಎಂದು ಹೇಳುತ್ತಿದ್ದೇನೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ನಿಯಮ ೩೩೦ ರಡಿಯಲ್ಲಿ ನಾವು move ಮಾಡಿದ್ದೇವೆ. ಅದನ್ನು ನಿಮ್ಮ ಒತ್ತಾಯಕ್ಕೆ move ಮಾಡಿರುವುದಲ್ಲ. ನೀವು ಅದಕ್ಕೆ ಉತ್ತರ ಕೊಡುತ್ತೀರಿ ಅಷ್ಟೇ.

**ಡಾ.ಅಶ್ವಥ್‌ನಾರಾಯಣ:-** ಮಾನ್ಯ ಸಭಾಪತಿಯವರೇ, ಯಾವ ಆದ್ಯತೆ ಕೊಡಬೇಕಾಗಿತ್ತೋ. . . ಎಸ್.ಆರ್.ಪಾಟೀಲ್‌ರವರೆ ಓಕೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಮಾನ್ಯ ಉನ್ನತ ಶಿಕ್ಷಣ ಸಚಿವರು ಆ ರೀತಿ ಹಗುರವಾಗಿ ಮಾತನಾಡಬಾರದು.

**ಡಾ.ತೇಜಸ್ವಿನಿಗೌಡ:-** ಮಾನ್ಯ ಸಭಾಪತಿಯವರೇ, ಈಗಾಗಲೇ ಮಾನ್ಯ ಮುಖ್ಯಮಂತ್ರಿಯವರು ಮುಕ್ತವಾಗಿ ಹೇಳಿದ್ದಾರೆ.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ಈಗ Finance Bill pass ಮಾಡಿಕೊಡಿ. ಆಮೇಲೆ ಅವರು ಮುಂದುವರೆಸಲಿ.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಈಗ ಸದನದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳು ಇದ್ದಾರೆ, ಅವರ Finance Bill pass ಮಾಡಿಕೊಡಿ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅವರು ಹೋಗಲಿ. ಏಕೆಂದರೆ, ಎಷ್ಟು ಹೊತ್ತಾದರೂ ಕೂಡ ನಾವು ಇದರ ಬಗ್ಗೆ ಮಾತನಾಡಬೇಕು.

**ಸಭಾಪತಿಯವರು:-** ಆಯಿತು.

**15. ವಿತ್ತೀಯ ಕಾರ್ಯಕಲಾಪಗಳು**

**2021-22ನೇ ಸಾಲಿನ ಪೂರಕ ಅಂದಾಜುಗಳು-ಮೊದಲನೇ ಕಂತಿನ ಬೇಡಿಕೆಗಳ ಪ್ರಸ್ತಾವನೆಗಳು**

**ಶ್ರೀ ಬಸವರಾಜ ಬೊಮ್ಮಾಯಿ (ಮುಖ್ಯಮಂತ್ರಿಗಳು ಹಾಗೂ ಹಣಕಾಸು ಸಚಿವರು):-** ಮಾನ್ಯ ಸಭಾಪತಿಯವರೇ, "2021-22ನೇ ಸಾಲಿನ ಪೂರಕ ಅಂದಾಜುಗಳ ಮೊದಲನೇ ಕಂತನ್ನು ಮಂಡಿಸುತ್ತಿದ್ದೇನೆ.

**ಸಭಾಪತಿಯವರು:-** ಮಂಡಿಸಲಾಯಿತು.

**16. ಶಾಸನ ರಚನೆ**

ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ

**ಆ) ಕರ್ನಾಟಕ ಧನ ವಿನಿಯೋಗ (ಸಂಖ್ಯೆ:3) ವಿಧೇಯಕ, 2021**

ಪರ್ಯಾಲೋಚನಾ ಪ್ರಸ್ತಾವ

**ಶ್ರೀ ಬಸವರಾಜ ಬೊಮ್ಮಾಯಿ (ಮುಖ್ಯಮಂತ್ರಿಗಳು ಹಾಗೂ ಹಣಕಾಸು ಸಚಿವರು):-** ಮಾನ್ಯ ಸಭಾಪತಿಯವರೇ, " 2021ರ ಕರ್ನಾಟಕ ಧನ ವಿನಿಯೋಗ (ಸಂಖ್ಯೆ.3) ವಿಧೇಯಕ" ವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**ಸಭಾಪತಿಯವರು:-** ಮಂಡಿಸಲಾಯಿತು.

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, 2021ನೇ ಸಾಲಿನ ಮೊದಲನೆಯ ಪೂರಕ ಅಂದಾಜುಗಳನ್ನು ಮಂಡಿಸಿದ್ದೇನೆ. ಇದು ಭಾರತ ಸಂವಿಧಾನದ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

205ನೇ (1) (ಎ)ನೇ ಅನುಚ್ಛೇದದ ಪ್ರಕಾರ ಇದಕ್ಕೆ ಅವಕಾಶವಿದೆ. ಈ ವರ್ಷ ಒಟ್ಟು ರೂ.10,265 ಕೋಟಿಗಳ ಪೂರಕ ಅಂದಾಜು ಮಂಡಿಸಿದ್ದೇವೆ. ಅದರಲ್ಲಿ ರೂ.8728 ಕೋಟಿಗಳು ರಾಜಸ್ವ ಖಾತೆಯಿಂದ ಮತ್ತು ಬಂಡವಾಳ ಖಾತೆಯಿಂದ ರೂ.1536 ಕೋಟಿಗಳನ್ನು ನಾವು ಮಂಡಿಸಿದ್ದೇವೆ. ಒಟ್ಟು ನಿವ್ವಳ ಹೊರಹರಿವು ಅಂದರೆ cash outflow, ಇದು ರೂ.6367 ಕೋಟಿಗಳು ಆಗಿರುತ್ತದೆ. ಇದು ಆಯವ್ಯಯ ಗಾತ್ರದ ಒಟ್ಟು ಶೇ.4.16 ರಷ್ಟು ಇರುತ್ತದೆ. ಇದು ಈ ವರ್ಷದ ಪೂರಕ ಅಂದಾಜುಗಳ ಮೊದಲನೆಯ ಕಂತು. ಇದರಲ್ಲಿ ಮುಖ್ಯವಾಗಿ ಒಟ್ಟು ರೂ.10,675 ಕೋಟಿಗಳು ಮಂಡಿಸಿದ್ದರೂ ಕೂಡ ,ಭಾರತ ಸರ್ಕಾರದಿಂದ ನಮಗೆ Central Sponsored Scheme and NDRF (National Disaster Response Fund) ಇವೆಲ್ಲಾ ಸೇರಿ ರೂ. 3898 ಕೋಟಿಗಳು ಬರುತ್ತದೆ. ಹೀಗಾಗಿ, Net outflow ರೂ. 6367 ಕೋಟಿಗಳಾಗುತ್ತದೆ. ಇದರಲ್ಲಿ ಪ್ರಮುಖವಾದ expenditure ಇರುವಂಥದ್ದು. ಜಲಜೀವನ್ ಮಿಷನ್‌ಗೆ ರೂ.1,000 ಕೋಟಿಗಳು, ನಮ್ಮ Food and Civil Supplies ಗೆ ರೂ.1,700 ಕೋಟಿಗಳು, ಕೋವಿಡ್-19 ಮತ್ತೆ ಇತರೆ ರೂ.3,300 ಕೋಟಿಗಳು. ಒಟ್ಟು ರೂ. 6,367 ಕೋಟಿಯಲ್ಲಿ, ಇವತ್ತಿನ ದಿವಸ ರೂ.6,000 ಕೋಟಿಗಳನ್ನು ಈ ಮೂರು ಇಲಾಖೆಗಳಿಗೆ ನಾವು ವಿಶೇಷವಾಗಿ ಖರ್ಚು ಮಾಡಿದ್ದೇವೆ. ಮಾನ್ಯ ಸಭಾಪತಿಯವರೇ, ಪೂರಕ ಅಂದಾಜುಗಳನ್ನು ಯಾವ ರೀತಿ ಹೊಂದಿಸಿಕೊಳ್ಳುತ್ತೇವೆಂದರೆ, ಕೇಂದ್ರ ಸರ್ಕಾರದ ಜಿಎಸ್‌ಟಿ ಮರು ಪಾವತಿಗಾಗಿ ಆಯವ್ಯಯದಲ್ಲಿ ರೂ.12,708 ಕೋಟಿಗಳನ್ನು GST compensation ಸಿಗುತ್ತದೆಂದು ನಾವು ಅಂದಾಜು ಮಾಡಿದ್ದೇವೆ. ಆದರೆ ಈ ವರ್ಷ ಕೇಂದ್ರ ಸರ್ಕಾರವು ನಮಗೆ ಜಿಎಸ್‌ಟಿ ಮರು ಪಾವತಿಯಲ್ಲಿ ರೂ.18,109 ಕೋಟಿಗಳ ಮೊತ್ತವನ್ನು ನೀಡುವುದಾಗಿ ತಿಳಿಸಿದ್ದಾರೆ. ಹಾಗಾಗಿ, ಸುಮಾರು ರೂ.6,000 ಕೋಟಿಗಳ GST compensation ನಲ್ಲಿ ಇವತ್ತಿನ ದಿವಸ ರೂ.12,708 ಕೋಟಿಗಳ ಬದಲು ರೂ.18,109 ಕೋಟಿಗಳು ನಮಗೆ ಅನುಕೂಲವಾಗಿದೆ. ಈಗಾಗಲೇ ರೂ.8542 ಕೋಟಿಗಳು ಜಿಎಸ್‌ಟಿ ಹಣ ನಮಗೆ ಬಿಡುಗಡೆಯಾಗಿದೆ. ಈ ಹಿನ್ನೆಲೆಯಲ್ಲಿ ನಾವು ಪೂರಕ ಅಂದಾಜಿನಲ್ಲಿ ಒಟ್ಟು ರೂ.6367 ಕೋಟಿಗಳನ್ನು ಹೊಂದಿಸುತ್ತಿದ್ದೇವೆ.

**(ಮುಂದು...)**

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(977)23.9.2021/8.20/ಎಂ.ಎಂ-ವಿ.ಕೆ**

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಬಸವರಾಜ ಬೊಮ್ಮಾಯಿ [ಮುಂದು]:-**

ಇದು ಮುಖ್ಯವಾಗಿ ನಾವು ಖರ್ಚು ಮಾಡಿರುವಂತಹದ್ದನ್ನು ನಾವು ಹೇಳಿದ್ದೇವೆ. ಅದಾದ ಮೇಲೆ ಬೇರೆ ಬೇರೆ ಇಲಾಖೆ ಕೂಡ ಇದೆ. ಉದಾಹರಣೆಗೆ 15ನೇ ಹಣಕಾಸಿನ ಅನುದಾನ ನಗರ ಸ್ಥಳೀಯ ಸಂಸ್ಥೆಗಳಿಗೆ 139 ಕೋಟಿ ರೂಪಾಯಿ, ಶಾಸಕರ ಕ್ಷೇಮಾಭಿವೃದ್ಧಿ ನಿಧಿಗೆ 127 ಕೋಟಿ ರೂಪಾಯಿ, ಚಿಕ್ಕಮಗಳೂರು, ಹಾವೇರಿ, ಯಾದಗಿರಿ ರೆಫರಲ್ ಆಸ್ಪತ್ರೆ, ಹೊಸ ವೈದ್ಯಕೀಯ ಕಾಲೇಜು 124 ಕೋಟಿ ರೂಪಾಯಿ ಹಾಗೂ ಪೌರ ಕಾರ್ಮಿಕರ ವೇತನ ಕೊಟ್ಟಿದ್ದೇವೆ, ಕೆ.ಎಸ್.ಆರ್.ಟಿ.ಸಿ ವೇತನವನ್ನು ಕೂಡ ಕೊಟ್ಟಿದ್ದೇವೆ. ಈ ಎಲ್ಲಾ ಖರ್ಚುಗಳಲ್ಲಿ ಒಟ್ಟು ರೂ. 10,265/- ಕೋಟಿ ರೂಪಾಯಿಗಳ ಪೂರಕ ಅಂದಾಜನ್ನು ನಾನು ಮಂಡಿಸುತ್ತಿದ್ದೇನೆ.

**ಶ್ರೀ ಕೆ.ಎ. ತಿಪ್ಪೇಸ್ವಾಮಿ (ನಾಮ ನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಮಾನ್ಯ ಮುಖ್ಯಮಂತ್ರಿಗಳು ರೂ. 10,26,533.15 ಲಕ್ಷ ರೂಪಾಯಿಗಳ [ಹತ್ತು ಸಾವಿರದ ಇನ್ನೂರ ಅರವತ್ತೈದು ಕೋಟಿ ಮೂವತ್ಮೂರು ಲಕ್ಷ ಹದಿನೈದು ಸಾವಿರ ರೂಪಾಯಿಗಳು] ಅಧಿಕ ಮೊತ್ತವನ್ನು ಕೇಳಿದ್ದಾರೆ. ಇದು ಸದ್ಯದಲ್ಲಿ ಆಯವ್ಯಯದಲ್ಲಿ ಏನು ಅಳವಡಿಸಿರುವಂತಹ, ಪ್ರಚಲಿತದಲ್ಲಿರುವಂತಹ, ಅನುಷ್ಠಾನದಲ್ಲಿರುವಂತಹ ಕಾಮಗಾರಿಗಳಿಗೆ ಸಂಬಂಧಪಟ್ಟಿದ್ದಾ ಅಥವಾ ಬೇರೆ ಬೇರೆ ಇಲಾಖೆಗಳಲ್ಲಿ ಆಡಳಿತಾತ್ಮಕ ಖರ್ಚು ಮತ್ತು ಹೊಸ ಯೋಜನೆಗಳಿಗೆ ಸಂಬಂಧಪಟ್ಟಿದ್ದೇ ಎನ್ನುವುದನ್ನು ಮಾನ್ಯ ಮುಖ್ಯಮಂತ್ರಿಗಳು ಸ್ಪಷ್ಟೀಕರಿಸಬೇಕೆಂದು ಕೋರುತ್ತೇನೆ. ತಾವು ನಮಗೆ ಅಧಿಕವಾಗಿ 6,000 ಕೋಟಿ ರೂಪಾಯಿಗಳು, ಒಟ್ಟು ಜಿ.ಎಸ್.ಟಿ. ಪರಿಹಾರ 12,708/- ಕೋಟಿ ರೂಪಾಯಿಗಳನ್ನು ನಿರೀಕ್ಷೆ ಮಾಡಿದ್ದವು. ಆದರೆ ಸುಮಾರು ರೂ. 18,109/- ಕೋಟಿ ರೂಪಾಯಿಗಳನ್ನು ಕೊಡುತ್ತಾರೆ. ಈಗಾಗಲೇ ಸುಮಾರು 8,542/- ಕೋಟಿ ರೂಪಾಯಿ ಬಿಡುಗಡೆಯಾಗಿದೆ. ಇನ್ನು 6,700 ಕೋಟಿ ರೂಪಾಯಿ ಬರಬೇಕಾಗಿದೆ ಎಂದು ಹೇಳಿದಿರಿ. ಇದು ಬಹುಶಃ 2021ರ ಜನವರಿ ಅಂತ್ಯದಲ್ಲಿರುವಂತಹ ಜಿ.ಎಸ್.ಟಿ. ಪರಿಹಾರದ ಮೊತ್ತ ಎಂದು ಕಾಣುತ್ತದೆ. ನನ್ನ ದೃಷ್ಟಿಯಲ್ಲಿ ತಾವು ಈಗಾಗಲೇ ಖರ್ಚು ಮಾಡಿರುವುದಕ್ಕೋಸ್ಕರವಾಗಿ ತಾವು ಈ ಹಣವನ್ನು ಮೊದಲೇ supplementary ಯಲ್ಲಿ ಕೇಳುತ್ತಿದ್ದೀರಿ ಎಂದು ಭಾವಿಸಿದ್ದೇನೆ. ತಾವು ಇತ್ತೀಚೆಗೆ ಕೂಡ ದೆಹಲಿಗೆ ಭೇಟಿ ಮಾಡಿದ್ದಿರಿ. ಅಲ್ಲಿ ಕೇಂದ್ರ ಸರ್ಕಾರದ ಆರ್ಥಿಕ ಸಚಿವರನ್ನು ಭೇಟಿ ಮಾಡಿದಾಗ ಆ ಸಮಯದಲ್ಲಿ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೇಂದ್ರದ ಆರ್ಥಿಕ ಸಚಿವರು ತಮಗೆ ಹೆಚ್ಚುವರಿ ಆರ್ಥಿಕ ನೆರವನ್ನು ರಾಜ್ಯಕ್ಕೆ ಕೊಡುತ್ತೇವೆ ಎಂದು ಹೇಳಿದರು. ಅದನ್ನು ಯಾವ ಯಾವ ಮೂಲದಿಂದ ಎಷ್ಟು ಕೊಡುತ್ತಾರೆ ಎಂಬುದನ್ನು ತಾವು ಸಭೆಗೆ ಹೇಳುವುದಕ್ಕೆ ಸಾಧ್ಯವಾಗುತ್ತದೆಯೇ ಎಂದು ಕೇಳುತ್ತಿದ್ದೇನೆ. ಇದೇನಾದರೂ Central Sponsored Scheme ನಲ್ಲಿ ಬರುತ್ತದೆಯೇ ಅಥವಾ ಬೇರೆ ಯಾವ ರೂಪದಲ್ಲಿ ಕೊಡುತ್ತಾರೆಯೇ ಎಂಬುದನ್ನು ಸದನಕ್ಕೆ ತಿಳಿಸಬೇಕೆಂದು ಕೋರುತ್ತೇನೆ.

**ಶ್ರೀ ಪಿ.ಆರ್. ರಮೇಶ್(ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ಎರಡೇ ನಿಮಿಷ ಮಾತನಾಡುತ್ತೇನೆ. ಮಾನ್ಯ ಮುಖ್ಯಮಂತ್ರಿಯವರು ಏನು ಈ supplementary ತಂದಿದ್ದಾರೆ, ಅದರಲ್ಲಿ ಹಿಂದುಳಿದ ವರ್ಗಗಳಿಗೆ ಏನೂ ತೋರಿಸಿಲ್ಲ. ಮೊದಲನೆಯದಾಗಿ ಹಿಂದುಳಿದ ವರ್ಗಗಳಿಗೆ ನೀವು ಮಾರ್ಚ್ ತಿಂಗಳಿನಲ್ಲಿ ಮಂಡಿಸಿದಂತಹ ಆಯವ್ಯಯದಲ್ಲಿ ಏನೂ ತೋರಿಸಿಲ್ಲ ಮತ್ತು ಇವತ್ತು ನೀವು supplementary ತಂದಿದ್ದೀರಿ ಇದರಲ್ಲಿ scholarship incentives ಗೆ ರೂ. 01,00,000/- ತೋರಿಸಿದ್ದೀರಿ. ಈಗ ಯಾವ ಮಕ್ಕಳೂ ಶಾಲಾ ಕಾಲೇಜುಗಳಿಗೆ ಹೋಗುತ್ತಿಲ್ಲ. ಯಾವುದೇ ರೀತಿ ಸಾಮಾಜಿಕವಾಗಿ ಅಭಿವೃದ್ಧಿ ಹೊಂದುತ್ತಿಲ್ಲ. ಶೈಕ್ಷಣಿಕವಾಗಿ ಯಾವುದೇ ರೀತಿಯಲ್ಲೂ ಕೊಡುವುದಕ್ಕೆ ಆಗುತ್ತಿಲ್ಲ. ಕೇಳಿದರೆ ಅಲ್ಲಿ ನಮ್ಮಲ್ಲಿ ಹಣ ಇಲ್ಲ, ಎರಡು ವರ್ಷದ ಹಿಂದೆ ಕೊಟ್ಟಿರುವ ಹಣವನ್ನು ಸಂಪೂರ್ಣವಾಗಿ ಖರ್ಚು ಮಾಡುವುದಕ್ಕೆ ಇನ್ನೂ ಬಿಲ್ಸ್ ಸಹ ಬಂದಿಲ್ಲ ಎಂದು ಹೇಳುತ್ತಿದ್ದಾರೆ. ಹಿಂದುಳಿದ ವರ್ಗಗಳ ಸಚಿವರಿಗೆ ಆ ಕಷ್ಟ ಗೊತ್ತಿದೆ. ದಯವಿಟ್ಟು ಇದಕ್ಕೆ ಸ್ವಲ್ಪ ಒತ್ತನ್ನು ಕೊಡಬೇಕೆಂದು ತಮ್ಮಲ್ಲಿ ವಿನಯದಿಂದ ಪ್ರಾರ್ಥನೆ ಮಾಡುತ್ತೇನೆ.

**ಶ್ರೀ ಕೆ.ಟಿ. ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, 10,265 ಕೋಟಿ ರೂಪಾಯಿಗಳ ಈ ಪೂರಕ ಅಂದಾಜಿಗೆ ನನ್ನ ಸಹಮತವನ್ನು ವ್ಯಕ್ತ ಮಾಡುತ್ತೇನೆ. ನಾನು ಇವತ್ತು ಜಲಸಂಪನ್ಮೂಲ ಮತ್ತು ಲೋಕೋಪಯೋಗಿ ಇಲಾಖೆ ಬಗ್ಗೆ, ನಾಡಿನ 4-6 ಜಿಲ್ಲೆಗಳಲ್ಲಿ ವಿಶೇಷವಾಗಿ ನನ್ನ ಕ್ಷೇತ್ರದಲ್ಲಿ ದೊಡ್ಡ ಕೂಗು ಇದೆ. ನಾವು ಕಾಮಗಾರಿಗಳನ್ನು ನಿರ್ವಹಣೆ ಮಾಡಿ ಬಹಳ ತಿಂಗಳುಗಳೇ ಆದವು, ನಮಗೆ ಪೇಮೆಂಟೇ ಆಗುತ್ತಿಲ್ಲ, ಮುಂದೆ ನಾವು ಕಾಮಗಾರಿಗಳನ್ನು ಮಾಡುವುದಕ್ಕೆ ಸಾಧ್ಯವೇ ಆಗುತ್ತಿಲ್ಲ ಎಂಬ ಕೂಗು ಇದೆ. ಅಕ್ಷರಶಃ ನೀರಾವರಿ ಇಲಾಖೆಯಲ್ಲೂ ಸಾವಿರಾರು ಕೋಟಿ ರೂಪಾಯಿ ಬಾಕಿ ಇದೆ, ಲೋಕೋಪಯೋಗಿ ಇಲಾಖೆಯಲ್ಲಿಯೂ ಬಾಕಿ ಇದೆ. ಬಹುಶಃ ಆ ಬಾಕಿಯ ತೀರುವಳಿಗೆ ಪೂರಕ ಅಂದಾಜಿನಲ್ಲಿ ಪ್ರಸ್ತಾಪ ಆದಂತೆ ಕಾಣುತ್ತಿಲ್ಲ. ಬಹುಶಃ ಅಭಿವೃದ್ಧಿ ಕೆಲಸಗಳು ಮುಂದುವರೆಯಬೇಕಾದರೆ ಈ ಹಿಂದೆ ಮಾಡಿದ ಆ ಎಲ್ಲಾ ಕಾಮಗಾರಿಗಳ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹಣವನ್ನು ಬಟಾವಣೆ ಮಾಡದೇ ಹೋದರೆ ಅಭಿವೃದ್ಧಿಯಲ್ಲಿ ಹಿಂದೆ ಉಳಿಯುತ್ತೇವೆ. ನಾನು ನಾಡಿನ ಪತ್ರಿಕೆಗಳನ್ನು ಗಮನಿಸಿದೆ. ಯಾಕೋ ನಮ್ಮ ಯೋಜನೆಗಳು, ಕಾರ್ಯಕ್ರಮಗಳು ಅನುಷ್ಠಾನದಲ್ಲಿ ಅತ್ಯಂತ ಮಂದಗತಿಯ ಹಾದಿಯಲ್ಲಿ ಹೋಗುತ್ತಿವೆ. ಅವು ತೀವ್ರಗತಿಯಲ್ಲಿ ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ಬಜೆಟ್ ಘೋಷಣೆಗೆ ಬರಬೇಕಾದರೆ ಎಲ್ಲಾ ಅವಕಾಶಗಳನ್ನೂ ಮಾಡಿಕೊಡಬೇಕು. ಉದಾಹರಣೆಗೆ ಒಂದನ್ನು ಹೇಳುತ್ತೇನೆ, ಪ್ರತಿ ವರ್ಷ ನಮ್ಮ ಶಾಸಕರಿಗೆ ಎರಡು ಕೋಟಿ ರೂಪಾಯಿಗಳ ನಿಧಿಯನ್ನು ಕೊಡುತ್ತೀರಿ. ನಮ್ಮ ಸಭಾಪತಿಯವರು ಹಣಕಾಸು ಇಲಾಖೆಯವರನ್ನು ಮತ್ತು ಯೋಜನಾ ಇಲಾಖೆಯವರನ್ನು ಕರೆದು ಒಂದು ಸಭೆ ಮಾಡಿ 2019-20ರಲ್ಲಿ ಒಂದುಕೋಟಿ ರೂಪಾಯಿ ಉಳಿದುಕೊಂಡಿದೆ, 300 ಜನರಿಗೂ 300 ಕೋಟಿ ರೂಪಾಯಿಗಳನ್ನು ಕೊಡಿಸುತ್ತೇನೆಂದು ಎಂದು ಹೇಳಿದರು. ನಾವು ಅದು ಬರುತ್ತದೆ ಎಂದು ದಿನವೂ ನಿರೀಕ್ಷೆಯಲ್ಲಿದ್ದೇವೆ. ನೀವು ಎಂ.ಎಲ್.ಸಿ.ಗಳಿಗೆ ಕೊಡುವುದೇ ವರ್ಷಕ್ಕೆ 2 ಕೋಟಿ ರೂಪಾಯಿಗಳ ಅದೊಂದೇ ಅನುದಾನ. ಎಂ.ಎಲ್.ಎ. ರವರು ಕೇಳಿದರೆ ಬರೆದುಕೊಡುತ್ತೀರಿ. ನಮಗೆ ಕೇಳುವುದಕ್ಕೆ ಬರುವುದಿಲ್ಲ ಅದು ಬೇರೆ ವಿಚಾರ. ನೀವು ಕಾಮಗಾರಿಗಳನ್ನು ಕೊಡಿ ಎಂದಾಗ ಕೊಟ್ಟು ಬಿಟ್ಟೆವು. ಜಿಲ್ಲಾಧಿಕಾರಿಗಳು ಕಾಮಗಾರಿಗಳ ಅನುಮೋದನೆ ಮಾಡಿದರು. ಹಣ ಬಿಡುಗಡೆಯಾಗಲಿಲ್ಲ. ಸಭಾಪತಿಯವರು ಸಭೆ ಮಾಡಿಯೂ ಫಲಶೃತಿ ಕಂಡಿಲ್ಲ. ಇಲ್ಲಿ ಮುಖ್ಯಮಂತ್ರಿಗಳಿದ್ದಾರೆ, ನಾನಿಲ್ಲಿ ಎಲ್ಲಾ ಶಾಸಕರ ಪರವಾಗಿ ಮನವಿ ಮಾಡುತ್ತೇನೆ, ಬಾಕಿ ಇರುವ ಒಂದು ಕೋಟಿ ಹಣವನ್ನು ಬಿಡುಗಡೆ ಮಾಡುವುದನ್ನು ಸಾಧ್ಯವಾದರೆ ಈ ಪೂರಕ ಅಂದಾಜಿಗೆ ಅದನ್ನು ಸೇರಿಸಿಕೊಂಡು ನಮ್ಮ ಅನುಮತಿ ಪಡೆದುಕೊಳ್ಳಬೇಕು, ಅದನ್ನು ಬಿಡುಗಡೆ ಮಾಡಬೇಕೆಂದು ಕೋರುತ್ತಾ ಮತ್ತೊಮ್ಮೆ ಈ ವಿಧೇಯಕಕ್ಕೆ ಸಹಮತ ವ್ಯಕ್ತಪಡಿಸುತ್ತೇನೆ.

**ಶ್ರೀ ಬಸವರಾಜ ಬೊಮ್ಮಾಯಿ(ಮುಖ್ಯಮಂತ್ರಿ):-** ಮಾನ್ಯ ಸಭಾಪತಿಯವರೇ, ಹಿರಿಯ ಸದಸ್ಯರಾದ ತಿಪ್ಪೇಸ್ವಾಮಿಯವರು ಎರಡು ವಿಚಾರಗಳನ್ನು ಹೇಳಿದ್ದಾರೆ. ಮೊದಲನೆಯದಾಗಿ ಕೇಂದ್ರಸರ್ಕಾರ ಈ 18,109/- ರೂಪಾಯಿಗಳನ್ನು ಜನವರಿ ತಿಂಗಳವರೆಗೆಯೇ ಎಂದು ಕೇಳಿದ್ದಾರೆ. 18,109 ಕೋಟಿ ರೂಪಾಯಿ, 2021-22ಕ್ಕೆ ಇರುವಂತಹದ್ದು. ಎರಡನೆಯದಾಗಿ, ಅವರು ನಾನು ಕೇಂದ್ರದ ಹಣಕಾಸು ಸಚಿವರ ಹತ್ತಿರ ಚರ್ಚೆ ಮಾಡಿದ್ದನ್ನು ಹೇಳಿರುವುದು, ನಾನು ಹಲವಾರು ವಿಚಾರಗಳನ್ನು ಕೇಂದ್ರ ಹಣಕಾಸು ಸಚಿವರ ಜೊತೆ ಚರ್ಚೆ ಮಾಡಿದ್ದೇನೆ. ಜಿ.ಎಸ್.ಟಿ ಕಳೆದ ವರ್ಷ ಸುಮಾರು 11,800 ಕೋಟಿ ರೂಪಾಯಿಗಳಷ್ಟು ಇದೆ, ಕೂಡಲೇ ಬಾಕಿ ಹಣವನ್ನು ಬಿಡುಗಡೆ ಮಾಡಬೇಕೆಂದು ಕೇಳಿದ್ದೇನೆ. ಅವರು ಈಗ ಮೊದಲನೇ ಕಂತನ್ನು ಕೊಡುವುದಕ್ಕೆ ಪ್ರಾರಂಭ ಮಾಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಒಟ್ಟು 10-11 ಕಂತುಗಳಲ್ಲಿ ಪ್ರತಿ ತಿಂಗಳು ಶೇ.10ರಷ್ಟು ಅದನ್ನು ಕೊಡುತ್ತೇನೆಂದು ಒಪ್ಪಿಕೊಂಡಿದ್ದಾರೆ. ಈ 18,109/- ಕೋಟಿ ರೂಪಾಯಿಗಳನ್ನು ಕೂಡಲೇ ನಮಗೆ ಮುಂಗಡವಾಗಿ ಬಿಡುಗಡೆ ಮಾಡಿದರೆ ನಮಗೆ ಖರ್ಚು ಮಾಡುವುದಕ್ಕೆ ಬಹಳಷ್ಟು ಅನುಕೂಲವಾಗುತ್ತದೆ, ವರ್ಷದ ಕೊನೆಗೆ ಬಂದರೆ ಆಗುವುದಿಲ್ಲ ಎನ್ನುವ ಮಾತನ್ನು ಅವರಿಗೆ ಹೇಳಿದ್ದೇನೆ. ನಮ್ಮ ರಾಜ್ಯಕ್ಕೆ ಬರಬೇಕಾದ Central Sponcered Schemes ಗೆ, ಹಲವಾರು ಸ್ಕೀಂಗಳಿಗೆ ಬಹುತೇಕ 4,000 ಕೋಟಿ ರೂಪಾಯಿಗಳು ಬರಬೇಕು ಅದನ್ನು ಕೂಡ ಬಿಡುಗಡೆ ಮಾಡಬೇಕು ಮತ್ತು ವಿಶೇಷವಾಗಿ ಇದು ಬಜೆಟ್, ಜಿ.ಎಸ್.ಟಿ. ಅಲ್ಲದೇ ಈ ನಡುವೆ ಬ್ಯಾಂಕ್ ಮುಖಾಂತರ ಹಲವಾರು ಯೋಜನೆಗಳು ದೊಡ್ಡ ಪ್ರಮಾಣದಲ್ಲಿ ಅನುಷ್ಠಾನವಾಗುತ್ತಿವೆ. 'ನಬಾರ್ಡ್'ನಿಂದ ಮತ್ತು 'ಸಿಡ್‌ಬಿ' ಇಂದ ಹಲವಾರು ಯೋಜನೆಗಳು ವಿಶೇಷವಾಗಿ ಎಸ್.ಸಿ., ಎಸ್.ಟಿ., ಮತ್ತು ಓ.ಬಿ.ಸಿ., ಈ ಸಮುದಾಯಕ್ಕೆ ವಿಶೇಷವಾದ ಒತ್ತನ್ನು ಕೊಟ್ಟು ದೊಡ್ಡ ಪ್ರಮಾಣದಲ್ಲಿ ಹಣಕಾಸಿನ ಸಹಾಯ ಮಾಡುತ್ತಿದ್ದಾರೆ. ಅದರ ಲಾಭ ಕರ್ನಾಟಕಕ್ಕೆ ಆಗಬೇಕು ಎನ್ನುವುದನ್ನು ಕೂಡ ನಾನು ಒತ್ತಾಯ ಮಾಡಿದ್ದೇನೆ. ಅವರೇ ಬಂದು ಆ ಯೋಜನೆಗಳನ್ನು ಮಂಜೂರು ಮಾಡಿ, ಉದ್ಘಾಟನೆ ಮಾಡುತ್ತೇನೆ ಎಂದು ಹೇಳಿದ್ದಾರೆ. ಹೀಗೆ ಹಲವಾರು ವಿಚಾರಗಳು ಚರ್ಚೆಯಾಗಿವೆ. ಇನ್ನೂ ಈ ಪೂರಕ ಅಂದಾಜುಗಳ ಬಗ್ಗೆ ಮಾನ್ಯ ಸದಸ್ಯರಾದ ರಮೇಶ್‌ರವರು ಹಿಂದುಳಿದ ವರ್ಗಗಳ ಬಗ್ಗೆ ಹೇಳಿದ್ದಾರೆ. ಕೋವಿಡ್-19 ಇರುವುದರಿಂದ ಎಜುಕೇಷನ್ ಈಗ ಪ್ರಾರಂಭವಾಗಿದೆ. ಒಂದನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಓ.ಬಿ.ಸಿ.,ಯಲ್ಲಿ ಬಾಕಿ ಇರುವ ಹಾಸ್ಟೆಲ್ ಮತ್ತಿತರ ಸವಲತ್ತುಗಳಿಗೆ ಇರುವಂತಹ ನಮ್ಮ ಯಾವ ತೊಂದರೆಯಾಗದಂತೆ ಕೂಡಲೇ ಹಣಕಾಸಿನ ವ್ಯವಸ್ಥೆಯನ್ನು ಮಾಡುತ್ತೇವೆ. ಹಣಕಾಸಿನ ಲಭ್ಯತೆ ಪ್ರಕಾರ ಒಂದು ಅಥವಾ ಎರಡು ಕಂತಿನಲ್ಲಿ ಅದನ್ನು ಪೂರ್ತಿ ಮಾಡಿಕೊಡುತ್ತೇನೆ ಎಂಬ ಮಾತನ್ನು ಈ ಸದನಕ್ಕೆ ಮತ್ತು ಮಾನ್ಯ ರಮೇಶ್‌ರವರಿಗೆ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಅಲ್ಲದೇ ಮಾನ್ಯ ಶ್ರೀಕಂಠೇಗೌಡರು ಶಾಸಕರ ಕ್ಷೇಮಾಭಿವೃದ್ಧಿ ನಿಧಿ ಬಗ್ಗೆ ಹೇಳಿದ್ದಾರೆ ಇದರಲ್ಲಿ 127 ಕೋಟಿ ರೂಪಾಯಿಗಳನ್ನು ಇದಕ್ಕಾಗಿ ಇಟ್ಟಿದ್ದೇವೆ. ಈಗಾಗಲೇ ಒಂದು ಕೋಟಿ ರೂಪಾಯಿಯನ್ನು ಬಿಡುಗಡೆ ಮಾಡಿದ್ದೇವೆ. ಬಾಕಿ ಇರುವ ಇನ್ನೊಂದು ಕಂತನ್ನು ಈ ವರ್ಷದ ಅಂತ್ಯದೊಳಗಡೆ ಬಿಡುಗಡೆ ಮಾಡುತ್ತೇವೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಈ ಅಂದಾಜಿಗೆ ತಾವು ಅನುಮತಿ ಕೊಡಬೇಕೆಂದು ಕೋರುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು**:- ಪ್ರಸ್ತಾವ ಏನೆಂದರೆ,

"ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2021ರ ಕರ್ನಾಟಕ ಧನವಿನಿಯೋಗ (ಸಂಖ್ಯೆ: 3) ವಿಧೇಯಕವನ್ನು ಪರ್ಯಾಲೋಚಿಸುವುದು."

**ಪ್ರಸ್ತಾವವನ್ನು ಅಂಗೀಕರಿಸಲ್ಪಟ್ಟಿತು**

**ವಿಧೇಯಕವನ್ನು ಖಂಡಖಂಡವಾಗಿ ಪರ್ಯಾಲೋಚಿಸುವುದು**

ಖಂಡ 2 ಮತ್ತು 3 ರವರೆಗೆ

ಸಭಾಪತಿಯವರು:- ಪ್ರಸ್ತಾವ ಏನೆಂದರೆ,
"ಖಂಡ 2 ಮತ್ತು 3 ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಖಂಡ 2 ಮತ್ತು 3 ನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಖಂಡ 1 ಇತ್ಯಾದಿ**

ಸಭಾಪತಿಯವರು:- ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)**

**ಪ್ರಸ್ತಾವದ ಅಂಗೀಕಾರ**

**ಶ್ರೀ ಬಸವರಾಜ ಬೊಮ್ಮಾಯಿ(ಮುಖ್ಯಮಂತ್ರಿಗಳು ಹಾಗೂ ಹಣಕಾಸು ಸಚಿವರು):-** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2021ರ ಕರ್ನಾಟಕ ಧನವಿನಿಯೋಗ (ಸಂಖ್ಯೆ: 3) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು**:- ಪ್ರಸ್ತಾವ ಏನೆಂದರೆ,

"ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2021ರ ಕರ್ನಾಟಕ ಧನವಿನಿಯೋಗ (ಸಂಖ್ಯೆ: 3) ವಿಧೇಯಕವನ್ನು ಅಂಗೀಕರಿಸುವುದು."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(978) 23-09-2021/ 8-30/ ಕೆಹೆಚ್-ಬಿಎನ್ಎಸ್

**(ಸಭಾಪತಿಯವರ ಉಪಸ್ಥಿತಿ)**

## ಇ) ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ತಿದ್ದುಪಡಿ) ವಿಧೇಯಕ, 2021

### ಪರ್ಯಾಲೋಚನಾ ಪ್ರಸ್ತಾವ

**ಶ್ರೀ ಜೆ.ಸಿ.ಮಾಧುಸ್ವಾಮಿ (ಸಣ್ಣ ನೀರಾವರಿ, ಕಾನೂನು, ಸಂಸದೀಯ ವ್ಯವಹಾರ ಸಚಿವರು) (ಮುಖ್ಯಮಂತ್ರಿಯವರ ಪರವಾಗಿ):-** ಮಾನ್ಯ ಸಭಾಪತಿಯವರೇ, ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2021ರ ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

### ಪ್ರಸ್ತಾವವನ್ನು ಮಂಡಿಸಲಾಯಿತು

**ಶ್ರೀ ಜೆ.ಸಿ.ಮಾಧುಸ್ವಾಮಿ (ಸಣ್ಣ ನೀರಾವರಿ, ಕಾನೂನು, ಸಂಸದೀಯ ವ್ಯವಹಾರ ಸಚಿವರು) (ಮುಖ್ಯಮಂತ್ರಿಯವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಜಿ.ಎಸ್.ಟಿ., ಕಾಯ್ದೆಗೆ ತಿದ್ದುಪಡಿ ತರುತ್ತಿದ್ದೇವೆ. ಈ ತಿದ್ದುಪಡಿ ಕೇಂದ್ರ ಸರ್ಕಾರದವರು ಮಾಡಿದ ಆಧಾರದ ಮೇಲೆ 6-7 ಖಂಡಗಳಿಗೆ ನಾವು ತಿದ್ದುಪಡಿ ಮಾಡುತ್ತಿದ್ದೇವೆ. ಇದರ ಸಂಪೂರ್ಣವಾದ ಮಾಹಿತಿಯನ್ನು ಕೊಟ್ಟಿದ್ದೇನೆ. ಮೊದಲನೆಯದಾಗಿ, ಪ್ರಕರಣ 7ಕ್ಕೆ ಒಂದು ತಿದ್ದುಪಡಿಯನ್ನು ತಂದು ಸರ್ವೋಚ್ಚ ನ್ಯಾಯಾಲಯ ರಾಂಚಿ ಕ್ಲಬ್ ಪ್ರಕರಣದಲ್ಲಿ ಏನೋ ತೀರ್ಮಾನ ಕೊಟ್ಟಿರುವುದಕ್ಕೆ ಸ್ವಲ್ಪ protection ಗೆ ನಾವು ತಂದಿದ್ದೇವೆ. ಇದರಲ್ಲಿ ಏನಾಗಿದೆ ಎಂದರೆ, ಕ್ಲಬ್‌ನಲ್ಲಿ ಒಬ್ಬ ಮೆಂಬರ್‌ಗೆ ಕೊಡುವ ಸರ್ವಿಸ್ non taxable ಎಂದು ಇತ್ತು. ಆದರೆ, it is again a business between two individuals ಎಂದು ಇದನ್ನು ತಂದು ಗೊಂದಲ ನಿವಾರಣೆ ಮಾಡಿದ್ದೇವೆ. ಎರಡನೆಯದಾಗಿ, ಇನ್ನು ನಮಗೆ ಜಿ.ಎಸ್.ಟಿ., ತೆರಿಗೆ invoice ಗಳಲ್ಲಿ ಏನಾಗಿದೆಯೆಂದರೆ, ಇನ್‌ಪುಟ್ ನಮಗೆ ಏನು ರೈಸ್ ಆಗುತ್ತದೆ, ಆ ಇನ್‌ಪುಟ್ ಅನ್ನು invoice ವಿವರಗಳಲ್ಲಿ ಜಿ.ಎಸ್.ಟಿ., ಕಾಯ್ದೆ 2ಎ ಮತ್ತು 2ಬಿ ನಮೂನೆಗಳಲ್ಲಿ ನಮೂದಿಸುವುದನ್ನು ಕಡ್ಡಾಯ ಮಾಡಲಾಗಿದೆ. ಇದರಿಂದಾಗಿ ಹೂಡುವಳಿ ತೆರಿಗೆ ಜಮೀನು ಪಾರದರ್ಶಕವಾಗಿ ಕ್ಲೈಮ್ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಮೂರನೆಯದಾಗಿ, 5 ಕೋಟಿ ರೂಪಾಯಿಗಳವರೆಗೆ Chartered Accountants ಹತ್ತಿರ ಆಡಿಟಿಂಗ್ ಮಾಡಿಸುವುದು ಕಡ್ಡಾಯವಾಗಿತ್ತು. ಸ್ವಲ್ಪ ವರ್ತಕರಿಗೆ ಪರಿಹಾರಾತ್ಮಕವಾಗಿರುವ ನಿರ್ಬಂಧವನ್ನು ತೆಗೆದು ಹಾಕುತ್ತಿದ್ದೇವೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಾಲ್ಕನೆಯದಾಗಿ, for returns, Chartered Accountant ಅಥವಾ Cost Accountant ಇವರು ದೃಢೀಕರಣ ಮಾಡಬೇಕೆಂದು ಏನು ಕಡ್ಡಾಯ ಇತ್ತು. ಇದನ್ನು self assessment ಮಾಡಿಕೊಂಡು, ಅವರೇ declaration ಕೊಡಬಹುದೆಂದು ಹೇಳಿ, relax ಮಾಡಿಕೊಡುತ್ತಿದ್ದೇವೆ. ಐದನೆಯದಾಗಿ, ತೆರಿಗೆ ವಿಳಂಬ ಸಂದಾಯದ ಮೇಲೆ ಬಡ್ಡಿ ವಿಧಿಸುವುದು. ಈ ಪ್ರಕರಣದಲ್ಲಿ ದಿನಾಂಕ:01-07-2017 ರಿಂದ ಪೂರ್ವಾನ್ವಯವಾಗುವಂತೆ ತಿದ್ದುಪಡಿ ಮಾಡಿ ನಿವ್ವಳ ತೆರಿಗೆ ಮೊತ್ತದ ಮೇಲೆ ಬಡ್ಡಿ ವಿಧಿಸುವಂತಹ ಅವಕಾಶ ಕಲ್ಪಿಸಲಾಗುತ್ತಿದೆ. ಇದು ಕೂಡ ವರ್ತಕರಿಗೆ ಪರಿಹಾರಾತ್ಮಕವಾಗಿ ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಆರನೆಯದಾಗಿ, ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ತಿದ್ದುಪಡಿ) ವಿಧೇಯಕ, 2021ರ ಕರಡು ಪ್ರತಿಯಲ್ಲಿರುವಂತೆ 74ರ ವಿವರಣೆಯ ತಿದ್ದುಪಡಿಯಲ್ಲಿ “ಮೂಲ ಅಧಿನಿಯಮದ 74ನೇ ಪ್ರಕರಣದಲ್ಲಿನ 1ನೇ ವಿವರಣೆಯ (ii)ನೇ ಖಂಡದಲ್ಲಿರುವ “ಪ್ರಕರಣ 122, 125, 129 ಮತ್ತು 130 ಗಳ” ಎಂಬ ಪದಗಳು ಮತ್ತು ಅಂಕಿಗಳ ಬದಲಿಗೆ “ಪ್ರಕರಣ 122 ಮತ್ತು 125ಗಳ”, ಎಂಬ ಪದಗಳು ಮತ್ತು ಅಂಕಿಗಳನ್ನು ಪ್ರತಿಯೋಜಿಸತಕ್ಕದ್ದು.” ಇದ್ದರಿಂದ ಪ್ರಕರಣ 74ಕ್ಕೆ ತರ್ಕಬದ್ಧಗೊಳಿಸಿದಂತಾಗುತ್ತದೆ. ಯಾವುದೇ ಪರಿಣಾಮ ರಾಜಸ್ವದ ಮೇಲೆ ಬೀರುವುದಿಲ್ಲ. 75ರ ವಿವರಣೆಯಲ್ಲಿ (12)ನೇ ಉಪಪ್ರಕರಣದಲ್ಲಿ “ಈ ಉಪಪ್ರಕರಣದ ಉದ್ದೇಶಗಳಿಗಾಗಿ “ಸ್ವಯಂ-ನಿರ್ಧರಿತ ತೆರಿಗೆ” ಪದಾವಳಿಯು, ಪ್ರಕರಣ 37ರ ಅಡಿಯಲ್ಲಿ ಒದಗಿಸಲಾದ ಆದರೆ ಪ್ರಕರಣ 39ರ ಅಡಿಯಲ್ಲಿ ಒದಗಿಸಿದ ರಿಟರ್ನಿನಲ್ಲಿ ಒಳಗೊಳ್ಳದೇ ಇರುವ ಹೊರಮುಖ ಪೂರೈಕೆಗಳ ವಿವರಗಳಿಗೆ ಸಂಬಂಧಿಸಿದಂತೆ ಸಂದಾಯ ಮಾಡಬೇಕಾದ ತೆರಿಗೆಯನ್ನು ಒಳಗೊಳ್ಳತಕ್ಕದ್ದು.” ಇದರಲ್ಲಿ self declaration ಮಾಡಿಕೊಳ್ಳಬಹುದು. 83ರ ವಿವರಣೆಯಲ್ಲಿ “ರಾಜಸ್ವದ ರಕ್ಷಣೆಗಾಗಿ ಕೆಲವೊಂದು ಪ್ರಕರಣಗಳಲ್ಲಿ ತಾತ್ಕಾಲಿಕ ಜಪ್ತಿ"ಗೆ ಸಂಬಂಧಿಸುತ್ತದೆ. ಉಪ ಪ್ರಕರಣ (1) ಅನ್ನು ಪ್ರತಿಯೋಜನೆ ಮಾಡುವ ಮೂಲಕ ತಾತ್ಕಾಲಿಕ ಜಪ್ತಿಯನ್ನು ಈಗಾಗಲೇ ಕರಾರು ವಿತರಣೆ, ತಪಾಸಣೆ, ಬೇಡಿಕೆ ಮತ್ತು ವಸೂಲಾತಿ ನಡವಳಿಗಳ ಆರಂಭಿಸುವ ಪ್ರಕರಣಗಳಿಗೆ ಅನುಮೋದಿಸುವಂತೆ ತಿದ್ದುಪಡಿ ಮಾಡಲಾಗಿದೆ. ಇದು ರಾಜಸ್ವದ ರಕ್ಷಣೆ ಮಾಡಲು ಉತ್ತರಾನ್ವಯವಾಗುವಂತೆ ಜಾರಿಗೊಳಿಸಲು ಉದ್ದೇಶಿಸಿದೆ. ವಿವರಣೆ 107 ರ “ಅಪೀಲು ಪ್ರಾಧಿಕಾರಕ್ಕೆ ಅಪೀಲುಗಳು” ಅಪೀಲು ಪ್ರಾಧಿಕಾರಕ್ಕೆ ವರ್ತಕರು ಸಲ್ಲಿಸುವ ಅಪೀಲಿಗೆ ಸಂಬಂಧಿಸಿದಂತೆ ಸದರಿ ಉಪ ಪ್ರಕರಣ (6)ಕ್ಕೆ ಪರಂತುಗಳನ್ನು ಸೇರ್ಪಡೆ ಮಾಡುವ ಮೂಲಕ ಸಾಗಾಣಿಕೆಯಲ್ಲಿರುವ ಸರಕುಗಳ ಮೇಲೆ ವಿಧಿಸುವ ದಂಡ ಮೊತ್ತ ಶೇಕಡ 10 ರ ಬದಲಾಗಿ ಶೇಕಡ 25 ಅನ್ನು ಅಪೀಲು ಪ್ರಾಧಿಕಾರದ ಮುಂದೆ ಮುಂಗಡ ಠೇವಣಿ ಮಾಡಲು

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಅವಕಾಶ ನೀಡಲಾಗಿದೆ. ಶೇಕಡ 25 ರಷ್ಟು ಅಡ್ವಾನ್ಸ್ ಕಟ್ಟಿ ಅಪೀಲು ಹಾಕಬೇಕೆಂದು ನಾವು ತಿದ್ದುಪಡಿಯನ್ನು ತಂದಿದ್ದೇವೆ. ವಿವರಣೆ 129 ರ ಪ್ರಕರಣದಲ್ಲಿ "ಸಾಗಾಣಿಕೆಯಲ್ಲಿರುವ ಸರಕುಗಳು ಮತ್ತು ಸಾಗಾಣಿಕೆಯ ವಾಹನಗಳ ತಡೆಹಿಡಿಯುವಿಕೆ ವಶಕ್ಕೆ ತೆಗೆದುಕೊಳ್ಳುವಿಕೆ ಹಾಗೂ ಬಿಡುಗಡೆ" ಗೆ ಸಂಬಂಧಿಸಿದೆ. ವಿವರಣೆ 130 ರ ಪ್ರಕರಣದಲ್ಲಿ "ಸರಕುಗಳು ಅಥವಾ ಸಾಗಾಣಿಕೆ ವಾಹನಗಳನ್ನು ಮಟ್ಟುಗೋಲು ಹಾಕಿಕೊಳ್ಳುವುದು ಮತ್ತು ದಂಡ ವಿಧಿಸುವುದು" ಇದಕ್ಕೆ ಸಂಬಂಧಿಸಿದೆ. ಈ ಪ್ರಕರಣಗಳನ್ನು ತಿದ್ದುಪಡಿ ಮಾಡುವ ಮೂಲಕ ಗೊಂದಲ ನಿವಾರಣೆ ಮಾಡಿ ತರ್ಕಬದ್ಧಗೊಳಿಸಲಾಗುತ್ತಿದೆ. ವಿವರಣೆ 151ರ ಪ್ರಕರಣದಲ್ಲಿ "ಅಂಕಿ ಅಂಶಗಳನ್ನು ಸಂಗ್ರಹಣೆ ಮಾಡುವ ಅಧಿಕಾರ" ಕ್ಕೆ ಸಂಬಂಧಿಸಿರುತ್ತದೆ. ಈ ಪ್ರಕರಣವನ್ನು ಪುನರ್‌ಯೋಜನೆ ಮಾಡುವ ಮೂಲಕ ತಿದ್ದುಪಡಿ ಮಾಡಿ ಅಂಕಿ ಅಂಶಗಳ ಸಂಗ್ರಹಣೆ ಜೊತೆಗೆ ಯಾವುದೇ ಇತರೆ ಮಾಹಿತಿಗಳನ್ನು ಸಂಗ್ರಹಿಸಲು ಅವಕಾಶ ಕಲ್ಪಿಸಲಾಗಿರುತ್ತದೆ. ವಿವರಣೆ 152 ರ ಪ್ರಕರಣದಲ್ಲಿ **"ಮಾಹಿತಿ ಬಹಿರಂಗಪಡಿಸುವಿಕೆಯ ಪ್ರತಿಷೇಧ"**ಕ್ಕೆ ಸಂಬಂಧಿಸಿರುತ್ತದೆ. ಈ ಪ್ರಕರಣಕ್ಕೆ ತಿದ್ದುಪಡಿ ಮಾಡುವ ಮೂಲಕ ಮಾಹಿತಿ ಸಂಗ್ರಹಣೆ ಪ್ರಕ್ರಿಯೆ ಹೆಚ್ಚು ಪರಿಣಾಮಕಾರಿಯನ್ನಾಗಿ ಮಾಡಲು ಅವಕಾಶ ಕಲ್ಪಿಸಲಾಗಿದೆ. ವಿಧೇಯಕದಲ್ಲಿ ಪೂರ್ಣ ಮಾಹಿತಿಯನ್ನು ಕೊಟ್ಟಿದ್ದೇವೆ. ಜಿ.ಎಸ್.ಟಿ., ಮೇಲೆ ಅವರಿಗೆ ಅಧಿಕಾರ ಇರುವುದರಿಂದ, ಕೇಂದ್ರ ಸರ್ಕಾರ ಪಾಸ್ ಮಾಡಿರುವ ಕಾಯ್ದೆಯನ್ನು ನೆನ್ನೆಯ ದಿವಸ ನಮ್ಮ ವಿಧಾನಸಭೆಯಲ್ಲಿ ವಿಧೇಯಕವನ್ನು ಅಂಗೀಕಾರ ಮಾಡಲಾಗಿದೆ. ಅದನ್ನು ಪರ್ಯಾಲೋಚನೆ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ (ನಾಮ ನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಕರ್ನಾಟಕ ಸರಕು ಮತ್ತು ಸೇವೆಗಳ ಪರಿಷತ್ತಿನ ಶಿಫಾರಸ್ಸಿನ ಮೇಲೆ ಬಹುಶಃ ಏಕರೂಪ ಕಾಯ್ದೆ ಜಾರಿಗೆ ಬರಬೇಕೆಂಬ ದಿಸೆಯಲ್ಲಿ ಈ ವಿಧೇಯಕವನ್ನು ತಂದಿದ್ದಾರೆ ಎಂದು ಭಾವಿಸುತ್ತೇನೆ. ಸೆಕ್ಷನ್ 129ನೇ ಪ್ರಕರಣದ ತಿದ್ದುಪಡಿಯಲ್ಲಿ ಶೇಕಡ 100 ರಷ್ಟು ಸಮಾನಾದ ದಂಡ ಮತ್ತು ವಿನಾಯಿತಿ ಸರಕುಗಳ ಮೇಲೆ ವಸೂಲಿ ಮಾಡುವ ದಂಡಕ್ಕೆ ಸಂಬಂಧಿಸಿದಂತೆ ಇದು ರಾಜ್ಯ ಸರ್ಕಾರಕ್ಕೆ ಬರುತ್ತದೆಯೇ ಅಥವಾ ರಾಜ್ಯ ಸರ್ಕಾರ, ಕೇಂದ್ರ ಸರ್ಕಾರ ಈ ಎರಡಕ್ಕೂ ಹಂಚಿಕೆಯಾಗುತ್ತದೆಯೇ. ಇದಕ್ಕೆ ಮಾನ್ಯ ಸಚಿವರು ಸ್ಪಷ್ಟೀಕರಣ ಕೊಡಬೇಕು. ಅದೇ ರೀತಿ ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ 83(1) ಮತ್ತು 129(6) ರಲ್ಲಿ ಬ್ಯಾಂಕ್ ಖಾತೆಯಲ್ಲಿರುವಂತಹ ಹಣ ಏನು ಜಪ್ತಿ ಮಾಡುತ್ತಾರೆ. ಅದೇ ರೀತಿ ಸರಕು ಮತ್ತು ಸಾಗಾಣಿಕೆ ವಾಹನಗಳನ್ನು ಏನು ಜಪ್ತಿ ಮಾಡಿ ಸ್ವಾಧೀನಪಡೆದುಕೊಳ್ಳುವುದಕ್ಕೆ ವಿಲೇ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡುತ್ತಾರೆಯಲ್ಲವೇ, ಅದನ್ನು ವಿಲೇ ಮಾಡುವಂತಹ realisation ಏನಿದೆ, ಅದರಿಂದ ಬರುವಂತಹ ಅಧಿಕ ಆದಾಯ ಏನಿದೆ, ಇದು ರಾಜ್ಯ ಸರ್ಕಾರಕ್ಕೆ ಬರುತ್ತದೆಯೇ ಅಥವಾ ರಾಜ್ಯ ಸರ್ಕಾರ, ಕೇಂದ್ರ ಸರ್ಕಾರ ಈ ಎರಡಕ್ಕೂ ಹಂಚಿಕೆಯಾಗುತ್ತದೆಯೇ, ದಯಮಾಡಿ ಸದನಕ್ಕೆ ಸ್ಪಷ್ಟೀಕರಣ ಕೊಡಬೇಕೆಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಕೆ.ಎ.ತಿಪ್ಪೇಸ್ವಾಮಿಯವರೇ, 50:50 ಅನುಪಾತದಲ್ಲಿ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಎರಡಕ್ಕೂ ಹಂಚಿಕೆಯಾಗುತ್ತದೆ.

**ಸಭಾಪತಿಯವರು:- ಪ್ರಸ್ತಾವ ಏನೆಂದರೆ;**

"ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2021 ನೇ ಸಾಲಿನ ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

**<u>ಪ್ರಸ್ತಾವ ಅಂಗೀಕರಿಸಲ್ಪಟ್ಟಿತು</u>**

**<u>ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು</u>**

**ಖಂಡ 2 ರಿಂದ 15 ರವರೆಗೆ**

**ಸಭಾಪತಿಯವರು:-** "ಖಂಡ 2 ರಿಂದ 15 ರವರೆಗೆ ಈ ವಿಧೇಯಕದ ಅಂಗವಾಗಿರುತ್ತದೆ."

**<u>ಪ್ರಸ್ತಾವ ಅಂಗೀಕರಿಸಲ್ಪಟ್ಟಿತು</u>**

**(ಖಂಡ 2 ರಿಂದ 15 ರವರೆಗೆ ಈ ವಿಧೇಯಕಕ್ಕೆ ಸೇರಿಸಲಾಯಿತು)**

**ಖಂಡ 1 ಇತ್ಯಾದಿ**

**ಸಭಾಪತಿಯವರು:- ಪ್ರಸ್ತಾವ ಏನೆಂದರೆ;**

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**<u>ಪ್ರಸ್ತಾವ ಅಂಗೀಕರಿಸಲ್ಪಟ್ಟಿತು</u>**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)**

**ಪ್ರಸ್ತಾವದ ಅಂಗೀಕಾರ**

**ಶ್ರೀ ಜೆ.ಸಿ.ಮಾಧುಸ್ವಾಮಿ (ಸಣ್ಣ ನೀರಾವರಿ, ಕಾನೂನು, ಸಂಸದೀಯ ವ್ಯವಹಾರ ಸಚಿವರು) (ಮುಖ್ಯಮಂತ್ರಿಯವರ ಪರವಾಗಿ):-** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2021ರ ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:- ಪ್ರಸ್ತಾವ ಏನೆಂದರೆ;**

"ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2021ರ ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

(ಮುಂದು)

**(979) 8:40 ಎಸ್‌ಪಿಆರ್-ಬಿವಿಎನ್‌ಎಸ್ 23/09/2021**

(ಸಭಾಪತಿಯವರ ಉಪಸ್ಥಿತಿ)

**ಈ) ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ತಿದ್ದುಪಡಿ) ವಿಧೇಯಕ,2021**

ಪರ್ಯಾಲೋಚನಾ ಪ್ರಸ್ತಾವ

**ಶ್ರೀ ಜೆ.ಸಿ.ಮಾಧುಸ್ವಾಮಿ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)(ಮುಖ್ಯಮಂತ್ರಿಗಳ ಪರವಾಗಿ):-** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ತಿದ್ದುಪಡಿಗಳೊಂದಿಗೆ ಅಂಗೀಕೃತವಾದ ರೂಪದಲ್ಲಿರುವ 2021 ರ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ(ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಅಪ್ಪಾಜಿಗೌಡ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ತಿದ್ದುಪಡಿ) ವಿಧೇಯಕ, 2021 ನ್ನು ನಾನು ಸ್ವಾಗತಿಸುತ್ತೇನೆ. ವಿಧೇಯಕದ ಪುಟ ಸಂಖ್ಯೆ:6 ರಲ್ಲಿನ ಕ್ರಮ ಸಂಖ್ಯೆ (4) ರಲ್ಲಿ 17 ನೇ ಪ್ರಕರಣದ ತಿದ್ದುಪಡಿ ಶೀರ್ಷಿಕೆಯಡಿ ಉಪಪ್ರಕರಣದ ಬದಲಾಗಿ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು ಎಂದು ಉಲ್ಲೇಖಿಸಲಾಗಿದೆ. ಇದು ನಿಜವಾಗಿಯೂ ಸಹ ಒಳ್ಳೆಯ ತಿದ್ದುಪಡಿಯಾಗಿದೆ. ಈ ಮೊದಲು 60:40 ರ ಅನುಪಾತದಲ್ಲಿ ಹಾಗೂ ನಂತರದಲ್ಲಿ 40:30:30 ರ ಅನುಪಾತದಲ್ಲಿ ನಿವೇಶನಗಳನ್ನು ಬಿಡುಗಡೆ ಮಾಡಲಾಗುತ್ತಿತ್ತು. ಕಳೆದ ಅಧಿವೇಶನದ ಸಂದರ್ಭದಲ್ಲಿ ಕಾನೂನಿನಲ್ಲಾದ ಗೊಂದಲದಿಂದಾಗಿ, ಇದರಲ್ಲಿ ಸ್ವಲ್ಪ ಅನುಮಾನಗಳಿದ್ದವು. ಯೋಜನಾ ಇಲಾಖೆಯು ಪ್ರಸ್ತುತ ಮಂಡಿಸಿರುವ ವಿಧೇಯಕದ ಬಗ್ಗೆ ಬಹಳ ಸಂತೋಷವಾಗಿದೆ. ನಾನು ಇಲ್ಲಿ ಎರಡು ವಿಷಯಗಳನ್ನು ಪ್ರಸ್ತಾಪಿಸಬಯಸುತ್ತೇನೆ. ವಸತಿ ಬಡಾವಣೆಗಳಿಗೆ ಸಕ್ಷಮ ಪ್ರಾಧಿಕಾರದಿಂದ ಶೇಕಡಾ 40 ರಷ್ಟು ನಿವೇಶನಗಳನ್ನು ಮಾತ್ರವೇ ಬಿಡುಗಡೆ ಮಾಡುತ್ತಾರೆ. ಶೇಕಡಾ 60 ರಷ್ಟು ನಿವೇಶನಗಳನ್ನು ಅಭಿವೃದ್ಧಿದಾರರೇ ಇಟ್ಟುಕೊಳ್ಳುತ್ತಾರೆ. ಬಡಾವಣೆಯಲ್ಲಿನ ಮೂಲೆ ನಿವೇಶನಗಳನ್ನು ಖರೀದಿದಾರರಿಗೂ ಸಹ ಅನ್ಯಾಯವಾಗಬಾರದು ಎನ್ನುವ ಕಾರಣಕ್ಕಾಗಿ ಅಡಮಾನ ಇಟ್ಟುಕೊಳ್ಳುತ್ತಾರೆ. ಇದು ಒಳ್ಳೆಯ ಉದ್ದೇಶವಾಗಿದೆ. ಇತ್ತೀಚೆಗೆ ರಿಯಲ್ ಎಸ್ಟೇಟ್ (ನಿಯಂತ್ರಣ ಮತ್ತು ಅಭಿವೃದ್ಧಿ) ಕಾಯ್ದೆಯು ಜಾರಿಗೆ ಬಂದಿರುವುದರಿಂದ ಬಿಡುಗಡೆಗೊಳಿಸುವ ನಿವೇಶನಗಳ ಶೇಕಡಾ 40 ರಷ್ಟು ಹಣ ಮಾತ್ರವೇ ಅಭಿವೃದ್ಧಿದಾರರಿಗೆ ದೊರೆಯುತ್ತದೆ. ಈ ಮೊದಲಿನ ಕಾನೂನಿನನ್ವಯ ಮೊದಲು ಶೇಕಡಾ 40 ರಷ್ಟು ನಿವೇಶನಗಳನ್ನು ಮತ್ತು ನಂತರದಲ್ಲಿ ಶೇಕಡಾ 30 ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡುತ್ತಿದ್ದರು. ನಂತರದಲ್ಲಿ ಅಭಿವೃದ್ಧಿದಾರರು ಎಲ್ಲಾ ಮೂಲಭೂತ ಸೌಲಭ್ಯಗಳನ್ನು ಒದಗಿಸಿದ ನಂತರ ಸಕ್ಷಮ ಪ್ರಾಧಿಕಾರದಿಂದ ಬರುವ ಸೂಚನೆಗಳನ್ವಯ ಇನ್ನುಳಿದ ನಿವೇಶನಗಳನ್ನು ಬಿಡುಗಡೆ ಮಾಡುತ್ತಿದ್ದರು. ಶೇಕಡಾ 40 ರಷ್ಟು ನಿವೇಶನಗಳನ್ನು ಬಿಡುಗಡೆಗೊಳಿಸಿದ ನಂತರ, ಶೇಕಡಾ 30 ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡಬೇಕೆಂದು ನಾನು ಸಚಿವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ರಿಯಲ್ ಎಸ್ಟೇಟ್ ವ್ಯಾಪಾರವನ್ನು ಕೈಗಾರಿಕೆ ಎಂಬುದಾಗಿ ಪರಿಗಣಿಸಬೇಕು. ಕೋವಿಡ್-19 ಮತ್ತು ಸರ್ಕಾರದ ಇನ್ನು ಅನೇಕ ಕಾನೂನುಗಳಿಂದಾಗಿ, ಅಭಿವೃದ್ಧಿದಾರರು ಪ್ರತಿಯೊಂದು ಹೆಜ್ಜೆಯಲ್ಲಿಯೂ ಸಹ ಬಹಳ ಕಷ್ಟವನ್ನು ಅನುಭವಿಸುತ್ತಿದ್ದಾರೆ. ಇದಕ್ಕೆ ಸಂಬಂಧಪಟ್ಟಂತೆ ಉದಾಹರಣೆಯೊಂದನ್ನು ಹೇಳಲಿಚ್ಛಿಸುತ್ತೇನೆ. ಅಭಿವೃದ್ಧಿದಾರರು ಮೊದಲು ಭೂಮಿಯನ್ನು ತೆಗೆದುಕೊಳ್ಳುತ್ತಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಒಂದು ವೇಳೆ ತೆಗೆದುಕೊಂಡ ಭೂಮಿಯು ನಿಗದಿತ ವಸತಿ, ಶಿಕ್ಷಣ ಮತ್ತು ಕೈಗಾರಿಕಾ ವಲಯದ ವ್ಯಾಪ್ತಿಯೊಳಗೆ ಇಲ್ಲದಿದ್ದರೆ, ಭೂಮಿಯ ಪರಿವರ್ತನೆ ಮಾಡಿಸಿಕೊಳ್ಳಬೇಕಾಗುತ್ತದೆ. ನಂತರದಲ್ಲಿ ಖಾತೆಯನ್ನು ಬದಲಾಯಿಸಿಕೊಳ್ಳಬೇಕು ; ಆ ನಂತರ ಭೂ ಪರಿವರ್ತನೆಯಾಗಬೇಕು. ಆ ನಂತರದಲ್ಲಿ 'ಪ್ಲ್ಯಾನ್' ನ ಅನುಮೋದನೆಯಾಗುತ್ತದೆ. ಈ ಪ್ರಕ್ರಿಯೆಯಲ್ಲಿ ಇಷ್ಟೊಂದು ಹಂತಗಳಿವೆ. ಸಮಾಜ ಮತ್ತು ಜನ ರಿಯಲ್ ಎಸ್ಟೇಟ್ ವ್ಯಾಪಾರವನ್ನು ಬಹಳ ಲಾಭದಾಯಕವೆಂದು ಭಾವಿಸಿದೆ. ಆದರೆ ವಾಸ್ತವವಾಗಿ ಆ ರೀತಿಯ ಪರಿಸ್ಥಿತಿ ಇಲ್ಲ. ಈ ವ್ಯಾಪಾರದಲ್ಲಿ ಬಹಳ ಕಷ್ಟವಿದೆ. ಪ್ರಕ್ರಿಯೆಯನ್ನು ಸರಳೀಕರಣಗೊಳಿಸಬೇಕೆಂದು ನಾನು ಮನವಿ ಮಾಡುತ್ತೇನೆ. ಯಾವುದೇ ಬಡಾವಣೆಯನ್ನು ಅಭಿವೃದ್ಧಿಗೊಳಿಸಬೇಕಾದರೆ, ಸರ್ಕಾರದ ವಿವಿಧ ಇಲಾಖೆಗಳಾದ ವಿದ್ಯುತ್, ಮಾಲಿನ್ಯ ನಿಯಂತ್ರಣ ಮತ್ತು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಇತ್ಯಾದಿಗಳಿಗೆ ಹಲವಾರು ಬಾರಿ ಅಲೆದಾಡಬೇಕು. ಯಾವುದೇ ಸಕ್ಷಮ ಪ್ರಾಧಿಕಾರದಲ್ಲಿ ಸಂಬಂಧಿತ ಕಡತವು ಅಲ್ಲಿನ ಗುಮಾಸ್ತರಿಂದ ಮೊದಲುಗೊಂಡು ಆಯುಕ್ತರವರೆಗೆ ಅನುಮೋದನೆಗಾಗಿ ಹೋಗುತ್ತದೆ. ಸಕ್ಷಮ ಪ್ರಾಧಿಕಾರದ ಸಭೆಯಲ್ಲಿ ಎಲ್ಲಾ ಸದಸ್ಯರುಗಳಿರುತ್ತಾರೆ. ಇಲ್ಲಿಯವರೆಗೆ ಒಂದು ಹಂತವಾಗುತ್ತದೆ. ಮತ್ತೊಂದು ಹಂತದಲ್ಲಿ ನಿವೇಶನ ಸಂಬಂಧಿತ ಎಲ್ಲಾ ಕೆಲಸಗಳು ಪೂರ್ಣಗೊಂಡ ನಂತರ ಕಡತವು ಪುನಃ ಕಛೇರಿಯ ಎಲ್ಲಾ ವಿಭಾಗಗಳಲ್ಲಿ ಓಡಾಡುತ್ತದೆ. ಹೀಗಾಗಿ ಕಛೇರಿ ಕಡತದ ಪ್ರಕ್ರಿಯೆಗಳನ್ನು ಸರಳೀಕರಣಗೊಳಿಸಬೇಕು. ಕೈಗಾರಿಕೆ ಇಲಾಖೆಯಲ್ಲಿ 'ಸಿಂಗಲ್ ವಿಂಡೋ ಏಜೆನ್ಸಿ' ವ್ಯವಸ್ಥೆಯು ಯಾವ ರೀತಿಯಾಗಿದೆಯೋ ಅದೇ ರೀತಿಯಾಗಿ ಇಲ್ಲಿಯೂ ಸಹ ವ್ಯವಸ್ಥೆ ಮಾಡಿ. ಹಲವಾರು ಕೆಲಸಗಳಿಗೆ ಹತ್ತಾರು ಬಾರಿ ಓಡಾಡುವುದನ್ನು ತಪ್ಪಿಸಿ; ಪ್ರಕ್ರಿಯೆಯನ್ನು ಸರಳೀಕರಣಗೊಳಿಸಿ. ಈಗ ಮಂಡಿಸಿರುವ ವಿಧೇಯಕವು ಬಹಳ ಸಹಕಾರಿಯಾಗಿದೆ. ಬಡಾವಣೆಯ ಅಭಿವೃದ್ಧಿದಾರರಿಗೆ 40:30:30 ಈ ಅನುಪಾತದಲ್ಲಿ ನಿವೇಶನಗಳನ್ನು ಬಿಡುಗಡೆಗೊಳಿಸಿದರೆ, ಬಹಳ ಅನುಕೂಲವಾಗುತ್ತದೆಂದು ಹೇಳಿ, ಈ ವಿಧೇಯಕವನ್ನು ನಾನು ಸ್ವಾಗತಿಸುತ್ತೇನೆ.

**ಶ್ರೀ ಯು.ಬಿ.ವೆಂಕಟೇಶ್(ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ತಿದ್ದುಪಡಿ) ವಿಧೇಯಕ, 2021 ನ್ನು ಮುಖ್ಯಮಂತ್ರಿಗಳ ಪರವಾಗಿ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಮಂಡಿಸಿದ್ದಾರೆ. ಖಾಸಗಿಯವರು ಮಾಡುವ ಬಡಾವಣೆಗೆ ಸರ್ಕಾರದ ನಿಯಂತ್ರಣವೇಕೆ? ಇದರಲ್ಲಿ ಸರ್ಕಾರವು ಯಾವುದೇ ಬಂಡವಾಳವನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೂಡಿರುವುದಿಲ್ಲ. ಸರ್ಕಾರವು ಕೇವಲ ಮಾರ್ಗಸೂಚಿಗಳನ್ನು ಮಾತ್ರವೇ ಮಾಡಲಿ. ಬಡಾವಣೆಯಲ್ಲಿ ಉದ್ಯಾನವನ ಮತ್ತಿತರೆ ನಾಗರಿಕ ಸೌಲಭ್ಯಗಳಿಗೆ ನಿವೇಶನವನ್ನು ಮೀಸಲಿಡಬೇಕು; ಅವುಗಳನ್ನು ಸರ್ಕಾರವು ಸುಪರ್ದಿಗೆ ಪಡೆದುಕೊಳ್ಳಲಿ. ಬಡಾವಣೆಯ ಅಭಿವೃದ್ಧಿದಾರರು ಅಲ್ಲಿನ ಮೂಲೆ ನಿವೇಶನಗಳನ್ನು ಸರ್ಕಾರಕ್ಕೆ ಅಡಮಾನವಿಡಬೇಕು. ಬಡಾವಣೆಯು ಸಂಪೂರ್ಣವಾಗಿ ಅಭಿವೃದ್ಧಿ ಹೊಂದಿದ ಮೇಲೆ, ಸರ್ಕಾರವು ಅಡಮಾನವಿಟ್ಟ ನಿವೇಶನಗಳನ್ನು ಬಿಡುಗಡೆ ಮಾಡುತ್ತದೆ. ಆದರೆ ಜನರು ಅವುಗಳನ್ನು ಅಭಿವೃದ್ಧಿಗೊಳಿಸುವುದು ಹೇಗೆ; ಅವರಿಗೆ ಹಣ ಎಲ್ಲಿಂದ ಬರುತ್ತದೆ? ಯಾವುದೇ ಖರೀದಿದಾರರಿಗೆ ಮೂಲೆ ನಿವೇಶನಗಳನ್ನು ತೋರಿಸಿದಾಗ ಮಾತ್ರವೇ ಅಭಿವೃದ್ಧಿದಾರರಿಗೆ ಹಣ ದೊರೆಯುತ್ತದೆ. ಆದರೆ ಅವುಗಳನ್ನು ಅಡಮಾನವಿಟ್ಟರೆ ಅವರಿಗೆ ಹಣ ಹೇಗೆ ದೊರೆಯುತ್ತದೆ; ಮೂಲೆ ನಿವೇಶನಗಳ ಮಾರಾಟ ಮಾಡುವುದು ಹೇಗೆ? ಸರ್ಕಾರಿ ನಿರ್ಮಿತ ಬಡಾವಣೆಗಳ ಬಗ್ಗೆ ನಾನು ಈ ದಿನ ಪೂರ್ವಾಹ್ನ ಮಾತನಾಡುತ್ತಿದ್ದೆನು. ಬನಶಂಕರಿ ಬಡಾವಣೆಯಲ್ಲಿ ಇಂದಿಗೂ ಸಹ ಅಲ್ಲಿ ವಿದ್ಯುತ್, ನೀರು ಮತ್ತು ಒಳಚರಂಡಿ ಇವುಗಳ ಸೌಕರ್ಯವಿಲ್ಲ. ಸರ್ಕಾರ ನಿರ್ಮಿಸಿರುವ ಬಡಾವಣೆಗಳಲ್ಲಿಯೇ ಮೂಲಭೂತ ಸೌಕರ್ಯಗಳಿಲ್ಲ. ಹೌಸಿಂಗ್ ಬೋರ್ಡ್‌ನವರು 1983 ನೇ ಇಸವಿಯಲ್ಲಿ ಜಿ.ವಿ.ಕೆ.ರಾವ್ ರವರ ಹೆಸರಿನಲ್ಲಿ ಸಮಿತಿಯೊಂದನ್ನು ರಚಿಸಿದ್ದರು. ಸರ್ಕಾರವು ಏನಾದರೂ ಶಿಫಾರಸ್ಸುಗಳನ್ನು ಮಾಡುವುದಿದ್ದರೆ, ಅಂತಹ ಸಮಿತಿಗಳ ಮೂಲಕ ಮಾಡಲಿ. ಆದರೆ, ಖಾಸಗಿಯವರು ಮಾಡುವ ಬಡಾವಣೆಗೆ ಸರ್ಕಾರವು ಏಕಾಏಕಿ ನಿಯಂತ್ರಣ ಹೇರುವುದು ಸರಿಯಲ್ಲ. ನಿರ್ಮಿಸುವ ಬಡಾವಣೆಗಳಲ್ಲಿ ನಾಗರಿಕ ಸೌಲಭ್ಯಗಳನ್ನು ಒದಗಿಸಬೇಕು. ನಿವೇಶನಗಳ ನೊಂದಣಿ ಮಾಡಿದಾಗ ಸರ್ಕಾರಕ್ಕೆ ಆದಾಯ ಬರುತ್ತದೆ. ಅದನ್ನು ಬಿಟ್ಟು ಸರ್ಕಾರವು ಸುಮ್ಮನೆ ನಿಯಂತ್ರಣ ಹೇರಿ, ಜನರಿಗೆ ಏಕೆ ತೊಂದರೆ ನೀಡುತ್ತೀದೆ? ಈಗಾಗಲೇ ವ್ಯಾಪಾರಸ್ಥರೆಲ್ಲರೂ ಬಹಳಷ್ಟು ನಷ್ಟಕ್ಕೊಳಗಾಗಿ ಬದುಕುವುದಕ್ಕಾಗದೇ, ಸತ್ತುಹೋಗುತ್ತಿದ್ದಾರೆ.

**ಶ್ರೀ ಜೆ.ಸಿ.ಮಾಧುಸ್ವಾಮಿ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)(ಮುಖ್ಯಮಂತ್ರಿಗಳ ಪರವಾಗಿ):-** ಮಾನ್ಯ ಸಭಾಪತಿಯವರೇ, ಪ್ರಸ್ತುತ ವಿಧೇಯಕದ ಬಗ್ಗೆ ವಿವರಣೆ ನೀಡುವುದಕ್ಕೆ ಅವಕಾಶ ನೀಡದೇ, ಸದಸ್ಯರು ವಿಧೇಯಕದ ಬಗ್ಗೆ ಮಾತನಾಡಲು ಪ್ರಾರಂಭಿಸಿದರು. ಜನರಿಗೆ ಒಳ್ಳೆಯದಾಗಲೀ ಎನ್ನುವ ಕಾರಣಕ್ಕಾಗಿ ಈ ವಿಧೇಯಕವನ್ನು ಮಂಡಿಸಲಾಗಿದೆ. 2015 ನೇ ಇಸವಿಯಲ್ಲಿ entire area of that planning,

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಂದರೆ ಬಡಾವಣೆಗಳನ್ನು ನಿರ್ಮಿಸಿ, ನಿವೇಶನಗಳನ್ನು ಏನು ಮಾಡಲಾಗುತ್ತದೆಯೋ, ಅಲ್ಲಿ ಎಲ್ಲಾ ರೀತಿಯ ಸೌಕರ್ಯಗಳನ್ನು ಒದಗಿಸಿದ ನಂತರವಷ್ಟೇ ನಿವೇಶನಗಳನ್ನು ವಿತರಣೆ ಮಾಡುವುದಕ್ಕೆ ಅಧಿಕಾರವಿತ್ತು. ಬಡಾವಣೆಯು ಶೇಕಡಾ ನೂರರಷ್ಟು ಅಭಿವೃದ್ಧಿಗೊಂಡಾಗ ಮಾತ್ರವೇ ಸಕ್ಷಮ ಪ್ರಾಧಿಕಾರವು ಬಡಾವಣೆಗಳಿಗೆ ಭೇಟಿ ನೀಡಿ, ತಪಾಸಣೆ ನಡೆಸಿ, ದೃಢೀಕರಣ ನೀಡಿದ ನಂತರವಷ್ಟೇ ನಿವೇಶನಗಳನ್ನು ಹಂಚಿಕೆ ಮಾಡುವ ಅಧಿಕಾರವಿತ್ತು. ಬಡಾವಣೆಯ ಅಭಿವೃದ್ಧಿದಾರರು ಅದನ್ನು ಒಪ್ಪಿಕೊಂಡರೆ, ಸರ್ಕಾರವು ಸಂತೋಷವಾಗಿ ಇದನ್ನು ಒಪ್ಪಿಕೊಳ್ಳುತ್ತಿತ್ತು. ಶೇಕಡಾ ನೂರರಷ್ಟು ಬಡಾವಣೆಯನ್ನು ಅಭಿವೃದ್ಧಿಗೊಳಿಸಲು ಆಗುವುದಿಲ್ಲ; ಅಭಿವೃದ್ಧಿದಾರರ ಬಳಿ ಬಂಡವಾಳವಿರುವುದಿಲ್ಲ ಇತ್ಯಾದಿಗಳ ಬಗ್ಗೆ ಬಹಳಷ್ಟು ಮನವಿಗಳು ಸ್ವೀಕೃತಗೊಂಡವು. ಶ್ರೀ ಅಪ್ಪಾಜಿಗೌಡರು ಪ್ರಸ್ತಾಪಿಸಿದಂತೆ, 40:30:30 ರ ಅನುಪಾತದಲ್ಲಿ ನಿವೇಶನಗಳನ್ನು ಹಂಚಿಕೆ ಮಾಡುವಂತೆ ವಿಧೇಯಕವನ್ನು ಈ ಹಿಂದೆ ಪ್ರಸ್ತಾಪಿಸಲಾಗಿತ್ತು. ಬಡಾವಣೆಯ ಅಭಿವೃದ್ಧಿದಾರರು ಶೇಕಡಾ 40 ರಷ್ಟು ನಿವೇಶನಗಳನ್ನು ಅಭಿವೃದ್ಧಿಗೊಳಿಸಿ, ಅವುಗಳನ್ನು ಮಾರಾಟ ಮಾಡಿದ ನಂತರದಲ್ಲಿ ಶೇಕಡಾ 30 ರಷ್ಟು ನಿವೇಶನಗಳನ್ನು ಅಭಿವೃದ್ಧಿಗೊಳಿಸಿ, ಅವುಗಳನ್ನು ಮಾರಾಟ ಮಾಡುತ್ತಿದ್ದರು. ಆದರೆ ನೀರು ಮತ್ತು ಒಳಚರಂಡಿ ವ್ಯವಸ್ಥೆಯನ್ನು ಪೂರ್ತಿ ಮಾಡಿಕೊಡಿ ಎಂದು ಸರ್ಕಾರವು ಹೇಳಿತು. ಇದನ್ನೂ ಸಹ ಮಾಡುವುದಕ್ಕಾಗುವುದಿಲ್ಲವೆಂದು ಅಭಿವೃದ್ಧಿದಾರರು ಯಥೇಚ್ಛವಾದ ಮನವಿಗಳನ್ನು ಸರ್ಕಾರಕ್ಕೆ ಸಲ್ಲಿಸಿದ್ದರು. ನಿರ್ದಿಷ್ಟವಾಗಿ ಇಂತಿಷ್ಟೇ ಅನುಪಾತದಲ್ಲಿ ನಿವೇಶನಗಳನ್ನು ಅಭಿವೃದ್ಧಿಗೊಳಿಸಿ ಎಂದು ಹೇಳಿದರೆ, ಅವರಿಗೆ ಕಷ್ಟವಾಗುತ್ತದೆ ಎಂದು ಹೇಳಿದರು. In the entire area, scattered areaನಲ್ಲೂ ಕೊಡಬಹುದು ಎಂದು ಹೇಳಲಾಯಿತು. ಬಡಾವಣೆ ಅಭಿವೃದ್ಧಿದಾರರು ಬದುಕುಳಿಯಬೇಕು ಎಂಬ ಕಾರಣಕ್ಕಾಗಿ ಈ ರೀತಿ ಮಾಡಲಾಯಿತು. ಅಭಿವೃದ್ಧಿದಾರರು ಶೇಕಡಾ 40 ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡುತ್ತಾರೆ, ನಂತರದಲ್ಲಿ ಬಡಾವಣೆಯ ಅಭಿವೃದ್ಧಿ ಮಾಡುತ್ತಾರೋ ಅಥವಾ ಬಿಡುತ್ತಾರೋ ಎನ್ನುವುದು ಸರ್ಕಾರಕ್ಕೆ ತಿಳಿಯುವುದಿಲ್ಲ. That is the first stage. ಬಡಾವಣೆಗೆ ರಸ್ತೆ, 3-4 ವಿದ್ಯುತ್ ಲೈನ್‌ಗಳನ್ನು ಹಾಕಿದರೆ ಸಾಕು ಅದು ಮೊದಲನೆ ಹಂತವಾಗುತ್ತದೆ. ಆಗ ಶೇಕಡಾ 40 ರಷ್ಟು ನಿವೇಶನಗಳನ್ನು ಮಾರಾಟ ಮಾಡಲು ಪ್ರಾರಂಭಿಸುತ್ತಾರೆ. ನಂತರದಲ್ಲಿ ಅಭಿವೃದ್ಧಿ ಆಗುತ್ತದೆಯೋ ಅಥವಾ ಇಲ್ಲವೋ; ಈ ಕಾರಣಕ್ಕಾಗಿ ಅಭಿವೃದ್ಧಿದಾರರ ಮೇಲೆ ನಿಯಂತ್ರಣವನ್ನು ಹೊಂದಲು ಬಡಾವಣೆಯ ಮೂಲೆ ನಿವೇಶನಗಳನ್ನು ಸರ್ಕಾರಕ್ಕೆ ಅಡಮಾನವಿಡಬೇಕು. ಒಂದು ವೇಳೆ, ಇಡೀ ಬಡಾವಣೆಯನ್ನು ಅಭಿವೃದ್ಧಿಗೊಳಿಸದೇ, ಮಧ್ಯದಲ್ಲಿಯೇ ಕೈಬಿಟ್ಟು ಹೋದರೆ, ಮೂಲೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಿವೇಶನಗಳು ಸರ್ಕಾರದ ಬಳಿ ಇರುತ್ತವೆ ಎಂಬ ತೀರ್ಮಾನವನ್ನು ಕೈಗೊಳ್ಳಲಾಗಿದೆ. ಇದನ್ನು ಹೊರತುಪಡಿಸಿ, ಅಭಿವೃದ್ಧಿದಾರರಿಗೆ ಕಿರುಕುಳ ಕೊಡುವ ಉದ್ದೇಶವಿಲ್ಲ. ಖಾಸಗಿಯವರ ಮೇಲೆ ಸರ್ಕಾರದ ನಿಯಂತ್ರಣವಿಲ್ಲದಿದ್ದರೆ, ವಿವಿಧ ವಿಸ್ತೀರ್ಣದ ಬಡಾವಣೆಗಳನ್ನು ನಿರ್ಮಿಸಿ, ಆ ಪೈಕಿ ಕೆಲವು ನಿವೇಶನಗಳನ್ನು ಮಾರಾಟ ಮಾಡಿ ಅಭಿವೃದ್ಧಿದಾರರು ಹೊರಟು ಹೋದರೆ, ಅಲ್ಲಿ ನಿವೇಶನ ಖರೀದಿಸಿದ ಸಾರ್ವಜನಿಕರಿಗೆ ಮೂಲಭೂತ ಸೌಕರ್ಯಗಳಾದ ನೀರು, ವಿದ್ಯುತ್, ರಸ್ತೆ, ಒಳಚರಂಡಿ ವ್ಯವಸ್ಥೆ ಇತ್ಯಾದಿಗಳನ್ನು ಒದಗಿಸುವವರು ಯಾರು? ಈ ಜವಾಬ್ದಾರಿಯ ಕಾರಣಕ್ಕಾಗಿ ಬಡಾವಣೆಯ ಮೂಲೆ ನಿವೇಶನಗಳನ್ನು ಸರ್ಕಾರದ ಸುಪರ್ದಿಗೆ ನೀಡಬೇಕೆಂದು ಮತ್ತು ಸಾರ್ವಜನಿಕರಿಗೆ ಎಲ್ಲಾ ರೀತಿಯ ಮೂಲಭೂತ ಸೌಕರ್ಯಗಳನ್ನು ಒದಗಿಸಿದ ನಂತರ ಮೂಲೆ ನಿವೇಶಗಳ ನೋಂದಣಿಯಾಗಲಿ ಎನ್ನುವಂತಹ ನಿರ್ಬಂಧವನ್ನು ಮಾಡಲಾಗಿದೆ. ಪ್ರಸ್ತುತ ವಿಧೇಯಕದ ಮೂಲಕ ಇಂತಹ ಅನುಕೂಲತೆಯನ್ನು ಬಡಾವಣೆಯ ಬಿಲ್ಡರ್ ಅಥವಾ ಅಭಿವೃದ್ಧಿದಾರರಿಗೆ ಸರ್ಕಾರವು ನೀಡುತ್ತಿದೆಯೇ ವಿನಾ ವಿರೋಧ ಪಕ್ಷದ ಸದಸ್ಯರು ಆ ರೀತಿಯ ಭಾಷೆಯನ್ನು ಉಪಯೋಗಿಸಬಾರದು.

(ಮುಂದು)

(980) 8.50 23-09-2021 CS/ GR

**ಶ್ರೀ ಜೆ.ಸಿ.ಮಾಧುಸ್ವಾಮಿ(ಮುಂದು):-**

ಸರ್ಕಾರ ಏಕೆ ಮಧ್ಯೆ ಪ್ರವೇಶ ಮಾಡುತ್ತಿದೆ ಎನ್ನುವುದನ್ನು ಕೇಳಬಾರದು.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೆ, ಸರ್ಕಾರ ಏನು ಕೊಟ್ಟಿಲ್ಲ ಅದನ್ನು ನಾನು ಹೇಳಿದ್ದೇನೆ.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೆ ಬಿ.ಡಿ.ಎ., ಬಡಾವಣೆಗಳನ್ನು ಅಭಿವೃದ್ಧಿಗೊಳಿಸುವುದು ಸರ್ಕಾರದ ಜವಾಬ್ದಾರಿ. ಖಾಸಗಿಯವರು ಬಡಾವಣೆಗಳನ್ನು 40% ಅಭಿವೃದ್ಧಿಗೊಳಿಸಿ, ಉಳಿದಿದ್ದನ್ನು ಬಿಟ್ಟು ಹೋದರೆ ಅದಕ್ಕೆ ಯಾರು ಜವಾಬ್ದಾರಿ? Who is responsible? Who has to take care of that fellow who has purchased the sites from them and builds house in that area? ನಾಳೆ ನಿವೇಶನ ಪಡೆದಿರುವವರು ಸರ್ಕಾರ ಬಡಾವಣೆಯನ್ನು ಅಭಿವೃದ್ಧಿಗೊಳಿಸದಿದ್ದರೂ ಸಹ ಹೇಗೆ ಅನುಮತಿಯನ್ನು ನೀಡಿತು ಎಂದು ಜನ ನಮ್ಮನ್ನು ಕೇಳುತ್ತಾರೆ. We are responsible for that. ಅದಕೋಸ್ಕರವೇ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನ್ಯ ಸಿದ್ದರಾಮಯ್ಯನವರ ನೇತೃತ್ವದ ಸರ್ಕಾರದಲ್ಲಿ ಇಂತಹ ಸಮಸ್ಯೆಗಳು ಬರುವ ಕಾರಣದಿಂದಲೇ ಬಡಾವಣೆಗಳನ್ನು 100% ಡೆವಲಪ್ ಮಾಡದಿದ್ದರೆ ನಿವೇಶನಗಳನ್ನು ಮಾಡುವ ಹಾಗೆಯೇ ಇಲ್ಲವೆನ್ನುವ ಕಾಯಿದೆ ಮಾಡಿದ್ದರು. ಆದರೆ ಜನರಿಂದ ಒತ್ತಡ ಬಂದ ಹಾಗೆಲ್ಲಾ ಈ ಕಾಯಿದೆಗೆ ವಿನಾಯಿತಿಯನ್ನು ನೀಡಿಕೊಂಡು ಬರಲಾಗಿದೆ. We are not giving trouble to them. I am sorry to say this. ನಾನು ಈ ಮಾತನ್ನು ಬೆಳಗ್ಗೆಯೇ ಹೇಳಬೇಕೆಂದಿದ್ದೆನು, ಆದರೆ ಬಿಲ್ ಸದನದಲ್ಲಿ ಬಂದಮೇಲೆ ಉತ್ತರ ಕೊಡೋಣ ಎಂದುಕೊಂಡು ಸುಮ್ಮನಿದ್ದೆನು. ನಾವು ಡೆವಲಪರ್ಸ್‌ಗಳಿಗೆ ಅನುಕೂಲ ಮಾಡಿಕೊಡುವ ದೃಷ್ಟಿಯಿಂದ ಈ ಕಾಯಿದೆಯನ್ನು ತಂದಿದ್ದೇವೆ ಎಂದು ಭಾವಿಸಬಹುದು. ಸರ್ಕಾರ ಎಲ್ಲರಿಗೂ ಅನುಕೂಲ ಮಾಡಿಕೊಡುವ ದೃಷ್ಟಿಯಿಂದ ಈ ಬಿಲ್ ತಂದಿದೆ ಎನ್ನುವುದನ್ನು ಮನಸ್ಸಿನಲ್ಲಿಟ್ಟುಕೊಂಡು ಈ ಮಸೂದೆಗೆ ಅನುಮತಿಯನ್ನು ನೀಡಬೇಕೆಂದು ಸದನವನ್ನು ಕೋರುತ್ತೇನೆ.

**ಶ್ರೀ ಪಿ.ಆರ್.ರಮೇಶ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಸರ್ಕಾರ ಏನು ಈ ಮಸೂದೆಯನ್ನು ಜಾರಿಗೆ ತರುತ್ತಿದೆ, ಅದು ಹಿಂದಿನ ಬಿಲ್‌ಗೆ further reformation or relation ಮಾಡಲಾಗಿದೆ. Further reformation or relaxation ಏನು ಮಾಡುತ್ತೀರೋ ಮಾಡಿ, ಆದರೆ ಬೆಂಗಳೂರಿನ ಸುತ್ತಮುತ್ತ ನೆಲಮಂಗಲ, ಮಾಗಡಿ, ರಾಮನಗರ, ಚನ್ನಪಟ್ಟಣ, ಆನೇಕಲ್ಲು, ಹೊಸಕೋಟೆ ಹೀಗೆ 7-8 Planning Authorities ಇದೆ. ಆದರೆ ಹೊಸದಾಗಿ ನಿರ್ಮಾಣ ಮಾಡುವ ಬಡಾವಣೆಗಳಲ್ಲಿ ಅವರದ್ದೇ ಆದ ಕೆಲವು ಕೆಲಸಕಾರ್ಯಗಳಿರುತ್ತವೆ. ಅದು ಬೀದಿ ದೀಪ, ರಸ್ತೆಗಳ ನಿರ್ಮಾಣ, ಕುಡಿಯುವ ನೀರಿನ ವ್ಯವಸ್ಥೆ, ಉದ್ಯಾನವನ್ನು ಆಟದ ಮೈದಾನಗಳನ್ನು ನಿರ್ಮಿಸುವ ಕೆಲಸಕಾರ್ಯಗಳಿರುತ್ತದೆ. ಅಲ್ಲಿರುವ ಪಾರ್ಕ್ಸ್ ಮತ್ತು ಆಟದ ಮೈದಾನಗಳನ್ನು relinquish ಮಾಡಿ ಕೊಡುತ್ತೀರಾ, ಅದನ್ನು relinquish ಮಾಡುವುದಕ್ಕೆ ಗ್ರಾಮಪಂಚಾಯಿತಿಯವರಿಗೆ ಕೊಡುತ್ತೀರಿ, ಈ ಗ್ರಾಮಪಂಚಾಯಿತಿಗಳಿಗೆ ನೀಡುವಾಗ ಆ ಪಂಚಾಯಿತಿಯಲ್ಲಿ ಆ ಕೆಲಸ ಮಾಡಲು ಅವಶ್ಯವಿರುವ ಮೂಲಭೂತ ಸೌಕರ್ಯಗಳಿವೆಯೇ ಎನ್ನುವುದನ್ನು ನೋಡಬೇಕಾಗುತ್ತದೆ. ಅಗತ್ಯ ಸಿಬ್ಬಂದಿ ಇದೆಯೇ? Solid Waste Management system ಮಾಡಲು ಅವರ ಬಳಿ ಸೌಕರ್ಯ ಇದೆಯೇ ಎನ್ನುವುದನ್ನು ನೋಡಬೇಕಾಗುತ್ತದೆ. ಗ್ರಾಮಪಂಚಾಯಿತಿ ಎಂದರೆ ಗ್ರಾಮ ಒಂದಕ್ಕೆ ಸೀಮಿತವಾಗಿ ಇರುತ್ತದೆ. ಅಲ್ಲಿ 500 ಮನೆಗಳನ್ನು ನಿರ್ವಹಣೆ ಮಾಡಲಿಕ್ಕೆ ಅಗತ್ಯವಿರುವ ಸೌಕರ್ಯವನ್ನು ಅವರು ಇಟ್ಟುಕೊಂಡಿರುತ್ತಾರೆ. ಅಂತಹದ್ದರಲ್ಲಿ 2,000 ನಿವೇಶನಗಳನ್ನು ಮಾಡಿ, ಅವರಿಗೆ ಅವುಗಳನ್ನು ಅಭಿವೃದ್ಧಿಗೊಳಿಸುವ ಕೆಲಸವನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವಹಿಸುವುದು ಎಷ್ಟರಮಟ್ಟಿಗೆ ಸರಿ. ಇದಕ್ಕೆ ಒಂದು ಉದಾಹರಣೆ ನೀಡುವುದಾದರೆ ಬೆಂಗಳೂರಿನ ಸುತ್ತಮುತ್ತ ನಮ್ಮ ತೋಟ ಇತ್ತು, ಆ ತೋಟದ ಸುತ್ತ ಒಂದು ಹೊಸ ಬಡಾವಣೆಯನ್ನು ಮಾಡಲಾಗಿದೆ. ಆ ನಿವೇಶನ ಮೋರಿ ಕಸವನ್ನೆಲ್ಲ ಡ್ರೈನ್‌ಗೆ ಬಿಡುತ್ತಾರೆ. ಆ ಡ್ರೈನ್ ಹೇಗಾಗಿದೆ ಎಂದರೆ ಪಾಯಿಖಾನೆ ನೀರೆಲ್ಲ ಪಕ್ಕದಲ್ಲಿರುವ ಒಂದು ಕೆರೆಗೆ ಹೋಗಿ ಸೇರುತ್ತಿದೆ. ಆ ಕೆರೆ ಸುತ್ತ ಒಂದು ಒಳ್ಳೆಯ ವಾತಾವರಣ ಇದೆ. ಈಗ ಈ ನೀರೆಲ್ಲಾ ಹೋಗಿ ಅಲ್ಲಿ ಸೇರಿದರೆ ಏನಾಗುತ್ತದೆ? 100 ವರ್ಷಗಳ ಕೆಳಗೆ ವೃಷಭಾವತಿ ನದಿ ಹೇಗಿತ್ತು, ಈಗ ಏನಾಗಿದೆ? ಅದೇ ರೀತಿ ಬೆಂಗಳೂರಿನ ಸುತ್ತಮುತ್ತ ಇರುವ ಕೆರೆಗಳನ್ನು ನಾವು ಮುಂದಿನ ದಿವಸಗಳಲ್ಲಿ ನೋಡಬೇಕಾಗುತ್ತದೆ. ಈ ಮಸೂದೆಯಲ್ಲಿ Karnataka State Pollution Control Board ಅನ್ನು ಸೇರಿಸಿಲ್ಲ. ಈ ವಿಧೇಯಕದ ಪುಟ ಸಂಖ್ಯೆ 15ರಲ್ಲಿ ನೀಡಿರುವ Table-B ನೋಡಿ. ಈ ಬಡಾವಣೆಗಳ ಅಭಿವೃದ್ಧಿಗಾಗಿ ಎಲ್ಲೆಲ್ಲಿ N.O.C., ತೆಗೆದುಕೊಳ್ಳಲಾಗುವುದು ಎಂದರೆ, 'Road works' ಗಳಿಗೆ Urban areas, Urban local bodies outside urban limits, Panchayat Raj Engineering Department ಗಳಿಂದ N.O.C., ಪಡೆಯಬೇಕಾಗುತ್ತದೆ, 'Water Supply/Underground Drainage works' ಗಳಿಗೆ , BWSSB limit: BWSSB other urban areas: Karnataka Urban Water supply and Drainage Board (KUWS and DB) outside urban limits: Rural Water Supply Department ಗಳಿಂದ N.O.C., ಪಡೆಯಬೇಕಾಗುತ್ತದೆ. ಇದರಲ್ಲಿ Karnataka State Pollution Control Board ಇಲ್ಲವೇ ಇಲ್ಲ. Ground water ಸಂಪೂರ್ಣವಾಗಿ contaminate ಆಗುತ್ತಿದೆ. ಈಗಾಗಲೇ ಬೆಂಗಳೂರಿನ ಸುತ್ತಮುತ್ತ ಇರುವ ಹಳ್ಳಿಗಳಲ್ಲಿ quality of water is coming down. ಏಕೆಂದರೆ slow urbanisation ಆಗುತ್ತದೆ. ಎಲ್ಲಾ ಕಡೆ pit ಗಳನ್ನು ಹೊಡೆದಿದ್ದು, ಬಹಳಷ್ಟು ನಮಗೆ ground water recharge ಆಗುವಾಗ industrial effluents ಬರುತ್ತದೆ. ದಯಮಾಡಿ ಸರ್ಕಾರ ಇದನ್ನು ಬಹಳ ಗಂಭೀರವಾಗಿ ಪರಿಗಣಿಸಬೇಕು. ಇವತ್ತು ಅಭಿವೃದ್ಧಿಗೆ ನೀವು ಯಾರಿಗೆ ಸಹಾಯ ಮಾಡುತ್ತೀರಾ? ಡೆವಲೆಪ್‌ಮೆಂಟ್ ವಿಷಯದಲ್ಲಿ ಲೇಔಟ್‌ಗಳನ್ನು ಅಭಿವೃದ್ಧಿ ಮಾಡಿವರಿಗೆ ಸಹಾಯ ಮಾಡುತ್ತೀರೋ ಇಲ್ಲ ಜನರಿಗೆ ಸಹಾಯ ಮಾಡುತ್ತೀರೋ ಗೊತ್ತಿಲ್ಲ. ಆದರೆ, what about the environmental issues. You have not addressed it. ಮೊದಲಿಗೆ ಬೆಂಗಳೂರಿನ ಸುತ್ತಮುತ್ತ ಒಂದು ಅಥಾರಿಟಿಯನ್ನು ರಚನೆ ಮಾಡಿ. To take care of Solid Waste Management, to take care of water supply, to take care of STPs, to take care of all amenities - ಇವುಗಳನ್ನು ಗ್ರಾಮಪಂಚಾಯಿತಿಗಳಿಗೆ ಕೊಡುವುದಕ್ಕೆ ಹೋಗಬೇಡಿ. ಅವರಿಗೆ ಅಷ್ಟು ಸಾಮರ್ಥ್ಯ ಇಲ್ಲ. ಈ ಕೆಲಸಗಳಿಗಾಗಿ ಅವರಿಗೆ ದುಡ್ಡು ಖರ್ಚು ಮಾಡುವುದಕ್ಕೂ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆಗಲ್ಲ, ಹಣವನ್ನು ಪಡೆಯುವುದಕ್ಕೂ ಆಗುವುದಿಲ್ಲ. ಅವರಿಗೆ ಗ್ರಾಮಗಳನ್ನು ಅಭಿವೃದ್ಧಿ ಮಾಡುವ ಕೆಲಸ ಸಾಕು. ದಯಮಾಡಿ ಈ ವಿಚಾರವನ್ನು ಗಂಭೀರವಾಗಿ ಪರಿಗಣಿಸಿ, ಇಲ್ಲದಿದ್ದರೆ ಹಳ್ಳಿಗಳೆಲ್ಲಾ ಸ್ಲಮ್ ಆಗಿ ಬಿಡುತ್ತದೆ. ದಯಮಾಡಿ ಇದರ ಬಗ್ಗೆ ಸರ್ಕಾರ ಕ್ರಮ ವಹಿಸಬೇಕು.

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೆ, ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ತಿದ್ದುಪಡಿ ವಿಧೇಯಕ 2021 ಅನ್ನು ನಾನು ಮೊದಲಿಗೆ ಸ್ವಾಗತ ಮಾಡುತ್ತೇನೆ. ನಮ್ಮ ಸರ್ಕಾರ ಆಡಳಿತದಲ್ಲಿದ್ದಾಗ ಈ ಕಾಯಿದೆ ಜಾರಿಗೆ ತರಲಾಗಿತ್ತು, ಅದರಲ್ಲಿ 100% development with all civic amenities, ಅಭಿವೃದ್ಧಿ ಕೆಲಸಕಾರ್ಯಗಳನ್ನು Developers ಮಾಡಬೇಕಾಗಿತ್ತು. ಅದರಲ್ಲಿ ಕುಡಿಯುವ ನೀರು, underground drainage, ವಿದ್ಯುತ್ತಿನ ಸಂಪರ್ಕ ಎಲ್ಲಾ ಆದ ನಂತರ ಬಡಾವಣೆಗಳಿಗೆ ಅನುಮತಿಯನ್ನು ನೀಡಲಾಗುತ್ತಿತ್ತು. ಈಗ Developers ಒತ್ತಡದ ಮೇರೆಗೆ ಕೆಲವು ವಿನಾಯಿತಿಗಳನ್ನು ನೀಡಿಕೊಂಡು ಬರಲಾಗುತ್ತಿದೆ. ಆದರೆ ಇದರ ಮೇಲೆ ನಿಮಗೆ ಸರಿಯಾದ ಗ್ರಿಪ್ ಇರಬೇಕಾಗುತ್ತದೆ. ಯಾರಾದರೂ ಸಾಲ ಸೋಲ ಮಾಡಿ ಜೀವವನ್ನೇ ಒತ್ತೆ ಇಟ್ಟು ಒಂದು ನಿವೇಶನ ಖರೀದಿಸಿರುತ್ತಾರೆ. ಆದರೆ ಅಲ್ಲಿ ಮನೆ ಕಟ್ಟಿಕೊಳ್ಳುವುದಕ್ಕೆ ವಿದ್ಯುತ್ ಸೌಲಭ್ಯ ಇರುವುದಿಲ್ಲ. ರಸ್ತೆ ಇರುವುದಿಲ್ಲ. Sewage water ಹೋಗುವುದಕ್ಕೆ ಸರಿಯಾದ ವ್ಯವಸ್ಥೆ ಇರುವುದಿಲ್ಲ. ಹಾಗಾಗಿ ಸರ್ಕಾರ ಬಡಾವಣೆಗಳನ್ನು ನಿರ್ಮಿಸುವವರ ಮೇಲೆ ಗ್ರಿಪ್ ಇಟ್ಟುಕೊಳ್ಳಬೇಕಾಗುತ್ತದೆ. ಹಾಗಾಗಿ ಗ್ರಾಮಪಂಚಾಯಿತಿಗಳನ್ನು ಇನ್ನೂ ಹೆಚ್ಚಿಗೆ ಬಲಪಡಿಸಿ, ಅವರಿಗೆ ಈ ಕೆಲಸ ಕಾರ್ಯಗಳನ್ನು ವಹಿಸಬಹುದು. ಗ್ರಾಮ ಸ್ವರಾಜ್ಯದ ಕಲ್ಪನೆ ರಾಷ್ಟ್ರಪಿತ ಗಾಂಧೀಜಿಯವರು ಕಂಡ ಕನಸು. ಹಾಗಾಗಿ ಗ್ರಾಮಪಂಚಾಯಿತಿಗಳನ್ನು ಶಕ್ತಿಶಾಲಿಗೊಳಿಸಿ, ಅಲ್ಲಿ ಮೇಲ್ವಿಚಾರಣೆ ಮಾಡಲು ಮತ್ತು Developers ಕಡೆಯಿಂದ ಕೆಲಸ ಮಾಡಿಸಿಕೊಳ್ಳಲು ಏನೇನು ಸೌಲಭ್ಯಗಳು ಬೇಕೋ ಅದನ್ನೆಲ್ಲ ಗ್ರಾಮಪಂಚಾಯಿತಿಗಳಿಗೆ ಕೊಡಿ. ಅದನ್ನು ಬಿಟ್ಟು ಅವರ ಅಧಿಕಾರವನ್ನು ತೆಗೆದು ಬೇರೆಯವರಿಗೆ ನೀಡುವುದು ನನ್ನ ದೃಷ್ಟಿಯಲ್ಲಿ ಸರಿ ಕಾಣುವುದಿಲ್ಲ. ಸ್ಥಳೀಯ ಸಂಸ್ಥೆಗಳು ಗ್ರಾಮಪಂಚಾಯಿತಿ ಇದ್ದರೆ ಗ್ರಾಮಪಂಚಾಯಿತಿಗೆ, ಪಟ್ಟಣ ಪಂಚಾಯಿತಿ ಇದ್ದರೆ ಅಲ್ಲಿಗೆ, ಪುರಸಭೆ ಇದ್ದಲ್ಲಿ ಪುರಸಭೆಗೆ ನಗರ ಸಭೆ ಇದ್ದಲ್ಲಿ ನಗರಸಭೆಗೆ ಬಡಾವಣೆಗಳ ಅಭಿವೃದ್ಧಿಯ ಕೆಲಸಕಾರ್ಯಗಳನ್ನು ವಹಿಸಿ, ಗ್ರಾಮಪಂಚಾಯಿತಿಗಳು ಈ ಕೆಲಸವನ್ನು ಮೇಲ್ವಿಚಾರಣೆ ಮಾಡಲು, work extract ಮಾಡಲು ಅಸಮರ್ಥ ಆದಲ್ಲಿ ಅವರ ಮೇಲೆ ಕ್ರಮ ಕೈಗೊಳ್ಳಿ. ಹಾಗಾಗಿ ಗ್ರಾಮಪಂಚಾಯಿತಿಗಳನ್ನು ಇನ್ನೂ ಹೆಚ್ಚಿಗೆ ಬಲಪಡಿಸಿ, ಈಗ ಈ ಕಾಯಿದೆಗೆ ತಿದ್ದುಪಡಿ ಮಾಡುವ ಮೂಲಕ ಕೆಲವು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವಿನಾಯಿತಿಗಳನ್ನು ನೀಡಲಾಗಿದೆ. ಇದನ್ನು ಇನ್ನೂ ಹೆಚ್ಚಿಗೆ ಮಾಡಬೇಡಿ. ಇಲ್ಲದಿದ್ದರೆ ನಿಮ್ಮ ಮೇಲೆ ಹೆಚ್ಚಿನ ಒತ್ತಡ ತರುತ್ತಾರೆ. ಮುಂದೆ ನಮಗೆ ರಸ್ತೆ ಇಲ್ಲ, ದೀಪ ಇಲ್ಲ, ಮನೆ ಮುಂದೆ ನೀರು ನಿಂತಿದೆ, ಓಡಾಡಲಿಕ್ಕೆ ರಸ್ತೆ ಇಲ್ಲ ಎಂದಾಗ ಸರಿ ಮಾಡಿಸಿ ಕೊಡಿ ಎನ್ನುವ ಒತ್ತಡಗಳು ಬರುತ್ತವೆ. The Government has to take care of them. ಹಾಗಾಗಿ ಇನ್ನೂ ಹೆಚ್ಚಿನ ವಿನಾಯಿತಿಗಳನ್ನು ಕೊಡುವುದಕ್ಕೆ ಹೋಗಬೇಡಿ, ಈಗ ಏನೂ ವಿನಾಯಿತಿಗಳನ್ನು ನೀಡಲಾಗಿದೆ ಅದನ್ನು ಇಲ್ಲಿಗೆ ಮುಕ್ತಾಯಗೊಳಿಸಿ, ಡೆವಲಪರ್ಸ್ ಮೇಲೆ ಒಂದು ಹಿಡಿತ ಇಟ್ಟುಕೊಳ್ಳಿ.

**ಶ್ರೀ ಕೆ.ಸಿ.ಕೊಂಡಯ್ಯ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ತಿದ್ದುಪಡಿ ವಿಧೇಯಕ 2021 ಅನ್ನು ಸ್ವಾಗತಿಸುತ್ತಾ, ಕೆಲವು ಸಲಹೆಗಳನ್ನು ನೀಡಬಯಸುತ್ತೇನೆ. ಏಕೆಂದರೆ ನಮ್ಮ ನಮ್ಮ Bellary Urban Development Authority ನಲ್ಲಿ ವಿಧಾನ ಪರಿಷತ್ತಿನ ಸದಸ್ಯನಾಗಿರುವ ಕಾರಣ ನಾನು ಕೂಡ ಅದರ ಸದಸ್ಯನಾಗಿದ್ದೇನೆ. ಹಿಂದೆ ನಮ್ಮ ಪಕ್ಷದ ಸರ್ಕಾರ ಇದ್ದಾಗ 100% ಅಭಿವೃದ್ಧಿ ಕೆಲಸಗಳನ್ನು ಪೂರೈಸಿದರೆ ಮಾತ್ರ ಬಡಾವಣೆಗಳಿಗೆ ಅನುಮತಿಯನ್ನು ನೀಡಲಾಗುತ್ತಿತ್ತು. ಏಕೆಂದರೆ ಭೂಮಿಯ ಬೆಲೆ ಒಂದೂವರೆ ಕೋಟಿಯಷ್ಟಿತ್ತು, ಆದ್ದರಿಂದ Developer ಇದಕ್ಕೆ ಹಣ ಹಾಕಿ, ಡೆವಲಪ್ ಮಾಡುವಾಗ ಕೆಲವು ವಿನಾಯಿತಿಗಳನ್ನು ಕೇಳುತ್ತಿದ್ದರು, ಅದು 40:30:30, ಇದ್ದದ್ದು ಈಗ 40:60 ಗೂ ತರಲಾಗುತ್ತಿದೆ. ಈ ವಿನಾಯಿತಿಗಳನ್ನು ನೀಡುವುದು ಒಳ್ಳೆಯದೇ. ಏಕೆಂದರೆ ಬಡಾವಣೆಗಳ ಅಭಿವೃದ್ಧಿಯಾಗುತ್ತದೆ. ನಮ್ಮಲ್ಲಿ strict rule ಇದ್ದ ಕಾರಣ ರೆವಿನ್ಯೂ ಸೈಟುಗಳನ್ನು ಮಾಡುತ್ತಿದ್ದರು. ಅದನ್ನು ನಮ್ಮಲ್ಲಿ ತಡೆಹಿಡಿದರು. ಊರಿನ ಮದ್ಯೆ ಸುಮಾರು 20 ರೆವಿನ್ಯೂ ಸೈಟುಗಳನ್ನು ಮಾಡಿದರು. ಆದರೆ 10 ವರ್ಷ ಆದರೂ ಯಾವುದೇ ಅಭಿವೃದ್ಧಿ ಕೆಲಸಕಾರ್ಯಗಳು ನಡೆಯಲಿಲ್ಲ. ಯಾರು ಈ ರೆವಿನ್ಯೂ ಸೈಟುಗಳನ್ನು ಮಾಡಿದ್ದರು, ಅವರ ಬಳಿ ಬಡಾವಣೆಯ ಮ್ಯಾಪ್ ಇಲ್ಲ, Approved Layout Plan ಇಲ್ಲ, ಒಂದು ಕಡೆ 30 ಅಡಿ ರಸ್ತೆ ತೋರಿಸಿದ್ದರೂ ಸಹ ಅಲ್ಲಿ 15 ಅಡಿ ರಸ್ತೆ ಆಯಿತು. ಆನಂತರ Urban Development Authority ಯವರು ಕಠಿಣ ನಿಯಮಗಳನ್ನು ತಂದ ಮೇಲೆ 25,000-30,000 ಸೈಟುಗಳು Approved Layout ನಲ್ಲಿ ಮಾಡಲಾಯಿತು. Change of land user ಬಗ್ಗೆ ನನ್ನದೊಂದು ಸಲಹೆ ಇದೆ.

(ಮುಂದು)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(981)/23-9-2021/9-00/ಎಲ್‌ಎಂ/ಜಿಆರ್

**ಶ್ರೀ ಕೆ.ಸಿ.ಕೊಂಡಯ್ಯ(ಮುಂದು)**:-

Blue book ನಲ್ಲಿ Directorate of Planning ತಯಾರು ಮಾಡಿದ್ದಾರೆ. ಅದಕ್ಕೆ guidelines ಕೊಟ್ಟಿದ್ದಾರೆ. Local Planning Authority ಮತ್ತು Comprehensive Development Plan ಅದರ ಪ್ರಕಾರ ಇದ್ದರೆ ಕೊಡಬಹುದು ಎಂದು ಹೇಳಿದ್ದಾರೆ. Urban Development Authority ನಲ್ಲಿ approve ಆಗಿ ಇಲ್ಲಿಗೆ ಬರಬೇಕು ನಂತರ Directorate of Town and Country Planning ಗೆ ಹೋಗಬೇಕು ಇದು ಆದಮೇಲೆ ಸಿ.ಎಂ., ವರೆಗೆ ಹೋಗುತ್ತದೆ. ಈಗ ನೀವೆ ಅಪ್ರೂವಲ್ ಮಾಡಿಕೊಡಬೇಕು. ಅದು ಬಿಟ್ಟು ಡಿ.ಸಿ., ಯವರ ಅಧ್ಯಕ್ಷತೆಯಲ್ಲಿಯೇ Committee ಮಾಡಿ. ಅಲ್ಲಿ Joint Director of Town and Country Planning ರವರು ಇರುತ್ತಾರೆ. ಅವರು ಅಲ್ಲಿಯೇ ಕ್ಲಿಯರ್ ಮಾಡಿ ಕೊಡಲಿ. ಸುಮ್ಮನೆ ಏಕೆ ಅಲೆದಾಡಬೇಕು. ಇದರಿಂದ ಒಂದು ಒಂದುವರೆ ವರ್ಷ ತಡವಾಗುತ್ತದೆ. ಇವುಗಳು ಆಗುವುದಿಲ್ಲ ಎಂದು ಗೊತ್ತಾದ ತಕ್ಷಣ ಆ ಸೈಟ್‌ಗಳನ್ನು revenue site ಗಳಾಗಿ ಮಾಡಿಬಿಡುತ್ತಾರೆ. ಇದನ್ನು liberalisation ಮಾಡಿ. Guidelines ಇದೆ. ಇದೊಂದನ್ನು ಸೇರಿಸಬೇಕು ಎನ್ನುವುದು ನನ್ನ ಸಲಹೆ.

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)**:- ಮಾನ್ಯ ಸಭಾಪತಿಗಳೆ, I had forgotten to tell one thing. ನಮ್ಮಲ್ಲಿ ಗುಂಟಾ ಮಾಡಿ ಅದನ್ನು ಮಾರಾಟ ಮಾಡುತ್ತಾರೆ. I will tell you what is going on. ಅಲ್ಲಿ ರಸ್ತೆಗಳು ಇರುವುದಿಲ್ಲ. Sewage connections ಇರುವುದಿಲ್ಲ, ವಿದ್ಯುತ್ ಇರುವುದಿಲ್ಲ ಮತ್ತು ಕುಡಿಯಲು ನೀರು ಇರುವುದಿಲ್ಲ. ಒಂದು ಎಕರೆಯಲ್ಲಿ ೪೦ ಗುಂಟಾ ಮಾಡಿ ಮಧ್ಯದಲ್ಲಿ ಒಂದು ಗೆರೆ ಹೊಡೆದುಬಿಡುತ್ತಾರೆ. ಅದೇ ಒಂದು ರಸ್ತೆ. ಮುಂದೆ ಏನು development ಆಗುವುದಿಲ್ಲ. ಜನರು ಗುಂಟಾ ಮಾಡಿರುವ ಸೈಟ್ ತೆಗೆದುಕೊಂಡು ಮನೆ ಕಟ್ಟಿಕೊಳ್ಳುತ್ತಾರೆ. ಅಲಿ ಏನು ಸೌಲಭ್ಯ ಇರುವುದಿಲ್ಲ. ನಂತರ ಬಂದು ನಮಗೆ ಗಂಟು ಬೀಳುತ್ತಾರೆ. Whether the Prevention of Fragmentation Act is in force or repealed. ಇಲ್ಲದಿದ್ದರೆ ಈ ರೀತಿ ಮಾಡದಂತೆ ಸಂಬಂಧಪಟ್ಟವರಿಗೆ ಆದೇಶ ಮಾಡಿ. N.A., land, ಕೃಷಿಯೇತರ ಜಮೀನನ್ನು ಪರಿವರ್ತನೆ ಮಾಡದೆ, ಅದನ್ನೆ ಗುಂಟಾ ಮಾಡಿ ಮಾರಾಟ ಮಾಡಿಬಿಡುತ್ತಾರೆ. ಜನರು ಅಲ್ಲಿ ಮನೆ ಕಟ್ಟಿಕೊಂಡುಬಿಡುತ್ತಾರೆ. ಇದು ಬಹಳ ಕಡೆ ನಡೆಯುತ್ತಿದೆ. ಇದೊಂದು ದೊಡ್ಡ ಸಮಸ್ಯೆಯಾಗಿದೆ. ಇದರ ಬಗ್ಗೆ ಸರ್ಕಾರ ಸೂಕ್ತ ಕ್ರಮವನ್ನು ವಹಿಸಬೇಕು.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಎ.ತಿಪ್ಪೇಸ್ವಾಮಿ(ನಾಮನಿರ್ದೇಶನ ಹೊಂದಿದವರು)**:- ಮಾನ್ಯ ಸಭಾಪತಿಗಳೆ, ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ(ತಿದ್ದುಪಡಿ) ವಿಧೇಯಕ, ಇದು ವಿಶೇಷವಾದ ಕಾಯಿದೆಯಾಗಿದೆ. ಇದನ್ನು ನಾನು Parent ಕಾಯಿದೆ ಅಥವಾ ಮಾತೃ ಕಾಯಿದೆ ಎಂದು ಹೇಳಲು ಇಷ್ಟಪಡುತ್ತೇನೆ. ಯಾವುದೇ Planning Authority ಆಗಿರಬಹುದು, ಅದು ಬಿ.ಡಿ.ಎ., ಬಿ.ಎಂ.ಆರ್.ಡಿ.ಎ., ಬಿ.ಬಿ.ಎಂ.ಪಿ., ಅಥವಾ Urban Development Authorities ಇರಬಹುದು, ಬೆಂಗಳೂರಿನಲ್ಲಿರುವ B.I.A.A.P.A., B.M.I.C.A.P.A., ಎಲ್ಲವು ಈ ಕಾಯಿದೆಯ ಅಡಿಯಲ್ಲಿ ಬರುತ್ತವೆ. ದಿನಾಂಕ: ೬-೭-೨೦೨೧ರಂದು ಇದ್ದಂತಹ ಕಾಯಿದೆಯನ್ನು replace ಮಾಡಲು ಈ ತಿದ್ದುಪಡಿಯನ್ನು ತಂದಿದ್ದಾರೆ. ಇದರಲ್ಲಿ ಪ್ರಮುಖವಾಗಿ ಸೆಕ್ಷನ್ ೪(ಕ) ನಲ್ಲಿ ಸ್ಥಳೀಯ ಯೋಜನಾ ಪ್ರದೇಶಗಳನ್ನು ಹೊರತುಪಡಿಸಿ ಇತರ ಪ್ರದೇಶಗಳನ್ನು ಅಭಿವೃದ್ಧಿಪಡಿಸುವ ಉದ್ದೇಶಗಳನ್ನು ಈಡೇರಿಸಲು ಹಾಗೂ ಅಂತಹ ಪ್ರದೇಶಗಳನ್ನು ಅಭಿವೃದ್ಧಿಪಡಿಸಲು ಪಟ್ಟಣ ಮತ್ತು ಗ್ರಾಮಾಂತರ ಯೋಜನಾ ಅಧಿಕಾರಿಗಳನ್ನು ಸಶಸ್ತ್ರಗೊಳಿಸಲು ಉದ್ದೇಶಿಸಲಾಗಿದೆ. ಅಂದರೆ ಎಲ್ಲಿ Town Planning Authority ರಚನೆಯಾಗಿಲ್ಲ, ಯಾವುದು Town Planning Authority ಯಿಂದ ಹೊರಗಡೆ ಇದೆ, ಅಂತಹ ಪ್ರದೇಶಗಳಲ್ಲಿ ಅದರಲ್ಲಿಯು ಗ್ರಾಮಾಂತರ ಆಗಬಹುದು ಅಂತಹ ಕಡೆಗಳಲ್ಲಿ ಅಧಿಕಾರಿಗಳಿಗೆ Master Plan approval ಮಾಡಲು ಅಧಿಕಾರವನ್ನು ಕೊಡುತ್ತೇವೆ ಎನ್ನುವ ಪ್ರಸ್ತಾವನೆ ಇದೆ ಎಂದು ನಾನು ಭಾವಿಸಿದ್ದೇನೆ. ಇತ್ತೀಚಿನ ದಿನಗಳಲ್ಲಿ ತಾಲ್ಲೂಕು ಕೇಂದ್ರಗಳು, ಹೊಬಳಿ ಕೇಂದ್ರಗಳು, ಗ್ರಾಮ ಪಂಚಾಯಿತಿ ಕೇಂದ್ರಗಳು ಸಾಕಷ್ಟು ರೀತಿಯಲ್ಲಿ ಬದಲಾವಣೆಯಾಗಿವೆ. ಸಾಕಷ್ಟು ಲೇಔಟ್‌ಗಳು ಬರುತ್ತಿವೆ. ಈ ಎಲ್ಲವುಗಳಿಗೂ ಅಪ್ರೂವಲ್ ಪಡೆಯಲು ಜಿಲ್ಲಾ ಕೇಂದ್ರದಲ್ಲಿರುವ Assistant Director ಗೆ ಬರಬೇಕಾಗುತ್ತದೆ. ಇದರಿಂದ ಸಾಕಷ್ಟು ಜನರಿಗೆ ತೊಂದರೆಯಾಗುತ್ತಿದೆ. ಅದಕ್ಕಾಗಿ ತಾಲ್ಲೂಕು ಮಟ್ಟದಲ್ಲಿ ಒಬ್ಬ Assistant Director ಅವರನ್ನು ನೇಮಕ ಮಾಡಿದರೆ ಒಳ್ಳೆಯದಾಗುತ್ತದೆ, ಅಭಿವೃದ್ಧಿಯಾಗುತ್ತದೆ ಮತ್ತು planned growth ಬರುತ್ತದೆ. ಹೆಚ್ಚಿನ ಆದಾಯ ಬಂದು ಸರ್ಕಾರಕ್ಕೂ ಅನುಕೂಲವಾಗುತ್ತದೆ. ಜನರಿಗೂ ಒಳ್ಳೆಯ ಸುಸಜ್ಜಿತವಾದಂತಹ ಬಡಾವಣೆಗಳು ಸಿಗುತ್ತವೆ. ಪ್ರಾಧಿಕಾರಗಳನ್ನು ನಿಯಂತ್ರಿಸುವ ಮತ್ತು ಹತೋಟಿಗೆ ತರಲು ಕಾಯಿದೆಯನ್ನು ಸ್ವಲ್ಪ ಬಲಪಡಿಸಬೇಕು. ಒಂದು ವಿಚಾರವನ್ನು Outer Development Plan ಇರಬಹುದು ಅಥವಾ Comprehensive Development Plan ಇರಬಹುದು ಇವುಗಳನ್ನು ಒಟ್ಟುಗೂಡಿಸಿ Master Plan ಎಂದು ಅಪ್ರೂವಲ್ ಕೊಡಲಾಗುತ್ತಿದೆ. B.M.I.C.A.P.A., ಇದು N.I.C.E.,ಗೆ ಸಂಬಂಧಪಟ್ಟಿರುವುದು. N.I.C.E., is not

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

so nice to you and to me also. ಇದರ ಅನುಭವ ಮಂತ್ರಿಗಳಿಗೂ ಇದೆ ನಮಗೂ ಇದೆ. Bengaluru-Mysore Express way ಮಾಡುವ ಸಲುವಾಗಿ ಸುಮಾರು ೨೦,೧೯೩ ಎಕರೆ ಜಮೀನನ್ನು ಸರ್ಕಾರ ಕೊಟ್ಟಿದೆ. B.M.I.C.A.P.A., ಪ್ರಾಧಿಕಾರ ಶ್ರೀರಂಗಪಟ್ಟಣದಲ್ಲಿರುವ ಜಮೀನನ್ನು Bengaluru P.R.R., ಗೆ ಸೇರಿಸಿ ಅಪ್ರೂವಲ್ ಕೊಟ್ಟಿದೆ, ಯಾವ ರೀತಿ ಹೈಕೋರ್ಟ್‌ನಲ್ಲಿ ಸರ್ಕಾರದ ವಿರುದ್ಧವಾಯಿತು. ಸುಪ್ರಿಮ್ ಕೋರ್ಟ್ ಮಧ್ಯೆ ಬರದೆ ಹೋಗಿದ್ದರೆ ಪೂರ್ತಿ ಯೋಜನೆಯನ್ನು ಅನುಷ್ಠಾನ ಮಾಡಲು ಆಗುತ್ತಿರಲಿಲ್ಲ. ಹೀಗಾಗಿ ಈ ಪ್ರಾಧಿಕಾರಗಳ ಮೇಲೆ ನಿಗಾವಹಿಸಿ ಹತೋಟಿಯಲ್ಲಿಡಬೇಕೆಂದು ಕೇಳಿಕೊಂಡು ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತೇನೆ.

**ಶ್ರೀ ಜೆ.ಸಿ.ಮಾಧುಸ್ವಾಮಿ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)**:- ಮಾನ್ಯ ಸಭಾಪತಿಗಳೆ, Planning Authority clear ಮಾಡುವಾಗ Karnataka State Pollution Control Board ನವರಿಂದ N.O.C., ತೆಗೆದುಕೊಳ್ಳಲೇಬೇಕಾಗುತ್ತದೆ. 'Authority' ಕೆಳಗೆ ರೂಲ್ಸ್‌ನಲ್ಲಿ ನಾವು define ಮಾಡುತ್ತೇವೆ. ಇದು entire planning area ವನ್ನು sewage ನ್ನು ಅಂತಿಮವಾಗಿ ಎಲ್ಲಿಗೆ ತೆಗೆದುಕೊಂಡು ಹೋಗಬೇಕು ಹೇಗೆ dispose off ಮಾಡಬೇಕು ಎನ್ನುವುದನ್ನು ನಿಯಮಗಳಲ್ಲಿಯೇ ನಾವು ರಚನೆ ಮಾಡಿಕೊಟ್ಟಿರುತ್ತೇವೆ. ಈ ಬಿಲ್ ತಂದಿರುವುದು ಖಾಸಗಿ ಬಡಾವಣೆಗಳ ಬಗ್ಗೆ. ಖಾಸಗಿ ಲೇಔಟ್ ಮಾಡುವವವರು, ಫ್ಲಾಟ್‌ಗಳನ್ನು ಕಟ್ಟುವವರು STP ಹಾಕಬೇಕು. ಸಿಕ್ಕಸಿಕ್ಕವರಿಗೆಲ್ಲ U.G.D., connection ಕೊಡಬೇಕಾಗುತ್ತದೆ. ಆ ಸಮಸ್ಯೆಗಳು ಬರುವುದಿಲ್ಲ. ಈ ಕಾನೂನಿನಲ್ಲಿ ಸ್ವಲ್ಪ relaxation ಕೊಟ್ಟಿರುವುದು ಏಕೆ ಎಂದರೆ hundred per cent develop ಮಾಡಲು ಆಗಲಿಲ್ಲ, ಪಾಪ Developers ಗಳಿಗೆ ಕಷ್ಟವಾಯಿತು, layouts ಗಳು ಹಾಗೆ ಉಳಿದುಬಿಟ್ಟವು, ಒಂದು ಕಡೆ demonitisation, ಆಮೇಲೆ money movement ಕಡಿಮೆಯಾಯಿತು, ಕಾನೂನುಗಳು strict ಆದವು ಎಂದು ಇದನ್ನು ಸ್ವಲ್ಪ relax ಮಾಡಲಾಗಿದೆ. ಇದರಿಂದ ಜನರು ಸೈಟ್ ಕೊಂಡುಕೊಳ್ಳಲು ಅನುಕೂಲವಾಗುತ್ತದೆ. ಮಾನ್ಯ ರಮೇಶ್‌ರವರು ತಿಳಿದುಕೊಂಡ ಹಾಗೆ Relinquishment Deed ಅನ್ನು ಪಂಚಾಯಿತಿಗೆ ಮಾಡಿಕೊಡುವುದರಿಂದ ಅವರು strengthen ಆಗುತ್ತಾರೆ. ಅವರು maintain ಮಾಡುತ್ತಾರೆ. ಹಿಂದಿನ ಪ್ರಮಾಣದಲ್ಲಿ sewage develop ಅಗುತ್ತದೆ, ಆ ಭಾಗ pollute ಆಗುತ್ತದೆ ಎನ್ನುವುದಾದರೆ ನಾವು ನಿಮ್ಮ ಸಲಹೆಯನ್ನು ಪಡೆಯುತ್ತೇವೆ. Developed area ಗಳಿಗೆ relinquish ಮಾಡಿಕೊಡಬೇಕು. ಅದಕ್ಕೆ ೩ ವರ್ಷ ಸಮಯವನ್ನು ಕೊಟ್ಟಿದ್ದೇವೆ. ಯಾರು ಲೇಔಟ್ ಮಾಡುತ್ತಾನೆ ಅವನು ೩ ವರ್ಷದಲ್ಲಿ ತನ್ನ ಎಲ್ಲ ಕೆಲಸಗಳನ್ನು ಮಾಡಿಮುಗಿಸಿದಾಗ ಅವನ ಸೈಟನ್ನು ನಾವು pledge

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಿಕೊಂಡಿರುತ್ತೇವೆ, ಅದನ್ನು ವಾಪಸ್ ಕೊಡುತ್ತೇವೆ. ಇಲ್ಲದಿದ್ದರೆ the Government will confiscate the lands. ದಯಮಾಡಿ ಸದರಿ ಬಿಲ್‌ನ್ನು ಪಾಸ್ ಮಾಡಿಕೊಡಬೇಕಾಗಿ ವಿನಂತಿ.

**ಸಭಾಪತಿಯವರು**:- ಪ್ರಸ್ತಾವ ಏನೆಂದರೆ; "ವಿಧಾನಸಭೆಯಿಂದ ತಿದ್ದುಪಡಿಗಳೊಂದಿಗೆ ಅಂಗೀಕೃತವಾದ ರೂಪದಲ್ಲಿರುವ 2021ರ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.**

ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು.

ಖಂಡ **2** ರಿಂದ **5**ರವರೆಗೆ

**ಸಭಾಪತಿಯವರು**:- "ಖಂಡ 2 ರಿಂದ 5ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**.

(ಖಂಡ 2ರಿಂದ 5ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು )

ಖಂಡ **1** ಇತ್ಯಾದಿ

**ಸಭಾಪತಿಯವರು**:- ಪ್ರಸ್ತಾವ ಏನೆಂದರೆ, "ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.**

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತಿಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಪ್ರಸ್ತಾವದ ಅಂಗೀಕಾರ**

**ಶ್ರೀ ಜೆ.ಸಿ.ಮಾಧುಸ್ವಾಮಿ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):- ಮಾನ್ಯ ಸಭಾಪತಿಯವರೇ,** "ವಿಧಾನಸಭೆಯಿಂದ ತಿದ್ದುಪಡಿಗಳೊಂದಿಗೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಂಗೀಕೃತವಾದ ರೂಪದಲ್ಲಿರುವ 2021ರ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು**:- ಪ್ರಸ್ತಾವ ಏನೆಂದರೆ; "ವಿಧಾನಸಭೆಯಿಂದ ತಿದ್ದುಪಡಿಗಳೊಂದಿಗೆ ಅಂಗೀಕೃತವಾದ ರೂಪದಲ್ಲಿರುವ 2021ರ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು)**

(**ಮುಂದು**)

(982)23-09-2021(09-10)bsd-md

**ಉ) ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ತಿದ್ದುಪಡಿ) ವಿಧೇಯಕ, 2020**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಜೆ.ಸಿ. ಮಾಧುಸ್ವಾಮಿ (ಸಣ್ಣ ನೀರಾವರಿ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):-** ಮಾನ್ಯ ಸಭಾಪತಿಯವರೇ, 2020 ರ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಶ್ರೀ ಜೆ.ಸಿ. ಮಾಧುಸ್ವಾಮಿಃ-** ಮಾನ್ಯ ಸಭಾಪತಿಯವರೇ, ನಮ್ಮ ವಿಧಾನ ಮಂಡಲವನ್ನು ಎರಡು ಭಾಗಗಳಾಗಿ ವಿಧಾನ ಸಭೆ ಮತ್ತು ವಿಧಾನ ಪರಿಷತ್ತು ಎಂದು ಮಾಡಿದ್ದೇವೆ. ಆದರೆ ಇದಕ್ಕೆ ಪೂರಕವಾಗಿ ಹಾಗೂ ಮೂಲಭೂತವಾಗಿ ಇದ್ದ Board ಮಾತ್ರ ಹಾಗೆ ಉಳಿದುಕೊಂಡು ಬಿಟ್ಟಿದೆ. ಆ Board ನಲ್ಲಿ ವಿಧಾನ ಪರಿಷತ್ತಿನ ಸಭಾಪತಿಯವರು, ವಿಧಾನ ಸಭೆಯ Hon'ble Speaker, Hon'ble Chief Minister and Hon'ble Law Minister ಗಳಿರುತ್ತಾರೆ. ಕೆಲವು legal consequences start ಆಯಿತು. ಅದನ್ನು ಇಲ್ಲಿ ಹೇಳುವುದಕ್ಕೆ ಆಗುವುದಿಲ್ಲ. ಇದಲ್ಲದೇ ಕೆಲವು pensions ಅಥವಾ ex-members medical reimbursement ಗಳಂತಹವುಗಳನ್ನು ಕೊಟ್ಟಾಗ unnecessary ಯಾಗಿ ಅದು ಇದು club ಆಗುವುದು ಬೇಡ, ಇಲ್ಲಿನ disciplinary action ಗೆ ವಿಧಾನ ಸಭಾಧ್ಯಕ್ಷರು ಬಾಯಿ ಹಾಕುವುದು, ಅಲ್ಲಿನ ವಿಷಯಗಳಿಗೆ ಇಲ್ಲಿನವರು ಬಾಯಿ ಹಾಕುವುದು ಬೇಡ ಎಂದು ತೀರ್ಮಾನಿಸಿ, ೨೦೨೦ರಲ್ಲಿ bill

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತೆಗೆದುಕೊಂಡು pass ಮಾಡಿದ್ದೇವೆ. ಈ bill ಉದ್ದೇಶ ಏನೆಂದರೆ ವಿಧಾನ ಪರಿಷತ್ತಿಗೆ ಒಂದು Board, ವಿಧಾನ ಸಭೆಗೆ ಒಂದು Board ಅನ್ನು ಮಾಡುತ್ತಿದ್ದೇವೆ. ಇದಕ್ಕೆ ವಿಧಾನ ಸಭೆಯ ಸಭಾಪತಿಯವರು ಅಧ್ಯಕ್ಷರಾಗಿದ್ದು, Hon'ble Chief Minister and Hon'ble Law Minister ಗಳು member ಆಗಿರುತ್ತಾರೆ. ಆದ್ದರಿಂದ ಸಂಪೂರ್ಣ ವಿಭಜನೆ ಮಾಡಬೇಕೆಂದು ತಂದಿದ್ದು, ದಯಮಾಡಿ ಅಂಗೀಕರಿಸಬೇಕೆಂದು ಕೋರುತ್ತೇನೆ.

**ಶ್ರೀ ಎಸ್.ಆರ್. ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, By metes and bounds ಅನ್ನುವಂತೆ ೨ Board ಗಳನ್ನು independent ಆಗಿ exclusively divide ಮಾಡಿಬಿಟ್ಟರು ಎನ್ನುವಂತೆ ಆಯಿತು. ಕೆಲವು problems ಬರುತ್ತವೆ. ಹೇಗಿದ್ದರೂ ವಿಭಜನೆ ಆಗಿದೆ, Board ಅನ್ನು ಮಾತ್ರ ಏಕೆ common ಇಡಬೇಕು? Board ಅನ್ನು ೨ ಮಾಡಿಬಿಡುವುದು.

**ಶ್ರೀ ಜೆ.ಸಿ. ಮಾಧುಸ್ವಾಮಿಃ-** ಇದು medical reimbursement expense...

**Sri S.R.PATIL:-** There may be some complications.

**ಶ್ರೀ ಜೆ.ಸಿ. ಮಾಧುಸ್ವಾಮಿಃ-** ಇಲ್ಲದಿದ್ದರೆ ಎರಡನ್ನೂ ಒಂದು ಮಾಡಿಬಿಡಿ, ನಮಗೇನೂ ತೊಂದರೆ ಇಲ್ಲ.

**ಶ್ರೀ ಎಸ್.ಆರ್. ಪಾಟೀಲ್:-** ಬೇಡ, ಅದು ಆಗಲಾರದ ಮಾತು. ಈ bill ಅನ್ನು ಸ್ವಾಗತ ಮಾಡುತ್ತೇವೆ, bill pass ಮಾಡೋಣ.

**ಸಭಾಪತಿಯವರುಃ-** ಪ್ರಸ್ತಾವ ಏನೆಂದರೆ;

"ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2020 ರ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

**<u>ಪ್ರಸ್ತಾವ ಅಂಗೀಕರಿಸಲ್ಪಟ್ಟಿತು</u>**

ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಖಂಡ ೨**

ಸಭಾಪತಿಯವರುಃ- " ಖಂಡ ೨ನ್ನು ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಖಂಡ ೨ನ್ನು ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

**ಖಂಡ ೧ ಇತ್ಯಾದಿ**

**ಸಭಾಪತಿಯವರುಃ** ಪ್ರಸ್ತಾವ ಏನೆಂದರೆ;

" ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅದಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅದಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಪ್ರಸ್ತಾವದ ಅಂಗೀಕಾರ**

**ಶ್ರೀ ಜೆ.ಸಿ. ಮಾಧುಸ್ವಾಮಿ (ಸಣ್ಣ ನೀರಾವರಿ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):-** ಮಾನ್ಯ ಸಭಾಪತಿಯವರೇ, ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2020 ರ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರುಃ-** ಪ್ರಸ್ತಾವ ಏನೆಂದರೆ;

"ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2020 ರ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಊ) ಕರ್ನಾಟಕ ಪೌರಸಭೆಗಳು ಮತ್ತು ಕೆಲವು ಇತರ ಕಾನೂನು (೨ನೇ ತಿದ್ದುಪಡಿ) ವಿಧೇಯಕ, 2021**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಎನ್. ನಾಗರಾಜು (ಎಂಟಿಬಿ) (ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ವಲಯ ಕೈಗಾರಿಕೆ ಸಚಿವರು):-** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ ೨೦೨೧ ರ ಕರ್ನಾಟಕ ಪೌರಸಭೆಗಳು ಮತ್ತು ಕೆಲವು ಇತರ ಕಾನೂನು (೨ನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಶ್ರೀ ಎನ್. ನಾಗರಾಜು (ಎಂಟಿಬಿ) (ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ವಲಯ ಕೈಗಾರಿಕೆ ಸಚಿವರು):-** ಮಾನ್ಯ ಸಭಾಪತಿಯವರೇ, ಈ bill ಅನ್ನು ಪ್ರಸ್ತುತಪಡಿಸುವ ಉದ್ದೇಶವೇನೆಂದರೆ, ನಗರ ಸಂಸ್ಥೆಗಳ ವ್ಯಾಪ್ತಿಯಲ್ಲಿ advertisement tax ಎಂಬ ಪದವನ್ನು ಕಾಯ್ದೆಯಲ್ಲಿ ಸೇರಸಲಾಗಿದ್ದು, ಈ ತೆರಿಗೆ ಎಂಬ ಪದವಿರುವುದರಿಂದ ನಗರ ಸ್ಥಳೀಯ ಸಂಸ್ಥೆಗಳು GST (Goods and Services Tax) ಹಣವನ್ನು ಪಾವತಿಸಬೇಕಾಗುತ್ತದೆ. ಆ GST ಹಣವನ್ನು ತಪ್ಪಿಸಲು ಹಾಗೂ ಸ್ಥಳೀಯ ಸಂಸ್ಥೆಗಳಿಗೆ ತೀವ್ರ ಆದಾಯದ ಕೊರತೆಯನ್ನು ನೀಗಿಸಲು ತೆರಿಗೆ ಪದದ ಬದಲು ಶುಲ್ಕ ಅಂದರೆ fees ಪದವನ್ನು ಸೇರಿಸುವ ಸಂಬಂಧ ಈ ಕಾಯ್ದೆಯನ್ನು ಮಂಡಿಸಲಾಗಿದೆ.

**ಶ್ರೀ ಕೆ.ಎ. ತಿಪ್ಪೇಸ್ವಾಮಿ (ನಾಮನಿರ್ದೇಶಿತರು):-** ಇದು double taxation ಆಗುವುದಿಲ್ಲವೇ?

**Sri J.C.MADHUSWAMY:-** No, no.

**ಶ್ರೀ ಕೆ.ಎ. ತಿಪ್ಪೇಸ್ವಾಮಿ:-** ಒಂದು ಕಡೆ GST ಕೊಡಬೇಕು, advertisement tax ಗೂ ಕೊಡಬೇಕು.

**Sri J.C.MADHUSWAMY:-** Mr. Chairman Sir, The State Government cannot collect GST over advertisements.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎನ್. ನಾಗರಾಜು (ಎಂಟಿಬಿ) (ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ವಲಯ ಕೈಗಾರಿಕೆ ಸಚಿವರು):-** ಮಾನ್ಯ ಸಭಾಪತಿಯವರೇ, ಇದು ಕೇವಲ advertisements ಗೆ ಅಷ್ಟೆ.

**ಶ್ರೀ ಕೆ.ಎ. ತಿಪ್ಪೇಸ್ವಾಮಿಃ-** ಒಂದೇ ಸಂಸ್ಥೆ ಎರಡು ಬಾರಿ recommend ಮಾಡಿದಾಗ double taxation ಆಗುವುದಿಲ್ಲವೇ?

**ಶ್ರೀ ಜೆ.ಸಿ. ಮಾಧುಸ್ವಾಮಿ (ಸಣ್ಣ ನೀರಾವರಿ ಮತ್ತು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)-** ಇಲ್ಲಿ advertisement ಮೇಲೆ GST ಆದ ಮೇಲೆ ರಾಜ್ಯ ಸರ್ಕಾರ tax collect ಮಾಡುವುದಕ್ಕೆ ಆಗುವುದಿಲ್ಲ ಎಂದು ಬೇರೆ ರೂಪದಲ್ಲಿ Municipality Corporation ಗಳಿಗೆ help ಆಗಲಿ ಎಂದು ಈ bill ತಂದಿದ್ದೇವೆ. ಇದರಲ್ಲಿ two times tax ಆಗುವುದಿಲ್ಲ. We have no authority to collect tax after GST. GST ಯಲ್ಲಿ ಮಾಡುವಂತೆ ಇಲ್ಲ. Municipality ಯವರಿಗೆ ಅಧಿಕಾರ ಕೊಡುತ್ತಿದ್ದೇವೆ. ಅದರ ಮೇಲೆ tax collect ಮಾಡಿಕೊಂಡು ಸ್ವಲ್ಪ strengthen ಆಗಲಿ ಎಂದು ಮಾಡಿದ್ದೇವೆ. ಇದರಲ್ಲಿ ಎರಡು point ಆಗುವುದಿಲ್ಲ. The Government has no power to collect tax on hoardings and advertisement boards.

**ಶ್ರೀ ಕೆ.ಎ. ತಿಪ್ಪೇಸ್ವಾಮಿಃ-** ಬೇರೆ ರೂಪದಲ್ಲಿ ತೆಗೆದುಕೊಳ್ಳುತ್ತಿದ್ದಾರೆ.

**ಶ್ರೀ ಜೆ.ಸಿ. ಮಾಧುಸ್ವಾಮಿಃ-** ಅವರು ಕೊಡಲಿ ಬಿಡಿ, Municipality ಗಳು ಬದುಕಬೇಕಲ್ಲವೇ? ಸುಮ್ಮ ಸುಮ್ಮನೆ Municipality ಗಳನ್ನು ನಡೆಸುವುದಕ್ಕೆ ಆಗುತ್ತದೆಯೇ?

**ಸಭಾಪತಿಯವರುಃ-** ಪ್ರಸ್ತಾವ ಏನೆಂದರೆ;

"ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ ೨೦೨೧ ರ ಕರ್ನಾಟಕ ಕರ್ನಾಟಕ ಪೌರಸಭೆಗಳು ಮತ್ತು ಕೆಲವು ಇತರ ಕಾನೂನು (೨ನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

**<u>ಪ್ರಸ್ತಾವ ಅಂಗೀಕರಿಸಲ್ಪಟ್ಟಿತು</u>**

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು

**ಖಂಡ ೨ ರಿಂದ ೩ ರವರೆಗೆ**

**ಸಭಾಪತಿಯವರುಃ-** “ ಖಂಡ ೨ ರಿಂದ ೩ನ್ನು ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ”

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಖಂಡ ೨ರಿಂದ ೩ ರವರೆಗೆ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

**ಖಂಡ ೧ ಇತ್ಯಾದಿ**

**ಸಭಾಪತಿಯವರುಃ** ಪ್ರಸ್ತಾವ ಏನೆಂದರೆ;

“ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅದಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ”

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅದಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಪ್ರಸ್ತಾವದ ಅಂಗೀಕಾರ**

**ಶ್ರೀ ಎನ್. ನಾಗರಾಜು (ಎಂಟಿಬಿ) (ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ವಲಯ ಕೈಗಾರಿಕೆ ಸಚಿವರು):-** ಮಾನ್ಯ ಸಭಾಪತಿಯವರೇ, ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ ೨೦೨೧ ರ ಕರ್ನಾಟಕ ಪೌರಸಭೆಗಳು ಮತ್ತು ಕೆಲವು ಇತರ ಕಾನೂನು (೨ನೇ ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರುಃ-** ಪ್ರಸ್ತಾವ ಏನೆಂದರೆ;

“ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2021 ರ ಕರ್ನಾಟಕ ಪೌರಸಭೆಗಳು ಮತ್ತು ಕೆಲವು ಇತರ ಕಾನೂನು (೨ನೇ ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು”

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.**

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಋ)ಕರ್ನಾಟಕ ಖಾದಿ ಮತ್ತು ಗ್ರಾಮೋದ್ಯೋಗಗಳ (ತಿದ್ದುಪಡಿ) ವಿಧೇಯಕ, 2021**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಎನ್. ನಾಗರಾಜು (ಎಂಟಿಬಿ) (ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ವಲಯ ಕೈಗಾರಿಕೆ ಸಚಿವರು):-** ಮಾನ್ಯ ಸಭಾಪತಿಯವರೇ, ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ ೨೦೨೧ ರ ಕರ್ನಾಟಕ ಖಾದಿ ಮತ್ತು ಗ್ರಾಮೋದ್ಯೋಗಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಶ್ರೀ ಜೆ.ಸಿ. ಮಾಧುಸ್ವಾಮಿ (ಸಣ್ಣ ನೀರಾವರಿ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಶ್ರೀ ಎನ್. ನಾಗರಾಜು (ಎಂಟಿಬಿ)ರವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಇದರಲ್ಲಿ ಅಂತಹದ್ದೇನೂ ಇಲ್ಲ, ನಮ್ಮ ಖಾದಿ ಗ್ರಾಮೋದ್ಯೋಗ ಇಲಾಖೆಯಲ್ಲಿ business ಬಹಳ ಕಡಿಮೆಯಾಗಿ staff ಕಡಿಮೆ ಮಾಡಲು ಈ bill ತಂದಿದ್ದೇವೆ. We have brought this act to reduce the staff of the board.

**ಶ್ರೀ ಎಸ್.ಆರ್. ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ವ್ಯವಹಾರಗಳಿಗೆ ....... ಆಗುವಂತೆ, ಖಾದಿಯನ್ನು ಒಂದು ದಿನ ನಿಲ್ಲಿಸಿಬಿಡುತ್ತಾರೆ. ಇನ್ನು ಖಾದಿ ಭಂಡಾರ ತೆಗೆದುಬಿಡಬೇಕೆ? ಅದನ್ನು ಬಲಪಡಿಸಬೇಕು, ಮುಂದೆ ಕತೆ ಏನಾಗುತ್ತದೋ?

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ;

"ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ ೨೦೨೧ ರ ಕರ್ನಾಟಕ ಖಾದಿ ಮತ್ತು ಗ್ರಾಮೋದ್ಯೋಗಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು

"ತಿದ್ದುಪಡಿಯಾಗದ ಪ್ರತಿ; ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಖಂಡ ೨**

**ಸಭಾಪತಿಯವರುಃ-** " ಖಂಡ ೨ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಖಂಡ ೨ ನ್ನು ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

**ಖಂಡ ೧ ಇತ್ಯಾದಿ**

**ಸಭಾಪತಿಯವರುಃ** ಪ್ರಸ್ತಾವ ಏನೆಂದರೆ;

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅದಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅದಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಪ್ರಸ್ತಾವದ ಅಂಗೀಕಾರ**

**ಶ್ರೀ ಎನ್. ನಾಗರಾಜು (ಎಂಟಿಬಿ) (ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ವಲಯ ಕೈಗಾರಿಕೆ ಸಚಿವರು):-** ಮಾನ್ಯ ಸಭಾಪತಿಯವರೇ, ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ ೨೦೨೧ ರ ಕರ್ನಾಟಕ ಖಾದಿ ಮತ್ತು ಗ್ರಾಮೋದ್ಯೋಗಗಳ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರುಃ-** ಪ್ರಸ್ತಾವ ಏನೆಂದರೆ;

"ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ ೨೦೨೧ ರ ಕರ್ನಾಟಕ ಖಾದಿ ಮತ್ತು ಗ್ರಾಮೋದ್ಯೋಗಗಳ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

**(ಮುಂದು)**

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(983)/23.09.2021/9.20/ಹೆಚ್‌ವಿ:ಎಂಡಿ

(ಸಭಾಪತಿಯವರ ಉಪಸ್ಥಿತಿ)

## ಎ) ಕರ್ನಾಟಕ ಪೊಲೀಸು(ತಿದ್ದುಪಡಿ) ವಿಧೇಯಕ, 2021

## ಪರ್ಯಾಲೋಚನ ಪ್ರಸ್ತಾವ

**ಶ್ರೀ ಆರಗ ಜ್ಞಾನೇಂದ್ರ(ಗೃಹ ಸಚಿವರು):-** ಸನ್ಮಾನ್ಯ ಸಭಾಪತಿಯವರೇ, 2021ರ ಕರ್ನಾಟಕ ಪೊಲೀಸು(ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

## ಪ್ರಸ್ತಾವವನ್ನು ಮಂಡಿಸಲಾಯಿತು

**ಶ್ರೀ ಆರಗ ಜ್ಞಾನೇಂದ್ರ(ಗೃಹ ಸಚಿವರು):-** ಸನ್ಮಾನ್ಯ ಸಭಾಪತಿಯವರೇ, ಲಾಟರಿ ಮತ್ತು ಜೂಜಾಟ ಎನ್ನುವುದು ಸಾಮಾಜಿಕ ಪಿಡುಗಾಗಿದೆ. ಇತ್ತೀಚಿನ ದಿನಗಳಲ್ಲಿ ಇವುಗಳ ಹಾವಳಿ ಹೆಚ್ಚಾಗುತ್ತಿದೆ. ಈ ಚಟಕ್ಕೆ ಬಿದ್ದ ಕೆಲವೇ ಕೆಲವು ಜನರು ಕೋಟ್ಯಾಧಿಪತಿಗಳಾಗುತ್ತಿದ್ದಾರೆ. ಉಳಿದಂತೆ ಸಾವಿರಾರು ಕುಟುಂಬಗಳು ಬೀದಿಗೆ ಬೀಳುತ್ತಿವೆ. ಇಂತಹ ಪ್ರಕರಣಗಳು ಕಂಡುಬಂದಾಗ ಪೊಲೀಸಿನವರು ರೈಡ್ ಮಾಡಿ, ಅರೆಸ್ಟ್ ಮಾಡಿದರೆ, non-cognizable offence ಎನ್ನುವ ಕಾರಣಕ್ಕಾಗಿ ತಕ್ಷಣವೇ ಬೇಲ್ ಸಿಕ್ಕಿ ಹೊರಗೆ ಬರುತ್ತಾರೆ. ಪುನಃ ಇದನ್ನೇ ದಂಧೆಯನ್ನು ಪ್ರಾರಂಭ ಮಾಡುತ್ತಾರೆ. ಕರ್ನಾಟಕ ರಾಜ್ಯದ ಉಚ್ಚ ನ್ಯಾಯಾಲಯದ ಧಾರವಾಡ ಪೀಠ ಇತ್ತೀಚೆಗೆ ಕ್ರಿಮಿನಲ್ ಮೊಕದ್ದಮೆಯೊಂದರಲ್ಲಿ, 'ಪೊಲೀಸ್ ಕಾಯಿದೆಯಡಿಯಲ್ಲಿ ಜೂಜಾಟಕ್ಕೆ ಸಂಬಂಧಿಸಿದ ಕಲಂಗಳು non-cognizable ಅಪರಾಧಗಳಾಗಿರುವುದರಿಂದ ನೀವು ಆವರಣಕ್ಕೆ ಹೋಗಿ ರೈಡ್ ಮಾಡುವಂತಿಲ್ಲ. ಒಂದು ವೇಳೆ ರೈಡ್ ಮಾಡಲೇಬೇಕಾದರೆ, ರೈಡ್ ಮಾಡುವ ಮುನ್ನ ಮ್ಯಾಜಿಸ್ಟ್ರೇಟ್‌ನವರ ಅನುಮತಿಯನ್ನು ಪಡೆದುಕೊಂಡು ಹೋಗಬೇಕು' ಎನ್ನುವ ತೀರ್ಪನ್ನು ನೀಡಿತ್ತು. ಈ ಹಿನ್ನೆಲೆಯಲ್ಲಿ ಈ ತಿದ್ದುಪಡಿ ವಿಧೇಯಕವನ್ನು ತರಬೇಕಾದಂತಹ ಸನ್ನಿವೇಶ ಬಂದಿದೆ.

ಸನ್ಮಾನ್ಯ ಸಭಾಪತಿಯವರೇ, ತಂತ್ರಜ್ಞಾನದ ಬೆಳವಣಿಗೆಯಿಂದ ಸ್ಮಾರ್ಟ್‌ಫೋನ್‌ಗಳು ಎಲ್ಲಾ ಕಡೆಗಳಲ್ಲಿ ದೊರೆಯುತ್ತಿರುವುದರಿಂದ ಆನ್‌ಲೈನ್ ಮತ್ತು ಮೊಬೈಲ್ ಆಪ್‌ಗಳಿಂದ ಜೂಜಾಟವು ಹೆಚ್ಚಾಗಿರುತ್ತದೆ. ಆದ್ದರಿಂದ ಕರ್ನಾಟಕ ಪೊಲೀಸ್ ಕಾಯಿದೆಯ ಶಿಕ್ಷಾರ್ಹ ಕಲಂಗಳು cognizable ಅಪರಾಧಗಳೆಂದು ಮಾಡುವ ಉದ್ದೇಶದಿಂದ ಮತ್ತು ಆನ್‌ಲೈನ್

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಜೂಜಾಟವನ್ನು ನಿಯಂತ್ರಿಸುವ ಉದ್ದೇಶದಿಂದ ಈ ತಿದ್ದುಪಡಿಯನ್ನು ತರಲಾಗಿದೆ. ಇದರಲ್ಲಿ ಶಿಕ್ಷೆಯ ಪ್ರಮಾಣವನ್ನು ಮತ್ತು ದಂಡದ ಪ್ರಮಾಣವನ್ನು ಹೆಚ್ಚು ಮಾಡಿದ್ದೇವೆ. ಈ ತಿದ್ದುಪಡಿ ವಿಧೇಯಕದಲ್ಲಿ ಒಟ್ಟು 7 ಕಲಂಗಳಿಗೆ ತಿದ್ದುಪಡಿಯನ್ನು ತರಲಾಗಿದೆ. ಇವುಗಳ ಜೊತೆಗೆ ಒಂದು ಹೊಸ ಕಲಂ ಅನ್ನು ಸಹ ಸೇರಿಸಲಾಗಿದೆ. ಇವುಗಳ ವಿವರ ಈ ಕೆಳಕಂಡಂತಿದೆ;

ಪೊಲೀಸ್ ಕಾಯಿದೆಯ ಕಲಂ 2ರಲ್ಲಿ ವಿವಿಧ ಪದಗಳ ವ್ಯಾಖ್ಯಾನ ಮಾಡಲಾಗಿದ್ದು, ಅವುಗಳಲ್ಲಿ cyber-space, online gaming, betting ಇತ್ಯಾದಿ ಪದಗಳನ್ನು ಸೇರಿಸಲಾಗಿದೆ. ಇದುವರೆವಿಗೂ ಈ ಪದಗಳು ಇರಲಿಲ್ಲ. ಆನ್‌ಲೈನ್ ಜೂಜಾಟದ ನಿಷೇಧವನ್ನು ಇಲ್ಲಿ ಸೇರಿಸಲಾಗಿದೆ. ಕಲಂ 79 ಮತ್ತು 80ರಲ್ಲಿ ಶಿಕ್ಷೆಯ ಪ್ರಮಾಣ ಮತ್ತು ದಂಡದ ಪ್ರಮಾಣವನ್ನು ಹೆಚ್ಚಿಸಲಾಗಿದೆ. ಕಲಂ 87ರಲ್ಲಿ " ಅಂಥ ಜೂಜಾಟವಾಡುವುದಕ್ಕೆ ನೆರವಾದರೆ ಅಥವಾ ದುಷ್ಪ್ರೇರೇಪಿಸಿದರೆ" ಎಂಬ ಪದಗಳನ್ನು ಸೇರಿಸಲಾಗಿದೆ ಮತ್ತು ದಂಡ ಮೊತ್ತವನ್ನು ಹೆಚ್ಚಿಸಲಾಗಿದೆ. ಕಲಂ 114ರಲ್ಲಿ ಶಿಕ್ಷೆಯ ಪ್ರಮಾಣ ಮತ್ತು ದಂಡದ ಮೊತ್ತವನ್ನು ಹೆಚ್ಚಿಸಲಾಗಿದೆ. ಕಲಂ 176ರಲ್ಲಿ "ಅಂಥ ಚಾತುರ್ಯದ ಆಟದಲ್ಲಿ ಭಾಗವಹಿಸುವ ವ್ಯಕ್ತಿಗಳು ಪಣಕಟ್ಟುವುದಕ್ಕೆ" ಎಂಬ ಪದಗಳನ್ನು ಬಿಟ್ಟುಬಿಡಲಾಗಿದೆ. ಅಂದರೆ, skill game ಆಟಗಾರರು ಖುದ್ದು ಬೆಟ್ಟಿಂಗ್ ಕಟ್ಟುವುದನ್ನು ನಿಷೇಧಿಸಲಾಗಿದೆ. ಕಲಂ 128(ಎ) ಅನ್ನು ಹೊಸದಾಗಿ ಸೇರ್ಪಡೆ ಮಾಡಲಾಗಿದ್ದು, ಅಧ್ಯಾಯ 7ರಲ್ಲಿರುವ ಕಲಂ 87ನ್ನು ಹೊರತುಪಡಿಸಿ ಉಳಿದೆಲ್ಲ ಕಲಂಗಳು ಮತ್ತು ಅಧ್ಯಾಯ 8ರಲ್ಲಿ ಬರುವ 90, 108, 113,114 ಹಾಗೂ 123ನೇ ಪ್ರಕರಣಗಳ ಅಡಿಯಲ್ಲಿನ ಎಲ್ಲಾ ಅಪರಾಧಗಳು cognizable ಮತ್ತು ಜಾಮೀನು ರಹಿತ ಪ್ರಕರಣಗಳೆಂದು ಸೇರಿಸಿದ್ದೇವೆ. ಕಲಂ 87ರಲ್ಲಿ cognizable ಮತ್ತು ಜಾಮೀನು ಸಹಿತವೆಂದು ಬದಲಾವಣೆ ಮಾಡಲಾಗಿದೆ.

ಸನ್ಮಾನ್ಯ ಸಭಾಪತಿಯವರೇ, ಕೆಲವೇ ಕೆಲವು ಜನರು ಸಾರ್ವಜನಿಕರ ಸಾವಿರಾರು ಕೋಟಿ ರೂಪಾಯಿಗಳನ್ನು ಲೂಟಿ ಹೊಡೆಯುತ್ತಿದ್ದಾರೆ. ನಾವು ಇಂತಹ ಪ್ರಕರಣಗಳನ್ನು ಕಣ್ಣಾರೆ ನೋಡಿಯೂ ಅಸಹಾಯಕರಾಗಿದ್ದೇವೆ. ಇದನ್ನು ನಿಯಂತ್ರಿಸಬೇಕಾಗಿದೆ. ಇದನ್ನು ನಿಯಂತ್ರಿಸುವುದಕ್ಕೆ ಪೊಲೀಸರಿಗೆ ಒಂದು ಅಸ್ತ್ರವನ್ನು ಕೊಡಬೇಕಾಗಿದೆ. ಆರೋಗ್ಯಪೂರ್ಣ ಸಮಾಜವನ್ನು ನಿರ್ಮಾಣ ಮಾಡಬೇಕಾಗಿದೆ. ಇಂತಹ ಕೆಟ್ಟ ಚಟಗಳಿಗೆ ಬಿದ್ದು ಅನೇಕ ಕುಟುಂಬಗಳು ಬೀದಿಗೆ ಬೀಳುವುದನ್ನು ತಪ್ಪಿಸಬೇಕಾಗಿದೆ. ಆದ್ದರಿಂದ ಈ ವಿಧೇಯಕವನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನ್ಯ ಸದಸ್ಯರುಗಳು ಪರ್ಯಾಲೋಚಿಸಿ, ಅಂಗೀಕಾರ ನೀಡಬೇಕೆಂದು ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):-** ಸನ್ಮಾನ್ಯ ಸಭಾಪತಿಯವರೇ, ಜೂಜು ಮತ್ತು ಬೆಟ್ಟಿಂಗ್ ಆಡುವಂತಹ ಕೆಲವೇ ಕೆಲವು ಜನರು ಕೋಟ್ಯಾಧಿಪತಿಗಳಾಗಿದ್ದಾರೆ. ಬಹುತೇಕ ಕುಟುಂಬಗಳು ಸರ್ವನಾಶವಾಗಿರುವುದನ್ನು ನಾನು ಕಣ್ಣಾರೆ ಕಂಡಿದ್ದೇನೆ. ಎಷ್ಟೋ ಕುಟುಂಬಗಳ ಯಜಮಾನ ಜೂಜಾಡಿ, ಬೆಟ್ಟಿಂಗ್ ಕಟ್ಟಿ ಸೋತುಹೋದ ಹಿನ್ನೆಲೆಯಲ್ಲಿ ನೇಣು ಹಾಕಿಕೊಂಡು ಸತ್ತಿರುವಂತಹ ಉದಾಹರಣೆಗಳನ್ನು ನಾನು ಬಹಳ ಸಮೀಪದಿಂದ ನೋಡಿದ್ದೇನೆ. ಜನರ ಹಿತಾಸಕ್ತಿಯನ್ನು ಕಾಪಾಡುವ ಹಿನ್ನೆಲೆಯಲ್ಲಿ ಸರ್ಕಾರ ತಂದಿರುವಂತಹ ಈ ವಿಧೇಯಕವನ್ನು ನಾನು ಸಂತೋಷದಿಂದ ಸ್ವಾಗತಿಸುತ್ತಿದ್ದೇನೆ.

ಸನ್ಮಾನ್ಯ ಸಭಾಪತಿಯವರೇ, ಇದರಲ್ಲಿ ಕುದುರೆ ಜೂಜಾಟ exceptional ಆಗಿದೆ. ಅಲ್ಲಿಯೂ ಕೂಡ ಜನರು ಕುದುರೆ ಬಾಲಕ್ಕೆ ಹಣವನ್ನು ಕಟ್ಟಿರುತ್ತಾರೆ. ಕುದುರೆ ರೇಸ್‌ನಿಂದ ಬಹಳಷ್ಟು ಜನರು ಹಾಳಾಗಿರುವುದನ್ನು ನಾವುಗಳು ನೋಡಿದ್ದೇವೆ.

**ಶ್ರೀಮತಿ ಭಾರತಿ ಶೆಟ್ಟಿ(ನಾಮ ನಿರ್ದೇಶನ ಹೊಂದಿದವರು):-** ಸನ್ಮಾನ್ಯ ಸಭಾಪತಿಯವರೇ, ಕುದುರೆ ರೇಸ್ ನಡೆಯುವಂತಹ ಸಂದರ್ಭದಲ್ಲಿ ಆ ರಸ್ತೆಯಲ್ಲಿ ಉದ್ದಕ್ಕೂ ಆಟೋಗಳು ನಿಂತಿರುತ್ತವೆ. ಆಟೋ ಡ್ರೈವರ್‌ಗಳು ಮತ್ತು ಬಡವರೇ ಹೆಚ್ಚಾಗಿ ಈ ರೇಸ್ ಆಡುತ್ತಾರೆ.

**ಶ್ರೀ ಎಸ್.ಆರ್.ಪಾಟೀಲ್:-** ಸನ್ಮಾನ್ಯ ಸಭಾಪತಿಯವರೇ, ಕುದುರೆ ರೇಸ್ ಇದಂತಹ ಸಂದರ್ಭದಲ್ಲಿ ಟರ್ಫ್ ಕ್ಲಬ್ ಎದುರಿನ ರಸ್ತೆಯಲ್ಲಿ ಹಾದು ಹೋಗುವುದಕ್ಕೆ ಸಾಧ್ಯವಾಗುವುದಿಲ್ಲ. ಸರ್ಕಾರಿ ಕಛೇರಿಯೊಳಗೆ ಯಾರೂ ಇರುವುದಿಲ್ಲ. ಎಲ್ಲರೂ ಟರ್ಫ್ ಕ್ಲಬ್‌ನಲ್ಲಿಯೇ ಇರುತ್ತಾರೆ. ಇದನ್ನು ಯಾಕೆ ಬ್ಯಾನ್ ಮಾಡಲಿಲ್ಲವೆನ್ನುವುದು ನನ್ನ ಪ್ರಶ್ನೆಯಾಗಿದೆ. 1996ರಲ್ಲಿ ಡಾ||ಕೆ.ಆರ್.ಲಕ್ಷ್ಮಣ್‌ರವರ ವಿರುದ್ಧ ತಮಿಳುನಾಡಿನ ಸರ್ಕಾರದ ಪ್ರಕರಣದಲ್ಲಿ ಈ ರಾಷ್ಟ್ರದ ಸರ್ವೋಚ್ಚ ನ್ಯಾಯಾಲಯ ನೀಡಿದ ತೀರ್ಪಿನಲ್ಲಿ;

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**" ಕುದುರೆ ಓಟವು ಕೌಶಲ್ಯವನ್ನು ಒಳಗೊಂಡ ಒಂದು ಆಟವೇ ಹೊರತು ಅದನ್ನು ಜೂಜು ಎಂದು ಪರಿಗಣಿಸಲಾಗುವುದಿಲ್ಲ"**

ಎಂದು ಹೇಳಿದೆ. ಕುದುರೆ ರೇಸ್ ಜೂಜಾಟವಲ್ಲ, ಅದರಲ್ಲಿ ಕೌಶಲ್ಯವಿದೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಇದರಲ್ಲಿ ಯಾವ ಕೌಶಲ್ಯವಿದೆಯೆಂದು ನನಗೆ ಗೊತ್ತಿಲ್ಲ. ಅಲ್ಲಿ ಹಣದ ರೂಪದಲ್ಲಿ ಬೆಟ್ಟಿಂಗ್ ಕಟ್ಟುತ್ತಾರೆ. ಈ ರೇಸ್‌ನಲ್ಲಿ ಜನರು ಕೋಟ್ಯಾಂತರ ರೂಪಾಯಿಗಳನ್ನು ಕಳೆದುಕೊಳ್ಳುತ್ತಿದ್ದಾರೆ. ಕುದುರೆ ರೇಸ್‌ನ ಹುಚ್ಚು ಇರುವವರು ಉದ್ಧಾರವಾಗುವುದಿಲ್ಲ. ಕುದುರೆ ರೇಸ್‌ಗೆ ಅವಕಾಶವಿದ್ದರೆ, why not in online fantasy sports? Online fantasy sports ಗೆ ಸಂಬಂಧಪಟ್ಟಂತೆ ಅವಿನಾಶ್ ಮೆಹ್ತಾ ವಿರುದ್ಧ ಭಾರತ ಸರ್ಕಾರದ ಪ್ರಕರಣದಲ್ಲಿ ದಿನಾಂಕ:30.07.2021ರಂದು ಸುಪ್ರೀಂ ಕೋರ್ಟ್;

**'The format of online fantasy sports', ಎನ್ನುವುದು ಕೇವಲ ಒಂದು ಕೌಶಲ್ಯ ಕ್ರೀಡೆ ಎಂದು ಸ್ಪಷ್ಟವಾಗಿ ತೀರ್ಮಾನಿಸಿದ್ದು, ಸದರಿ ಕ್ರೀಡೆಗಳಿಗೆ ಸಂವಿಧಾನದ ಪರಿಚ್ಛೇದ 19(1) ಜಿ ಮತ್ತು ಅರ್ಟಿಕಲ್ 14ರಡಿಯಲ್ಲಿ ಕಾನೂನುಬದ್ಧ ವ್ಯಾಪಾರ ಮತ್ತು ಇದಕ್ಕೆ ರಕ್ಷಣೆ ಕೊಡಬೇಕು"**

ಎಂದು ತೀರ್ಪು ಕೊಟ್ಟಿದೆ. ಕುದುರೆ ರೇಸ್‌ಗೆ ಸಂಬಂಧಪಟ್ಟಂತೆ ಸುಪ್ರೀಂ ಕೋರ್ಟ್ ನಿರ್ಣಯ ಕೊಟ್ಟಿದೆ. ಗುರುದೀಪ್ ಸಿಂಗ್ ವಿರುದ್ಧ ಕೇಂದ್ರ, ಕ್ರಿಮಿನಲ್ ಸಾರ್ವಜನಿಕ ಹಿತಾಸಕ್ತಿ ದಾವೆ 22/2019 ನಲ್ಲಿ ನೀಡಿರುವ ತೀರ್ಪು ಈ ಕೆಳಕಂಡಂತಿದೆ;

**'The format of online fantasy sports', ಯಾವಾಗಲೂ ಈ ಕ್ರೀಡೆಯನ್ನು ಆಡುವ ವ್ಯಕ್ತಿಯ ಉನ್ನತ ಜ್ಞಾನ, ಗಮನ ಮತ್ತು ನಿರ್ಣಯದ ಮೇಲೆ ನಿಂತಿರುತ್ತದೆಯೇ ವಿನಃ ಸೋಲು ಗೆಲುವಿನ ಮೇಲೆ ನಿಂತಿರುವುದಿಲ್ಲ."**

ಎಂದು ಹೇಳಿದೆ.

(ಮುಂದುವರಿದಿದೆ)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(984) 23.9.2021 9.30 ಪಿಕೆ:ಎಕೆ

**ಶ್ರೀ ಎಸ್.ಆರ್.ಪಾಟೀಲ್(ಮುಂದು):-**

ಇವು online fantasy sports ಗೆ ನ್ಯಾಯಾಲಯಗಳು ಕೊಟ್ಟ ತೀರ್ಪುಗಳಾಗಿವೆ. ಅಷ್ಟೇ ಅಲ್ಲ, ಪಂಜಾಬ್ ಮತ್ತು ಹರಿಯಾಣದ ಉಚ್ಚನ್ಯಾಯಲಯಗಳು, "online fantasy sports ಇದು ಕೇವಲ ಕೌಶಲ್ಯ ಕ್ರೀಡೆಯೇ ವಿನಃ ಜೂಜು ಅಥವಾ ಬಾಜೀ ಆಗಿರುವುದಿಲ್ಲವೆಂದು, ಅದಕ್ಕೆ ರಕ್ಷಣೆ ಕೊಡಬೇಕು" ಎಂದು ಹೇಳುತ್ತದೆ. ಅದೇ ಪ್ರಕಾರ ರಾಜಸ್ಥಾನ ಉಚ್ಚನ್ಯಾಯಾಲಯವು ಈ ತೀರ್ಪನ್ನು ಒಪ್ಪಿಕೊಂಡಿದೆ. ಮದ್ರಾಸ್‌ನ ಉಚ್ಚನ್ಯಾಯಾಲಯದವರೂ ಕೂಡ, ಆನ್‌ಲೈನ್ ಗೇಮನ್ನು ರದ್ದುಪಡಿಸಿರುವ ಮಸೂದೆಯನ್ನು ಕಾನೂನುಬಾಹಿರವೆಂದು ಹೇಳಿದ್ದಾರೆ. ನಮ್ಮ ಹೈಕೋರ್ಟ್‌ನಲ್ಲಿ ಒಂದು ಪಿಐಎಲ್ ನಡೆಯುತ್ತಿದೆ. ನಿಮ್ಮ ಮುಖ್ಯ ಕಾರ್ಯದರ್ಶಿಯವರು ಜುಲೈ 6, 2021 ರಂದು ಪ್ರಮಾಣ ಪತ್ರ ಸಲ್ಲಿಸಿದ್ದಾರೆ. ಇಷ್ಟಲ್ಲದೇ, ದೇಶದ ಇನ್ನೂ ಅನೇಕ ಉಚ್ಚನ್ಯಾಯಾಲಯಗಳು "online fantasy sports ಅದೊಂದು ಕೌಶಲ್ಯ ಗೇಮ್, it is not a game of chance, it is not a betting" ಎಂದು ಹೇಳಿದೆ. Horse Race ನ ಬಗ್ಗೆಯೂ ಹೇಳಿದ್ದಾರೆ. ಅದನ್ನು ನೀವು ಇನ್‌ಕ್ಲೂಡ್ ಮಾಡಿಲ್ಲ, ಅದನ್ನು ಬಿಟ್ಟಿದ್ದೀರಿ. Fantasy sports ಗೆ ಸಂಬಂಧಪಟ್ಟಂತೆ ಆರು ಸಾವಿರ ಜನ ಉದ್ಯೋಗ ಮಾಡುತ್ತಾರೆ. ನಾವು ಇವತ್ತು ಇದನ್ನು ಒಪ್ಪಿಕೊಂಡರೆ ದೇಶದ ಉಚ್ಚನ್ಯಾಯಾಲಯ ಮತ್ತು ಸರ್ವೋಚ್ಚ ನ್ಯಾಯಾಲಯಗಳ ನಿರ್ಣಯದ ವಿರುದ್ಧ ಕಾನೂನು ಮಾಡಿದ ಹಾಗೆ ಆಗುತ್ತದೆ. ನೀವು ಇಲ್ಲಿ ತಿದ್ದುಪಡಿ ಮಾಡಿದ್ದೀರಿ. ವಿಧೇಯಕದ ಪುಟ ಸಂಖ್ಯೆ:15ರಲ್ಲಿ, 176-ರಲ್ಲಿ "**ಚಾತುರ್ಯದ ಆಟಗಳ ಉಳಿಸುವಿಕೆ**:-ಸಂದೇಹ ನಿವಾರಣೆಗಾಗಿ, ಕೇವಲ ಚಾತುರ್ಯದ ಆಟವಾಡುವುದಕ್ಕೆ ಮತ್ತು ಅಂಥ ಚಾತುರ್ಯದ ಆಟದಲ್ಲಿ ಭಾಗವಹಿಸುವ ವ್ಯಕ್ತಿಗಳು ಪಣ ಕಟ್ಟುವುದಕ್ಕೆ 79 ಮತ್ತು 80ನೆಯ ಪ್ರಕರಣದ ಉಪಬಂಧಗಳು ಅನ್ವಯಿಸುವುದಿಲ್ಲವೆಂದು ಈ ಮೂಲಕ ಘೋಷಿಸಲಾಗಿದೆ" ಎಂದಿದೆ. 1963ರ ಅಧಿನಿಯಮದಲ್ಲಿ ಇರುವಂತೆ ಇದನ್ನು ಯಥಾವತ್ತಾಗಿ ಉಳಿಸಿಕೊಳ್ಳಬೇಕು. ಆಗ ಕೌಶಲ್ಯ ಕ್ರೀಡೆಗೆ ಧಕ್ಕೆ ಆಗುವುದಿಲ್ಲ. ಅಷ್ಟೇ ಅಲ್ಲ, ಈ ನೀತಿ ಆಯೋಗದವರು fantasy sports ಪರವಾಗಿ ಹೇಳಿದ್ದಾರೆ. ಸರ್ವೋಚ್ಚ ನ್ಯಾಯಾಲಯ ಕೂಡ ಸದರಿ ಕ್ರೀಡೆಯನ್ನು ಪರಿಚ್ಛೇದ 19(1)(ಜಿ) ಮತ್ತು ಪರಿಚ್ಛೇದ 14ರ ಪ್ರಕಾರ ನಿಷೇಧಿಸಲು ಬರುವುದಿಲ್ಲ ಎಂದು ತೀರ್ಪು ಕೊಟ್ಟಿದೆ. ನೀತಿ ಆಯೋಗದವರೂ ಇದರ ಪರವಾಗಿದ್ದಾರೆ. ಅಷ್ಟೇ ಏಕೆ ದೇಶದ ಪ್ರಧಾನ ಮಂತ್ರಿಯವರು ತಮ್ಮ **'ಮನ್ ಕೀ ಬಾತ್'** ನಲ್ಲಿ ಇದಕ್ಕೆ ಬೆಂಬಲ ಕೊಟ್ಟಿದ್ದಾರೆ. ಇದರ ಜೊತೆಗೆ ನೀತಿ ಆಯೋಗದವರು "Fantasy sports is a sunrise industry" ಎಂದು ಬಹಳ ಕ್ಲಿಯರ್ ಆಗಿ ಹೇಳಿದ್ದಾರೆ. ಇದು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೌಶಲ್ಯದ ಕ್ರೀಡೆಯಾಗಿದೆ ಎಂದು ಎಲ್ಲಾ ನ್ಯಾಯಪಾಲಿಕೆಗಳು ತೀರ್ಪು ಕೊಟ್ಟಾಗ ಇದನ್ನು ನೀವು ಬ್ಯಾನ್ ಮಾಡುವುದು ಸರಿಯಲ್ಲ ಎಂದು ಹೇಳಬೇಕಾಗುತ್ತದೆ. ಈ fantasy game ಬಗ್ಗೆ ಬೆಳಕು ಚೆಲ್ಲಬೇಕು, ದೇಶದ ಆಡಳಿತವನ್ನು ಹಿಡಿದಿರುವ ಪ್ರಧಾನ ಮಂತ್ರಿಗಳೇ ಇದರ ಪರವಾಗಿದ್ದಾರೆ. ನೀತಿ ಆಯೋಗದ ನಿರ್ಣಯವನ್ನು ಬಿಟ್ಟು ಬಿಡೋಣ, ಪ್ರಧಾನ ಮಂತ್ರಿಗಳ **'ಮನ್ ಕೀ ಬಾತ್'**ನಲ್ಲಿ ಹೇಳಿದುದನ್ನು ಬಿಟ್ಟು ಬಿಡೋಣ. The decision of the Apex Court of this land, ಈ ದೇಶದ ಸರ್ವೋಚ್ಚ ನ್ಯಾಯಾಲಯದ ತೀರ್ಪು ಎಲ್ಲಾ ರಾಜ್ಯಗಳ ಮೇಲೆ ಬೈಂಡಿಂಗ್ ಆಗಿರುತ್ತದೆ. ಸರ್ವೋಚ್ಚ ನ್ಯಾಯಾಲಯದ ವಿರುದ್ಧ ನಾವು ಇಲ್ಲಿ ಶಾಸನ ಮಾಡಿದರೆ it will be set aside. Definitely, it may amount to Contempt of House and Contempt of Court also. Horse Race ಗೆ ಸಂಬಂಧಪಟ್ಟಂತೆ, ಇದರ ಬಗ್ಗೆ ಸರ್ವೋಚ್ಚ ನ್ಯಾಯಾಲಯ ಹೇಳಿದೆ, ಆದ್ದರಿಂದ ಇದನ್ನು ಇನ್‌ಕ್ಲೂಡ್ ಮಾಡುವುದಿಲ್ಲ ಎಂದು ಒಂದು ಕಡೆ ಹೇಳುತ್ತೀರಿ. Online fantasy sports ಗೆ ಸಂಬಂಧಪಟ್ಟಂತೆ ಸರ್ವೋಚ್ಚ ನ್ಯಾಯಾಲಯದ ಎರಡು-ಮೂರು ತೀರ್ಪುಗಳು ಅಷ್ಟೇ ಅಲ್ಲ, ದೇಶದ ಬಹುತೇಕ ಉಚ್ಚ ನ್ಯಾಯಾಲಯಗಳು ಇದರ ಪರವಾಗಿವೆ. ಉಳಿದುದರ ಬಗ್ಗೆ I appreciate and I welcome the amendment brought to the Karnataka Police Act. ಏಕೆಂದರೆ, ಅದರ ಅವಶ್ಯಕತೆ ಇದೆ. It was the need of the hour. ನಮ್ಮ ಧಾರವಾಡದ Circuit Bench ನಲ್ಲಿ ನಿರ್ಣಯ ಕೊಟ್ಟಿದ್ದಾರೆ. ಅದು non-cognizable offence ಇದೆ, bailable ಇದೆ. ನೀವು ರೇಡ್ ಮಾಡಬೇಕಾದರೆ naturally Magistrate ರ ಅನುಮತಿ ತೆಗೆದುಕೊಳ್ಳಬೇಕಾಗುತ್ತದೆ. ಕಾನೂನೇ ಹಾಗಿದೆ. ಆ ಕಾನೂನಿನ ಪ್ರಕಾರ ಧಾರವಾಡದ Circuit Bench ನವರು ನಿರ್ಣಯ ಕೊಟ್ಟಿದ್ದಾರೆ. ಆ ನಿರ್ಣಯದ ಪ್ರಕಾರ ನೀವು strengthen ಮಾಡಬೇಕಾಗುತ್ತದೆ. ಇಲ್ಲದಿದ್ದರೆ ಜೂಜು ಆಡುವುದನ್ನು ಕಣ್ಣಾರೆ ನೋಡಿಕೊಂಡು ಕುಳಿತುಕೊಳ್ಳಬೇಕಾಗುತ್ತದೆ. Magistrate ರ ಬಳಿ ಪರ್ಮಿಷನ್ ತೆಗೆದುಕೊಳ್ಳುವುದಕ್ಕೆ ಅವರೇಕೆ ಹೋಗುತ್ತಾರೆ? ಗ್ರಾಮೀಣ ಭಾಗದಲ್ಲಿ ಎಲ್ಲಂದರಲ್ಲಿ ಜೂಜು ನಡೆಯುತ್ತದೆ. ನಮ್ಮ ಕಡೆ ಗುಡ್ಡ ಪ್ರದೇಶಕ್ಕೆ ಹೋಗಿ ಅಥವಾ ಯಾರದೋ ಒಬ್ಬರ ತೋಟಕ್ಕೆ ಹೋಗಿ, isolated place ನಲ್ಲಿ ದೊಡ್ಡ ಪ್ರಮಾಣದಲ್ಲಿ ಜೂಜು ನಡೆಯುತ್ತದೆ; ಇಸ್ಪಿಟ್ ಆಡುತ್ತಾರೆ. ಹೇಳುವುದಕ್ಕೆ ಅಸಾಧ್ಯವಾದಷ್ಟು ಹಣವನ್ನು ಕಟ್ಟುತ್ತಾರೆ. ಇದಕ್ಕೆಂದು ಬೇರೆ ರಾಜ್ಯದವರು, ಬೇರೆಯ ಜಿಲ್ಲೆಯವರು ಬರುತ್ತಾರೆ. ನಿಮ್ಮ ಪೊಲೀಸರಿಗೆ ಎಲ್ಲಾ ಗೊತ್ತಿರುತ್ತದೆ. ಅವರು ಎಲ್ಲಿ ಆಡುತ್ತಾರೆ; ಯಾರ್ಯಾರು ಆಡುತ್ತಾರೆ ಎನ್ನುವುದೆಲ್ಲಾ ಗೊತ್ತಿರುತ್ತದೆ. ಅಲ್ಲದೇ ಅವರಿಗೆ ಏನೇನು ಹೋಗಬೇಕು ಅದೆಲ್ಲವೂ ಹೋಗುತ್ತದೆ. ಒಂದು ವೇಳೆ ಅಲ್ಲಿ ಹಿರಿಯ ಅಧಿಕಾರಿಗಳು ಬರುವವರಿದ್ದಾರೆ, ಇವರೇ, ನೀವು

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಜಾಗ ಖಾಲಿ ಮಾಡಿ ಎಂದು ಹೇಳಿಬಿಡುತ್ತಾರೆ. ಕಾನೂನುಗಳನ್ನು ತರುವುದು ಕಾರ್ಯಗತ ಆಗಬೇಕು. ಈ ದೇಶದಲ್ಲಿ ಸಾಕಷ್ಟು ಕಾನೂನುಗಳಿವೆ. ಅವು ಕಟ್ಟುನಿಟ್ಟಾಗಿ ಕಾರ್ಯಗತವಾದರೆ, ಕಾನೂನು ಸುವ್ಯವಸ್ಥೆ ಉತ್ತಮ ರೀತಿಯಲ್ಲಿ ಇರುತ್ತದೆ. ನೀವು ಹೇಳಿದ ಹಾಗೆ, ಸ್ವಸ್ಥ ಸಮಾಜ, ಆರೋಗ್ಯಕರ ಸಮಾಜ ನಿರ್ಮಾಣ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಕಾನೂನು ಸರಿಯಾಗ ಕಾರ್ಯಗತವಾಗದೇ ಇದ್ದರೆ ಪ್ರಯೋಜನವಾಗುವುದಿಲ್ಲ. ಈಗೇನು ಈ ವಿಧೇಯಕಕ್ಕೆ ತಿದ್ದುಪಡಿಯನ್ನು ತಂದಿದ್ದಾರೋ ಅದನ್ನು ಸ್ವಾಗತ ಮಾಡುತ್ತೇನೆ. ನೀವು ತಂದಿರುವ ಕಾನೂನು ಬಿಗಿಯಾಗಿದೆ. ಇದನ್ನು cognizable offence ಮಾಡಿದ್ದೀರಿ, non-bailable ಮಾಡಿದ್ದೀರಿ. ಶಿಕ್ಷೆ ಪ್ರಮಾಣವನ್ನು, ದಂಡದ ಪ್ರಮಾಣವನ್ನು ಹೆಚ್ಚಿಸಿದ್ದೀರಿ. I welcome it. But it should be strictly implemented. ಮಾನ್ಯ ಗೃಹ ಮಂತ್ರಿಗಳೇ ನೀವು ಇನ್ನೂ ಸ್ಟ್ರಾಂಗ್ ಆಗಬೇಕು. The Home Minister should be a tough master. Home Minister means a tough master. ಒಬ್ಬೊಬ್ಬ ಐಪಿಎಸ್ ಅಧಿಕಾರಿ ಜಿಲ್ಲೆಗೆ ಎಸ್‌ಪಿ ಆಗಿ ಬಂದಾಗ ಆ ಜಿಲ್ಲೆಯೇ ಗಡಗಡ ನಡುಗುವ ಹಾಗೆ ವ್ಯವಸ್ಥೆ ಮಾಡುತ್ತಾರೆ. ನೀವು ಗೃಹಮಂತ್ರಿ ಎಂದರೆ, ನಿಮ್ಮ ಇಡೀ ಇಲಾಖೆ ಕಂಟ್ರೋಲ್‌ನಲ್ಲಿ ಇರಬೇಕು. ಕಾನೂನು ಸುವ್ಯವಸ್ಥೆಯನ್ನು ಕಾಪಾಡುವಲ್ಲಿ you have to take decisions mercilessly. ಬಿಗಿಯಾದಂತಹ ಈ ಕಾನೂನು ತಂದಿರುವುದನ್ನು ನಾನು ಸ್ವಾಗತ ಮಾಡುತ್ತೇನೆ. ಮತ್ತೆ, online fantasy game, ಅದನ್ನೇಕೆ ಬ್ಯಾನ್ ಮಾಡಬೇಕು ಎಂದು ಹೇಳುತ್ತಿದ್ದೀರಿ; ಹಾಗಾದರೆ Horse Race ಅನ್ನೂ ಕ್ಲೋಸ್ ಮಾಡಿಬಿಡಿ. Once for all ಎಲ್ಲವನ್ನೂ ನಿಲ್ಲಿಸಿದರೆ ಕರ್ನಾಟಕ ರಾಜ್ಯ ವ್ಯಸನಮುಕ್ತವಾಗುತ್ತದೆ. ಜೂಜುಮುಕ್ತ ರಾಜ್ಯವಾಗುತ್ತದೆ, ಅತ್ಯುತ್ತಮವಾದ ರಾಜ್ಯವಾಗುತ್ತದೆ. ಅನೇಕ ಕುಟುಂಬಗಳು ನೆಮ್ಮದಿಯಿಂದ ನಿಟ್ಟುಸಿರು ಬಿಡುವಂತಹ ಒಂದು ವಾತಾವರಣ ನಿರ್ಮಾಣವಾಗುತ್ತದೆ.

**ಶ್ರೀ ಎಂ.ನಾರಾಯಣಸ್ವಾಮಿ(ವಿರೋಧ ಪಕ್ಷದ ಮುಖ್ಯ ಸಚೇತಕರು)**:- ಮಾನ್ಯ ಸಭಾಪತಿಗಳೆ, ಕರ್ನಾಟಕ ಪೊಲೀಸ್ (ತಿದ್ದುಪಡಿ) ವಿಧೇಯಕ 2021 ಅನ್ನು ಏನು ತಂದಿದ್ದಾರೋ ಅದನ್ನು ಸ್ವಾಗತ ಮಾಡುತ್ತೇನೆ. ಆದರೆ, ಇದರಲ್ಲಿ ತಂದಿರುವ ಕಾನೂನಿನಲ್ಲಿ ಶಿಕ್ಷೆ ಮತ್ತು ದಂಡ ಹಾಕುವಂಥದ್ದನ್ನು ಸ್ವಾಗತ ಮಾಡುತ್ತೇನೆ. ಆದರೆ, difference between skilled games ಮತ್ತೆ ಜೂಜಾಡುವ ಕ್ರೀಡೆಗಳನ್ನು ಸರಿಯಾಗಿ ಅರ್ಥ ಮಾಡಿಕೊಂಡಿದ್ದೀರೋ ಇಲ್ಲವೋ ಗೊತ್ತಿಲ್ಲ. ಈ ಕ್ರೀಡೆಗಳನ್ನು 18 ವರ್ಷ ಮೇಲ್ಪಟ್ಟವರು ಆಡಿದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೋಸ್ಕರ ಈ ಕಾನೂನು ಎಂಬುದನ್ನು ಹೇಳುತ್ತದೆ. ತಾವು, ಕುದುರೆ ರೇಸ್ ಏನಿದೆ ಅದಕ್ಕೆ ನಾವು ಯಾವುದೇ ರೀತಿಯ ತೊಂದರೆ ಕೊಡದೇ, ಅದನ್ನು ನಿಲ್ಲಿಸದೇ

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಅದು ಯಥೇಚ್ಛವಾಗಿ ನಡೆಯಬಹುದು ಎಂದು ಹೇಳುತ್ತೀರಿ. ಒಂದು ಕಡೆ ತಮಿಳುನಾಡು ಸರ್ಕಾರ, ಇದು ಕೌಶಲ್ಯವನ್ನು ಒಳಗೊಂಡಂಥ ರೇಸ್ ಆಗಿದೆ ; ಕುದುರೆಯನ್ನು ಓಡಿಸುವುದು ಒಂದು ಕಲೆಯಾಗಿದೆ; ಅದು ಕೌಶಲ್ಯದಿಂದ ಇರುತ್ತದೆ, ಜಾಕಿಗಳು ಕಷ್ಟಪಟ್ಟು ಕುದುರೆಗಳನ್ನು ಓಡಿಸುತ್ತಾರೆ, ಅದು ಜೂಜಲ್ಲ, ಅದರ ಮೇಲೆ ಕಾನೂನು ಕ್ರಮ ಕೈಗೊಳ್ಳಬಾರದು ಎಂದು ಅಲೋ ಮಾಡಿದ್ದಾರೆ.

(ಮುಂದು . . .)

(985) 23.9.2021 9.40 ಡಿಎಸ್(ಪಿಕೆ) : ಎಕೆ

**ಶ್ರೀ ಜೆ.ಸಿ.ಮಾಧುಸ್ವಾಮಿ( ಸಣ್ಣ ನೀರಾವರಿ, ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವರು):**-ಮಾನ್ಯ ಸಭಾಪತಿಗಳೆ, ಕುದುರೆ pedigree, ಕುದುರೆಯನ್ನು ಅವರು ಹೇಗೆ ಸಾಕುತ್ತಾರೆ; ಜಾಕಿಗೆ ಹೇಗೆ ತರಬೇತಿ ಕೊಡುತ್ತಾರೆ ಎಂಬುದೆಲ್ಲವನ್ನೂ skill ಎಂದು ಸುಪ್ರೀಮ್ ಕೋರ್ಟ್ define ಮಾಡಿಬಿಟ್ಟಿದೆ. It is a game of skill. 'It is a game of skill, chance and mere skill' ಎಂದು 3 ಕ್ಯಾಟಗರಿ ಮಾಡುತ್ತದೆ. "Racing is a game of 100% skill" ಎಂದು ಸುಪ್ರೀಮ್ ಕೋರ್ಟ್ ತೀರ್ಮಾನ ಹೇಳಿರುವುದರಿಂದ ನಾವು ಅದನ್ನು ಪ್ರಸ್ತಾಪ ಮಾಡುವುದಕ್ಕೆ ಆಗುವುದಿಲ್ಲ. ಇವೆಲ್ಲವೂ sports of skills ಆಗಿವೆ. ಕುದುರೆಯನ್ನು ಬೆಳೆಸುವುದು, ಅದರ ಆಯ್ಕೆ ಮಾಡುವುದು, ಅದನ್ನು ಸಾಕುವುದು, ಜಾಕಿಗೆ ತರಬೇತಿ ಕೊಡುವುದು ಇವೆಲ್ಲವೂ skill development ಆಗಿದೆ. As such, it is a game of skill. ಅದನ್ನು ಬ್ಯಾನ್ ಮಾಡುವುದಕ್ಕೆ ಆಗುವುದಿಲ್ಲ. ನೀವು fantasy sports ಬಗ್ಗೆ ಹೇಳಿದಿರಿ. Online fantasy sports ಮೇಲೆ ಬೆಟ್ಟಿಂಗ್ ಕಟ್ಟಿದರೆ ಕಾನೂನಿನ ಪ್ರಕಾರ ಕ್ರಮ ಕೈಗೊಳ್ಳಬಹುದು. ದುಡ್ಡು ಕಟ್ಟದೇ ಆಡಿದರೆ ಅದರ ಮೇಲೂ ನಾವು ಕ್ರಮ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. Waging or betting involve ಆದಾಗ ಮಾತ್ರ ಈ online fantasy sports ಮೇಲೂ ಕ್ರಮ ಕೈಗೊಳ್ಳಬಹುದು.

**ಶ್ರೀ ಎಸ್.ಆರ್.ಪಾಟೀಲ್**:- ಮಾನ್ಯ ಸಭಾಪತಿಗಳೆ, ಹಾರ್ಸ್ ರೇಸ್‌ಗೆ ಹೋಗಿ ಬಂದವನೊಬ್ಬ ಒಂದು ಪುಸ್ತಕವನ್ನು ತಂದು ಕೊಟ್ಟ.

**ಶ್ರೀ ಜೆ.ಸಿ.ಮಾಧುಸ್ವಾಮಿ**:- ಕುದುರೆ ಜೂಜು ಗೆಲ್ಲುವುದಕ್ಕೆ ಅವನು ಎಲ್ಲಾ ಲೆಕ್ಕಾಚಾರ ಮಾಡುತ್ತಾನೆ. ಈ ಕುದುರೆ ಎಷ್ಟು ರೇಸ್ ಓಡಿದೆ, ಹೇಗೆ ಓಡಿದೆ, ಅದರ ತೂಕ ಎಷ್ಟು, ಆ ಕುದುರೆಯ ಅಪ್ಪ-ಅಮ್ಮ ಯಾರು, ಜಾಕಿಯ ತೂಕ ಎಷ್ಟು ಎನ್ನುವುದನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನೋಡುತ್ತಾರೆ. It is not a chance. It is calculation of the skill of that horse and jockey. As it is a calculation of the skill of that horse and jockey, it is 100% a game of skill. ಇದನ್ನು ಕೋರ್ಟ್ ಹೇಳಿದೆ.

**ಶ್ರೀ ಎಸ್.ಆರ್.ಪಾಟೀಲ್**:- ನನಗೆ ಗೊತ್ತಿದೆ. ಕುದುರೆ ಓಡಿಸುವವನನ್ನು ಜಾಕಿ ಎನ್ನುತ್ತಾರೆ. ಜಾಕಿಯ ತೂಕ ಎಷ್ಟಿದೆ, ಕುದುರೆ ಈ ಹಿಂದೆ ಗೆದ್ದಿದ್ದು, ಈ ಕುದುರೆಯ ಅಪ್ಪ-ಅಮ್ಮ, ಅದರ ಅಜ್ಜ ಹೀಗೆ ಎಲ್ಲದರೆ ಇತಿಹಾಸ ತೆಗೆಯುತ್ತಾರೆ. ಅಲ್ಲಿಯೂ ಸುಪ್ರೀಮ್ ಕೋರ್ಟ್ ಹೇಳಿದೆ, ಇಲ್ಲಿಯೂ ಸುಪ್ರೀಮ್ ಕೋರ್ಟ್ ಹೇಳಿದೆ. ಆ ಡಿಫರೆನ್ಸ್ ಅಷ್ಟನ್ನೇ ನಮಗೆ ಹೇಳಿಬಿಡಿ.

**ಶ್ರೀ ಎಂ.ನಾರಾಯಣಸ್ವಾಮಿ (ವಿರೋಧ ಪಕ್ಷದ ಮುಖ್ಯ ಸಚೇತಕರು)**:- ಮಾನ್ಯ ಸಚಿವರೇ ತಾವು ಹೇಳಿರುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆ ಕುದುರೆಯ ಇತಿಹಾಸ, ಜಾಕಿಯ ತರಬೇತಿ ಇವೆಲ್ಲವೂ ಕೌಶಲ್ಯ ಎಂದು ಹೇಳುತ್ತೀರಿ. ರೇಸ್ ನಡೆಯುವ ದಿವಸ ಸುಮ್ಮನೆ ಆಕಡೆ ಹೋದರೆ ಎಂಥೆಂಥ ಮೇಧಾವಿಗಳು ಕುಳಿತುಕೊಂಡು ಆ ಪುಸ್ತಕವನ್ನು ಓದುತ್ತಿರುತ್ತಾರೆ ಎನ್ನುವುದನ್ನು ನಾವು ನೋಡಬೇಕು. ಶ್ರೀಮಂತರು ಒಳಗಡೆ ಕುಳಿತುಕೊಂಡು ಬೇಕಾದ ಹಾಗೆ ಹಣ ಮಾಡುತ್ತಾರೆ. ದಿನಗೂಲಿ ಮಾಡುವವರು, ಆಟೋ ಡ್ರೈವರ್‌ಗಳು ಮತ್ತು ಟ್ಯಾಕ್ಸಿ ಡ್ರೈವರ್‌ಗಳು, ಈ ಚಟಕ್ಕೆ ಬಿದ್ದವರು ಹೆಂಡತಿಯ ತಾಳಿಯನ್ನು ಅಡವಿಟ್ಟು ಹಣ ತಂದು ಆಡುವ ಜನ ತಮ್ಮ ಹಣ ಕಳೆದುಕೊಳ್ಳುತ್ತಿದ್ದಾರೆ. ಕೌಶಲ್ಯ ಎಂದು ಹೇಳುವಾಗ ಅಲ್ಲಿ ಎಷ್ಟು ಮಾಫಿಯಾ ಇರುತ್ತದೆ ಎನ್ನುವುದನ್ನು ನೋಡಬೇಕಾಗುತ್ತದೆ. ಒಂದು ಕುದುರೆಯ ಅಪ್ಪ ಯಾರು, ಅಮ್ಮ ಯಾರು, ಜಾಕಿ ಯಾರು ಎನ್ನುವ ವಿಷಯಗಳನ್ನು ತಿಳಿದುಕೊಂಡು, ಲೆಕ್ಕ ಹಾಕಿ ಕುದುರೆ ಮೇಲೆ ಹೈಯಸ್ಟ್ ಬೆಟ್ಟಿಂಗ್ ಕಟ್ಟಿದಂತಹ ಸಂದರ್ಭದಲ್ಲಿ, ಒಳಗಡೆ ಇರುವ ಮಾಫಿಯಾ, ಕುದುರೆ ಇನ್ನೇನು ರೀಚ್ ಆಗುತ್ತದೆ ಎನ್ನುವಾಗ ಅವನು ಜೋರಾಗಿ ಒಂದು ಸಲ ಪುಲ್ ಮಾಡಿದ ತಕ್ಷಣ ಇದರ ಮೇಲೆ ಬಾಜಿ ಕಟ್ಟಿರುವವರೆಲ್ಲೂ ಸೋಲುತ್ತಾರೆ, ಲಕ್ಷಾಂತರ ರೂಪಾಯಿಗಳನ್ನು ಹಾಳು ಮಾಡಿಕೊಳ್ಳುತ್ತಾರೆ. ಸುಪ್ರೀಮ್ ಕೋರ್ಟ್ ತೀರ್ಪು ಕೊಟ್ಟಿರುವುದನ್ನು ನಾವು ಪ್ರಶ್ನೆ ಮಾಡುವುದಕ್ಕೆ ಹೋಗುವುದಿಲ್ಲ.

**ಶ್ರೀ ಜೆ.ಸಿ.ಮಾಧುಸ್ವಾಮಿ**:- ಮಾಫಿಯಾ ಎಲ್ಲಿದೆ ಎಂದು ಹೇಳುತ್ತೇನೆ. ಮಾಫಿಯಾ ನಮ್ಮ ಜೊತೆಯೇ ಇದೆ. ಮೂರು ಸಲ ಕ್ಲಬ್ಬನ್ನು ಶಿಫ್ಟ್ ಮಾಡಲು ಪ್ರಯತ್ನ ಮಾಡಲಾಯಿತು. Committee on Public Accounts ತೀರ್ಮಾನ ಮಾಡಿತು, ಮಾನ್ಯ ವೀರೇಂದ್ರ ಪಾಟೀಲರು,

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನ್ಯ ರಾಮಕೃಷ್ಣ ಹೆಗ್ಗಡೆಯವರು ಮತ್ತು ಮಾನ್ಯ ಎಸ್.ಎಂ. ಕೃಷ್ಣರವರುಗಳು ತೀರ್ಮಾನ ಮಾಡಿ, ಮಾಫಿಯಾಗೆ ಯೀಲ್ಡ್ ಆಗಬೇಕಾಯಿತು. ಮಾಫಿಯಾ ನಮ್ಮ ಜೊತೆಯೇ ಇದೆ ಎಂದು ಸುಮ್ಮನಾದರು. ಆ ಕುದುರೆಗಳನ್ನೇನಾದರೂ ಮಾಡಬಹುದು, ಆದರೆ ಮಾಫಿಯಾವನ್ನು ಏನೂ ಮಾಡುವುದಕ್ಕಾಗುವುದಿಲ್ಲ.

**ಶ್ರೀ ಎಂ.ನಾರಾಯಣಸ್ವಾಮಿ:-** ಯಾವ ಮುಖ್ಯಮಂತ್ರಿ ರೇಸ್‌ಕೋರ್ಸ್‌ನ್ನು ಸ್ಥಳಾಂತರ ಮಾಡಲು ಕೈ ಹಾಕುತ್ತಾರೋ ಅವರ ಸ್ಥಾನ ಹೋಗುತ್ತದೆ ಎನ್ನುವುದು ಗಾದೆ ಮಾತಾಗಿಬಿಟ್ಟಿದೆ. ಅಂತಹ ಪರಿಸ್ಥಿತಿ ಬಂದಿದೆ. ಕುದುರೆ ಓಡಿಸುವ ಸಂಬಂಧ ಕೌಶಲ್ಯ ಎಷ್ಟಿದೆ ಎಂದು ಮಾತನಾಡುವ ನಾವುಗಳು fantasy game ಏನಿದೆ, ಅದರ App ಅನ್ನು ತಯಾರು ಮಾಡಬೇಕಾದರೆ, ಅದರ ಹಿಂದೆ ಎಷ್ಟು ಜನ ಸಾಫ್ಟ್‌ವೇರ್ ಎಂಪ್ಲಾಯಿಗಳ ಕೌಶಲ್ಯ ಇದೆ ಎನ್ನುವುದರ ಬಗ್ಗೆ ಯೋಚನೆ ಮಾಡಬೇಕು. ಈ ಗೇಮ್‌ಗಳನ್ನು ರೆಡಿ ಮಾಡುವುದಕ್ಕೆ ಸಂಬಂಧಪಟ್ಟಂತೆ ಸಾಫ್ಟ್‌ವೇರ್ ಇಂಜಿನಿಯರ್‌ಗಳು ಮತ್ತು ಆಪರೇಟರ್‌ಗಳು ಸುಮಾರು 6 ಸಾವಿರ ಜನ ಜನ ಇರುತ್ತಾರೆ. ಅಲ್ಲಿ ನಿಜವಾದ ಕೌಶಲ್ಯತೆ ಇದೆ. Fantasy game ನಿಂದ ಸರ್ಕಾರಕ್ಕೆ ಬೇಕಾದಷ್ಟು ರೆವಿನ್ಯೂ ಬರುತ್ತಿದೆ. ಫ್ಯಾಂಟಸಿ ಗೇಮ್ ಬಗ್ಗೆ ಒಂದು ಉದಾಹರಣೆ ಹೇಳುತ್ತೇನೆ. ಇದೊಂದು ಸೈಕಲ್ ಆಗಿದೆ. 'Fantasy Sports helps development of Sports'. ಇದು ಎಲ್ಲಿಂದ ಪ್ರಾರಂಭವಾಗುತ್ತದೆ ಎಂದರೆ, ನಮ್ಮ ಸ್ಮಾರ್ಟ್ ಫೋನ್ ಏನಿದೆ, 'Digital Sports Engagement Platforms', ಅಲ್ಲಿಂದ ಪ್ರಾರಂಭವಾಗುತ್ತದೆ. 'Sports Consumption and Viewership, Sporting Culture, Investments and Commerce, Sports Infrastructure Development, Sports adoption, Athletes and Coach promotion, Enabling multi-sport ecosystem' - ಈ ರೀತಿ ಒಂದು ಸೈಕಲ್ ಆಗಿದೆ. ನಮ್ಮ skilled sports ಏನಿದೆ ಅದು ಇಷ್ಟನ್ನು ಒಳಗೊಂಡಿರುತ್ತದೆ. ಜೊತೆಗೆ, "Fantasy sports is a sports engagement platform and not gaming. Users can participate in fantasy sports, contest all available team sports. Team sports available on fantasy sports platforms include cricket, kabaddi, football, hockey, basketball, volleyball, baseball, etc." ಈ ಗೇಮ್‌ನಲ್ಲಿ ಏನಿದೆ ಎಂದರೆ, ಉದಾಹರಣೆಗೆ ನಾನು ಮೊಬೈಲ್‌ನಿಂದ ಗೇಮ್‌ಗೆ ಎಂಟ್ರಿ ಆಗಬೇಕೆಂದರೆ 35 ರೂಪಾಯಿ ಫೀ ಕಟ್ಟಬೇಕಾಗುತ್ತದೆ. ಇಂಡಿಯಾ ಮತ್ತು ಪಾಕಿಸ್ತಾನದ ಎರಡೂ ಟೀಮ್‌ಗಳ ಆಟಗಾರರನ್ನು ಸೇರಿಸಿ ನನ್ನದೇ ಆದ ಒಂದು ಟೀಮ್ ಮಾಡುತ್ತೇನೆ. ಪಾಕಿಸ್ತಾನದ 7-8 ಆಟಗಾರರು ಮತ್ತು ಇಂಡಿಯಾದ 7-8 ಆಟಗಾರರನು ಸೇರಿಸಿ ಒಂದು ಟೀಮ್ ಮಾಡುತ್ತೇನೆ. ಅದನ್ನು ನಾನು ನಮ್ಮ ಸೋಶಿಯಲ್ ಮೀಡಿಯಾದಲ್ಲಿ ಹಾಕುತ್ತೇನೆ. ಆಗ ಇಡೀ ಪ್ರಪಂಚದಲ್ಲಿ ಯಾರು

"ತಿದ್ದುಪಡಿಯಾಗದ ಪ್ರತಿ: ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

fantasy sports ನಲ್ಲಿ participate ಮಾಡುತ್ತಾರೋ ಅವರಲ್ಲಿ ಒಬ್ಬ ಎಂಟ್ರಿ ಆಗಬೇಕಾದರೆ 35 ರೂಪಾಯಿಗಳ ಎಂಟ್ರಿ ಫೀ ಕಟ್ಟಬೇಕು. ಫೀ ಕಟ್ಟಿ, ಆ ಟೀಮ್ ಕರೆಕ್ಟ್ ಆಗಿದೆ ಎಂದರೆ ಅದನ್ನು ಲೈಕ್ ಮಾಡಿ ಮುಂದಕ್ಕೆ ಬಿಡುತ್ತಾನೆ. ಇಲ್ಲದೇ ಹೋದರೆ, ಅವನು 2-3 ಅಥವಾ 10 ಜನ ಪ್ಲೇಯರ್‌ಗಳನ್ನು ಚೇಂಜ್ ಮಾಡಬಹುದು. ಈ ರೀತಿ ಟೀಮ್ ಮಾಡಿಕೊಂಡು ಹೋಗುತ್ತಾ ಹೋಗುತ್ತಾ, ಪ್ರಪಂಚದ ಲಕ್ಷಾಂತರ ಜನ, ಹೌದು ಇವರೇನು ಟೀಮ್ ಮಾಡಿದ್ದಾರೋ ಅದು ನನ್ನದು ಕೂಡ ಟೀಮ್ ಆಗಿದೆ ಎಂದು ಲೈಕ್ ಮಾಡಬಹುದು ಅಥವಾ ಈ ಪ್ಲೇಯರ್‌ಗಳಲ್ಲಿ, ಇಬ್ಬರನ್ನು ಚೇಂಜ್ ಮಾಡಿದ ಟೀಮನ್ನು ಲೈಕ್ ಮಾಡಬಹುದು. ಇದು ಕೇವಲ ನಮ್ಮ ರಾಜ್ಯದಲ್ಲೋ, ನಮ್ಮ ದೇಶದಲ್ಲೋ ಅಲ್ಲ, ಇಡೀ ಪ್ರಪಂಚಕ್ಕೆ ಹೋಗುತ್ತದೆ. ಆಗ ಏನಾಗುತ್ತದೆ ಎಂದರೆ, ಯಾವ ಟೀಮನ್ನು ಲೈಕ್ ಮಾಡಿರುವಂಥದ್ದು highest ಆಗುತ್ತದೆಯೋ ಉದಾಹರಣೆಗೆ, ಇಡೀ ಪ್ರಪಂಚದಲ್ಲಿ ಒಂದು ಕೋಟಿ ಜನ ಆಡಿದ್ದರೆ, ನಾನು ಮಾಡಿರುವ ಟೀಮನ್ನು ಒಂದು ಲಕ್ಷ ಜನ ಲೈಕ್ ಮಾಡಿದರೆ ಅದಕ್ಕೆ ನನಗೆ, ಕಟ್ಟಿರಬಹುದಾದ 35 ರೂಪಾಯಿಗಳಲ್ಲಿ 20 ರೂಪಾಯಿಗಳು ಬರುತ್ತದೆ. ಇದರಿಂದ ಸರ್ಕಾರಕ್ಕೆ ರೆವಿನ್ಯೂ ಕೂಡ ಬರುತ್ತದೆ. ಇದರಲ್ಲಿ ನಿಜವಾದ ಕೌಶಲ್ಯತೆ ಅಡಗಿದೆ. ಇಂಜಿನಿಯರಿಂಗ್ ಟೆಕ್ನಾಲಜಿಯನ್ನು, ಅವರ ಟ್ಯಾಲೆಂಟ್‌ನ್ನು ಉಪಯೋಗಿಸಿಕೊಂಡು ಈ ಗೇಮ್‌ಗಳನ್ನು ಆಡುತ್ತಾರೆ. ಇದರಲ್ಲಿ ಎಲ್ಲೂ ಕೂಡ ಜೂಜು ಇಲ್ಲ. ಯಾರ ಹತ್ತಿರ ಪಂದ್ಯ ಕೂಡ ಕಟ್ಟುವುದಿಲ್ಲ. ಇಂಥದ್ದನ್ನು ಬ್ಯಾನ್ ಮಾಡುವುದಕ್ಕೆ ಹೋಗಿದ್ದೀರಿ. ಇದು ಆಗಬಾರದು. ಕ್ಲಬ್‌ಗಳಲ್ಲಿ ಯಾರು ಜೂಜು ಆಡುತ್ತಾರೆ, ಅಂತಾರಾಷ್ಟ್ರೀಯ ಮಟ್ಟದಲ್ಲಿ ಕ್ರಿಕೆಟ್ ಮ್ಯಾಚ್‌ಗಳಾದಾಗ, ಎಲ್ಲೋ ಒಂದು ಕಡೆ ಕುಳಿತುಕೊಂಡು, ಈ ಬಾಲ್‌ಗೆ ಫೋರ್ ಹೊಡೆಯುತ್ತಾರೆ, ಈ ಬಾಲ್‌ಗೆ ಸಿಕ್ಸ್ ಹೊಡೆಯುತ್ತಾರೆ, ಇಂತಹ ಬಾಲ್‌ಗೆ ಔಟ್ ಆಗುತ್ತಾರೆ ಅಥವಾ ಈಗ ಗೋಲ್ ಹೊಡೆಯುತ್ತಾನೆ ಎಂದು ಏನು ಬಾಜಿ ಕಟ್ಟುತ್ತಾರೋ, ಇಂಥವರನ್ನು ಹಿಡಿಯಬೇಕು. ಆದರೆ ಅದು ನಮ್ಮ ಕೈಯಲ್ಲಿ ಆಗುವುದಿಲ್ಲ. ಮಾನ್ಯ ಸಭಾಪತಿಗಳೆ, ನಾನು ಕೌಶಲ್ಯತೆಯಿಂದ ಕೂಡಿದ ಒಂದು ಗೇಮ್‌ನ ಉದಾಹರಣೆ ಕೊಟ್ಟೆ. This is called real skilled games. ಇದನ್ನೂ ಬ್ಯಾನ್ ಮಾಡುವುದಕ್ಕೆ ಹೊರಟಿರುವುದು ತಪ್ಪಾಗುತ್ತದೆ ಎನ್ನುವುದು ನನ್ನ ಅಭಿಪ್ರಾಯವಾಗಿದೆ. ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ ಹಾಗೆ, ನಮ್ಮ ದೇಶದ ಹಲವಾರು ಉಚ್ಚ ನ್ಯಾಯಲಯಗಳು ಮತ್ತು ಸುಪ್ರೀಮ್ ಕೋರ್ಟ್ ಕೂಡ ಕೌಶಲ್ಯ ಕ್ರೀಡೆಗಳನ್ನು ಬ್ಯಾನ್ ಮಾಡಬಾರದು; ಇಂಥದ್ದಕ್ಕೆ ಉತ್ತೇಜನ ಕೊಡಬೇಕು ಎಂದು ಹೇಳಿದೆ.

(ಮುಂದು . . .)

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**(986) 9:50 BKP-RN 23/09/2021**

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಎಂ.ನಾರಾಯಣ ಸ್ವಾಮಿ** (ಮುಂದು):-

ನಮ್ಮ ದೇಶದ ಹಲವಾರು ಉಚ್ಚ ನ್ಯಾಯಾಲಯಗಳು, ಕೊನೆಗೆ ಸುಪ್ರೀಂ ಕೋರ್ಟ್ ಕೂಡ ಈ fantasy game ಅನ್ನು ಬ್ಯಾನ್ ಮಾಡಬಾರದು ಇದಕ್ಕೆ ಉತ್ತೇಜನ ಕೊಡಬೇಕೆಂದು ಹೇಳಿದೆ. ಒಂದು ವೇಳೆ ನೀವು ಇದನ್ನು ಬ್ಯಾನ್ ಮಾಡಲು ಹೋದರೆ Contempt of Court ಅಗುವುದಿಲ್ಲವೇ? ನೀವು ಬ್ಯಾನ್ ಮಾಡಿದ ತಕ್ಷಣ ಸುಪ್ರೀಂ ಕೋರ್ಟ್‌ನ ಆದೇಶವನ್ನು ತಿರಸ್ಕಾರ ಮಾಡಿ ಈ ಬಿಲ್ ಅನ್ನು ತಂದಂತಾಗುವುದಿಲ್ಲವೇ? ಈ ಪ್ರಕರಣ ನಮ್ಮ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಪೆಂಡಿಂಗ್ ಇದೆ. ಈ ಕಾಯಿದೆಯನ್ನು ತರುವುದಕ್ಕಿಂತ ಮುಂಚಿತವಾಗಿ ಈ ಎಲ್ಲಾ ವಿಚಾರಗಳನ್ನು ನೀವು ಯೋಚನೆ ಮಾಡಬೇಕೆಂದು ತಮ್ಮಲ್ಲಿ ನಾನು ವಿನಂತಿ ಮಾಡುತ್ತಿದ್ದೇನೆ. ಈ ಆಟ ಆಡುತ್ತಿರುವವರು ಸಾವಿರಾರು ಜನ skilled workers ಏನಿದ್ದಾರೆ, ದಿನನಿತ್ಯ ಆ software ಅನ್ನು develop ಮಾಡಿಕೊಂಡು ಹೋಗುತ್ತಿರುತ್ತಾರೆ. ಇದರಲ್ಲಿ ಬಹಳಷ್ಟು ಜನ engineers ಕೆಲಸ ಮಾಡುತ್ತಿದ್ದಾರೆ. ಈ ಆಟವನ್ನು ಬ್ಯಾನ್ ಮಾಡಿದರೆ ಇಲ್ಲಿ ಕೆಲಸ ಮಾಡುತ್ತಿರುವ ಸುಮಾರು ಆರು ಸಾವಿರ ಜನ ನಿರುದ್ಯೋಗಿಗಳಾಗುತ್ತಾರೆ. ಇದರಿಂದ ಸರ್ಕಾರಕ್ಕೆ ಆದಾಯ ಬರುತ್ತಿದೆ. ಇವರು ಇದನ್ನು ಏಕೆ ಬ್ಯಾನ್ ಮಾಡಲು ಹೊರಟಿದ್ದಾರೋ ನನಗೆ ಅರ್ಥವಾಗುತ್ತಿಲ್ಲ. ಆದ್ದರಿಂದ ಈ ಎಲ್ಲಾ ವಿಚಾರಗಳನ್ನು ತಮ್ಮ ಮೂಲಕ ಸರ್ಕಾರದ ಗಮನ ಸೆಳೆಯಲು ಇಚ್ಛಿಸುತ್ತೇನೆ.

**ಶ್ರೀ ಪುಟ್ಟಣ್ಣ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಈಗ ಮಾನ್ಯ ಗೃಹ ಸಚಿವರು ಈ ಕಾಯಿದೆಯನ್ನು ಏನು ತಂದಿದ್ದಾರೆ ಅದನ್ನು ನಾನು ಸಂಪೂರ್ಣ ಸ್ವಾಗತ ಮಾಡುತ್ತೇನೆ. ಒಂದು ವಿಚಾರವೇನೆಂದರೆ ಈ ಕಾನೂನಿನಲ್ಲಿ ಕುದುರೆ ರೇಸ್ ಅಂದರೆ ಕುದುರೆ ಜೂಜಿನ ವಿಚಾರವನ್ನು ಬಿಟ್ಟಿದ್ದಾರೆ. ನಾನು ಹೇಳುವುದೇನೆಂದರೆ ಕುದುರೆಯನ್ನು ಓಡಿಸಲಿ, ಆದರೆ ಹಣವನ್ನು ಕಟ್ಟಬಾರದು. ಬಾಜಿ ಎಂದು ಹಣವನ್ನು ಕಟ್ಟಬಾರದು. ಇದೊಂದು ಆಟ ಎನ್ನುತ್ತಾರಲ್ಲವೇ? ನಾನು ಹೇಳುವುದೇನೆಂದರೆ ಅದು ಕ್ರೀಡೆ ಅಥವಾ ಆಟ ಎಂದು ಹೇಳುತ್ತಾರಲ್ಲವೇ? ಇದರಲ್ಲಿ ಅದನ್ನು ಸೇರಿಸಲಿ ಎನ್ನುವುದು ನನ್ನ ಅಭಿಪ್ರಾಯ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೆ, ನಮ್ಮ ವಿಚಾರವೇನಿದೆಯೆಂದರೆ ಈ fantasy sports ಅನ್ನು ಹೇಗೆ ಬ್ಯಾನ್ ಮಾಡಿದ್ದಾರೆ, ಹಾಗೆ ದುಡ್ಡನ್ನು ಕುದುರೆ ಜೂಜಿಗೆ ಬಾಜಿ ಕಟ್ಟಿ ಎಷ್ಟೋ ಕುಟುಂಬಗಳು ಹಾಳಾಗಿವೆ. ಇಡೀ ಬೆಂಗಳೂರಿನ ಸರ್ಕಾರಿ ಕಛೇರಿಗಳಲ್ಲಿ ಒಬ್ಬರೂ ಇರುವುದಿಲ್ಲ. ಎಲ್ಲರೂ ಅಲ್ಲೇ ಅಂದರೆ, ಟರ್ಫ್ ಕ್ಲಬ್‌ನಲ್ಲಿ ಇರುತ್ತಾರೆ. ದುಡ್ಡು ಕಟ್ಟುತ್ತಾರೆಂದರೆ ಅದೂ it is nothing but betting. Supreme Court decision is binding on us. ಅದನ್ನು ನಾವೂ ಸ್ವಾಗತ ಮಾಡುತ್ತೇನೆ.

**ಶ್ರೀ ಪುಟ್ಟಣ್ಣ:** ಮಾನ್ಯ ಸಭಾಪತಿಯವರೆ, ಸರ್ವೋಚ್ಚ ನ್ಯಾಯಾಲಯ ಏನು ಹೇಳಿದೆ ಅದರ ಬಗ್ಗೆ ನನ್ನ ತಕರಾರು ಏನೂ ಇಲ್ಲ. ಅದನ್ನು ನಾನೂ ಸ್ವಾಗತ ಮಾಡುತ್ತೇನೆ. ನಾನು ಸರ್ಕಾರಿ ಕಲಾ ಕಾಲೇಜಿನಲ್ಲಿ ಇಲ್ಲೇ ಓದಿದ್ದು. ಅವತ್ತಿನ ವಿದ್ಯಾರ್ಥಿಗಳೂ ಸಹ ಇಲ್ಲಿಗೆ ಆಡಲಿಕ್ಕೆ ಹೋಗುತ್ತಿದ್ದರು. ಈಗ ಮಾನ್ಯ ಮುಖ್ಯಮಂತ್ರಿಯವರ ಮನೆಯನ್ನು ಅಲ್ಲಿಗೆ ಬದಲಾಯಿಸಿದ್ದಾರೆ. ಈಗಾಗಲೇ ಮುಖ್ಯಮಂತ್ರಿಯವರು ಅಲ್ಲಿ ಬಂದಿದ್ದಾರೆ. ಆ ಮನೆ ಎದುರುಗಡೆಯಲ್ಲೇ ಎಷ್ಟು ಆಟೋರಿಕ್ಷಾಗಳು ಬಂದು ನಿಲ್ಲುತ್ತವೆ. ಅಲ್ಲಿ ಆಟ ನಡೆಯುವಾಗ ಬಂದು ನಿಲ್ಲುವುದಕ್ಕೆ ಪ್ರಾರಂಭ ಆಗುತ್ತವೆ. ಮಾನ್ಯ ಸಭಾಪತಿಯವರೆ, ತಮಗೂ ಗೊತ್ತಿದೆ ತಾವು ಈ ಸದನಕ್ಕೆ ಬಂದು ಸುಮಾರು 42 ವರ್ಷ ತುಂಬುತ್ತಾ ಬಂತು. ತಾವು ವಾಕಿಂಗ್ ಹೋಗುವಾಗ ನೋಡಿರುತ್ತೀರಿ. ಈ ವಿಚಾರವನ್ನು ನಾನು ಹೇಳುತ್ತಿರುವ ಉದ್ದೇಶವೇನೆಂದರೆ ಯಾರೋ ಶ್ರೀಮಂತರು ದುಡ್ಡು ಕಳೆದುಕೊಳ್ಳುವ ವಿಚಾರವೇ ಬೇರೆ. ಆದರೆ, ದಿನಗೂಲಿ ಮಾಡುವವರು, ಅಷ್ಟೇ ಅಲ್ಲ ಇಲ್ಲಿ ಎಂ.ಎಸ್. ಬಿಲ್ಡಿಂಗ್ ಅಕ್ಕಪಕ್ಕ ಕೆಲಸಕ್ಕೆ ಬರುವವರಿದ್ದಾರಲ್ಲ, ಅವರೂ ಸಹ ಅಲ್ಲಿಗೆ ಆಡಲು ಹೋಗುತ್ತಾರೆ. ಆಟ ಮುಗಿಸಿಕೊಂಡು ಬರುವಾಗ ಅವರ ಯಾಪ್ ಮೋರೆ ಮತ್ತು ಕಣ್ಣುಗಳನ್ನು ನೋಡಿದರೆ ಹೊಟ್ಟೆ ಉರಿಯುತ್ತದೆ. ಅಲ್ಲಿಂದ ಅವರೆಲ್ಲ ನೇರವಾಗಿ ಹೋಗುವುದು ಬಾರಿಗೆ. ವಿಧಿ ಇಲ್ಲದೆ ಕುಡಿದುಕೊಂಡೇ ಹೋಗಬೇಕು. ಈ ರೀತಿಯ ಪರಿಸ್ಥಿತಿ ಇದೆ. ಆದ್ದರಿಂದ ನಾನು ಹೇಳುವುದೇನೆಂದರೆ ಕುದುರೆ ಓಡಿಸಲಿ ಅದರ ಬಗ್ಗೆ ನನ್ನ ತಕರಾರೇನಿಲ್ಲ. ಕುದುರೆ ಓಡಿಸಬಹುದೆಂದು ನ್ಯಾಯಾಲಯ ಹೇಳಿದೆ ಅಲ್ಲವೇ? ಓಡಿಸಲಿ. ಬಾಜಿ ಕಟ್ಟಬಾರದು ಅಷ್ಟೆ. ದಯವಿಟ್ಟು ಈ ವಿಚಾರಗಳನ್ನು ಈ ಕಾಯಿದೆಯಲ್ಲಿ ಸೇರಿಸಿ. ನಾನು ಸುಳ್ಳು ಹೇಳುತ್ತಿಲ್ಲ. ಬಾಜಿ ಕಟ್ಟುವುದು ಬೇಡ, ಕುದುರೆಯನ್ನು ಓಡಿಸಲಿ. ಕುದುರೆ ಓಡಿಸಿಕೊಂಡು ಬನ್ನಿ ಒಂದ್ನಾಲ್ಕು ಬಾರಿ ಎಂದು ನಮ್ಮ ಮಕ್ಕಳನ್ನು ಕೇವಲ ಕುದುರೆ ಓಡಿಸುವುದಾದರೆ ಅಲ್ಲಿಗೆ ಕಳಿಸುತ್ತೇವೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನ್ಯ ಸಭಾಪತಿಯವರೆ, ಈ ಐಪಿಎಲ್ ಬಂದ ಮೇಲೆ ಏನಾಗಿದೆಯೆಂದರೆ ಒಂದು ಓವರ್ ಮೇಲೆ ಬಾಜಿಹಣ ಕಟ್ಟುತ್ತಾರೆ. ಒಂದು ಬಾಲ್‌ಗೆ ಎಷ್ಟು ಹೊಡೆಯುತ್ತಾರೆ ಮತ್ತು ಹೊಡೆಯುವುದಿಲ್ಲ ಎನ್ನುವ ಬಗ್ಗೆಯೂ ದುಡ್ಡನ್ನು ಕಟ್ಟುತ್ತಾರೆ. ಈ ಐಪಿಎಲ್ ಪಂದ್ಯಾವಳಿ ಬಂದಮೇಲೆ ಕೇವಲ ನಮ್ಮ ನಗರಗಳಲ್ಲಿ ಅಷ್ಟೆ ಅಲ್ಲ, ಇಂದು ಹಳ್ಳಿಗಳಲ್ಲಿಯೂ ಕೂಡ ಹುಡುಗರುಗಳು ಕುಳಿತುಕೊಂಡು ಈ ಆಟಕ್ಕೆ ದುಡ್ಡು ಕಟ್ಟಿ ಆಡುತ್ತಿರುವುದನ್ನು ನಾವು ನೋಡುತ್ತಾ ಇದ್ದೇವೆ. ಹಳ್ಳಿಯಲ್ಲೇ ಹೆಚ್ಚು ಈ ರೀತಿ ನಡೆಯುತ್ತಿದೆ. ಈ ಆನ್‌ಲೈನ್ ಆಟಗಳೇನಿವೆ ಅವು ಮಕ್ಕಳಿಗೆ ಸುಲಭವಾಗಿ ಸಿಗುವಂತಹವು. ಮೊಬೈಲ್‌ನಲ್ಲೇ ಆಡುತ್ತಾರೆ. ಕಂಪ್ಯೂಟರ್ ಮುಂದೆ ಕುಳಿತಾಗ ಕಂಪ್ಯೂಟರ್‌ನಲ್ಲೇ ಆಡುತ್ತಾರೆ. ಅಂತಹದ್ದನ್ನೆಲ್ಲಾ ಬ್ಯಾನ್ ಮಾಡುವುದು ಒಳ್ಳೆಯದಿದೆ. ಅದರ ಜೊತೆಗೆ ನನ್ನ ಕಳಕಳಿ ಏನೆಂದರೆ ಈ ಕೂಡಲೇ ಕುದುರೆ ಜೂಜನ್ನು ನಿಲ್ಲಿಸಬೇಕು. ಆ ವಿಚಾರವನ್ನು ಈ ಕಾನೂನಿನಲ್ಲಿ ಸೇರಿಸಬೇಕು. ಎರಡನೆಯದಾಗಿ, ಅಗತ್ಯವಾಗಿ ಈ ಐಪಿಎಲ್ ಪಂದ್ಯಾವಳಿಯನ್ನೇ ರದ್ದುಮಾಡಿ. ಇಂತಹ ಪಂದ್ಯಾವಳಿಗಳೇ ನಮಗೆ ಬೇಡ. ಎಷ್ಟು ಜನ ಯುವಕರು ಅದರಿಂದ ಹಾಳಾಗಿ ಹೋಗುತ್ತಿದ್ದಾರೆಂದರೆ, ನಮ್ಮ ಪಕ್ಕದಲ್ಲೇ ಆಡುತ್ತಿರುತ್ತಾರೆ, ಒಂದು ಬೆಲ್ಲ ಎರಡು ಬೆಲ್ಲ ಎಂದು ಹೇಳುತ್ತಿರುತ್ತಾರೆ. ಒಂದು ಬೆಲ್ಲ ಅಂದರೆ ಇಷ್ಟು ದುಡ್ಡು, ಎರಡು ಬೆಲ್ಲ ಅಂದರೆ ಇಷ್ಟು ದುಡ್ಡು ಅಂತ. ಹೀಗೆ ಒಂದು, ಎರಡು, ಮೂರು ಬೆಲ್ಲ ಎಂದು ಹೇಳುತ್ತಿರುತ್ತಾರೆ. ನಾನು ಪ್ರಾಮಾಣಿಕವಾಗಿ ಹೇಳುತ್ತಿದ್ದೇನೆ. ಉತ್ಪ್ರೇಕ್ಷೆಗಾಗಿ ಹೇಳುತ್ತಿಲ್ಲ. ನಿಜವಾಗಿಯೂ ಇದರಿಂದ ಬಹಳಷ್ಟು ಯುವಕರು ಹಾಳಾಗುತ್ತಿದ್ದಾರೆ. ಇದರ ಬಗ್ಗೆ ನಾವು ನೀವೆಲ್ಲರೂ ಕೂಡ ಚಿಂತನೆ ಮಾಡಲೇ ಬೇಕು. ಕ್ರೀಡೆ ಎನ್ನುವುದಾದರೆ ಆಟ ಆಡಲಿಕ್ಕೆ ಇರಬೇಕೇ ಹೊರತು ಬ್ಯಾಟ್ ಎತ್ತಿದ ತಕ್ಷಣ ಇಷ್ಟು ರನ್ ಹೊಡೆಯುತ್ತಾನೆ, ಅದಕ್ಕಿಷ್ಟು ದುಡ್ಡು, ಹೊಡೆಯುವುದೇ ಇಲ್ಲ ಅದಕ್ಕಿಷ್ಟು ದುಡ್ಡು, ಈ ರೀತಿಯಲ್ಲೆ ಕೆಲವರು ಕ್ರಿಕೆಟ್ ಆಡುವವರು ಸಿಕ್ಕಿಕೊಂಡರಲ್ಲಾ ಅವರೆಲ್ಲಾ ಇಂತಹ ಕಾರಣಕ್ಕಾಗಿಯೇ ಸಿಕ್ಕಿಹಾಕಿಕೊಂಡದ್ದು. ಮಾನ್ಯ ಸಭಾಪತಿಯವರೆ, ಇದು ಸರ್ವವ್ಯಾಪಿ ಆಗುತ್ತಿದೆ. ಮಾನ್ಯ ಸಚಿವರು ಹೊಸಬರು. ಅವರು ಒಳ್ಳೆಯ ಉದ್ದೇಶ ಇಟ್ಟುಕೊಂಡು ಈ ವಿಧೇಯಕವನ್ನು ತಂದಿದ್ದಾರೆ. ಅವರ ಕಳಕಳಿಯನ್ನು ನೂರಕ್ಕೆ ನೂರರಷ್ಟು ನಾನು ಸ್ವಾಗತ ಮಾಡುತ್ತೇನೆ. ದಯಮಾಡಿ, ಈ ಕುದುರೆಯನ್ನು ಓಡಿಸಲಿ ಹಣಕಟ್ಟುವುದು ಬೇಡ. ಐಪಿಎಲ್ ನಡೆಸಲಿ ಅದಕ್ಕಾಗಿ ಹಣಕಟ್ಟಿ ಜೂಜು ಆಡುವುದು ಬೇಡ. ಈ ವಿಚಾರಗಳನ್ನು ತಾವು ಈ ಕಾಯಿದೆಯಲ್ಲಿ ತಂದರೆ ಈ ರಾಜ್ಯಕ್ಕೆ ಖಂಡಿತವಾಗಿಯೂ ಒಳ್ಳೆಯದಾಗುತ್ತದೆಂಬುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ನಸೀರ್ ಅಹ್ಮದ್(ವಿಧಾನಸಭೆಯಿಂದ ಚುನಾಯಿತರಾದವರು):-** ಸನ್ಮಾನ್ಯ ಸಭಾಪತಿಯವರೆ, ಈ ವಿಧೇಯಕವನ್ನು ಬೆಂಬಲಿಸಿ ಈಗಾಗಲೇ ಪುಟ್ಟಣ್ಣನವರು ಮಾತನಾಡಿದರು. ಅವರು ಐಪಿಎಲ್ ಬಗ್ಗೆ ಹೇಳಿದ ವಿಚಾರಗಳು ನೂರಕ್ಕೆ ನೂರರಷ್ಟು ನಿಜ.

**ಶ್ರೀ ಮರಿತಿಬ್ಬೇಗೌಡ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಪುಟ್ಟಣ್ಣನವರಿಗೆ ಬರದೇ ಇರುವ ಆಟ ಯಾವುದಿದೆ. ಅವರೇ ಹೇಳಲಿ.

**ಶ್ರೀ ಪುಟ್ಟಣ್ಣ:-** ಮಾನ್ಯ ಮರಿತಿಬ್ಬೇಗೌಡರಿಗೆ ನಿಮಗೆ ಬರುವಷ್ಟು ನನಗೆ ಬರುವುದಿಲ್ಲ. ನಮ್ಮಿಬ್ಬರನ್ನು ಮೀರಿಸುವವರು ಮೇಲೆ ಕುಳಿತಿದ್ದಾರೆ ಇಲ್ಲಿ.

**ಶ್ರೀ ಜೆ.ಸಿ.ಮಾಧುಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):-** ಮಾನ್ಯ ಸಭಾಪತಿಯವರೆ, ಪುಟ್ಟಣ್ಣನವರು ಚುನಾವಣೆಯಲ್ಲಿ ಸೋಲುತ್ತಾರೆ-ಗೆಲ್ಲುತ್ತಾರೆ ಎನ್ನುವವರಿಗೆ ಮೊದಲು ದಂಡ ಹಾಕಬೇಕು. ಮಾನ್ಯ ಪುಟ್ಟಣ್ಣನವರೆ, ನಿಮ್ಮ ಚುನಾವಣೆಯಲ್ಲಿ ಸೋಲು-ಗೆಲುವಿನ ಬಗ್ಗೆ ಕೆಲವರು ಪಂದ್ಯ ಕಟ್ಟುವುದಿಲ್ಲವೇ? Are you not an horse in election? ನೀವು ಚುನಾವಣಾ ಕಣದಲ್ಲಿ ಕುದುರೆ ಅಲ್ಲವೇ?

**ಶ್ರೀ ನಸೀರ್ ಅಹ್ಮದ್ :-** ಹೌದು, ಅದು ನಿಜ. ಪುಟ್ಟಣ್ಣನವರು ಎಷ್ಟು ಮತಗಳ ಅಂತರದಲ್ಲಿ ಗೆಲ್ಲುತ್ತಾರೆಂದು ಕೆಲವರು ಪಂದ್ಯ ಕಟ್ಟುತ್ತಾರೆಂದು ಕೇಳಿದ್ದೇನೆ.

**ಶ್ರೀ ಜೆ.ಸಿ.ಮಾಧುಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):-** ಮಾನ್ಯ ನಸೀರ್ ಅಹ್ಮದ್‌ರವರೆ, ಈ ಕಾನೂನಲ್ಲಿ ಆ ವಿಚಾರಗಳನ್ನು ತಂದಿದ್ದೇವೆ. Source, Instrument, Abettor ಎಲ್ಲರನ್ನೂ ಜೈಲಿಗೆ ಕಳುಹಿಸುತ್ತೇವೆಂದು. ಆಗ ಇವರು ಎಲ್ಲಿಗೆ ಹೋಗುತ್ತಾರೆ?

**ಶ್ರೀ ನಸೀರ್ ಅಹ್ಮದ್ :-** ಸನ್ಮಾನ್ಯ ಸಭಾಪತಿಯವರೆ, ನಮ್ಮ ಕೋಲಾರದ APMC ಮಾರುಕಟ್ಟೆಯಲ್ಲಿ ಕಾರ್ಮಿಕರು ಸುಮಾರು ಐದುನೂರರಿಂದ ಆರುನೂರು ರೂಪಾಯಿಗಳವರೆಗೆ ದಿನವೂ ದುಡಿಯುತ್ತಾರೆ. ಅವರು ಹಣ ಸಿಕ್ಕಿದ ತಕ್ಷಣ ಮನೆಗೆ ಹೋಗುವುದಿಲ್ಲ. ಎರಡು ನೂರು ರೂಪಾಯಿ, ಮುನ್ನೂರು ರೂಪಾಯಿ, ನಾಲ್ಕು ನೂರು ರೂಪಾಯಿಗಳವರೆಗೆ ಸಿಕ್ಕಾಪಟ್ಟೆ ಮಟ್ಕಾ ಆಡುತ್ತಾರೆ. ಆಂಧ್ರದಿಂದ ಒಂದು ವ್ಯಾನ್‌ನಲ್ಲಿ ಬರುತ್ತಾರೆ. ಆ ವ್ಯಾನ್‌ನಲ್ಲಿ ಎಲ್ಲಾ ವ್ಯವಸ್ಥೆ ಇರುತ್ತದೆ. ಅಲ್ಕೋಹಾಲ್ ವ್ಯವಸ್ಥೆ, ಕಾರ್ಡ್ಸ್

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವ್ಯವಸ್ಥೆ, ಊಟದ ವ್ಯವಸ್ಥೆ, ಸಾಲ ಕೊಡುವವನು ಒಬ್ಬನು ಬಂದಿರುತ್ತಾನೆ. ಇದಲ್ಲಾ ಪೊಲೀಸ್‌ರಿಗೆ ಗೊತ್ತಿದೆ ಮತ್ತು ನೂರಕ್ಕೆ ನೂರರಷ್ಟು ಪೊಲೀಸ್‌ರ ರಕ್ಷಣೆಯಿಂದಲೇ ಇದೆಲ್ಲಾ ನಡೆಯುತ್ತಿದೆ. ಮಾಮೂಲು ತೆಗೆದುಕೊಂಡು ಅವರನ್ನು ಆರಾಮವಾಗಿ ಬಿಟ್ಟುಬಿಡುತ್ತಾರೆ. ಮಾನ್ಯ ಗೃಹ ಸಚಿವರೆ, ಇದು ಬಹಳ ಗಂಭೀರವಾದಂತಹ ವಿಚಾರ ತಮ್ಮ ಗಮನಕ್ಕೆ ತರಬಯಸುತ್ತೇನೆ. ಆಂಧ್ರದಿಂದ ನಮ್ಮ ಜಿಲ್ಲೆಯ ಗಡಿಭಾಗದಲ್ಲಿ ಬಂದು ಮಟ್ಕಾ ಆಡಿಸುತ್ತಾರೆ. ನಮ್ಮ ಜಿಲ್ಲೆಯವರಾದ ಮಾನ್ಯ ನಾರಾಯಣ ಸ್ವಾಮಿಯವರಿಗೂ ಗೊತ್ತು. ಹೆಚ್.ಬಿ.ಆರ್ ಲೇಔಟ್‌ನಂತಹ ಕಡೆಗಳಲ್ಲಿನ ಕಮರ್ಷಿಯಲ್ ಕಾಂಪ್ಲೆಕ್ಸ್‌ಗಳಲ್ಲಿ ಕ್ಲಬ್ಬುಗಳು ಪ್ರಾರಂಭವಾಗುತ್ತಿವೆ. ಅಲ್ಲಿ ಸರ್ವ್ ಮಾಡಲಿಕ್ಕೆ ಮಹಿಳೆಯರು, ಯುವತಿಯರು ಇರುತ್ತಾರೆ. ಅಲ್ಲಿನ ಕಮರ್ಷಿಯಲ್ ಕಾಂಪ್ಲೆಕ್ಸ್‌ಗಳಲ್ಲಿ ಅಂಗಡಿಗಳು, ಷಾಪ್‌ಗಳು ಇರುತ್ತವೆ. ಮಧ್ಯದಲ್ಲಿ ಒಂದು ಕ್ಲಬ್. ಅದಕ್ಕೆ ಪರವಾನಗಿ ಕೊಡುವವರು ಯಾರು? ಅವರಿಗೆ ವಿದ್ಯುತ್ ಸಂಪರ್ಕ ಸಿಗುತ್ತದೆ. ಪರವಾನಗಿ ಸಿಗುತ್ತದೆ ಮತ್ತು ಭಯವಿಲ್ಲದೆ ದಂಧೆ ನಡೆಸುತ್ತಾರೆ. ಇವರಿಗೆ ಅನುಮತಿ ಕೊಡುವವರು ಯಾರು? ಅವರೇ ಎಲ್ಲಾ ಬಡಾವಣೆಯಲ್ಲಿ ಒಂದೊಂದು ಕಡೆ ಆರಾಮಾಗಿ ಇರುತ್ತಾರೆ. ಇಂದು ಐಪಿಎಲ್ ಬಗ್ಗೆ ಹೇಳಿದ್ದಾರೆ. It is a very big menace. ಸಾಲಮಾಡಿಕೊಂಡು ಪಂದ್ಯ ಆಡುತ್ತಾರೆ. ಶೇ.5ರಷ್ಟು ಬಡ್ಡಿಯಲ್ಲಿ ಸಾಲ ತೆಗೆದುಕೊಂಡು ಹೋಗಿ ಆಡುತ್ತಾರೆ.

**(ಮುಂದು)**

**(987) 23.09.2021 10.00 ಎಸ್‌ವಿ-ಆರ್‌ಎನ್**

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ನಸೀರ್ ಅಹ್ಮದ್ (ಮುಂದು):-**

ಇದು ನಮ್ಮ ಸಮಾಜಕ್ಕೆ ದೊಡ್ಡ ತೊಂದರೆಯಾಗಿದೆ. We have to think of it out of the box and somehow, we have to bring some solution for this. ದಯವಿಟ್ಟು ಅದನ್ನು ಮಾಡಬೇಕೆಂದು ನಾನು ತಮ್ಮ ಮೂಲಕ ಸರ್ಕಾರಕ್ಕೆ ವಿನಂತಿಸುತ್ತೇನೆ.

**ಶ್ರೀ ಎನ್.ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕರ್ನಾಟಕ ಪೊಲೀಸು (ತಿದ್ದುಪಡಿ) ವಿಧೇಯಕ, 2021 ಅನ್ನು ನಾನು ಸ್ವಾಗತ ಮಾಡುತ್ತೇನೆ. ಬೇರೆ ದೇಶಗಳಲ್ಲಿ ಸರ್ವರ್‌ಗಳನ್ನಿಟ್ಟುಕೊಂಡು ಇಲ್ಲಿ ಆಟವಾಡಬಹುದು. ಈಗಾಗಲೇ ಇತರ ಮಾನ್ಯ ಸದಸ್ಯರು ಹೇಳಿದಂತೆ ಐ.ಪಿ.ಎಲ್

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇರಬಹುದು ಅಥವಾ ಇನ್ಯಾವುದೇ ಆಟವಿರಬಹುದು ಹೋಬಳಿ ಮಟ್ಟದಲ್ಲಿ, ತಾಲ್ಲೂಕು ಮಟ್ಟದಲ್ಲಿ ಎಷ್ಟೋ ಜನ ಆತ್ಮಹತ್ಯೆ ಮಾಡಿಕೊಳ್ಳುವ ಪರಿಸ್ಥಿತಿಯನ್ನು ತಲುಪಿದ್ದಾರೆ. ಎಷ್ಟೋ ಜನ ಜಮೀನುಗಳನ್ನು ಅಡಮಾನ ಇಡುತ್ತಾರೆ; ಅವರ ತಾಯಿಯ ಒಡವೆಗಳನು ಅಡವಿಟ್ಟು ಅಥವಾ ಕದ್ದುಕೊಂಡು ಹೋಗಿ ಮಾರಿಕೊಂಡು ಈ ಆಟಗಳನ್ನಾಡುತ್ತಿದ್ದಾರೆ. ಹಾಗಾಗಿ ನಾನು ಹೆಚ್ಚಿಗೆ ಮಾತನಾಡದೆ, ಈ ತಿದ್ದುಪಡಿ ವಿಧೇಯಕವನ್ನು ಸ್ವಾಗತ ಮಾಡುತ್ತೇನೆ. ಪೊಲೀಸ್ ಇಲಾಖೆಯು ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಂಡು ಇದನ್ನು ಹೋಗಲಾಡಿಸದಿದ್ದರೆ ಮುಂದಿನ ದಿನಗಳಲ್ಲಿ ನಮ್ಮ ಯುವ ಜನಾಂಗ, ವಿದ್ಯಾರ್ಥಿಗಳ ಭವಿಷ್ಯ ಹಾಳಾಗುತ್ತದೆ. ಅವರ ಮನೆಯವರ ಪರಿಸ್ಥಿತಿ ಬಹಳ ನರಕಸದೃಶವಾಗುತ್ತದೆ ಎಂದು ನಾನು ಹೇಳಬಯಸುತ್ತೇನೆ.

**ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈ ವಿಧೇಯಕವನ್ನು ತಂದಿರುವ ಉದ್ದೇಶ ಒಳ್ಳೆಯದೇ ಆಗಿದೆ. ಆದರೆ ಇದನ್ನು ಕಾರ್ಯಗತ ಮಾಡುವಲ್ಲಿ ನಾವು ನೂರಕ್ಕೆ ನೂರರಷ್ಟು ವಿಫಲರಾಗುತ್ತೇವೆ. ಈ ಮಾತನ್ನು ನಾನು ಮನಸಿನಿಂದ ಹೇಳುತ್ತಿದ್ದೇನೆ. ಏಕೆಂದರೆ ಈ ವಿಧೇಯಕದಿಂದ ಶ್ರೀಮಂತರಿಗೆ ಯಾರಿಗೂ ತೊಂದರೆಯಾಗುವುದಿಲ್ಲ. ಏಕೆಂದರೆ ನಾನು Five Star Hotel ನಲ್ಲಿ ಹೋಗಿ ಆಡುತ್ತೇನೆ. ನನ್ನದೇ ಆದ flat ಇದೆ. ನನ್ನ flat ಗೆ ಪೊಲೀಸರು ಬರುತ್ತಾರೆಯೇ? Five Star Hotel ನಲ್ಲಿ ರೂಮ್ ಮಾಡಿಕೊಂಡು ಆಡಿದರೆ ಅಲ್ಲಿಗೆ ಬರುತ್ತಾರೆಯೇ? We must be very serious about these things. Already Supreme Court and Our High Court has given so many judgments about the game of skill. How can you go against the order of the Court? ಇದರಲ್ಲಿ ಅಂದರ್ ಬಾಹರ್, Three Leaves ಇದೆ. 153 ಕಾರ್ಡ್‌ನ ರಮ್ಮಿ ಆಡುತ್ತಿರುವಾಗ ಪೊಲೀಸರು 153 ಕಾರ್ಡ್ ಅನ್ನು seize ಮಾಡುವುದಿಲ್ಲ. ಕೇವಲ 53 ಕಾರ್ಡ್‌ಗಳನ್ನು seize ಮಾಡುತ್ತಾರೆ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಭೋಜೇಗೌಡರೇ, ಜಾಕ್‌ಪಾಟ್ ಅನ್ನು ಆಡಬಹುದೇ?

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಮರಿತಿಬ್ಬೇಗೌಡರೇ, 153 ಕಾರ್ಡ್‌ಗಳಲ್ಲಿ ಯಾವುದನ್ನು ಬೇಕಾದರೂ ಆಡಬಹುದು. Three pack cards. Single pack card ನಲ್ಲಿ ಆಡಿದರೆ ಅದು gambling ಆಗುತ್ತದೆ. It is a gambling. ಮೂರು ಪ್ಯಾಕ್‌ನಲ್ಲಿ ಆಡಿದರೆ ಅದು gambling ಅಲ್ಲ. Single pack ನಲ್ಲಿ ಆಡಿದರೆ ಅದು gambling. ಎಲ್ಲಿ ಬೇಕಾದರೂ ಕೇಳಿ.

"ತಿದ್ದುಪಡಿಯಾಗದ ಪ್ರತಿ; ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಯಾರನ್ನು ಬೇಕಾದರೂ ಕೇಳಿ ತಿಳಿದುಕೊಳ್ಳಿ. ನಾನು ಆಡುತ್ತೇನೆ. ಮಾನ್ಯ ಪುಟ್ಟಣ್ಣ single pack ಆಡುತ್ತಾರೆ. ಅವರಿಗೆ ರಮ್ಮಿ ಬರುವುದಿಲ್ಲ.

**ಶ್ರೀ ಅರಗ ಜ್ಞಾನೇಂದ್ರ:-** ಮಾನ್ಯ ಭೋಜೇಗೌಡರೇ, ನೀವಿಬ್ಬರೂ ಮಾತನಾಡುವುದು ಪೊಲೀಸ್ ರೆಕಾರ್ಡ್ ಆಗುತ್ತಿದೆ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಚಿವರೇ, I am the member of so many clubs. Whenever I get the time, ನಮ್ಮ ಚಿಕ್ಕಮಗಳೂರು ಕ್ಲಬ್‌ನಲ್ಲಿ ನಾನು ರಮ್ಮಿ ಆಡುತ್ತೇನೆ. Frequent ಆಗಿ ನಾನು family club ಗೆ ಹೋಗುತ್ತೇನೆ. ಅಲ್ಲಿ ನಾನು ರಮ್ಮಿ ಆಡುತ್ತೇನೆ. It is game of a skill. ಅದಕ್ಕೋಸ್ಕರವೇ ಪೊಲೀಸರು ಕೇಸು ಹಾಕುವಾಗ ಈ ಕೆಲಸ ಮಾಡುತ್ತಾರೆ. ಅವರು ರಮ್ಮಿ ಆಡುತ್ತಿದ್ದಾರೆ ಎಂದು ಬರೆದರೆ ಅದು ಕೇಸಾಗುವುದಿಲ್ಲ. It is hundred percent bailable. ಅಂದರ್ ಬಾಹರ್, Three Leaves ಎಲ್ಲಾ bailable. ಅದಕ್ಕೆ ನೀವು ಗಂಭೀರವಾಗಿ ಕ್ರಮವನ್ನು ಮಾಡಬೇಕು. ರಮ್ಮಿ ಆಡುವುದನ್ನು ಯಾವುದೇ ಕಾರಣಕ್ಕೂ ತಪ್ಪಿಸಲಿಕ್ಕೆ ಆಗುವುದಿಲ್ಲ. ಮಾನ್ಯ ಮಾಧುಸ್ವಾಮಿಯವರು ಏನು ಹೇಳುತ್ತಾರೆಂದು ನನಗೆ ಗೊತ್ತಿಲ್ಲ.

**ಶ್ರೀ ಜೆ.ಸಿ.ಮಾಧುಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):-** You are right. Playing Rummy with a Joker is skill game. ಅಂದರ್ ಬಾಹರ್ ಹಾಗೂ Three Leaves ಅವೆರಡಕ್ಕೂ ಕೇಸ್ ಹಾಕುತ್ತಾರೆ.

**ಶ್ರೀ ಎಸ್.ಎಲ್.ಭೋಜೇಗೌಡ:-** ರಮ್ಮಿ ಆಡುತ್ತಿದ್ದರೆ ಪೊಲೀಸರೇ ಬಂದು...

**ಡಾ:ತೇಜಸ್ವಿನಿಗೌಡ:-** ಮಾನ್ಯ ಸಭಾಪತಿಯವರೇ, ನಮಗೆ ಇದರ ಬಗ್ಗೆ ಏನೂ ತಿಳಿದಿಲ್ಲ. ಕೇವಲ ಗಂಡಸರದ್ದೇ ಒಂದು ಸಮಾವೇಶವಾಗಿದೆ.

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಸರ್ವೋಚ್ಚ ನ್ಯಾಯಾಲಯವೇ ಒಂದು ತೀರ್ಪಿನಲ್ಲಿ Rummy is not gambling ಹೇಳಿದೆ. ದುಡ್ಡು ಹಚ್ಚಿದರೆ ಅದು gambling ಆಗುತ್ತದೆ. ಮಾನ್ಯ ಕಾನೂನು ಸಚಿವರೇ, ನಮ್ಮಲ್ಲಿ ಚುನಾವಣೆ ಮುಗಿದ ಕೂಡಲೇ ಇಂತಹವರು ಗೆಲ್ಲುತ್ತಾರೆ, ಇಂತಹವರು ಸೋಲುತ್ತಾರೆ ಎಂದು ಲಕ್ಷ, ಎರಡು ಲಕ್ಷ, ಐದು ಲಕ್ಷ, ಹತ್ತು ಲಕ್ಷ ಬೆಟ್ಟಿಂಗ್ ಕಟ್ಟುತ್ತಾರೆ.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಅದಕ್ಕಾಗಿಯೇ ಇಸ್ಪೀಟು ಎಲೆ ಜೊತೆಯಲ್ಲಿ ದುಡ್ಡು ತೆಗೆದುಕೊಂಡು ಹೋಗುತ್ತಾರೆ. ಕೇವಲ ರಮ್ಮಿ ಆಡಿದವರ ಮೇಲೆ ಕ್ರಮ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತೆಗೆದುಕೊಳ್ಳುವುದಿಲ್ಲ. Along with ದುಡ್ಡು, ಅವರನ್ನು ಹಿಡಿದು ಅವರ ಮೇಲೆ ಕೇಸು ಹಾಕಲಾಗುವುದು.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಕಾನೂನು ಸಚಿವರು ಮಾನ್ಯ ಭೋಜೇಗೌಡರಿಗಿಂತಲೂ ಹೆಚ್ಚು ತಿಳಿದುಕೊಂಡಿದ್ದಾರೆ.

**ಸಭಾಪತಿಯವರು:-** ಮಾನ್ಯ ಭೋಜೇಗೌಡರೇ, ನೀವು ಈ ಕಡೆ ನೋಡಿ ಮಾತನಾಡಿ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಬೆಂಗಳೂರಿನಲ್ಲಿರುವ almost ಎಲ್ಲಾ licensed club ಗಳಲ್ಲಿ I can name it, ಗಾಲ್ಫ್ ಕ್ಲಬ್, ಬೌರಿಂಗ್ ಇನ್ಸ್ಟಿಟ್ಯೂಟ್, ಸಿಟಿ ಇನ್ಸ್ಟಿಟ್ಯೂಟ್ ನಿಂದ ಹಿಡಿದು ಬೆಂಗಳೂರಿನಲ್ಲಿರುವ ಎಲ್ಲಾ ಕ್ಲಬ್‌ಗಳಲ್ಲಿಯೂ ರಮ್ಮಿ ಆಡುತ್ತಾರೆ. ರಮ್ಮಿ ಆಡುವಾಗ ಆ ಕ್ಲಬ್‌ನಲ್ಲಿ ಬ್ಯಾಂಕ್ ಎಂದು ಇರುತ್ತದೆ. ಆ ಬ್ಯಾಂಕ್‌ನಲ್ಲಿ ಪಾಯಿಂಟ್ಸ್ ಎಂದು ಇರುತ್ತದೆ. 10 ರೂ. ಪಾಯಿಂಟ್ ನಿಂದ ಹಿಡಿದು 100 ರೂ. ಪಾಯಿಂಟ್‌ವರೆಗೂ ಆಡುತ್ತಾರೆ. 100 ರೂ. ಪಾಯಿಂಟ್‌ವರೆವಿಗೂ ಆಡಬೇಕಾದರೆ ಅವರಿಗೆ ಟೋಕನ್ ಕೊಡುತ್ತಾರೆ. ಒಂದು ಬ್ಯಾಂಕ್‌ಗೆ ಟೋಕನ್ ತೆಗೆದುಕೊಂಡು I exchanging my tokens. ಅಲ್ಲಿ cash transaction ಮಾಡುವಂತಿಲ್ಲ. ಟೋಕನ್ ತೆಗೆದುಕೊಂಡು ಅಂತಿಮವಾಗಿ ಸೋತವರು ಯಾರು, ಗೆದ್ದವರು ಯಾರು ಎಂದು calculate ಮಾಡಿ 10,100,1000 ಈ ರೀತಿ ಟೋಕನ್‌ಗಳ ಮೇಲೆ ಹಣವನ್ನು ಕೊಡಲಾಗುತ್ತದೆ. It is a game of a skill. ಯಾವ ಕ್ಲಬ್‌ನಲ್ಲಿಯೂ ಕೂಡ ಅಂದರ್ ಬಾಹರ್ ಆಗಲೀ, Three Leaves ಆಗಲೀ ಆಡುವುದಿಲ್ಲ. ಇದನ್ನು ಎಲ್ಲಿ ಆಡುತ್ತಾರೆಂದರೆ ಎಲ್ಲಿಯಾದರೂ ತೋಟದಲ್ಲಿ, ಎಲ್ಲಿಯಾದರೂ guest house ಇದ್ದರೆ ಗ್ಯಾಂಗ್‌ಗಳನ್ನು ಸೇರಿಸಿಕೊಂಡು ಆಡುತ್ತಾರೆ. ಇಸ್ಪೀಟ್ ಕ್ಲಬ್‌ಗೆ ಲೈಸನ್ಸ್ ಕೊಡುವವರು ಯಾರು?

**(ಈ ಹಂತದಲ್ಲಿ ಇತರ ಮಾನ್ಯ ಸದಸ್ಯರು ಮಾನ್ಯ ಭೋಜೇಗೌಡರು ತಮ್ಮ ಮಾತನ್ನು ಮುಗಿಸುವಂತೆ ಹೇಳಲು ಮಾನ್ಯ ಸಭಾಪತಿಯವರಿಗೆ ಒತ್ತಾಯಿಸಿದರು)**

**ಸಭಾಪತಿಯವರು:-** ಮಾನ್ಯ ಸದಸ್ಯರು ವಿಧೇಯಕದ ಬಗ್ಗೆ ಮಾತನಾಡುವಾಗ ನಾವು restrict ಮಾಡುವುದಕ್ಕಾಗುವುದಿಲ್ಲ. ಅವರು ಆ ವಿಷಯದಲ್ಲಿ ಪಿ.ಹೆಚ್.ಡಿ. ಮಾಡಿದ್ದಾರೆ. ಮಾನ್ಯ ಭೋಜೇಗೌಡರೇ, ನೀವು ಮುಂದುವರೆಸಿ.

**ಶ್ರೀ ಎಸ್.ಎಲ್.ಭೋಜೇಗೌಡ:-** ಇಸ್ಪೀಟ್ ಕ್ಲಬ್‌ಗೆ ಲೈಸನ್ಸ್ ಕೊಡುವವರು ನಮ್ಮ ಪೊಲೀಸ್‌ನವರು. ನಮ್ಮ ಪೊಲೀಸ್ ನವರು ಲೈಸೆನ್ಸ್ ಕೊಟ್ಟು ಅವರ ಕೈಯಲ್ಲಿ ಆಡಿಸುತ್ತಾರೆ. 500 ರೂ ಪಾಯಿಂಟ್, 1000 ರೂ. ಪಾಯಿಂಟ್ ಎಂದು ಆಡುತ್ತಾರೆ. 1000 ರೂಪಾಯಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪಾಯಿಂಟ್ ಎಂದರೆ ಒಂದು ಕಾರ್ಡ್‌ಗೆ Ace ಇದ್ದರೆ ಅದು 10. ಕ್ವೀನ್ ಇದ್ದರೆ 10, ಕಿಂಗ್ ಇದ್ದರೆ 10, ಜಾಕ್ ಇದ್ದರೆ 10 ಎಂದು ಬರುತ್ತದೆ. ಆಮೇಲೆ 9, 8, 7 ಹೀಗೆ ಬರುತ್ತದೆ.

**ಸಭಾಪತಿಯವರು:-** ಮಾನ್ಯ ಭೋಜೇಗೌಡರೇ, ವಿಧೇಯಕದ ಬಗ್ಗೆ ಮಾತನಾಡಿ.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಭೋಜೇಗೌಡರೇ, ಇಸ್ಪೀಟ್‌ನಲ್ಲಿ queen ಗೆ value ಇಲ್ಲ. Ace 9, 10. ನೀವು queen ಗೆ ಬೆಲೆಯನ್ನು ಕಟ್ಟುತ್ತಿದ್ದೀರಿ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಚಿವರೇ, queen ಗೂ 10 ಎನ್ನುತ್ತಾರೆ.

**ಸಭಾಪತಿಯವರು:-** ಮಾನ್ಯ ಭೋಜೇಗೌಡರೇ, ವಿಧೇಯಕದ ಬಗ್ಗೆ ಮಾತನಾಡಿ.

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ನಾವೇನು ಇಲ್ಲಿ ಇಸ್ಪೀಟು ಆಡಲಿಕ್ಕೆ ಬಂದಿದ್ದೇವಾ?

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, practically it is highly impossible.

**ಸಭಾಪತಿಯವರು:-** ಇಲ್ಲಿ ಇನ್ನೂ 14 ಮಂದಿ ಮಾತನಾಡುವುದಕ್ಕಾಗಿ ಹೆಸರನ್ನು ಕೊಟ್ಟಿದ್ದಾರೆ. ಆದ್ದರಿಂದ ವಿಧೇಯಕದ ಬಗ್ಗೆ ಅಷ್ಟೇ ಮಾತನಾಡಿ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಚಿವರೇ, ನೀವು ಬಹಳ ಒಳ್ಳೆಯವರಿದ್ದೀರಿ. ತಮಗೆ ಆಡುವುದಕ್ಕೆ ಬರುತ್ತದೆಯೋ, ಇಲ್ಲವೋ ಎನ್ನುವುದು ನನಗೆ ಗೊತ್ತಿಲ್ಲ. ಈ ಬಿಲ್ ಅನ್ನು ಯಾವುದೇ ಕಾರಣಕ್ಕೂ implement ಮಾಡುವುದಕ್ಕಾಗುವುದಿಲ್ಲ. ದೇವರಾಣೆ ಇದು implement ಮಾಡುವುದಕ್ಕಾಗುವುದಿಲ್ಲ. ಅದು success ಆಗುವುದಿಲ್ಲ. ಇದರಿಂದ ಏನಾಗುತ್ತದೆಯೆಂದರೆ ಅಮಾಯಕರನ್ನು.....

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಭೋಜೇಗೌಡರೇ, this is an effort. ನೂರಕ್ಕೆ ನೂರು ಆಗದಿದ್ದರೂ, ಆನ್‌ಲೈನ್ ಅನ್ನು ಕಂಟ್ರೋಲ್ ಮಾಡಬೇಕೆಂಬುದು ನಮ್ಮ ಪ್ರಮುಖವಾದ ಉದ್ದೇಶ ಆಗಿದೆ. We certainly control the online game. ಎಲ್ಲರದ್ದೂ ಮೊಬೈಲ್‌ಗಳನ್ನು ಸೀಜ್ ಮಾಡಲಾಗುವುದು. ಅವರ ಬಳಿ ಪಿ.ಸಿ. ಸೆಟ್/ಲ್ಯಾಪ್‌ಟಾಪ್ ಇದ್ದರೂ ಸೀಜ್ ಮಾಡಲಾಗುವುದು. ಅಂಗಡಿಯವರನ್ನೂ ಅರೆಸ್ಟ್ ಮಾಡಲಾಗುತ್ತದೆ. ಸರ್ವರ್ ಇಟ್ಟುಕೊಂಡಿರುವವರ ಮೇಲೆ ಖಂಡಿತವಾಗಿ we are going to take action on

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

them. We have instrument and mode of operation for that. ಇದರ ಮುಖ್ಯ ಉದ್ದೇಶ online gambling will be certainly stopped.

**ಸಭಾಪತಿಯವರು:-** ಮುಂದಿನ ಸರದಿ ಡಾ:ತೇಜಸ್ವಿನಿಗೌಡ ಅವರದ್ದು.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಚಿವರೇ, ಮೊಬೈಲ್‌ಗಳಲ್ಲಿ ರಮ್ಮಿ ಆಡುತ್ತಾರೆ.

**ಡಾ: ತೇಜಸ್ವಿನಿಗೌಡ:-** ಮಾನ್ಯ ಭೋಜೇಗೌಡರೇ, ನಿಮ್ಮ ಅವಕಾಶ ಮುಗಿಯಿತು. ಮಾನ್ಯ ಸಭಾಪತಿಯವರು ಮಾತನಾಡುವುದಕ್ಕಾಗಿ ನನ್ನ ಹೆಸರನ್ನು ಕರೆದಿದ್ದಾರೆ. ದಯಮಾಡಿ ತಾವು ಕುಳಿತುಕೊಳ್ಳಿ.

ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಬಹಳ ಅವಶ್ಯಕವಾಗಿದ್ದಂತಹ ಕರ್ನಾಟಕ ಪೊಲೀಸ್ ಅಧಿನಿಯಮ 1963 (1964) ಅನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ಅತ್ಯಂತ ಅವಶ್ಯಕ ಎಂದು ಭಾವಿಸಿ ನಮ್ಮ ಸರ್ಕಾರ ಮುಖ್ಯವಾಗಿ ನಮ್ಮ ಗೃಹಸಚಿವರು ಒಂದು ಒಳ್ಳೆಯ ಪ್ರಯತ್ನಕ್ಕೆ ಕೈಹಾಕಿದ್ದಾರೆ. ಬಹಳ ಮಹತ್ವವಾದ ವಿಧೇಯಕವನ್ನು ತಂದಿದ್ದಾರೆ. ಅವರಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ.

**(...ಮುಂದು**

(988) 23-09-2021,10.10 KG VK **(ಸಭಾಪತಿಯವರ ಉಪಸ್ಥಿತಿ)**

**ಡಾ||ತೇಜಸ್ವಿನಿ ಗೌಡ (ಮುಂದು):-**

ಈಗಿರುವಂತಹ ಕಲಂ 87 ಅಡಿಯಲ್ಲಿ ಬರುವಂತಹ ಅಪರಾಧಗಳು cognizable and bailable ಅದೊಂದನ್ನು ಹೊರತುಪಡಿಸಿ, ಅಧ್ಯಾಯ-7 ಅಡಿಯಲ್ಲಿ ಬರುವಂತಹ ಕಲಂ. 90, 108, 113, 114 ಹಾಗೂ 123ರ ಪ್ರಕರಣಗಳ ಅಡಿಯಲ್ಲಿ ಬರುವಂತಹ ಎಲ್ಲಾ ಅಪರಾಧಗಳನ್ನು cognizable ಮತ್ತು ಜಾಮೀನು ರಹಿತ ಅಪರಾಧಗಳು ಎಂದು ಮಾಡುವುದರ ಮೂಲಕ ಅತ್ಯಂತ ಕಠಿಣವಾದಂತಹ ಒಂದು ಶಿಸ್ತನ್ನು ತರಬೇಕು. ಈ ಅಪರಾಧಗಳನ್ನು ಕಡಿಮೆ ಮಾಡಬೇಕೆಂದು ಪೊಲೀಸ್ ಇಲಾಖೆಗೆ ಅತ್ಯಂತ ಹೆಚ್ಚು ಶಕ್ತಿ ತುಂಬುವುದಕ್ಕಾಗಿ ಈ ವಿಧೇಯಕವನ್ನು ತಂದಿದ್ದಾರೆ. ಅಲ್ಲದೇ, ಇದು ಕುಟುಂಬಗಳ ಆರೋಗ್ಯಕರ ದೃಷ್ಟಿಯಿಂದ ಮತ್ತು ಸಮಾಜದ ಹಿತದೃಷ್ಟಿಯಿಂದ ಬಹಳ ಒಳ್ಳೆಯದಾಗಿದೆ. ಹಾಗಾಗಿ, ನಾವು ಈ ವಿಧೇಯಕವನ್ನು ಸ್ವಾಗತಿಸುತ್ತೇವೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನ್ಯ ಸಭಾಪತಿಯವರೇ, ಎರಡನೇ ಅಂಶದಲ್ಲಿ ಜೂಜಾಟದ ಹಾವಳಿಯನ್ನು ತಡೆಯುವುದರ ಬಗ್ಗೆ ಹೇಳಿದ್ದಾರೆ. ಮುಖ್ಯವಾಗಿ ಇತ್ತೀಚಿನ ದಿವಸಗಳಲ್ಲಿ cyber ಅಪರಾಧಗಳು ಹೆಚ್ಚಾಗುತ್ತಿವೆ. Technology age ನಲ್ಲಿ technology ನಿಂದ ಒಳ್ಳೆಯದಾಗುತ್ತದೆ. At the same time, ತಾವು ನಿನ್ನೆ ಮತ್ತು ಮೊನ್ನೆ ದಿವಸ ಮಕ್ಕಳ ಮೇಲೆ ನಡೆಯುವಂತಹ ದೌರ್ಜನ್ಯಗಳ ಬಗ್ಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಿರಿ. ಮಕ್ಕಳ ಮೇಲೆ ನಡೆಯುವಂತಹ, sexual abuse and video conference ಮಾಡಿ mark ಮಾಡಿ, ತೇಜೋವಧೆ ಮಾಡಿ ವ್ಯಕ್ತಿಯ dignity ಅನ್ನು ಕಳೆಯುವಂತಹ misuse ಆಗುತ್ತದೆ. ಆದ್ದರಿಂದ, ಈ ಜೂಜು ಯಾವ ಮೂಲಕ communication device ಯಾವುದೇ ಇದ್ದರೂ ಸಹ, ಅದನ್ನೆಲ್ಲಾ computer resource ಇರಬಹುದು, communication device ಇರಬಹುದು, process of gaming ಇರಬಹುದು, ಈ ಎಲ್ಲಾ menace ಅನ್ನು curb ಮಾಡಬೇಕೆಂದು internet, mobile ನಲ್ಲಿ app ಗಳಲ್ಲಿ ಬರುವಂಥದ್ದನ್ನು ಅವರಿಗೆ ಹೆಚ್ಚು ಶಕ್ತಿ ಮತ್ತು ನಿಖರವಾಗಿ ಶಾಸನ ಬೇಕಾಗುತ್ತದೆ. ಹಾಗಾಗಿ, ಈ ವಿಧೇಯಕವನ್ನು ತಂದಿದ್ದಾರೆ.

ಮಾನ್ಯ ಸಭಾಪತಿಯವರೇ, ಮೂರನೆಯದ್ದಾಗಿ, "Enhance the punishment for gaming for the orderly conduct of citizens." ಕೊನೆಯದಾಗಿ, ಸುವ್ಯವಸ್ಥಿತ ನಾಗರಿಕ ನಡವಳಿಕೆಗೆ ಈ ಜೂಜಾಟಕ್ಕೆ ಕೊಡುವಂತಹ ದಂಡನೆಯನ್ನು ಹೆಚ್ಚು ಮಾಡಬೇಕು. ಜೂಟಾದ ವ್ಯಸನದಿಂದ ಸಮಾಜವನ್ನು ಉಳಿಸಬೇಕು ಎನ್ನುವ ದೃಷ್ಟಿಯನ್ನು ಇಟ್ಟುಕೊಂಡು ಈ ವಿಧೇಯಕವನ್ನು ತಂದಿದ್ದಾರೆ. ಇದರ ಬಗ್ಗೆ ಅನೇಕ ಹಿರಿಯ ಸದಸ್ಯರು ಬಹಳ ಒಳ್ಳೆಯ ಮಾತುಗಳನ್ನು ಹೇಳಿದ್ದಾರೆ. ಇದರ ಬಗ್ಗೆ ಸುಮಾರು 2-3 ಗಂಟೆಗಳಷ್ಟು ಕಾಲ ಖಂಡಿತವಾಗಿಯೂ ಚರ್ಚೆ ಮಾಡುವಂತಹ ಆಸಕ್ತಿಯ ವಿಷಯವಾಗಿದೆ. ಆದರೆ, ಇವತ್ತು ಸಮಯದ ಅಭಾವ ಇದೆ. ಮಾನ್ಯ ಸಚಿವರಾದ ಜೆ.ಸಿ.ಮಾಧುಸ್ವಾಮಿಯವರು ಸಹ ಇದರ ಬಗ್ಗೆ ಹೆಚ್ಚು ಬೆಳಕು ಚೆಲ್ಲುವಂತಹವರಾಗಿದ್ದರು. ಆದರೆ, ಸಮಯದ ಅಭಾವದಿಂದ ಆಗಿಲ್ಲ. ಆದರೂ ಸಹ, ಇಷ್ಟು ಸಮಯವನ್ನಾದರೂ ಸಹ ಮಾಡಿಕೊಟ್ಟಿದ್ದೀರಿ. ಇದು ಮಹತ್ವದ ವಿಧೇಯಕ ಇದನ್ನು ಚರ್ಚೆ ಮಾಡಲೇಬೇಕಾಗಿದೆ.

ಮಾನ್ಯ ಸಭಾಪತಿಯವರೇ, ನನಗೆ ಬಹಳ ನೋವು ಆಗುವುದು ಏನೆಂದರೆ, ನಾನು ಒಬ್ಬ sports lover. ಇದೊಂದು royal sports. Horsepower, ಕುದುರೆ ಏನಿದೆ ಅದು symbol of force. ರೈತ ಬಳಸುವಂತಹ pump set ಗೆ horsepower ಎಂದು ಕರೆಯುತ್ತೇವೆ. ಹಾಗೆಯೇ, ಇತಿಹಾಸದಲ್ಲಿ ಕುದುರೆ ಎಲ್ಲಾ ರಣರಂಗದಲ್ಲಿಯೂ ತನ್ನದೇ ಆದಂತಹ ಕೊಡುಗೆಯನ್ನು ಕೊಟ್ಟಿದೆ. ಮತ್ತೆ breeding ನಲ್ಲಿ ಇರಬಹುದು, it's a great animal. At the same time,

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅದನ್ನು ಪಳಗಿಸಿ ಒಂದು royal sports. ಈ Tudors. ಇಂಗ್ಲೆಂಡ್‌ನ ಇತಿಹಾಸವನ್ನು ತೆಗೆದುಕೊಂಡರೆ, Henry VI ಎಂದು ಕಾಣುತ್ತದೆ. ಇವನು ಬಹಳ ಶೂರ. ಅವನು ಕೊನೆಯಲ್ಲಿ ಆಟವಾಡಬೇಕಾದರೆ, ಗಾಯಗೊಳ್ಳುತ್ತಾನೆ. ಆ ರೀತಿ ಗಾಯಗೊಂಡು ಅವನು ಕೊನೆಗೆ recovery ಆಗುವುದಿಲ್ಲ. ನಾನು ಒಪ್ಪುತ್ತೇನೆ. Sports ಅನ್ನು ಬೇರೆ ರೂಪದಲ್ಲಿ ನೋಡೋಣ. Definitely, ಮೈಸೂರಿನಲ್ಲಿ racecourse ಇದೆ. ಅದೇರೀತಿ ಬೆಂಗಳೂರಿನಲ್ಲಿದೆ. ಮತ್ತೆ ಇದಕ್ಕೆ ಒಂದು ಐತಿಹಾಸಿಕವಾದ, ಸಂಸ್ಕೃತಿಕವಾದ ಮತ್ತು ಪೌರಾಣಿಕವಾದಂತಹ ಇತಿಹಾಸ ಇದೆ. ವಿಷ್ಣುವಿನ ದಶವಾತರದಲ್ಲಿ ಆಯ್ಯವದನ ಕೂಡ ಒಂದು ರೂಪ. ಈ ಕುದುರೆಗೆ ಒಂದು ಸಂಪೂರ್ಣವಾದಂತಹ ನಂಬಿಕೆಯ ಮಹತ್ವ ಸಹ ಇದೆ. ಅದೇ ರೀತಿ ಮಾನ್ಯ ಸದಸ್ಯರಾದ ಎಂ.ನಾರಾಯಣಸ್ವಾಮಿಯವರು ಹೇಳಿದಂತೆ, abuse or match fixing ಮಾಡಿದರೆ, ಅದು ಒಂದು ಅಪರಾಧ. ಯಾವುದೇ ಕ್ರೀಡೆಯಲ್ಲಿ ಆಗಲಿ, cricket ನಲ್ಲಿ match fixing ಮಾಡಿದರೆ ಅದು ಸಹ ಅಪರಾಧ. ಮೋಸದಾಟ ಯಾವುದೇ ರೂಪದಲ್ಲಿದ್ದರೂ ಸಹ, ಅದು ಅಪರಾಧ. ಆದರೆ, ಇಲ್ಲಿ ಈ ಕ್ರೀಡೆಯನ್ನು misuse ಮಾಡಿ ಅದರ ಬಾಲದ ಹಿಂದೆ ಜೂಜು ಕಟ್ಟಿ ಇವತ್ತಿನ ದಿವಸ ಎಷ್ಟೋ ಜನರ ಬಡ ಕುಟುಂಬಗಳು ಬೀದಿಗೆ ಬಂದಿದ್ದಾರೆ ಎನ್ನುವುದು ಮಹಿಳೆಯರಾದ ನಮ್ಮನ್ನು ಕಾಡುವಂತಹ ವಿಷಯ. ಅದೇರೀತಿ ಆ ಜೂಜಿಗೆ addiction ಆಗುತ್ತಿದ್ದಾರೆ. ಮನುಷ್ಯ dignity ಇಲ್ಲದೇ ಬೀದಿಯಲ್ಲಿ ಬಿದ್ದು ಅಪರಾಧಗಳಲ್ಲಿ ತೊಡಗುತ್ತಿದ್ದಾರೆ. ಆದಕಾರಣ, ಈ ಕುದುರೆ ಜೂಜಾಟಾವನ್ನು ಅದರ sports ರೂಪವನ್ನು ಬೇರ್ಪಡಿಸಿ ಜೂಜಿನ ರೂಪವನ್ನು ಪಡೆಯುವಂತಹ, ಸಮಾಜಕ್ಕೆ ಒಂದು ದೊಡ್ಡ ಪಿಡುಗು ಆಗುವಂತಹ ಒಂದು ಅಂಶ ಏನಿದೆ, ಅದನ್ನು ತಡೆಯುವಂತಹ ದೃಷ್ಟಿಯಿಂದ ಈ ಕಾನೂನನ್ನು ಮಾಡಬೇಕು ಎನ್ನುವ ಸದುದ್ದೇಶದಿಂದ ಮಾನ್ಯ ಗೃಹ ಸಚಿವರು ತಂದಿದ್ದಾರೆ, ಇದನ್ನು ನಾವು ತುಂಬು ಹೃದಯದಿಂದ ಶ್ಲಾಘಿಸುತ್ತೇವೆ. ಇದರಿಂದ ಸಮಾಜಕ್ಕೆ ಒಳ್ಳೆಯದಾಗುತ್ತದೆ. ಪೊಲೀಸರಿಗೆ ಅನೇಕ ಸಂದರ್ಭಗಳಲ್ಲಿ ಏನು ಗೊಂದಲಗಳು ಆಗುತ್ತಿತ್ತು, ಇನ್ನಷ್ಟು clarity ಸಿಗುವುದರಿಂದ police force ಗೆ ಶಕ್ತಿ ಬರುತ್ತದೆ. ಕೆಲವು ಮಾನ್ಯ ಸದಸ್ಯರು ಇದನ್ನು implement ಮಾಡುವವರು ಯಾರು ಎನ್ನುವಂತಹ ವಿಷಯವನ್ನು ಹೇಳಿದರು. ಉತ್ತಮ ಕಾನೂನುಗಳನ್ನು ಮಾಡುವಂಥದ್ದು ನಮ್ಮ ಇಲ್ಲಿನ ಪ್ರಮುಖ ಜವಾಬ್ದಾರಿ. law makers. ನಾವು ಒಳ್ಳೆಯ ಕಾನೂನುಗಳನ್ನು ಮಾಡಿಕೊಟ್ಟರೆ, ಖಂಡಿತವಾಗಿ ಪೊಲೀಸ್ ಇಲಾಖೆ ದಕ್ಷತೆಯಿಂದ ಕೆಲಸ ಮಾಡುತ್ತಾರೆ. Training ಕೊಡುತ್ತದೆ. ಅದನ್ನು ತಡೆಯುತ್ತದೆ. ಇವತ್ತಿನ ದಿವಸ terrorism ಒಂದು ದೊಡ್ಡ ಸಮಸ್ಯೆಯಾಗಿದೆ. Internet ಗಳಲ್ಲಿ ಯಾವ ರೀತಿ ಮಾಡುತ್ತಾರೆಂದು ತಮ್ಮಗೆಲ್ಲ ಗೊತ್ತಿದೆ. ಅದಕ್ಕೆ ಇವುಗಳನ್ನು ತಡೆಯಬೇಕಾದರೆ, ಪೊಲೀಸ್ ಇಲಾಖೆಯನ್ನು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬಲಪಪಡಿಸಬೇಕಾಗಿದೆ. ಆದ್ದರಿಂದ, ಈ ವಿಧೇಯಕ ಪೂರಕವಾಗಿರುತ್ತದೆ ಎಂದು ನಾನು ಮತ್ತೊಮ್ಮೆ ಹೇಳಿ ಇದನ್ನು ಸಮರ್ಥಿಸುತ್ತೇನೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇದು ಮಾತಿನ ಕೌಶಲ್ಯವನ್ನು ಪ್ರದರ್ಶನ ಮಾಡುವಂತಹ ಸಂದರ್ಭ ಅಲ್ಲ. ನಾವು online gambling and betting ಅನ್ನು ವಿರೋಧ ಮಾಡುತ್ತಿಲ್ಲ. ಈ ಕಾಯಿದೆಯಲ್ಲಿ be practical. ಪುಟ ಸಂಖ್ಯೆ 5ರ ಕ್ರಮ ಸಂಖ್ಯೆ 9 ರಲ್ಲಿ ನಮೂದಿಸಿರುವ 176ನೇ ಪ್ರಕರಣದ ತಿದ್ದುಪಡಿಯನ್ನು ಕೈಬಿಡಬೇಕಾಗುತ್ತದೆ. ಅದನ್ನು ಏಕೆ ಕೈಬಿಡಬೇಕಾಗುತ್ತದೆ ಎಂದರೆ, ಈ ವಿಚಾರದಲ್ಲಿ Supreme Court direction ಇದೆ. ಸುಮಾರು 5-6 ರಾಜ್ಯಗಳ High Court ತೀರ್ಮಾನಗಳಿವೆ. Because this is fantasy sports. It is a skill of sports, it is not a gambling, it is not a betting game. ಅದೊಂದು ಬಿಟ್ಟರೆ, ಮತ್ತೆ ಯಾರು PIL ಹೋಗುವುದಿಲ್ಲ. ಆಗ ಈ ಬಿಲ್ಲು ಉಳಿದುಕೊಳ್ಳುತ್ತದೆ. ನಮ್ಮ ಪಕ್ಕದ ರಾಜ್ಯ ತಮಿಳುನಾಡಿನಲ್ಲಿ ಇದೇ ರೀತಿಯ ಬಿಲ್ಲನ್ನು ಪಾಸು ಮಾಡಿದರು. ನಂತರ ಅದನ್ನು High Court squash ಮಾಡಿತ್ತು. ಯಾವುದು betting and gambling ಅಲ್ಲ, ಯಾವುದು intelligence and skill ಮೇಲೆ ನಡೆಯುತ್ತದೆ, ಅಂತಹ ಒಂದು fantasy sports, ಇದೊಂದು ವಿಚಾರವನ್ನು ಬಿಡಿ. 15ನೇ ಪುಟದಲ್ಲಿರುವ ಕಲಂ 176 ಅನ್ನು ಉಳಿಸಿಕೊಳ್ಳಬೇಕಾಗುತ್ತದೆ. ಇಲ್ಲಿ ಮಾಡಿರುವಂಥದ್ದನ್ನು ಕೈಬಿಡಬೇಕಾಗುತ್ತದೆ. ಅದು ಒಂದನ್ನು ಕೈಬಿಟ್ಟರೆ, the entire bill is good. ಅದು ಉಳಿಯುತ್ತದೆ. ಉಳಿಯುವ ದಿಶೆಯಲ್ಲಿ ಹೆಜ್ಜೆಯನ್ನು ಇಡಬೇಕು. ಅದು ಒಂದನ್ನು ಬಿಟ್ಟು ಉಳಿದಿದ್ದು ಎಲ್ಲವನ್ನು ಅಂಗೀಕರಿಸುತ್ತೇವೆ. ನಮಸ್ಕಾರ.

**ಶ್ರೀ ಯು.ಬಿ.ವೆಂಕಟೇಶ್ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಕೊಟ್ಟಿದಕ್ಕಾಗಿ ಧನ್ಯವಾದಗಳು. ಮಾನ್ಯ ಗೃಹ ಸಚಿವರು ಕರ್ನಾಟಕ ಪೊಲೀಸು (ತಿದ್ದುಪಡಿ) ವಿಧೇಯಕ, 2021 ಅನ್ನು ತಂದಿದ್ದಾರೆ. ಇದು ಸರಿ ಇಲ್ಲ. ಏಕೆಂದರೆ, ನಮ್ಮ ರಾಜ್ಯಕ್ಕೆ *"State Legislature has the power to legislate on betting and gambling under entry 34 of list II of the 7th schedule." "State Legislature has no power to regulate or private games of skill and in particular online games of skill which fall within the ambit of entry 31 of list I of the 7th schedule of the Constitution."* ಇವರಿಗೆ ಇದನ್ನು ಬ್ಯಾನ್ ಮಾಡುವಂತಹ ಅಧಿಕಾರ ಇಲ್ಲ. ಬೆಂಗಳೂರು ನಗರದಲ್ಲಿ ಸುಮಾರು 150 app company ಗಳಿವೆ. ಅವುಗಳಲ್ಲಿ ಸುಮಾರು 15 ಸಾವಿರ ಜನರು ಕೆಲಸ ಮಾಡುತ್ತಿದ್ದಾರೆ. ಈಗ ಇದನ್ನು ಬ್ಯಾನ್ ಮಾಡಿದರೆ, ಆ ಕೆಲಸಗಾರರು ಇಲ್ಲಿ ಬಿಟ್ಟು ಪಕ್ಕದ ರಾಜ್ಯಕ್ಕೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೋಗುತ್ತಾರೆ. ಇದನ್ನು ಬ್ಯಾನ್ ಮಾಡಿದ ತಕ್ಷಣ ಅವರು ನ್ಯಾಯಾಲಯಕ್ಕೆ ಹೋಗುತ್ತಾರೆ. ಇದು ಬೇರೆ ಕಡೆ ನ್ಯಾಯಾಲಯಗಳಲ್ಲಿ struck down ಆಗಿದೆ. Similar ಇಲ್ಲಿ ಆಗಿದೆ. ನಮ್ಮ ರಾಜ್ಯದಲ್ಲಿ ಸುಮಾರು 15 ಸಾವಿರ ಜನ ಇಲ್ಲಿ ಕೆಲಸ ಮಾಡುತ್ತಿದ್ದಾರೆ. ಇದನ್ನು ಬ್ಯಾನ್ ಮಾಡಿದರೆ, ಅವರು ನಿರುದ್ಯೋಗಿಗಳಾಗುತ್ತಾರೆ. ಸರ್ಕಾರ ತರುವಂತಹ ಯೋಜನೆಗಳಿಂದ ಜನರಿಗೆ ಅನುಕೂಲವಾಗಬೇಕು, ಇಲ್ಲವೆಂದರೆ, ಅವರ ಕೆಲಸ ಕಾರ್ಯಗಳು ಹೋಗುತ್ತವೆ. ಹಾಗಾಗಿ, ಇದನ್ನು ತರಬಾರದೆಂದು ನನ್ನ ಕೋರಿಕೆ.

ಮಾನ್ಯ ಸಭಾಪತಿಯವರೇ, ಮಾನ್ಯ ಪ್ರಧಾನ ಮಂತ್ರಿಯವರು ಸಹ skill ಇರಬೇಕೆಂದು ಹೇಳಿದ್ದಾರೆಂದು ನಮ್ಮ ಅನೇಕ ಮಾನ್ಯ ಸದಸ್ಯರು ಹೇಳಿದರು. ಇದರಿಂದ ಸರ್ಕಾರಕ್ಕೆ ಸುಮಾರು 15 ಸಾವಿರ ಕೋಟಿ revenue ಇದೆ. ಈಗ ಮಾನ್ಯ ಸದಸ್ಯರು race club ಬಗ್ಗೆ ಹೇಳಿದ್ದಾರೆ. ಈ race club ಗೆ ಮೈಸೂರು ಮಹಾರಾಜರು ಜಾಗವನ್ನು ಕೊಟ್ಟಿದ್ದಾರೆ. ಮೈಸೂರು ಮಹಾರಾಜರು ಹೋದಮೇಲೆ, ಸರ್ಕಾರ ಆ ಜಾಗ ಲೋಕೋಪಯೋಗಿಯದ್ದು ಎಂದು ಒಂದು ಕೇಸ್ ನಡೆಯುತ್ತಿದೆ. ಸರ್ಕಾರದ್ದು ಒಂದು ರೂಪಾಯಿ ಇಲ್ಲದೇ, ವರ್ಷಕ್ಕೆ ಸಾವಿರಾರು ಕೋಟಿ ರೂಪಾಯಿಗಳ ಆದಾಯ ಸರ್ಕಾರಕ್ಕೆ ಬರುತ್ತಿದೆ. ನಮ್ಮ race club ನಲ್ಲಿ 1200 ಕುದುರೆಗಳು ಇವೆ. ಒಂದು ಕುದುರೆಗೆ 5 ಜನರು ಕೆಲಸ ಮಾಡುತ್ತಾರೆ. ಅಲ್ಲಿ ಸುಮಾರು 6 ರಿಂದ 7 ಸಾವಿರ ಜನರು ಕೆಲಸ ಮಾಡಿ ಜೀವನ ಮಾಡುತ್ತಿದ್ದಾರೆ. ಆ ಮೇಲೆ ಯಾರೋ ಹೇಳಿದರು, ಮುಖ್ಯ ಮಂತ್ರಿಗಳು ಬಂದವರೆಲ್ಲರೂ ಸೋತು ಹೋದರೆಂದು ಹೇಳಿದರು. ಅದು ಆಗಿದ್ದು ನಿಜ. ಆ ಮೇಲೆ ತಪ್ಪು ಒಪ್ಪಿಕೊಂಡು ಅಲ್ಲಿಗೆ ಪೂಜೆ ಮಾಡಿದ ಮೇಲೆ ಮತ್ತೆ ಮುಖ್ಯಮಂತ್ರಿಗಳಾಗಿದ್ದಾರೆ. ನಾನು ಅವರ ಹೆಸರನ್ನು ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಬ್ಯಾನ್ ಮಾಡಿ. ಆದರೆ, ಕಾನೂನ್ಮಕವಾಗಿ ಮಾಡಿ. ಈಗ ಉದಾಹರಣೆಗೆ ನಾನು ಒಂದು online game ಗೆ addict ಆಗಿದ್ದೇನೆ. ಇದನ್ನು ಬ್ಯಾನ್ ಮಾಡಿದರೆ, ಆಗ ನಾನು ಇನ್ನೊಂದು ಯಾವುದೋ crime ಮಾಡುವುದಕ್ಕೆ ಹೋಗುತ್ತೇನೆ. What you want and why you want me to do that. ಇದಕ್ಕೆ ಬೇರೆ ಏನು restriction ಹಾಕುತ್ತೀರಿ, ಅದನ್ನು ಹಾಕಿ. ನನ್ನ ಬುದ್ಧಿಯಿಂದ skill game ಆಡುವಂತಹದ್ದು. Fantasy ಎಂದರೆ, ಕಲ್ಪನಾ ಶಕ್ತಿಯಿಂದ ಆಡುವಂತಹದ್ದು. ನಾನು ನನ್ನ ಬುದ್ಧಿವಂತಿಕೆಯಿಂದ ಆಡುವಂತಹದ್ದು ಗೇಮ್. ಅವರು ಹೇಳುವಂತಹದ್ದನ್ನು ಆಡಿದರೆ, ನಾನು ಸೋತು ಹೋಗುತ್ತೇನೆ. ಸರ್ಕಾರ smoking ಬಿಟ್ಟಿದೆ. ಮತ್ತೆ smoking is injurious to health ಎಂದು ಹೇಳುತ್ತಾರೆ. ಕೋವಿಡ್-19 ಬಂದು ಲಾಕ್‌ಡೌನ್ ಆದರೂ ಸಹ, alcohol ಅಂಗಡಿಗಳನ್ನು ತೆಗೆಯುತ್ತಾರೆ. Alcohol is dangerous to health ಎಂದು ಹೇಳುತ್ತಾರೆ. ಅದೇ ರೀತಿ ಇದಕ್ಕೂ ಸಹ, ಒಂದು advertisement ಹಾಕಿ. This is injurious to your wealth. You put

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

whatever you want. ಇಲ್ಲವೆಂದರೆ, ಏನಾದರೊಂದು scheme ಹಾಕಿ. ಸುಮಾರು 10-15 ಸಾವಿರ ಜನರು ಕೆಲಸ ಮಾಡುತ್ತಿದ್ದಾರೆ. ಬೆಂಗಳೂರಿನಲ್ಲಿ ನೂರಾರು ಕಂಪನಿಗಳಿವೆ. ಬೆಂಗಳೂರು ಒಂದು IT Hub. ಈ ಪ್ರಪಂಚದಲ್ಲಿ ಎಲ್ಲಾ ತರಹದ್ದಕ್ಕೂ. ಅದರಲ್ಲಿ ಇದು ಒಂದು gaming. ಆದ್ದರಿಂದ, ಸರ್ಕಾರ ಇದನ್ನು ಬ್ಯಾನ್ ಮಾಡುವುದರಿಂದ ಏನು ಅನುಕೂಲವಾಗುವುದಿಲ್ಲ. ಇಲ್ಲವೆಂದರೆ, ಅವರು ನ್ಯಾಯಾಲಯಕ್ಕೆ ಹೋಗಿ ತಡೆಯಾಜ್ಞೆ ತೆಗೆದುಕೊಂಡು ಬರುತ್ತಾರೆ.

**(ಮುಂದು.,) .**

**(989) 23-09-2021 (10.20) ಎಂವಿ-ವಿಕೆ**

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಯು.ಬಿ.ವೆಂಕಟೇಶ್ (ಮುಂದು...):-**

ಈಗ ಅದು ಬೇರೆ ರಾಜ್ಯಗಳಲ್ಲಿ struck down ಆಗಿದ್ದು, ನಮ್ಮ ರಾಜ್ಯದಲ್ಲಿ ಆಗುವುದಿಲ್ಲ ಎನ್ನುವುದು ಏನಿದೆ? ಅದಕ್ಕೆ ಅವರು ಇನ್ನು ಎರಡು ದಿನಗಳ ಕಾಲ wait ಮಾಡಿ ನೋಡಲಿ. First of all, you have no right to ban. You can make some amendments. But you cannot ban the game. ಆದುದರಿಂದ, ದಯವಿಟ್ಟು ಇದನ್ನು ಮತ್ತೊಮ್ಮೆ ಪರಿಶೀಲನೆ ಮಾಡಿ ತೆಗೆಯಬೇಕೆಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ (ವಿಧಾನ ಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೆ, ಮಾನ್ಯ ಗೃಹ ಸಚಿವರು ಮತ್ತು ಮಾನ್ಯ ಕಾನೂನು ಸಚಿವರು ಈ ರಾಜ್ಯದ ಬಡವರ ಮೇಲೆ ನಡೆಯುವಂತಹ ಅನ್ಯಾಯವನ್ನು ತಡೆಯಬೇಕು, ಇದರಿಂದ ಸಮಾಜಕ್ಕೆ ಒಂದು ಒಳ್ಳೆಯ ಸಂದೇಶ ಕೊಡಬೇಕು ಎನ್ನುವಂತಹ ಒಂದು ಸಣ್ಣ ಪ್ರಯತ್ನ ಮಾಡಿದ್ದಾರೆ. ಅದಕ್ಕೆ ನಾನು ಈ ವಿಧೇಯಕವನ್ನು ಬೆಂಬಲಿಸುತ್ತೇನೆ.

ಆದರೆ, ಇವತ್ತಿನ ದಿನಗಳಲ್ಲಿ ಇಂತಹ ಪರಿಸ್ಥಿತಿಯಲ್ಲಿ ಪೊಲೀಸ್ ಅಧಿಕಾರಿಗಳು ಸ್ವತಂತ್ರವಾಗಿ ಕಾರ್ಯನಿರ್ವಹಿಸುವುದಕ್ಕೆ ಬಿಟ್ಟಿದ್ದೇವೆಯೆ ಎಂಬ ಪ್ರಶ್ನೆ ಉದ್ಭವವಾಗುತ್ತದೆ. ಮಾನ್ಯ ಕಾನೂನು ಸಚಿವರು ಇರುವುದರಿಂದ ಇದನ್ನು ಅವರ ಗಮನಕ್ಕೆ ತರುತ್ತಿದ್ದೇನೆ. ನೋಡಿ ನಾವೆಲ್ಲರೂ ರಾಜಕಾರಣಿಗಳು. ನಾನು ಯಾರ ಹೆಸರನ್ನು ಹೇಳುವುದಿಲ್ಲ. ಪ್ರತಿಯೊಂದು ಗ್ರಾಮೀಣ ಪ್ರದೇಶದಲ್ಲೂ ಜೂಜಾಟ ಆಡುವಂತಹ ಜನರ ಹಿಂದೆ ನಾವು ರಾಜಕಾರಣಿಗಳು ಇದ್ದೇವೆ. ಅದು ಎಲ್ಲಾ ಪಕ್ಷದವರು ಇರಬಹುದು. ಇಲ್ಲವೆಂದು

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಹೇಳುವುದಕ್ಕೆ ಆಗುವುದಿಲ್ಲ. ಪೊಲೀಸ್ ಅಧಿಕಾರಿಗಳಾದ ಸರ್ಕಲ್ ಇನ್ಸ್‌ಪೆಕ್ಟರ್ ಅಥವಾ ಸಬ್ ಇನ್ಸ್‌ಪೆಕ್ಟರ್ ಅವರಿಗೆ ಮಾಹಿತಿ ಬಂದ ತಕ್ಷಣ ಅಲ್ಲಿಗೆ ಹೋಗಿ raid ಮಾಡಿ, ಅಲ್ಲಿರುವವರನ್ನು ಅರೆಸ್ಟ್ ಮಾಡುತ್ತಾರೆ. ಅವರನ್ನು ಅರೆಸ್ಟ್ ಮಾಡಿ, ಅವರು ಇನ್ನು ಪೊಲೀಸ್ ಸ್ಟೇಷನ್‌ಗೆ ಬಂದಿರುವುದಿಲ್ಲ. ಆ ಅಧಿಕಾರಿಗೆ ಫೋನ್‌ಗಳು ಬರುವುದಕ್ಕೆ ಪ್ರಾರಂಭವಾಗುತ್ತದೆ. ಅಂದರೆ, ಅರೆಸ್ಟ್ ಆಗಿರುವವನು ನಮ್ಮ ಹುಡುಗ, ಅವನು ಏನೋ ತಪ್ಪು ಮಾಡಿದ್ದಾನೆ. ಇದೊಂದು ಬಾರಿ ಅವನನ್ನು ಬಿಟ್ಟು ಬಿಡಿ ಎನ್ನುತ್ತಾರೆ. ಆ ಪೊಲೀಸ್ ಅಧಿಕಾರಿ, ಅರೆಸ್ಟ್ ಮಾಡಿರುವವರನ್ನು ಬಿಡದೇ ಹೋದರೆ, ಅವನಿಗೆ ಏನು ಹೇಳುತ್ತಾರೆಂದರೆ, ಈ ರಾಜ್ಯದ ಮುಖ್ಯಮಂತ್ರಿ ನನಗೆ ಬಹಳ ಬೇಕಾಗಿರುವಂತಹವರು. ಈ ರಾಜ್ಯದ ಗೃಹ ಮಂತ್ರಿ ನನ್ನ ಖಾಸಾ ಗೆಳೆಯ. ನೀನು ಈ ವ್ಯಕ್ತಿಯನ್ನು ಬಿಡದೇ ಹೋದರೆ, ನಿನ್ನನ್ನು ಎಲ್ಲಿಗೆ ಕಳುಹಿಸಬೇಕೆಂದು ನನಗೆ ಗೊತ್ತು ಎಂದು ಹೇಳುತ್ತಾರೆ. ಅದು ಈ ರೀತಿ ಆಗಬಾರದು ಎಂದು ಹಿಂದಿನ ದಿನಗಳಲ್ಲಿ ಒಬ್ಬ ಅಧಿಕಾರಿ ಎರಡು ವರ್ಷ ವರ್ಗಾವಣೆ ಆಗುತ್ತಿರಲಿಲ್ಲ. ಈಗ ಎಲ್ಲಾ ಶಾಸಕರ ಒತ್ತಡಕ್ಕೆ ಅದು ಒಂದು ವರ್ಷಕ್ಕೆ ಬಂದಿದೆ. ಈಗಿನ ಗೃಹ ಸಚಿವರು ಇನ್ನಷ್ಟು ಒತ್ತಡ ಹಾಕಿ ಆ relaxation ಅನ್ನು ಮಾಡಿಬಿಟ್ಟರೆ, ಇಂತಹ ಕೆಲಸವನ್ನು ಮಾಡುವುದಕ್ಕೆ ಪೊಲೀಸ್ ಅಧಿಕಾರಿಗಳಿಗೆ ಸಾಧ್ಯವೇ ಆಗುವುದಿಲ್ಲ. ಅವರು ತಂದಿರುವಂತಹ ಉದ್ದೇಶ ಸರಿ ಇರಬಹುದು. ಆದರೆ, ಇದನ್ನು ಅನುಷ್ಠಾನ ಮಾಡುವಂತಹ ವಾತಾವರಣ ಆಗಬೇಕು ಎನ್ನುವುದು ಒಂದು ಭಾಗ.

ನಾನು ಗ್ರಾಮೀಣ ಪ್ರದೇಶದಿಂದ ಬಂದಿರುವಂತಹವನು, ನಾವು ಪೊಲೀಸ್ ಅಧಿಕಾರಿಗಳ ಮೇಲೆ ಯಾವ್ಯಾವ ರೀತಿಯ ಒತ್ತಡಗಳನ್ನು ಹಾಕುತ್ತೇವೆ ಮತ್ತು ಹಾಕಿದ್ದೇವೆಂದರೆ, ನಾನು ಈಗ ಬೇರೆಯವರ ಹೆಸರು ಹೇಳುವುದು ಬೇಡ. ಒಂದು ಘಟನೆ ನಡೆದ ಆ ಸಂದರ್ಭದಲ್ಲಿ ನಾನು ಶಾಸಕನಾಗಿರಲಿಲ್ಲ. ಒಂದು ಹಳ್ಳಿಯಲ್ಲಿ ಊರಿನ ಹೊರಗಡೆ ಒಂದು ಕನ್ನಡ ಶಾಲೆಯಲ್ಲಿ ಒಬ್ಬ ಬಾಬಾ ಕುಡಿದು ಮಲಗಿದ್ದ. ಅವನು ಹೆಚ್ಚು ಕುಡಿದು ಸತ್ತು ಬಿಟ್ಟಿದ್ದ. ಬೆಳಗ್ಗೆ ಗ್ರಾಮದಲ್ಲಿರುವಂತಹ ಜನರು ಪಾಪ ಅವನು ಸತ್ತು ಹೋಗಿದ್ದಾನೆಂದು, ಅಂತ್ಯಕ್ರಿಯೆಗೆ ಹೋದರು, ಅವರು ಅಂತ್ಯಕ್ರಿಯೆಗೆ ಹೋದರೆ, ಅಲ್ಲಿ ಏನು ಮಾಡಿದರು ಎಂದರೆ, ಇವನು ಕುಡಿದು ಸತ್ತಿದ್ದಾನೆ, ಅವನನ್ನು ಸುಟ್ಟು ಹಾಕೋಣವೆಂದರು. ಕಟ್ಟಿಗೆ ತರಿಸಿ ಹೆಣ ಇಟ್ಟು ಅದನ್ನು ಸುಡುವುದಕ್ಕೆ ಶುರು ಮಾಡಿದರು. ಆ ದೇಹ ಇನ್ನು ಪೂರ್ತಿ ಸುಟ್ಟಿರಲಿಲ್ಲ. ಜೀಪ್ ತೆಗೆದುಕೊಂಡು ಪೊಲೀಸ್ ಇನ್ಸ್‌ಪೆಕ್ಟರ್ ಬಂದರು. ಇದನ್ನು ಸುಡುವುದರಲ್ಲಿ ಯಾರ್‍ಯಾರು ಭಾಗಿಯಾಗಿದ್ದೀರಿ ಎಂದು ಕೇಳಿದರು. ನಾನು ಕೇವಲ ಭಾಷಣ ಮಾಡುತ್ತಿಲ್ಲ. ಆದಂತಹ ಸತ್ಯ ಸಂಗತಿಯನ್ನು ಹೇಳುತ್ತಿದ್ದೇನೆ. ಸುಮಾರು ಏಳು ಜನರ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

“ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಹೆಸರು ಬರೆದುಕೊಂಡು ಅವರ ಮನೆಗಳಿಗೆ ಹೋದರು. ಅವರ ಕಚೇರಿಗಳಿಗೆ ಹೋದರು. ಇನ್ಸ್‌ಪೆಕ್ಟರ್‌ರವರು ರಾತ್ರಿ ಒಂದು ಗಂಟೆಗೆ ಅವರ ಮನೆಗಳಿಗೆ ಹೋಗುತ್ತಾರೆ. ಆ ಸಮಯದಲ್ಲಿ ಪಾಪ ಎಲ್ಲರೂ ಮನೆಯಲ್ಲಿ ಬಟ್ಟೆ ಬಿಚ್ಚಿಕೊಂಡು ಮಲಗಿರುತ್ತಾರೆ. ಅಂತಹ ಸ್ಥಿತಿಯಲ್ಲಿ ಅವರನ್ನು ಹಿಡಿದುಕೊಂಡು ಪೊಲೀಸ್ ಸ್ಟೇಷನ್‌ಗೆ ಕರೆದುಕೊಂಡು ಹೋಗುತ್ತಾರೆ. ಬೆಳಗ್ಗೆ ಅವರಿಗೆ ಸೆಕ್ಷನ್ 302ರ ಅಡಿ ಪ್ರಕರಣ ದಾಖಲಾಗಿರುತ್ತದೆ. ನಾನು ಬೆಳಗ್ಗೆ ಅಲ್ಲಿಗೆ ಹೋಗಿ, ಪೊಲೀಸ್ ಸ್ಟೇಷನ್ ಮುಂದೆ ಪ್ರತಿಭಟನೆ ಮಾಡಿದೆ. ನಾನು ಎಸ್.ಪಿ., ಕಚೇರಿಗೆ ಹೋಗುವಾಗ ಅನೇಕ ಶಾಸಕರು ಮತ್ತು ಲೋಕಸಭಾ ಸದಸ್ಯರನ್ನು ಸಹ ಕರೆದುಕೊಂಡು ಹೋಗಿ, ಎಸ್.ಪಿ.,ಯವರ ಕಚೇರಿಯ ಮುಂದೆ ಧರಣಿಗೆ ಕುಳಿತುಕೊಂಡೆ. ಎಸ್.ಪಿ.,ಯವರು ಇನ್ಸ್‌ಪೆಕ್ಟರ್‌ಗೆ ಕೇಳುತ್ತಾರೆ ಇದು ಸತ್ಯವೆ ಎಂದು. ಅದಕ್ಕೆ ಅವನು ಹೇಳುತ್ತಾನೆ, ನನಗೆ ಒತ್ತಡ ಬಂತು ಅದಕ್ಕೆ ಮಾಡಿದೆ ಎಂದು ಹೇಳುತ್ತಾನೆ. ಅಂದರೆ, ಇವತ್ತು ರಾಜಕೀಯ ಪ್ರಭಾವ ಮತ್ತು ಒತ್ತಡದಿಂದ ಅಂತ್ಯಕ್ರಿಯೆಗೆ ಹೋದವರ ಮೇಲೆಯೇ ಸೆಕ್ಷನ್ 302ರ ಅಡಿಯಲ್ಲಿ ಪ್ರಕರಣ ದಾಖಲಾಗುತ್ತದೆ. ಇದನ್ನು ಒಂದು ಒಳ್ಳೆಯ ಉದ್ದೇಶಕ್ಕೆ ತಂದಿರಬಹುದು. ಆದರೆ, ಪೊಲೀಸ್‌ರು ಸ್ವತಂತ್ರವಾಗಿ ಕಾರ್ಯನಿರ್ವಹಿಸುವಂತಹ ವಾತಾವರಣ ನಿರ್ಮಾಣ ಮಾಡಿದಾಗ ಮಾತ್ರ, ಈಗ ತಂದಿರತಕ್ಕಂಥ ಕಾನೂನು ಬಹುತೇಕ ಸಾರ್ಥಕತೆಯನ್ನು ಪಡೆದುಕೊಳ್ಳುತ್ತದೆ ಎಂಬ ಅಭಿಪ್ರಾಯವನ್ನು ಹೇಳುವುದಕ್ಕೆ ಬಯಸಿ, ತಮಗೆ ವಂದಿಸುತ್ತೇನೆ.

**ಸಭಾಪತಿಯವರು:-** ಮಾನ್ಯ ಗೃಹ ಸಚಿವರೆ, ಇನ್ನು ಎಂಟು ಜನ ಸದಸ್ಯರು ಮಾತನಾಡುವುದು ಇದೆ. ತಾವು ಆರಾಮವಾಗಿ ಕುಳಿತುಕೊಳ್ಳಿ.

**ಶ್ರೀ ಎನ್.ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೆ, ನಾನು ಹೆಚ್ಚಿಗೆ ಮಾತನಾಡುವುದಿಲ್ಲ. ಆದರೆ, ಇದು ಒಂದು ಒಳ್ಳೆಯ ವಿಧೇಯಕ. ಇದರಿಂದ ಉದ್ಯೋಗ ಸಿಗುತ್ತದೆ ಎಂದು ಮಾನ್ಯ ಯು.ಬಿ.ವೆಂಕಟೇಶ್‌ರವರು ಹೇಳಿದರು. ಇದರ ಒಳಗೆ ಒಳ್ಳೆಯ ಸಂಗತಿಗಳು ಸಹ ಇವೆ. ಆದರೆ, ಲಕ್ಷಾಂತರ ಜನರು ಜೂಜಾಟದಲ್ಲಿ ತಮ್ಮ ಜೀವನ ಮತ್ತು ಪ್ರಾಣವನ್ನು ಕಳೆದುಕೊಳ್ಳುತ್ತಿದ್ದಾರೆ. ಅದಕ್ಕೆ ನಾನು ಏನನ್ನು ಹೇಳುತ್ತೇನೆಂದರೆ, ಆ ರೀತಿಯ ಒಂದು ಒಳ್ಳೆಯ ವಾತಾವರಣವನ್ನು ಸೃಷ್ಠಿ ಮಾಡುವಂಥದ್ದಕ್ಕೆ ಪೊಲೀಸರ ಮತ್ತು ರಾಜಕಾರಣಿಗಳ ಮತ್ತು ಸಮಾಜದ ಜನರ ಸಹಾಯ ಸಹ ಬೇಕಾಗಿದೆ. ಈ ವಿಧೇಯಕಕ್ಕೆ ನನ್ನ ಸಂಪೂರ್ಣ ಬೆಂಬಲವಿದೆ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಇದರಲ್ಲಿ ಇನ್ನು ಒಂದನ್ನು ಸೇರಿಸಬೇಕು. ಅಂದರೆ, ಮಂಗಳೂರು ಮತ್ತು ಉಡುಪಿ ಭಾಗಗಳಲ್ಲಿ ಕೋಳಿ ಪಂದ್ಯಗಳು ನಡೆಯುತ್ತವೆ. ಅಲ್ಲೂ ಕೂಡ ಲಕ್ಷಾಂತರ ರೂಪಾಯಿಗಳ ಬೆಟ್ ಅನ್ನು ಕಟ್ಟುತ್ತಾರೆ. ಅದನ್ನು ಸಹ ಈ ವಿಧೇಯಕದಲ್ಲಿ ಸೇರಿಸಬೇಕು.

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಶ್ರೀ ಪಿ.ಆರ್.ರಮೇಶ್ (ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೆ, ನಾನು ಮಾತನಾಡುವುದಕ್ಕೆ ಹೆಚ್ಚಿನ ಸಮಯವನ್ನು ತೆಗೆದುಕೊಳ್ಳುವುದಿಲ್ಲ. ನಾನು ನೇರವಾಗಿ ಸೆಕ್ಷನ್ 176ಕ್ಕೆ ಬರುತ್ತೇನೆ. ಆ ಪ್ರೈಮರಿ ಸೆಕ್ಷನ್ *"176. Saving of games of skill:- For the removal of doubts it is hereby declared that the provisions of sections 79 and 80 shall not be applicable to the playing of any pure game of skill and to wagering by persons taking part in such game of skill."* ಎಂದು ಇದೆ. ಅದು skill ಎಂದು identify ಮಾಡುವುದು ಮತ್ತು ಅದನ್ನು distinguish ಮಾಡುವುಕ್ಕೆ ಅವರು ಯಾವ ರೀತಿಯ ಕ್ರಮವನ್ನು ಕೈಗೊಂಡಿದ್ದಾರೆ. ಈ ವಿಧೇಯಕದಲ್ಲಿ ವಿಪರೀತ ದಂಡವನ್ನು ವಿಧಿಸಿ, ಶಿಕ್ಷೆಯನ್ನು ಡಬಲ್ ಮಾಡಿದ್ದಾರೆ. ಅಂದರೆ, ಮೂರು ತಿಂಗಳು ಇರುವ ಶಿಕ್ಷೆಯನ್ನು ಆರು ತಿಂಗಳು ಮಾಡಿದ್ದಾರೆ. ಆರು ತಿಂಗಳು ಇರುವ ಶಿಕ್ಷೆಯನ್ನು ಒಂದು ವರ್ಷಕ್ಕೆ ಹೆಚ್ಚಿಗೆ ಮಾಡಿದ್ದಾರೆ. ಈ skill game ಮತ್ತು fantasy game ಗಳಲ್ಲಿ ಜೂಜಾಟ ಇಲ್ಲದೇ ಇರುವಂತಹ ಗೇಮ್ ಆಡಿದರೂ ಸಹ, ಅಂತಹ ಜನರ ಮೇಲೆ ನೇರವಾಗಿ ಪೊಲೀಸರ ಕಿರುಕುಳ ಜಾಸ್ತಿಯಾಗುತ್ತದೆ. ಇದರಿಂದ ನೀವು ಪಬ್ಲಿಕ್‌ಗೆ ಯಾವುದು fantasy skill game ಎಂದು ಹೇಳಿ, ಅದನ್ನು distinguish ಮಾಡಿ, ಅವರಿಗೆ ಸರಿಯಾದ ಮಾಹಿತಿ ಕೊಡುವಂತಹ ಕೆಲಸ ಮಾಡಬೇಕು. ಇದರ ಜೊತೆಗೆ ಇವತ್ತು ಏನು ಈ ಕಾಯ್ದೆ ಬಂದಿದೆ, ಇದು ಕೇವಲ ಕರ್ನಾಟಕಕ್ಕೆ ಮಾತ್ರವಲ್ಲ. ಇಡೀ ದೇಶಕ್ಕೆ ಈ ರೀತಿಯ ಕಾಯ್ದೆ ಬರಬೇಕು. ಈ ಕಾಯ್ದೆ ಇಡೀ ದೇಶಕ್ಕೆ ಬಂದಾಗ ಮಾತ್ರ, ಇದು ಸ್ವಲ್ಪಮಟ್ಟಿಗೆ ಪ್ರಯೋಜನವಾಗುತ್ತದೆ. ಈ ವಿಧೇಯಕದಲ್ಲಿ ಕರ್ನಾಟಕ ರಾಜ್ಯವೆಂದು ಇದೆ. ನಾಳೆಯ ದಿವಸ ಕರ್ನಾಟಕದಿಂದ ಎಲ್ಲರೂ ಸಹ ಆಂಧ್ರಪ್ರದೇಶ, ತಮಿಳುನಾಡು ಮತ್ತು ಮಹಾರಾಷ್ಟ್ರ ರಾಜ್ಯಗಳಿಗೆ ಈ ರೀತಿ ಅವರು ಹಂಚಿ ಹೋಗುತ್ತಾರೆ. ಇವತ್ತು ಪ್ರತಿಯೊಂದು ನಗರ it is a economical engines of this Nation. ಈ economical engines of Nation ಎನ್ನುವುದನ್ನು ನಮ್ಮ ಮಾನ್ಯ ಪ್ರಧಾನ ಮಂತ್ರಿಗಳಾದ ಶ್ರೀ ನರೇಂದ್ರ ಮೋದಿಯವರು ತಮ್ಮ 'ಮನ್ ಕೀ ಬಾತ್' ನಲ್ಲಿ ಹೇಳುತ್ತಾರೆ. ಅಂದರೆ, "A fantasy skill is also one of the recreations in the Cities" ಎಂದು. ಅವರು ಇದನ್ನು close ಮಾಡುತ್ತೇವೆ ಎನ್ನುವಂತಹ ರೀತಿಯಲ್ಲಿ ಹೋದಾಗ, it affects the migrants ಮತ್ತೆ ಬೇರೆ ಬೇರೆ ದೇಶದ ಜನರು ನಮ್ಮ ದೇಶಕ್ಕೆ ಬರುವಂತಹವರ ಮೇಲೆ ಸಾಕಷ್ಟು ಅನ್ವಯವಾಗುತ್ತದೆ. ನಾನು ಇದನ್ನು ಮಾಡಬೇಡಿ ಎಂದು ಹೇಳುವುದಿಲ್ಲ. ಆದರೆ, ನೀವು ಇದನ್ನೆಲ್ಲಾ ಸಮಗ್ರವಾಗಿ ಯೋಚನೆ ಮಾಡುವಂತಹ ದಿಟ್ಟಿನಲ್ಲಿ, ಈ ಕಾಯ್ದೆಯನ್ನು ಜನರಿಗೆ educate ಮಾಡಿ, ಇದು

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಜನರಿಗೆ ಕಿರುಕುಳ ಆಗದ ರೀತಿಯಲ್ಲಿ ನೋಡಿಕೊಂಡರೆ ಮಾತ್ರ, ಇದನ್ನು ಅನುಷ್ಠಾನ ಮಾಡಬಹುದು. ಇಲ್ಲವಾದರೆ, ಇದರಿಂದ ಬಹಳ ಕಿರುಕುಳವಾಗುತ್ತದೆ.

**(ಮುಂದು...**

(990) 23.09.2021 10.30 LL-BNS

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಹೆಚ್.ಎಂ. ರಮೇಶ್‌ಗೌಡ:-** ಮಾನ್ಯ ಸಭಾಪತಿಯವರೇ, ಸರ್ಕಾರ ಇವೊತ್ತಿನ ದಿವಸ ಕರ್ನಾಟಕ ಪೊಲೀಸು (ತಿದ್ದುಪಡಿ) ವಿಧೇಯಕ, 2021 ನ್ನು ತಂದಿದ್ದಾರೆ. ಅದರ ಬಗ್ಗೆ ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಹಾಗೂ ಮಾನ್ಯ ಗೃಹ ಮಂತ್ರಿಗಳು ಈಗಾಗಲೇ ಸಾಕಷ್ಟು ವಿವರಣೆ ನೀಡಿರುತ್ತಾರೆ. ಆದರೆ, ಈ ವಿಧೇಯಕದ ತಿದ್ದುಪಡಿಯಿಂದ ಸಮಾಜಕ್ಕೆ ಒಳ್ಳೆಯದಾಗಲಿ ಎಂದು ಏನು ತಂದಿದ್ದಾರೆ, ಇದರಲ್ಲಿ ಜನರಿಗೆ ಬಹಳ ತೊಂದರೆಯೇ ಆಗುತ್ತದೆ. ಏಕೆಂದರೆ, ಆಗಲೇ ಮಾನ್ಯ ಕಾನೂನು ಮಂತ್ರಿಗಳು ಮಾತನಾಡುತ್ತಾ, "ಕಂಪ್ಯೂಟರ್ seize ಮಾಡುತ್ತಾರೆ, ಮೊಬೈಲ್ seize ಮಾಡುತ್ತಾರೆ" ಎಂದು ಹೇಳಿದರು. ಆದರೆ, ಯಾರು ಜೂಜು ಆಡುತ್ತಿದ್ದಾರೆ ಅವರ ಮೊಬೈಲ್ ಹಾಗೂ ಕಂಪ್ಯೂಟರ್‌ಗಳನ್ನು seize ಮಾಡುವಂತಹ ಕೆಲಸವನ್ನು ಈಗಲೂ ಸಹ ಮಾಡುತ್ತಿದ್ದಾರೆ. ಅದಕ್ಕೆ ಇನ್ನೂ ಹೆಚ್ಚಿನ ಒಳ್ಳೆಯದಾಗಲಿ ಎಂದು ಈ ವಿಧೇಯಕಕ್ಕೆ ತಿದ್ದುಪಡಿ ತಂದಿರುತ್ತಾರೆ. ಅದರಂತೆ, ಈ ವಿಧೇಯಕದ ಮೇಲೆ ಈಗಾಗಲೇ ಸಾಕಷ್ಟು ಮಾನ್ಯ ಹಿರಿಯ ಸದಸ್ಯರು ಚರ್ಚೆ ಮಾಡಿದ್ದಾರೆ. ಇದರಲ್ಲಿ 1 ಲಕ್ಷ ರೂಪಾಯಿ ದಂಡ ಇರಬಹುದು ಮತ್ತು "ಜೂಜಾಟ" ಲಾಟರಿಯನ್ನು ಒಳಗೊಳ್ಳುವುದಿಲ್ಲ. ಆದರೆ, ಕುದುರೆ ಪಂದ್ಯದಲ್ಲಿ ಪಣ ಕಟ್ಟುವುದು ಎಂದು ಹೇಳಿರುತ್ತಾರೆ. ಆನ್‌ಲೈನ್ ಗೇಮ್ಸ್‌ಗಳನ್ನು ಬ್ಯಾನ್ ಮಾಡುತ್ತೇವೆಂದು ಸಹ ಹೇಳಿರುತ್ತಾರೆ.

ಇವೊತ್ತಿನ ದಿನ 'ಪಬ್ ಜಿ' ಎನ್ನುವ ಆನ್‌ಲೈನ್ ಎಂಬ ಗೇಮ್‌ನಿಂದ ಸಾಕಷ್ಟು ಮಕ್ಕಳು ಹಾಳಾಗುತ್ತಿದ್ದಾರೆ. ಸಮಾಜದ ಮೇಲೆ ಸರ್ಕಾರಕ್ಕೆ ಅಷ್ಟೊಂದು ಕಾಳಜಿ ಇದ್ದರೆ ಇಂತಹ ಗೇಮ್‌ಗಳ ನಿಷೇಧವನ್ನು ಸಹ ಇದರಲ್ಲಿ ಸೇರಿಸಬಹುದಾಗಿತ್ತು. ಉದಾಹರಣೆಗೆ, ಪಬ್‌ಜಿ, ಫ್ರೀಫೇಯರ್ ಮತ್ತು ಬ್ಲೂವೇಲ್ ಎಂಬ ಆನ್‌ಲೈನ್ ಗೇಮ್‌ಗಳಿದ್ದು, ಇದರಲ್ಲಿ ಕೆಲವು ಗೇಮ್‌ಗಳನ್ನು ಈಗಾಗಲೇ ನಿಷೇಧ ಮಾಡಲಾಗಿದೆ. ಆದರೆ, ಆ ಗೇಮ್‌ಗಳನ್ನು ಪುನಃ 'ಪಬ್‌ಜಿ ಇಂಡಿಯಾ' ಎಂದು ಹೊಸದಾಗಿ ತಂದಿರುತ್ತಾರೆ. ಈ ಹಿಂದೆ ಇದ್ದಂತಹ ಪಬ್‌ಜಿ ಆನ್‌ಲೈನ್ ಗೇಮ್‌ನಲ್ಲಿ ನಾಲ್ಕು ಮಕ್ಕಳು ಎಲ್ಲಿಯೋ ಕುಳಿತು ಆನ್‌ಲೈನ್ ಮುಖಾಂತರ ಆಟ ಆಡುತ್ತಿದ್ದರು. ಅಲ್ಲದೇ, ಇಂತಹ ಗೇಮ್‌ಗಳನ್ನು ಹೆಚ್ಚಾಗಿ ಚಿಕ್ಕ-ಚಿಕ್ಕ ಮಕ್ಕಳು ಅಂದರೆ, 5

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಥವಾ 6ನೆ ತರಗತಿ ಓದುತ್ತಿರುವ ಮಕ್ಕಳು ಹಾಗೂ ಇತರ ಶಾಲಾ ಮಕ್ಕಳು ಆಡುತ್ತಿದ್ದು, ಕ್ರಮೇಣ ಅವರು ಮಾನಸಿಕ ರೋಗಿಗಳಾಗುತ್ತಿದ್ದಾರೆಂದು ಡಾಕ್ಟರ್‌ಗಳು ಮಾಹಿತಿ ನೀಡಿರುತ್ತಾರೆ. ನಮ್ಮದು ಒಂದು ಶಾಲೆಯಿದ್ದು, ನಮ್ಮ ಶಾಲೆಯಲ್ಲಿಯೂ ಸಹ ಮಕ್ಕಳು ಆನ್‌ಲೈನ್ ಗೇಮ್‌ಗಳಿಂದ ಯಾವರೀತಿ ಹದಗೆಟ್ಟು ಹೋಗಿದ್ದಾರೆನ್ನುವುದನ್ನು ನಾನು ಸಹ ನೋಡಿರುತ್ತೇನೆ.

ಇದರಲ್ಲಿ ಕೆಲವೊಂದು ವಿಷಯಗಳನ್ನು ಸರ್ಕಾರ ಈಗ ರಾಜಾರೋಷವಾಗಿ ಒಪ್ಪಿಕೊಳ್ಳುತ್ತದೆ. ಮಾನ್ಯ ಸದಸ್ಯರಾದ ಶ್ರೀ ಭೋಜೇಗೌಡರು ಆಗಲೇ ಮಾತನಾಡುತ್ತಾ 'ರಮ್ಮಿ ಆಟ'ದ ಬಗ್ಗೆ ಚೆನ್ನಾಗಿ ಹೇಳಿದರು. ನಾನು ತಮ್ಮ ಮೂಲಕ ಸರ್ಕಾರಕ್ಕೆ ಮನವಿ ಮಾಡುವುದೇನೆಂದರೆ, ಈ ವಿಧೇಯಕಕ್ಕೆ ತಿದ್ದುಪಡಿ ಮಾಡಿದರೆ ನಾಗರಿಕರಿಗೆ ಸಾಕಷ್ಟು ತೊಂದರೆಯಾಗುತ್ತದೆ. ಎರಡನೆಯದಾಗಿ, ಇದರಲ್ಲಿ ತಪ್ಪು ಮಾಡಿದವರಿಗೆ 1 ಲಕ್ಷ ರೂಪಾಯಿ ದಂಡ ಎಂದು ಸೇರಿಸಿದ್ದಾರೆ. ಆದರೆ, ಈ ಸದನದಲ್ಲಿಯೇ ಜೂಜು ಆಡುವುದು ಮತ್ತು ರೇಸ್‌ಕೋರ್ಸ್ ಬಗ್ಗೆ ಬಹಳ ಜನ ಸದಸ್ಯರು ಮಾತನಾಡಿದ್ದಾರೆ. ಆ ರೇಸ್‌ಕೋರ್ಸ್‌ಗೆ ಕೇವಲ ಶ್ರೀಮಂತರು ಹೋಗುವುದಿಲ್ಲ. ಒಂದು ವೇಳೆ ಅವರು ಹೋದರೂ ಸಹ ಅದರಿಂದ ಅವರಿಗೆ ಯಾವ ತೊಂದರೆಯೂ ಆಗುವುದಿಲ್ಲ. ಆದರೆ, ಅಲ್ಲಿಗೆ ಆಟೋ ಓಡಿಸುವವರು, ಕೂಲಿ ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿ ಹೋಗಿ ಹಣ ಕಳೆದುಕೊಳ್ಳುತ್ತಿರುತ್ತಾರೆ. ಹಾಗಾಗಿ, ಇದನ್ನು ಸಹ ಬ್ಯಾನ್ ಮಾಡಬೇಕು. ಸರ್ಕಾರ ಎಲ್ಲಾ ರೀತಿಯ ಜೂಜು ಆಟಗಳನ್ನು ಬ್ಯಾನ್ ಮಾಡುತ್ತೇವೆಂದು ಹೇಳಿರುತ್ತದೆ. ಆದರೆ, ಆನ್‌ಲೈನ್ ಗೇಮ್‌ಗಳನ್ನು ಎಷ್ಟೇ ನಿಷೇಧ ಮಾಡಿದರೂ ಸಹ ಅವುಗಳನ್ನು ಪುನಃ ಹೊಸದಾಗಿ ತರುತ್ತಾರೆ.

ನನಗೆ ಗೊತ್ತಿರುವ ಪ್ರಕಾರ ಬೆಂಗಳೂರು ನಗರ ಎಂದರೆ, ಇಲ್ಲಿ ಸ್ವಲ್ಪ ಎಂಟರ್‌ಟೈನ್‌ಮೆಂಟ್ ಇರಬೇಕಾಗುತ್ತದೆ. ಆದರೆ, ಅಲ್ಲಿ ಯಾವುದೇ ಎಂಟರ್‌ಟೈನ್‌ಮೆಂಟ್ ಇರುವುದಿಲ್ಲ. ಆದರೆ, "ಇವೊತ್ತಿನ ದಿವಸ ಆಂಧ್ರಪ್ರದೇಶದಿಂದ ನಮ್ಮ ರಾಜ್ಯಕ್ಕೆ ಬಂದು ಅಂದರ್-ಬಾಹರ್ ಆಟ ಆಡುತ್ತಿದ್ದಾರೆಂದು" ಆಗಲೇ ಕೆಲವು ಸದಸ್ಯರು ಹೇಳಿದರು. ಆ ಬಗ್ಗೆ ಪೊಲೀಸ್ ಇಲಾಖೆಯಲ್ಲಿರುವ ಕೆಳಹಂತಹದ ಸಿಬ್ಬಂದಿಗಳು ಅಂದರೆ, ಬೀಟ್ ಪೊಲೀಸರು ಅವರಿಗೆ ಗೊತ್ತಿಲ್ಲದೇ ಏನೂ ನಡೆಯುವುದಿಲ್ಲ. ಇತ್ತೀಚೆಗೆ ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಪಕ್ಕದಲ್ಲಿರುವ ಸರ್ವೆ ತೋಪಿನಲ್ಲಿ ಸುಮಾರು ಲಕ್ಷಾಂತರ ರೂಪಾಯಿ ಹಣ ಕಟ್ಟಿ ಜೂಜು ಆಡುತ್ತಾರೆಂದು ಆಗಲೇ ಮಾನ್ಯ ಸದಸ್ಯರು ಹೇಳಿದರು. ಇವೆಲ್ಲವೂ ಪೊಲೀಸ್ ಇಲಾಖೆಗೆ ಗೊತ್ತಿಲ್ಲದೇ ನಡೆಯುವುದಿಲ್ಲ. ಪೊಲೀಸ್ ಇಲಾಖೆಯಲ್ಲಿ ಉತ್ತಮ ಹಿರಿಯ ಅಧಿಕಾರಿಗಳಿದ್ದರೂ ಸಹ ಅಲ್ಲಿ ನಡೆಯತಕ್ಕಂತಹ ಕೆಲವು ಚಟುವಟಿಕೆಗಳು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಈಗಲೂ ನಡೆಯುತ್ತಿರುತ್ತವೆ. ಹಾಗಾಗಿ, ಈ ವಿಧೇಯಕದಲ್ಲಿ ಕೆಲವೊಂದು ತಿದ್ದುಪಡಿಗಳನ್ನು ಮಾಡುವುದು ಒಳ್ಳೆಯದು. ಈ ವಿಧೇಯಕದ ಬಗ್ಗೆ ಮಾತನಾಡಲು ಸಮಯಾವಕಾಶದ ಕೊರತೆ ಇದೆ. ಆದರೆ, ಈ ಬಿಲ್ ಬಗ್ಗೆ ಸಾಕಷ್ಟು ವಿಷಯಗಳು ಇದ್ದು, ನಾನು ಕನಿಷ್ಠ ಅರ್ಧ ಗಂಟೆ ಮಾತನಾಡಬಹುದು. ಹಾಗಾಗಿ, ಈ ವಿಧೇಯಕದಲ್ಲಿ ಕೆಲವೊಂದು ಬದಲಾವಣೆ ಮಾಡುವುದು ಒಳ್ಳೆಯದೆಂದು ಹೇಳಿ, ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಮಾನೆ ಶ್ರೀನಿವಾಸ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಜೂಜಾಟ ನಿರ್ಬಂಧದ ಬಗ್ಗೆ ತಂದಂತಹ ವಿಧೇಯಕದ ಬಗ್ಗೆ ಸಾಕಷ್ಟು ಮಾನ್ಯ ಸದಸ್ಯರು ಬೆಳಕನ್ನು ಚೆಲ್ಲಿದ್ದಾರೆ. ಈ ವಿಧೇಯಕ, ನನಗನಿಸುವ ಮಟ್ಟಿಗೆ ಈ ಸದನದಲ್ಲಿ ವೀಕೆಸ್ಟ್ ಬಿಲ್ ಆಗುತ್ತದೆಯೇನೋ? ಏಕೆಂದರೆ, ಇವೊತ್ತಿಗೂ ಪೊಲೀಸರು ಜೂಜಾಟ ಆಡುವವರನ್ನು ಹಿಡಿದು, ಅವರ ವಿರುದ್ಧ ಸಣ್ಣ ಕೇಸ್ ಹಾಕಿ ನಂತರ ಅವರನ್ನು ಬಿಡುಗಡೆ ಮಾಡುತ್ತಾರೆ. ಗ್ರಾಮೀಣ ಪ್ರದೇಶದಲ್ಲಿ ಜೂಜು ಆಡುವವರು ಜೂಜಾಟದಲ್ಲಿ ಮೊದಲೇ 2 ಅಥವಾ 3 ಸಾವಿರ ರೂಪಾಯಿ ಹಣ ಸೋತಿರುತ್ತಾರೆ. ಅದರೆ, ಅವರನ್ನು ಹಿಡಿದು ಪೊಲೀಸ್ ಠಾಣೆಗೆ ಕರೆತಂದ ಪೊಲೀಸರು, ಅವರನ್ನು ಬಿಡುಗಡೆ ಮಾಡಲು 10 ರಿಂದ 15 ಸಾವಿರ ಹಣ ಪಡೆದು ಬಿಡುಗಡೆ ಮಾಡುತ್ತಾರೆ. ಆ ಸಂದರ್ಭದಲ್ಲಿ ಯಾವುದೇ, ಶಾಸಕರಾಗಲಿ, ಮಂತ್ರಿಯಾಗಲಿ ಅಥವಾ ಮುಖ್ಯಮಂತ್ರಿಯವರೇ ಹೇಳಲಿ ಅಥವಾ ಎಸ್.ಪಿ. ಹೇಳಲಿ ಅವರನ್ನು ಪುಕ್ಕಟೆಯಾಗಿ ಅಂತೂ ಬಿಡುವುದಿಲ್ಲ.

ನಾನು ಹೇಳುವ ವಿಷಯದ ಬಗ್ಗೆ ಈಗಿನ ಮಂತ್ರಿಗಳು ತಪ್ಪು ತಿಳಿದುಕೊಳ್ಳಬಾರದು. ಏಕೆಂದರೆ, ಅವರ ಇಮೇಜ್ ಬೇರೆಯದ್ದೇ ಆಗಿದೆ. ಈ ಹಿಂದೆ, ಇಂತಹ ಎಲ್ಲಾ ಚಟುವಟಿಕೆಗಳು ಮೇಲಿನ ಮಟ್ಟದವರೆಗೂ ಹೋಗುತ್ತಿತ್ತು ಎಂದು ಬಹಳ ಧಾರಾಳವಾಗಿ ಹೇಳುವುದನ್ನು ನಾವು ನೋಡಿರುತ್ತೇವೆ. ಹಾಗಾಗಿ, ಸರ್ಕಾರ ಈಗ ಈ ವಿಧೇಯಕ ತರುವುದರಿಂದ ಆ ಮಟ್ಟದಲ್ಲಿ ರೇಟ್ ಹೆಚ್ಚಾಗುತ್ತದೆಯೆಂಬುದು ನನ್ನ ಆತಂಕವಾಗಿರುತ್ತದೆ. ಏಕೆಂದರೆ, ಮೊದಲಿನ ಆಕ್ಟ್‌ನಲ್ಲಿ ಇಂತಹ ಜೂಜಾಟಗಳಿಗೆ ಶಿಕ್ಷೆ ಇರಲಿಲ್ಲ. ಅದರಂತೆ, ಶಿಕ್ಷೆ ಇಲ್ಲದೇ ಇದ್ದುದರಿಂದ, ಜೂಜು ಆಡುವವರನ್ನು ಬಿಡುಗಡೆ ಮಾಡುವುದಕ್ಕೆ 10 ರಿಂದ 15 ಸಾವಿರ ಹಣ ಪಡೆಯುತ್ತಿದ್ದರು. ಆದರೆ, ಈಗ ಅದಕ್ಕೆ ಶಿಕ್ಷೆ ವಿಧಿಸಿದರೆ ರೇಟ್ ಜಾಸ್ತಿಯಾಗುತ್ತದೆಯಲ್ಲವೇ? ಅಲ್ಲದೇ, ಸದನದಲ್ಲಿ ಬಹಳಷ್ಟು ಸದಸ್ಯರು ಸದರಿ ಆಟ ಆಡುವವರು ತಮ್ಮ ಅನುಭವ ಹೇಳಿದರು. ಅವರನ್ನೇ ಹಿಡಿಯುವುದಕ್ಕೆ ಆಗಲಿಲ್ಲ. ಆದರೆ ಈ ವಿಧೇಯಕ ತಂದು ಇನ್ನೂ ಯಾರನ್ನು ಹಿಡಿಯುತ್ತಾರೆಂಬ ಸಂಶಯ ನನ್ನ ಮನಸ್ಸಿನಲ್ಲಿದೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಡಾ: ತೇಜಸ್ವಿನಿ ಗೌಡ:-** ಮಾನ್ಯ ಸಭಾಪತಿಯವರೇ, ಹಾಗಾದರೆ ಮಾನ್ಯ ಭೋಜೇಗೌಡರವರನ್ನು ಹಿಡಿಯಬೇಕೇ?

**ಶ್ರೀ ಮಾನೆ ಶ್ರೀನಿವಾಸ:-** ಮಾನ್ಯ ಸಭಾಪತಿಯವರೇ, ಯಾರೋ, ಅವರು ಒಬ್ಬರೇ ಅಲ್ಲ. ಆ ಬಗ್ಗೆ ಬಹಳಷ್ಟು ಸದಸ್ಯರು ಹೇಳಿದರು. ಹಾಗಾಗಿ, ಸರ್ಕಾರ ಇನ್ನೊಂದು ಕಾನೂನು ತರಬೇಕು. ಈ ವಿಷಯದಲ್ಲಿ ನಮ್ಮ ಲೋಕಲ್‌ನಲ್ಲಿ ಬಹಳಷ್ಟು ರಾಜಕಾರಣ ಇದೆ. ಇಂತಹ ಜೂಜಾಟಗಳಲ್ಲಿ ನಾವು ಬಿಡಿಸಿದ್ದು, ನಮ್ಮ ವಿರೋಧ ಪಕ್ಷದವರಿಗೆ ಗೊತ್ತಿರುತ್ತದೆ ಅಥವಾ ಅವರು ಬಿಡಿಸಿದ್ದು ನಮ್ಮ ಗಮನಕ್ಕೆ ಇರುತ್ತದೆ. ಇಂತಹವರನ್ನು ಪೊಲೀಸರು ಬಿಟ್ಟಿದ್ದಾರೆಂದು ತಮ್ಮ ಗಮನಕ್ಕೆ ತಂದರೆ, ಆಗ ಸರ್ಕಾರ ಅಂತಹ ಅಧಿಕಾರಿಗಳ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು. ಜೂಜಾಟ ಆಡುತ್ತಿರುವವರನ್ನು ಒಬ್ಬ ಪೊಲೀಸ್ ಅಧಿಕಾರಿ ಹಿಡಿದು, ಕೇಸ್ ಮಾಡದೇ ಬಿಟ್ಟಿರುವುದು ಗಮನಕ್ಕೆ ಬಂದರೆ, ತಕ್ಷಣ ಸಂಬಂಧಪಟ್ಟ ಪೊಲೀಸ್ ಅಧಿಕಾರಿಯ ವಿರುದ್ಧ ಕ್ರಮ ತೆಗೆದುಕೊಂಡರೆ ಮಾತ್ರ ಈ ಜೂಜಾಟ ಬಂದ್ ಆಗುವುದಕ್ಕೆ ಸಾಧ್ಯವಿದೆ. ಹಾಗಾಗಿ, ಈ ಎಲ್ಲಾ ಅಂಶಗಳನ್ನು ವಿಧೇಯಕದಲ್ಲಿ ಅಳವಡಿಸಿಕೊಂಡು ಮತ್ತಷ್ಟು ತಿದ್ದುಪಡಿ ತಂದರೆ ಒಳ್ಳೆಯದು. ಇದರ ಜೊತೆಗೆ, fantasy sports ಬಗ್ಗೆ ಬಹಳಷ್ಟು ಜನ ಸದಸ್ಯರು ಈಗಾಗಲೇ ಮಾತನಾಡಿದ್ದಾರೆ ಹಾಗೂ ಸುಪ್ರೀಂ ಕೋರ್ಟ್ ಈ ವಿಷಯದಲ್ಲಿ ಒಂದು ಆದೇಶ ನೀಡಿರುವುದರಿಂದ ಅದನ್ನು ಸಹ ಸರ್ಕಾರ ಗಮನಿಸಬೇಕೆಂದು ನಾನು ಸರ್ಕಾರವನ್ನು ಒತ್ತಾಯಿಸುತ್ತೇನೆ.

**ಶ್ರೀ ಮರಿತಿಬ್ಬೇಗೌಡ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ,...

**(ಗೊಂದಲ)**

**ಶ್ರೀ ಎಸ್.ವಿ. ಸಂಕನೂರ:-** ಮಾನ್ಯ ಸಭಾಪತಿಯವರೇ, ಈಗಾಗಲೇ ಸಮಯ ರಾತ್ರಿ 10.30 ಗಂಟೆಯಾಗಿದೆ.

**(ಗೊಂದಲ)**

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ನಾನು ನನ್ನ ಮಾತನ್ನು ಬೇಗ ಮುಕ್ತಾಯಗೊಳಿಸುತ್ತೇನೆ. ಯಾರಿಗೂ ತೊಂದರೆ ಕೊಡುವುದಿಲ್ಲ.

**ಶ್ರೀ ಮಾನೆ ಶ್ರೀನಿವಾಸ:-** ಮಾನ್ಯ ಸಭಾಪತಿಯವರೇ, ಬಹುಶಃ ಈ ವಿಧೇಯಕ ತಂದಿರುವಂತಹ ಇವೊತ್ತಿನ ದಿನಾಂಕ ಸರಿಯಾದ ಮುಹೂರ್ತ ಆಗಿರುವುದಿಲ್ಲ. ಹಾಗಾಗಿ,

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರಾತ್ರಿ 12.00 ಗಂಟೆಯ ನಂತರ ಈ ವಿಧೇಯಕವನ್ನು ಪಾಸ್ ಮಾಡಿದರೆ ಸ್ವಲ್ಪ ಸರಿಯಾಗಬಹುದು.

**ಸಭಾಪತಿಯವರು:-** ಆಗಬಹುದು.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಈ ವಿಧೇಯಕದ ಬಗ್ಗೆ ಸಾಕಷ್ಟು ಮಾನ್ಯ ಸದಸ್ಯರು ಬಹಳ ಬೆಳಕು ಚೆಲ್ಲಿದ್ದಾರೆ. ಇದರ ಪ್ರಯೋಜನ ಮತ್ತು ಇದನ್ನು ಕಟ್ಟುನಿಟ್ಟಾಗಿ ಜಾರಿಗೆ ತಂದರೆ ಅದರಿಂದ ಆಗತಕ್ಕಂತಹ ದುಷ್ಪರಿಣಾಮಗಳ ಬಗ್ಗೆ ಶ್ರೀ ಪಿ.ಆರ್. ರಮೇಶ್‌ರವರು, ಶ್ರೀ ಯು.ಬಿ. ವೆಂಕಟೇಶ್‌ರವರು, ಮಾನ್ಯ ವಿರೋಧ ಪಕ್ಷದ ನಾಯಕರು, ಶ್ರೀ ಲಕ್ಷ್ಮಣ ಸಂಗಪ್ಪ ಸವದಿಯವರು ಮತ್ತು ನಮ್ಮ ಕಾನೂನು ಸಚಿವರು ಎಲ್ಲರೂ ಸಹ ಬಹಳ ಚೆನ್ನಾಗಿ ಮಾತನಾಡಿದ್ದಾರೆ. ಆದರೆ, ನನಗೆ ಇವರೆಲ್ಲರ ಒಟ್ಟಾರೆ ಅಭಿಪ್ರಾಯ ಕೇಳಿದರೆ, ಈ ವಿಧೇಯಕವನ್ನು ಸ್ವಲ್ಪ ಇನ್ನೂ ಹೆಚ್ಚಿನ ರೀತಿ ವಿಮರ್ಶೆ ಮಾಡಿ, ಸಾಮಾನ್ಯ ಜನರಿಗೆ ಇದನ್ನು ಕಡ್ಡಾಯವಾಗಿ ಸರ್ಕಾರ ಜಾರಿಗೆ ತರುತ್ತದೆ ಮತ್ತು ಇದರಿಂದ ಏನೇನು ಜನರ ಜೀವನದ ಮೇಲೆ ದುಷ್ಪರಿಣಾಮ ಆಗುತ್ತದೆ ಎನ್ನುತಕ್ಕಂಥದ್ದನ್ನು ಚರ್ಚೆಯ ಮೂಲಕ ಹೇಳಿ, ಈ ವಿಧೇಯಕವನ್ನು ಮುಂದಿನ ಅಧಿವೇಶನ ಸಂದರ್ಭಕ್ಕೆ ತಂದು, ಇನ್ನೂ ಸ್ವಲ್ಪ ಕಾನೂನು ಉತ್ತಮವಾಗಿ ತರಬೇಕು. ನಾನು ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಆಗಲೇ ಮಾನ್ಯ ಪಿ.ಆರ್. ರಮೇಶ್‌ರವರು ಮತ್ತು ಮಾನ್ಯ ಮಾನೆ ಶ್ರೀನಿವಾಸ್‌ರವರು, "ಇದು ಭಾರತ ದೇಶಾದ್ಯಂತ ನಿರ್ಬಂಧ ಆದರೆ ಒಳ್ಳೆಯದೆಂದು" ಹೇಳಿದರು. ಈ ಬಗ್ಗೆ ಮಾನ್ಯ ಉಚ್ಚ ನ್ಯಾಯಾಲಯ ಹಾಗೂ ಸುಪ್ರೀಂ ಕೋರ್ಟ್‌ನ ಆದೇಶಗಳು ಸಹ ಇರುತ್ತವೆ. ಬಹಳಷ್ಟು ಕಡೆ fantasy game ಎನ್ನುವುದಕ್ಕೆ ಅನುಮತಿ ನೀಡಲಾಗಿರುತ್ತದೆ. ಅದೇ ರೀತಿ ಈ ವಿಧೇಯಕದಲ್ಲಿ ಏನಾದರೂ ಬದಲಾವಣೆ ತಂದರೆ, ಅದರಿಂದ ಯಾವುದೇ ಉಪಯೋಗವಾಗುವುದಿಲ್ಲವೆಂಬ ಬಗ್ಗೆಯೂ ಸಹ ಸಾಕಷ್ಟು ಹೇಳಿದ್ದಾರೆ.

ಇದರ ಜೊತೆಗೆ, ಕುದುರೆ ಜೂಜಿನ ಬಗ್ಗೆಯೂ ಸಹ ಬಹಳಷ್ಟು ಸದಸ್ಯರು ಹೇಳಿದರು. ಆದರೆ, ಈ ವಿಷಯದಲ್ಲಿ ಮಾನ್ಯ ಸುಪ್ರೀಂ ಕೋರ್ಟ್‌ನ ವರ್ಡಿಕ್ಟ್ ನ್ನು ನಾವು ಒಪ್ಪಿಕೊಳ್ಳಬೇಕು. ಅದರಲ್ಲಿ, "ಪ್ರಾಣಿ ವಧೆ ಮಾಡಬಾರದು ಅಥವಾ ಹಿಂಸೆ ಮಾಡಬಾರದೆಂದು" ಹೇಳುತ್ತಾರೆ. ಆದರೆ, ಆ ಕುದುರೆಯ ತಂದೆ ಯಾರು, ತಾಯಿ ಯಾರು, ಅದು ಹೇಗೆ ಹುಟ್ಟಿತು, ಆ ಕುದುರೆಯ ಜಾಕಿ ಯಾರು, ಆ ಜಾಕಿ ಎಷ್ಟು ತೂಕ ಇದ್ದಾನೆ, ಎಷ್ಟು ಕುದುರೆಯನ್ನು ಮೊದಲು ಹಾರಿಸಿದ್ದಾನೆ, ಇವೆಲ್ಲವನ್ನೂ ಲೆಕ್ಕಾಚಾರ ಮಾಡಿ ಬಹಳ skill ಆಗಿ ಆ ಪುಸ್ತಕ ಓದಿಕೊಂಡು, ಎಲ್ಲಾ ಮಾರ್ಕ್ ಮಾಡಿಕೊಂಡು, "ಇವೊತ್ತಿನ ದಿನ ಈ ಕುದುರೆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಹೊಡೆಯುತ್ತದೆಯೆಂದು, ಇದು ಫೇವರಿಟ್" ಎಂದು ಆ ಕುದುರೆ ಮೇಲೆ ಬಾಜಿ ಕಟ್ಟುವುದು ಸ್ಕಿಲ್ ಎಂದು ಮಾನ್ಯ ಸುಪ್ರೀಂ ಕೋರ್ಟ್ ತನ್ನ ಆದೇಶದಲ್ಲಿ ತಿಳಿಸುತ್ತದೆ. ಆದರೆ, ಆ ಕುದುರೆಗೆ ಚೆನ್ನಾಗಿ ತಿನ್ನಿಸಿ, ಚೆನ್ನಾಗಿ ಹೆಂಡ ಕುಡಿಸಿ ಕೇವಲ 5 ಸೆಕೆಂಡ್ ಚುಚ್ಚುತ್ತಾರಲ್ಲ ಆ ಹಿಂಸೆ, ಕಿರುಕುಳ ಮಾತ್ರ ಯಾವುದೇ ಜಡ್ಜ್‌ಗೆ ಅರ್ಥವಾಗುವುದಿಲ್ಲ.

(ಮುಂದು...)

(991) 23-09-2021 YL-BNS 10.40 (ಸಭಾಪತಿಯವರ ಉಪಸ್ಥಿತಿ)

**ಶ್ರೀ ಮರಿತಿಬ್ಬೇಗೌಡ(ಮುಂದು):-**

ಆ ಕುದುರೆಗೆ ಚುಚ್ಚಿ ಕೇವಲ ಎರಡೇ ಸೆಕೆಂಡ್ ಆದರೂ ಎಷ್ಟರ ಮಟ್ಟಿಗೆ ಆ ಕುದುರೆ ಹಿಂಸೆ ಮತ್ತು ಕಿರುಕುಳವನ್ನು ಅನುಭವಿಸುತ್ತದೆ. ಕೆಲವು ಆಟೋ ಚಾಲಕರಿಗೆ ಪುಸ್ತಕ ಓದಲು ಬಾರದ ಕಾರಣ ಆ ಕುದುರೆಯ ತೊಡೆಯನ್ನು ನೋಡಿ, ಆ ಕುದುರೆ ಗಟ್ಟಿಯಾಗಿದೆ, ಬಹಳ ಚೆನ್ನಾಗಿದೆ, ಚೆನ್ನಾಗಿ ನೆಗೆಯುತ್ತದೆ, ಬಾಂಬೆಯಿಂದ ತಂದಿದ್ದಾರೆ, ಚೆನ್ನಾಗಿ ಹಾರುತ್ತದೆ ಎಂದು ಜೂಜು ಕಟ್ಟುತ್ತಾರೆ. ನನ್ನ ವಿದ್ಯಾರ್ಥಿ ಜೀವನದ ಸಂದರ್ಭದಲ್ಲಿ ಕಬ್ಬಡಿ, ವಾಲಿಬಾಲ್ ಬಿಟ್ಟರೆ, ಬೇರೆ ಆಟದ ಪರಿಚಯವೇ ಇರಲಿಲ್ಲ. ಇವತ್ತಿಗೂ ಸಹ ನಾನು ಮೊಬೈಲ್‌ನಿಂದ ಮೆಸೇಜ್ ಕಳುಹಿಸುವುದನ್ನು ಕಲಿತಿಲ್ಲ. ಈ ಮಾತು ಸತ್ಯವಾಗಿದ್ದು, ಒಪ್ಪಿಕೊಳ್ಳುತ್ತೇನೆ. ಆದರೆ, ಈಗಾಗಲೇ ಮಾನ್ಯ ಪುಟ್ಟಣ್ಣನವರು ***'ಕುದುರೆ ಓಡಲಿ, ಅದಕ್ಕೆ ಬೆಟ್ಟಿಂಗ್ ಕಟ್ಟುವುದು ಬೇಡ'*** ಎನ್ನುವಂಥ ಮಾತನ್ನು ಹೇಳಿದರು. ಸ್ವಾಮಿ, ಬೆಟ್ಟಿಂಗ್ ಕಟ್ಟಲಿಲ್ಲವೆಂದರೆ, ಕುದುರೆಯೇ ಓಡುವುದಿಲ್ಲ. ಒಂದು ಹೆಜ್ಜೆ ಸಹ ಮುಂದೆ ಹಾಕುವುದಿಲ್ಲ. ಬೆಟ್ಟಿಂಗ್ ಕಟ್ಟಲಿಲ್ಲವೆಂದರೆ, ಹೇಗೆ ತಿವಿದರೂ ಆ ಜಾಕಿ ಒಂದು ಹೆಜ್ಜೆಯನ್ನು ಸಹ ಮುಂದೆ ಇಡುವುದಿಲ್ಲ. ಆ ರೀತಿಯಲ್ಲಿ ಕುದುರೆಗೂ ಸಹ ಅರ್ಥವಾಗಿ ಬಿಟ್ಟಿದೆ. ಮಾಸ್ಟರ್ ಹಿರಣ್ಣಯ್ಯನವರು ಲಂಚಾವತಾರದಲ್ಲಿ ಅವರ ಮಗನಿಗೆ ***'ಲೇ ಮಗನೇ ಇವತ್ತು, ಸ್ವಿಚ್ ಹಾಕಿದ ತಕ್ಷಣ ಫ್ಯಾನ್ ತಿರುಗುತ್ತಿದೆ, ಇದೇ ಧರ್ಮದ ಕಾಲ. ಇನ್ನು ಮುಂದೆ ನಿಮ್ಮ ಕಾಲಕ್ಕೆ ಸ್ವಿಚ್ ಹಾಕಿ, ಆ ಫ್ಯಾನ್ ಮೇಲೆ 10 ರೂಪಾಯಿ ಇಟ್ಟರೆ ಮಾತ್ರ ಆ ಫ್ಯಾನ್ ತಿರುಗುವುದು'*** ಎನ್ನುವಂಥ ಮಾತನ್ನು ಹೇಳಿದ್ದರು. ಈ ಜೂಜಿನ ವಿಚಾರವು ಆ ರೀತಿ ಆಗಿದೆ. ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಹೆಚ್.ಡಿ.ಕುಮಾರ್‌ಸ್ವಾಮಿಯವರ ನೇತೃತ್ವದ ಸರ್ಕಾರ ಇದ್ದಾಗ *'ಈ ನಾಡಿನ ಹೆಣ್ಣು-ಮಕ್ಕಳ ಗೋಳನ್ನು ನೋಡಲಾರದೆ, ಸಾರಾಯಿ ಮತ್ತು ಲಾಟರಿಯನ್ನು ಮನ್ನಾ'* ಮಾಡಿದ್ದರು. ಆ ಸಂದರ್ಭದಲ್ಲಿ ಮಾಜಿ ಮುಖ್ಯಮಂತ್ರಿಗಳಾದ ಶ್ರೀ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬಿ.ಎಸ್.ಯಡಿಯೂರಪ್ಪನವರು ಉಪ ಮುಖ್ಯಮಂತ್ರಿಯಾಗಿದ್ದರು. ಅದರಿಂದ ಸಾಕಷ್ಟು ಸುಧಾರಣೆಗಳಾಗಿದ್ದರೂ, ಸಂಪೂರ್ಣವಾಗಿ ನಿಲ್ಲದೇ ಬೇರೆ ರೂಪದಲ್ಲಿ ತಿರುಗಿಕೊಂಡಿರಬಹುದು.

**ಸಭಾಪತಿಯವರು:-** ಮಾನ್ಯ ಸದಸ್ಯರೆ ಆ ಸಂದರ್ಭದಲ್ಲಿ ನಾನೇ ಲಾಟರಿ ಸಚಿವನಾಗಿದ್ದೇನು.

**(ಈ ಹಂತದಲ್ಲಿ ಸದನವು ನಗೆಗಡಲಿನಲ್ಲಿ ತೇಲಿತು)**

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಹೌದು. ನೀವೇ ಲಾಟರಿ ಸಚಿವರಾಗಿದ್ದು, ಅದನ್ನು ಮನ್ನಾ ಮಾಡಿದ್ದೀರಿ. ಅದರಿಂದ ಸಾಕಷ್ಟು ಕುಟುಂಬಗಳು ಇವತ್ತು ನೆಮ್ಮದಿಯ ನಿಟ್ಟುಸಿರು ಬಿಟ್ಟಂತಾಗಿದೆ. ಇವತ್ತು ಸರ್ಕಾರವು ಜಾರಿಗೆ ತಂದಿರುವಂಥ ವಿಧೇಯಕದ ಕುರಿತು ಈ ಸಮಾಜದ, ಜನರ ಸುಧಾರಣೆ ಬಗ್ಗೆ ಬಹಳ ದೊಡ್ಡ ಆಲೋಚನೆಯನ್ನು ಹೊಂದಿದ್ದಾರೆ ಎನ್ನುವಂಥ ಅಭಿಮಾನ, ವಿಶ್ವಾಸ ನಮ್ಮೆಲ್ಲರಿಗೂ ಇದೆ. ಇದು ನಾಗರಿಕ ಮತ್ತು ಆಡಳಿತ ನಡೆಸುವಂಥ ಸರ್ಕಾರವಾಗಿದ್ದು, ಅಂತಹವುಗಳ ಬಗ್ಗೆ ಚಿಂತನೆ ನಡೆಸಬೇಕಾಗಿದೆ. ನಾನು ಈ ವಿಚಾರದಲ್ಲಿ ಬಹಳ ಅಭಿನಂದಿಸುತ್ತೇನೆ. ಆದರೆ, ಎಲ್ಲಿಯೋ ಒಂದು ಕಡೆ ಮಾನ್ಯ ಪ್ರಧಾನ ಮಂತ್ರಿಗಳಾದ ಶ್ರೀ ನರೇಂದ್ರ ಮೋದಿಯವರು fantasy game ಬಗ್ಗೆ ಹೇಳಿರುವುದರಿಂದ ಅದರ ಬಗ್ಗೆ ಸ್ವಲ್ಪ ಆಲೋಚನೆ ಮಾಡಬೇಕಾಗಿದೆ. ಮಾನ್ಯ ಲಕ್ಷ್ಮಣ ಸವದಿಯವರು ಉಪ ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ free ಬಿಡಬೇಕು, ಪೊಲೀಸ್‌ನವರಿಗೆ ಕೈ ಕಟ್ಟಿ ಹಾಕಬಾರದು ಎನ್ನುವಂಥ ಮಾತನ್ನು ಹೇಳಿದ್ದರು. ಆದರೆ, ದೇಶದ ರಾಜಕೀಯ ವ್ಯವಸ್ಥೆಯಲ್ಲಿ ಆ ರೀತಿ ಮಾಡುವುದಕ್ಕಾಗುವುದಿಲ್ಲ. ನಿಷ್ಠಾವಂತ ಪೊಲೀಸ್ ಅಧಿಕಾರಿಗಳಿದ್ದಾರೆ, ಇಲ್ಲವೆಂದು ಹೇಳುವುದಿಲ್ಲ. ಆದರೆ, ಇವತ್ತಿನ ದಿವಸ ಆ ನಿಷ್ಠಾವಂತ ಪೊಲೀಸ್ ಅಧಿಕಾರಿಗಳು ನಿಷ್ಠಾವಂತರಾಗಿ ಕರ್ತವ್ಯವನ್ನು ನಿರ್ವಹಿಸುವುದಕ್ಕಾಗುವುದಿಲ್ಲ. ಒಂದು ವೇಳೆ ಅವರೇನಾದರೂ ನಿಷ್ಠಾವಂತರಾಗಿ ಕರ್ತವ್ಯವನ್ನು ನಿರ್ವಹಿಸಿದರೆ, ಅವರೇ ಯಾವುದಾದರೂ ಒಂದು ವಿಚಾರದಲ್ಲಿ ಸಿಲುಕಿಕೊಂಡು, ಒಂದಲ್ಲ ಒಂದು ದಿನ ನೇಣು ಹಾಕಿಕೊಳ್ಳುವಂತಹ ಪರಿಸ್ಥಿತಿ ಇವತ್ತು ನಿರ್ಮಾಣವಾಗಿದೆ. ಹಾಗೆಯೇ ಬಹಳ ಕೆಟ್ಟ ಪೊಲೀಸ್ ಅಧಿಕಾರಿಗಳು ಸಹ ಇದ್ದಾರೆ. 'ಒಬ್ಬ ಇನ್ಸ್‌ಪೆಕ್ಟರ್ ಒಂದು ತಾಲ್ಲೂಕಿಗೆ ಹೋದಂಥ ಸಂದರ್ಭದಲ್ಲಿ ಜೂಜು, ಇಸ್ಪೀಟ್, ಮಟ್ಕಾ ಏನು ಆಡಬಾರದೆಂದು ನಿಲ್ಲಿಸುತ್ತಾನೆ. ಆದರೆ, ಆತ ಹೋಗಿ ಮಾರನೇ ದಿನ ಮತ್ತೊಬ್ಬ ಇನ್ಸ್‌ಪೆಕ್ಟರ್, ವೈನ್‌ಶಾಪ್, ಜೂಜು ಕಟ್ಟೆ ಎಲ್ಲವನ್ನೂ reopen ಮಾಡಿಸಿ, ಯಾರಿಗೂ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತೊಂದರೆ ಕೊಡಬೇಡಿ, ನಿಮ್ಮ ಹೆಂಡತಿ-ಮಕ್ಕಳಿಗೆ ಏನಾದರೂ ಹೇಳಿಕೊಳ್ಳಿ, ನನಗೆ ಮಾತ್ರ ಇಷ್ಟೊಂದು ಲಂಚ ಕೊಡಬೇಕೆಂದು ಹೇಳುತ್ತಾನೆ. ಅದರ ಜೊತೆಗೆ ಮತ್ತೊಂದು ವ್ಯವಸ್ಥೆ ಬಂದಿದೆ. 'ಖಾಸಗಿ ಅನಧಿಕೃತ ಜೂಜು ಕಟ್ಟೆ ಏನು ನಡೆಸಲಾಗುತ್ತಿದೆ, ಆ ನಡೆಸುವಂಥನಿಗೆ *ಪೊಲೀಸ್ ಅಧಿಕಾರಿ 'ಎಷ್ಟಾದರೂ ಜೂಜು ನಡೆಸಿಕೋ, ಆದರೆ, ಯಾವಾಗ ಜೂಜು ಕಟ್ಟೆ highest bid ಮಾಡಿಸುತ್ತಾರೆಯೋ, ಆಗ ನಮಗೆ ಮಾಹಿತಿ ನೀಡು, ನಾವು ಬಂದು raid ಮಾಡುತ್ತೇವೆ, ಮತ್ತೆ 3 ತಿಂಗಳು ಏನಾದರೂ ನಡೆಸಿಕೋ, ನಾವು ಬರುವುದಿಲ್ಲ'* ಎನ್ನುವಂಥ ಮಾತನ್ನು ಹೇಳುತ್ತಾರೆ. ಅದರಂತೆ ಒಂದು ದಿನ ಪೊಲೀಸ್‌ನವರಿಗೆ ಕರೆ ಮಾಡಿ, *'ರಾಜ್ಯದ ಮೂಲೆ-ಮೂಲೆಯಿಂದ ಇಂತಿಂಥ ವ್ಯಕ್ತಿಗಳು ಬಂದಿದ್ದಾರೆ, 50 ಲಕ್ಷ ರೂಪಾಯಿ ಜೂಜು ನಡೆಯುತ್ತಿದೆ'* ಎಂದು ಮಾಹಿತಿ ನೀಡುತ್ತಾನೆ. ಆಗ ಪೊಲೀಸ್ ಅಧಿಕಾರಿ ಆ ಸ್ಥಳಕ್ಕೆ ಭೇಟಿ ನೀಡಿ, ಸುಮಾರು ಐವತ್ತು ಲಕ್ಷದಿಂದ ಒಂದು ಕೋಟಿ ರೂಪಾಯಿವರೆಗೂ ಜಪ್ತಿ ಮಾಡಿ, ಆತನ ಮೇಲೆ ಪ್ರಕರಣ ದಾಖಲಿಸಿ ಸರ್ಕಾರಕ್ಕೆ 10 ಸಾವಿರ ಮಾತ್ರ ತೋರಿಸಿ, ಕೇಸ್ ಹಾಕುತ್ತಾರೆ. ಉಳಿದೆಲ್ಲಾ ಹಣವನ್ನು ಗುಳುಂ ಮಾಡುವಂಥ ಕೆಟ್ಟ ಪೊಲೀಸ್ ಅಧಿಕಾರಿಗಳು ಸಹ ಇದ್ದಾರೆ. ಇಂತಹ ಅಧಿಕಾರಿಗಳಿಂದಲೇ ಪೊಲೀಸ್ ಇಲಾಖೆಗೆ ಕೆಟ್ಟ ಹೆಸರು ಬರುತ್ತಿರುವುದು. ಎಷ್ಟೆಲ್ಲಾ ತರಬೇತಿ ನೀಡಿದರೂ ಹಿರಿಯ ಪೊಲೀಸ್ ಅಧಿಕಾರಿಗಳ ಕಿರುಕುಳ, ಹಿಂಸೆಯಿಂದಾಗಿ ಕಿರಿಯ ಪೊಲೀಸ್ ಅಧಿಕಾರಿಗಳು ಅಂತಹ ಕೆಲಸವನ್ನು ಮಾಡಲು ನಿಂತಿದ್ದಾರೆ. ಆದರೆ, ಪೊಲೀಸ್‌ನವರು ತುಂಬಾ ಪ್ರಾಮಾಣಿಕರು. ಪೊಲೀಸ್ ಠಾಣೆಯ ಪರಿಸ್ಥಿತಿ ಯಾವ ರೀತಿಯಲ್ಲಿದೇ ಎಂದರೆ, ಯಾವುದೇ ನಾಗರಿಕನು ತಪ್ಪು ಮಾಡಿರಲಿ, ಮಾಡದಿರಲಿ ಆತನನ್ನು ಬಂಧಿಸಿ ಪೊಲೀಸ್ ಠಾಣೆಗೆ ಕರೆದುಕೊಂಡು ಹೋದ ಪಕ್ಷದಲ್ಲಿ ಆತನ ವಿರುದ್ಧ ಯಾರಾದರೂ ದೂರು ನೀಡಲಿಲ್ಲವೆಂದರೆ, ಮತ್ತೊಬ್ಬನ ಮೂಲಕ counter complaint ನೀಡು ಎಂದು ಹೇಳಿಸಿ, ಆತನ ವಿರುದ್ಧ ದೂರು ದಾಖಲಿಸುತ್ತಾರೆ. ಈ ರೀತಿಯಾಗಿ ಇಬ್ಬರನ್ನೂ ಕರೆಸಿ, ಇಬ್ಬರಿಂದಲೂ ಹಣವನ್ನು ವಸೂಲಿ ಮಾಡಿಸುತ್ತಾರೆ. ಜೊತೆಗೆ ಆ *ವ್ಯಕ್ತಿಗಳನ್ನು 'ಏ ನನ್ನ ಮಗನೇ, ಒದ್ದು ಒಳಗೆ ಹಾಕುತ್ತೇನೆ, ಜಾಮೀನು ಸಿಗುವುದಿಲ್ಲ, ಸೆಕ್ಷನ್ 506 ರಡಿ ಪ್ರಕರಣ ದಾಖಲಿಸಲಾಗುತ್ತದೆ'* ಎಂದು ಚಿತ್ರಹಿಂಸೆ ನೀಡಿ ಬೆದರಿಸುತ್ತಾರೆ.' ಇಂತಹ ಕೆಟ್ಟ ಪೊಲೀಸ್ ಅಧಿಕಾರಿಗಳಿಂದ ದೌರ್ಜನ್ಯವಾಗುತ್ತಿದೆ. ಇಂತಹ ಪೊಲೀಸ್ ಅಧಿಕಾರಿಗಳಿಗೆ ಯಾವ ರೀತಿಯ ತರಬೇತಿ ನೀಡಿದರೂ ಸರಿದೂಗುವುದಿಲ್ಲ. ಅವರನ್ನು 6 ತಿಂಗಳ ಕಾಲ ಕಾಡಿನಲ್ಲಿಟ್ಟು, ಸರಿಯಾಗಿ ಊಟ ನೀಡದೇ, ಜೀವನದ ಕಷ್ಟ-ಸುಖದ ಬಗ್ಗೆ ತರಬೇತಿ ನೀಡಿ, ಮಾನವೀಯತೆಯನ್ನು ಕಲಿಸಿ, ಕರೆದುಕೊಂಡು ಬರಬೇಕು. ಈ ವಿಧೇಯಕಕ್ಕೆ ಅನುಮೋದನೆ ನೀಡಲು ನಮ್ಮ ಅಭ್ಯಂತರವೇನಿಲ್ಲ. ಆದರೆ, ಕೆಲವು ಕೆಟ್ಟ ಪೊಲೀಸ್ ಅಧಿಕಾರಿಗಳ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ದಬ್ಬಾಳಿಕೆ, ದೌರ್ಜನ್ಯದಿಂದಾಗಿ ಬಹಳಷ್ಟು ಜನರು ತೊಂದರೆ ಅನುಭವಿಸುವಂಥದ್ದಾಗಿದೆ. ಒಳ್ಳೆಯ ಪೊಲೀಸ್ ಅಧಿಕಾರಿ ಮತ್ತು ಪೊಲೀಸ್ ಸಿಬ್ಬಂದಿಗಳ ಬಗ್ಗೆ ನನಗೆ ಬಹಳ ಗೌರವ ಇದೆ. ಅಂತಹ ಒಳ್ಳೆಯ ಪೊಲೀಸ್ ಅಧಿಕಾರಿಗಳಿಗೆ ರಾಜಕಾರಣಿಗಳಾಗಲಿ, ಸರ್ಕಾರವಾಗಲಿ ಬೆಂಬಲ ನೀಡುತ್ತಿಲ್ಲ. ಯಾರೇ ಒಳ್ಳೆಯ ಮತ್ತು ದಕ್ಷ ಅಧಿಕಾರಿಯನ್ನು ನೇಮಕ ಮಾಡಿದರೂ ಆತನನ್ನು ಹತ್ತತ್ತು ವರ್ಷಗಳ ಕಾಲ ತರಬೇತಿ ಸಂಸ್ಥೆಗೆ ಕಳುಹಿಸಲಾಗುತ್ತದೆ. ನಮ್ಮಲ್ಲಿ ಇಂತಹ ಆಡಳಿತ ವ್ಯವಸ್ಥೆ ಇದೆ.

ಕೆಟ್ಟ ಪೊಲೀಸ್ ಅಧಿಕಾರಿಗಳೇನಿದ್ದಾರೆ, ಅವರು ಕಾನೂನನ್ನು ದುರುಪಯೋಗಪಡಿಸಿಕೊಂಡು, ಬಹಳಷ್ಟು ಜನ ಸಾಮಾನ್ಯರಿಗೆ ಕಿರುಕುಳ, ಹಿಂಸೆ ನೀಡುತ್ತಿದ್ದಾರೆ. ದಯವಿಟ್ಟು ಅದೆಲ್ಲವುಗಳ ಬಗ್ಗೆ ಆಲೋಚನೆ ಮಾಡಬೇಕಾಗಿದೆ. ಮಾಜಿ ಮುಖ್ಯಮಂತ್ರಿಗಳಾದ ಶ್ರೀ ರಾಮಕೃಷ್ಣ ಹೆಗಡೆಯವರು ಹೇಳಿದ ಒಂದು ಮಾತು ನನಗೆ ನೆನಪಾಗುತ್ತಿದೆ. ಅವರ ಕಾಲದಲ್ಲಿ ಬೆಂಗಳೂರು ನಗರದಲ್ಲಿ ರೌಡಿಸಂ, ಕೊಲೆ, ಸುಲಿಗೆ ಜಾಸ್ತಿಯಾದ ಪ್ರಯುಕ್ತ ಇದೇ ಸದನದಲ್ಲಿ ಒಂದು ಮಾತನ್ನು ಹೇಳಿದ್ದರು. ಅದೇನೆಂದರೆ, *'ನಾನು ಒಬ್ಬ ಮುಖ್ಯಮಂತ್ರಿಯಾಗಿ ಹೇಳುತ್ತಿದ್ದೇನೆ, ಎಲ್ಲಿ ಪೊಲೀಸ್ ಇದ್ದಾರೆ ಅಲ್ಲಿ ರೌಡಿಗಳು, ದಂಧೆಕೋರರು ಇರಕೂಡದು. ಎಲ್ಲಿ ದಂಧೆಕೋರರಿದ್ದಾರೆ ಅಲ್ಲಿ ಪೊಲೀಸ್ ಇಲ್ಲದಿದ್ದರೆ, ಅದಕ್ಕೆ ನಾಳೆಯಿಂದ ನಿಮ್ಮ ಪೊಲೀಸ್ ಅಧಿಕಾರಿಗಳೆ ಹೊಣೆ'* ಎನ್ನುವಂಥ ಮಾತನ್ನು ಸದನದಲ್ಲಿ ಹೇಳಿದ್ದರು. ಆ ಮಾತು ಹೇಳಿದ ಒಂದು ತಿಂಗಳಲ್ಲಿ ಎಷ್ಟೋ ಜನ ರೌಡಿಗಳು ದೊಡ್ಡ-ದೊಡ್ಡ ರೌಡಿಗಳೆಲ್ಲಾ ಬೆಂಗಳೂರನ್ನೇ ಖಾಲಿ ಮಾಡಿಬಿಟ್ಟರು. ಇಂತಹ ಒಂದು ಆಡಳಿತ ವ್ಯವಸ್ಥೆ ತರಲು ನಮಗೆ ರಾಜಕೀಯ ಇಚ್ಛಾಶಕ್ತಿಬೇಕು. ದಯವಿಟ್ಟು ಆ ರೀತಿ ಮಾಡಲಿ. ಮಾನ್ಯ ಜೆ.ಸಿ.ಮಾಧುಸ್ವಾಮಿಯವರು ಈ ಕಾಯ್ದೆಯ ಬಗ್ಗೆ ಎಲ್ಲರಿಗಿಂತ ಚೆನ್ನಾಗಿ ತಿಳಿದಿದ್ದು, ಈಗಾಗಲೇ ಅವರು ವಾಸ್ತವಿಕತೆಯನ್ನು ಹೇಳಿದ್ದಾರೆ. ಜೊತೆಗೆ ಎಷ್ಟು ಜನರಿಗೆ ಉದ್ಯೋಗ ಸಿಗುತ್ತಿದೆ, ಎಷ್ಟು ಕಂಪನಿಗಳು ಚಾಲ್ತಿಯಲ್ಲಿವೆ, ಆ ಕಂಪನಿಗಳಿಗೆ ಹೊಡೆತ ಬೀಳಬಾರದು, ಉದ್ಯೋಗಸ್ಥರಿಗೆ ತೊಂದರೆಯಾಗಬಾರದು, ಕೆಟ್ಟ ಉದ್ದೇಶದಿಂದಾಗಿ ನಿರಪರಾಧಿಗಳಿಗೆ ಶಿಕ್ಷೆ ಆಗಬಾರದು, ಇಂತಹ ಎಲ್ಲಾ ಸಾಧಕ-ಬಾಧಕಗಳ ಬಗ್ಗೆ ಮತ್ತೊಮ್ಮೆ ಪರಾಮರ್ಶೆ ಮಾಡಿ, ಈ ವಿಧೇಯಕವನ್ನು ತರಬೇಕೆಂಬುದು ನನ್ನ ಭಾವನೆ.

**ಶ್ರೀಮತಿ ಭಾರತಿ ಶೆಟ್ಟಿ (ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ನಿಯಮ 68ಕ್ಕೆ ಆದಷ್ಟು ಬೇಗ ಉತ್ತರ ಒದಗಿಸಿಕೊಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತಿದ್ದೇನೆ. ನೇರವಾಗಿ ಒಂದೇ ವಾಕ್ಯದಲ್ಲಿ ಹೇಳುವುದಾದರೆ, ಏನು ಈಗ ಚರ್ಚೆಯಾಗಿದೆ ಅದಕ್ಕೆ ಸಂಬಂಧಿಸಿದಂತೆ ಆನ್‌ಲೈನ್ ಗೇಮ್ ಬಗ್ಗೆ ಉಲ್ಲೇಖ ಮಾಡಿದ್ದರು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

15,000 workers ಗೆ ನಷ್ಟವಾಗುತ್ತದೆ, ಅದರಿಂದ ಬೇರೆ ರಾಜ್ಯಕ್ಕೆ ಹೋಗುವಂಥ ಪರಿಸ್ಥಿತಿ ಉದ್ಭವಿಸುತ್ತದೆ, ಬಹಳಷ್ಟು ಹಣ ನಷ್ಟವಾಗುತ್ತದೆ ಎನ್ನುವಂಥ ಮಾತನ್ನು ಹೇಳಿದರು. ಆದರೆ, ಎಲ್ಲಾ ಗೇಮ್‌ಗಿಂತ ಬಹಳ dangerous game ಎಂದರೆ, ಈ ಆನ್‌ಲೈನ್ ಗೇಮ್ ಆಗಿದೆ. ಕುದುರೆ ರೇಸ್‌ಗಾದರೆ ಸಮಯ ಮಾಡಿಕೊಂಡು, ಕ್ಲಬ್‌ಗೆ ಹೋಗುತ್ತಾರೆ. ಆದರೆ, ಈ ಆನ್‌ಲೈನ್ ಗೇಮ್‌ನಿಂದಾಗಿ ಸಣ್ಣ-ಸಣ್ಣ ಹದಿ-ಹರೆಯದ ಮಕ್ಕಳು ಮೊಬೈಲ್ ಇಟ್ಟುಕೊಂಡು ಆಟವಾಡುವುದರಿಂದ ಬಹಳಷ್ಟು ಸಮಸ್ಯೆಯಾಗುತ್ತಿದೆ. ವಾಸ್ತವವಾಗಿ ಹೇಳುವುದಾದರೆ, ತಮ್ಮ ಮಗನ ಆನ್‌ಲೈನ್ ಗೇಮ್‌ನ ಸಾಲ ತೀರಿಸಲು ಅಪ್ಪ-ಅಮ್ಮ 83 ಲಕ್ಷ ರೂಪಾಯಿಗೆ ಮನೆಯನ್ನೇ ಮಾರಾಟ ಮಾಡಿರುವ ಘಟನೆಯನ್ನು ನನ್ನ ಕಣ್ಣಾರೆ ನೋಡಿದ್ದೇನೆ. ಈ ಆನ್‌ಲೈನ್ ಗೇಮ್‌ನಿಂದ ಸುಮಾರು ಮಕ್ಕಳು ಮರಣ ಹೊಂದಿದ್ದಾರೆ, ಬಹಳ ದೊಡ್ಡ dangerous game ಎಂದರೆ, ಈ ಆನ್‌ಲೈನ್ ಗೇಮ್ ಆಗಿದೆ. ಹಾಗಾಗಿ ಮೊದಲು ಈ ಆನ್‌ಲೈನ್ ಗೇಮ್ ಅನ್ನು ನಿಲ್ಲುಸುವಂಥ ಕೆಲಸವಾಗಬೇಕು.

(...ಮುಂದು)

(992) 23.09.2021/10.50/ ಎಸ್‌ಕೆ/ಜಿಆರ್

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಕೆ.ಸಿ.ಕೊಂಡಯ್ಯ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕರ್ನಾಟಕ ಪೊಲೀಸು (ತಿದ್ದುಪಡಿ) ವಿಧೇಯಕ, 2021 ನ್ನು ತಂದಿದ್ದಾರೆ. ನಾನು ಎರಡು ವಿಷಯಗಳನ್ನು segregate ಮಾಡುತ್ತೇನೆ. ಮೊದಲನೆಯದಾಗಿ, ಆನ್‌ಲೈನ್ ಗೇಮ್, ಮಟ್ಕಾ, ಇಸ್ಪೀಟು, ಇವುಗಳನ್ನು ban ಮಾಡುವುದಕ್ಕೆ ಸಾಕಷ್ಟು ಕಾನೂನುಗಳಿವೆ. ಈ ಒಂದು ವಿಧೇಯಕ ತಂದಿರುವುದರಲ್ಲಿ ಕೆಲವು ತಿದ್ದುಪಡಿಗಳನ್ನು ತಂದಿದ್ದಾರೆ. ಇದಕ್ಕೆ ಶಿಕ್ಷೆ ಏನು ಎಂಬುದು ಇದೆ. ಈ ಒಂದು ಬೆಂಗಳೂರು I.T., hub ಆಗಿದೆ. ಈ I.T., hub ನಲ್ಲಿ ಸಾಕಷ್ಟು App ಗಳು develop ಆಗುತ್ತದೆ. ಈ ಒಂದು Act ನಿಂದ ಈ App ನ್ನು ಯಾರು ತಯಾರು ಮಾಡುತ್ತಾರೋ, ಅವರ ಮೇಲೆ ಏನಾದರೂ ಕ್ರಮ ತೆಗೆದುಕೊಳ್ಳುತ್ತೀರಾ or encourage ಮಾಡುತ್ತೀರಾ? App ನಲ್ಲಿ ಏನು develop ಮಾಡುತ್ತಾರೋ, ಅದರಲ್ಲಿ ಬೆಟ್ಟಿಂಗ್ ಇರುವುದಿಲ್ಲ. ಅದೊಂದು ಕ್ಲಾರಿಫಿಕೇಷನ್. ಈ ಚಟ ಹೇಗಿದೆ ಎಂದರೆ, ಈಗ ನಾವೆಲ್ಲಾ ನೋಡುತ್ತಿದ್ದೇವೆ. ಮಾನ್ಯ ಪುಟ್ಟಣ್ಣನವರು ಹೇಳಿದ ಹಾಗೆ, ಬೆಟ್ಟಿಂಗ್‌ನಲ್ಲಿ ಕ್ರಿಕೆಟ್‌ನಲ್ಲಿ ಬಾಲ್ ಹೋಗುತ್ತಿದ್ದರೆ, ಒಂದು ಪೇಟಿ, ಅರ್ಧ ಪೇಟಿ ಈ ತರಹದೆಲ್ಲಾ ಇದೆ. ಐ.ಪಿ.ಎಲ್., ಕ್ರಿಕೆಟ್ ಬಂದಾಗ, ಮಾರವಾಡಿಗಳು ಮತ್ತು ಶೆಟ್ಟರು ಅವರು treasury ಅನ್ನು ಲಾಕ್

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಿಕೊಂಡು ಹೋಗಿಬಿಡುತ್ತಾರೆ. ಏಕೆಂದರೆ, ಅವರು ಮಕ್ಕಳು ಅದರಲ್ಲಿರುವ ಹಣವನ್ನು ತೆಗೆದುಕೊಂಡು ಅಲ್ಲಿಗೆ ಹೋಗಿ ಕಟ್ಟುಬಿಡುತ್ತಾರೆ. ಈ ರೀತಿಯಾಗಿ ಬಹಳ ಕಡೆ ಆಗುತ್ತದೆ. ಇದನ್ನು ಕಂಟ್ರೋಲ್‌ಗೆ ತರಬೇಕು. ಇದನ್ನು ಕಂಟ್ರೋಲ್ ತಂದರೆ ಮಾತ್ರ ಆಗುತ್ತದೆ ಹೊರತು, ಇಲ್ಲವಾದರೆ ಆಗುವುದಿಲ್ಲ. ನಾನು ಈ ವಿಧೇಯಕವನ್ನು ಸ್ವಾಗತ ಮಾಡುತ್ತೇನೆ. At the same time, ಈ ದೇಶದ ಪ್ರಧಾನ ಮಂತ್ರಿಯವರೇ ಹೇಳಿದ್ದಾರೆ. Karnataka is one of the Global hubs for the IT Industry. Online gaming is one of the sunrise industries for the Indian IT Industry, as also stated by the Hon'ble Prime Minister of India, generating over 2 Billion Dollars (Rs.15,000 crores) of Revenue and multiples jobs for IT professionals. ಅಂದರೆ, ಈ App ಗಳನ್ನು develop ಮಾಡುವುದರಿಂದ ಮಾನ್ಯ ಪ್ರಧಾನ ಮಂತ್ರಿಗಳು appreciate ಮಾಡಿದ್ದಾರೆ. ಈ App ನಿಂದ ಏನಾಗುತ್ತದೆ ಎಂದರೆ, ಬೆಟ್ಟಿಂಗ್ ನಡೆಯುವುದಿಲ್ಲ. ಅದೊಂದು ತಾವು ಕ್ಲಾರಿಫಿಕೇಷನ್ ಮಾಡಿರಿ ಎಂದು ನಾನು ಹೇಳುತ್ತೇನೆ. ಸಮಯಾವಕಾಶದ ಕೊರತೆಯಿಂದಾಗಿ ನಾನು ಹೇಳಬಯಸುವ ಅಂಶಗಳನ್ನು ನನ್ನ Written Statement ನಲ್ಲಿ ತಮಗೆ submit ಮಾಡುತ್ತೇನೆ. ಸದರಿ ಅಂಶಗಳನ್ನು ನಡವಳಿಯಲ್ಲಿ ದಾಖಲಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:-** ಆಗಬಹುದು.

(ಲಗತ್ತಿಸಲಾಗಿದೆ)

**ಶ್ರೀ ಅರಗ ಜ್ಞಾನೇಂದ್ರ (ಗೃಹ ಸಚಿವರು) (ಗುಪ್ತಚರ ಇಲಾಖೆ ಹೊರತುಪಡಿಸಿ):-** ಮಾನ್ಯ ಸಭಾಪತಿಯವರೇ, ರಾತ್ರಿ ಹನ್ನೊಂದು ಗಂಟೆಗೆ ಆಗುವುದಕ್ಕೆ ಇನ್ನು ಐದು ನಿಮಿಷವಿದ್ದೆ, ಬಹಳ ಸಂತೋಷ. ಒಂದು ಕಾಳಜಿಯಿಂದ ಇಡೀ ಜನ ಸಮುದಾಯದ ಜೀವನದ ಮೇಲೆ ಆತಂಕವಾಗುತ್ತದೆ ಎನ್ನುವ ದೃಷ್ಟಿಯಿಂದ ಇಷ್ಟು ಹೊತ್ತು ತಾಳ್ಮೆಯಿಂದ ಈ ಚರ್ಚೆಯಲ್ಲಿ ಭಾಗವಹಿಸಿರುವಂತಹ ಎಲ್ಲಾ ಮಾನ್ಯ ಶಾಸಕರೆಲ್ಲರಿಗೂ ಧನ್ಯವಾದಗಳನ್ನರ್ಪಿಸುತ್ತೇನೆ. ಇದರ ಜೊತೆಗೆ ತಾವು ಏನೊಂದು ಆತಂಕವನ್ನು ವ್ಯಕ್ತಪಡಿಸಿದಿರಿ. ಕುದುರೆ ರೇಸ್ ಬಗ್ಗೆ ಹೇಳುತ್ತೇನೆ. The Karnataka Rece Courses Licensing Act, 1952, ಈ ಸದನದಲ್ಲಿ ಪಾಸ್ ಮಾಡಿ, ನಾವು ಅವರ ಕೈಗೆ ಕೊಟ್ಟಿದ್ದೇವೆ. ಹಾಗಾಗಿ, ಆ ಒಂದು ಕಾಯಿದೆಗೆ, ಬೇರೆ ತಿದ್ದುಪಡಿ ತರದೇ ಇದ್ದರೆ, ಅಲ್ಲಿ ಏನು ನಿರ್ಬಂಧ ಮಾಡುವುದಕ್ಕಾಗುವುದಿಲ್ಲ. ಹಾಗಾಗಿ ನಾವು ಕುದುರೆ ರೇಸ್‌ನ್ನು ಎಲ್ಲಿಂದ ನಿರ್ಬಂಧ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಬಹುದು ಎಂದರೆ, ಹೊರಗಡೆ ಕುಳಿತುಕೊಂಡು ಅನ್‌ಲೈನ್ ಅದರ ಮೇಲೆ ಬೆಟ್ಟಿಂಗ್ ಮಾಡುತ್ತಿದ್ದಾರೆ. ಅದನ್ನು ನಿರ್ಬಂಧ ಮಾಡಬಹುದೇ ವಿನಃ ಅದರ ಅವರಣದೊಳಗೆ ಹೋಗಿ ಆಡುವವಂತಹವರನ್ನು ನಿರ್ಬಂಧ ಮಾಡುವುದಕ್ಕೆ ಕಷ್ಟವಿದೆ. ಇದರ ಬಗ್ಗೆ ಏನು ಮಾಡಬೇಕು? ಇದನ್ನು ಹೇಗೆ ಮಾಡಬೇಕೆಂಬುದರ ಬಗ್ಗೆ ಯೋಚನೆ ಮಾಡುತ್ತಿದ್ದೇವೆ. Fantasy games ಗಳ ಬಗ್ಗೆ 176 ...

**ಶ್ರೀ ಎಸ್.ಆರ್. ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, is it in favour of horse race?

**ಶ್ರೀ ಅರಗ ಜ್ಞಾನೇಂದ್ರ:-** ಹೌದು.

**ಶ್ರೀ ಎಸ್.ಆರ್. ಪಾಟೀಲ್:-** ಆಮೇಲೆ ಅದಕ್ಕೆ ತಿದ್ದುಪಡಿ ಮಾಡಬೇಕು.

**ಶ್ರೀ ಅರಗ ಜ್ಞಾನೇಂದ್ರ:-** ಆಮೇಲೆ ಅದನ್ನು ನೋಡೋಣ.

**ಶ್ರೀ ಎಸ್.ಆರ್. ಪಾಟೀಲ್:-** ಅದನ್ನು repeal ಮಾಡಿಬಿಡಿ.

**ಶ್ರೀ ಅರಗ ಜ್ಞಾನೇಂದ್ರ:-** ಅದರ ಬಗ್ಗೆ ಯೋಚನೆ ಮಾಡುತ್ತಿದ್ದೇವೆ. Fantasy games ಬಗ್ಗೆ ತುಂಬಾ ಜನ ಸದಸ್ಯರು ಹೇಳಿದ್ದಾರೆ. ಅದೊಂದು skill ಎನ್ನುವಂತಹದ್ದರ ಬಗ್ಗೆ ಎರಡು ಇಲ್ಲವೇ ಇಲ್ಲ. ಆದರೆ ಅದನ್ನು ಜೂಜು ಕಟ್ಟುವುದರ ಬಗ್ಗೆ ಮಾತ್ರ ನಿರ್ಬಂಧವಿದೆ. ಹಣ ಕಟ್ಟಿ Fantasy games ಆಡುವುದರ ಬಗ್ಗೆ ನಿರ್ಬಂಧವಿದೆ. ಅದು ನಿರ್ಬಂಧವಾಗುತ್ತದೆ. ಅದು ಏನೂ ಆಗುವುದಿಲ್ಲ. ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪಗಳಿವೆ ಎಂದು ಅನೇಕ ಜನ ಸದಸ್ಯರು ಹೇಳಿದರು. ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ಹಣದ ವಿಚಾರದ ಬಗ್ಗೆ ಬಂದಿರಲಿಲ್ಲ. ಆ ತೀರ್ಪುಗಳನ್ನು ರೆಫರ್ ಮಾಡಿದ್ದೇವೆ. ಬೇರೆ ಬೇರೆ ತಮಿಳುನಾಡಿನಲ್ಲಿ ಬಿದ್ದು ಹೋಗಿರುವಂತಹದ್ದರ ಬಗ್ಗೆ ಕೂಡ ಯೋಚನೆ ಮಾಡಿದ್ದೇವೆ. ಇದನ್ನು ತರಬೇಕಾದರೆ, ಬಹಳ ಆಲೋಚನೆ ಇದೆ. ಇದು ಹಿಂದಕ್ಕೂ ನಡೆದಿದೆ. ಎಲ್ಲೋ ಕುಳಿತು , ಇದನ್ನು App ಮೂಲಕ ಆಡಿಸುತ್ತಾರೆಂದು ಹೇಳಿ ಹೇಳುತ್ತಾರೆ. ಅದನ್ನು I.T., Act ಪ್ರಕಾರ ಕೇಂದ್ರ ಸರ್ಕಾರಕ್ಕೆ ಬರೆದುಕೊಂಡು ಬ್ಲಾಕ್ ಮಾಡುವುದಕ್ಕೆ ಬರುತ್ತದೆ. ನಮ್ಮ ಏರಿಯಾದದಲ್ಲಿ ಇದು ಬರದೇ ಇದ್ದ ಹಾಗೇ ಮಾಡುವುದಕ್ಕೆ ಖಂಡಿತವಾಗಿಯೂ ಬರುತ್ತದೆ. ನ್ಯಾಯಾಲಯಗಳ ಬಗ್ಗೆ ಬಹಳ ಜನ ಸದಸ್ಯರು ವ್ಯಕ್ತಪಡಿಸಿದರು. ಇದನ್ನೆಲ್ಲಾ ಯೋಚನೆ ಮಾಡಿ ಮಾಡಿದ್ದೇವೆ. ಇದರಿಂದ ನಮ್ಮ ಸಮಾಜದ ನಡುವೆ ಏನೆಲ್ಲಾ ದುಷ್ಕೃತ್ಯವಾಗುತ್ತಿದೆ. ಎಲ್ಲಿ easy money ಇದೆ, ಅಲ್ಲಿ rowdyism ಬೇರೆ ಬೇರೆ ಪ್ರಾರಂಭವಾಗುತ್ತದೆ. ನಮ್ಮದು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಯಾವುದೇ ಕಾಯಿದೆ ಕೂಡ ಅಲ್ಲಿ ಅನ್ವಯಿಸುವುದಿಲ್ಲ. ಇಂತಹ ಪರಿಸ್ಥಿತಿಗೆ ನಾವು ಬಿಡಬೇಕಾ ಅಂತಾ? ಈ ಒಂದು ಸರ್ಕಾರವಾಗಿರುವ ಈ ಒಂದು ಸದನ ನಾವು ಆ ರೀತಿ ಆಲೋಚನೆ ಮಾಡುವುದಕ್ಕೆ ಬಿಡಬೇಕಾ? ನನ್ನ ಕಣ್ಣಿನ ಎದುರುಗಡೆ ಎಷ್ಟೊಂದು ಸಾವು ನೋವುಗಳು ನಡೆದಿದೆ ಎಂಬ ಬಗ್ಗೆ ಶ್ರೀಮತಿ ಭಾರತಿ ಶೆಟ್ಟಿಯವರು ಹೇಳಿದರು. ನನಗೂ ಕೂಡ ಉದಾಹರಣೆಗಳು ಗೊತ್ತಿದೆ. ಈಗಾಗಲೇ ತುಂಬಾ ಸಮಯವಾಗಿದೆ. ನಾನು ಹೆಚ್ಚು ಹೊತ್ತು ಮಾತನಾಡುವುದಕ್ಕೆ ಹೋಗುವುದಿಲ್ಲ. ನಮ್ಮ ಕಾನೂನು ಸಚಿವರು ಹೇಳಿದ ಹಾಗೇ ಒಂದು ಒಳ್ಳೆಯ ಪ್ರಯೋಗವನ್ನು ಮಾಡುತ್ತಿದ್ದೇವೆ. ಇದು ಏನಾಗುತ್ತದೆ ಎಂಬುದರ ಬಗ್ಗೆ ಆಲೋಚನೆ ಮಾಡೋಣ. ಅದರಲ್ಲಿ ಬದಲಾವಣೆ ಏನು ಮಾಡಬೇಕು, ಅದನ್ನು ಮತ್ತೆ ಮಾಡೋಣ. ಆದರೆ ತತ್‌ಕ್ಷಣ ಈ ಕಾಯಿದೆಯನ್ನು ತರುವ ಅವಶ್ಯಕತೆ ಇದೆ. ಆದ್ದರಿಂದ, ಈ ವಿಧೇಯಕವನ್ನು ತಂದಿದ್ದೇವೆ. ದಯವಿಟ್ಟು, ಈ ವಿಧೇಯಕವನ್ನು ಅಂಗೀಕರಿಸಬೇಕೆಂದು ಮಾನ್ಯ ಸಭಾಪತಿಯವರಿಗೆ ಕೇಳಿಕೊಳ್ಳುತ್ತೇನೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

"ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2021ರ ಕರ್ನಾಟಕ ಪೊಲೀಸು (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

**<u>ಪ್ರಸ್ತಾವ ಅಂಗೀಕರಿಸಲ್ಪಟ್ಟಿತು</u>**

ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು

**<u>ಖಂಡ 2 ರಿಂದ 9 ರವರೆಗೆ</u>**

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

"ಖಂಡ 2 ರಿಂದ 9 ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ."

**<u>ಪ್ರಸ್ತಾವ ಅಂಗೀಕರಿಸಲ್ಪಟ್ಟಿತು</u>**

**(ಖಂಡ 2 ರಿಂದ 9 ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಖಂಡ-1 ಇತ್ಯಾದಿ**

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

" ಮೊದಲನೆಯ ಖಂಡ, ದೀರ್ಘ, ಶೀರ್ಷಿಕೆ, ಪ್ರಸ್ತಾವನೆ
ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ
ವಿಧೇಯಕದ ಭಾಗವಾಗಿರುತ್ತದೆ "

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಮೊದಲನೆಯ ಖಂಡ, ದೀರ್ಘ, ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಪ್ರಸ್ತಾವದ ಅಂಗೀಕಾರ**

**ಶ್ರೀ ಅರಗ ಜ್ಞಾನೇಂದ್ರ (ಗೃಹ ಸಚಿವರು (ಗುಪ್ತಚಾರ ಹೊರತುಪಡಿಸಿ):-** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2021ರ ಕರ್ನಾಟಕ ಪೊಲೀಸು (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

" ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2021ರ ಕರ್ನಾಟಕ ಪೊಲೀಸು (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಹಾಗೂ ಮಸೂದೆಗೆ ಒಪ್ಪಿಗೆ ನೀಡಲಾಯಿತು**

**17. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯಲ್ಲಿ ಕುಡಿಯುವ ನೀರು ಮತ್ತು ನೈರ್ಮಲ್ಯ ಕಾರ್ಯಕ್ರಮಕ್ಕೆ ಬಿಡುಗಡೆಯಾದ ಹಣವನ್ನು ಅವ್ಯವಹಾರ ಮಾಡಿರುವ ಸಂಬಂಧ ಪರಿಶೀಲಿನಾ ಸಮಿತಿಯ ಕಾಲವಧಿ ವಿಸ್ತರಣೆ**

**ಸಭಾಪತಿಯವರು:-** ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯಲ್ಲಿ ಕುಡಿಯುವ ನೀರು ಮತ್ತು ನೈರ್ಮಲ್ಯ ಕಾರ್ಯಕ್ರಮಕ್ಕೆ ಬಿಡುಗಡೆಯಾದ ಹಣವನ್ನು ಅವ್ಯವಹಾರ ಮಾಡಿರುವ ಸಂಬಂಧ ಪರಿಶೀಲಿಸಿ ವರದಿಯನ್ನು ನೀಡಲು ರಚಿಸಲಾಗಿರುವ ವಿಶೇಷ ಸದನ ಸಮಿತಿಯ ಅವಧಿಯನ್ನು ದಿನಾಂಕ 21.06.2021 ರಿಂದ ಆರು ತಿಂಗಳವರೆಗೆ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸದನದ ಸಹಮತಿಯನ್ನು ಕಾಯ್ದಿರಿಸಿ ವಿಸ್ತರಿಸಲಾಗಿದ್ದು, ಇದಕ್ಕೆ ಸದನದ ಸಹಮತಿ ಇದೆಯೆಂದು ಭಾವಿಸುತ್ತೇನೆ.

**18.ಪ್ರಕಟಣೆ**

ದಿನಾಂಕ 24.09.2021 ರಂದು ಮಧ್ಯಾಹ್ನ 02.30 ಗಂಟೆಗೆ ವಿಧಾನಸಭೆಯ ಸಭಾಂಗಣದಲ್ಲಿ ಲೋಕಸಭೆಯ ಮಾನ್ಯ ಸಭಾಧ್ಯಕ್ಷರಾದ ಶ್ರೀ ಓಂ ಬಿರ್ಲಾ ಅವರು "ಪ್ರಜಾಪ್ರಭುತ್ವ ಸಂಸದೀಯ ಮೌಲ್ಯಗಳ ರಕ್ಷಣೆ" ಕುರಿತು ಉಭಯ ಸದನಗಳ ಸದಸ್ಯರುಗಳನ್ನು ಉದ್ದೇಶಿಸಿ ಪ್ರಧಾನ ಭಾಷಣ ಮಾಡಲಿದ್ದಾರೆಂದು ಈಗಾಗಲೇ ದಿನಾಂಕ 16.09.2021 ಮತ್ತು 20.09.2021 ರಂದು ಸದನದ ಗಮನಕ್ಕೆ ತರಲಾಗಿದೆ. ಈ ಹಿನ್ನಲೆಯಲ್ಲಿ ನಾಳೆ ಮಧ್ಯಾಹ್ನ 01.00 ಗಂಟೆಗೆ ವಿಧಾನ ಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಮಾನ್ಯ ಶಾಸಕರುಗಳಿಗೆ ಭೋಜನದ ವ್ಯವಸ್ಥೆ ಮಾಡಲಾಗಿರುತ್ತದೆ.

ಮಾನ್ಯ ಸದಸ್ಯರುಗಳೆಲ್ಲರೂ ನಾಳೆ ದಿನಾಂಕ 24.09.2021 ರಂದು ಮಧ್ಯಾಹ್ನ 02.30ಕ್ಕೆ ವಿಧಾನಸಭೆಯ ಸಭಾಂಗಣದಲ್ಲಿ ನಡೆಯಲಿರುವ ಸಭೆಯಲ್ಲಿ ಭಾಗವಹಿಸಬೇಕೆಂದು ಈ ಮೂಲಕ ತಿಳಿಸಲಾಗಿದೆ.

**19. ಶಾಸನ ರಚನೆ**

**ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ**

**ಎ) ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ಶಿಕ್ಷಕರ ವರ್ಗಾವಣೆ ನಿಯಂತ್ರಣ) (ತಿದ್ದುಪಡಿ) ವಿಧೇಯಕ, 2021**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಬಿ.ಸಿ.ನಾಗೇಶ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು):-** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2021ನೇ ಸಾಲಿನ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ಶಿಕ್ಷಕರ ವರ್ಗಾವಣೆ ನಿಯಂತ್ರಣ) (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಿ.ಸಿ.ನಾಗೇಶ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು):-** ಮಾನ್ಯ ಸಭಾಪತಿಯವರೇ, 2019-2020 ರಲ್ಲಿ ಕಡ್ಡಾಯ ವರ್ಗಾವಣೆಯಲ್ಲಿ ಅನೇಕ ಶಿಕ್ಷಕರಿಗೆ ತೊಂದರೆಯಾಗಿತ್ತು. ಆ ವರ್ಗಾವಣೆಯಲ್ಲಿ ಅನೇಕ ಶಿಕ್ಷಕರಿಗೆ exemption ಇಲ್ಲದೇ ಇರುವ ಕಾರಣಕ್ಕೋಸ್ಕರ ತೊಂದರೆಯಾಗಿತ್ತು.

(ಮುಂದು)

(993) 23.09.2021, ರಾತ್ರಿ 11.00, ಟಿಸಿಹೆಚ್-ಜಿಆರ್ **(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಬಿ.ಸಿ.ನಾಗೇಶ್ (ಮುಂದು):-**

ವಯಸ್ಸಾದ ಶಿಕ್ಷಕರಿಗೆ, ಅಂಗವಿಕಲ ಮಕ್ಕಳಿರುವ ತಾಯಂದಿರಿಗೆ ತಾಲ್ಲೂಕಿನಿಂದ ಹೊರಗೆ ಹೋದಂಥ ಶಿಕ್ಷಕರಿಗೆ ಅಥವಾ ಒಂದು ಜಿಲ್ಲೆಯಿಂದ ಬೇರೆ ಜಿಲ್ಲೆಗೆ ಹೋದಂಥ ಪ್ರೌಢಶಾಲೆ ಶಿಕ್ಷಕರಿಗೆ ತೊಂದರೆಯಾಗಿತ್ತು. ಅದಕ್ಕೋಸ್ಕರವಾಗಿ ಒಮ್ಮೆ ಅವರವರ ಜಿಲ್ಲೆಗಳಿಗೆ ಅಥವಾ ತಾಲ್ಲೂಕಿನೊಳಗೆ ವಾಪಸ್ಸು ಬರುವುದಕ್ಕೋಸ್ಕರ ಆ ಆರ್ಡಿನೆನ್ಸ್‌ನ್ನು ರೀಪ್ಲೇಸ್ ಮಾಡುವುದಕ್ಕೋಸ್ಕರ ಈ ವಿಧೇಯಕವನ್ನು ತಂದಿದ್ದೇವೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ನಾನು ಖಂಡಿವಾಗಿಯು ಲಂಬಿಸಿ ಮಾತನಾಡುವುದಿಲ್ಲ. ನಾವು ತಮ್ಮ ಸಮಕ್ಷಮದಲ್ಲಿ ನಾಲ್ಕಾರು ಸಭೆಗಳನ್ನು ಮಾಡಿದ್ದೇವೆ. ನಾವು ಒಂದು ಬಾರಿ ಹೆಚ್ಚುವರಿ ಮತ್ತು ಕಡ್ಡಾಯ ವರ್ಗಾವಣೆಗೆ ಕ್ರಮವಹಿಸಲು ಕೇಳಿದ್ದೆವು. ಆದರೆ ಈ ವಿಧೇಯಕದಲ್ಲಿ ಕಡ್ಡಾಯ ವರ್ಗಾವಣೆಗೆ ಮಾತ್ರ ಅವಕಾಶ ಮಾಡಿಕೊಟ್ಟಿದ್ದಾರೆ. ಆದರೆ ಹೆಚ್ಚುವರಿಯುವರನ್ನು ಕೈಬಿಟ್ಟಿದ್ದೀರಿ ಏಕೆ? ಕಡ್ಡಾಯದ ಪ್ರಕಾರ ಒಂದು ಜಿಲ್ಲೆಯಿಂದ ದೂರದ ಜಿಲ್ಲೆಗಳಿಗೆ ಹೋಗಿದ್ದಾರೆ. ಉದಾಹರಣೆಗೆ ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕಿನ ಒಬ್ಬರು ಶಿಕ್ಷಕರು ದಕ್ಷಿಣ ಕನ್ನಡದ ಜಿಲ್ಲೆಯ ಉಡುಪಿ ಜಿಲ್ಲೆಗೆ ಹೋಗಿದ್ದಾರೆ. ನೀವು ಅವರನ್ನೂ ವಾಪಸ್ಸು ಕರೆಸಬೇಕಲ್ಲವೇ? ಅವರನ್ನು ವಾಪಸ್ಸು ಕರೆಸಿಕೊಳ್ಳುವುದಕ್ಕೆ ಸಮ್ಮತಿ ಕೊಟ್ಟಿದ್ದೀರಿ. ಆದರೆ ಈ ಬಿಲ್‌ನಲ್ಲಿ ಏಕೆ ಸೇರಿಸಿಲ್ಲ? ಒಂದು ವೇಳೆ ಗೌರವಾನ್ವಿತ ರಾಜ್ಯಪಾಲರ ಸುಗ್ರೀವಾಜ್ಞೆಯಲ್ಲಿ ಸೇರದಿದ್ದರೂ ಕೂಡ ಕಡ್ಡಾಯದವರ ಜೊತೆಗೆ ಒಂದು ಬಾರಿ ಹೆಚ್ಚುವರಿಯವರನ್ನೂ ಸೇರಿಸಬೇಕಲ್ಲವೇ? ಅದಕ್ಕೆ ಅವಕಾಶ ಮಾಡಿಕೊಟ್ಟರೆ ನಮ್ಮದು ಕೂಡ ಸ್ವಾಗತ ಇದೆ. ಅದಕ್ಕೆ ಸರ್ಕಾರ ಅವಕಾಶ ಮಾಡಿಕೊಡಬೇಕು. It is one and the same case. ಹೆಚ್ಚುರಿಯವರಿಯಿಂದಲೂ ಆಚೆಗೆ ಹೋಗಿದ್ದಾರೆ, ಕಡ್ಡಾಯದಿಂದಲೂ ಆಚೆಗೆ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೋಗಿದ್ದಾರೆ. ಅವರು ಕೂಡ ಅವರ ತಾಲ್ಲೂಕು ಮತ್ತು ಜಿಲ್ಲೆಗಳಿಗೆ ಬರಬೇಕು ಅಷ್ಟೇ. ದಯಮಾಡಿ ಅದೊಂದು ಸೇರಿಸಿದರೆ ನಮ್ಮದು ಓಕೆ, ಅಡ್ಡಿ ಇಲ್ಲ.

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ರಾಜ್ಯದಲ್ಲಿ ಈ ವಿಧೇಯಕವನ್ನು ಮೊಟ್ಟಮೊದಲು ತಂದಾಗ ಏಪ್ರಿಲ್ ೧೩ ರಂದು ಬೆಳಗಿನ ಜಾವ ೩ ಗಂಟೆ ೧೫ ನಿಮಿಷಗಳು ಆಗಿತ್ತು. ಮಾನ್ಯ ಸಭಾಪತಿಯವರು ಆಗ ಶಿಕ್ಷಣ ಸಚಿವರಾಗಿದ್ದರು. ಅವೊತ್ತು ತಾವು ಈ ರಾಷ್ಟ್ರಕ್ಕೆ ಒಂದು ಮಾದರಿಯಾದಂಥ ವಿಧೇಯಕವನ್ನು ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಈ ವರ್ಗಾವಣೆ ಮಸೂದೆಯನ್ನು ಜಾರಿಗೆ ತಂದಿದ್ದೀರಿ. ಇತ್ತೀಚೆಗೆ ಬೇರೆ ರಾಜ್ಯಗಳು ಕೂಡ ಅದನ್ನು ಅನುಸರಿಸುತ್ತಿವೆ. ಆದರೆ ಇತ್ತೀಚೆಗೆ ಕಳೆದೆರಡು ತಿದ್ದುಪಡಿಗಳಿಂದಾಗಿ ಬಾರಿ ಗೊಂದಲಗಳಾಗಿದೆ. ಮತ್ತೆ ಕೋವಿಡ್-೧೯ ನಿಂದಾಗಿ ಕಳೆದ ನಾಲ್ಕು ವರ್ಷಗಳಿಂದ ವರ್ಗಾವಣೆಯಾಗಲಿಲ್ಲ. ಇದರ ಜೊತೆಗೆ ಈಗ ವಿಧೇಯಕದಲ್ಲಿ ಶೇ.೨೫ ರಷ್ಟು ಹುದ್ದೆಗಳು ಎಲ್ಲೆಲ್ಲಿ ಖಾಲಿ ಇದೆಯೋ ಆ ಜಿಲ್ಲೆಗಳಲ್ಲಿ ವರ್ಗಾವಣೆಯೇ ಇಲ್ಲವೆಂದು ಹೇಳಿದ್ದಾರೆ. ಮತ್ತೆ ಹೈದ್ರಾಬಾದ್ ಕರ್ನಾಟಕ ಕಾಯ್ದೆ ಜಾರಿಗೆ ತಂದಾಗ ಅಲ್ಲಿ ಯಾರ್ಯಾರು ನೇಮಕಗೊಂಡಿದ್ದಾರೋ ಅವರನ್ನು ೧೦ ವರ್ಷಗಳ ಕಾಲ ಹೊರಗಡೆಗೆ ಬಿಡುವುದಿಲ್ಲವೆಂದು ಮಾಡಿದ್ದಾರೆ. ಇಂತಹ ಕಡೆಗಳಲ್ಲಿ ಇರತಕ್ಕಂಥ ಶಿಕ್ಷಕರೆಲ್ಲರೂ ಕೂಡ ಬಹಳ ದೊಡ್ಡ ಶೋಷಣೆಗೆ ಒಳಗಾಗಿದ್ದಾರೆ. ಅವರ ಜೀವಿತ ಅವಧಿಯಲ್ಲಿ ಅಂದರೆ ಸೇವಾವಧಿಯಲ್ಲಿ ಒಂದು ಬಾರಿಯು ಕೂಡ ವರ್ಗಾವಣೆ ಸಿಗದೇ ಇರತಕ್ಕಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಕೆಲವರಿಗೆ ಶಿಕ್ಷಕರಿಗೆ ಮದುವೆಯಾಗಿಲ್ಲ, ಕೆಲವು ಶಿಕ್ಷಕರಿಗೆ ಮದುವೆಯಾಗಿದೆ. ವಿವಾಹ ವಿಚ್ಛೇದನ ಇದೆಲ್ಲಾ ಆಗಿಹೋಯಿತು. ಅವರು ನರಕಯಾತನೆ ಅನುಭವಿಸುತ್ತಿದ್ದಾರೆ. ಅದಕ್ಕೆ ದಯಮಾಡಿ ಎಲ್ಲೆಲ್ಲಿ ಶೇ.೨೫ ರಷ್ಟು ಹುದ್ದೆಗಳು ಖಾಲಿ ಇದೆಯೋ ಅಲ್ಲಿ ಕೊನೆಪಕ್ಷ ಅವರನ್ನು ಬಿಡುಗಡೆಗೊಳಿಸಿ. ಇಲ್ಲವೆಂದರೆ, ಆ ಹುದ್ದೆಗಳನ್ನಾದರೂ ಕೂಡ ತುಂಬತಕ್ಕಂಥ ಕೆಲಸವನ್ನು ಕೂಡಲೇ ಮಾಡಬೇಕು. ಅಲ್ಲಿರತಕ್ಕಂಥವರಿಗೆ ಕಾಯ್ದೆ ಪ್ರಕಾರ ವರ್ಗಾವಣೆ ಮಾಡಿ ಮುಕ್ತಿ ಕೊಡಬೇಕು. ಮತ್ತೆ ಮಾನ್ಯ ಕೆ.ಟಿ.ಶ್ರೀಕಂಠೇಗೌಡರವರು ಹೇಳಿದಂತೆ, ಹೆಚ್ಚುವರಿ, ಕಡ್ಡಾಯ ಈ ಇಬ್ಬರಿಗೂ ಕೂಡ ನಾವು ಒಮ್ಮೆ ವಿಶೇಷವಾಗಿ ವಾಪಸ್ಸು ತರುತ್ತೇವೆ ಎನ್ನುತಕ್ಕಂಥದ್ದು ಚರ್ಚೆಯಲ್ಲಿ ಪೂರ್ಣಗೊಂಡಿದೆ. ಆದರೆ ಇಲ್ಲಿ ಕಡ್ಡಾಯದವರಿಗೆ ಮಾತ್ರ ತಂದಿದ್ದೀರಿ. ಹೆಚ್ಚುವರಿಯವರಿಗೂ ಕೂಡ ತುಂಬಾ ಅನ್ಯಾಯವಾಗುತ್ತದೆ. ಇದರಲ್ಲಿ ಹೆಚ್ಚುವರಿಯವರನ್ನೂ ಕೂಡ ಸೇರಿಸಬೇಕು. ಮಾನ್ಯ ಸಭಾಪತಿಯವರೇ, ಮತ್ತೊಂದು ವಿಚಾರ ಏನೆಂದರೆ, ಇದರಲ್ಲಿ ಜಿಲ್ಲೆಯಿಂದ ಜಿಲ್ಲೆಗೆ ಹೋಗಿರತಕ್ಕಂಥವರು, ತಾಲ್ಲೂಕಿನಿಂದ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತಾಲ್ಲೋಕಿಗೆ ಹೋಗಿರುವವರಿಗೆ ಮಾತ್ರ ಅವಕಾಶ ಕೊಟ್ಟಿದ್ದೀರಿ. ದಯಮಾಡಿ ಜಿಲ್ಲೆಯೊಳಗಡೆಯೇ ಕಡ್ಡಾಯ ವರ್ಗಾವಣೆ ಯಾರಿಗೆ ಆಗಿದೆ, ಅವರಿಗೂ ಕೂಡ ಅವಕಾಶ ಮಾಡಿಕೊಡಬೇಕು. ಆದರೆ ಇಲ್ಲಿ ಯಾರಿಗೂ ಅವಕಾಶ ಕೊಟ್ಟಿಲ್ಲ. ಹೆಚ್ಚುವರಿಯವರಿಗೆ ಅವಕಾಶ ಕೊಡಬೇಕು ಮತ್ತು within the ಜಿಲ್ಲೆಯಲ್ಲಿ ಕಡ್ಡಾಯ ವರ್ಗಾವಣೆಯಾಗಿರತಕ್ಕಂಥವರಿಗೂ ಕೂಡ ಅವಕಾಶ ಕೊಡಬೇಕೆಂದು ನಾನು ಮಾನ್ಯ ಸಭಾಪತಿಯವರ ಮೂಲಕ ಮಾನ್ಯ ಸಚಿವರಿಗೆ ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

**ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಶಿಕ್ಷಣ ಸಚಿವರ ಜೊತೆ ಅಧಿಕಾರಿಗಳು ಸೇರಿದಂತೆ ನಾವೆಲ್ಲಾ 14 ಜನ ಸದಸ್ಯರುಗಳು ಸಭೆ ನಡೆಸಿದ್ದೇವೆ. ಇಲ್ಲಿ ಅಧಿಕಾರಿಗಳು ಕೇಳಿಸಿಕೊಳ್ಳುತ್ತಿದ್ದಾರೆ. ದಯಮಾಡಿ ಸರ್ಕಾರವನ್ನೇಕೆ ದಾರಿತಪ್ಪಿಸುತ್ತಾರೋ ಗೊತ್ತಿಲ್ಲ. ಸರ್ಕಾರ ತಾಲ್ಲೂಕಿನಿಂದ ತಾಲ್ಲೂಕಿಗೆ ಹೆಚ್ಚುವರಿಯವರಿಗೆ ಒಮ್ಮೆ ಒಂದು ಬಾರಿ ವರ್ಗಾವಣೆ ಮಾಡುತ್ತೇವೆಂದು ಮಾತು ಕೊಟ್ಟಿದೆ. ಈ ಹಿಂದಿನ ಸಚಿವರು ಮಾತು ಕೊಟ್ಟಿರಬಹುದು ಅಥವಾ ತಾವೇ ಇರಬಹುದು. ಸಚಿವರೆಲ್ಲರೂ ಒಂದೆ. ಆದರೆ ಹೆಚ್ಚುವರಿಯವರಿಗೆ ಏನಾದರೂ ಮಾಡಿ ವಾಪಸ್ಸು ಕರೆಸಿಕೊಳ್ಳಿ. They are very few. ಒಂದೊಂದು ಜಿಲ್ಲೆಯಲ್ಲಿ ಗರಿಷ್ಟ 10 ರಿಂದ 12 ಜನ ಶಿಕ್ಷಕರು ಸಿಗಬಹುದು. ಅವರು ಸಫರ್ ಆಗುವುದು ಬೇಡ. ಮಾನ್ಯ ಸಚಿವರೇ, ದಯವಿಟ್ಟು ನಾನು ಹೇಳುವುದನ್ನು ಕೇಳಿಸಿಕೊಳ್ಳಬೇಕು. ಈಗ ಪತಿ-ಪತ್ನಿ ಪ್ರಕರಣದಲ್ಲಿ ತಾಲ್ಲೂಕಿನಿಂದ ತಾಲ್ಲೂಕಿಗೆ ಬರುತ್ತಾರೆ. ಒಂದು ವೇಳೆ ಅವರಿಗೆ ತಾಲ್ಲೂಕಿನಲ್ಲಿ ಖಾಲಿ ಇಲ್ಲದಿದ್ದರೆ, ಪಕ್ಕದ ತಾಲ್ಲೂಕಿಗೆ ವರ್ಗಾವಣೆ ಕೊಡಿ. ಆ ಪಕ್ಕದ ತಾಲ್ಲೂಕಿನಲ್ಲೂ ಖಾಲಿ ಇಲ್ಲವೆಂದರೆ, ಇನ್ನೊಂದು ಪಕ್ಕದ ತಾಲ್ಲೂಕಿಗೆ ವರ್ಗಾವಣೆ ಕೊಡಿ. ಕೊನೆಪಕ್ಷ ಆ ಜಿಲ್ಲೆಯಲ್ಲಿ ಎಲ್ಲಾದರೂ ಒಂದು ಕಡೆ ವರ್ಗಾವಣೆ ಮಾಡಿ. ಇದಕ್ಕೆ ಈ ವಿಧೇಯಕದಲ್ಲಿ ಅವಕಾಶ ಮಾಡಿಲ್ಲ. ಒಂದು ವೇಳೆ ತಾಲ್ಲೂಕಿನಲ್ಲಿ ಎಲ್ಲೂ ಖಾಲಿ ಇಲ್ಲದಿದ್ದರೆ ಅವನು ಮತ್ತೆ ಅಲ್ಲೇ ಇರಬೇಕಾಗುತ್ತದೆ. ಈ ವಿಚಾರ ಬಹಳ ಗಂಭೀರವಾಗಿದೆ. ಮಾನ್ಯ ಸಚಿವರಿಗೆ ಗೊತ್ತಾಯಿತಲ್ಲವೆ? ಉದಾಹರಣೆಗೆ ಈಗ ನಾನು ತಾಲ್ಲೂಕಿನಿಂದ ತಾಲ್ಲೂಕಿಗೆ ಬರಬೇಕಿದೆ. ನನ್ನ ಹೆಂಡತಿ ಇನ್ನೊಂದು ತಾಲ್ಲೂಕಿನಲ್ಲಿ ಶಿಕ್ಷಕಿಯಾಗಿರುತ್ತಾರೆ, ನಾನು ಆ ತಾಲ್ಲೂಕಿಗೆ ಬರಬೇಕಿದೆ. ಇಲ್ಲವೇ ನನ್ನ ಹೆಂಡತಿ ನಾನು ಇರತಕ್ಕಂಥ ತಾಲ್ಲೂಕಿಗೆ ವರ್ಗಾವಣೆಯಾಗಿ ಬರಬೇಕು. ಆ ಸಯಮದಲ್ಲಿ ಒಂದೇ ತಾಲ್ಲೂಕಿನಲ್ಲಿ ಎಲ್ಲೂ ಖಾಲಿ ಇಲ್ಲದಿದ್ದರೆ ಪಕ್ಕದ ತಾಲ್ಲೂಕಿಗೆ ವರ್ಗಾವಣೆ ಕೊಡಿ. ಇಲ್ಲವೆಂದರೆ ಆ ಜಿಲ್ಲೆಯಲ್ಲೇ ಎಲ್ಲಾದರೂ ವರ್ಗಾವಣೆ ಕೊಡಿ. ಮಾನ್ಯ ಸಚಿವರೇ ಇದನ್ನು ದಯವಿಟ್ಟು ಮಾಡಬೇಕು. ಕಡ್ಡಾಯ ವರ್ಗಾವಣೆ ವಾಪಸ್ಸು ತರಬೇಕು. ತಾಲ್ಲೂಕಿನಲ್ಲಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎಲ್ಲೂ ಖಾಲಿ ಇಲ್ಲದಿದ್ದರೆ, ಅದೇ ಜಿಲ್ಲೆಯಲ್ಲಿ ಎಲ್ಲಾದರೂ ಒಂದು ಕಡೆ ವರ್ಗಾವಣೆ ಮಾಡಿಕೊಡಿ. ಇಷ್ಟು ಮಾಡಿದರೆ ಸರಿಯಾಗುತ್ತದೆ.

**ಶ್ರೀ ಶಶೀಲ್ ಜಿ.ನಮೋಶಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕಡ್ಡಾಯದ್ವರ ಜೊತೆಗೆ ಮಾನ್ಯ ಸಚಿವರು ಹೆಚ್ಚುವರಿಯವರನ್ನು ವರ್ಗಾವಣೆ ಮಾಡಬೇಕು. ಹಿಂದಿನ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರಾದ ಮಾನ್ಯ ಸುರೇಶ್ ಕುಮಾರ್ ರವರ ಜೊತೆ ಇದರ ಬಗ್ಗೆ ಸಾಕಷ್ಟು ಬಾರಿ ಚರ್ಚೆ ಮಾಡಿದ್ದೇವೆ. ಈಗಿನ ಶಿಕ್ಷಣ ಸಚಿವರ ನೇತೃತ್ವದಲ್ಲೂ ಕೂಡ ಚರ್ಚೆ ಮಾಡಿದ್ದೇವೆ. ಒಂದು ಹಂತದಲ್ಲಿ ನಾವೆಲ್ಲಾ ನಿರ್ಣಯವನ್ನೂ ಕೂಡ ತೆಗೆದುಕೊಂಡಿದ್ದೆವು. ಆದರೆ ಏಕೆ ಮಾನ್ಯ ಸಚಿವರು ಕೈಬಿಟ್ಟಿದ್ದಾರೋ ಗೊತ್ತಿಲ್ಲ. ಅದನ್ನೂ ಕೂಡ ಸೇರಿಸಬೇಕೆಂದು ವಿನಂತಿ ಮಾಡುತ್ತೇನೆ. ಈಗ ಕೆಲವೊಂದು ದೊಡ್ಡ ದೊಡ್ಡ ಜಿಲ್ಲೆಗಳಿವೆ, ಶಿಕ್ಷಕರು ಸುಮಾರು 150 ಕಿ.ಮೀ ದೂರದಲ್ಲಿ ಇದ್ದಾರೆ. ಆ ರೀತಿ ಅದೇ ಜಿಲ್ಲೆಯಲ್ಲಿರತಕ್ಕಂಥವನ್ನು ವರ್ಗಾವಣೆ ಮಾಡುವುದಿಲ್ಲವೆಂದರೆ ಸರಿಯಾಗುವುದಿಲ್ಲ. ಅದು ತಾಲ್ಲೂಕು ಆಗಿರಲಿ ಅಥವಾ ಜಿಲ್ಲೆಯಾಗಿರಲಿ ಎರಡನ್ನೂ ಪರಿಗಣಿಸಬೇಕೆಂದು ನಾನು ಮಾನ್ಯ ಸಚಿವರಿಗೆ ಒತ್ತಾಯ ಮಾಡುತ್ತಿದ್ದೇನೆ. ಇದರ ಜೊತೆಗೆ Excess Teachers 2016-17, 2017-18ರಲ್ಲಿ ಪಿ.ಯು ಕಾಲೇಜ್‌ನಲ್ಲೂ ಕೂಡ ಇದ್ದಾರೆ. ಅವರು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣದವರಿಗಷ್ಟೇ ಕೊಡುತ್ತಿದ್ದೀರಿ, ನಮ್ಮನ್ನೇಕೆ ಕೈಬಿಟ್ಟಿದ್ದೀರಿ? ನಮ್ಮನ್ನೂ ಕೂಡ consider ಮಾಡಿ ಎಂದು ಹೇಳುತ್ತಿದ್ದಾರೆ. ಈ ರೀತಿ ಇದ್ದಾಗ ಕಡ್ಡಾಯ ಮತ್ತು ಹೆಚ್ಚುವರಿ ಇವೆರೆಡನ್ನೂ ಮಾನ್ಯ ಸಚಿವರು ಗಣನೆಗೆ ತೆಗೆದುಕೊಳ್ಳಬೇಕೆಂದು ಕೇಳುತ್ತಿದ್ದೇನೆ. ಏಕೆಂದರೆ ಈಗಾಗಲೇ ಒಂದು ಹಂತದಲ್ಲಿ ಅನೇಕ ಬಾರಿ ಚರ್ಚೆಯಾಗಿದೆ. ಆದರೆ ಸನ್ಮಾನ್ಯ ಸಚಿವರಾದ ಮಾನ್ಯ ಬಿ.ಸಿ.ನಾಗೇಶ್‌ರವರು ಎರಡು ತಿಂಗಳಿನಿಂದ ಸಚಿವರಾಗಿದ್ದೀರಿ, ದಯವಿಟ್ಟು ಹಿಂದಿನ ಅಧಿಕಾರಿಗಳು ಇದರ ಬಗ್ಗೆ ಏನು ನಿರ್ಣಯ ತೆಗೆದುಕೊಂಡಿದ್ದಾರೋ, ಅದನ್ನೇ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತಿದ್ದೇನೆ.

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ಪ್ರಪ್ರಥಮವಾಗಿ ವರ್ಗಾವಣೆ ಎನ್ನುವಂಥದ್ದು ಶಿಕ್ಷಕರಿಗೆ ಒಂದು ರೀತಿ ಮರೀಚಿಕೆಯಾಗಿದೆ. ಆದಷ್ಟು ಬೇಗ ವರ್ಗಾವಣೆಯನ್ನು ಕಲ್ಪಿಸುವುದರ ಮೂಲಕ ಅವರಿಗೆ ಅವಕಾಶ ಮಾಡಿಕೊಡಬೇಕೆಂದು ಕೋರುತ್ತೇನೆ. ಎರಡನೆಯದಾಗಿ, ಇದನ್ನು ಸುಗ್ರೀವಾಜ್ಞೆ ratify ಮಾಡಿಕೊಳ್ಳುವುದಕ್ಕೋಸ್ಕರ ತಂದಿದ್ದಾರೆ. ಆದರೆ . . .

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಜೆ.ಸಿ.ಮಾಧುಸ್ವಾಮಿ (ಸಣ್ಣ ನೀರಾವರಿ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):-** ಮಾನ್ಯ ಸಭಾಪತಿಯವರೇ, ಈ ವಿಧೇಯಕದ Statement of objects and reasons ನಲ್ಲಿ "…..for conducting rationalisation (excess)/compulsory transfer of teachers …." ಎಂದು ಹೇಳಿದ್ದೇವೆ.

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇದೆ. It is there.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, "…..(excess)/compulsory transfer of teachers …." ಎಂದು ಹೇಳಿದ್ದೇವೆ.

**ಶ್ರೀ ಅರುಣ ಶಹಾಪುರ:-** ಮಾನ್ಯ ಸಭಾಪತಿಯವರೇ; ಮಾನ್ಯ ಶ್ರೀಕಂಠೇಗೌಡರವರೇ, ಇಂಗ್ಲಿಷ್‌ನಲ್ಲಿ ಪ್ರಿಂಟ್ ಆಗಿರುವ ಬಿಲ್‌ನ್ನು ನೋಡಿ.

**ಸಭಾಪತಿಯವರು:-** ಹೌದು, ಇದೆ. ಮಾನ್ಯ ಅರುಣ ಶಹಾಪುರ ರವರೇ ತಾವು ಮುಂದುವರೆಸಿ.

**ಶ್ರೀ ಅರುಣ ಶಹಾಪುರ**:- ಮಾನ್ಯ ಸಭಾಪತಿಯವರೇ, ಆ ಹಿನ್ನೆಲೆಯಲ್ಲಿ ಶಿಕ್ಷಕರಿಗೆ ಕಳೆದ ಮೂರು ವರ್ಷಗಳಿಂದ ವರ್ಗಾವಣೆ ಸಿಗುತ್ತಿಲ್ಲವೆಂದು ಬಹಳ ದೊಡ್ಡ ಹತಾಶೆಯಲ್ಲಿದ್ದಾರೆ. ಗ್ರಾಮೀಣ ಶಿಕ್ಷಕರಿಗೆ ಸಮಸ್ಯೆ ಇದೆ. ಕಲ್ಯಾಣ ಕರ್ನಾಟಕ ಭಾಗದಲ್ಲಿ ಶಿಕ್ಷಕರಿಗೆ ಶೇ.25 ಕ್ಕಿಂತ ಹೆಚ್ಚು ಹುದ್ದೆಗಳು ಖಾಲಿ ಇದ್ದು, ಅವರು ತಾಲ್ಲೂಕಿನಿಂದ ಹೊರಗಡೆ ಹೋಗುವುದಕ್ಕೆ ಆಗದೇ ಇರುವಂಥ ಸಮಸ್ಯೆಗಳಿವೆ. ಅದಕ್ಕೆ ನಾನು ಮಾನ್ಯ ಸಚಿವರಿಗೆ ವಿನಂತಿ ಮಾಡಿಕೊಳ್ಳುವುದೇನೆಂದರೆ, ಈಗ ಈ ಸುಗ್ರೀವಾಜ್ಞೆಯನ್ನು ratify ಮಾಡಿಕೊಳ್ಳುವ ಸಲುವಾಗಿ ತಂದಿದ್ದೀರಿ. ಆದರೆ ಸಮಗ್ರ ತಿದ್ದುಪಡಿಯನ್ನು ತೆಗೆದುಕೊಂಡು ಬಂದು ಉಳಿದೆಲ್ಲಾ ಶಿಕ್ಷಕರಿಗೂ ಕೂಡ ಪರಿಹಾರ ಕೊಡತಕ್ಕಂಥ ಕೆಲಸವನ್ನು ಮಾಡಬೇಕೆಂದು ವಿನಂತಿ ಮಾಡುತ್ತಿದ್ದೇನೆ. ಧನ್ಯವಾದಗಳು.

**ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾನು ಈ ವಿಧೇಯಕವನ್ನು ಸ್ವಾಗತ ಮಾಡುತ್ತೇನೆ. ಮಾನ್ಯ ಸದಸ್ಯರಾದ ಶ್ರೀ ಮರಿತಿಬ್ಬೇಗೌಡ, ಮಾನ್ಯ ಅರುಣ ಶಹಾಪುರ ಇವರೆಲ್ಲರೂ ಇದರ ಬಗ್ಗೆ ಹೇಳಿದರು. ಈ percentage fix ಮಾಡಿ ವರ್ಗಾವಣೆ ಮಾಡುವುದು ತುಂಬಾ ಅನ್ಯಾಯ. ಮಾನ್ಯ ಸಚಿವರೇ, ದಯವಿಟ್ಟು ಆ ಪರ್ಸೆಂಟ್ ತೆಗೆಯಬೇಕು. ಇದರ ಜೊತೆಗೆ ಬಹಳಷ್ಟು ರಾಜ್ಯಗಳಲ್ಲಿ ಒಂದು ಬಾರಿಗೆ ಎಲ್ಲಾ ಶಿಕ್ಷಕರು ಕೂಡ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅವರವರ ಜಿಲ್ಲೆಗಳಿಗೆ ಹೋಗುವಂಥ ಅವಕಾಶವನ್ನು ಮಾಡಿದ್ದಾರೆ. ಮಾನ್ಯ ಸಚಿವರಿಗೆ ಗೊತ್ತಿರುವಂತೆ, ನಮ್ಮ ರಾಜ್ಯದಲ್ಲಿ ಒಂದಲ್ಲ ಒಂದು ಕಾರಣದಿಂದ ಸುಮಾರು ನಾಲ್ಕೈದು ವರ್ಷಗಳಿಂದ ವರ್ಗಾವಣೆ ನಡೆಯುತ್ತಿಲ್ಲ. ಆ ಕಾರಣಕ್ಕಾಗಿ ಬಹಳಷ್ಟು ಜನ ಶಿಕ್ಷಕರು ಸೂಸೈಡ್ ಮಾಡಿಕೊಂಡಿದ್ದಾರೆ. ಸಾಕಷ್ಟು ಕುಟುಂಬಗಳು divorce ಕೂಡ ಆಗಿವೆ. ಆಮೇಲೆ ಗಂಭೀರ ಕಾಯಿಲೆ ಬಂದಂಥ ಶಿಕ್ಷಕರನ್ನೂ ಕೂಡ ವರ್ಗಾವಣೆ ಮಾಡುತ್ತಿಲ್ಲ. ಇದರ ಬಗ್ಗೆ ನಾನು ಹೆಚ್ಚಾಗಿ ಮಾತನಾಡುವುದಿಲ್ಲ.

**(ಮುಂದು...)**

(994)23.9.2021/11.10/ಎಂ.ಎಂ-ಎಂ.ಡಿ[ವಿ.ಕೆ]

(ಸಭಾಪತಿಯವರ ಉಪಸ್ಥಿತಿ)

**ಸಭಾಪತಿಯವರು:-** ಮಾನ್ಯ ಭೋಜೇಗೌಡರೇ, ಸ್ವಲ್ಪ ಸುಮ್ಮನೆ ಕುಳಿತುಕೊಳ್ಳಿ.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ಯಾರು ನೇಮಕಾತಿಯಾಗುತ್ತಾರೆ ಅವರಿಗೆ ಬೇಕಾದರೆ ಹೇಳೋಣ. ನನ್ನ ಸಲಹೆಯೇನೆಂದರೆ, one-time measure ಕೊಡುವುದಕ್ಕೆ ತೊಂದರೆ ಎನ್ನುವುದಾದರೆ ಮುಂದಿನ ವರ್ಷ ಕೊಡುತ್ತೇವೆಂದು ಘೋಷಣೆ ಮಾಡಲಿ. ಅಷ್ಟರಲ್ಲಿ ಯಾರ್ಯಾರು ಅರ್ಜಿ ಹಾಕಿಕೊಳ್ಳುತ್ತಾರೆ; ಹೇಗಿದ್ದರೂ Guest Faculty ಗಳನ್ನು ತೆಗೆದುಕೊಳ್ಳಬೇಕು ಅಲ್ಲಿಯೇ ತೆಗೆದುಕೊಳ್ಳಲಿ, ನೇಮಕಾತಿ ಮಾಡುವಂತಹ ಸಂದರ್ಭದಲ್ಲಿ ಎಲ್ಲಿ ಜಾಸ್ತಿ ಹುದ್ದೆಗಳು ಖಾಲಿ ಇರುತ್ತದೆ ಅಲ್ಲಿಗೆ ಆದ್ಯತೆ ಕೊಡಿ. One-time measure ಎಂಬುದನ್ನು ಮಾಡಿದರೆ ಬಹಳಷ್ಟು ಶಿಕ್ಷಕರ ಕುಟುಂಬ ನೆಮ್ಮದಿಯ ನಿಟ್ಟುಸಿರು ಬಿಡುತ್ತಾರೆ.

**ಸಭಾಪತಿಯವರು**:- ಮಾನ್ಯ ಪುಟ್ಟಣ್ಣನವರೇ, ನೇಮಕಾತಿ ಮಾಡುವುದಕ್ಕೆ ಬರುವುದಿಲ್ಲ. ಅವರಿಗೆ ಬೇಕೆಂದಲ್ಲಿಗೆ ಹಾಕುವುದಕ್ಕೆ ಮೂಲಭೂತ ಹಕ್ಕುಇರುತ್ತದೆ.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ಹೌದು ತಾವು ಹೇಳುವುದು ಸರಿಯಾಗಿದೆ. ಈಗ ಹೈದರಾಬಾದ್-ಕರ್ನಾಟಕ ಇದೆ. ಅದಕ್ಕೆಂದೇ 2000 ಅಥವಾ 3000 ಮಾಡಲಿ.

**ಸಭಾಪತಿಯವರು**:- ಅದಕ್ಕೆ ಕೋರ್ಟ್ ಒಪ್ಪುವುದಿಲ್ಲ.

**ಶ್ರೀ ಪುಟ್ಟಣ್ಣ:-** ಅಲ್ಲಿ ಕೆಲಸ ಮಾಡಬೇಕೆಂದರೆ ಏತಕ್ಕೆ ಮಾಡುವುದಕ್ಕಾಗುವುದಿಲ್ಲ?

**ಸಭಾಪತಿಯವರು**:- ವರ್ಗಾವಣೆ ಮಾಡುತ್ತಾರೆ . . .

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಶಶಿಲ್ ಜಿ. ನಮೋಶಿ:-** ಇದರ ಬಗ್ಗೆ ಆಗಲೇ ಒಂದು ಪತ್ರಿಕಾ ಹೇಳಿಕೆ ಕೊಟ್ಟಿದ್ದಾರೆ.

**ಶ್ರೀ ಪುಟ್ಟಣ್ಣ:-** ಇಂತಹ ಹುದ್ದೆ ಖಾಲಿ ಇದೆ ಎಂದು ಕೊಡಬಹುದು. ಅದು ನನಗೆ ಗೊತ್ತಿಲ್ಲ. ಬೇಕಾದರೆ ಕಾನೂನನ್ನು ನೋಡಿಕೊಂಡು ಮಾಡಲಿ. ನನ್ನ ಅನಿಸಿಕೆಯೇನೆಂದರೆ, one-time measure ಇಡೀ ಶಿಕ್ಷಕರಿಗೆ ರಾಜ್ಯದಲ್ಲಿ ಕೊಡಬೇಕು ಎನ್ನುವುದೊಂದು, ಎರಡನೆಯದಾಗಿ, ಈಗ ಹೈಸ್ಕೂಲ್ ಮತ್ತು ಪ್ರೈಮರಿ ಶಾಲೆಗಳಿಗೆ ಕಡ್ಡಾಯ ವರ್ಗಾವಣೆಯನ್ನು ಕೊಟ್ಟರು ಅದು ತಮಗೆ ಗೊತ್ತು. ಅದರ ಬಗ್ಗೆ ತಾವು ಕೂಡ ಬಹಳಷ್ಟು ಸಲ ಮಾತನಾಡಿದ್ದೀರಿ. ಪಿ.ಯು.,ನವರಿಗೆ ಕೊಟ್ಟಿಲ್ಲ. ಬಹಳಷ್ಟು ಸಂದರ್ಭಗಳಲ್ಲಿ ಎಲ್ಲಾ ಸಭೆಗಳಲ್ಲೂ ಪಿ.ಯು.,ನವರಿಗೂ ಮಾಡುತ್ತೇವೆ ಎಂದು ಒಪ್ಪಿಕೊಂಡಿದ್ದಾರೆ. ಆದರೆ ಇವರು ಪಿ.ಯು., ಕಾಲೇಜಿನವರಿಗೆ ಮಾಡುತ್ತಲೇ ಇಲ್ಲ. 100 ಸಲ ಹೋಗಿ ಹೇಳಿದರು ಕೂಡ ಮಾಡಲಿಲ್ಲ. ಏತಕ್ಕೆ ಹೀಗಾಗುತ್ತಿದೆ ಎಂದು ನನಗೆ ಗೊತ್ತಿಲ್ಲ. ಮಾನ್ಯ ಸಚಿವರೇ, ದಯಮಾಡಿ ಏನು ಹೈಸ್ಕೂಲ್ ಮತ್ತು ಪ್ರೈಮರಿ ಶಾಲೆಗಳಿಗೆ ಮಾಡಿದ್ದೀರೋ ಅದೇ ರೀತಿ ಪಿ.ಯು. ಕಾಲೇಜಿನವರಿಗೂ ಮಾಡಬೇಕೆಂದು ಮನವಿ ಮಾಡುತ್ತೇನೆ, ಧನ್ಯವಾದಗಳು.

**ಡಾ: ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಮ್ಮೆಲ್ಲಾ ಸ್ನೇಹಿತರು ಹೇಳಿದ ಹಾಗೆ ಒಂದೇ ಸಮಸ್ಯೆ ಇದೆ. ಇವತ್ತಿನ ಈ ದುಸ್ಥಿತಿಗೆ ಅವೈಜ್ಞಾನಿಕವಾದ ಕಡ್ಡಾಯ ವರ್ಗಾವಣೆ ಮತ್ತು excess ವರ್ಗಾವಣೆ ಕಾರಣ. ಇದರಿಂದ ಕೇವಲ ಶಿಕ್ಷಕರಿಗೆ ಮಾತ್ರ ತೊಂದರೆಯಾಗಿಲ್ಲ, ವಿದ್ಯಾರ್ಥಿಗಳಿಗೂ ತೊಂದರೆಯಾಗಿದೆ. ಕಡ್ಡಾಯ ವರ್ಗಾವಣೆಯಿಂದ ತಾಲ್ಲೂಕು ಮಟ್ಟದಲ್ಲಿ ಪಿ.ಯು., ಕಾಲೇಜುಗಳಲ್ಲಿ ಸಾವಿರ ಜನರು ವಿದ್ಯಾರ್ಥಿಗಳಿರುತ್ತಾರೆ.

**ಸಭಾಪತಿಯವರು**:- ಕಾನೂನಿನಲ್ಲಿ ಕಡ್ಡಾಯ ವರ್ಗಾವಣೆ ಇಲ್ಲ.

**ಡಾ: ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅಲ್ಲಿ ಉಪನ್ಯಾಸಕರುಗಳಿಲ್ಲ. ಶ್ರೀನಿವಾಸಪುರ ಕಾಲೇಜಿನಲ್ಲಿ 1300 ಜನ ಹೆಣ್ಣುಮಕ್ಕಳಿದ್ದಾರೆ. ಅಲ್ಲಿ ಉಪನ್ಯಾಸಕರಿಲ್ಲ, ಅಲ್ಲಿರುವ ಐದು ಜನ ಉಪನ್ಯಾಸಕರನ್ನು ವಿಶ್ವನಾಥಪುರದ ದೊಡ್ಡಬಳ್ಳಾಪುರಕ್ಕೆ ಹಾಕಿದರು ಅಲ್ಲಿ 70 ಜನ ಗಂಡುಮಕ್ಕಳಿದ್ದಾರೆ. 70-80 ಜನ ಇರುವ ಕಡೆ full strength faculty. ಸಾವಿರ ಜನರು ಇರುವ ಕಡೆ faculty strength ಇಲ್ಲ. ಇಲಾಖೆಯ ಅಧಿಕಾರಿಗಳು ಮಾಡಿದ ದೋಷದಿಂದ ಇವತ್ತು ಈ ಚರ್ಚೆ ಬರುತ್ತಿದೆ. ನಾನು ಮನವಿ ಮಾಡಿಕೊಳ್ಳುತ್ತಿದ್ದೇನೆ, ಮಾನ್ಯ ಸಚಿವರೇ, ದಯವಿಟ್ಟು ಆದಷ್ಟು ಬೇಗ ವರ್ಗಾವಣೆ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪ್ರಕ್ರಿಯೆಯನ್ನು ಪ್ರಾರಂಭ ಮಾಡಬೇಕು. ಆಮೇಲೆ ಕಡ್ಡಾಯ ಮತ್ತು excess teachers ನ್ನು ಕೇವಲ ಜಿಲ್ಲೆಯವರೆಗೆ ಮಾತ್ರವಲ್ಲ, ಒಳಗೂ ಅವಕಾಶ ಮಾಡಿಕೊಡಬೇಕು. ವಿಶೇಷವಾಗಿ ಪಿ.ಯು., ಕಾಲೇಜುಗಳಿಗೆ ಇಲ್ಲಿ ಸೇರಿಸಿಲ್ಲ, ಆಮೇಲೆ ಅವರು ಕೋರ್ಟ್‌ಗೆ ಹೋಗುತ್ತಾರೆ. ಇದು ಕೋರ್ಟ್‌ಗೋಗಿದ್ದಕ್ಕೋಸ್ಕರವಾಗಿ ಸುಗ್ರೀವಾಜ್ಞೆ ಮಾಡಿದ್ದೀರಿ.

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಪಿ.ಯು. ಕಾಲೇಜಿನವರಿಗೆ ಬೇರೆ ವಿಧೇಯಕ ಮಾಡುತ್ತೇವೆಂದು ಹೇಳಿದ್ದಾರೆ. ವರ್ಗಾವಣೆಯನ್ನು ಬೇಗ ಮಾಡಬೇಕು. ಅಧಿಕಾರಿಗಳ ತಪ್ಪಿನಿಂದ ಇವತ್ತು ಕೋರ್ಟ್‌ನಲ್ಲಿ ತಡೆಯಾಜ್ಞೆ ಇದೆ. ಅಧಿಕಾರಿಗಳು ತಪ್ಪು ಮಾಡುತ್ತಾರೆ. ದಯವಿಟ್ಟು ಆದಷ್ಟು ಈ ಶಿಕ್ಷಕರ ವರ್ಗಾವಣೆ ಮತ್ತು ಪಿ.ಯು., ಕಾಲೇಜು ವಿಧೇಯಕ ಆದಷ್ಟು ಬೇಗ ಆಗಬೇಕು, ಎರಡೂ ವರ್ಗದವರಿಗೂ ಕೂಡ ಬೇಗ ವರ್ಗಾವಣೆ ಕೊಡಿಸಬೇಕು.

**ಡಾ: ವೈ.ಎ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ ಮುಗಿಸಿಬಿಡುತ್ತೇನೆ. ಮಾನ್ಯ ಸಚಿವರೇ, ಅಧಿಕಾರಿಗಳ ಮೇಲೆ ಪೂರ್ತಿ ಅವಲಂಬಿತರಾದರೆ ಇನ್ನೆರಡು ವರ್ಷ ವರ್ಗಾವಣೆ ಮಾಡುವುದಕ್ಕಾಗುವುದಿಲ್ಲ. ನಮ್ಮೆಲ್ಲಾ ಎಂ.ಎಲ್.ಸಿ., ಯವರ ಜೊತೆ ಮೀಟಿಂಗ್ ಮಾಡಿ ಒಪ್ಪಿಕೊಂಡು ಚರ್ಚೆ ಮಾಡಿದ ಮೇಲೂ ಸರಿಯಾಗಿ ಬಿಲ್ frame ಮಾಡಿಲ್ಲ. ಹಾಗಾಗಿ ಇದು ಪದೇ ಪದೇ ಮುಂದಕ್ಕೆ ಹೋಗುತ್ತಿದೆ. ನಾನು ಮನವಿ ಮಾಡುತ್ತಿದ್ದೇನೆ, ಮರೀಚಿಕೆಯಾಗಿರುವ ಈ ವರ್ಗಾವಣೆಯನ್ನು ಬೇಗ ಪ್ರಾರಂಭ ಮಾಡಬೇಕು, ನಮ್ಮ ಸ್ನೇಹಿತರು ಹೇಳಿದ ಹಾಗೆ ಎಲ್ಲವನ್ನೂ ಸೇರಿಸಿ ಮಾಡಬೇಕೆಂದು ಮನವಿ ಮಾಡುತ್ತಿದ್ದೇನೆ.

**ಶ್ರೀ ಜೆ.ಸಿ. ಮಾಧುಸ್ವಾಮಿ (ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಮತ್ತು ಸಣ್ಣ ನೀರಾವರಿ ಸಚಿವರು):-** ಮಾನ್ಯ ಸಭಾಪತಿಯವರೇ, ನಾವು ಬಳಸಿರುವ ಪದ rationalisation ಬಳಸಿದ್ದೇವೆ that is for the excess. ಅದಕ್ಕೆ objects ನಲ್ಲಿ ಗೊಂದಲವಾಗುವುದು ಬೇಡವೆಂದು ನಾವು ಆವರಣದಲ್ಲಿ ಕೊಟ್ಟಿದ್ದೇವೆ. For both rationalisation and compulsory transfer.

**ಶ್ರೀ ಲಹರ್ ಸಿಂಗ್ ಸಿರೋಯಾ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ನಾನು ಕಳೆದ 10 ವರ್ಷಗಳಿಂದ ಈ ಸದನದಲ್ಲಿದ್ದೇನೆ. ಪ್ರತಿಯೊಂದು ಸಲ ಶಿಕ್ಷಕರ ಸಮಸ್ಯೆ ಬಗ್ಗೆ ಬಂದೇ ಬರುತ್ತದೆ. ನಾನು ಸರ್ಕಾರಕ್ಕೆ ಮನವಿ ಮಾಡುವುದೇನೆಂದರೆ, ಒಂದು comprehensive bill ತರಬೇಕು, ಈ

ಸಮಸ್ಯೆ ಕೊನೆಯಾಗಬೇಕು, ಇದಕ್ಕೆ expert committee ಮಾಡಿಸಿ ಎಲ್ಲಾ ಸಮಸ್ಯೆಗಳನ್ನು ಬಗೆಹರಿಸಲು ಬಂದರೆ ಅನುಕೂಲವಾಗುತ್ತದೆ. ಇದರಿಂದ ಪ್ರತಿ ಅಧಿವೇಶನದಲ್ಲೂ ಬರುವ ಈ ಸಮಸ್ಯೆ ಹೋಗುತ್ತದೆ. ಶಿಕ್ಷಕರ ಬಗ್ಗೆ ಮಾತನಾಡಲು ಘಟಾನುಘಟಿ ಸದಸ್ಯರು ಇದ್ದಾರೆ. ಅವರಿಗೆ ನಿಜವಾಗಲೂ ಸಮಸ್ಯೆ ಇದೆ, ಅದನ್ನು ನಾನೂ ಒಪ್ಪಿಕೊಳ್ಳುತ್ತೇನೆ. ಆದ್ದರಿಂದ ಇದಕ್ಕೊಂದು comprehensive bill ತಂದು ಒಂದೇ ಸಲಕ್ಕೆ ಈ ಎಲ್ಲಾ ಸಮಸ್ಯೆಗಳಿಗೆ ಕಡಿವಾಣ ಹಾಕಬೇಕೆಂದು ಕೇಳಿಕೊಳ್ಳುತ್ತೇನೆ.

**ಡಾ: ತೇಜಸ್ವಿನಿಗೌಡ(ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಅತ್ಯಂತ ತುರ್ತು ಸ್ವರೂಪವಾದಂತಹ ಈ ವಿಚಾರ ಬಹಳ ವರ್ಷಗಳಿಂದ ಬಾಕಿಯಿತ್ತು. ಅದರ ಬಗ್ಗೆ ನಾನು ಈಗತಾನೆ ನಮ್ಮ ಸಹೋದ್ಯೋಗಿಯಾದ ಮಾನ್ಯ ಅರುಣ್ ಶಹಾಪುರರವರ ಹತ್ತಿರ ಕೇಳುತ್ತಿದ್ದೆ. 1 ಲಕ್ಷದ 76 ಸಾವಿರ ಶಿಕ್ಷಕರಿಗೆ ಸಂಬಂಧಪಟ್ಟ ಇಂತಹ ಒಂದು ಮಾನವೀಯ ಮಹತ್ವದ ತುರ್ತು ಸ್ವರೂಪದ ಈ ವಿಧೇಯಕ ತಂದಿದ್ದಕ್ಕಾಗಿ ನಾನು ನಮ್ಮ ಸಚಿವರನ್ನು ಅಭಿನಂದಿಸುತ್ತೇನೆ. ಇದರಲ್ಲಿ 50 ವರ್ಷ ವಯಸ್ಸನ್ನು ಪೂರೈಸಿದಂತಹ ಮಹಿಳಾ ಶಿಕ್ಷಕಿಯರು, 55 ವರ್ಷ ವಯಸ್ಸನ್ನು ಪೂರೈಸಿದ ಪುರುಷ ಶಿಕ್ಷಕರು, ಹಾಗೆಯೇ ಅವಲಂಬಿತ ಮಕ್ಕಳಿರುವಂತಹ ವಿಚ್ಛೇದಿತ ಶಿಕ್ಷಕರು, ಗರ್ಭಿಣಿ ಶಿಕ್ಷಕಿಯರು ಮತ್ತು ಅವಲಂಬಿತ ಮಕ್ಕಳನ್ನುಳ್ಳ ವಿಧುರರು ಇಂತಹವರಿಗಾಗಿ ವಿಶೇಷವಾಗಿ rationalisation ಆ ಪದವನ್ನು ಈ ಬಿಲ್‌ನಲ್ಲಿ ಬಳಸಿದ್ದಾರೆ, ಸಮರ್ಪಕ ಮರುಹಂಚಿಕೆಯ ತರುವಾಯದ ವರ್ಗಾವಣೆ ಎಂಬ ಶಬ್ದವನ್ನು excess transfer ಗೆ ಬಳಸಿದ್ದಾರೆ. ಬಹಳ ದಿನಗಳಿಂದ ಎದುರು ನೋಡುತ್ತಿದ್ದಾರೆ, ಇವತ್ತು ಸಮಾಜ ಇಷ್ಟು ಚೆನ್ನಾಗಿದೆ, ಮಾನವ ಸಂಪನ್ಮೂಲ ಚೆನ್ನಾಗಿದೆ ಎಂದು ಹೇಳಿದರೆ ಒಂದು ನೋಬಲ್ profession ಎಂದು ಕರೆಸಿಕೊಳ್ಳುವ ಶಿಕ್ಷಣ, ಶಿಕ್ಷಣವನ್ನು ಕೊಡುವಂತಹ ಶಿಕ್ಷಕರೇನಿದ್ದಾರೆ, ಅವರಿಗೆ ಒಂದು ಸಾರ್ಥಕ ಜೀವನ ಖುಷಿಯಾಗಿ, ಆರೋಗ್ಯವಂತರಾಗಿ, ಅತ್ಯಂತ ಲವಲವಿಕೆಯಿಂದ ಪಾಠ ಮಾಡುವಂತಹ ಬೋಧನಾಸ್ನೇಹಿ ವಾತಾವರಣವನ್ನು ನಿರ್ಮಿಸುವಂತಹದ್ದು ಇದರಲ್ಲಿ ಅವಶ್ಯಕತೆ ಇದೆ. ಆದ್ದರಿಂದ ಈ ವರ್ಗಾವಣೆಯನ್ನು ಅತಿ ಶೀಘ್ರವಾಗಿ ಜಾರಿ ಮಾಡಬೇಕೆಂದು ನಾನು ಕೋರುತ್ತೇನೆ.

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾನು ಈ ಬಿಲ್ಲನ್ನು ಸ್ವಾಗತ ಮಾಡುತ್ತೇನೆ. ಇದರ ಬಗ್ಗೆ ಎಲ್ಲಾ ಶಾಸಕರೂ ಕೂಡ ಮಾತನಾಡಿದ್ದಾರೆ. ಕಳೆದ ಮೂರು ವರ್ಷಗಳಿಂದ ವರ್ಗಾವಣೆ ಪ್ರಕ್ರಿಯೆ ಇಲ್ಲದೇ ಸಾಕಷ್ಟು ಶಿಕ್ಷಕರು ತೊಂದರೆಯನ್ನು ಅನುಭವಿಸುತ್ತಿದ್ದಾರೆ. ತಕ್ಷಣವೇ ವರ್ಗಾವಣೆ ಪ್ರಕ್ರಿಯೆಯನ್ನು ಪ್ರಾರಂಭ ಮಾಡಬೇಕು, ಹೇಗೆ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇಲಾಖೆಯಲ್ಲಿ ವರ್ಗಾವಣೆ ನಿಯಮವನ್ನು ತಂದಿದ್ದಾರೋ ಅದನ್ನು ಉಪಯೋಗಿಸಿ ಕೂಡ ಅರವಳಿಕೆ ಮಾಡಿ ಆದಷ್ಟು ಬೇಗನೆ ಅಲ್ಲಿ ಕೂಡ ವರ್ಗಾವಣೆಯನ್ನು ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

**ಶ್ರೀ ಬಿ.ಸಿ. ನಾಗೇಶ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು):-** ಮಾನ್ಯ ಸಭಾಪತಿಯವರೇ, ಸಾಕಷ್ಟು ಸಲಹೆಗಳು ಬಂದಿವೆ. ಆ ಸಲಹೆಗಳ ಆಧಾರದ ಮೇಲೆ ಮುಂದಿನ ದಿನಗಳಲ್ಲಿ ಪರಿಶೀಲನೆ ಮಾಡಲಾಗುತ್ತದೆ. ಪಿ.ಯು. ಕಾಲೇಜಿಗೆ ಸಂಬಂಧಿಸಿದಂತೆ ತಿದ್ದುಪಡಿ ಕಾಯ್ದೆ ತಕ್ಷಣವೇ ಮಾಡುವಂತಹ ಪ್ರಯತ್ನ ಮಾಡುತ್ತೇವೆ. ಆದರೆ ಜಿಲ್ಲೆಗಳೊಳಗೆ ಮತ್ತು ತಾಲ್ಲೂಕುಗಳೊಳಗೆ same cadre ಆದ್ದರಿಂದ ಶಿಕ್ಷಕರ ವರ್ಗಾವಣೆಗೆ ಯಾವ ಅಡ್ಡಿಯೂ ಇಲ್ಲ. ಶೇಕಡಾವಾರು ಏತಕ್ಕೆ ಮಾಡಲಾಗಿದೆ ಎಂದರೆ, ತಮಗೂ ಗೊತ್ತು, ಕಲ್ಯಾಣ ಕರ್ನಾಟಕದಲ್ಲಿ ಈಗಲೇ ಶಿಕ್ಷಕರ ಕೊರತೆ ತುಂಬಾ ಇದೆ. ಆ ಕಾರಣಕ್ಕೋಸ್ಕರ ನಿರ್ಬಂಧಗಳನ್ನು ಹಾಕಲಾಗಿದೆ.

**ಸಭಾಪತಿಯವರು**:- ಮಾನ್ಯ ಸಚಿವರೇ, ಒಂದು ಕೆಲಸ ಮಾಡಿ, ಒಂದು ಸಲ mutual ಇದ್ದವರಿಗೆ ವರ್ಗಾವಣೆಯನ್ನು ಕೊಟ್ಟುಬಿಡಿ. ಆಗ ನಿಮಗೆ ಎಷ್ಟೋ ಭಾರ ಕಡಿಮೆಯಾಗುತ್ತದೆ. ಮಾನ್ಯ ಪುಟ್ಟಣ್ಣನವರು ಹೇಳಿದ ಹಾಗೆ ಒಂದು ಸಲ ಮಾಡಿ.

**ಶ್ರೀ ಬಿ.ಸಿ. ನಾಗೇಶ್:-** ಮಾನ್ಯ ಸಭಾಪತಿಯವರೇ, ಈಗಾಗಲೇ ಅದರ ಬಗ್ಗೆ ಯೋಚನೆ ಮಾಡುತ್ತಿದ್ದೇವೆ. ಈ ವಿಚಾರವಾಗಿ ತಮ್ಮ ನೇತೃತ್ವದಲ್ಲಿ ಒಂದು ಸಭೆಯನ್ನು ಮಾಡುತ್ತೇವೆಂದು ತಮಗೆ ತಿಳಿಸಿದ್ದೇವೆ. ಇದಕ್ಕೆ one-time compromised settlement ಮಾಡಬೇಕೆಂದು ತುಂಬಾ ಜನರು ಸಲಹೆ ಕೊಟ್ಟಿದ್ದಾರೆ. ಅದನ್ನು ಮುಂದಿನ ದಿನಗಳಲ್ಲಿ ಯೋಚನೆ ಮಾಡೋಣ. ಈ ಬಿಲ್‌ನಲ್ಲಿ ಹೆಚ್ಚುವರಿ ಶಿಕ್ಷಕರಿಗೂ ಸಹಿತ ಅವಕಾಶ ಇದೆ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಪಿ.ಯು. ಕಾಲೇಜಿನವರಿಗೆ ಸಂಬಂಧಪಟ್ಟಂತೆ ಜಿಲ್ಲೆಯೊಳಗೆ ಹೆಚ್ಚುವರಿ ಕಡ್ಡಾಯ ವರ್ಗಾವಣೆಯಾಗಿರುವುದನ್ನು ಕೂಡ ಪರಿಗಣನೆ ಮಾಡಿ.

**ಸಭಾಪತಿಯವರು**:- ಜಿಲ್ಲೆಯೊಳಗೆ ಹೊರಗಿನವರು ಮತ್ತು ಹೆಚ್ಚುವರಿ ಎಲ್ಲವನ್ನೂ ಸೇರಿಸಬೇಕೆಂದು ಹೇಳಿದ್ದಾರೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ವರ್ಗಾವಣೆ ಪ್ರಕ್ರಿಯೆ ಬೇಗ ಆಗಬೇಕು. ಪಿ.ಯು. ಕಾಲೇಜಿನವರದ್ದು, ಪ್ರೌಢಶಾಲಾ ಶಿಕ್ಷಕರದ್ದು ಎಲ್ಲರದ್ದೂ ಬೇಗ ವರ್ಗಾವಣೆ ಆಗಬೇಕು. ಕೋರ್ಟ್‌ಗೆ ಹೋಗಿ ಸ್ಟೇ **(ಗೊಂದಲ)**

**ಸಭಾಪತಿಯವರು**:- ಪಿ.ಯು. ಕಾಲೇಜಿನ ಉಪನ್ಯಾಸಕರನ್ನು ಸೇರಿಸಿಕೊಳ್ಳಿ.

**ಡಾ: ವೈ.ಎ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಪಿ.ಯು. ಕಾಲೇಜಿಗೆ ಬಿಲ್ ತರುವುದಕ್ಕೆ ಸಮಯವಿಲ್ಲ. ಇನ್ನು ಅಧಿವೇಶನ ಕರೆಯಲು ಮೂರು ತಿಂಗಳಾಗುತ್ತದೆ. ಪಿ.ಯು. ಕಾಲೇಜಿಗೆ ಮಾತ್ರ ಸುಗ್ರೀವಾಜ್ಞೆ ತರಲು ಹೇಳಿ.

**(ಗೊಂದಲ)**

**ಶ್ರೀ ಮರಿತಿಬ್ಬೇಗೌಡ:-** ಒಂದು ವರ್ಷವಾದರೂ ಆಗುವುದಿಲ್ಲ.

**ಸಭಾಪತಿಯವರು**:- ಮಾನ್ಯ ಮರಿತಿಬ್ಬೇಗೌಡರೇ ಹಾಗೆ ಆಗುವುದಿಲ್ಲ. **(ಗೊಂದಲ)**

**ಶ್ರೀ ಜೆ.ಸಿ. ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, **(ಗೊಂದಲ)** ಅವರು ಪರಿಶೀಲಿಸುತ್ತೇವೆ ಎಂದು ಹೇಳಿದ್ದಾರೆ ದಯಮಾಡಿ ಅಲ್ಲಿಗೆ ನಿಲ್ಲಿಸಬೇಕು. ಆ ರೀತಿ, you cannot force a Minister to answer.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಕಾನೂನು ಸಚಿವರೇ, . . .

**ಸಭಾಪತಿಯವರು**:- ಮಾನ್ಯ ಮರಿತಿಬ್ಬೇಗೌಡರೆ, ಹಾಗೆ ಆಗುವುದಿಲ್ಲ ಬಿಡಿ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಕಾಯಿದೆ ಮಾಡಿದರೆ ಇನ್ನೂ ಒಂದು ವರ್ಷವಾದರೂ ಆಗುವುದಿಲ್ಲ. **(ಗೊಂದಲ)**

**ಶ್ರೀ ಕೆ.ಟಿ. ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, . . .

**ಶ್ರೀ ಜೆ.ಸಿ. ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ಪರಿಶೀಲನೆ ಮಾಡುತ್ತೇವೆಂದು ಶಿಕ್ಷಣ ಸಚಿವರು ಹೇಳಿದ್ದಾರೆ ಅದರಲ್ಲಿ ವಿಶ್ವಾಸವಿಡುವುದನ್ನು ಬಿಟ್ಟರೆ you cannot ask the Minister to commit before the House.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಪರಿಶೀಲನೆ ಮಾಡುತ್ತೇವೆಂದು ಹೇಳಿದರೆ ಸಾಕು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು**:- ಮಾನ್ಯ ಸಚಿವರೇ, ಪಿ.ಯು. ಕಾಲೇಜಿನವರನ್ನೂ include ಮಾಡಿಕೊಳ್ಳಿ, ಸುಗ್ರೀವಾಜ್ಞೆಯನ್ನು ತರುವ ಅವಶ್ಯಕತೆ ಇಲ್ಲ, ಅದು ನಡೆಯುತ್ತದೆ.

(ಮುಂದು)

(995)/23-9-2021/11-10/ಕೆಎಚ್(ಎಲ್ಎಂ)/ಎಂಡಿ (ವಿಕೆ)

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ;

"2021ರ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು(ಶಿಕ್ಷಕರ ವರ್ಗಾವಣೆ ನಿಯಂತ್ರಣ) (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು**

**ಖಂಡ 2 ಮತ್ತು 3**

**ಸಭಾಪತಿಯವರು:-** "ಖಂಡ 2 ಮತ್ತು 3 ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಖಂಡ 2 ರಿಂದ 27ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)**

**ಖಂಡ 1 ಇತ್ಯಾದಿ**

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ;

ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)**

**ಪ್ರಸ್ತಾವದ ಅಂಗೀಕಾರ**

**ಶ್ರೀ ಬಿ.ಸಿ.ನಾಗೇಶ್(ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು):-** ಸನ್ಮಾನ್ಯ ಸಭಾಪತಿಯವರೇ, "2021ರ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು(ಶಿಕ್ಷಕರ ವರ್ಗಾವಣೆ ನಿಯಂತ್ರಣ) (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ;

> "2021ರ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು(ಶಿಕ್ಷಕರ ವರ್ಗಾವಣೆ ನಿಯಂತ್ರಣ) (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

**20. ಹೊಸ ರಾಷ್ಟ್ರೀಯ ಶಿಕ್ಷಣ ನೀತಿ ಕುರಿತಂತೆ ನಿಯಮ 330ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಮೇಲಿನ ಚರ್ಚೆಗೆ ಸಚಿವರಿಂದ ಉತ್ತರ ಹಾಗೂ ಮುಂದುವರೆದ ಚರ್ಚೆ**

**ಡಾ.ಸಿ.ಎಸ್.ಅಶ್ವಥ ನಾರಾಯಣ(ಉನ್ನತ ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಗಳೆ, National Education Policy ನ್ನು ರೂಪಿಸುವಂತಹ ಸಮಯದಲ್ಲಿ ಕೋವಿಡ್ ಇತ್ತು ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಆದರೆ ಆಗ ಕೋವಿಡ್ ಇರಲಿಲ್ಲ. ಘೋಷಣೆ ಮಾಡುವುದು ಬೇರೆ, ಪ್ರಕ್ರಿಯೆ ಮಾಡುವುದು ಬೇರೆ. ಕ್ಯಾಬಿನೆಟ್‌ನಲ್ಲಿ ತೀರ್ಮಾನ ತೆಗೆದುಕೊಳ್ಳಲು ಏನು ಸಮಸ್ಯೆ ಇಲ್ಲ. ಜನರ ಜೊತೆ ಸಮಾಲೋಚನೆ ಮಾಡಿ feedback ತೆಗೆದುಕೊಳ್ಳುವಾಗ ಯಾವ ಕೋವಿಡ್ ಸಮಸ್ಯೆ ಇರಲಿಲ್ಲ. ವಿಷಯವನ್ನು ಸ್ಪಷ್ಟಪಡಿಸಲು ಹೇಳುತ್ತಿದ್ದೇನೆ. ಅವರು ಹೇಳಿರುವ point ಬಗ್ಗೆ ಮಾತ್ರ ನಾನು ಹೇಳುತ್ತೇನೆ. ಈ ಪಾಲಿಸಿ ಬಗ್ಗೆ ವಿವವರವಾಗಿ ಹೇಳುವುದಿಲ್ಲ. Point to point ಮಾತ್ರ ಹೇಳುತ್ತಾ ಹೋಗುತ್ತೇನೆ. ಮಾನ್ಯ ಕಸ್ತೂರಿ ರಂಗನ್‌ರವರ ವಿಚಾರದಲ್ಲಿ ಅವರು ಮುಖವಾಡ ಮಾತ್ರ ಎಂದು ಮಾನ್ಯ ಸದಸ್ಯರು ಹೇಳಿಬಿಟ್ಟರು. ರಾಷ್ಟ್ರೀಯ ಶಿಕ್ಷಣ ನೀತಿ ಬಗ್ಗೆ ಮಾತನಾಡುವುದಕ್ಕಿಂತ ಮೊದಲು ಇಲ್ಲಿ ಇರುವ ಎಲ್ಲಾ ಸದಸ್ಯರಿಗೆ ಸಂವಿಧಾನದಲ್ಲಿ ನಂಬಿಕೆ ಇದೆಯೇ ಎನ್ನುವುದನ್ನು ಕೇಳಲು ಇಷ್ಟಪಡುತ್ತೇನೆ. ಸಂವಿಧಾನದ ವಿರುದ್ಧವಾಗಿ ಯಾವ ಪಾಲಿಸಿಯನ್ನು ಅಥವಾ ಯಾ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕಾನೂನನ್ನು ತರಲು ಆಗುವುದಿಲ್ಲ. ಏನೇ ಮಾಡಿದರು ನಾವು ಸಂವಿಧಾನದ ಆಶಯದ ಪೂರಕವಾಗಿ ಮಾಡಬೇಕು, ಸಂವಿಧಾನದ ಆಶಯವನನು ಕಾರ್ಯರೂಪಕ್ಕೆ ತರುವಂತಹ ಕೆಲಸವನ್ನು ಮಾಡಬೇಕಾಗುತ್ತದೆ. ಯಾವುದೇ ಪಾಲಿಸಿಯನ್ನು ಯಾರು ವಿರೋಧ ಮಾಡಲು ಸಾಧ್ಯವೇ ಇಲ್ಲ. ಇದು ಎಲ್ಲರಿಗೂ ಬಹಳ ಸ್ಪಷ್ಟವಾಗಿ ಗೊತ್ತಿರುವಂತಹ ವಿಚಾರ. ಆದರೂ equity, inclusion, antiminority, ದೀನ-ದಲಿತರ ವಿರುದ್ಧ, ತಾರತಮ್ಯ, ಮುಖವಾಡ ಈ ಎಲ್ಲಾ ಆಪಾದನೆಗಳು ಸತ್ಯಕ್ಕೆ ದೂರವಾಗಿರುವಂತವುಗಳಾಗಿವೆ. ಮಾನ್ಯ ಕಸ್ತೂರಿ ರಂಗನರಂತಹ ವ್ಯಕ್ತಿತ್ವದವರು ಯಾವಾಗಲೂ ಸಮಾಜಕ್ಕೆ ಪೂರಕವಾಗಿ ಕೆಲಸ ಮಾಡುವಂತರಾಗಿರುತ್ತಾರೆ. One Nation-One Education Policy. ಈ ಪಾಲಿಸಿಯ ಬಗ್ಗೆ ಯುಪಿಎ ಸರ್ಕಾರದಲ್ಲಿ ಶ್ರೀ ಕಪಿಲ ಸಿಂಬಲ್‌ರವರು ಪ್ರತಿಪಾದನೆ ಮಾಡಿರುವುದು. ಈ One Nation-One Exam, One Nation-One Entrance, One Nation-One Syllabus. Concurrent list education ನಲ್ಲಿ ತಂದವರು ಯಾರು? Emergency ಸಮಯದಲ್ಲ ಬಹಳಷ್ಟು ಕ್ಷೇತ್ರಗಳನ್ನು concurrent list ಗೆ ತಂದವರು ಕಾಂಗ್ರೆಸ್ ಪಕ್ಷದವರೆ. ವಿರೋಧ ಪಕ್ಷದ ನಾಯಕರೆಲ್ಲರೂ ಎಲ್ಲವನ್ನು concurrent list ಗೆ ತಂದುಬಿಟ್ಟರು, ನಮ್ಮ ಮೇಲೆ ಹೇರಿದರು ಎಂದು ಹೇಳುತ್ತಿರುತ್ತಾರೆ. ಈ ಶಿಕ್ಷಣ ಕ್ಷೇತ್ರವನ್ನು concurrent list ಗೆ ತಂದವರು ಯಾರು? ಕಾಂಗ್ರೆಸ್‌ನವರೆ ಹೇರಿರುವುದು. National Education Policy ಇವತ್ತು it is just a framework. ಯಾವುದೇ concurrent ಇರುವಂತಹ ವಿಚಾರದಲ್ಲಿ ಯಾವುದೆ ರಾಜ್ಯಕ್ಕೆ ವಿರುದ್ಧ ಪಾಲಿಸಿ ಯಾವುದು ಇಲ್ಲಿ ಇಲ್ಲ. ಇದು framework ಕೊಡುವುದು. ಇದನ್ನು ಅನುಷ್ಠಾನ ಮಾಡುವ ಪೂರ್ತಿ ಅಧಿಕಾರ ರಾಜ್ಯಕ್ಕೆ ಇದೆ. ಇದನ್ನು ಅನುಷ್ಠಾನ ಮಾಡಲು ಪೂರ್ತಿ ಸ್ವಾತಂತ್ರ ಆಯಾ ಸಂಸ್ಥೆಗಳಿಗೆ, ಆಯಾ ವಿಶ್ವವಿದ್ಯಾನಿಯಗಳಿಗೆ ಇದೆ. ಹೀಗಾಗಿ ಯಾವುದೇ ಅಡೆತಡೆಗಳಿಲ್ಲ. National Education Policy framing, federal structure ಕ್ಕೆ ವಿರುದ್ಧವಾಗಿರುವುದು ಯಾವುದು ಇಲ್ಲ.

Free education ಬಗ್ಗೆ ಹೇಳಿದ್ದಾಎ. ಖಂಡಿತವಾಗಿ ನಮ್ಮ ಸಮಾಜದಲ್ಲಿ education ಎನ್ನುವುದು it is a basic fundamental right. ಮೊದಲು ೬ನೇ ವಯಸ್ಸಿನಿಂದ ೧೪ನೇ ವಯಸ್ಸಿನವರೆಗೆ ಇತ್ತು. ಈಗ ೦ ದಿಂದ ಅಂದರೆ ೩ನೇ ವಯಸ್ಸಿನಿಂದ ಪ್ರಾರಂಭವಾಗುತ್ತದೆ. ಕಲಿಕೆಯ ವಯಸ್ಸನ್ನು ೩ ರಿಂದ ೬ ಮಾಡಬೇಕೆನ್ನುವುದು ಹಲವಾರು ವರ್ಷಗಳ ಬೇಡಿಕೆಯಾಗಿತ್ತು. ಮಗು ಬೆಳವಣಿಗೆಯಾಗುವ ವಯಸ್ಸು ಎಂದರೆ ೩ ರಿಂದ ೬ನೇ ವಯಸ್ಸು. ಹೀಗಾಗಿ ಬಹುಕಾಲದ ಬೇಡಿಕೆಯು ಇಡೇರುವಂತೆ ಆಗುತ್ತಿದೆ. Early care education ಪ್ರಾರಂಭವಾಗುತ್ತಿದೆ. ನಿಜವಾಗಿಯು ಒಳ್ಳೆಯ ಬೆಳವಣಿಗೆಯಾಗುತ್ತಿದೆ. ಇವತ್ತು ಎಲ್ಲರೂ

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ತಮ್ಮ ಮಕ್ಕಳನ್ನು ಓದಿಸುವುದು private education ಗಳಲ್ಲಿ. ಸರ್ಕಾರಿ ಶಾಲೆಯಲ್ಲಿ ಓದುವ ಮಕ್ಕಳು ಈ ಎಲ್ಲ ಸೌಲಭ್ಯಗಳಿಂದ ವಂಚಿತರಾಗಿದ್ದಾರೆ. ಈ ಎಲ್ಲ ಸೌಲಭ್ಯಗಳು ಆ ಮಕ್ಕಳಿಗೂ ಒದಗುವಂತೆಯಾಗುತ್ತದೆ. ಅವರಿಗೆ ತಾರತಮ್ಯವಾಗುತ್ತಿತ್ತು, ಆ ಮಕ್ಕಳಿಗೆ ಅವಕಾಶ ಸಿಗುತ್ತಿರಲಿಲ್ಲ. Nursery ಬರಿ ಖಾಸಗಿ ಶಾಲೆಗಳಲ್ಲಿ ಇತ್ತು, ಇವತ್ತು ಸರ್ಕಾರಿ ಶಾಲೆಯಲ್ಲಿಯು ಸಿಗುವಂತೆ ಆಗುತ್ತದೆ. Right to Education ನನ್ನು ಇನ್ನು ಬಲಪಡಿಸುವಂತೆ ಆಗುತ್ತದೆ. Right to Education ನಲ್ಲಿ ಈಗ ಇರುವ ಯಾವುದೆ ಒಂದು ಕಾರ್ಯಕ್ರಮಕ್ಕೂ ಇದರಲ್ಲಿ ವಿರುದ್ಧವಾಗಿ ಯಾವುದು ಇಲ್ಲ. ಎಲ್ಲವನ್ನು ಅಳವಡಿಸಿಕೊಂಡು ಇನ್ನು ಹೆಚ್ಚಿನ ಶಕ್ತಿಯನ್ನು ತುಂಬಿವಂತೆ ಮಾಡಲಾಗಿದೆ. ಈಗ ಇರುವ ಎಲ್ಲಾ ಕಾರ್ಯಕ್ರಮಗಳನ್ನು ಮುಂದುವರೆಸಿಕೊಂಡು ಹೋಗುವಂತೆ ಆಗುತ್ತದೆ. ಯಾವುದೇ ಕಾರ್ಯಕ್ರಮವನ್ನು ಕೈ ಬಿಡುವ ಪ್ರಶ್ನೆಯೇ ಇಲ್ಲ. ಸಂವಿಧಾನ ವಿರುದ್ಧವಾಗಿ ಯಾರು ಯಾವ ಪಾಲಿಸಿಯನ್ನು ಮಾಡುವ ಹಾಗೆಯೇ ಇಲ್ಲ. UGC, Regulation, ನಲ್ಲಿ ಉಸಿರು ಕಟ್ಟುವಂತಹ ವಾತಾವರಣ ಮಾಡುತ್ತಾರೆ ಎಂದು ಹೇಳಿದ್ದಾರೆ. ಖಂಡಿತವಾಗಿ ಇಲ್ಲ. ಈಗಿರುವ regulatory system ನಲ್ಲಿ ಎಲ್ಲಾ ಕ್ಷೇತ್ರಗಳನ್ನು ಒಂದೊಂದಾಗಿ ಮಾಡಿ ಉಸಿರು ಕಟ್ಟುವಂತಹ ನಿರ್ಮಾಣವಾಗಿದೆ. ಹೀಗಾಗಿ ಬೆಳವಣಿಗೆಗಳು ಉತ್ತಮವಾಗಿ ಆಗುತ್ತಿಲ್ಲ. ಇವೆಲ್ಲವನ್ನು ಸುಧಾರಣೆ ಮಾಡಬೇಕು light and tight ಎನ್ನುವ concept ನಲ್ಲಿ ಸಡಿಲಗೊಳಿಸಬೇಕು. ಈ ಎಲ್ಲ accreditation system ಗಳನ್ನು ಆಯಾ ರಾಜ್ಯಗಳಿಗೆ ಕೊಡುವಂತೆ ಆಗುತ್ತದೆ. ಆಯಾ ರಾಜ್ಯಗಳಿಗೆ ಅಧಿಕಾರವನ್ನು ಕೊಟ್ಟು ವಿವಿಧ ಸಂಸ್ಥೆಗಳಿಗೆ ಮಾನ್ಯತೆಯನ್ನು ಕೊಟ್ಟು, ಆ ಸಂಸ್ಥೆಗಳ ಮೂಲ accreditation ಕೊಡುವಂತೆ ಆಗಬೇಕು. ರಾಜ್ಯದಲ್ಲಿ regulation ಮಾಡುವುದನ್ನು ಸಡಿಲಗೊಳಿಸಿ ಹಲವಾರು professional bodies ಗಳಾಗಿ, ಒಂದೊಂದು professional bodies ಗಳು over ಆಗಿ regulate ಮಾಡಿ ಯಾವುದು ಉತ್ತಮವಾಗಿ ಬೆಳೆಯದಂತಹ ವಾತಾವರಣ ನಿರ್ಮಾಣವಾಗಿರುವುದರಿಂದ overregulate ಮಾಡದೆ ಸ್ವಲ್ಪ ಸಡಿಲಗೊಳಿಸಿ light and tight concept ನಲ್ಲಿ ಕೆಲಸವಾಗುತ್ತಿದೆ. ಹೀಗಾಗಿ ಇದರಲ್ಲಿ ಯಾವುದೇ ಸಮಸ್ಯೆ ಇಲ್ಲ ಎಂದು ಹೇಳುತ್ತೇನೆ. ಈ ಎಲ್ಲಾ regulatory bodies ಗಳನ್ನು ಮಾಡಿರುವುದು ಕಾಂಗ್ರೆಸ್ ಸರ್ಕಾರ.

SEZ (Special Education Zone) ತುಂಬಾ aspirational district ಆಗಿರುವ ಜಿಲ್ಲೆಗಳು ಇವೆ. ಯಾದಗಿರಿ, ರಾಯಚೂರು ಜಿಲ್ಲೆಗಳು ಶಿಕ್ಷಣದಲ್ಲಿ ಬಹಳ ಹಿಂದುಳಿದಿರುವ ಜಿಲ್ಲೆಗಳು. ಇಲ್ಲಿ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆಯನ್ನು ಕೊಟ್ಟು, ಹೆಚ್ಚಿನ ಪ್ರೋತ್ಸಾಹವನ್ನು ಕೊಡಬೇಕು ಎಂದು ಎಲ್ಲಾ ರೀತಿಯ ಕಾರ್ಯಕ್ರಮಗಳನ್ನು ಅಳವಡಿಸಿ ಮಕ್ಕಳನ್ನು ಶಾಲೆಗೆ ತರುವಂತೆ ಮಾಡಲಾಗುತ್ತದೆ. By 2020-30 ಎಲ್ಲರೂ 100 per cent Gross Enrolment ಆಗಬೇಕು.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪ್ರಾಥಮಿಕ ಮತ್ತು ಎಲ್ಲಾ ಹಂತದಲ್ಲಿ Gross Enrolment Ratio 100 per cent ಇರಬೇಕು by 2020-30 ಎನ್ನುವ ಬಹಳ ಸ್ಪಷ್ಟವಾದ ಗುರಿಯನ್ನು ಇಟ್ಟುಕೊಂಡು ಕಾರ್ಯವನ್ನು ಮಾಡಲಾಗುತ್ತಿದೆ.

(ಮುಂದು)

(996)23-09-2021(11-30)spr(bsd)ak

**ಡಾ|| ಸಿ.ಎಸ್.ಅಶ್ವಥನಾರಾಯಣ (ಮುಂದು)**

ಮಾನ್ಯ ಸಭಾಪತಿಯವರೇ, ಇನ್ನು scholarship ಬಗ್ಗೆ ಹೇಳುವುದಾದರೆ ಈಗ ಇರುವ all scholarships ಬಗ್ಗೆ attract ಮಾಡಬೇಕು, encourage ಮಾಡಬೇಕು. Minority ನಲ್ಲಿರುವ ಮಕ್ಕಳು High School, college ಬರಬೇಕೆಂದರೆ ಎಲ್ಲರಿಗೂ freeship, scholarship ಕೊಡುವುದು ಆಗುತ್ತಿದೆ. ಅವರನ್ನು attract ಮಾಡಲು ಹಾಗೂ ಅವರು ಓದಲು ಹೆಚ್ಚಿನ ಆರ್ಥಿಕ ಸಹಾಯ ಮಾಡುವುದು, hostel ಗಳ ಸಂಖ್ಯೆ ಹೆಚ್ಚುತ್ತಿದೆ, scholarship ಆಗಲೀ, ಅವರ full fee reimbursement ಮಾಡುವುದಾಗಲೀ ಆಗುತ್ತಿದೆ. ಅವರ fee reimbursement ಬಗ್ಗೆ ಹೇಳುವುದಾದರೆ ಆಧಾರ್ ಕಾರ್ಡ್‌ಗೆ link ಮಾಡಿಕೊಂಡು, ಸರ್ಕಾರದಿಂದ ಕೊಡುವ ಸವಲತ್ತು ನೇರವಾಗಿ ವಿದ್ಯಾರ್ಥಿ Bank account ಗೆ ಹೋಗುತ್ತಿದೆ. ಕೆಲವೇ ಕ್ಷಣದಲ್ಲಿ ಅಡೆತಡೆ ಇಲ್ಲದೇ eligible ಇರುವ ವಿದ್ಯಾರ್ಥಿಗಳ fee reimbursement ಅವರ Bank account ಗೆ ಆಧಾರ್ ಕಾರ್ಡ್ link ಆಗಿ ಇಡೀ ದೇಶದಲ್ಲಿ ಮೊದಲನೆಯದಾಗಿ ನಮ್ಮ ರಾಜ್ಯ ಅನುಷ್ಠಾನ ಮಾಡಿದೆ. ಯಾವುದೇ ಕಾರಣದಿಂದ ಯಾವುದೇ ಬಡ ಮಕ್ಕಳು, ವಿದ್ಯಾರ್ಥಿಗಳಿಗೆ, ಜಾತಿ-ಜನಾಂಗ ಇರಬಹುದು, ದೀನ-ದಲಿತರ ವಿಚಾರದಲ್ಲಿ ನೇರವಾಗಿ ತಲುಪುವುದು ನಡೆಯುತ್ತಿದೆ, ಯಾವುದೂ ನಿಲ್ಲುವುದಿಲ್ಲ. Merit scholarship ಅನ್ನು ಆಯಾ ಸಂಸ್ಥೆಗಳು ಉತ್ತಮವಾದ ಪ್ರತಿಭೆಗಳನ್ನು ಆಕರ್ಷಣೆ ಮಾಡಲು Merit scholarship ಅನ್ನು ಏನು ಕೊಡಬೇಕು ಅದು ಆಗುತ್ತದೆ.

ಇನ್ನು ಹಿಂದಿ ಹೇರಿಕೆ ಬಗ್ಗೆ ಹೇಳುವುದಾದರೆ 1968 ನ Education Policy ಮತ್ತು 1986 ನ Education Policy ಗಳಲ್ಲಿ three language policy ಮೊದಲು ಇತ್ತು. ಮೊದಲು ಇದ್ದ three language policy ನಲ್ಲಿ ಹಿಂದಿಯನ್ನು ಕಲಿಯಲೇಬೇಕಾಗಿತ್ತು. ಇವತ್ತಿನ three language policy ನಲ್ಲಿ ಹಿಂದಿ ಕಲಿಯಬೇಕೆಂದೇನೂ ಇಲ್ಲ. ಎರಡು ದೇಶೀಯ ಭಾಷೆ ಕಲಿಯಬೇಕು, ಆದರಲ್ಲಿ ಒಂದು ಮಾತೃ ಭಾಷೆ ಕಲಿಯಬೇಕೆಂದು ಬಹಳ ಸ್ಪಷ್ಟವಾಗಿ ಇದೆ. ಇನ್ನೊಂದು ಅಂತರರಾಷ್ಟ್ರೀಯ ಭಾಷೆ ಕಲಿಯಲು ಅವಕಾಶ ಇದೆ. ಹಿಂದಿ ಕಲಿಯಬೇಕೆಂದು ನಮ್ಮ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನೀತಿಯಲ್ಲಿ ಎಲ್ಲಿಯೂ ಇಲ್ಲ. ನಮ್ಮ policy ಯನ್ನು ನೋಡಿಯೇ ಹೇಳುತ್ತಿದ್ದೇನೆ. Policy ಬಹಳ ಸ್ಪಷ್ಟವಾಗಿದೆ. ಅದರಲ್ಲಿ option ಏನೂ ಇಲ್ಲ. ನೇರವಾಗಿ two language ಗಳ ಬಗ್ಗೆ ಇದೆ. ಯಾವುದನ್ನು ಬೇಕಾದರೂ ತೆಗೆದುಕೊಳ್ಳಬಹುದು. ಹಿಂದಿ ಭಾಷೆಯನ್ನು ತೆಗೆದುಕೊಳ್ಳಬೇಕು ಎಂದು ಎಲ್ಲಿಯೂ ಇಲ್ಲ. ಇನ್ನು in the three-language policy of the Education Policies of 1968 and 1986 ಹಿಂದಿ ಓದಲೇಬೇಕೆಂದು ಕಡ್ಡಾಯ ಇದೆ. ಅದು compulsory ಆಗಿದೆ. 1968 ಮತ್ತು 1986 ದಲ್ಲಿ ಸಂಸ್ಕೃತವನ್ನು ಕಡ್ಡಾಯವಾಗಿ ಕಲಿಯಲೇಬೇಕು ಎಂದು ಅವರೇ insist ಮಾಡಿದ್ದಾರೆ. ಅದು ಕಡ್ಡಾಯವಾಗಿದೆ. It reads thus,

> "Sanskrit. Considering the special importance of Sanskrit to the growth and development of Indian languages and its unique contribution to the cultural unity of the country, facilities for its teaching at the school and university stages should be offered on a more liberal scale. Development of new methods of teaching the language should be encouraged, and the possibility explored of including the study of Sanskrit in those courses (such as modern Indian languages, ancient Indian history, Indology and Indian philosophy) at the first and second degree stages, where such knowledge is useful."

ಇವತ್ತು ನಾವು ಇಂತಹದ್ದನ್ನು ಮಾಡಿಲ್ಲ. ನಾವು higher education ನಲ್ಲಿ ಇದುವರೆಗೂ ಕನ್ನಡ ಕಡ್ಡಾಯ ಇರಲಿಲ್ಲ, ನಾವು ಕಡ್ಡಾಯ ಮಾಡಿದ್ದು, ಎರಡು ವರ್ಷಗಳ ಕಾಲ ಕನ್ನಡವನ್ನು ಕಡ್ಡಾಯವಾಗಿ ಕಲಿಯಬೇಕೆಂದು ಮಾಡಿದ್ದೇವೆ. ಸ್ಥಳೀಯ ಕನ್ನಡ ಭಾಷೆಯನ್ನು ಬೆಳೆಸಲು ಪೂರಕವಾಗಿ ಮಾಡಿದ್ದೇವೆ. ಹಿಂದಿಯನ್ನು ಕಾಂಗ್ರೆಸ್ ಪಕ್ಷದವರು ಹೇರುತ್ತಿದ್ದರು. ನಮ್ಮಲ್ಲಿ ಹಿಂದಿ compulsory ಇಲ್ಲ, ನಮ್ಮ ನಾಡಿನ ಭಾಷೆಗೆ ಆದ್ಯತೆ ಕೊಡುವುದು ಇದೆ. Equity and inclusion ನಲ್ಲಿ ಹಿಂದುಳಿದ ಜನರಿಗೆ ಯಾವುದೇ ರೀತಿಯ ಅನ್ಯಾಯವಾಗುವ ಪ್ರಶ್ನೆ ಇಲ್ಲ. ಇವತ್ತು ಖಾಸಗಿ ಸಂಸ್ಥೆಗಳಲ್ಲಿ private university, deemed university ಗಳಿದ್ದು, deemed university ಗಳನ್ನು ನಮ್ಮ ರಾಜ್ಯದಲ್ಲಿ ಯಾರ ಕಾಲದಲ್ಲಿ ಕೊಟ್ಟಿದ್ದಾರೆ ಎಂದು ಎಲ್ಲರಿಗೂ ಗೊತ್ತಿದೆ. ನಾವು ಅದರ against ಇರುವ ಪ್ರಶ್ನೆ ಅಲ್ಲ. ಆದರೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸ್ವಾಯತ್ತತೆಯನ್ನು ಕೊಟ್ಟು, ಸಡಿಲಿಕೆ ಮಾಡಿ ಗುಣಮಟ್ಟದ ಶಿಕ್ಷಣ ಕೊಡಲು ನಡೆದಿರುವುದಾಗಿದೆ. ಈ public university, private university ಮತ್ತು deemed university ಗಳ comparison ಬಂದಿರುವುದು ಯಾವಾಗ ಎಂದರೆ ಅವುಗಳೆಲ್ಲವೂ existence ಗೆ ಬಂದಾಗ ಬಂದಿರುವುದಾಗಿದೆ. ಅವುಗಳು existence ಇದ್ದಾಗ compare ಮಾಡಲು ಆಗುತ್ತಿದೆ. ಇಲ್ಲದಿದ್ದರೆ bench marking ಮಾಡಲು ಆಗುವುದಿಲ್ಲ, competition ಇಲ್ಲ, ಓದುವುದರಲ್ಲಿ ಗುಣಮಟ್ಟ ಕೊಡುವುದಕ್ಕೆ ಆಗುವುದಿಲ್ಲ. ಇವತ್ತು ಈ ದಾರಿಯಲ್ಲಿ ಸರ್ಕಾರಿ ಸಂಸ್ಥೆಗಳ ಗುಣಮಟ್ಟ ಹೆಚ್ಚಿಸಲು ಎಲ್ಲಾ ಪ್ರಯತ್ನಗಳನ್ನು ಮಾಡುತ್ತಿದ್ದೇವೆ. ಇವತ್ತು Learning Management System ಬಗ್ಗೆ ನಾನು ಕೇಳುವುದೇನೆಂದರೆ, ಯಾವುದೇ ಬೇರೆ ರಾಜ್ಯಗಳಲ್ಲಿ Comprehensive Learning Management System ಅನ್ನು introduce ಮಾಡಿರುವ ಒಂದು ರಾಜ್ಯ ಇದೆಯೇ? ಅಥವಾ integrate ಮಾಡಿ, complete digital education ಅನ್ನು ಕೊಡಲು Comprehensive Learning Management System, Smart Classrooms, Device, ಇವುಗಳ ಮೂಲಕ ೧೦ ಪಟ್ಟು ಗುಣಮಟ್ಟವನ್ನು ನಮ್ಮ ಸರ್ಕಾರಿ ಕಾಲೇಜುಗಳಲ್ಲಿ ಮಾಡಿದ್ದೇವೆ. ಇವತ್ತು ಮಾನ್ಯ ಮರಿತಿಬ್ಬೇಗೌಡರು ಹಾಗು ಶ್ರೀ ಕೆ.ಟಿ. ಶ್ರೀಕಂಠೇಗೌಡರು ಹೇಳಬೇಕು, ಮಾನ್ಯ ಸಭಾಪತಿಯವರೇ, ನಮ್ಮ ಸರ್ಕಾರಿ ಕಾಲೇಜುಗಳಲ್ಲಿ ಕಂಡು ಬರುವ rush ಅನ್ನು ತಾವೇ ನೋಡಬಹುದು, ಅಲ್ಲಿ ಯಾವರೀತಿ rush ಇರುತ್ತದೆ, ಎಲ್ಲಾ ಮಕ್ಕಳು ಸರ್ಕಾರಿ ಕಾಲೇಜುಗಳ ಕಡೆ ಬರುತ್ತಿದ್ದಾರೆ. Tab ಅನ್ನು ಕೊಡುವುದು ಇದೆ.

**ಶ್ರೀ ಯು.ಬಿ. ವೆಂಕಟೇಶ್:-** ಮಾನ್ಯ ಸಚಿವರಿಗೆ ನಮ್ಮ ಮೇಲೆ ಕೋಪ ಇದ್ದಂತೆ ಇದೆ!

**ಡಾಃ ಸಿ.ಎಸ್. ಅಶ್ವಥನಾರಾಯಣಃ-** ಕೋಪ ಏನೂ ಇಲ್ಲ. ನಾನು ಏನು ವಿಚಾರ ಇದೆ, ಅದನ್ನೆಲ್ಲಾ ಹೇಳಬೇಕೆಂದು ಇದ್ದೇನೆ.

**ಶ್ರೀ ಯು.ಬಿ. ವೆಂಕಟೇಶ್:-** ಏಕೆಂದರೆ, ಸಮಯದ ತೀರ್ಮಾನವನ್ನು ಹೇಳಲಿ, ಅವರು ೧೨-೩೦ ಅಥವಾ ೧-೦೦ ಗಂಟೆ ಎಂದು ಹೇಳಿದರೆ ನಾವು ಅದಕ್ಕೆ prepare ಆಗಿ ಬರುತ್ತೇವೆ.

**ಡಾ|| ತೇಜಸ್ವಿನಿಗೌಡಃ-** ಇದು NEP (National Education Policy) at midnight ಆಗಿದೆ. ಕರ್ನಾಟಕ ಇತಿಹಾಸದಲ್ಲಿ ನೆನಪಿರುತ್ತದೆ.

**ಶ್ರೀ ಯು.ಬಿ. ವೆಂಕಟೇಶ್:-** ಆಯಿತು, ಹಾಗಾದರೆ ಮಾನ್ಯ ಸದಸ್ಯರು ಸ್ವಲ್ಪ ಊಟ ತರಿಸಿಬಿಡಲಿ.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಡಾಃ ಸಿ.ಎಸ್. ಅಶ್ವಥನಾರಾಯಣ:- ಮಾನ್ಯ ಸಭಾಪತಿಯವರೇ,** ಹಾಗಾಗಿ ಇವತ್ತು digital education ಅನ್ನು ಸರ್ಕಾರಿ degree college ಗಳಲ್ಲಿ provide ಮಾಡಲು ಇಂತಹ ವ್ಯವಸ್ಥೆ ಮಾಡುವುದಾಗಿದೆ. Unified University College Management System ಅನ್ನುವಂತಹ platform ತರುವುದಾಗಿದೆ. ಈ platform ನ ಮೂಲಕ ಸಂಪೂರ್ಣವಾಗಿ ಅದು ಖಾಸಗಿ ಕಾಲೇಜ್ ಆಗಿರಲಿ, private university ಆಗಿರಲೀ, public university ಆಗಿರಲೀ, aided college ಆಗೀರಲೀ, ಸರ್ಕಾರಿ ಕಾಲೇಜ್ ಆಗಿರಲೀ, there will be complete free flow of data. Student admission ಆಗಲೀ, ಯಾವರೀತಿ ದಾಖಲೆಗೆ ತೆಗೆದುಕೊಳ್ಳುವುದು ನಡೆಯುತ್ತಿದೆ, ಅವರ performance ಬಗ್ಗೆ ಯಾವ ಯಾವ ಕ್ಷೇತ್ರಗಳಲ್ಲಿ ಹೇಗೆ perform ಮಾಡುತ್ತಾರೆ, ಏನೇನು ಕೆಲಸ ಮಾಡುತ್ತಿದ್ದಾರೆ, affiliation ವಿಚಾರ ಆಗಲೀ, ಕಾಲೇಜ್‌ನಲ್ಲಿ ಆಗುವ ಕಾರ್ಯಗಳು, ಅಭಿವೃದ್ಧಿಗಳು, research, property, documentation, evaluation ಏನೇಲ್ಲಾ ಚಟುವಟಿಗಳು ಇವೆಯೋ, ಅವುಗಳೆಲ್ಲವನ್ನು ಪಡೆಯಲು technology platform ಅನ್ನು ಮಾಡಿದ್ದೇವೆ. ಇದರ ಮೂಲಕ real-time ನಲ್ಲಿ ಆ ಕ್ಷಣ ಮಾತ್ರದಲ್ಲಿ ಎಲ್ಲಾ ರೀತಿಯ ಮಾಹಿತಿಗಳು ಸಿಗುತ್ತವೆ, ಇಲ್ಲದಿದ್ದರೆ ಮಾಹಿತಿಗಳನ್ನು ಹುಡುಕಬೇಕಾಗುತ್ತದೆ. ಯಾವುದೇ ಮಾಹಿತಿಗಳು ಆ ಸಂದರ್ಭದಲ್ಲಿಯೇ ದೊರೆಯುತ್ತವೆ. ಏನು status, ಯಾವ ಕಾಲೇಜ್, ಏನು ಪರಿಸ್ಥಿತಿ ಹಾಗೂ ಏನಿದೆ ಎಂಬುದೆಲ್ಲವನ್ನೂ ಆ ಕ್ಷಣದಲ್ಲಿಯೇ ಕೊಡಬಹುದು. ವ್ಯಾಪಕವಾಗಿ ತಂತ್ರಜ್ಞಾನದ ಬಳಕೆ ಮೂಲಕ ಮಾಡಲಾಗಿದ್ದು, ನಮ್ಮ ರಾಜ್ಯದಲ್ಲಿ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದಾಗಿನಿಂದ ಒಂದು ದಿನ ವ್ಯರ್ಥ ಮಾಡದೇ ಈ ದಿಕ್ಕಿನಲ್ಲಿಯೇ ಕೆಲಸ ಮಾಡುತ್ತಿದ್ದೇವೆ. ಹಾಗಾಗಿ ನಾವು ಬಹಳ urgent ನಲ್ಲಿ ಯಾರು ಮಾಡದಿರುವುದನ್ನು ಮಾಡುವುದಕ್ಕೆ ಹೋಗಿ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಮೊದಲನೆ ರಾಜ್ಯವಾಗಿ ಮಾಡಿಕೊಂಡು ಶಹಬ್ಬಾಸ್ ಗಿರಿಯನ್ನು ತೆಗೆದುಕೊಳ್ಳುವುದಕ್ಕೆ ಮಾಡಿಲ್ಲ. ನಾವು ಮಾಡಿದ ಮುಖ್ಯ ಉದ್ದೇಶವೆಂದರೆ ಇದನ್ನು ಮಾಡುವ ಮೂಲಕ ನಮ್ಮ ರಾಜ್ಯದ ಜನರಿಗೆ ಒಳ್ಳೆಯದಾಗುತ್ತದೆ, ಇದನ್ನು ಮಾಡುವುದು ನಮ್ಮ ಕರ್ತವ್ಯ. As per schedule, ೨೦೨೧ನೇ ಇಸವಿಯಿಂದ ರಿಂದ ಅನುಷ್ಠಾನ ಆಗಬೇಕೆಂದು ೨೦೨೦ನೇ ಇಸವಿಯಲ್ಲಿ ಘೋಷಣೆಯಾಗಿದೆ. ಒಂದು ವರ್ಷ ಆಗಿ anniversary ಆಗುತ್ತಿದೆ. ಆದರೂ ಅನುಷ್ಠಾನ ಮಾಡುವ ಸ್ಥಿತಿಯಲ್ಲಿ ಇಲ್ಲ ಎಂದರೆ ಎಂಬುದನ್ನು ನೋಡಿಕೊಂಡು ಮಾಡಿದ್ದೇವೆ. ಇನ್ನಿತರರು ಏನು ಮಾಡುತ್ತಿದ್ದರು ಎಂದು ನಾವು ನೋಡುವುದಕ್ಕೆ ಹೋಗಿರಲಿಲ್ಲ. ಅವರು ಸಮಯ ತೆಗೆದುಕೊಂಡಿದ್ದಾರೆ, ಆದರೆ ನಾವು ತಕ್ಷಣ ಮಾಡಿದ್ದೇವೆ. ಇವತ್ತು ದೆಹಲಿ ಸರ್ಕಾರದವರು ಇದನ್ನು ಮಾಡುವ ಕೆಲಸ ಮಾಡಿದ್ದಾರೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

“ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಇನ್ನು research ಅನ್ನು ಎಲ್ಲಿಯೂ centralize ಮಾಡಿಕೊಳ್ಳುವುದಕ್ಕೆ ಆಗುವುದಿಲ್ಲ. Research innovation ಅನ್ನು ಪ್ರತಿಯೊಂದು ಮಗುವು ಪ್ರತಿಯೊಂದು ಶಾಲೆಯಲ್ಲಿಯೂ ಕಲಿಕೆಯಲ್ಲಿ creative and critical thinking ತರುವಂತಹದ್ದು, problem-solving skill ತರುವಂತಹದ್ದು, ಕೇವಲ classroom ನಲ್ಲಿ ಸೀಮಿತವಾಗಿ ಮಗು ಕಲಿಯುವುದಲ್ಲ, ಇಡೀ ಪ್ರಪಂಚವನ್ನೇ classroom ಆಗಿ ಮಾಡಿಕೊಳ್ಳಬೇಕು ಎನ್ನುವಂತಹ ಕಲ್ಪನೆ ಇರುವಂಥಹದ್ದಾಗಿದೆ. ಆದ್ದರಿಂದ ಎಲ್ಲಿಯೂ limitation ಮಾಡುವಂತಹ ಪ್ರಯತ್ನ ಮಾಡುತ್ತಿಲ್ಲ. ಹಾಗಾಗಿ open ಆಗಿ opportunity ಇದ್ದು, ಎಲ್ಲಾ ರೀತಿಯ ವ್ಯಕ್ತಿತ್ವ ಮತ್ತು ಪ್ರತಿಭೆಯನ್ನು ಗುರುತಿಸಿ ಅನಾವರಣ ಆಗಲು ಎಲ್ಲಾ ಪ್ರಯತ್ನ ಆಗಬೇಕು, ಅದು ನಮ್ಮ ಸಮಾಜದ ಆಸ್ತಿಯಾಗಿದ್ದು, ಆ ಮಗುವಿನಿಂದ ಸಮಾಜಕ್ಕೆ ಎಷ್ಟು ಕೊಡುಗೆಯ ಕೊಡುಗೆ ಸಿಗಬಹುದು, ಇದರ ಮೂಲಕ ಇಡೀ ವಿಶ್ವದಲ್ಲಿ ಸ್ಪರ್ಧೆ ಮಾಡುವುದಕ್ಕೆ ಆಗುತ್ತದೆ. ಇಡೀ ಸ್ಪರ್ಧೆಯು ಜಾತಿಗಳ ಮಧ್ಯದಲ್ಲಿ ಅಲ್ಲ ಅಥವಾ ರಾಜ್ಯಗಳ ಮಧ್ಯೆ ಅಲ್ಲ. ಇಡೀ ವಿಶ್ವದ ಜೊತೆಯಲ್ಲಿ ಸ್ಪರ್ಧೆ ಮಾಡಬೇಕಾಗುತ್ತದೆ. Privatization ಅನ್ನು ಕಾಂಗ್ರೆಸ್ ಕಾಲದಲ್ಲಿಯೇ ಪ್ರಾರಂಭ ಮಾಡಲಾಗಿದೆ. ಅವರೇ privatization, globalization ಮಾಡಿ, ಇಡೀ ವಿಶ್ವದ ಜೊತೆ ಸ್ಪರ್ಧೆ ಮಾಡಿ ಎಂದು economy open ಮಾಡಿದರು. ಆ open ಆಗಿರುವ ಸ್ಪರ್ಧೆಯ ಜೊತೆ ನಾವೆಲ್ಲರೂ ಭಾಗವಹಿಸುವುದು ಆಗಬೇಕಾಗಿದೆ.

(ಮುಂದು)

(997)/23-9-2021/11-40/ಸಿಎಸ್(ಎಲ್ಎಂ)/ಎಕೆ

**ಡಾ:ಸಿ.ಎಸ್.ಅಶ್ವಥ ನಾರಾಯಣ(ಮುಂದು)**:-

ಇನ್ನು ಪರೀಕ್ಷೆಗಳ ಬಗ್ಗೆ ಹೇಳುವುದಾದರೆ ೩ನೇ ತರಗತಿ, ೫ನೇ ತರಗತಿ, ೧೦ನೇ ತರಗತಿ, ೧೨ ನೇ ತರಗತಿಗಳ ಎಲ್ಲಾ ಪರೀಕ್ಷೆಗಳು ನಡೆಯುತ್ತವೆ. ಎಲ್ಲಿಯು ಪರೀಕ್ಷೆಗಳು ನಿಲ್ಲುವುದಿಲ್ಲ. ಈ ಎಲ್ಲ learning outcomes ನ್ನು measure ಮಾಡುವ ಸಲುವಾಗಿಯೇ ಪರೀಕ್ಷೆಗಳು ಇರುವುದು. ಈ ತರಗತಿಗಳಲ್ಲಿ ಗುಣಮಟ್ಟದ ಶಿಕ್ಷಣವನ್ನು ಕೊಡುತ್ತಾರೆ. Foundational education, ಅಕ್ಷರದ ಜ್ಞಾನ, ಸಂಖ್ಯೆಯ ಜ್ಞಾನವನ್ನು ಮೂರನೇ ತರಗತಿಯಲ್ಲಿಯೇ ಆ ಮಗು ಕಲಿಯುತ್ತದೆ. ಈ ರೀತಿಯ ಗುಣಮಟ್ಟದ ಶಿಕ್ಷಣವನ್ನು ಕೊಡುವುದು by 2025 ಮಾಡುವುದಾಗಿದೆ. Indian Institute of Science, IIT, IIM ಇಂತಹ , ಹಲವಾರು ಪ್ರತಿಷ್ಠಿತವಾದ ಸಂಸ್ಥೆಗಳು ಯಾವ ಮಾಡೆಲ್‌ನಲ್ಲಿ ಸ್ವಾಯತ್ತತೆಯನ್ನು ಪಡೆದುಕೊಂಡು ಶೈಕ್ಷಣಿಕವಾಗಿ ಮತ್ತು administrative ಆಗಿ ಉತ್ತಮವಾದ ಕೆಲಸಗಳನ್ನು ಮಾಡುತ್ತಿವೆ ಎನ್ನುವುದನ್ನು ನಮ್ಮ ರಾಜ್ಯದಲ್ಲಿಯ ಬೇರೆ-

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಬೇರೆ ಸಂಸ್ಥೆಗಳನ್ನು ಮತ್ತು ಬೇರೆ ದೇಶಗಳಲ್ಲಿಯ ಶಿಕ್ಷಣ ಸಂಸ್ಥೆಗಳನ್ನು ನೋಡಿ ತಿಳಿದುಕೊಂಡು ಮಾಡಲಾಗುತ್ತಿದೆ. ಸ್ವಾತಂತ್ರ್ಯ ಬಂದಾಗಿನಿಂದ ಇದನ್ನು ನೋಡಿದ್ದೇವೆ. ಆದರೆ ಅನುಷ್ಠಾನ ಮಾಡಿಕೊಳ್ಳಲು ಆಗಿರಲಿಲ್ಲ. ಕೆಲವು ಶೈಕ್ಷಣಿಕವಾಗಿ autonomy ಕೊಟ್ಟಿದ್ದೇವೆ. ಒಂದು ತಾಲ್ಲೂಕಿನಲ್ಲಿರುವ ಶಿಕ್ಷಣ ಸಂಸ್ಥೆ ಸದೃಢವಾಗಿ ಬೆಳೆಯಬೇಕು, ಆ ಭಾಗದ ವಿದ್ಯಾರ್ಥಿಗಳ ಭವಿಷ್ಯವನ್ನು ನಿರ್ಮಾಣ ಮಾಡಬೇಕು. ನಾವು ಇಲ್ಲಿ ಬೆಂಗಳೂರಿನಲ್ಲಿ ಕುಳಿತು ಅದನ್ನು ನಿರ್ವಹಣೆ ಮಾಡಲು ಆಗುವುದಿಲ್ಲ. ಅಲ್ಲಿ ಇರುವ ವಿದ್ಯಾರ್ಥಿಗಳು ಆ ಕಾಲೇಜಿನಲ್ಲಿ ಓದಿ pass out ಆಗಬೇಕು. ವಿದ್ಯಾರ್ಥಿಗಳು ಶಕ್ತಿವಂತರಾಗಲಿ, ಜ್ಞಾನವಂತರಾಗಲ್ಲಿ ಇವರೆಲ್ಲರೂ ಆ ಸಂಸ್ಥೆಯ ಏಳಿಗೆಯಲ್ಲಿ ಭಾಗವಹಿಸುವಂತೆ ಆಗಬೇಕು. ಶಿಕ್ಷಣ ಸಂಸ್ಥೆಗಳಿಗೆ ಸ್ವಾಯತತ್ತೆಯನ್ನು, ಹಣಕಾಸಿನ ಸಹಾಯವನ್ನು ಕೊಟ್ಟು ಆ ಭಾಗದ ಜನರ ಭವಿಷ್ಯವನ್ನು ನಿರ್ಮಾಣ ಮಾಡಲು ಸಹಾಯ ಮಾಡುವಂತೆ ಈ ಕಾನೂನಿನ ಮೂಲಕ ಮಾಡಬಹುದಾಗಿದೆ. ಈಗ ಇದು ಯಾವುದನ್ನು ಮಾಡಿರುವುದಿಲ್ಲ. ಈಗ ನಾವು ಕೇವಲ ಶೈಕ್ಷಣಿಕವಾಗಿ ಮಾಡಿದ್ದೇವೆ. ಇವತ್ತು ಲಭ್ಯವಿರುವ ಸಂಪನ್ಮೂಲದ ಆಧಾರದ ಮೇಲೆ ಸುಧಾರಣೆಗಳನ್ನು ಮಾಡಲಾಗಿದೆಯೇ ಹೊರತು ಏನು ಮಾಡಲು ಆಗುವುದಿಲ್ಲವೋ ಅದನ್ನು ಮಾಡಲು ಹೊರಟಿರುವುದಿಲ್ಲ. Structural reforms, administrative reforms, legislations ಇವುಗಳನ್ನು ಇನ್ನು ತಂದಿರುವುದಿಲ್ಲ. ಇವುಗಳನ್ನು ತರಲು ಇನ್ನು ಸಮಯವಿದೆ. ಈಗ ಕೇವಲ ಶೈಕ್ಷಣಿಕ ಸುಧಾರಣೆಯನ್ನು ಮಾಡಲಾಗುತ್ತಿದೆ. Teaching University, Research University, Autonomous Institution, ಇವೆಲ್ಲವುಗಳನ್ನು ವರ್ಗೀಕರಣ ಮಾಡಲಾಗುತ್ತದೆ. ಯಾವ ಸಂಸ್ಥೆ Teaching University ಆಗಲು ಇಷ್ಟಪಡುತ್ತಾರೆ ಅಲ್ಲಿ teaching ಗೆ ಆದ್ಯತೆ ಇದ್ದೇ ಇರುತ್ತದೆ. ಆದರೆ research ಇದ್ದೇ ಇರುತ್ತದೆ. ಯಾವುದೇ ಶಾಲೆ-ಕಾಲೇಜುಗಳಿಗೆ ಹೋದರು research ಇದ್ದೇ ಇರುತ್ತದೆ. ಆದರೆ topmost priority research ಗೆ ಇರುವುದಿಲ್ಲ. In Teaching University, research will be one of the components. Research University ನಲ್ಲಿ ಮುಖ್ಯ research ಇರುತ್ತದೆ, teaching will be a part of it. ಒಂದು Teaching University, ಮತ್ತೊಂದು Research University, ಇನ್ನೊಂದು Autonomous Degree Awarding Institution. ಈ ಮಟ್ಟಕ್ಕೇರಲು ೧೫ ವರ್ಷಗಳ ಕಾಲಾವಕಾಶವಿದೆ. ಅವರು ಬೆಳೆಯಲು ಎಲ್ಲಾ ರೀತಿಯ ಸಹಾಯವನ್ನು ಮಾಡಲಾಗುತ್ತದೆ. Institutional Development Plan ಮಾಡಿಕೊಂಡು ಆ ಸಂಸ್ಥೆಗಳು ಗುಣಮಟ್ಟವನ್ನು ಹೆಚ್ಚಿಸಿಕೊಂಡು ಸ್ವತಂತ್ರವಾಗಿ ಬೆಳವಣಿಗೆಯಾಗಲು ಪೂರಕವಾಗಿ ಸಹಾಯವಾಗಲಿ ಎಂದು ಕಾನೂನನ್ನು ಮಾಡುತ್ತಿದ್ದೇವೆ. ಈ ಪಾಲಿಸಿಯು ಅದಕ್ಕೆ ಪೂರಕವಾಗಿದೆ. ಈ ಸಂಸ್ಥೆಗಳು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಗುಣಮಟ್ಟಕ್ಕೇರಲು ಮಾನದಂಡಗಳು ಇವೆ. ಈ ಸಂಸ್ಥೆಗಳು ಆ ಗುಣಮಟ್ಟಕೆ ಏರಲಿಲ್ಲ ಎಂದರೆ, ಆ ಸಂಬಂಧಪಟ್ಟ ವಿಶ್ವವಿದ್ಯಾನಿಲಯದಲ್ಲಿ ಅದು constituent college ಆಗುತ್ತದೆ , ಇಲ್ಲಾ cluster college ಆಗುತ್ತದೆ.

Graded Autonomy ಬಗ್ಗೆ ಈಗಾಗಲೇ ಮಾತನಾಡಿದ್ದೇನೆ. ಈ ಎಲ್ಲಾ ವಿದ್ಯಾಸಂಸ್ಥೆಗಳು ತಮಗೆ ಬೇಕಾದ ಹಾಗೆ ಮಾಡಿಕೊಂಡುಬಿಡುತ್ತಾರೆ ಎನ್ನುವುದು ಸದಸ್ಯರ ಆತಂಕ. ಆದರೆ ಇವತ್ತು ಈ ಎಲ್ಲಾ ವಿದ್ಯಾಸಂಸ್ಥೆಗಳು performance oriented ಆಗಿರಬೇಕು. Performance ಇಲ್ಲದೆ ಅವರು ಏನು ಮಾಡಲು ಆಗುವುದಿಲ್ಲ. ಎಲ್ಲಾ institution ಗಳಲ್ಲಿ ಇವತ್ತು learning outcomes ಎನ್ನುವುದನ್ನು measure ಮಾಡಿಯೇ ಮಾಡಲಾಗುತ್ತದೆ. ಆ measurement ಇಲ್ಲದೆ ಯಾರು ಮುಂದಕ್ಕೆ ಹೋಗಲು ಸಾಧ್ಯವೇ ಇಲ್ಲ.

ಬಡವರ ಬಗ್ಗೆ ಚಿಂತನೆ ಮಾಡಲಾಗಿದೆ. ಇದು ಬಡವರಿಗೆ ಪೂರಕವಾದಂತಹ ಪಾಲಿಸಿಯನ್ನು ಇವತ್ತು ನಮ್ಮ ದೇಶದಲ್ಲಿ ತರಲಾಗಿದೆ. ಇಲ್ಲದವರಿಗೆ ಇದ್ದಂತಹ ವ್ಯವಸ್ಥೆಯಲ್ಲಿ ಆದ್ಯತೆಯನ್ನು ಕೊಟ್ಟು ಅವರು ಉತ್ತಮವಾದ ಭವಿಷ್ಯವನ್ನು 'Education is a great leveller' ಎಂದು ಹೇಳುತ್ತಾರೆ. ಇದಕ್ಕಿಂತ leveller ಇನ್ನೊಂದು ಇರಲು ಸಾಧ್ಯವಿಲ್ಲ. ನಮ್ಮ ಜೀವನದ ಅನುಭವಗಳೇ ನಮಗೆ ಸಾಕಾಗಿವೆ. ಮನುಷ್ಯ ಇವತ್ತು ಉತ್ತಮವಾಗಿ, ಸಶಕ್ತರಾಗಿ, ಸದೃಡರಾಗಿ ಬೆಳೆಯಲು ಮೂಲಕಾರಣ ಉತ್ತಮವಾದ ಶಿಕ್ಷಣವಾಗಿದೆ. ಅದಕ್ಕಾಗಿ ಇವತ್ತು ಈ ನೀತಿಯನ್ನು ತರಲಾಗಿದೆ. Public University ಗಳು ಇನ್ನು ಹೆಚ್ಚುತ್ತವೆ. ಪ್ರತಿಯೊಂದು ಜಿಲ್ಲೆಯಲಿಯೂ university ಗಳನ್ನು, multi-disciplinary institutions ನ್ನು ಮಾಡಬೇಕು ಎನ್ನುವ ದೊಡ್ಡ ಗುರಿ ಇದೆ. ಅಲ್ಲಿ autonomy ಕೊಡಬೇಕು ಹೀಗಾಗಿ ಕನಿಷ್ಠ ಎಲ್ಲಾ ಜಿಲ್ಲೆಗಳಲ್ಲಿ ಒಂದು ವಿಶ್ವವಿದ್ಯಾನಿಲಯ ಪ್ರಾರಂಭವಾಗಬೇಕು ಎನ್ನುವ ಉದ್ದೇಶವಿದೆ. ಇದಕ್ಕೆ ಬೇಕಾದ ಎಲ್ಲಾ ಸುಧಾರಣೆಗಳನ್ನು ತರಲಾಗುತ್ತದೆ.

Multi-entry and multi-exit ಬಗ್ಗೆ ಎಲ್ಲರಿಗೂ ಗೊತ್ತಿದೆ. ಜನಪ್ರತಿನಿಧಿಗಳಾದ ನಮಗೆಲ್ಲ ಗೊತ್ತು, ಒಂದು ಹುಡುಗ ಪದವಿ ಮುಗಿಸಿದ ತಕ್ಷಣ ನಮ್ಮ ಹತ್ತಿರ ಬಂದು 'ಅಣ್ಣಾ ನನಗೊಂದು ಕೆಲಸ ಕೊಡಿಸಿ,' ಎಂದು ಮುಂದೆ ನಿಲ್ಲುತಾರೆ. ಕೆಲಸ ಕೊಡಿಸಿ ಎಂದು ಬಂದವನ ಶಿಕ್ಷಣ employability ಗೆ ಗುಣಮಟ್ಟದ್ದಾಗಿದೆಯೇ, 'Is he industry-ready' ಎನ್ನುವುದು ಆಗಬೇಕಾಗಿದೆ. ಅವನು job creator ಆಗಬಹುದು. ಇದೆಲ್ಲ ಎಕೆ ಆಗುತ್ತಿರಲಿಲ್ಲ ಎಂದರೆ, ನಮ್ಮ ಕಲಿಕೆಯಲ್ಲಿ skill ಬೇರೆ ಇತ್ತು academic learning ಬೇರೆ ಇತ್ತು. ಈಗ ಈ ಎರಡನ್ನು integrate ಮಾಡಿಕೊಂಡು ಒಂದು ವರ್ಷದಲ್ಲಿ ಓದುವಂತಹ ವಿದ್ಯಾರ್ಥಿಯಲ್ಲಿ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಬುದ್ಧಿಮಟ್ಟ ಹೇಗೆ ಇದೆ, ಕೌಶಲ್ಯತೆ ಎಷ್ಟು, ಕಲಿಕೆಯ ಯಾವ ಮಟ್ಟದಲ್ಲಿದ್ದಾನೆ ಎನ್ನುವುದನ್ನು ಅಳತೆ ಮಾಡಲು National Skill Qualification Framework ಎಂದು ಇದೆ. ಇದಕ್ಕೆ ಅನುಗುಣವಾಗಿ ಯಾವ ವರ್ಷ ಓದಿದ್ದರೆ ಯಾವ Skill framework ಗೆ equivalent ಆಗುತ್ತದೆ ಎನ್ನುವುದನ್ನು ಅಳತೆ ಮಾಡಬಹುದು. First Year ಓದಿದ್ದರೆ ಅವು National Skill Qualification Framework ನ Level 5 ಗೆ equivalent ಆಗಿರುತ್ತಾನೆ. ೨ನೇ ವರ್ಷ ಮುಗಿಸಿದರೆ National Skill Qualification Framework ನ Level ೬ಕ್ಕೆ equivalent ಆಗಿರುತ್ತಾನೆ. ೩ನೇ ವರ್ಷ ಓದಿದ್ದರೆ Level ೭ಕ್ಕೆ, ೪ನೇ ವರ್ಷ ಓದಿದರೆ Level ೮ಕ್ಕೆ, ೫ನೇ ವರ್ಷ ಓದಿದರೆ ಮತ್ತು post-graduation ಓದಿದರೆ Level ೯ಕ್ಕೆ ಹೀಗೆ ಸಮನಾಗಿರುತ್ತಾನೆ. ಆ ರೀತಿಯಾಗಿ ಅವನಿಗೆ specific ಆಗಿ ಯಾವ-ಯಾವ ಉದ್ಯೋಗಕ್ಕೆ ಅರ್ಹತೆ ಇದೆ, ಅವನು ಯಾವ-ಯಾವ ಕೆಲಸಕ್ಕೆ ತಯಾರಾಗಿದ್ದಾನೆ ಎನ್ನುವುದು ಇದರಲ್ಲಿ ಸ್ಪಷ್ಟವಾಗಿರುತ್ತದೆ. ಮಾನ್ಯ ಸದಸ್ಯರೊಬ್ಬರು ಕೌಶಲ್ಯತೆಯನ್ನು ಕೊಟ್ಟು ಹಳೆಯ ಪರಂಪರೆಗೆ ಎಕೆ ತೆಗೆದುಕೊಂಡು ಹೋಗುತ್ತೀದ್ದಿರಿ, ಜಾತಿ ಆಧಾರಿತ ಕೌಶಲ್ಯದ ಕಡೆಗೆ ತೆಗೆದುಕೊಂಡು ಹೋಗುತ್ತಿದ್ದಾರೆ ಎಂದು ಹೇಳಿದ್ದಾರೆ. ಇವತ್ತು ಸೌತ್ ಆಫ್ರಿಕಾದಲ್ಲಿ skilled manpower ೯೬% ಇದೆ. ಜಪಾನ್ -ಜರ್ಮನಿಯಲ್ಲಿ ೮೦ ರಿಂದ ೮೫% ಇದೆ. ಅಮೇರಿಕಾ ದೇಶದಲ್ಲಿ ೫೬% ಇದೆ. Skilled manpower ಇಲ್ಲದೆ, skilled workforce ಎಲ್ಲಿಯು ಇಲ್ಲ ಎಂದರೆ ಹೇಗೆ? ನಮ್ಮ ದೇಶದಲ್ಲಿ 2017ರ ವರೆಗೂ ಇದ್ದಂತಹ assessment ಪ್ರಕಾರ 5% skilled manpower ಇದೆ. ಈಗ ೩% ಇದೆ ಎಂದು ವಿರೋಧ ಪಕ್ಷದ ಸದಸ್ಯರು ಹೇಳಿದ್ದಾರೆ. ಆದರೆ UPA ಸರ್ಕಾರವಿದ್ದಾಗ ೧% ಕೂಡಾ ಇರಲಿಲ್ಲ. ಈಗ ಇದು ದೊಡ್ಡ ಸಂಖ್ಯೆಗೆ ಏರುವಂತೆ ಆಗುತ್ತಿದೆ. ಥಾಮಸ್ ಮೆಕಾಲೆ formal education ಬಗ್ಗೆ ಹೇಳಿದ್ದಾರೆ. ನಮ್ಮ ಸಮಾಜದಲ್ಲಿ formal education ಗೆ ಯಾರು ಹೋಗುತ್ತಿರಲಿಲ್ಲ. ಹಾಗಾದರೆ skilled manpower ಈ ಸಮಾಜದಲ್ಲಿ ಇಲ್ಲವೆ ಎಂದು ತಾವು ಕೇಳಬಹುದು. ಖಂಡಿತವಾಗಿ ಇದ್ದಾರೆ. Informally trained ಆದವರು ಇದ್ದಾರೆ. Formally trained ಆದವರು ಅಲ್ಲ. Everyone is skilled informally. Formally ಅವರಿಗೆ ಯಾವ structure ನಲ್ಲಿ ತರಬೇತಿ ಬೇಕಿತ್ತು, understanding ಬೇಕಾಗಿತ್ತು, ಆ understanding ಇಲ್ಲದೆ train ಆಗಿದ್ದಾರೆ. ಇಡೀ ವಿಶ್ವದಲಿ ನಾನು ಪ್ರವಾಸ ಮಾಡಿ ಎಲ್ಲವನ್ನು ನೋಡಿದ್ದೇನೆ. ನಾನು ಶಿಕ್ಷಣ ಸಚಿವನಾಗುತ್ತೇನೆ ಎಂದು ನನಗೆ ಗೊತ್ತಿರಲಿಲ್ಲ. Accidentally ಸಮಾಜದ solution ಏನು ಎನ್ನುವುದನ್ನು ನೋಡಿಕೊಂಡು ಬಂದಿದ್ದೇನೆ. ನಮ್ಮಲ್ಲಿ ಇಂಜಿನೀಯರಿಂಗ್ ವಿದ್ಯಾರ್ಥಿಗೂ ಕೊಡದಂತಹ ತರಬೇತಿಯನ್ನು ಅಲ್ಲಿ ಹೈಸ್ಕೂಲ್ ವಿದ್ಯಾರ್ಥಿಗೆ ಕೊಡುತ್ತಾರೆ. ಆ ರೀತಿ skill training ಆಗಿ hands-on training, vocational training ಎಲ್ಲರೂ ಕಲಿಯಲು ಅವಕಾಶ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾಡಿಕೊಡುವುದು ಇದಾಗಿದೆ. ಆದರೆ ಕಾಮಾಲಿ ಕಣ್ಣಿನಿಂದ ಎಲ್ಲವನ್ನು ನೋಡಬಾರದು. ಸಮಾಜವನ್ನು ವಿಶ್ವಾಸದ ಕಡೆಗೆ ತೆಗೆದುಕೊಂಡು ಹೋಗುವಂತಹ ಕೆಲಸಗಳು ಆಗಬೇಕು. ಈಗ ಇರುವ ನಮ್ಮ ಜನಸಂಖ್ಯೆಗೆ ಇರುವ economy ತುಂಬಾ ಕಡಿಮೆ. ನಾವು ಇನ್ನು ಎಲ್ಲಿ ಇದ್ದೇವೆ. ಇನ್ನು ಸಾಕಷ್ಟು ದೂರ ಹೋಗಬೇಕು. ಇನ್ನು ತುಂಬಾ ಸಾಧನೆಗಳನ್ನು ಮಾಡಬೇಕಾಗಿದೆ. ಆಯಾ ಸರ್ಕಾರ ಇದ್ದಾಗ ಏನೇನು ಒಳ್ಳೆಯ ಕೆಲಸಗಳನ್ನು ಮಾಡಬೇಕು ಅದನ್ನು ಆ ಕಾಲಕ್ಕೆ ತಕ್ಕಹಾಗೆ ಮಾಡಿಕೊಂಡು ಬಂದಿದ್ದಾರೆ. ಇವತ್ತಿನ ಭವಿಷ್ಯಕ್ಕೆ ಏನು ಬೇಕಾಗಿದೆ ಅದನ್ನು ಮಾಡುವಂತಹ ಪ್ರಯತ್ನವನ್ನು ನಾವು ಮಾಡುತ್ತಿದ್ದೇವೆ. ಒಂದು ವರ್ಷ ಓದಿ ಮುಂದೆ ಓದಲು ಆಗದಿರುವ ಹುಡುಗನ ಕಥೆ ಏನಾಗಬೇಕು? ಒಂದು ಕೋರ್ಸ್ ಪೂರ್ತಿ ಓದಿದವನಿಗೆ skill ಇರುತ್ತಿರಲಿಲ್ಲ. ಬೇಕು ಎಂದರು ಅದನ್ನು ಪಡೆದುಕೊಳ್ಳಲು ಆಗುತ್ತಿರಲಿಲ್ಲ. ಇವತ್ತು ಇದೆಲ್ಲವನ್ನು ಒದಗಿಸುವಂತಹ ಕೆಲಸವನ್ನು ಮಾಡಲಾಗುತ್ತಿದೆ.

(ಮುಂದು)

(998)/23-9-2021/11-50/ಎಲ್ ಎಂ/ಆರ್ಎನ್

**ಡಾ: ಸಿ.ಎಸ್.ಅಶ್ವತ್ಥ ನಾರಾಯಣ(ಮುಂದು)**:-

ಇನ್ನು extra-curricular activities. ಮಾನ್ಯ ಸಭಾಪತಿಗಳು Physical Education Teacher ಆಗಿ ಕೆಲಸ ಮಾಡಿದ್ದಾರೆ. Physical Cultural and Social activities ಗಳನ್ನು ಕಾಲೇಜುಗಳಲ್ಲಿ ಮತ್ತು ಶಾಲೆಗಳಲ್ಲಿ ಕೈಗೊಂಡರು ಅವುಗಳಿಗೆ ಅಂಕಗಳನ್ನು ನೀಡಲಾಗುತ್ತಿರಲಿಲ್ಲ. ಇವತ್ತು ಈ ಎಲ್ಲಾ activities ಗಳಿಗೆ credit ಅಂಕಗಳನ್ನು ಕೊಡಲಾಗುತ್ತದೆ. ಯೋಗ ಮಾಡುವ ಬಗ್ಗೆ ಮಾನ್ಯ ಮರಿತಿಬ್ಬೇಗೌಡರು ಹೇಳಿದ್ದಾರೆ. ಯೋಗ ಮಾಡುವುದಕ್ಕೂ ಇವತ್ತು ಅಂಕಗಳನ್ನು ಕೊಡಲಾಗುತ್ತದೆ. ಹೀಗಾಗಿ ಇವತ್ತು ಎಲ್ಲಾ ಚಟುವಟಿಕೆಗಳಲ್ಲಿ ಭಾಗವಹಿಸಲೇ ಬೇಕಾಗುತ್ತದೆ. ಇದರಲ್ಲಿ ಕೆಲವು mandatory courses ಇವೆ. Health and wellness, ಆರೋಗ್ಯದ ಬಗ್ಗೆಯು ತಿಳುವಳಿಕೆಯನ್ನು ನೀಡಲಾಗುತ್ತದೆ. ಇಂದು ಹರಡುತ್ತಿರುವ ಕೋವಿಡ್-೧೯ ಸೋಂಕಿನಿಂದ ತಮ್ಮ ಆರೋಗ್ಯವನ್ನು ಹೇಗೆ ಕಾಪಾಡಕೊಳ್ಳಬೇಕು ಎನ್ನುವದು ತಿಳಿಯದೆ ತೊಂದರೆಗೆ ನಾಗರೀಕರು ಒಳಗಾಗುತ್ತಿದ್ದಾರೆ. ಆರೋಗ್ಯ ಕೆಟ್ಟಾಗ ಡಾಕ್ಟರ್ ಹತ್ತಿರ ಹೋಗಿ ಚಿಕಿತ್ಸೆಯನ್ನು ಪಡೆಯುವುದು ಮಾತ್ರವಲ್ಲ. ಡಾಕ್ಟರ್ ಹತ್ತಿರ ಹೋಗದೆ ಇರುವುದಕ್ಕೆ ಏನು ಮಾಡಬೇಕು ಎನ್ನುವುದಕ್ಕೆ ಸಾಕಷ್ಟು ತಿಳುವಳಿಕೆ, ಅರಿವು, ಜಾಗೃತಿಯನ್ನು ಈ ಶಿಕ್ಷಣದಲ್ಲಿ ನೀಡಲಾಗುತ್ತದೆ. ನಾವು ತಿನ್ನುವ ಆಹಾರದಲ್ಲಿ, ತೆಗೆದುಕೊಳ್ಳುವ ಒಳ್ಳೆಯ ಗಾಳಿ, ಕುಡಿಯುವ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನೀರಿನ ಬಗ್ಗೆ ಒಟ್ಟಿನಲ್ಲಿ ಪ್ರಕೃತಿಯನ್ನು, ನಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳಲು ಬೇಕಾದಂತಹ ತಿಳುವಳಿಕೆಯನ್ನು ಕೊಡಲು ಪ್ರಮಾಣಿಕ ಪ್ರಯತ್ನವನ್ನು ಮಾಡುತ್ತಿದ್ದೇವೆ.

ಪದವಿ ತರಗತಿಗಳಿಗೆ ಸೇರಿಕೊಳ್ಳುವವರಿಗೆ combination ನಲ್ಲಿ courses ಕೊಡಲಾಗುತ್ತದೆ. ಇವತ್ತು ಪದವಿಗೆ ಸೇರುವವನಿಗೆ subject-wise ಆಯ್ಕೆ ಮಾಡಿಕೊಳ್ಳಲು ಅವಕಾಶ ಮಾಡಿಕೊಡಲಾಗುತ್ತದೆ. ಆಯ್ಕೆ ಮಾಡಿಕೊಳ್ಳುವುದೇ ತಪ್ಪು ಎನ್ನುವುದಾದ್ದರೆ ಹೇಗೆ? ವಿದ್ಯಾರ್ಥಿ ಯಾವುದಾದರೂ ಕಲಿಯಲು ಅವಕಾಶವಿರುತ್ತದೆ. ಅವನು subject combination ನಲ್ಲಿ ಮೂರು ವಿಷಯಗಳನ್ನು ತೆಗೆದುಕೊಳ್ಳುತ್ತಾನೆ. Physics, Chemistry and Mathematics ಎಂದುಕೊಳ್ಳಿ. ಈ ಮೂರು ವಿಷಯಗಳು ಇದ್ದಾಗ, ಆತನಿಗೆ ಗಣಿತ ಕಲಿಯುಲು ಇಷ್ಟವಿರಲಿಲ್ಲ ಎಂದರೆ ಬೇರೆಯ ವಿಷಯವನ್ನು ತೆಗೆದುಕೊಳ್ಳಬಹುದು. ಇದಕ್ಕೆ ಅವಕಾಶವನ್ನು ಕೊಡದೆ ಅವನಿಗೆ ಇಷ್ಟವಿಲ್ಲದಿದ್ದರೂ ಇದನ್ನೇ ಓದಬೇಕು ಎಂದು ಒತ್ತಾಯ ಹೇರುವುದು ಎಷ್ಟರಮಟ್ಟಿಗೆ ಸರಿ? ಈ ಪದ್ಧತಿಯನ್ನು ಇವತು flexibility ಯನ್ನು ಡಿಗ್ರಿಯಲ್ಲಿ first year, second yearನಲ್ಲಿ discipline core ನಲ್ಲಿ ಮೂರು ತೆಗೆದುಕೊಳ್ಳುವ ಜಾಗದಲ್ಲಿ ಎರಡು ತೆಗೆದುಕೊಳ್ಳಲು ಅವಕಾಶ ಮಾಡಿಕೊಟ್ಟಿದ್ದೇವೆ. ಇನ್ನೊಂದು open electives ಕೊಟ್ಟಿದ್ದೇವೆ. ಆರ್ಟ್ಸ್ ವಿದ್ಯಾರ್ಥಿ ಸೈನ್ಸ್ ಓದಲು ಅವಕಾಶವಿರಲಿಲ್ಲ, ಕಾಮರ್ಸ್ ಓದಲು ಅವಕಾಶವಿರಲಿಲ್ಲ. ಇವತ್ತು ಆರ್ಟ್ಸ್ ವಿದ್ಯಾರ್ಥಿ open electives ನಲ್ಲಿ ಇವತ್ತು ಕಾಮರ್ಸ್ ವಿಷಯವನ್ನು ಅಥವಾ language ಅಥವಾ ಆರ್ಟ್ಸ್‌ನ್ನೇ ತೆಗೆದುಕೊಳ್ಳಬಹುದು ಅಥವಾ science ನ್ನು ತೆಗೆದುಕೊಳ್ಳಬಹುದು. ವಿದ್ಯಾರ್ಥಿಗೆ ಆಯ್ಕೆಯನ್ನು ಕೊಡಲಾಗಿದೆ. ಇದಕ್ಕೆಲ್ಲ ಹೊಸ ಶಿಕ್ಷಕನ್ನು ತೆಗೆದುಕೊಳ್ಳುವುದಿಲ್ಲ. ಇರುವ combination ನಲ್ಲಿ ಲಭ್ಯವಿರುವ ಶಿಕ್ಷಕರನ್ನೇ ಬಳಕೆ ಮಾಡಿಕೊಂಡು ನಡೆಸಲಾಗುತ್ತದೆ. ಎಲ್ಲೋ ಒಂದು ಕಡೆ ಅವನು single course ನ್ನು ಮಾಡಿಕೊಳ್ಳಬೇಕು ಎಂದರೆ ಮುಂದಿನ ದಿನಗಳಲ್ಲಿ ಮಾಡಿಕೊಳ್ಳಬಹುದು. ಈಗೇನು ನಾವು ಒತ್ತಾಯ ಮಾಡುತ್ತಿಲ್ಲ. ವಿದ್ಯಾರ್ಥಿಯು ಎಲ್ಲೆಲ್ಲಿ ಏನೇನು ಆಯ್ಕೆ ಮಾಡಿಕೊಳ್ಳುತ್ತಾನೆ ಅದಕ್ಕೆ ಅವಕಾಶ ಮಾಡಿಕೊಡುತ್ತಿದ್ದೇವೆ. ಇಲ್ಲದ್ದನ್ನು ತೆಗೆದುಕೊ ಎಂದರೆ ಅವನು ಎಲ್ಲಿಯೂ ತೆಗೆದುಕೊಳ್ಳುವುದಕ್ಕಾಗುವುದಿಲ್ಲ.

ಇನ್ನು ಇದಕ್ಕೆ ಬೇಕಾದ ಬಜೆಟ್ ಎಷ್ಟು ಎಂದು ಮಾತನಾಡಿದ್ದಾರೆ. ಇದಕ್ಕೆ ಯಾವುದೇ ರೀತಿಯ ಬಜೆಟ್ ಬೇಕಾಗಿಲ್ಲ. ಹೊಸ ಕಟ್ಟಡವನ್ನು ಕಟ್ಟುತ್ತಿಲ್ಲ. ಇವರು ಶಿಕ್ಷಣ ವ್ಯವಸ್ಥೆಯಲ್ಲಿಯೆ ಬದಲಾವಣೆಯನ್ನು ತರಲಾಗುತ್ತದೆ. ಮೌಲ್ಯಮಾಪನ ರೀತಿ-ನೀತಿಗಳಲ್ಲಿಯು ದೊಡ್ಡ ಮಟ್ಟದ ಸುಧಾರಣೆಗಳನ್ನು ತರಲಾಗುತ್ತದೆ. ಮೊದಲು ಬರಿ ಪರೀಕ್ಷೆಗೆ ತಯಾರಾಗುವುದಾಗುತ್ತಿತ್ತು, ವಿಷಯವನ್ನು ಅರ್ಥ ಮಾಡಿಕೊಳ್ಳುತ್ತಿರಲಿಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವಿಷಯವನ್ನು ಅರ್ಥ ಮಾಡಿಕೊಳ್ಳದೆ ಶಿಕ್ಷಣವನ್ನು ಪಡೆದರೆ ಏನು ಪ್ರಯೋಜನ? Core competence, capability ಆಗಲೀ ಏನು ಬೆಳೆಸಿಕೊಳ್ಳದೆ qualification ಸಿಗುತ್ತಿತ್ತು. ಆದರೆ qualification ತೆಗೆದುಕೊಂಡು ಏನು ಮಾಡುವುದು? Formative assessment ಗಳನ್ನು ಮಾಡಲಿಕ್ಕೆ ನಮ್ಮ ಸರ್ಕಾರಿ ಕಾಲೇಜು better placed than anybody. ಬೇರೆ ಖಾಸಗಿ ಕಾಲೇಜುಗಳಿಗಿಂತ we are better placed. ಏಕೆ ಎಂದು ತಾವು ಕೇಳಬಹುದು, because of digitalization. ಸರ್ಕಾರಿ ಶಾಲೆಗಳಲ್ಲಿ, ಸಂಸ್ಥೆಗಳಲ್ಲಿ ವಿದ್ಯಾರ್ಥಿಗಳಿಗೆ ಈ ರೀತಿಯ digitalization ಮಾಡುವ ಮೂಲಕ ಅವರು anytime, anywhere learning and anytime assessment ಮಾಡಲು ಅವನು ಹೇಗೆ class to class perform ಮಾಡುತ್ತಾನೆ. ಅದನ್ನು ಪ್ರತದಿನ ಅವನ performance measure ಮಾಡಲು real time ನಲ್ಲಿ ಆಗುವಂತಾದ್ದನ್ನು ಮಾಡಲಾಗುತ್ತದೆ. ಈ ರೀತಿ ಎಲ್ಲ ಒಳ್ಳೆಯ ಕೆಲಸವನ್ನು ಮಾಡಲಾಗುತ್ತಿದೆ. ಎಲ್ಲವನ್ನು ವಿದ್ಯಾರ್ಥಿಗಳಿಗೆ ಪೂರಕವಾಗಿಯೇ ಮಾಡಲಾಗುತ್ತಿದೆ.

ಕರ್ನಾಟಕದಲ್ಲಿ ಅದು ಬೆಂಗಳೂರಿನಲ್ಲಿ ಒಂದು ಲಕ್ಷಕ್ಕೆ 57 ಕಾಲೇಜುಗಳು ಇವೆ ಎಂದು ನಮ್ಮ ಮಾನ್ಯ ಹರಿಪ್ರಸಾದ್ ರವರು ಹೇಳುತ್ತಿದ್ದರು. ಆದರೂ ನಮ್ಮ GR (Graduation Rate) ಎಷ್ಟಿದೆಯೆಂದರೆ ಶೇಕಡಾ 26 ರಷ್ಟು ಇದ್ದದ್ದು ಇಂದು 32ಕ್ಕೆ ಬಂದಿದೆ. ನಾವಿನ್ನೂ ತಲುಪಬೇಕಾದ್ದಿದೆ. ನಮ್ಮ ಅಕ್ಕ-ಪಕ್ಕದ ರಾಜ್ಯಗಳಲ್ಲಿ ಕೆಲವು, ಶೇಕಡಾ 28, 30, 35, 40, 45 ರಷ್ಟು ಪ್ರಮಾಣದಲ್ಲಿ GR rate ಇದೆ. ಸಿಕ್ಕಿಂ ಸಣ್ಣ ರಾಜ್ಯ ಅಲ್ಲಿ GR ಪ್ರಮಾಣ ಶೇಕಡಾ 75ರಷ್ಟು ಇದೆ. ಇದೆಲ್ಲವನ್ನು ತಲುಪಬೇಕು ಎಂದರೆ, Digital Learning, Open Learning, Distance Learning ಅವರವರ ಅನುಕೂಲಕ್ಕೆ ತಕ್ಕ ಹಾಗೆ ಜ್ಞಾನ ಪಡೆಯಲಿ, ವಿದ್ಯೆ ಪಡೆಯಲಿ ಎನ್ನುವುದು ನಮ್ಮ ಮೂಲ ಉದ್ದೇಶ. ಇರುವ ಅವಕಾಶವನ್ನು ಬಳಕೆ ಮಾಡಲು ಸ್ವಲ್ಪ ಸಡಿಲಿಕೆಯನ್ನು ಮಾಡಲಾಗುತ್ತಿದೆ. ಆದರೆ ಗುಣಮಟ್ಟದಲ್ಲಿ ಎಲ್ಲಿಯು compromise ಆಗುವ ಅವಕಾಶವೇ ಇಲ್ಲ. ಗುಣಮಟ್ಟದಲ್ಲಿ ಕಡಿಮೆ ಆಗುವ ಅವಕಾಶ ಎಲ್ಲೂ ಇಲ್ಲ. ಗುಣಮಟ್ಟವನ್ನು ಕಾಪಾಡಿಕೊಳ್ಳಲಾಗುತ್ತದೆ. ನಾಲ್ಕೆ ಜನರು ಎಲ್ಲವನ್ನು ಮಾಡಿಬಿಡುತ್ತಾರೆ ಎಂದು ಹೇಳುವುದಿಲ್ಲ. ಮಾನ್ಯ ಮರಿತಿಬ್ಬೇಗೌಡರು Open University, Syndicate ಸದಸ್ಯರಾಗಿ ಕೆಲಸ ಮಾಡಿದ್ದಾರೆ. ಅಲ್ಲಿಯು ಗುಣಮಟ್ಟ ಇರುವುದಿಲ್ಲವೇ ಎನ್ನುವುದನ್ನು ನಾನು ಅವರಿಗೆ ಕೇಳಬೇಕಾಗುತ್ತದೆ. ಗುಣಮಟ್ಟವಿಲ್ಲದೆ ಹೇಗೆ Study Centers ಮಾಡಿ Contact Classes ಮಾಡಿ ಕಲಿಸುವಂತಾಗುತ್ತದೆ. Digital Learning ನಲ್ಲಿನ assessment ಆಗಲಿ, ಗುಣಮಟ್ಟವನ್ನಾಗಲಿ ಯಾರು compromise ಮಾಡಲಿಕ್ಕಾಗುವುದಿಲ್ಲ. ಇವತ್ತಿನ feedback mechanism ಉತ್ತಮವಾಗಿರುತ್ತದೆ. ಪ್ರತಿಯೊಂದು ಕಾಲೇಜಿನಲ್ಲಿ ಸಂಸ್ಥೆಗಳಲ್ಲಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪ್ರತಿಯೊಬ್ಬ ವಿದ್ಯಾರ್ಥಿಯು ಯೋಗ ಕಲಿಯುವ ಕಲಿಕೆಯು ಕಡ್ಡಾಯ ಮಾಡುವಂತಹದ್ದಾಗಲೇ ಬೇಕಾಗುತ್ತದೆ.

ಇನ್ನು ನಿರುದ್ಯೋಗ ಸಮಸ್ಯೆ ಹೆಚ್ಚಾಗುತ್ತಿದೆ ಎಂದು ಹೇಳಿದ್ದಾರೆ. ಈ ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸಬೇಕಾಗಿದೆ. ಸಮಾಜದ protentional, ಎಲ್ಲರಿಗೂ ಗೊತ್ತಿರುವಹಾಗೆ saturation ನಿಂದ ನಾವು ಬಹಳ ದೂರವಿದ್ದೇವೆ. Opportunities are plenty. ಆದರೆ ಅದು trigger ಆಗಲು ಏನೇನು ಪೂರಕವಾಗಿ ಮಾಡಬೇಕು ಎನ್ನುವಲ್ಲಿ ನಮ್ಮ knowledge sector, knowledge economy ಅಗತ್ಯವಿದೆ. Twenty-first century is completely deal with knowledge. ಎಲ್ಲಾ ಕಾಲದಲ್ಲಿಯು knowledge economyನೇ. ಇವತ್ತು ವ್ಯವಸಾಯದ ಕ್ಷೇತ್ರವನ್ನೆ ತೆಗೆದುಕೊಳ್ಳಿ, ಅದು digital farming ಬಂದಿದೆ. ಇವತ್ತು ಶೇಕಡಾ ೮೦ ರಷ್ಟು ರೈತರು ಅರ್ಧ ಎಕರೆ, ಒಂದು ಎಕರೆ, ಎರಡು ಎಕರೆ ಜಮೀನುವುಳ್ಳವರಾಗಿದ್ದಾರೆ. ದಕ್ಷಿಣ ಕನ್ನಡ ಭಾಗದಲ್ಲಿ ಭಾಗದಲ್ಲಿ ೧೦ ಎಕರೆ ಜಮೀನು ಇದ್ದರೆ ದೊಡ್ಡ ಪಟೇಲ, ಜಮೀನ್‌ದಾರ. ಇಲ್ಲಿ ಬರಿ ಒಂದು, ಎರಡು ಎಕರೆ ಜಮೀನು ಇರೊರೇ ಹೆಚ್ಚು. ಇಲ್ಲಿ ಸಾಮಾನ್ಯವಾಗಿ ೮೦% ರಿಂದ ೯೦% ಜನರಿಗೆ ಒಂದು ಅಥವಾ ಎರಡು ಎಕರೆಗಿಂತ ಹೆಚ್ಚು ಜಮೀನು ಇರುವುದಿಲ್ಲ. Fragmentation ನಲ್ಲಿ ಅರ್ಧ ಎಕರೆಯಿಂದ ಒಂದು ಎಕರೆ ಇರೋರೆ ಹೆಚ್ಚು. ಜೀವನವನ್ನು ಸಾಗಿಸಲು ಆಧುನಿಕ farming technology ನ್ನು ಉಪಯೋಗಿಸಿಕೊಂಡು ತಮ್ಮ livelihood ಅನ್ನು ಭವಿಷ್ಯವನ್ನು ಉತ್ತಮವಾಗಿ ರೂಪಿಸಿಕೊಳ್ಳಲು ಸಾಧ್ಯವಿದೆ. ಇಂದು ಹಲವಾರು ಜನರ ಯಶಸ್ಸಿನ ಕತೆ ಬಹಳ ಉತ್ತಮವಾಗಿರುವಂತಹದ್ದಿದೆ. ಈ ತಂತ್ರಜ್ಞಾನ ಎಲ್ಲಾ ಹಂತದಲಿ ಬಳಕೆಯಾಗುತ್ತಿದೆ. ಅದನ್ನು ಉಪಯೋಗಿಸಿಕೊಂಡವರು ಉತ್ತಮ ಬೇಸಾಯ ಮಾಡಿಕೊಂಡಿರುವ ಉದಾಹರಣೆಗಳು ಇವೆ. Skills ಬೇಕಾಗಿದೆ. ಜರ್ಮನ್, ಜಪಾನ್ ಎರಡನೇ ವಿಶ್ವಯುದ್ಧದ ಸಮಯದಲ್ಲಿ ಎರಡು ದೇಶಗಳು ನಾಶವಾಗಿ ಹೋಗಿದ್ದವು. How they were able to bounce back? ಹೇಗೆ bounce back ಆದರು? ಆ ನಾಗರೀಕತೆಯಲ್ಲಿರುವ ಜ್ಞಾನ ಮತ್ತು ಕೌಶಲ್ಯತೆಯಿಂದ they were again able to build back their country and become a powerful country in the World. ಇದನ್ನು ಯಾರು ಯಾವುದೇ ರೀತಿಯಲ್ಲಿ ದುರ್ಬಳಕೆಯನ್ನು ಮಾಡಿಕೊಳ್ಳಲು ಸಾಧ್ಯವೇ ಇಲ್ಲ. ಇವತ್ತು feedback mechanism ಹೇಗೆ build ಮಾಡಿದ್ದೇವೆ ಎಂದರೆ, ಯಾವುದೇ ಒಂದು ಸಂಸ್ಥೆಗೆ accreditation or regulatory body approval ಬೇಕು ಎಂದರೆ, ಅವರ ವೈಬ್‌ಸೈಟ್‌ನಲ್ಲಿ complaint or grievances ಎದ್ದು ಕಾಣುತ್ತಿದರೆ ಅಥವಾ ಸಂಸ್ಥೆಯ ವಿರುದ್ಧವಾಗಿ ಕಿರುಕುಳ ಕೊಡುವಂತಹದ್ದು, ಸರಿಯಾಗಿ ನಿರ್ವಹಣೆಯಾಗದೆ ವಿದ್ಯಾರ್ಥಿಗಳಿಗೆ ಸಮಸ್ಯೆಯಾಗಿದ್ದರೆ ಅಥವಾ arbitrary ಆಗಿ charge

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಮಾಡುವುದು, ಯಾವುದೇ ಸಂಸ್ಥೆಯು ವಿದ್ಯಾರ್ಥಿಗಳಿಂದ ಶುಲ್ಕವನ್ನು ಸಂಗ್ರಹಮಾಡಿ ಅದನ್ನು ಖರ್ಚು ಮಾಡದೆ ಇರುವುದು, ಇವೆಲ್ಲ Public Domain ನಲ್ಲಿ self disclosure ಮಾಡಲೇ ಬೇಕು. To prevent commercialization completely. ಶಿಕ್ಷಣ ಸಂಸ್ಥೆಗಳು not for profit ಕೆಲಸ ಮಾಡಬೇಕೆಂದು ಮೊದಲು ಇತ್ತು. ಆದರೆ ಇವತ್ತಿನ ಈ ಪಾಲಿಸಿಯಲ್ಲಿ it should be brought on public domain. ಮೊದಲು ಕೇವಲ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿದ್ದರು. ತೆರಿಗೆ ಇಲಾಖೆಗೆ ಸಲ್ಲಿಸುತ್ತಿದ್ದರು ಅಥವಾ ಯಾವುದಾದರೂ ವಿಶ್ವವಿದ್ಯಾನಿಲಯಕ್ಕೆ submit ಮಾಡುತ್ತಾರೆ

(ಮುಂದು)

(999)24-09-2021(12-00 AM)bsd-rn

**ಡಾ: ಸಿ.ಎಸ್.ಅಶ್ವತ್ಥ ನಾರಾಯಣ(ಮುಂದು)**:-

ಹಾಗಾಗಿ ಇಂತಹ commercialization ಮಾಡುವುದಕ್ಕೆ ಯಾವುದೇ scope ಇಲ್ಲ. Not for profit and no commercialization. Everything is on public disclosure. ಹಾಗಾಗಿ ಇಷ್ಟು ಪಾರದರ್ಶಕ ಹಾಗು ಪ್ರಗತಿಪರವಾಗಿ ಬಡವರ, ದೀನದಲಿತರ, ಧ್ವನಿ ಇಲ್ಲದ ಜನತೆ ಪರವಾಗಿರುವ ಒಂದು ನಿಜವಾದ policy ಯಾಗಿದೆ. ಶಿಕ್ಷಣ ಸಲ್ಲದವರಿಗೆ ನಿಜಕ್ಕೂ ಸಲ್ಲುವಂತಹದ್ದು ಆಗುತ್ತದೆ. ಒಳ್ಳೆಯ ರೀತಿಯಲ್ಲಿ ಇದೆ. ಯಾರೂ ಸಂವಿಧಾನದ ವಿರುದ್ಧವಾಗಿ ಇರುವುದಿಲ್ಲ. ಸಂವಿಧಾನದಲ್ಲಿ ಬಹಳ ಸ್ಪಷ್ಟವಾಗಿ ಇದೆ. ಯಾವ ದೇಶದಲ್ಲಿಯೂ minorities ಗಳಿಗೆ ಇಷ್ಟು ಮಾನ್ಯತೆ, ಸ್ವಾತಂತ್ರ್ಯ ಅಥವಾ ಅವರಿಗೆ ಎಲ್ಲಾ ರೀತಿಯಾದ ಆದ್ಯತೆಗಳನ್ನು ನಮ್ಮ ಭಾರತ ದೇಶ ಬಿಟ್ಟರೆ ಇನ್ಯಾವ ದೇಶಗಳು ಕೊಟ್ಟಿಲ್ಲ. ಯಾವುದಾದರೂ ಇದ್ದರೆ ಹೇಳಲಿ. Rights of Minorities to establish and administer educational institutions. All minorities whether based on religion or language shall have the right to establish and administer educational institution of their choice. In making any law providing for the compulsory acquisition of any property of an any educational institution established and administered by a Minority referred to in a clause. The State shall ensure that amount fixed by or determined under such law for the acquisition of such property is as such would not restrict.

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ:-** New Education Policy ಬೆಳಕಿಗೆ ಬಂದಿದ್ದು midnight ನಲ್ಲಿ ಆಗಿದೆ ಹಾಗೂ ಸ್ವಾತಂತ್ರ್ಯ ಸಿಕ್ಕಿದ್ದು midnight ನಲ್ಲಿ ಆಗಿದೆ.

"ತಿದ್ದುಪಡಿಯಾಗದ ಪ್ರತಿ: ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಸಿ.ಎಸ್. ಅಶ್ವಥನಾರಾಯಣಃ-** ಶಿಕ್ಷಣದಲ್ಲಿ ಹೆಚ್ಚಿನ ವಿದ್ಯಾರ್ಥಿಗಳು ಬರಲು ಹತ್ತಾರು ಯೋಜನೆಗಳಿವೆ. ಅವರಿಗೆ ಊಟ, ಸೈಕಲ್, ವಿದ್ಯಾರ್ಥಿವೇತನ ಕೊಡುವ ಯೋಜನೆಗಳೆಲ್ಲವೂ ಇದ್ದೇ ಇರುತ್ತದೆ ಹಾಗೂ ಇವುಗಳನ್ನು ಮುಂದುವರೆಸಿ ಹೆಚ್ಚಿನ ಆದ್ಯತೆ ಕೊಟ್ಟು ಗುಣಮಟ್ಟವನ್ನು ಹೆಚ್ಚಿಸುತ್ತೇವೆ. ತಮಗೆಲ್ಲರಿಗೂ ಗೊತ್ತಿರುವ ಹಾಗೆ Foundation Education 5+3+3+4 system ಇವೆಲ್ಲವೂ ಉತ್ತಮವಾಗಿದೆ. ಅಂಗನವಾಡಿಗಳು integration ಮಾಡುತ್ತಿರುವುದು ಇದೆ. ಅವಶ್ಯಕತೆ ಎಲ್ಲೆಲ್ಲಿ ಇದೆ. ಇಂತಹವುಗಳನ್ನು ಉತ್ತಮವಾಗಿ ಮಾಡಿರುವುದು ಇದೆ. ಇನ್ನು ಬೇಕಾದಷ್ಟು ವಿಚಾರಗಳು ಇದ್ದು ಅವರು ಕೇಳಿರುವುದಕ್ಕೆ ಮಾತ್ರ ಹೇಳಿದ್ದೇನೆ.

**ಸಭಾಪತಿಯವರುಃ-** ನಾನು ನಾಲ್ಕು ಗಂಟೆಗಳಿಂದ ಪೀಠದಲ್ಲಿ ಕುಳಿತಿದ್ದೇನೆ, ಯಾರೂ ಎಬ್ಬಿಸುವವರು ಇಲ್ಲ. ಮಾನ್ಯ ಸದಸ್ಯರು ಹೊರಗೆ ಹೋಗಿ ಬರುತ್ತಾರೆ.

**ಶ್ರೀ ಮರಿತಿಬ್ಬೇಗೌಡಃ-** ಬೆಳಗಿನ ಜಾವ ಆಯಿತು, ೧೦ ನಿಮಿಷ ಕಾಫಿಗೆ ಬಿಡಿ.

**ಶ್ರೀ ಸಿ.ಎಸ್. ಅಶ್ವಥನಾರಾಯಣಃ-** ಇಷ್ಟು ವಿಚಾರಗಳನ್ನು ಹೇಳುತ್ತಾ, ಕೊನೆಗೆ ಒಬ್ಬ ವಿದ್ಯಾರ್ಥಿ ಮಾನ್ಯ ಮರಿತಿಬ್ಬೇಗೌಡರು ಹೇಳಿದಂತೆ ಆಳವಾಗಿ ಕಲಿಯಲು broad based and deep ಆಗಿದೆ. First year and Second year ಮಾತ್ರ Discipline core and Open electives ಓದಲು ಇದೆ. Final year ಗೆ ಬಂದಾಗ ಮೇಜರ್ ತೆಗೆದುಕೊಳ್ಳಲು ಅವಕಾಶ ಇರುತ್ತದೆ. He can take one major and one minor. ತುಂಬಾ ಓದಿ ಸಾಧನೆ ಮಾಡುವವರು ಎರಡನ್ನೂ ಮೇಜರ್ ತೆಗೆದುಕೊಳ್ಳಬಹುದು. Extra credit ತೆಗೆದುಕೊಳ್ಳಬೇಕು. Credit system ಇದೆ. ಯಾವ ಸಂಸ್ಥೆಯಿಂದ ಯಾವ ಸಂಸ್ಥೆಗೆ ಬೇಕಾದರೂ ಹೋಗಬಹುದು. ಒಂದು ವರ್ಷ ಒಂದು ಕಡೆ ಮತ್ತೊಂದು ವರ್ಷ ಇನ್ನೊಂದು ಕಡೆ ಓದಬಹುದು. ಒಂದು ವಿಶ್ವವಿದ್ಯಾಲಯದಿಂದ ಮತ್ತೊಂದು ವಿಶ್ವವಿದ್ಯಾಲಯಕ್ಕೆ ಹೋಗಬಹುದು. ಎಲ್ಲಿಯೂ restrictions ಇಲ್ಲ. ಏಕೆಂದರೆ academic bank of credit ಇದೆ. ಹಾಗಾಗಿ ಬಹಳಷ್ಟು ಸಡಿಲತೆ ಹಾಗೂ ಸ್ವಾತಂತ್ರ್ಯ ಇದೆ. ವಿದ್ಯಾರ್ಥಿಗಳಿಗೆ ಪೂರಕವಾಗಿ ultimately we need to give back to the society. ಈ ಎಲ್ಲಾ ಕಾರಣಗಳಿಂದ ನನ್ನ ಸದಸ್ಯರಲ್ಲಿ ನನ್ನ ಕೋರಿಕೆ ಏನೆಂದರೆ, ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ವಿದ್ಯಾರ್ಥಿಗಳಿಗೆ ಎಲ್ಲವೂ ಪೂರಕವಾಗಿದೆ ಮತ್ತು ಉತ್ತಮವಾದ ಶಿಕ್ಷಣ ಕೊಡಲು ಸುವರ್ಣಾವಕಾಶ ಇದೆ. ಇದನ್ನು ಮುಂದೆಯೂ ಮಾಡುತ್ತೇವೆ. ಹಾಗಾಗಿ Legislation and Structural Administrative change Reforms ಗಳನ್ನು ಮುಂದಿನ ದಿನಗಳಲ್ಲಿ ಇಲ್ಲಿಯೇ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತರುವಂತಹದ್ದು ಇದೆ. ಅವುಗಳನ್ನು ತರುವ ಕೆಲಸವೂ ಆಗುತ್ತದೆ ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಬಿ.ಕೆ. ಹರಿಪ್ರಸಾದ್ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಇಷ್ಟೆಲ್ಲಾ ಭಾಷಣ ಕೇಳಿದ ಮೇಲೆ ನಾವು ಮಂಡಿಸಿದ ವಿಚಾರಗಳಿಗೆ ಉತ್ತರ ಬರುತ್ತದೆ ಎಂದು ನಾನು ತಿಳಿದುಕೊಂಡಿದ್ದೆನು. ಆದರೆ ಪದ-ಪುಂಜಗಳನ್ನು ಸೇರಿಸಿ ಹೇಳಿಬಿಟ್ಟರೆ ಅದು ಉತ್ತರವಾಗುವುದಿಲ್ಲ. ಸಂವಿಧಾನದ ಯಾವುದೇ ಆಶಯಗಳನ್ನು ಹೊರತುಪಡಿಸಿಲ್ಲ ಎಂದು ಮಾನ್ಯ ಸಚಿವರು ಹೇಳಿದರು. ಸಂವಿಧಾನದ ಮೂಲ ಆಶಯ ಏನಿದೆ, ಪ್ರಜಾಪ್ರಭುತ್ವದಲ್ಲಿ ಎಲ್ಲರ ಜೊತೆ ಚರ್ಚೆ ಮಾಡಿ ತರಬೇಕಾಗಿರುವ ನೀತಿ ಇದಾಗಿದೆ, ಎಷ್ಟು ರಾಜಕೀಯ ಪಕ್ಷಗಳಲ್ಲಿ ಚರ್ಚೆ ಮಾಡಿದ್ದಾರೆ, ಪಾರ್ಲಿಮೆಂಟ್ ಮತ್ತು ಅಸೆಂಬ್ಲಿಯಲ್ಲಿ ಏನು ಚರ್ಚೆ ಮಾಡಿದ್ದಾರೆ? ಇದನ್ನೇ ಸಂವಿಧಾನದ ವಿರುದ್ಧ ಎಂದು ನಾನು ಹೇಳುತ್ತಿರುವುದು. ಎರಡನೆಯದಾಗಿ ೧೯೮೦ರ ಹೊಸ ಶಿಕ್ಷಣ ನೀತಿಯಲ್ಲಿ ಭಾರತೀಯ ಮೌಲ್ಯಗಳು ಇರಲಿಲ್ಲ, ಮೌಲ್ಯಾಧಾರಿತ ಶಿಕ್ಷಣವನ್ನು ಕೊಡುತ್ತೇವೆ ಎಂದು ಹೇಳಿದ್ದಾರೆ. ಇದನ್ನು ನಾವು ಯಾವಾಗಲೂ ಆರ್‌ಎಸ್‌ಎಸ್ ನವರಿಂದ ಕೇಳುತ್ತೇವೆ. ಆರ್‌ಎಸ್‌ಎಸ್ ನವರ ಬೇಡಿಕೆ ಏನಿದೆ? ಭಾರತದ ಸಂವಿಧಾನ, ತ್ರಿವರ್ಣ ಧ್ವಜವನ್ನು ಭಗವತ್ ಧ್ವಜ, ರಾಷ್ಟ್ರಗೀತೆಯನ್ನು ಒಂದೇ ಮಾತರಂ ಎಂಬುದೆಲ್ಲವನ್ನೂ ಮೌಲ್ಯಾಧಾರಿತ ಎಂದು ಕೇಳಿಕೊಂಡು ಬಂದಿದ್ದೇವೆ. ಇದು ಗುಪ್ತಸೂಚಿ. ಆರ್‌ಎಸ್‌ಎಸ್ ನ hidden agenda ವನ್ನು ಯಾವುದೋ ಒಂದು ರೀತಿಯಲ್ಲಿ ಹೇರಲು ಮಾಡುತ್ತಿರುವ ಕೆಲಸವಾಗಿದೆ. ಆನ್‌ಲೈನ್ ಬಗ್ಗೆ ಹೇಳಿದ್ದು, ಆನ್‌ಲೈನ್ ಎಷ್ಟು ಚೆನ್ನಾಗಿ ನಡೆಯುತ್ತದೆ ಎಂಬುದು ನಮಗೆ ಗೊತ್ತು. ಆನ್‌ಲೈನ್‌ನಲ್ಲಿ suggestions ತೆಗೆದುಕೊಂಡು ಬಿಟ್ಟರೆ ಬೇರೆ ಯಾರೂ responsible people ಇಲ್ಲವೇ? WhatsApp University ಯಲ್ಲಿ suggestions ತೆಗೆದುಕೊಳ್ಳುತ್ತಾರೆ. ನಮ್ಮ ಪ್ರಶ್ನೆಗಳಿಗೆ ಉತ್ತರ ಬರಲಿಲ್ಲ. ಇದಲ್ಲದೇ Seventh Schedule ಅನ್ನು ಕಾಂಗ್ರೆಸ್‌ನವರು emergency ಯಲ್ಲಿ ತಂದರು. ಅದರರ್ಥ ರಾಜ್ಯಕ್ಕೆ Federal System ನ ಹಕ್ಕು ಕಿತ್ತುಕೊಳ್ಳಬಾರದು ಎಂದು ತಂದಿದ್ದಾದರೂ ಅದನ್ನು ಕಿತ್ತುಕೊಳ್ಳುತ್ತಿದ್ದಾರೆ. UGC, AICTE, MCI, Dental, Medical ಇವೆಲ್ಲದ್ದರಿಂದ ಬಹಳ ಗೋಜಲು ಎಂದು ಹೇಳಿದರು. ಆದರೆ ಅವರು ತಂದಿರುವ NEET ಪರೀಕ್ಷೆಯಿಂದ ಕೋರ್ಟ್ ಏನು ಉತ್ತರ ಕೊಡುತ್ತಿದೆ ಮತ್ತು ಎಷ್ಟು ಜನ ಮಕ್ಕಳು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ ಎಂಬುದನ್ನು ನೋಡಲಿ. Higher Education Council of India ಎಂದು ತಂದು ಎಲ್ಲರನ್ನು ಮರ್ಜ್ ಮಾಡಲು ಹೋಗುತ್ತಿರುವುದು ಭ್ರಷ್ಟಾಚಾರಕ್ಕೆ ಮತ್ತೊಂದು ಕೌನ್ಸಿಲ್ ಆಗುತ್ತದೆಯೇ ಹೊರತು ವಿದ್ಯಾರ್ಥಿಗಳ ಸಮಸ್ಯೆಗೆ ಇದು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪರಿಹಾರವಲ್ಲ!, ಇದಲ್ಲದೇ ಶ್ರೀ ಕಸ್ತೂರಿ ರಂಗನ್ ಬಗ್ಗೆ ನಮಗೂ ಅಪಾರವಾದ ಗೌರವ ಇದೆ. ಅವರು ಸರ್ದಾರ್ ಪಟೇಲ್ ಎಂದು ಹೇಳುತ್ತಿದ್ದು, ಅದ್ಯಾವುದೋ ಕ್ರಿಕೆಟ್ ಸ್ಟೇಡಿಯಂಗೆ ಸರ್ದಾರ್ ಪಟೇಲರ ಹೆಸರನ್ನು ತೆಗೆದು ಪ್ರಧಾನ ಮಂತ್ರಿಯವರ ಹೆಸರನ್ನು ಇಟ್ಟುಬಿಟ್ಟರು. ಅದೇರೀತಿಯ ಮುಖವಾಡ ಇದೂ ಆಗಿದೆ ಎಂದು ಹೇಳಿದ್ದೇವೆ. ಅಂತಹವರನ್ನು ಮುಂದಿಟ್ಟುಕೊಂಡು ಗುಪ್ತ ಕಾರ್ಯಸೂಚಿಯನ್ನು ಜಾರಿಗೆ ತರಲು ಒಳ್ಳೆಯ ಮುಖ ಇಟ್ಟುಕೊಂಡಿದ್ದಾರೆ. Three Language Policy ಯಲ್ಲಿ ಹಿಂದಿ ಕಡ್ಡಾಯ ಮಾಡಿರುವ ಬಗ್ಗೆ ಹೇಳಿದರು. Basically, Mother Tongue mandatory with consent. ಅವರು ಯಾವುದಾದರೂ ಹಿಂದಿ ಅಥವಾ ಇಂಗ್ಲೀಷ್ ತೆಗೆದುಕೊಳ್ಳಬಹುದು ಎಂದು ಹೇಳಿದರು. ಅವರಿಗೆ ಎಲ್ಲಿಯೂ ಕಡ್ಡಾಯ ಮಾಡಿರಲಿಲ್ಲ. ಈಗ ಮಾತೃಭಾಷೆ ಜೊತೆ ಯಾವುದಾದರೂ ಭಾಷೆ ಎಂದು ಹೇಳುತ್ತಿರುವುದು ಕೊನೆಗೆ ಹಿಂದಿ ಭಾಷೆಗೆ ಬರುತ್ತದೆ. ಇದರ ಷಡ್ಯಂತರ ಗೊತ್ತಾವುದಿಲ್ಲ ಎಂದು ಹೇಳುವುದು ಬೇಡ. ಅವರಲ್ಲಿ ಪದ-ಪುಂಜಗಳು ಬಹಳಷ್ಟು ಇದೆ. ಆದ್ದರಿಂದ ಇದು ಜನ ಸಾಮಾನ್ಯರ ವಿರೋಧ ನೀತಿ ಹಾಗೂ ಸಂವಿಧಾನದ ವಿರೋಧವಾಗಿದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿಃ-** ಮಾನ್ಯ ಸಭಾಪತಿಯವರೇ,

**ಶ್ರೀ ಬಿ.ಕೆ. ಹರಿಪ್ರಸಾದ್:-** ಅವರು ಹೇಳಿದ್ದನ್ನೆಲ್ಲಾ ನಾವು ಒಪ್ಪಿಕೊಳ್ಳಬೇಕೇ?

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿಃ-** ನಾನು ಅವರ ವಿರುದ್ಧ ಮಾತನಾಡುವುದಿಲ್ಲ. ಅನೇಕ ಬಾರಿ ನಾವು ನಂಬಿಕೊಂಡಿರುವ ಮುಖಂಡರುಗಳ ಬಗ್ಗೆ ಗೌರವ ಇರುತ್ತದೆ. ಕಾಂಗ್ರೆಸ್‌ನಲ್ಲಿ ಮಾನ್ಯ ರಾಜೀವ್ ಗಾಂಧಿಯವರು ಹಾಗೂ ಅವರ ಭಾವನೆಗಳ ಬಗ್ಗೆ ಗೌರವ ಇದೆ. ನಮಗೂ ಅವರ ಬಗ್ಗೆ ಗೌರವ ಇದೆ, ಆದರೆ ಅವರಿಗೆ ಹೆಚ್ಚು ಇದೆ. ಶ್ರೀಮತಿ ಇಂದಿರಾಗಾಂಧಿಯವರು ಹೇಳಿದ ಮಾತುಗಳ ಬಗ್ಗೆ ಅವರಿಗೆ ಅಪಾರವಾದ ಗೌರವ ಇರುತ್ತದೆ. ನಾನು ಮಾನ್ಯ ಹರಿಪ್ರಸಾದ್‌ರವರಿಗೆ ಕೇಳುವುದೇನೆಂದರೆ, ಮಾನ್ಯ ನೆಹರೂ ಜೀ ರವರು ಏನು ಹೇಳಿದ್ದಾರೆ ಎಂಬುದನ್ನು ಒಂದು ಬಾರಿ ನೋಡುತ್ತಾರೆಯೇ? ರಾಷ್ಟ್ರೀಯ ಸ್ವಯಂಸೇವಕ ಸಂಘವನ್ನು ದೂರುತ್ತಿರುವಾಗ ಮಾನ್ಯ ನೆಹರೂ ರವರು ಒಂದು ಬಾರಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ಹಿರಿಯರನ್ನು ಕರೆದು ಗಣರಾಜ್ಯೋತ್ಸವದಲ್ಲಿ ಪಥಸಂಚಲನ ಮಾಡುವ ಬಗ್ಗೆ ಹೇಳುತ್ತಾರೆ. ಅಂದರೆ ಅವರಿಗೆ ಇರುವ ರಾಷ್ಟ್ರಭಕ್ತಿಯನ್ನು ಗಮನದಲ್ಲಿಟ್ಟುಕೊಂಡು ಹೇಳುತ್ತಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(1000)24.09.2021/12.10(AM)/ಹೆಚ್‌ವಿ:ವಿಕೆ

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಮುಂದುವರಿದದ್ದು):-**

ಸನ್ಮಾನ್ಯ ಸಭಾಪತಿಯವರೇ, ಆರ್.ಎಸ್.ಎಸ್. ಸಂಘಟನೆಯನ್ನು ಗೌರವಿಸಬೇಕಾಗುತ್ತದೆ. ಟೀಕೆ ಮಾಡುವುದರಲ್ಲಿ ಏನರ್ಥವಿದೆ? ಅದನ್ನು ಬಿಟ್ಟು, 'ನಾನು ಹೇಳುತ್ತಿರುವುದೇ ಸರಿ' ಎಂದು ಅವರು ಹೇಳಿದರೆ ನನ್ನ ಆಕ್ಷೇಪವೇನೂ ಇಲ್ಲ. ಅವರ ಬಗ್ಗೆ ನನಗೆ ಗೌರವವಿದೆ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಸನ್ಮಾನ್ಯ ಸಭಾಪತಿಯವರೇ, ಸದನದಲ್ಲಿ ಇಡೀ ಒಂದು ದಿನ ಆರ್.ಎಸ್.ಎಸ್. ಬಗ್ಗೆಯೇ ಚರ್ಚೆ ಇಟ್ಟುಕೊಂಡರೇ ಆಗ ಮಾನ್ಯ ಜವಹರಲಾಲ್ ನೆಹರು ಅವರು ಏನು ಹೇಳಿದ್ದರು, ಶ್ರೀ ಸರ್ದಾರ್ ವಲ್ಲಭಭಾಯ್ ಪಟೇಲ್‌ರವರು ಏನು ಹೇಳಿದರು, 'ಹಿಂದೂ ಮಹಾಸಭಾ'ದ ರಾಷ್ಟ್ರೀಯ ಅಧ್ಯಕ್ಷರಾಗಿದ್ದ ಶ್ರೀ ಬಿ.ಎಸ್.ಮೂಂಜೇಯವರು ಏನು ಹೇಳಿದ್ದಾರೆ ಮತ್ತು ಅವರು ಎಲ್ಲಿಗೆ ಹೋಗಿದ್ದರು ಎನ್ನುವುದರ ಬಗ್ಗೆ ಚರ್ಚೆ ಮಾಡೋಣ. ಇದರ ಬಗ್ಗೆ ನನ್ನ ಅಭ್ಯಂತರವೇನೂ ಇಲ್ಲ. ಅದಕ್ಕೆ ನಾವುಗಳು ತಯಾರಿದ್ದೇವೆ. ಇದು ಸಾಮಾಜಿಕ ನ್ಯಾಯದ ವಿರುದ್ಧ, ಸಂವಿಧಾನದ ವಿರುದ್ಧ, ಒಕ್ಕೂಟ ವ್ಯವಸ್ಥೆಯ ವಿರುದ್ಧವಾಗಿದೆ. ನೂತನ ಶಿಕ್ಷಣ ನೀತಿಯನ್ನು ಜಾರಿಗೊಳಿಸುವ ಮೂಲಕ ಆರ್.ಎಸ್.ಎಸ್.ನ hidden agenda ಅನ್ನು ಅನುಷ್ಠಾನಗೊಳಿಸುವ ಹುನ್ನಾರವಾಗಿದೆ. ಇದನ್ನು ನಾವುಗಳು ಒಪ್ಪುವುದಕ್ಕೆ ಸಾಧ್ಯವಿಲ್ಲ, ಈಗ ಜಾರಿಗೊಳಿಸಲು ಹೊರಟಿರುವ ನೂತನ ಶಿಕ್ಷಣ ನೀತಿಯನ್ನು ಪುನಃ ಪರಿಷ್ಕರಿಸಿ ಜಾರಿಗೆ ತರುವುದು ಉತ್ತಮ ಎಂದು ಹೇಳುತ್ತಾ, ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತಿದ್ದೇನೆ.

**ಶ್ರೀ ಆರ್.ಬಿ.ತಿಮ್ಮಾಪೂರ(ವಿಧಾನಸಭೆಯಿಂದ ಚುನಾಯಿತರಾದವರು):-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಬಿ.ಕೆ.ಹರಿಪ್ರಸಾದ್‌ರವರು ಹೇಳಿದಂತೆ ಇವರುಗಳು ಬಹಳ ಒಳ್ಳೆಯ ಪದಪುಂಜಗಳನ್ನು ಬಳಕೆ ಮಾಡುತ್ತಾರೆ. ಹಿಂದುಳಿದ ಜಾತಿ ಜನಾಂಗದವರು ಬಲಿಷ್ಠರೊಂದಿಗೆ ಹೋರಾಟ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಅವರ ಮಟ್ಟದ ಶಿಕ್ಷಣವನ್ನು ಪಡೆಯುವುದಕ್ಕೆ ಸಾಧ್ಯವಾಗುವುದಿಲ್ಲ ಮತ್ತು ಅವರಷ್ಟು ಹಣವಂತರಲ್ಲ ಎನ್ನುವ ದೃಷ್ಟಿಯಿಂದ ಸಂವಿಧಾನದಲ್ಲಿ ಶೇಕಡಾ 15ರಷ್ಟು ಮೀಸಲಾತಿಯನ್ನು ನೀಡಲಾಗಿದೆ. ಈ ಸರ್ಕಾರದವರು ದೊಡ್ಡದೊಡ್ಡ ಶಿಕ್ಷಣ ಸಂಸ್ಥೆಗಳನ್ನು ಹುಟ್ಟುಹಾಕುತ್ತಿದ್ದಾರೆ. ಪ್ರಸ್ತುತ ಚಾಣಕ್ಯ ವಿಶ್ವವಿದ್ಯಾಲಯಕ್ಕೆ ಸುಮಾರು 116 ಎಕರೆ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಜಾಗವನ್ನು ಮತ್ತು ಸುಮಾರು 300 ಕೋಟಿ ಹಣವನ್ನು ಕೊಟ್ಟಿದ್ದಾರೆ. ಹಿಂದುಳಿದ ಮತ್ತು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಕ್ಕೆ ಸೇರಿದಂತಹ ವಿದ್ಯಾಸಂಸ್ಥೆಗಳು ಇವರೊಂದಿಗೆ ಪೈಪೋಟಿ ಎದುರಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಹಿಂದುಳಿದ ಮತ್ತು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಕ್ಕೆ ಸೇರಿದಂತಹ ಜಾತಿ ಜನಾಂಗದಲ್ಲಿಯೂ ಇಂತಹ ಶಿಕ್ಷಣ ಸಂಸ್ಥೆಗಳನ್ನು ಹುಟ್ಟು ಹಾಕುವ ಭಾವನೆ ಮತ್ತು ಆ ಸಂಸ್ಥೆಗಳಿಗೆ ಸಹಾಯ ಮಾಡುವ ಭಾವನೆ ಇವರಲ್ಲಿ ಇದೆಯೇ? ಆ ಜನಾಂಗದವರು ಇವರ ಕಂಡೀಶನ್‌ಗಳನ್ನು ಪೂರ್ಣಗೊಳಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಅವರುಗಳು ಬೆಂಗಳೂರಿನಲ್ಲಿ 10 ಎಕರೆ ಭೂಮಿಯನ್ನು ಪಡೆದುಕೊಳ್ಳುವುದಕ್ಕೆ ಮತ್ತು 10 ಕೋಟಿ ರೂಪಾಯಿಗಳ ಠೇವಣಿಯನ್ನು ಇಡುವುದಕ್ಕೆ ಸಾಧ್ಯವಾಗುವುದಿಲ್ಲ. ಈ ಹಿನ್ನೆಲೆಯಲ್ಲಿ ಸರ್ಕಾರ ಈ ಜನಾಂಗದವರಿಗೆ ಸಹಾಯ ಮಾಡಬೇಕಾಗುತ್ತದೆ. ಈ ಜನಾಂಗದವರ ವಿದ್ಯಾಸಂಸ್ಥೆಗಳನ್ನು ಬೆಳೆಯಿಸಬೇಕೆನ್ನುವ ಭಾವನೆ ಅವರಲ್ಲಿ ಬೆಳೆಯಬೇಕೆನ್ನುವ ಮಾತುಗಳನ್ನು ಹೇಳುತ್ತಾ, ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತಿದ್ದೇನೆ.

**ಶ್ರೀ ಮರಿತಿಬ್ಬೇಗೌಡ(ಶಿಕ್ಷಕರ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ಉನ್ನತ ಶಿಕ್ಷಣ ಸಚಿವರಾಗಿರುವ ಡಾ||ಅಶ್ವಥನಾರಾಯಣರವರು ಇಷ್ಟೊಂದು ಚೆನ್ನಾಗಿ ಮಹಾಭಾರತವನ್ನು ಪಠನ ಮಾಡುತ್ತಾರೆಂದು ನನಗೆ ಈಗ ಅರ್ಥವಾಯಿತು. ಪ್ರಾಥಮಿಕ ಶಿಕ್ಷಣ ಮತ್ತು ಉನ್ನತ ಶಿಕ್ಷಣದಲ್ಲಿ ನೂತನ ಶಿಕ್ಷಣ ನೀತಿಯನ್ನು ಜಾರಿಗೆ ತರುವ ಬಗ್ಗೆ ನಮ್ಮ ವಿರೋಧವಿಲ್ಲ. ಸದಾ ನಾವು ಇದನ್ನು ಸ್ವಾಗತಿಸುತ್ತೇವೆ. ಈ ಶಿಕ್ಷಣ ನೀತಿ ಸಮಾಜದ ಕಟ್ಟಕಡೆಯ ವಿದ್ಯಾರ್ಥಿಯ ಭವಿಷ್ಯವನ್ನು ರೂಪಿಸುವಂತಿರಬೇಕಾಗುತ್ತದೆ. ಆ ಹಿನ್ನೆಲೆಯಲ್ಲಿ ಕೆಲವು ಅಂಶಗಳನ್ನು ಬದಲಾವಣೆ ಮಾಡಿಕೊಳ್ಳಬೇಕೆನ್ನುವ ನಿಟ್ಟಿನಲ್ಲಿ ನಮ್ಮ ಸಲಹೆಸೂಚನೆಗಳನ್ನು ಈ ಸದನದ ಮೂಲಕ ನೀಡುತ್ತಿದ್ದೇವೆ. ಇದು ಅವರಿಗೆ ಕೆಟ್ಟದಾಗಿ ಕಾಣುತ್ತಿದೆ. ಮಾನ್ಯ ಉನ್ನತ ಶಿಕ್ಷಣ ಸಚಿವರು ಸುದೀರ್ಘವಾಗಿರುವ ಉತ್ತರವನ್ನು ಕೊಟ್ಟಿದ್ದಾರೆ. ಕೌಶಲ್ಯ ಅಭಿವೃದ್ಧಿಯ ಬಗ್ಗೆ ಮಾನ್ಯ ಸಚಿವರು ಬಹಳ ಚೆನ್ನಾಗಿ ತಿಳಿದುಕೊಂಡಿದ್ದಾರೆ. ಆದರೆ, ಈ ರಾಷ್ಟ್ರದಲ್ಲಿ ಮತ್ತು ಈ ರಾಜ್ಯದಲ್ಲಿ ಒಂದು ವರ್ಷದ ಸರ್ಟಿಫಿಕೇಟ್ ಕೋರ್ಸ್ ಮಾಡಿದವರಿಗೆ ಯಾವ ಕಂಪನಿಯಲ್ಲಿ ಎಲ್ಲಿ ಉದ್ಯೋಗ ಸಿಗುತ್ತದೆ ಎನ್ನುವುದನ್ನು ಪ್ರಚುರಪಡಿಸಿಲ್ಲ.

ಸನ್ಮಾನ್ಯ ಸಭಾಪತಿಯವರೇ, ಮೂಲಭೂತವಾಗಿ ಏನೇನು ಸಿದ್ಧತೆಗಳನ್ನು ಮಾಡಿಕೊಳ್ಳಬೇಕೆನ್ನುವುದರ ಬಗ್ಗೆ ಮಾನ್ಯ ಸಚಿವರು ಏನನ್ನು ತಿಳಿಸಿಲ್ಲ. ಬಿ.ಓ.ಜಿ.ಯನ್ನು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಾವು ಇನ್ನೂ ಕೂಡ ರಚನೆ ಮಾಡಿಕೊಂಡಿಲ್ಲ. ಶಿಕ್ಷಣ ಸಂಸ್ಥೆಗಳಲ್ಲಿ Governing Council is most important. ಯು.ಜಿ.ಸಿ., ಎ.ಐ.ಸಿ.ಟಿ.ಇ., ವಿಶ್ವವಿದ್ಯಾಲಯಗಳಲ್ಲಿ ಕೂಡ ಬಿ.ಓ.ಜಿ.ಯನ್ನು ರಚನೆ ಮಾಡಿಲ್ಲ. ಅದೇ ಅಲ್ಲವೇ Governing Body? ಆ Governing Body ಯಲ್ಲಿ ಏನು ನಿರ್ಣಯವನ್ನು ತೆಗೆದುಕೊಳ್ಳಲಾಗುತ್ತದೆ. ಅದನ್ನೇ ನಾವು ಜಾರಿಗೊಳಿಸುತ್ತೇವೆ.

ಸನ್ಮಾನ್ಯ ಸಭಾಪತಿಯವರೇ, ಈಗತಾನೇ ಮಾನ್ಯ ಗೃಹ ಸಚಿವರು ಗೃಹ ಇಲಾಖೆಗೆ ಸಂಬಂಧಿಸಿದಂತೆ ಕರ್ನಾಟಕ ಪೊಲೀಸು(ತಿದ್ದುಪಡಿ) ವಿಧೇಯಕವನ್ನು ಮಂಡನೆ ಮಾಡಿದರು. ಕೇವಲ ವಿಧೇಯಕಗಳನ್ನು ಮಂಡನೆ ಮಾಡುವುದರಿಂದ ಜನರು ಜೂಜಾಡುವುದನ್ನು ತಪ್ಪಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಜನರನ್ನು ಶಿಕ್ಷಣದಿಂದ ಜಾಗೃತಗೊಳಿಸಬೇಕಾಗಿದೆ. ಅಜ್ಞಾನಿಗಳನ್ನು ಸುಜ್ಞಾನಿಗಳನ್ನಾಗಿ ಮತ್ತು ವಿಚಾರವಂತರನ್ನಾಗಿ ಮಾಡಬೇಕಾಗಿದೆ. ಜನರನ್ನು ಮೂಢ ನಂಬಿಕೆಗಳಿಂದ ಹೊರತರಬೇಕಾಗಿದೆ. ಇದು ಶಿಕ್ಷಣದಿಂದ ಮಾತ್ರವೇ ಸಾಧ್ಯವಾಗುತ್ತದೆ.

ಸನ್ಮಾನ್ಯ ಸಭಾಪತಿಯವರೇ, ಸ್ವಾಮಿ ವಿವೇಕಾನಂದರು, 'ನಿಮ್ಮ ಇಚ್ಛೆಯಂತೆ ನೀವಿರುತ್ತೀರಿ, ನಿಮ್ಮ ಆಲೋಚನೆಗಳಂತೆ ನೀವಿರುತ್ತೀರಿ, ಒಳ್ಳೆಯ ಆಲೋಚನೆಗಳನ್ನು ಮಾಡಿದರೆ, ಒಳ್ಳೆಯದಾಗುತ್ತದೆ. ಕೆಟ್ಟ ಆಲೋಚನೆಗಳನ್ನು ಮಾಡಿದರೆ ಕೆಟ್ಟದಾಗುತ್ತದೆ' ಎನ್ನುವ ಮಾತುಗಳನ್ನು ಹೇಳಿದ್ದಾರೆ. ಪ್ರತಿಯೊಬ್ಬರಲ್ಲೂ ಜ್ಞಾನ ಎನ್ನುವುದು ಇದೆ. ಅದನ್ನು ಬಳಸಿಕೊಂಡು ವಿಚಾರವಂತರಾಗಬೇಕು, ಒಳ್ಳೆಯದನ್ನು ಆಯ್ಕೆ ಮಾಡಿಕೊಳ್ಳಬೇಕೆನ್ನುವುದು ಇದರರ್ಥವಾಗಿದೆ. ಉದಾಹರಣೆಗೆ ಹೇಳಬೇಕಾದರೆ, ಕನಕದಾಸರ ಗುರುಗಳು ದೇವರು ಇದ್ದಾನೆಯೇ ಇಲ್ಲವೇ ಎನ್ನುವುದರ ಬಗ್ಗೆ ತಿಳಿಸುವುದಕ್ಕೆ ಅವರ ಎಲ್ಲ ಶಿಷ್ಯರನ್ನು ಕರೆದು, ಎಲ್ಲ ಶಿಷ್ಯರಿಗೂ ಒಂದೊಂದು ಬಾಳೆಹಣ್ಣನ್ನು ಕೊಟ್ಟು, 'ದೇವರಿಗೆ ಕಾಣದೇ ಇರುವ ಸ್ಥಳದಲ್ಲಿ ತಿಂದು ಬರಬೇಕು' ಎನ್ನುವ ಮಾತನ್ನು ಹೇಳುತ್ತಾರೆ. ಕನಕದಾಸರನ್ನು ಹೊರತುಪಡಿಸಿ ಉಳಿದೆಲ್ಲ ಶಿಷ್ಯಂದಿರು ಬಾಗಿಲು ಮರೆಯಲ್ಲಿ, ಮಂಚದ ಕೆಳಗೆ ಹಾಗೂ ಇನ್ನೂ ಬೇರೆ ಕಡೆಗಳಲ್ಲಿ ಅವಿತುಕೊಂಡು ಬಾಳೆಹಣ್ಣನ್ನು ತಿಂದು ಬಂದಿರುತ್ತಾರೆ. ಕನಕದಾಸರು ಮಾತ್ರ ಬಾಳೆಹಣ್ಣನ್ನು ವಾಪಸ್ಸು ತೆಗೆದುಕೊಂಡು ಬಂದು ಗುರುಗಳ ಬಳಿ ಇಡುತ್ತಾರೆ. 'ಎಲ್ಲರೂ ದೇವರು ಕಾಣದೇ ಇರುವ ಜಾಗಗಳಲ್ಲಿ ಬಾಳೆ ಹಣ್ಣನ್ನು ತಿಂದು ಬಂದಿದ್ದಾರೆ, ನೀನು ಮಾತ್ರ ವಾಪಸ್ಸು ತಂದಿರುವ ಕಾರಣವೇನು?' ಎಂದು ಕೇಳಿದಾಗ, ಕನಕದಾಸರು, 'ಗುರುಗಳೇ, ದೇವರು ಇಲ್ಲದಿರುವ ಜಾಗ ಯಾವುದು? ಎಲ್ಲಾ ಕಡೆ ದೇವರು

ಇದ್ದಾನೆ. ಆತನಿಗೆ ಕಾಣದಂತೆ ಈ ಹಣ್ಣನ್ನು ತಿನ್ನುವುದಕ್ಕೆ ಸಾಧ್ಯವೇ?' ಎಂದು ಕೇಳುತ್ತಾರೆ. ಆಗ ಗುರುಗಳು ಉಳಿದ ಶಿಷ್ಯರನ್ನು ಉದ್ದೇಶಿಸಿ, 'ಜ್ಞಾನ ಎಂದರೆ ಇದು' ಎಂದು ಹೇಳುತ್ತಾರೆ. ಇಂದು ಅಂತಹ ಜ್ಞಾನದ ಅವಶ್ಯಕತೆಯಿದೆ. ರಾಷ್ಟ್ರಕವಿ ಕುವೆಂಪು, ಸ್ವಾಮಿ ವಿವೇಕಾನಂದರು ಮತ್ತು ಗೌತಮ ಬುದ್ಧ ಮುಂತಾದ ಜ್ಞಾನಿಗಳು 'ಈ ರೀತಿಯ ಜ್ಞಾನದ ಅರಿವನ್ನುಂಟು ಮಾಡಬೇಕು' ಎಂದು ಹೇಳಿದ್ದಾರೆ. ಸರ್ಕಾರ ಶಿಕ್ಷಣ ಕ್ಷೇತ್ರದಲ್ಲಿ ಬದಲಾವಣೆ ತರಲು ಹೊರಟಿರುವ ಈ ಸಂದರ್ಭದಲ್ಲಿ ನೈತಿಕವಾದ ಮತ್ತು ಮಾನವೀಯ ಮೌಲ್ಯಗಳಿರುವ ಶಿಕ್ಷಣವನ್ನು ನೀಡಬೇಕಾಗಿದೆ. ಬರೀ ಅಂಕಗಳನ್ನು ತೆಗೆದುಕೊಂಡು ಕೆಲಸಕ್ಕೆ ಸೇರಿಕೊಳ್ಳುವ ಉದ್ದೇಶವೇ ಶಿಕ್ಷಣವಲ್ಲ. ಅವರಲ್ಲಿ ಮಾನವೀಯತೆ ಮತ್ತು ನೈತಿಕತೆ ಗುಣವನ್ನು ಬೆಳೆಸಬೇಕಾಗಿದೆ. ಆಗ ಮಾತ್ರ ಸಾಮಾಜಿಕ ಪ್ರಗತಿ ಮತ್ತು ಉತ್ತಮ ಸಮಾಜವನ್ನು ಕಾಣುವುದಕ್ಕೆ ಸಾಧ್ಯವಾಗುತ್ತದೆ. ಅಂತಹ ಶಿಕ್ಷಣವನ್ನು ಸಾರ್ವತ್ರಿಕವಾಗಿ ನೀಡಬೇಕಾಗಿದೆ. ಯಾವುದೋ ಒಂದು ಗುಂಪಿಗೆ ಅಥವಾ ಯಾರಿಗೋ ಒಬ್ಬರಿಗೆ ಸೀಮಿತವಾಗಿರಬಾರದು. ಸಮಾಜದ ಕಟ್ಟಕಡೆಯ ಜನರ ಆಶೋತ್ತರಗಳನ್ನು ಈಡೇರಿಸುವ ನಿಟ್ಟಿನಲ್ಲಿ ವಿದ್ಯಾರ್ಥಿಗಳನ್ನು ಸಿದ್ಧಗೊಳಿಸಲು ಯಾವ ತಯಾರಿಗಳು ಬೇಕು ಅದನ್ನು ಈ ಶಿಕ್ಷಣ ನೀತಿಯಲ್ಲಿ ಅಳವಡಿಸಬೇಕಾಗಿದೆ. ಯಾವುದೇ ಕಾರಣಕ್ಕೂ ತರಾತುರಿಯಲ್ಲಿ ಜಾರಿಗೊಳಿಸುವುದು ಬೇಡವೆನ್ನುವುದು ನನ್ನ ಸಲಹೆಯಾಗಿದೆ.

ಸನ್ಮಾನ್ಯ ಸಭಾಪತಿಯವರೇ, ಖಾಸಗಿ ಮತ್ತು ಸರ್ಕಾರಿ ಶಿಕ್ಷಣ ಸಂಸ್ಥೆಗಳ ಪರಿಸ್ಥಿತಿ ಬಹಳ ಕೆಟ್ಟದಾಗಿದೆ. ಆನ್‌ಲೈನ್ ಎಜುಕೇಶನ್ ಎಂದು ಖಾಸಗಿ ವಿಶ್ವವಿದ್ಯಾಲಯಗಳು 10 ಸಾವಿರ ರೂಪಾಯಿಗಳನ್ನು ಅಡ್ಮಿಷನ್ ಶುಲ್ಕವನ್ನಾಗಿ ಸಂಗ್ರಹ ಮಾಡಿ ಯು.ಜಿ.ಸಿ. ಮತ್ತು AICTE (All India Council for Technical Education) ಗಳಿಗೆ ಕೊಡುತ್ತಿವೆ. ಒಬ್ಬರು ಪ್ರೊಫೆಸರ್, ಒಬ್ಬರು ಅಸೋಸಿಯೇಟ್ ಪ್ರೊಫೆಸರ್ ಮತ್ತು ಇಬ್ಬರು ಸಹಾಯಕ ಪ್ರೊಫೆಸರ್ ಹೀಗೆ ಒಟ್ಟು ನಾಲ್ಕು ಜನರು 10 ಸಾವಿರ ವಿದ್ಯಾರ್ಥಿಗಳ ಮೌಲ್ಯಮಾಪನ ಮಾಡಬೇಕಾಗಿದೆ. ಒಬ್ಬೊಬ್ಬರಿಗೆ 2500 ವಿದ್ಯಾರ್ಥಿಗಳ ಮೌಲ್ಯಮಾಪನ ಮಾಡಬೇಕಾಗಿದೆ. ಇದು ಯಾವ ರೀತಿಯ ಖಾಸಗೀಕರಣ? ಮಾನ್ಯ ಉನ್ನತ ಶಿಕ್ಷಣ ಸಚಿವರು ಮಾತನಾಡುತ್ತಾ, ಖಾಸಗಿ ಶಿಕ್ಷಣ ಸಂಸ್ಥೆಗಳು ಹಣ ಮಾಡುವುದನ್ನು ನಿರ್ಬಂಧಿಸುತ್ತೇವೆ ಎನ್ನುವ ಮಾತನ್ನು ಹೇಳಿದ್ದಾರೆ. ಎಲ್ಲ ಖಾಸಗಿ ಶಿಕ್ಷಣ ಸಂಸ್ಥೆಗಳು ಸರ್ಕಾರಕ್ಕೆ ರಾಮನ ಲೆಕ್ಕವನ್ನು ಕೊಡುತ್ತಾರೆ. ಈ ರೀತಿಯ ಪರಿಸ್ಥಿತಿ ಇದೆ. ಮುಂದಿನ ದಿನಗಳಲ್ಲಿ ಎಲ್ಲ ಶಿಕ್ಷಣ ಸಂಸ್ಥೆಗಳಿಗೂ ಸ್ವಾಯತ್ತತೆಯನ್ನು ಕೊಟ್ಟರೆ ಪರಿಸ್ಥಿತಿ ಏನಾಗಬಹುದೆನ್ನುವುದನ್ನು ತಾವೇ ಊಹಿಸಬೇಕಾಗಿದೆ.

ಸನ್ಮಾನ್ಯ ಸಭಾಪತಿಯವರೇ, ಸ್ವಾತಂತ್ರ್ಯಪೂರ್ವದಲ್ಲಿ ಮತ್ತು ಸ್ವಾತಂತ್ರ್ಯ ನಂತರದಲ್ಲಿ ಆಗ ಇದಂತಹ ಶಿಕ್ಷಣ ವ್ಯವಸ್ಥೆಯಲ್ಲಿಯೇ ಕಲಿತು ಅಮೇರಿಕಾ, ಚೀನಾ, ಜಪಾನ್ ಮುಂತಾದ ದೇಶಗಳಲ್ಲಿ ಬಹಳ ಉನ್ನತವಾದ ಹುದ್ದೆಗಳಲ್ಲಿ ಲಕ್ಷಾಂತರ ಜನರು ಕೆಲಸ ಮಾಡುತ್ತಿದ್ದಾರೆ.

(ಮುಂದುವರಿದಿದೆ)

(1001) 24.9.2021 (12.20 AM)ಪಿಕೆ:ವಿಕೆ

**ಶ್ರೀ ಮರಿತಿಬ್ಬೇಗೌಡ(ಮುಂದು):**

ಭಾರತೀಯರ ಮಕ್ಕಳಿಗೆ ಆ ಸ್ಕಿಲ್ ಇದೆ. ನೂರಾರು ವರ್ಷಗಳಿಂದ ಅಂತಹ ಮುಂದುವರೆದ ರಾಷ್ಟ್ರಗಳಗೆ ಹೋಗಿ ಕೆಲಸ ಮಾಡುತ್ತಿದ್ದಾರೆ. , ಭಾರತ ದೇಶದಲ್ಲಿ 130 ಕೋಟಿ ಜನಸಂಖ್ಯೆ ಇದೆ. ಇಷ್ಟೊಂದು ಬಡತನ ಇರುವ ದೇಶದಲ್ಲಿ, ಇಂತಹ ಪರಿಸ್ಥಿತಿಯಲ್ಲಿ ತಾವು ಮುಂದುವರೆದ ದೇಶಗಳಲ್ಲಿರುವ ಎಜುಕೇಷನ್ ಸಿಸ್ಟಮನ್ನು ಹಂತ ಹಂತವಾಗಿ ತರಬೇಕು. ಅಲ್ಲದೆ ಅದು ತಳ ಹಂತದ ಜನರಿಗೆ ಸಹ ತಲುಪುವಂತೆ ಮಾಡಬೇಕು ಎನ್ನುವುದು ನಮ್ಮ ಒತ್ತಾಯವಾಗಿದೆ. ಇದು ಬಾಬಾ ಸಾಹೇಬ್ ಅಂಬೇಡ್ಕರ್‌ರವರು ಹಾಕಿಕೊಟ್ಟಿರುವ ನೀತಿಯಾಗಿದೆ. ಎಲ್ಲರಿಗೂ ಶಿಕ್ಷಣ ಸಿಗಬೇಕು ಎನ್ನುವ ಸಂವಿಧಾನದ ಆಶಯಗಳನ್ನು ಇಟ್ಟುಕೊಂಡು ನೀವು ಮುಂದುವರೆಯಿರಿ. ಇದರಿಂದ ಈ ದೇಶ ಕಟ್ಟುವ ಕೆಲಸ ಆಗುತ್ತದೆ ಎನ್ನುವುದು ನಮ್ಮೆಲ್ಲರ ಆಶಯವಾಗಿದೆ. ಮಾನ್ಯ ಸಚಿವರು ಚೆನ್ನಾಗಿ ಉತ್ತರ ಕೊಟ್ಟಿದ್ದಾರೆ. ಆದರೆ ಚರ್ಚೆ ಮಾಡುವ ಸಂದರ್ಭದಲ್ಲಿ ಕೇಳಿದ ಪ್ರಶ್ನೆಗಳಿಗೆ ನೇರ ಉತ್ತರ ಕೊಡಲಿಲ್ಲ, ಇದರಿಂದ ನಮಗೆ ಸಮಾಧಾನವಾಗಿಲ್ಲ. ಆದರೂ ಮಾನ್ಯ ಮುಖ್ಯಮಂತ್ರಿಗಳು, ತಮ್ಮ ಮಾತುಗಳಲ್ಲೂ ಕೂಡ ನಾವು ಗಮನಿಸುವ ಅಂಶಗಳಿವೆ, ಅದನ್ನು ನಾವು ಗಮನಿಸುತ್ತೇವೆ ಎಂದು ಹೇಳಿದರು. ಮಾನ್ಯ ಸಚಿವರೇ ನಿಮಗೆ ಬಹಳ ಆಸಕ್ತಿ ಇದೆ, ನಿಮ್ಮ ಆಸಕ್ತಿಯನ್ನು ಮೆಚ್ಚುತ್ತೇವೆ, ಅಭಿನಂದಿಸುತ್ತೇವೆ. ನೀವು ಮುಂದೆ ಈ ನಾಡಿನ ಮುಖ್ಯಮಂತ್ರಿ ಆಗಿ ಬನ್ನಿ ಎಂದು ಹೇಳುತ್ತೇವೆ. ಆದರೆ, ಈ ಶಿಕ್ಷಣ ವ್ಯವಸ್ಥೆ ಬಡವರಿಗೆ ಎಟುಕುವಂತಹ, ಬಡವರ ಉದ್ಧಾರವಾಗುವ ವ್ಯವಸ್ಥೆಯನ್ನು ಕಾನೂನಿನಲ್ಲಿ, ನಿಯಮಗಳಲ್ಲಿ ರೂಢಿಸಿ ಜಾರಿಗೆ ತರಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಮುಕ್ತವಾದಂತಹ ಚರ್ಚೆಗೆ ಅವಕಾಶ ಮಾಡಿಕೊಡುತ್ತೇವೆ ಎಂದು ಹೇಳಿದ್ದಾರೆ. ಮುಂದೆ ಈ ಕುರಿತು ಒಂದೆರಡು ದಿನ ಚರ್ಚೆಗೆ ಅವಕಾಶ ಮಾಡಿಕೊಟ್ಟು ಇದನ್ನು ಬಹಳ ಉನ್ನತವಾದ

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರೀತಿಯಲ್ಲಿ ರಾಜ್ಯದಲ್ಲಿ ನಿಧಾನವಾಗಿ, ಹಂತ ಹಂತವಾಗಿ ಜಾರಿಗೆ ತರಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

**ಶ್ರೀ ಯು.ಬಿ.ವೆಂಕಟೇಶ್ (ನಾಮನಿರ್ದೇಶನ ಹೊಂದಿದವರು)**:- ಮಾನ್ಯ ಸಭಾಪತಿಗಳೆ, ಈ ರಾಷ್ಟ್ರೀಯ ಶಿಕ್ಷಣ ನೀತಿಯ ಹೆಸರಿನಲ್ಲಿ ರಾಷ್ಟ್ರೀಯತೆ ಮತ್ತು ರಾಷ್ಟ್ರ ಭಕ್ತಿ ಮೂಡಿಸುವ ವಿಚಾರ ನಿಜಕ್ಕೂ ಕರ್ಣಾನಂದಕರ. ಆದರೆ ಈ ಹೊಸ ಶಿಕ್ಷಣ ನೀತಿಯನ್ನು ಆಳವಾಗಿ ನೋಡಿದರೆ ಎಲ್ಲವೂ ಒಮ್ಮುಖ ಚಲನೆಯಂತೆ ಕಾಣುತ್ತದೆ. ಬಿಜೆಪಿಯವರಿಗೆ ಅದೇಕೋ ಎಲ್ಲವೂ ಒಂದೇ ಎಂದು ಹೇಳುತ್ತಾರೆ. ಒಂದೇ ದೇಶ, ಒಂದೇ ಭಾಷೆ, ಒಂದೇ ಕಾರ್ಡ್ ಹೀಗಿದ್ದರೆ ಎಲ್ಲವೂ ಒಂದೇ ಕಡೆ ಸಿಗುತ್ತದೆ ಎಂದು ಹೇಳುತ್ತಾರೆ. ಅದೇ ತರಹ ಏಕಚಕ್ರಾಧಿಪತ್ಯ ಸ್ಥಾಪನೆ ಮಾಡಬೇಕು ಎನ್ನುವುದು ಇವರ ಧೋರಣೆಯಾಗಿದೆ. ನಮ್ಮ ದೇಶ ಬಹುತ್ವದ ರಾಷ್ಟ್ರ. ಬಹು ಭಾಷಾ, ಬಹು ಸಂಸ್ಕೃತಿಗಳ ಈ ರಾಷ್ಟ್ರದಲ್ಲಿ ವೈವಿಧ್ಯತೆಯಲ್ಲಿ ಏಕತೆಯನ್ನು ಕಾಣುವುದೇ ಸೊಬಗು. ಇದು ಜನತಂತ್ರದ ಸೌಂದರ್ಯ ಕೂಡ. ಆದರೆ ಬಿಜೆಪಿಯವರಿಗೆ ಎಲ್ಲವನ್ನೂ ಬಿಜೆಪಿ ಮೂಲಕವೇ ದೇಶವನ್ನು ನೋಡಬೇಕು ಎನ್ನುವ ನಿರೀಕ್ಷೆ. ಹೇಳಿ-ಕೇಳಿ ಈ ಬಿಜೆಪಿಯವರದು ಗರ್ಭಗುಡಿಯ ರಾಜಕಾರಣ. ಯಾರು ಬೇಕೋ ಅವರನ್ನು ಮಾತ್ರ ಒಳಗಡೆ ಇಟ್ಟುಕೊಳ್ಳುತ್ತಾರೆ. ಮಂಗಳಾರತಿ ಮಾತ್ರ ಎಲ್ಲರಿಗೂ ಸಿಗುತ್ತದೆ. ಉದಾಹರಣೆಗೆ ನಮ್ಮ ಶಂಕರ್‌ರವರು, ಅವರಿಗೆ ಮಂಗಳಾರತಿ ಸಿಗುತ್ತದೆ ಆದರೆ ಅವರು ಗರ್ಭಗುಡಿಗೆ ಹೋಗುವುದಕ್ಕೆ ಆಗುವುದಿಲ್ಲ. ಇವರದು ಇಂತಹ ಧೋರಣೆಯಾಗಿದೆ. ರಾಷ್ಟ್ರೀಯ ಶಿಕ್ಷಣ ನೀತಿಯ ಹೆಸರಿನಲ್ಲಿ ಸಂಪೂರ್ಣ ವಿಕಾಸಕ್ಕೆ ಅವಕಾಶ ಕೊಡದೇ ಧರ್ಮದ ಚೌಕಟ್ಟಿನಲ್ಲಿ ಸಂಪ್ರದಾಯದ ಕಣ್ಣಂಚಿನಲ್ಲಿ ಮಕ್ಕಳನ್ನು ಬೆಳೆಸುವುದು ಪ್ರತ್ಯೇಕವಾದವನ್ನು ಬಿಂಬಿಸುವ ಸನ್ನಾಹ. ಇಂತಹ ನೀತಿಯನ್ನು ಕಾರ್ಯರೂಪಕ್ಕೆ ತರುವ ಮುನ್ನ ಇದಕ್ಕೆ ಸಂಬಂಧಪಟ್ಟಂತೆ ಎಲ್ಲರ ಜೊತೆ ಸಮಾಲೋಚನೆ ಮಾಡಿ, ಕನಿಷ್ಠ stakeholders ಜೊತೆ ಸಮಾಲೋಚನೆ ಮಾಡಿ ತರಬೇಕಾಗಿತ್ತು. ದೂರದೃಷ್ಟಿ ಇಲ್ಲದೇ ಆಯಾ ದಿನಕ್ಕೆ ಅನುಗುಣವಾಗಿ ನೀತಿ ನಿಯಮಗಳನ್ನು ಮಾಡುವುದಕ್ಕೆ ದಿನಗೂಲಿ ಎಂದು ಹೇಳುತ್ತಾರೆ. ಕೂಲಿಗೋಸ್ಕರ ದಿನ ತಳ್ಳುವುದು ಬೇರೆ, ದಿನ ತಳ್ಳುವುದಕ್ಕೋಸ್ಕರ ಕೂಲಿ ಮಾಡುವುದು ಬೇರೆ. ಈ ವಿಚಾರಗಳನ್ನು ಸರ್ಕಾರ ಅರ್ಥ ಮಾಡಿಕೊಂಡು ಬಡವರಿಗೆ ಏನಾದರೂ ಸಹಾಯ ಮಾಡಬೇಕು. ನಾವು ಭರವಸೆ ಸಮಿತಿಯಲ್ಲಿ ಇಲಾಖೆಯ ಅಧಿಕಾರಿಗಳನ್ನು, ನಿಮ್ಮ ಬಜೆಟ್ ಎಷ್ಟಿದೆ ಎಂದು ಕೇಳಿದಾಗ ಅವರು 25 ಸಾವಿರ ಕೋಟಿ ರೂಪಾಯಿಗಳು ಎಂದು ಹೇಳುತ್ತಾರೆ. ಆದರೆ ಅದರಲ್ಲಿ 24 ಸಾವಿರ ಕೋಟಿ ರೂಪಾಯಿಗಳು ಸಂಬಳಕ್ಕೆ ಹೋಗುತ್ತದೆ ಎಂದು ಹೇಳುತ್ತಾರೆ. ಈಗ 3-3.4 ಪರ್ಸೆಂಟಷ್ಟು ಬಜೆಟ್‌ನಲ್ಲಿ ಖರ್ಚು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡುತ್ತಿದ್ದೀರಿ. 10 ರಿಂದ 20 ಪರ್ಸೆಂಟ್ ಮಾಡಬೇಕು ಎಂದು ಹೇಳುತ್ತೀರಿ. ನಿಮ್ಮಲ್ಲಿ ಸಂಪನ್ಮೂಲ ಎಲ್ಲಿದೆ? ಎಲ್ಲಿಂದ ದುಡ್ಡು ಕೊಡುತ್ತೀರಿ? ಯಾರು ಓದಿಕೊಂಡು ಬಂದಿದ್ದಾರೋ ಅವರಿಗೆ unemployment create ಮಾಡಿ ಇಟ್ಟಿದ್ದೀರಿ. ಕೇಳಿದರೆ ಪಕೋಡಾ ಮಾರಿ ಎಂದು ಹೇಳುತ್ತೀರಿ. ಒಂದು ವರ್ಷಕ್ಕೆ ಸ್ಕೂಲ್ ಬಿಡಿಸಿದರೆ ಮುಂದಿನ ಜನಕ್ಕೆ ನಾವು ಏನು ಮಾಡಿಕೊಡುವುದಕ್ಕೆ ಆಗುತ್ತದೆ? ಮಾನ್ಯ ಮುಖ್ಯಮಂತ್ರಿಗಳು ಆಶ್ವಾಸನೆ ಕೊಟ್ಟಿರುವ ಹಾಗೆ ಎಲ್ಲರನ್ನೂ ಕರೆಸಿ ಒಳ್ಳೆಯ ಸಲಹೆಗಳಿದ್ದರೆ ಅದನ್ನು ಸೇರಿಸಿಕೊಂಡು ಇದಕ್ಕೆ ಒಂದು ಒಳ್ಳೆಯ ರೂಪ ಕೊಡಿ ಎಂದು ಕೇಳಿಕೊಳ್ಳುತ್ತೇನೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ(ಪದವೀಧರ ಕ್ಷೇತ್ರ):-** ಮಾನ್ಯ ಸಭಾಪತಿಗಳೆ, ಈಗಲಾದರೂ ಈ ಕುರಿತು ನಡೆಯಿತಲ್ಲಾ ಎಂದು ಒಂದು ಸಮಾಧಾನ ಇದೆ. ಇವತ್ತು ವಿಷದವಾಗಿ ಉನ್ನತ ಶಿಕ್ಷಣ ಸಚಿವರು ಉತ್ತರ ಕೊಟ್ಟಿದ್ದಾರೆ. ಹೊಸ ಶಿಕ್ಷಣ ನೀತಿಯ ಆಶಯವನ್ನು ಬಹಳ ಚೆನ್ನಾಗಿ ಹೇಳಿದ್ದಾರೆ. ಆದರೆ ಅನುಷ್ಠಾನದ ದಿಸೆಯಲ್ಲಿ ತೆಗೆದುಕೊಂಡ ಸಿದ್ಧತೆಯ ಬಗ್ಗೆ ಸಹ ಅವರು ಹೇಳಬೇಕು ಅಲ್ಲವೇ? Implementation is very important. ನಾವು-ನೀವೆಲ್ಲಾ ಚೀನಾ ದೇಶಕ್ಕೆ ಹೋಗಿದ್ದೆವು. ಚೀನಾ 60-70ರ ದಶಕದಲ್ಲಿ ಅತ್ಯಂತ ಸಂಕಷ್ಟದಲ್ಲಿತ್ತು. ಆಹಾರದ ಸಮಸ್ಯೆ ಇತ್ತು. ಅವರು ಊಟಕ್ಕಿಲ್ಲದೇ ಕಪ್ಪೆ, ಹಾವು, ಹಲ್ಲಿ ತಿನ್ನುತ್ತಾರೆ ಎಂದು ಮಾತನಾಡಿಕೊಳ್ಳುತ್ತಿದ್ದೆವು. ಆದರೆ ಇವತ್ತು ಚೀನಾ ದೇಶದ ಸ್ಥಿತಿ ಎಲ್ಲಿಗೆ ಮುಟ್ಟಿದೆ? ಇಡೀ ಜಗತ್ತನ್ನು ಹಿಂದಿಕ್ಕಿ, ಅಮೆರಿಕಾ ದೇಶವನ್ನೂ ಹಿಂದಿಕ್ಕಿ ಮುಂದೆ ಹೋಗುತ್ತಿದೆ. ಇದಕ್ಕೆ ಕಾರಣ ಅವರು ಅಳವಡಿಸಿಕೊಂಡಂಥ ಶಿಕ್ಷಣ ನೀತಿಯಾಗಿದೆ. ಒಂದು ಕಾಲಕ್ಕೆ ಚೀನಾ ದೇಶ ಚೀನಿ ಭಾಷೆಗೆ ಸೀಮಿತವಾಗಿತ್ತು. ಆದರೆ 80ರ ದಶಕದಲ್ಲಿ ಅವರು ಹೊಸ ತೀರ್ಮಾನಕ್ಕೆ ಬಂದರು. ಚೀನಾದ ಜನ ಚೀನಿ ಭಾಷೆಯ ಜೊತೆಗೆ ಇಂಗ್ಲಿಷ್ ಹೆಸರನ್ನು ಇಟ್ಟುಕೊಂಡರು, ಇಂಗ್ಲಿಷ್ ಕಲಿತರು, ಇಡೀ ಜಗತ್ತನ್ನು ತನ್ನ ಕೈಗೆ ತೆಗೆದುಕೊಂಡರು. ನಾನು ಜಗತ್ತಿನ 18-20 ದೇಶಗಳಿಗೆ ಹೋಗಿ ಬಂದಿದ್ದೇನೆ. ಆಸ್ಟ್ರೇಲಿಯಾದಲ್ಲಿ ಎಲ್ಲಾ ಹುದ್ದೆಗಳಲ್ಲಿ ನಂಬರ್ ಒನ್ ಜಪಾನ್ ಮತ್ತು ನಂಬರ್ ಟು ಚೈನಾದವರಿದ್ದಾರೆ. ಇಂಡಿಯಾದವರು ಸುಮಾರಾಗಿ ಫೈಟ್ ಕೊಡುತ್ತಿದ್ದಾರೆ. ಇದು ಇಡೀ ಜಗತ್ತಿನ ಸ್ಥಿತಿಯಾಗಿದೆ. ನಮಗೆ ತ್ರಿಭಾಷಾ ನೀತಿ ಬೇಕು, ಇಂಗ್ಲಿಷನ್ನು ಜೊತೆಗೆ ಕಲಿಯಬೇಕು. ನೀವೇ Globalisation ಬಗ್ಗೆ ಹೇಳುತ್ತೀರಿ. ಜಾಗತೀಕರಣದ ಜೊತೆ ಇಡೀ ಜಗತ್ತೇ ಬಂದಾಗ ಜಗತ್ತನ್ನು ನಮ್ಮದನ್ನಾಗಿಸುವ ದಿಸೆಯಲ್ಲಿ ನಮ್ಮ ಮಕ್ಕಳನ್ನು ಸಜ್ಜುಗೊಳಿಸಬೇಕು. ಆ ದಿಸೆಯಲ್ಲೂ ಪ್ರಯತ್ನವನ್ನೂ ಮಾಡಬೇಕು. ಇನ್ನೊಂದು ಕಡೆ ಖಾಸಗೀಕರಣದ ಬಗ್ಗೆ ಮಾತನಾಡಿದಿರಿ. ಖಾಸಗೀಕರಣ ಎಂದರೆ ವ್ಯಾಪಾರೀಕರಣ. ನಾವು 75 ವರ್ಷದ ಅಮೃತ ಘಳಿಗೆಯಲ್ಲಿದ್ದೇವೆ. ಈಗಲಾದರೂ

"ತಿದ್ದುಪಡಿಯಾಗದ ಪ್ರತಿ; ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸರ್ಕಾರದ ಜವಾಬ್ದಾರಿಯ ಹೆಜ್ಜೆಗಳನ್ನು ಇಡುವಂತಹ ಕೆಲಸ ಮಾಡಬೇಕು. ಇಲ್ಲಿ ನಮ್ಮ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಇದ್ದಾರೆ. ನಾವು ಬಹಳ ಹೆಚ್ಚಿನ ಪ್ರಾಮುಖ್ಯತೆಯನ್ನು ಉನ್ನತ ಶಿಕ್ಷಣಕ್ಕೆ ಕೊಟ್ಟೆವು. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣದ ಬಗ್ಗೆ ನಾವು ಮಾತೇ ಆಡುತ್ತಿಲ್ಲ. ಹೊಸ ಶಿಕ್ಷಣ ನೀತಿಯ ಅನುಷ್ಠಾನದ ಬಗ್ಗೆ ನಾವು ಮಾತನಾಡುತ್ತಿಲ್ಲ. ಸಿದ್ಧತೆಯ ಬಗ್ಗೆಯೂ ಗಂಭೀರವಾಗಿ ತೆಗೆದುಕೊಂಡಿಲ್ಲ. ಅಲ್ಲಿ ನನಗೆ ಆತಂಕ ಇದೆ. ಬಹಳ ದೊಡ್ಡ ಬದಲಾವಣೆಯನ್ನು ನೀವು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣದಲ್ಲಿ ತರಬೇಕಾಗುತ್ತದೆ. ಆದರೆ ಆ ನಿಟ್ಟಿನಲ್ಲಿ ಸಿದ್ಧತೆ ಇಲ್ಲ. ಇದರಲ್ಲಿ ಉನ್ನತ ಶಿಕ್ಷಣ ಸ್ವಲ್ಪ ಮುಂದೆ ಇದೆ. ಒಟ್ಟಾರೆ ಹೊಸ ಶಿಕ್ಷಣ ನೀತಿಯನ್ನು ಅನುಷ್ಠಾನಕ್ಕೆ ಕೊಡುವಂಥದ್ದು ಪ್ರಾಮಾಣಿಕ ಸಿದ್ಧತೆಯೊಂದಿಗೆ ಆಗಲಿ ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

(ಮುಂದು ..)

(1002) 24.9.2021 12.30 ಪಿಕೆ:ಎಕೆ

**ಡಾ: ಸಿ.ಎನ್.ಅಶ್ವತ್‌ನಾರಾಯಣ**:- ಮಾನ್ಯ ಸಭಾಪತಿಗಳೆ, ನಾನು ಚಿಕ್ಕದಾಗಿ ಹೇಳಿ ಮುಗಿಸಿಬಿಡುತ್ತೇನೆ. ಮಾನ್ಯ ಶ್ರೀಕಂಠೇಗೌಡರು ಈ ವಿಚಾರದಲ್ಲಿ model programme, structure, syllabus ಸಿದ್ಧತೆ ಬಗ್ಗೆ ಕೇಳಿದರು. ಇವೆಲ್ಲವೂ ತಯಾರಾಗಿದೆ. ಈಗಾಗಲೇ ಎಲ್ಲಾ ವಿಷಯಗಳಿಗೆ ಸಂಬಂಧಪಟ್ಟಂತೆ ಸಿದ್ಧತೆ ಆಗಿದ್ದು ಅಕ್ಟೋಬರ್ ತಿಂಗಳ ಮೊದಲಿನಲ್ಲಿ ಫಸ್ಟ್‌ನಲ್ಲಿ ಪ್ರಾರಂಭವಾಗುವುದಕ್ಕೆ ಏನೆಲ್ಲಾ ಕ್ರಮ ವಹಿಸಬೇಕೋ ಅವೆಲ್ಲವೂ ಆಗಿದೆ. ಮತ್ತೆ, ಕನ್ಸಲ್ಟೇಷನ್ ಬಗ್ಗೆ ಹೇಳುವುದಾದರೆ, ಪ್ರತಿಯೊಂದು ಗ್ರಾಮ ಪಂಚಾಯಿತಿಗಳಲ್ಲಿ ಕನ್ಸಲ್ಟೇಷನ್ ನಡೆದಿದೆ. ಆನ್‌ಲೈನ್ ನಡೆದಿರುವುದು ಬೇರೆ. ಆನ್‌ಲೈನ್ ಹೊರತುಪಡಿಸಿ physical ಆಗಿ ಸಲಹೆಗಳನ್ನು ಪಡೆದಿರುವಂಥದ್ದೂ ಆಗಿದೆ. ಮತ್ತೆ, ನೀಟ್ ಬಗ್ಗೆ ಹೇಳಿದಿರಿ. ನೀಟ್ ಅನ್ನು ಪ್ರಾರಂಭ ಮಾಡುವುದಕ್ಕೆ ಪ್ರಯತ್ನ ಮಾಡಿದವರು ಯಾರು? ಯುಪಿಎ ಸರ್ಕಾರದಲ್ಲಿ ನೀಟ್ ಪ್ರಾರಂಭ ಮಾಡಿದರು. ಸತತವಾಗಿ ಹಲವಾರು ವರ್ಷಗಳ ಪ್ರಯತ್ನ ಮಾಡಿ ಇಡೀ ದೇಶದಲ್ಲಿ ವಿದ್ಯಾರ್ಥಿಗಳು ನೂರು ಸಂಸ್ಥೆಗಳಿಗೆ ಹೋಗಿ ಎಂಟ್ರೆನ್ಸ್ ಎಗ್ಸಾಮ್ ಬರೆಯಬೇಕಾಗಿತ್ತು. ಈಗ ಅದು ಸರಿಹೋಗುತ್ತದೆ. ಮಾನ್ಯ ಸಭಾಪತಿಗಳೆ, regulator ಬಗ್ಗೆ ಸ್ವಲ್ಪ ಹೇಳಿಬಿಡುತ್ತೇನೆ. ಇದು ಬಹಳ ಮುಖ್ಯವಾಗಿದೆ. Higher Education Council ನ ಬಗ್ಗೆ, NEP fundamental principle ಬಗ್ಗೆ ಹೇಳಬೇಕೆಂದರೆ, "A 'light but tight' regulatory framework to ensure integrity, transparency and resource efficiency of the educational system through audit and public disclosure while encouraging

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

innovation and out-of-the-box ideas through autonomy, good governance, and empowerment. The goal of the school education regulatory system…”

**ಸಭಾಪತಿಯವರು**:- ಮಾನ್ಯ ಸಚಿವರೇ, ಮಾನ್ಯ ಸದಸ್ಯರುಗಳ ಎಲ್ಲಾ ಸಲಹೆಗಳನ್ನು ತೆಗೆದುಕೊಳ್ಳಿ. ನಾವು ಹೇಳಿದ ಹಾಗೆ ಈ ಕುರಿತು ಒಂದು ಸಭೆ ಕರೆಯಿರಿ. ಈಗ ಸಾಕಷ್ಟು ಉತ್ತರ ಕೊಟ್ಟಿದ್ದೀರಿ.

**ಡಾ:ಸಿ.ಎನ್.ಅಶ್ವತ್‌ನಾರಾಯಣ**:- ಮಾನ್ಯ ಮರಿತಿಬ್ಬೇಗೌಡರು Board of Governors ಬಗ್ಗೆ ಹೇಳುತ್ತಿದ್ದಾರೆ. ಈಗ ಸಿಂಡಿಕೇಟ್ ಇರುವಂಥದ್ದು ಇದೆ. Board of Governors ಈಗಿರುವಂತಹ ಸಿಂಡಿಕೇಟ್ ಮತ್ತು ಬೇರೆ ಬೇರೆ ಬಾಡಿಗಳನ್ನು ರೀಪ್ಲೇಸ್ ಮಾಡವಂಥಾದ್ದಾಗಿದೆ.

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ಈ ಕುರಿತು ಮತ್ತಷ್ಟು ಚರ್ಚೆಗೆ ಅವಕಾಶ ಕೊಡುತ್ತೇವೆ ಎಂದು ಹೇಳಿದ್ದಾರೆ.

**ಸಭಾಪತಿಯವರು:-** ಮಾನ್ಯ ಸಚಿವರೇ, ನೀವು ಎಲ್ಲರ ಸಲಹೆಗಳನ್ನು ಕ್ರೋಢೀಕರಿಸಿ ಮುಂದೆ ಒಂದು ದಿನ ಮೀಟಿಂಗ್ ಕರೆಯಿರಿ. ಈಗ ಸದನವನ್ನು ಬೆಳಿಗ್ಗೆ 10.00 ಗಂಟೆಗೆ ಮುಂದೂಡಲಾಗಿದೆ.

**(ಸದನವು ರಾತ್ರಿ 12 ಗಂಟೆ 32 ನಿಮಿಷಕ್ಕೆ ಮುಕ್ತಾಯಗೊಂಡು, ಪುನಃ ದಿನಾಂಕ 24ನೇ ಸೆಪ್ಟೆಂಬರ್ ಮಾಹೆ 2021 ರಂದು ಶುಕ್ರವಾರ ಬೆಳಿಗ್ಗೆ10.00 ಗಂಟೆಗೆ ಸಮಾವೇಶಗೊಳ್ಳಲು ತೀರ್ಮಾನಿಸಿತು)**

**<><><>**

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”